ಇಂದಿರಾ

ಕೆರೂರು ವಾಸುದೇವಾಚಾರ್ಯ

ಉಷಾ ಸಾಹಿತ್ಯ ಮಾಲೆ

ಚಂದ್ರಗುಪ್ತರಸ್ತೆ, ಮೈಸೂರು-೫೭೦ ೦೦೧


V

38/-

CTIVE THRILLER KAN. MONTHLY MAY 1991 BGW-2

RADIO TV TRAINING INSTITUTE



INTENSIVE TRAINING IN

COMPUTERS	ELECTRONICS
SOFTWARE: WORD STAR, LOTUS 1-2-3, dBASE III PLUS, BASIC, C,COBOL, PASCAL, FORTRAN, etc. HARDWARE: SERVICING, ASSEMBLING, UPGRADATION, AND MARKETING, etc.,	VCP/VCR, Colour and B/W TV. STEREO HI-FI SYSTEM, Two-in-One, RADIO, BASIC ELECTRONICS, SCREEN PRINTING. AND PCB MAKING. **NOTE:** Free Hostel Facility for the outstation students.

No. 40, Mahakavi Kuvempu Road, Nagappa Block, Srirampuram,
BANGALORE-560 021.

N. Naga

ಇಂದಿರಾ

(ಮೊದಲ ಸಾಮಾಜಿಕ ಕಾದಂಬರಿಗಳಲ್ಲಿಯು ಶ್ರೇಷ್ಠ ಕೃತಿ)

ಕೆರೂರು ವಾಸುದೇವಾಚಾರ್ಯ

(ಪ್ರೊ. ವಿ. ಎಂ. ಇನಾಂದಾರರ ವಿಸ್ತಾರವಾದ ಮುನ್ನುಡಿಯೊಡನೆ)

ಉಷಾ ಸಾಹಿತ್ಯ ಮಾಲೆ
ಚಂದ್ರಗುಪ್ತ ರಸ್ತೆ, ಮೈಸೂರು-೫೭೦ ೦೦೧

"*Indira*"—An early Kannada social novel of 1908
Sri Kerur Vasudevacharya, published by Usha Sahitya M
Mysore-570001. Pages 356, Second edition: 1980.

ಉಷಾ ಸಾಹಿತ್ಯ ಮಾಲೆಯಿಂದ
ಎರಡನೆಯ ಮುದ್ರಣ : ೧೯೮೦

ಮುದ್ರಣ :
ಉಷಾ ಪ್ರೆಸ್, ಚಂದ್ರಗುಪ್ತ ರಸ್ತೆ, ಮೈಸೂರು-೫೭೦ ೦೦೧

ಪ್ರಾಥಮಿಕ ನಿರೂಪಣವು

ಸ್ತ್ರೀ ಶಿಕ್ಷಣವು ನಮ್ಮ ದೇಶದಲ್ಲಿ ಪ್ರಾಚೀನ ಕಾಲದಲ್ಲಿ ಹಬ್ಬಿತ್ತು. ಈ ಮಾತಿನ ವಿಷಯದಲ್ಲಿ ವಾದವಿಲ್ಲ. ಧರ್ಮತತ್ವಗಳಲ್ಲಿಯೂ, ರಾಜನೀತಿಯಲ್ಲಿಯೂ ಕಾವ್ಯೇತಿಹಾಸಗಳಲ್ಲಿಯೂ, ಗಾಯನ ಚಿತ್ರಕಲೆಗಳಲ್ಲಿಯೂ ತುಂಬಾ ನಿಷ್ಣಾತರಾದ ನಾರೀಶಿರೋಮಣಿಗಳ ಚರಿತ್ರಗಳನ್ನು ಪುರಾಣೇತಿಹಾಸಗಳಲ್ಲಿ ನಾವು ಓದುತ್ತೇವೆ. ಆ ಶಿಕ್ಷಣದ ಫಲವಾದರೂ ಅತ್ಯಂತವಾಗಿ ಹಿತಕರವಾದದ್ದಾಗಿತ್ತೆಂದು ಹೇಳಲಂಜಿಕಿಲ್ಲ. ಈಗಾದರೂ ಸ್ತ್ರೀ ಶಿಕ್ಷಣಕ್ಕೆ ತಕ್ಕಮಟ್ಟಿಗೆ ಉತ್ತೇಜನವಿದ್ದೇ ಇದೆ. ಇದಕ್ಕೆ ಪ್ರತಿಕೂಲರಾದವರನ್ನು ಸಾವಿರಕ್ಕೊಂದರಂತೆ ಎಣಿಸಬಹುದು. ಆದರೆ ಈಗಿದ್ದ ಸ್ತ್ರೀ ಶಿಕ್ಷಣದ ಪದ್ಧತಿಯು ಮಾತ್ರ ವಾದಗ್ರಸ್ತವಾದ ವಿಷಯವಾಗಿದೆ,

ಹೇಗೇ ಇರಲಿ. ಈಗಿದ್ದ ಪದ್ಧತಿಯಂತೆ ಕಲಿತು ವಿದ್ಯಾಸಂಪನ್ನೆಯರಾದ ತರುಣಿಯರಲ್ಲಿ ಸ್ತ್ರೀ ಜಾತಿಗೆ ಕುಂದು ತಾರದೆ ವಿನಯ ಸಂಪನ್ನೆಯರಾಗಿ ಉಭಯ ಕುಲಕ್ಕೂ ಆನಂದವನ್ನೀಯುವ ಅನೇಕ ಕುಲವಧುಗಳನ್ನು ನಿತ್ಯ ನೋಡುತ್ತೇವೆ. ಆದರೆ ಸಮಾಜದ ಸದ್ಯಃಸ್ಥಿತಿಯನ್ನು ಧಿಕ್ಕರಿಸಿ, ಸ್ತ್ರೀಯರು ಪುರುಷರಿಗಿಂತಲೂ ಒಂದು ತೂಕ ಹೆಚ್ಚು ಸ್ವತಂತ್ರರಾಗಿರಬೇಕು. ಅನ್ಯದೇಶದ ಸ್ತ್ರೀಯರಂತೆ ಉಡಿಗೆ ತೊಡಿಗೆ ಆಹಾರ ವಿಹಾರಗಳನ್ನು ಮಾಡತಕ್ಕದ್ದು, ಇದುವರೆಗೆ ಪುರುಷರಿಗೆ ಸಲ್ಲುತ್ತ ಬಂದ ಮರ್ಯಾದೆಯು ಇನ್ನು ಮುಂದವರಿಗೆ ಸಲ್ಲಲವಶ್ಯವಿಲ್ಲ, ಮುಂತಾದ ಹೀನ ವಿಚಾರಗಳನ್ನು ತಲೆಯಲ್ಲಿ ಹಾಕಿಕೊಂಡು, ತಮ್ಮ ನಿಸರ್ಗರಮಣೀಯತೆಗೆ ಹೆಚ್ಚು ಶೋಭೆಯನ್ನು ಕೊಡುವ ಮರ್ಯಾದೆಯನ್ನು ಬಿಸುಟಿ ಸಮಾಜದ ಸೌಕರ್ಯವನ್ನು ಹಾಳು ಮಾಡತೊಡಗಿದ ಸ್ವೈರಿಣಿಯರು ಕೂಡಾ ತುಟ್ಟಿಯಾಗಿಲ್ಲ.

ಆಧುನಿಕ ಶಿಕ್ಷಣದಿಂದ ವಿವೇಕ ಹೀನರಾದ ಪೋರರದೊಂದು ಅಸಾಧ್ಯವಾದ ದಂಡೇ ಸಮಗ್ರ ದೇಶವನ್ನಾಕ್ರಮಿಸಿಕೊಂಡಿರುವದು. ಈ ಮಾತು ನಾವು ಒಪ್ಪಿಕೊಳ್ಳದಿರುವದು ಹೇಗೆ ? ಅಲ್ಪ ಜ್ಞಾನ ಹೊಂದಿ ಸ್ವಧರ್ಮ ಸ್ವಕುಲಾಚಾರಗಳನ್ನು ಬೇರೂರಿಸಿ ಕಿತ್ತಿ ಹಾಕಲೆತ್ನಿಸಿ, ತಮ್ಮ ಪೂರ್ವಜರನ್ನು ಅಪಹಾಸ್ಯಮಾಡಿ ಉತ್ ಶೃಂಖಲರಾಗಿ ತಿರುಗುವ ಪೋರರನ್ನು ಬೀದಿ ಬೀದಿಗೆ ಕಾಣುತ್ತೇವೆ. ಆದರೆ ಇದಕ್ಕಾಗಿಯೇ ನಮ್ಮ ಸ್ತ್ರೀಯರು ಕೂಡಾ ತಲೆ ತೆಗೆದು ಮನಸ್ಸಿಗೆ ಬಂದಂತೆ ಮೆರೆಯಬೇಕೇನು ? ನಮ್ಮ ಕುಲಧರ್ಮಗಳೂ ನಮ್ಮ ದೇಶಾಚಾರಗಳೂ ನಮ್ಮ

ಸ್ತ್ರೀಯರಿಂದಲೇ ಯಥಾಸ್ಥಿತವಾಗಿವೆ. ಸಮಾಜದಲ್ಲಿ ಸ್ಥಿತಿಸ್ಥಾಪಕತೆಯನ್ನುಂಟು ಮಾಡಿ, ಸಂಸಾರ ಸುಖದಲ್ಲಿ ಕೊರತೆ ಬಾರದಂತೆ ನೋಡಿಕೊಂಡು ಹೋಗುವ ಶ್ರೇಯಸ್ಸು ನಮ್ಮರ್ಧಾಂಗಿಯರದಲ್ಲದೆ ಮತ್ತಾರದು ? ಆದಕಾರಣ ಸ್ತ್ರೀ ಶಿಕ್ಷಣದ ಕ್ರಮದಲ್ಲಿದ್ದ ದೋಷಗಳನ್ನು ತೆಗೆದುಹಾಕಿ ಅದನ್ನು ಉಚ್ಚ ಸ್ಥಿತಿಗೆ ತರುವ ಮಹ ತ್ಕಾರ್ಯದಲ್ಲಿ ಎಷ್ಟೋ ಜನ ವಿಚಾರಶಾಲಿಗಳಾದ ದೇಶಸೇವಕರು ನಿರತರಾಗಿದ್ದಾರೆ. ಹಾಗೂ ಅವರ ಮಹತ್ಕಾರ್ಯಕ್ಕೆ ಯಶಸ್ಸೂ ತಕ್ಕಮಟ್ಟಿಗೆ ಬರುತ್ತ ನಡೆದದೆ.

ಬಾಲ್ಯದಲ್ಲಿಯೇ ಕನ್ನಿಕೆಯರ ವಿವಾಹವು ಉಚಿತವಾದದ್ದಲ್ಲಿ, ಹದಿನಾರು ಹದಿನೆಂಟು ವರುಷದ ಪ್ರಾಯ ಬಂದ ಬಳಿಕ ವಧುಗಳ ವಿವಾಹ ಮಾಡತಕ್ಕದ್ದು ಯುಕ್ತವೆಂದು ವಿದ್ಯಾ ಮಂಡಿತವಾದ ಪ್ರಾಂತಗಳಲ್ಲಿ ಪಂಡಿತರಾದ ಸ್ತ್ರೀಪುರುಷರ ಅಭಿಪ್ರಾಯವಿರುವದು, ಇವರ ಸೆರಗು ವಿದ್ಯೆಯಲ್ಲಿ ಹಿಂದುಳಿದ ಪ್ರಾಂತಗಳ ಮೇಲಾದರೂ ಬೀಳುತ್ತ ನಡೆದದೆ. ಇಂಥ ಪ್ರೌಢ ಕನ್ನಿಕೆಯರ ವಿವಾಹಕ್ಕೆ ಶಾಸ್ತ್ರ ಸಮ್ಮತಿ ಕೂಡಾ ಇರುವದೆಂದು ಕೆಲವು ಜನ ಪಂಡಿತರು ನಮಗೆ ಹೇಳಿ ನಮ್ಮಲ್ಲಿ ನಂಬಿಗೆಯನ್ನುಂಟುಮಾಡತೊಡಗಿರುವರು.

ವಿಧವೆಯರ ಪುನರ್ವಿವಾಹಕ್ಕೆ ಶಾಸ್ತ್ರಗಳೊಪ್ಪುತ್ತವೆಂತಲೂ, ಕೆಲವು ಸ್ಥಿತಿ ಯಲ್ಲಿದ್ದ ವಿಧವೆಯರ ಪುನರ್ವಿವಾಹವನ್ನು ಮಾಡಬೇಕೆಂತಲೂ ಸಾಮಾಜಿಕ ಸುಧಾರಣೇಚ್ಛುಗಳು ಪ್ರತಿಪಾದಿಸುತ್ತಾರೆ. ಮದ್ರಾಸ, ಪುಣೆ, ಕಲಕತ್ತಾ, ಮುಂತಾದ ಸ್ಥಳಗಳಲ್ಲಿ ಈ ವಿಷಯದ ಮೇಲೆ ಪ್ರಚಂಡವಾದ ವಾಗ್ವಾದ ನಡೆದು ಕಡೆಗೇನೂ ನಿರ್ಣಯವಾಗದಿದ್ದರೂ ಸಾವಿರಾರು ವಿಧವೆಯರು ಹೊಸ ಗಂಡಂದಿರನ್ನು ಸಂಪಾದಿಸಿಕೊಂಡಿರುವರು.

ಪುನರ್ವಿವಾಹವು ಕರ್ತವ್ಯವಿರಲಿ ಇರದೇ ಇರಲಿ, ವಿಧವೆಯರ ವಪನವು ಅನಾಚಾರವಾದದ್ದೆಂದು ಕೆಲ ಪಂಡಿತರ ಮತವಿರುತ್ತದೆ. ವಿಧವೆಯರಾದ ಎಳೆ ಮಕ್ಕಳ ಕ್ಷೌರವನ್ನು 'ಅಶುಭಸ್ಯ ಕಾಲ ಹರಣಂ' ಎಂಬ ನ್ಯಾಯಕ್ಕನುಸರಿಸಿ ಬಹುಶಃ ಮುಂದೆ ಮುಂದಕ್ಕೆ ಹಾಕುವ ಪರಿಪಾಠ ಬಿದ್ದುಹೋಗಿದೆ. ಪ್ರೌಢ ವಿಧವೆಯರ ಮುಂಡನವನ್ನು ಕೂಡಾ ಕೆಲವು ಮನೆತನದವರು ನಿಲ್ಲಿಸಿಬಿಟ್ಟಿರುವರು.

ಈ ಪರಿಸ್ಥಿತಿಗೆ ನಮ್ಮ ಸಮಾಜವು ಬಂದ ಬಳಿಕ ನಮ್ಮ ಕಥಾನಕವು ಪ್ರಾರಂಭವಾಗುತ್ತದೆ.

ಗ್ರಂಥಕರ್ತಾ

ವಿಜ್ಞಾಪನೆ

ಕನ್ನಡಭಾಷೆಯು ಅಪೂರ್ಣವಾಗಿರುವದಲ್ಲದೆ ಅದರಲ್ಲಿ ಕರ್ಕಶತೆಯೂ ಇರುವದರಿಂದ ಆ ಭಾಷೆಯು ಎಂದಿಗೂ ಊರ್ಜಿತಾವಸ್ಥೆಗೆ ಬರಲರಿಯದೆಂದು ಪರಭಾಷೆಯವರೂ ಕೆಲವು ಜನ ಕನ್ನಡಿಗರೂ ಕೂಡಾ ಅನ್ನುತ್ತಿರುವರು. ಅಪೂರ್ಣತೆಯ ದೋಷವು ಎಲ್ಲ ದೇಶಭಾಷೆಗಳಲ್ಲಿ ಉಂಟೇ ಉಂಟು. ಈ ಅಪೂರ್ಣತೆಯನ್ನು ಉಳಿದ ದೇಶಭಾಷೆಯವರು ಸಂಸ್ಕೃತ ಮಾತ್ರದಿಂದಲ್ಲದೆ ಅನೇಕ ಯಾವನೀ ಭಾಷೆಗಳಲ್ಲಿಯ ಶಬ್ದ ಸಮುದಾಯವನ್ನು ತೆಗೆದುಕೊಂಡು ತುಂಬಿ ಬಿಟ್ಟಿರುವರು. ಕನ್ನಡಭಾಷೆಯು ನಿಜವಾಗಿ ಕರ್ಕಶವಾದದ್ದಲ್ಲ. ಚಿತ್ರಕಲೆಯನ್ನರಿಯದವನು ಸಿಕ್ಕ ಸಿಕ್ಕ ಬಣ್ಣಗಳನ್ನು ತೆಗೆದುಕೊಂಡು ಮನಸ್ಸಿಗೆ ಬಂದಂತೆ ರಭಟೆಯಾಗಿ ಬಡೆದು ಬಿಟ್ಟು ತಾನೊಳ್ಳೇ ಕಸ್ತು ಮಾಡಿದೆನೆಂದು ತನ್ನನ್ನು ತಾನೇ ಕೊಂಡಾಡಿಕೊಳ್ಳುವಂತೆ ಕೇವಲ ಶಬ್ದಾಲಂಕಾರದ ಕಿಟಿಕಿಟಿ ಹಚ್ಚಿದ್ದಲ್ಲದೆ ಕರ್ಣಕಟುಗಳಾದ ಸಂಧಿಸಮಾಸಗಳನ್ನು ಮಾಡಿಯೂ, ಅಪ್ರಸಿದ್ಧವಾದ ಶಬ್ದಗಳನ್ನು ಜೋಡಿಸಿಯೂ, ಹಳಗನ್ನಡ ಶಬ್ದಗಳನ್ನು ಶ್ರಮಪಟ್ಟು ಹುಡುಕಿ ತಂದು ಹಾಕಿಯೂ ಕನ್ನಡ ಭಾಷಾಸುಂದರಿಗೆ ಹುಂಚ್ಚಿಯ ಸ್ವರೂಪವನ್ನು ತಂದಿಟ್ಟಿರುತ್ತಾರೆ. ಜೈಮಿನೀಭಾರತ, ರಾಜಶೇಖರ ವಿಳಾಸ, ತೊರವೆ ರಾಮಾಯಣ ಮುಂತಾದ ಛಂದೋಬದ್ಧವಾದ ಗ್ರಂಥಗಳಲ್ಲಿ ಕೂಡ ಮಾರ್ದವವೂ ಸುಲಭತೆಯೂ ವ್ಯಕ್ತವಾಗಿರಲು ಆಧುನಿಕ ಗ್ರಂಥಕಾರರೆಂದೆನ್ನಿಸಿಕೊಳ್ಳುವವರು ಶ್ರುತಿಕಷ್ಟವಾಗುವಂತೆ ಏಕೆ ಬರೆಯುತ್ತಾರೋ ಕಾಣೆನು! ಗ್ರಂಥವೆಂದರೆ ಕವಡಕಂಟಕ ನುಡಿಗಳ ಸಮುದಾಯವೇನು ? ಆದರೆ ಈ ಹುಚ್ಚು ಇತ್ತಿತ್ತಲಾಗಿ ನಮಗೆ ಪೂಜ್ಯರಾದ ಗುರುಹಿರಿಯರನ್ನು ಕೂಡ ಬಿಡಲಿಲ್ಲವೆಂಬದನ್ನು ನೋಡಿ ನಮಗೆ ವಿಷಾದವಾಗುತ್ತದೆ. "ಪುರಾಣಮಿತ್ಯೇವ ನ ಸಾಧು ಸರ್ವಂ" ಎಂಬ ಪದದ ಭಾಷಾಂತರವು "ಪ್ರವೇಕ ಮಲ್ತ್ಯೆಪಳದುಂದಯುಲ್ಲಂ" ಎಂತಾಗಲು

> ಲಲಿತವಹ ಕನ್ನಡದ ನುಡಿಯಲಿ
> ತಿಳಿದು ತನ್ನೊಳು ತನ್ನ ಸುಖವನು
> ಗಳಿಸಿಕೊಂಡರೆ ಸಾಲದೆ ಸಂಸ್ಕೃತದಲಿನ್ನೇನು ?

ಎಂಬ ಅಭಿಮಾನಯುಕ್ತವಾದ ಉಕ್ತಿಗೆ ಅರದಾಳವೇ ಹತ್ತಿದಂತಾಗುತ್ತ

ದಲ್ಲ! ಮೇಲೆ ತೋರಿಸಿದ ಉದಾಹರಣದಲ್ಲಿ ಸಂಸ್ಕೃತವನ್ನು ಹಿಡುಕೊಂಡು ಕನ್ನಡದ ಅರ್ಥ ಮಾಡಬೇಕಾಗಿರುವದು.

ದಕ್ಷಿಣ ಕರ್ನಾಟಕದ ಕನ್ನಡಕ್ಕೂ ಉತ್ತರ ಕರ್ನಾಟಕದ ಕನ್ನಡಕ್ಕೂ ಹೆಚ್ಚು ಕಡಿಮೆ ಅದೆ. ಎರಡೂ ಪ್ರಾಂತಗಳ ಭಾಷೆಯನ್ನು ಒಂದಾಗಿ ಮಾಡುವದಕ್ಕೆ ಗ್ರಂಥಕರ್ತರ ಸಮ್ಮೇಲನದ ದ್ವಾರಾ ಯತ್ನ ನಡೆದದೆ. ಇದಾಗುವದಕ್ಕೆ ಅವಶ್ಯ ವಾಗಿ ಎಷ್ಟೋ ಕಾಲ ಹೋಗಬೇಕು. ಸದ್ಯಕ್ಕೆ ಕೆಲವು ಶಬ್ದಗಳಾಗಲಿ ಪ್ರಯೋಗ ಗಳಾಗಲಿ ನಮಗೂ ಮೈಸೂರ ಪ್ರಾಂತ ನಿವಾಸಿಗಳಿಗೂ ಪರಸ್ಪರರಿಗೆ ತಪ್ಪಾಗಿ ಕಂಡರೂ ಕಾಲಾಂತರದಿಂದ ಉಭಯರಿಗೂ ಗ್ರಾಹ್ಯವಾಗಬಹುದೆಂದು ನಂಬಿ ಇಂಥ ಶಬ್ದಪ್ರಯೋಗಗಳ ಸಮಾವೇಶವನ್ನು ತಕ್ಕಮಟ್ಟಿಗೆ ಈ ಪುಸ್ತಕದಲ್ಲಿ ಮಾಡಿದೆ.

ಈಗ ನಾಲ್ಕಾರು ವರುಷದಿಂದ ಮೈಸೂರು "ಗ್ರಾಜುಏಟ್ಸ ಟ್ರೇಡಿಂಗ ಅಸೋಶಿಯೇಶನ್"ದವರು ಅಶ್ರಾಂತಶ್ರಮಪಟ್ಟು ನಮ್ಮ ಮಾತೃಭಾಷೆಯ ದೀನವಾದ ಅವಸ್ಥೆಯನ್ನು ದೂರ ಮಾಡಲು ಟೊಂಕ ಕಟ್ಟಿ ನಿಂತಿರುವರು. ಅದ ರಿಂದ ಎಷ್ಟೋ ಸುವಾಚ್ಯಗಳಾದ ಪುಸ್ತಕಗಳು ಸಿದ್ಧವಾಗಿ ಕನ್ನಡದಲ್ಲಿ ವಾಚನಾಭಿ ರುಚಿಯು ಹೆಚ್ಚಾಗುತ್ತ ನಡೆದದೆ. ಮ. ರಾ. ಕೃಷ್ಣರಾವ ಹುನಗುಂದ, ಬಿ. ರಾಮ ರಾವ, ಬಿ. ವೆಂಕಟಾಚಾರ್ಯ ಮುಂತಾದವರ ಗ್ರಂಥಗಳನ್ನು ನೋಡಿ ನನಗೂ ಪ್ರೋತ್ಸಾಹನೆಯುಂಟಾಗಿ, ಸುದಾಮನು ಶ್ರೀಕೃಷ್ಣನಿಗೆ ಅವಲಕ್ಕಿಯನ್ನು ಸಮರ್ಪಿ ಸಿದಂತೆ, ಮಹನೀಯರಾದ ವಾಚಕರ ಮುಂದೆ ನನ್ನ ಅಲ್ಪ ಕೃತಿಯನ್ನು ಮುಂಡಿಸಿರು ತ್ತೇನೆ. ಷಡಕ್ಷರಿ ಕವಿವರ್ಯರು

ಪಳಿಯಲ್ಬಲ್ಲಂ ನಗಲಲ್
ಖಳನೆಂಬಲ್ಲನೆ ನವೀನ ಕಾವ್ಯಮನಿಳೆಯೋಳ್ ।
ತೊಳಗುವ ರವಿಯಂ ಮುಸುಳಿಪ
ಜಳಧರನದರಂತೆ ಜಗಮನೇಂಬೆಳಗುಗುಂಮ ॥

ಎಂಬ ದರ್ಪಯುಕ್ತವಾದ ಮುಂಡಿಗೆಯನ್ನಿಕ್ಕಿದರು. ಆದರೆ ಆ ಮಹಾತ್ಮರ ಬೆಡಗು ನನಗೆ ಹೇಗೆ ಬಂದೀತು? ನಾನು ನನ್ನ ಗ್ರಂಥವನ್ನು ವಾಚಕರು ಪ್ರೇಮದಿಂದ ಚಿಕ್ಕ ಮಗುವನ್ನೆತ್ತಿಕೊಂಡಂತೆ ಎತ್ತಿಕೊಳ್ಳಲೆಂದು ವಿಜ್ಞಾಪನೆ ಮಾಡಿಕೊಳ್ಳು ತ್ತೇನೆ.

ಈ ಗ್ರಂಥವನ್ನು ಗ್ರಾಮಾಧಿಕಾರೀ ಮುದ್ರಣಾಲಯದವರು ಅದರ

ದೊಂದಿಗೆ ತೆಗೆದುಕೊಂಡು ಒಳ್ಳೇ ಮನಸ್ಸುಕೊಟ್ಟು ಅಚ್ಚು ಹಾಕಿ ಪ್ರಸಿದ್ಧಿಗೆ ತಂದದಕ್ಕಾಗಿ ನಾನವರಿಂದ ತುಂಬಾ ಉಪಕೃತನಾಗಿರುತ್ತೇನೆ.

ವಿಜಾಪೂರ

ತಾ॥ ೧೪-೧೦-೧೯೦೮ ವಾಸುದೇವಾಚಾರ್ಯ

ಅನುಕ್ರಮಣಿಕೆ

ಮುನ್ನುಡಿ

೧

ಕನ್ನಡದ ಮೊದಲ ಕಾದಂಬರಿಕಾರರ ಪಂಕ್ತಿಯಲ್ಲಿ ಕೆರೂರ ವಾಸುದೇವಾಚಾರ್ಯರಿಗೆ ಅಗ್ರಮಾನ್ಯವಾದ ಸ್ಥಾನವಿದೆ. ಆ ಸಾಹಿತ್ಯ ಪ್ರಕಾರದಲ್ಲಿಯ ಅವರ ಸಾಧನೆ ಚಾರಿತ್ರಿಕ ದೃಷ್ಟಿಯಿಂದ ಅತ್ಯಂತ ವಿಶಿಷ್ಟವಾಗಿದೆ. ಕಳೆದ ಐವತ್ತು ವರ್ಷಗಳಲ್ಲಿ ಕನ್ನಡ ಕಾದಂಬರಿ ವಿಷಯ, ರೂಪ, ರಚನೆ, ರೀತಿಗಳಲ್ಲಿ ಬೇಕಾದಷ್ಟು ವೈವಿಧ್ಯವನ್ನು ಸಾಧಿಸಿದೆ. ವಾಸ್ತವಿಕ ಜೀವನ ಚಿತ್ರಣದ ರೀತಿಯನ್ನನುಸರಿಸಿ ಕೊಂಡು ಅನೇಕ ಮುಖವಾದ ಜೀವನದರ್ಶನವನ್ನು ಒದಗಿಸಿದೆ. ಗುಣದಲ್ಲಿ, ಗಾತ್ರದಲ್ಲಿ, ಕನ್ನಡ ಕಾದಂಬರಿ ಇಂದು ಒಂದು ಮುಖ್ಯವಾದ ಸಾಹಿತ್ಯಪ್ರಕಾರವಾಗಿ ಬೆಳೆದು ನಿಂತಿದೆ. ಇಂದಿನ ಸಿದ್ಧಿಸಾಧನೆಗಳಿಗೆ ಒಂದು ರೀತಿಯಲ್ಲಿ ವಾಸುದೇವಾಚಾರ್ಯರು ಮಾರ್ಗದರ್ಶಕರಾಗಿ ಈ ಸಾಹಿತ್ಯಪ್ರಕಾರದ ಸಾಧ್ಯತೆಗಳತ್ತ ಗಮನ ಸೆಳೆದವರಲ್ಲಿ ಹಿರಿಯರು ಎನ್ನುವುದನ್ನು ನಾವು ನೆನೆಯಬೇಕಾದ ಸಂಗತಿಯಾಗಿದೆ. ಕಾದಂಬರಿ ಜೀವನದ ವಾಸ್ತವ ಚಿತ್ರವಾಗಿರಬೇಕು ಎಂಬ ಮಾತು ಇಂದು ಹೊಸದೆನಿಸುವುದಿಲ್ಲ. ಅದನ್ನು ಗ್ರಹೀತವೆಂದಿಟ್ಟುಕೊಳ್ಳುವ ಮಟ್ಟಿಗೆ, ಅಂಥದಾಗಿದ್ದರೆ ಮಾತ್ರ ಅದು ಕಾದಂಬರಿ ಎನ್ನುಕೊಳ್ಳುವ ಮಟ್ಟಿಗೆ, ವಾಸ್ತವಿಕತೆಯ ರೀತಿ ನಮ್ಮ ಮನಸ್ಸುಗಳಿಗೆ ರೂಢಿಯಾಗಿಬಿಟ್ಟಿದೆ. ಜೀವನದ ಯಥಾವತ್ತಾದ ಚಿತ್ರಮಾತ್ರವಾಗಿರದೆ ಅದರ ಒಂದಿಲ್ಲೊಂದು ಮೈಯ ಮೇಲೆ ಅದು ಹೊಸ ಬೆಳಕನ್ನು ಬೀರಬೇಕು, ಅದರ ಇತಿಮಿತಿಗಳನ್ನು, ಸಮಸ್ಯೆಗಳನ್ನು, ಹವಣಿಕೆ ಹಾರೈಕೆಗಳನ್ನು, ಸೋಲುಗೆಲವುಗಳನ್ನು ಎತ್ತಿತೋರಿಸಿ ಬದುಕಿನ ಬಗೆಯಲ್ಲಿಯ ನಮ್ಮ ತಿಳಿವನ್ನು ಆಳವಾಗಿಸಬೇಕು, ಎನ್ನುವುದನ್ನು ಕೂಡ ನಾವಿಂದು ಕಾದಂಬರಿಯ ವ್ಯಾಖ್ಯೆಯನ್ನೇ ಆಗಿಸಿಕೊಂಡಿದ್ದೇವೆ. ಕಳೆದ ಅರ್ಧ ಶತಮಾನದಲ್ಲಿಯ ಬೆಳವಣಿಗೆ ಅಷ್ಟನ್ನು ಸಾಧಿಸಿದೆ. ಆದರೆ ಈ ಬೆಳವಣಿಗೆ ಇದ್ದಕಿದ್ದಹಾಗೆ ಸಿದ್ಧಿಸಲಿಲ್ಲ. ಇಂಥ ಸಿದ್ಧಿ ಸಾಧ್ಯ, ಅಪೇಕ್ಷಣೀಯ. ಅಂಥವನ್ನು ಪಡೆವಾಗಲೆ ಈ ಸಾಹಿತ್ಯಪ್ರಕಾರ ಉಪಯುಕ್ತವಾದ ಕೆಲಸವನ್ನು ಮಾಡಬಲ್ಲದು ಎಂದು ಮೊದಲು ಗುರುತಿಸಿ ಅಂಥ ಹವಣಿಕೆಯತ್ತ ಸ್ಪಷ್ಟವಾಗಿ ಬೆರಳು ತೋರಿಸಿದ ಹಿರಿಯರು ಕೆರೂರ ವಾಸುದೇವಾಚಾರ್ಯರು.

ವಿಷಯದ ದೃಷ್ಟಿಯಿಂದ ವಾಸುದೇವಾಚಾರ್ಯರು ಕನ್ನಡ ಕಾದಂಬರಿಯನ್ನು ಸಮಾಜಾಭಿಮುಖವಾಗಿಸಿದರು. ರೀತಿಯ ದೃಷ್ಟಿಯಿಂದ ಅದನ್ನು ವಾಸ್ತವತೆಯ ಹೆದ್ದಾರಿಯಲ್ಲಿ ತಂದು ನಿಲ್ಲಿಸಿದರು. ಈ ಎರಡೂ ಸಂಗತಿಗಳು ಕಾದಂಬರಿಯ ಬೆಳವಣಿಗೆಯ ದೃಷ್ಟಿಯಿಂದ ಅತ್ಯಂತ ಮಹತ್ವವಾದುವು. ಇಂಥ ಸ್ಪಷ್ಟವಾದ ಮಾರ್ಗದರ್ಶನ ವಾಸುದೇವಾಚಾರ್ಯರವರಂಥವರಿಂದ ದೊರಕಿರದಿದ್ದರೆ ಈ ಸಾಹಿತ್ಯಪ್ರಕಾರ ನಮ್ಮಲ್ಲಿ ಯಾವ ರೀತಿಯಲ್ಲಿ ಮತ್ತು ಯಾವ ಗತಿಯಿಂದ ಬೆಳೆಯುತ್ತಿತ್ತು ಎನ್ನುವುದನ್ನು ಹೇಳಲಾಗುವುದಿಲ್ಲ. ಈ ಎರಡೂ ಸಂಗತಿಗಳು ನಮಗಿಂದು ಸಾಮಾನ್ಯವೆಂದೆನಿಸುವುದು ಸಾಧ್ಯವಿದೆ. ಆದರೆ ಅವು ಎಪ್ಪತ್ತು ವರ್ಷಗಳ ಹಿಂದೆ ಒಂದು ಬರವಣಿಗೆಯ ಪ್ರಕಾರದ ದಿಕ್ಕುದಾರಿಗಳನ್ನೇ ಹೇಗೆ ಬದಲಾಯಿಸಿದುವು, ಹೊಸ ಧ್ಯೇಯೋದ್ದೇಶಗಳ ಕಡೆಗೆ ಗಮನ ಹರಿಯುವಂತೆ ಮಾಡಿದವು ಎನ್ನುವುದನ್ನು ಮನಗಾಣಬೇಕಾದರೆ ಇಂಥ ಮಹನೀಯರು ದಾರಿ ತೋರುವ ಮೊದಲು ಈ ಸಾಹಿತ್ಯಪ್ರಕಾರ ಯಾವ ಸ್ಥಿತಿಯಲ್ಲಿದ್ದಿತು ಎಂಬುದನ್ನು ತಿಳಿದಿರಬೇಕಾಗುತ್ತದೆ. ಕನ್ನಡ ಕಾದಂಬರಿಯ ಬೆಳವಣಿಗೆಯಲ್ಲಿ ವಾಸುದೇವಾಚಾರ್ಯರ ಸಾಧನೆ ಒಂದು ಸ್ಪಷ್ಟವಾದ, ಅತ್ಯಂತ ಮಹತ್ವದ ಘಟ್ಟವನ್ನು ನಿರ್ದೇಶಿಸುತ್ತದೆ. ಆ ಸಾಧನೆಯ ಚಾರಿತ್ರಿಕ ಮಹತ್ವವನ್ನು ಅರ್ಥವಾಗಿಸಿಕೊಳ್ಳುವುದಕ್ಕೆ ಅದುವರೆಗಿನ ಬೆಳವಣಿಗೆಗಳ ಸ್ಥೂಲವಾದ ಪರಿಚಯವಾದರೂ ನಮಗೆ ಅಗತ್ಯ. ಆ ದೃಷ್ಟಿಯಿಂದ ಅವರ ಮಹತ್ವದ ಕೃತಿಯಾದ "ಇಂದಿರಾ" ಕಾದಂಬರಿಯ ವೈಶಿಷ್ಟ್ಯಗಳನ್ನು ಕುರಿತು ಕೆಲವು ಮಾತುಗಳನ್ನು ಹೇಳಲು ಮೊದಲು ವಾಸುದೇವಾಚಾರ್ಯರು ಕಾದಂಬರಿಯ ಬರವಣಿಗೆಗೆ ತೊಡಗುವಾಗ ಆ ಸಾಹಿತ್ಯ ಪ್ರಕಾರ ಬೆಳವಣಿಗೆಯ ಯಾವ ಹಂತದಲ್ಲಿದ್ದಿತು ಎನ್ನುವುದನ್ನು ಗಮನಿಸಬೇಕು.

ಕೆರೂರು ವಾಸುದೇವಾಚಾರ್ಯರು ನಿಧನವಾದದ್ದು ೧೯೨೧ರಲ್ಲಿ. ಆಧುನಿಕವೆನ್ನಬಹುದಾದ ರೀತಿಯಲ್ಲಿ ಈ ಸಾಹಿತ್ಯಪ್ರಕಾರ ನಮ್ಮಲ್ಲಿ ಸ್ವತಂತ್ರವಾಗಿ ಮತ್ತು ವಿಪುಲವಾಗಿ ಬೆಳೆಯತೊಡಗಿದ್ದು ಮೂವತ್ತರ ದಶಕದ ಕೊನೆಯಿಂದ ಮೊದಲಾಗಿ. ಆದ್ದರಿಂದ ಕೆರೂರರವರವರೆಗಿನ ಕಾದಂಬರಿ ಎಂದರೆ ಕನ್ನಡ ಕಾದಂಬರಿಯ ಪ್ರಾರಂಭದ ಸ್ಥಿತಿ ಎಂದು ಹೇಳಬಹುದು. ವಾಸುದೇವಾಚಾರ್ಯರ ನಿಧನ ಸಮಯಕ್ಕೆ ಈ ಸಾಹಿತ್ಯ ಪ್ರಕಾರದ ಪ್ರಾಥಮಿಕ ಹಂತದಲ್ಲಿ ಗಣನೀಯವಾಗಿ ಕೆಲಸ ಮಾಡಿದ್ದ ಗಳಗನಾಥರು ಮತ್ತು ಎಂ. ಎಸ್. ಪುಟ್ಟಣ್ಣ ಅವರು ಇನ್ನೂ ಬದುಕಿದ್ದರೂ ಮೊದಲನೆಯವರ "ಮಾಧವಕರುಣಾವಿಲಾಸ"

ವೊಂದನ್ನು ಬದಿಗಿರಿಸಿದರೆ ಅವರ ಮಹತ್ವದ ಕಾರ್ಯ ಆಗಲೆ ಮುಗಿದು ಹೋಗಿತ್ತು. ಆ ದೃಷ್ಟಿಯಿಂದ ಕೆರೂರರವರ ನಿಧನದ (ಎಂದರೆ ಇಪ್ಪತ್ತರ ದಶಕ) ಕನ್ನಡ ಕಾದಂಬರಿಯು ಬೆಳವಣಿಗೆಯಲ್ಲಿ ಒಂದು ಘಟ್ಟವನ್ನು ತಲುಪಿ ಹೊಸಹವಣಿಕೆ ಗಳನ್ನು ಬೆಳೆಯಿಸಿಕೊಂಡ ದಶಕವೆನ್ನಬಹುದಾಗಿದೆ. ಆದ್ದರಿಂದ ಅಲ್ಲಿಯುವರೆಗಿನ ಬೆಳವಣಿಗೆಯ ರೂಪರೇಖೆಗಳನ್ನು ಗುರುತಿಸುವುದು ಮೊದಲ ಕೆಲಸ,

ಈ ಸಾಹಿತ್ಯಪ್ರಕಾರದ ಪ್ರಾರಂಭಕಾಲದ ಬೆಳವಣಿಗೆಯನ್ನು ಗಮನಿಸ ಬೇಕಾದಾಗ ಈ ಪ್ರಕಾರದ ಬರವಣಿಗೆ ಎಂದು ಮೊದಲಾಯಿತು, ಹೇಗೆ ಮೊದ ಲಾಯಿತು ಎಂಬ ಪ್ರಶ್ನೆಗಳು ಸಹಜವಾಗಿಯೇ ಹುಟ್ಟಿಕೊಳ್ಳುತ್ತವೆ. ಕನ್ನಡದ ಮೊದಲ ಕಾದಂಬರಿ ಯಾವುದು ಎಂಬ ಪ್ರಶ್ನೆ ಸಾಕಷ್ಟು ಚರ್ಚೆ, ವಿಮರ್ಶೆ, ಸಂಶೋಧನಗಳಿಗೆ ಎಡೆಕೊಟ್ಟಿದೆ. ಕೆಂಪುನಾರಾಯಣನ "ಮುದ್ರಾಮಂಜೂಷ"ವೇ ಕಾದಂಬರಿ ಎನ್ನಬಹುದಾದ ಮೊದಲ ಕನ್ನಡ ಕೃತಿ ಎಂದು ಬಹುಕಾಲದವರೆಗೆ ಒಪ್ಪಿಕೊಳ್ಳಲಾಗಿದ್ದ ಅಭಿಪ್ರಾಯವನ್ನು ಬದಿಗಿರಿಸಿ ೧೮೧೫ರ ಸುಮಾರಿನ ಯಾದ ವನ "ಕಲಾವತೀ ಪರಿಣಯ"ವೇ ಮೊದಲಿನ ಸ್ವತಂತ್ರ ಕೃತಿ ಎಂದು ಡಾ. ಹಾವ ನೂರರು ಪ್ರತಿಪಾದಿಸಿದ್ದಾರೆ. ಮತ್ತು ಈ ಸಾಹಿತ್ಯಪ್ರಕಾರ ಒಳಗೊಳ್ಳುವ ವಿಷಯದ ಆಧಾರದ ಮೇಲಿಂದ ಅದಕ್ಕೆ ಸೇರುವ ಕೃತಿಗಳನ್ನು (೧) ಅದ್ಭುತ ರಮ್ಯ, ಪೌರಾಣಿಕ, (೨) ಐತಿಹಾಸಿಕ, ಮತ್ತು (೩) ಸಾಮಾಜಿಕ ಎಂದು ಮೂರು ವಿಧವಾಗಿ ವಿಂಗಡಿಸಿ ಮೊದಲನೆಯ ಪ್ರಕಾರದಲ್ಲಿ ಮೇಲೆ ಹೇಳಿದ "ಕಲಾವತೀ ಪರಿಣಯ" ಮೊದಲನೆಯದೆಂದೂ ಎರಡನೆಯ ಪ್ರಕಾರದಲ್ಲಿ "ಮುದ್ರಾ ಮಂಜೂಷ" ಮೊದಲನೆಯದೆಂದೂ ಮೂರನೆಯದರಲ್ಲಿ ಗುಳುವಾಡಿ ವೆಂಕಟ ರಾಯರ "ಇಂದಿರಾಬಾಯಿ" ಪ್ರಪ್ರಥಮ ಸ್ವತಂತ್ರ ಸಾಮಾಜಿಕ ಕಾದಂಬರಿ ಯೆಂದೂ ಹೇಳಿದ್ದಾರೆ. ಐತಿಹಾಸಿಕ ಹಾಗೂ ಸಾಮಾಜಿಕ ಪ್ರಕಾರಗಳಲ್ಲಿ ಸ್ವತಂತ್ರ ಕೃತಿಗಳು ಬರುವ ಮೊದಲು ಅನುವಾದಗಳು ಬಂದಿದ್ದನ್ನು ಗಮನಿಸಿ ಡಿಫೋನ "ರಾಬಿನ್‌ಸನ್ ಕ್ರೂಸೋ" ಇಂಗ್ಲೀಷಿನಿಂದ ಕೃಷ್ಣಸ್ವಾಮಿ ಅಯ್ಯಂ ಗಾರ್ ಅವರಿಂದ ಅನುವಾದಿತವಾಗಿ ೧೮೫೭ರಲ್ಲಿ ಪ್ರಕಟವಾದದ್ದು ಮೊದಲನೆಯ ದೆಂದೂ, ಸಾಮಾಜಿಕ ಪ್ರಕಾರದಲ್ಲಿ ಮರಾಠಿಯಿಂದ ಅನುವಾದಿತವಾಗಿ ಬಾಸೆಲ್ ಮಿಶನ್ನಿನವರಿಂದ ಪ್ರಕಟಿಸಲಾದ ಪದಮಂಜಿ ಅವರ "ಯಮುನಾ ಪರ್ಯಟನ" ಮೊದಲಿನದೆಂದೂ ತಮ್ಮ ಸಂಶೋಧನೆಯನ್ನು ಡಾ. ಹಾವನೂರ ಅವರು ಮಂಡಿಸಿದ್ದಾರೆ. ("ರಾಬಿನ್‌ಸನ್ ಕ್ರೂಸೋ"ವನ್ನು ಐತಿಹಾಸಿಕ ಪ್ರಕಾರದಲ್ಲಿ

ಹೇಗೆ ಸೇರಿಸಬಹುದೆನ್ನುವುದು ಗೊತ್ತಾಗುವುದಿಲ್ಲ. ಸೆಲ್ಕರ್ಕನ ನೌಕಾಭಂಗ ಇದಕ್ಕೆ ಪ್ರೇರಣೆಯಾಗಿದ್ದರೂ ಕೃತಿಯುದ್ದಕ್ಕೂ ಓದುಗರ ಮನಸ್ಸನ್ನು ಸೆಳೆಯುವುದು ಡಿಫೋನ ಸೃಜನಶೀಲವಾದ, ಶಕ್ತಿಯುತವಾದ, ಕಲ್ಪನಾವಿಲಾಸ. ಅದೊಂದು ಸ್ವತಂತ್ರವಾದ ಇಂಗ್ಲೀಷಿನ ಮೊದಲ ಕಾದಂಬರಿಗಳಲ್ಲಿ ಒಂದು ; ಮನುಷ್ಯನಲ್ಲಿಯ ಸಾಹಸಬುದ್ಧಿ ಎದುರಿಸಬೇಕಾದ ಸಂಕಷ್ಟಗಳನ್ನು ಚಿತ್ರಿಸುವುದು ಮಾತ್ರವಲ್ಲದೆ ನಿಸರ್ಗದೊಡನೆ ಹೋರಾಡಿ ನಾಗರಿಕತೆಯನ್ನು ನೆಲೆನಿಲ್ಲಿಸುವ ಮಾನವನ ಪ್ರಯತ್ನ ವನ್ನು ಈ ಕಾಲ್ಪನಿಕ ಕಥೆ ಸಂಕೇತಿಸುತ್ತದೆ ಎಂದು ಅನೇಕ ಗಣ್ಯ ವಿಮರ್ಶಕರು ಅಭಿಪ್ರಾಯಪಟ್ಟಿದ್ದಾರೆ. ಅಲ್ಲದೆ "ರಾಬಿನ್‌ಸನ್ ಕ್ರೂಸೋ"ದ ಅನುವಾದ ಪ್ರಕಟವಾದದ್ದು ೧೮೫೪ರಲ್ಲಿ, ೧೮೫೭ರಲ್ಲಿ ಅಲ್ಲ)

ಅದು ಹೇಗಿದ್ದರೂ ಅದಕ್ಕೂ ಮೊದಲು ಇಂಗ್ಲೀಷಿನಿಂದ ಒಂದೆರಡು ಕಾದಂಬರಿಗಳು ಅನುವಾದವಾಗಿ ಪ್ರಕಟವಾಗಿದ್ದವು. ಬನಿಯನ್ನನ "ಪಿಲ್‌ಗ್ರಿಮ್ಸ್ ಪ್ರೊಗ್ರೆಸ್" ಜಿ. ವೀಗಲ್ ಅವರಿಂದ ಅನುವಾದಿತವಾಗಿ ೧೮೪೭ರಲ್ಲಿ ಪ್ರಕಟ ವಾಗಿತ್ತು. ಡಾ. ಹಾವನೂರರು ಅದನ್ನು ಕಾದಂಬರಿಯೆಂದು ಪರಿಗಣಿಸಲು ಸಿದ್ಧ ರಿಲ್ಲ. "ಎಷ್ಟೆಂದರೂ ಅದು ಕ್ರೈಸ್ತ ಧಾರ್ಮಿಕ ಕೃತಿ. ಕಾದಂಬರಿ ಎಂಬ ಇಂದಿನ ಅರ್ಥ ಅದಕ್ಕೆ ಹೊಂದುವುದಿಲ್ಲ" ಎಂದು ಹೇಳಿರುವುದು ವಿಚಿತ್ರವಾಗಿ ಕಾಣುತ್ತದೆ. ಅದರಲ್ಲಿ ಅನ್ಯಾರ್ಥಪ್ರತಿಪಾದನೆ ಇದೆ ಎಂದಮಾತ್ರಕ್ಕಾಗಿಯಾಗಲಿ ಧರ್ಮಾಚರಣೆ ಯನ್ನು ಬೋಧಿಸುವುದು ಅದರ ಉದ್ದೇಶವಾಗಿತ್ತೆಂದಮಾತ್ರಕ್ಕಾಗಿಯಾಗಲಿ, ಅದನ್ನು ಕಾದಂಬರಿ ಎಂದು ಪರಿಗಣಿಸದೆ ಇರಲಾಗುವುದಿಲ್ಲ. ಮಾನವನ ಕಥೆಯಾಗಿ ದ್ದಂತೆ ಅದು ಮನುಷ್ಯರ ಕಥೆಯೂ ಆಗಿದೆ. ಅದನ್ನು ಕಡೆಗಣಿಸುವುದಾದರೆ ಸದ್ಧರ್ಮಪ್ರಚಾರ ಹಾಗೂ ನೀತಿಬೋಧೆಯನ್ನೇ ತಮ್ಮ ಮುಖ್ಯ ಉದ್ದೇಶವ ನ್ನಾಗಿಸಿಕೊಂಡ ಅನೇಕಾನೇಕ ಅನುವಾದಿತ ಹಾಗೂ ಸ್ವತಂತ್ರ ಕೃತಿಗಳನ್ನು ಕಾದಂಬರೀ ಕ್ಷೇತ್ರದಿಂದ ಹೊರದೂಡಬೇಕಾಗುತ್ತದೆ. ಮೊದಲ ಸ್ವತಂತ್ರ ಸಾಮಾ ಜಿಕ ಕಾದಂಬರಿ ಎನಿಸಿಕೊಂಡ "ಇಂದಿರಾಬಾಯಿ"ಗೆ "ಸದ್ಧರ್ಮವಿಜಯ" ಎಂದು ಪರ್ಯಾಯ ಶೀರ್ಷಿಕೆ ಇರುವುದನ್ನು ನಾವು ನೆನೆಯಬಹುದಾಗಿದೆ, ಹಾಗೆಯೆ ದಂಡಕವೃತ್ತದಲ್ಲಿ ಹಳಗನ್ನಡದಲ್ಲಿ ಬರೆಯಲಾದ "ಕಲಾವತೀಪರಿಣಯ" ವನ್ನು ಮೊದಲ ಕಾದಂಬರಿ ಎನ್ನಬಹುದಾದರೆ ಈ ಸಾಹಿತ್ಯಪ್ರಕಾರದ ವ್ಯಾಖ್ಯೆ ಯನ್ನು ಗದ್ಯದಿಂದ ಪದ್ಯರೂಪದವರೆಗೂ ವಿಸ್ತರಿಸಬೇಕಾಗುತ್ತದೆ.

೩

ಆದರೆ ಒಂದು ಸಾಹಿತ್ಯಪ್ರಕಾರ ಪ್ರಾರಂಭಾವಸ್ಥೆಯಲ್ಲಿ ಬೆಳೆದುನಿಂತ ಬಗೆಯನ್ನು ಗುರುತಿಸಬೇಕಾದಾಗ. ಕಾಲಕ್ರಮದಲ್ಲಿ ಅದು ಮಾರ್ಪಡುತ್ತ ಹೊಸರೂಪ ಧ್ಯೇಯೋದ್ದೇಶಗಳನ್ನು ಮೈಗೂಡಿಕೊಂಡುಹೋಗಿರುವ ಕ್ರಮವನ್ನು ಗುರುತಿಸಬೇಕಾದಾಗ, ಯಾವ ಕೃತಿ ಮೊದಲಿನದು. ಯಾವ ಪ್ರಕಾರದಲ್ಲಿ ಯಾವುದು ಮೊದಲಿನದು, ಎನ್ನುವ ಸೂಕ್ಷ್ಮಾತಿಸೂಕ್ಷ್ಮ ವಿಂಗಡಣೆಗಿಂತ ಪ್ರಾರಂಭದ ಅವಸ್ಥೆಯಲ್ಲಿ ಅದರ ಸ್ವರೂಪ ಎಂಥದಾಗಿತ್ತು, ಅದರ ಧ್ಯೇಯೋದ್ದೇಶಗಳು ಯಾವವಾಗಿದ್ದವು. ಕಾಲಕ್ರಮದಲ್ಲಿ ಯಾವ ಮತ್ತು ಎಂಥ ಪ್ರಭಾವಗಳಿಗೆ ಒಳಗಾಗಿ ಅದು ಹೊಸರೂಪಗಳನ್ನು ತಾಳುವಂತಾಯಿತು ಎನ್ನುವ ಪ್ರಶ್ನೆಗಳು ಹೆಚ್ಚು ಮಹತ್ವದುವಾಗಿ ಕಾಣುತ್ತವೆ. ಮೊದಲಿನ ಪ್ರಶ್ನೆಗಳು ಸಂಶೋಧಕರಿಗೆ ಸೇರಿದುವು. ಅವರ ಶೋಧಗಳಿಗೆ ಮಹತ್ವವಿಲ್ಲ ಎಂದು ಹೇಳಲಾಗುವುದಿಲ್ಲ. ಆದರೆ ಒಂದು ಸಾಹಿತ್ಯಪ್ರಕಾರದ ಮುನ್ನಡೆಯಲ್ಲಿಯ ಹೆಜ್ಜೆಗುರುತುಗಳನ್ನು ಹಿಂಬಾಲಿಸಿಕೊಂಡು ಹೋಗಬೇಕಾದಾಗ ಇನ್ನೂ ಹೆಚ್ಚಿನ ವ್ಯಾಪ್ತಿಯುಳ್ಳ ವಿಮರ್ಶನ ಕಾರ್ಯ ನಡೆಯಬೇಕಾಗುತ್ತದೆ. ಈ ಕಾರ್ಯದಲ್ಲಿ ಆ ಸಾಹಿತ್ಯದ ಮೂಲಭೂತ ಸ್ವರೂಪ ಮತ್ತು ಬೇರೆ ಬೇರೆ ಪ್ರಭಾವಗಳ ಪರಿಣಾಮವಾಗಿ ಅದು ಬದಲಾಗುತ್ತಹೋದ ಕ್ರಮಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡಬೇಕಾಗುತ್ತದೆ.

ಕಾದಂಬರಿ ಎನ್ನಬಹುದಾದ ಮೊದಲ ಕನ್ನಡ ಕೃತಿ "ಕಲಾವತೀ ಪರಿಣಯ"ವೇ ಆಗಲಿ, ಅಥವಾ ಮುಮ್ಮಡಿ ಕೃಷ್ಣರಾಜರ "ಸೌಗಂಧಿಕಾ ಪರಿಣಯ"ವೇ ಆಗಲಿ ; ಯಾವುದೇ ಆದರೂ ಕೃತಿ ಪೌರಾಣಿಕ ಹಿನ್ನೆಲೆಯುಳ್ಳ ಅದ್ಭುತರಮ್ಯ ಕಥಾನಕವನ್ನೊಳಗೊಂಡದ್ದು ಎನ್ನುವುದು ಸ್ವಾಭಾವಿಕವಾಗಿದ್ದಷ್ಟೂ ಅರ್ಥಪೂರ್ಣವಾದ ಒಂದು ಸಂಗತಿಯಾಗಿದೆ. ದೀರ್ಘವಾದ ಸಾಹಿತ್ಯ ಪರಂಪರೆಯುಳ್ಳ ಯಾವ ದೇಶದ ಚರಿತ್ರೆಯನ್ನು ನಾವು ಪರಿಶೀಲಿಸಿದರೂ ಕಾದಂಬರಿ ಎನ್ನುವ ಗದ್ಯಪ್ರಕಾರ ತನ್ನ ಪ್ರಾರಂಭಾವಸ್ಥೆಯಲ್ಲಿ ಅದ್ಭುತರಮ್ಯವಾಗಿದ್ದುದನ್ನೇ ನಾವು ಕಾಣುತ್ತೇವೆ. ಇಂಗ್ಲೆಂಡಿನಲ್ಲಾಗಲೀ, ಫ್ರಾನ್ಸಿನಂತೆ ಸಾಹಿತ್ಯ ಪರಂಪರೆಯುಳ್ಳ ಇತರ ಯುರೋಪಿಯನ್ ದೇಶಗಳಲ್ಲಾಗಲಿ ಅದ್ಭುತರಮ್ಯ ಕಥಾನಕಗಳು, ವೀರಯೋಧರ ಸಾಹಸದ ಕಥೆಗಳು, ವಾಸ್ತವತೆಯತ್ತ ಸಾಹಿತ್ಯ ಮುನ್ನಡೆದ ಹಾಗೆ ಕಾಲಕ್ರಮದಲ್ಲಿ ಪರಿವರ್ತನೆಹೊಂದಿದವು. ಹೊಸ ರೀತಿ ವಿಧಾನಗಳನ್ನು ರೂಪಿಸಿಕೊಂಡವು. ಹೊಸ ಉದ್ದೇಶಗಳನ್ನು ರೂಢಿಸಿಕೊಂಡವು. ನಮ್ಮಲ್ಲಿ

ನಡೆದದ್ದಾದರೂ ಅಷ್ಟೇ. (ಬಾಣ) ಕಾದಂಬರಿ, ದಶಕುಮಾರಚರಿತ, ವಾಸವದತ್ತೆ, ಅವಂತಿಸುಂದರೀಕಥೆ ಎಂದು ಮುಂತಾದ ಕಥಾನಕಗಳು, ಆಖ್ಯಾಯಿಕೆಗಳು, ಎಲ್ಲ ಬಗೆಯ ಅದ್ಭುತ ರಮಣೀಯಾಂಶಗಳಿಂದ ಕೂಡಿದುವೇ ಆಗಿವೆ. ಇವೆಲ್ಲವೂ ಸಂಸ್ಕೃತದಲ್ಲಿಯವಾದರೂ ಸಾಹಿತ್ಯೋಪಾಸಕರಿಗೆ ಇಂಥ ಗದ್ಯಸಾಹಿತ್ಯ ಪರಂಪರೆಯ ಪರಿಚಯ ಸಹಜವಾಗಿಯೇ ಇರುತ್ತಿದ್ದಿತೆಂದು ಊಹಿಸಬಹುದಾಗಿದೆ. ಪ್ರತ್ಯಕ್ಷವಾಗಿಯೇ ಆಗಲಿ, ಪರೋಕ್ಷವಾಗಿಯೇ ಆಗಲಿ, ಬಾಣ ಕಾದಂಬರಿ ನಮ್ಮಲ್ಲಿಯ ಈ ಸಾಹಿತ್ಯಪ್ರಕಾರದ ಉಗಮ-ಬೆಳವಣಿಗೆಗಳ ಮೇಲೆ ತನ್ನ ಪ್ರಭಾವವನ್ನು ಖಂಡಿತವಾಗಿ ಬೀರಿದೆ. ಬಾಣನ ಕೃತಿಯ ಹೆಸರು (ಅದರಲ್ಲಿಯ ಒಂದು ಪಾತ್ರದ ಹೆಸರು) ಈ ಸಾಹಿತ್ಯ ಪ್ರಕಾರಕ್ಕೆಯೇ ಹೆಸರಾಗಿ ರೂಢಿಗೆ ಬಂದಿತು. ಈ ಒಂದು ಸಂಗತಿ ಅದರ ಪ್ರಭಾವದ ಬಗೆಯಲ್ಲಿ ಇನ್ನು ಬೇಕಿಲ್ಲದಷ್ಟು ಪ್ರಮಾಣವನ್ನು ಒದಗಿಸುತ್ತದೆ ಮಾತ್ರವಲ್ಲದೆ ಪ್ರಾರಂಭದ ಸ್ಥಿತಿಯಲ್ಲಿ ಒಂದು ದೃಷ್ಟಿಯಿಂದ ಅನಿವಾರ್ಯವೂ ಎನ್ನಬಹುದಾದ ಅದ್ಭುತರಮಣೀಯಾಂಶಗಳನ್ನೂ ಸೂಚಿಸುತ್ತದೆ. ಆ ಅವಸ್ಥೆಯಲ್ಲಿ ಅದು ಇರಿಸಿಕೊಂಡಿದ್ದ ಉದ್ದೇಶವನ್ನೂ ಪ್ರಕಟಪಡಿಸುತ್ತದೆ.

ಈ ಅದ್ಭುತರಮ್ಯ ಕಥಾನಕಗಳ ಮುಖ್ಯ ಉದ್ದೇಶ ವಾಚಕರ ಮನೋರಂಜನೆಯೇ ಆಗಿರುತ್ತಿತ್ತು. ಪೌರಾಣಿಕ ಕಥೆಗಳನ್ನು ಹೇಳುವಾಗ ಓದುಗರ ಆಸಕ್ತಿ ಕೆರಳಿ ಕುತೂಹಲ ಉಳಿಯುವಂತೆ ಅವನ್ನು ರಂಜಕವಾಗಿಸುವುದು ಕಥಾನಿರೂಪಣೆಯ ರೀತಿವಿಧಾನಗಳ ಒಂದು ಬಗೆಯಾಗಿದ್ದಂತೆ ಸ್ವಕಲ್ಪಿತವಾದ ಕಥಾನಕಗಳನ್ನು ರಚಿಸುವುದರಲ್ಲಿ ವಾಸ್ತವವಿದೂರವಾದ, ರಮಣೀಯವಾದ ಒಂದು ಬೇರೆ ಪ್ರಪಂಚವನ್ನೇ ಸೃಷ್ಟಿಸಿ ಓದುವವರ ಮನೋಲ್ಲಾಸವನ್ನು ಸಾಧಿಸುವುದು ಬಹುಮುಖ್ಯವಾದ ಉದ್ದೇಶವಾಗಿರುತ್ತಿತ್ತು. ಸಾಧ್ಯ ಅಸಾಧ್ಯ, ಸಂಭಾವ್ಯ ಅಸಂಭಾವ್ಯ ಎಂಬಂಥ ವಿಚಾರಗಳು ವಾಸ್ತವತೆಯ ಆಕಾಂಕ್ಷೆಗೆ ಸಂಬಂಧಿಸಿದುವು. ದಿನನಿತ್ಯದ ಜಂಜಡಗಳಿಂದ ಕೆಲಹೊತ್ತಾದರೂ ದೂರವಿದ್ದು ಮೈಮರೆಸಬಲ್ಲ ಕಲ್ಪನಾ ಪ್ರಪಂಚದಲ್ಲಿ ವಿಹರಿಸಬೇಕೆಂಬ ಅಪೇಕ್ಷೆ ಅಸಾಮಾನ್ಯವಾದುದೇನೂ ಅಲ್ಲ. ಇಂಥ ಕಥಾನಕಗಳು ಆ ಅಪೇಕ್ಷೆಯನ್ನು ತಮ್ಮ ತಮ್ಮ ರೀತಿಯಲ್ಲಿ ಈಡೇರಿಸುತ್ತಿದ್ದವು. ಆದರೆ ರಂಜನೆಯೊಂದೇ ಉದ್ದೇಶವಾಗಿರುತ್ತಿರಲಿಲ್ಲ. ಅದರ ಜೊತೆಯಲ್ಲಿ ನೀತಿಬೋಧೆಯ ಅಂಶ ಆನುಷಂಗಿಯಾದರೂ ರಚನೆ ಉದ್ದೇಶಗಳೆರಡಕ್ಕೂ ಪೋಷಕವಾಗಿ ಸೇರಿಕೊಳ್ಳುತ್ತಿತ್ತು. ರಂಜನೆ ಮತ್ತು ನೀತಿಬೋಧೆ ಈ ಎರಡಕ್ಕಾಗಿಯೇ ಈ ಸಾಹಿತ್ಯಪ್ರಕಾರಕ್ಕೆ ಸೇರಿದ ಕೃತಿಗಳನ್ನು ರಚಿಸಲಾಗುತ್ತಿತ್ತೆ

ನ್ನುವುದನ್ನು ಇಂದಿನ ವಾಸ್ತವ ಕಾದಂಬರಿಯ ಉದಯಕಾಲದವರೆಗೂ ಮತ್ತು ಆ ಕಾಲದಲ್ಲಿಯೂ ನಾವು ಕಾಣಬಹುದು. ಕನ್ನಡದ ಮೊದಲ ಕಾದಂಬರಿಗಳ ಲ್ಲೊಂದಾದ ಗುಬ್ಬಿ ಮುರಿಗಾರಾಧ್ಯರ "ಶೃಂಗಾರ ಚಾತುರ್ಯೋಲ್ಲಾಸಿನಿ"ಯ (೧೮೯೬) ಮುನ್ನುಡಿಯಲ್ಲಿ ಈ ಮಾತುಗಳು ಬರುತ್ತವೆ: "ಕಾವ್ಯ ಮರ್ಯಾದೆಯನ್ನು ಬಿಡದೆ, ಅಡಿಗಡಿಗೂ ಪಾಠಕಮಹಾಶಯರ ಮನೋಲ್ಲಾಸವನ್ನೇ ಹೆಚ್ಚಿಸಬೇಕೆಂಬ ಆಶಯದಿಂದ ಬರೆಯಲ್ಪಟ್ಟು 'ಶೃಂಗಾರಚಾತುರ್ಯೋಲ್ಲಾಸಿನಿ' ಎಂಬ ಅನ್ವರ್ಥನಾಮವನ್ನು ತಳೆದಿರುವ ಈ ಗ್ರಂಥವು ಶೃಂಗಾರ, ಕರುಣ, ಹಾಸ್ಯ, ವೀರ ಮುಂತಾದ ನವರಸಗಳಿಂದ ಕೂಡಿ ಪಾಠಕರಿಗೆ ಪ್ರಪಂಚವ್ಯವಹಾರ ದಲ್ಲಿ ಅನುಭವವನ್ನೂ, ನೀತಿಮಾರ್ಗದಲ್ಲಿ ಆಚರಣೆಯನ್ನೂ, ಉಪಾಯಗಳಲ್ಲಿ ವಿವೇಕವನ್ನೂ, ವಿಚಾರದಲ್ಲಿ ಜ್ಞಾನವನ್ನೂ ಬೋಧಿಸುತ್ತದೆ." ನೇರವಾಗಿ ಸಾಮಾಜಿಕ ವಸ್ತುವನ್ನೇ ಆಯ್ದುಕೊಂಡಿದ್ದ "ಮಾಡಿದ್ದುಣ್ಣೋ ಮಹಾರಾಯ" ದಲ್ಲಿಯ ನೀತಿಬೋಧೆಯ ಅಂಶ ಅದರ ಹೆಸರಿನಲ್ಲಿಯೇ ಕಾಣಿಸಿಕೊಳ್ಳುತ್ತದೆ. ವಾಸ್ತವಜೀವನಕ್ಕೆ ಸಂಬಂಧಿಸಿದ ಕಾದಂಬರಿಯಾದರೂ ಅದರಲ್ಲಿ ಮಂತ್ರ ಮಾಟಗಳ ಅದ್ಭುತಾಂಶಗಳೂ ಸೇರಿಕೊಂಡಿವೆ ಎನ್ನುವುದಾದರೂ ಗಮನಾರ್ಹವಾದ ಅಂಶವಾಗಿದೆ.

ಹೀಗೆ ಹತ್ತೊಂಬತ್ತನೆಯ ಶತಮಾನದ ಆದಿಭಾಗದ ಕಲಾವತೀ ಅಥವಾ ಸೌಗಂಧಿಕಾಪರಿಣಯದಿಂದ ಮೊದಲಾಗಿ ಶತಮಾನದ ಕೊನೆಯಲ್ಲಿಯ ಗಳಗನಾಥರ ಮೊದಲ ಸ್ವತಂತ್ರಕೃತಿಯಾದ "ಪ್ರಬುದ್ಧ ಪದ್ಮನಯನೆ"ಯವರೆಗೆ ಪೂರ್ತಿಯಾಗಿ, ಮುಂದೆ ಹದಿನೇಳು ವರ್ಷಗಳ ನಂತರ (೧೯೧೫) ಪ್ರಕಟವಾದ ಪುಟ್ಟಣ್ಣನವರ "ಮಾಡಿದ್ದುಣ್ಣೋ ಮಹಾರಾಯ" ದವರೆಗೆ ಕಥಾನಕಗಳಲ್ಲಿಯ ಅದ್ಭುತರಮಣೀಯತೆಯ ಅಂಶಗಳ ಪರಂಪರೆ ಕೆಲಮಟ್ಟಿಗೆ ಉಳಿದುಬಂದದ್ದು ಕಂಡುಬರುತ್ತದೆ. ವಾಚಕರ ರಂಜನೆಗೆ ಅಂಥ ಅಂಶಗಳು ಅಗತ್ಯ ಎಂಬ ನಂಬಿಕೆ ರೂಢಮೂಲವಾಗಿತ್ತೆಂದು ಕಾಣುತ್ತದೆ. ಈ ಅಂಶಗಳು ರಂಜನೆಯನ್ನು ಸಾಧಿಸಬಲ್ಲವಾಗಿದ್ದರೂ ಅವು ವಾಸ್ತವಜೀವನಕ್ಕೆ ದೂರವಾಗಿ, ವಿಮುಖವಾಗಿರುತ್ತಿದ್ದವು ಎನ್ನುವುದು ಸ್ಪಷ್ಟವೇ ಇದೆ. ಆದರೆ ಶತಮಾನದ ಕೊನೆಯಲ್ಲಿ, ಈ ಪ್ರವೃತ್ತಿಗೆ ಸಮಕಾಲೀನವಾಗಿಯಾದರೂ ವಿರೋಧವಾಗಿ, ಸುತ್ತಲಿನ ಜೀವನಕ್ಕೆ ಅಭಿಮುಖವಾಗಿ ಕಥಾನಕಗಳನ್ನು ಬರೆಯಬೇಕು ಎಂಬ ಪ್ರವೃತ್ತಿ ಕಾಣಿಸಿಕೊಂಡದ್ದು ನಮ್ಮ ಕಾದಂಬರೀಸಾಹಿತ್ಯದ ಚರಿತ್ರೆಯಲ್ಲಿ ಒಂದು ಅತ್ಯಂತ ಮಹತ್ವದ ತಿರುವು. ಈ

ಪ್ರವೃತ್ತಿ ನಿಧಾನವಾಗಿ ಕಾಣಿಸಿಕೊಂಡು ಹೊಸ ದೃಷ್ಟಿಯ ಕಲ್ಪಿತ ಸಾಹಿತ್ಯ ನಿರ್ಮಿತಿಯನ್ನು ಪೋಷಿಸಿತು. ಪೌರಾಣಿಕ ಅಥವಾ ಅದ್ಭುತರಮ್ಯ ಸನ್ನಿವೇಶ ಗಳಿಂದ ವಾಸ್ತವಜೀವನದ ಕಡೆಗೆ ಬರಹಗಾರರ ಗಮನ ಹೇಗೆ ತಿರುಗಿತು ? ದೃಷ್ಟಿ ಯಲ್ಲಿಯ ಇಂಥ ಪರಿವರ್ತನೆ ಹೇಗೆ ಸಿದ್ಧಿಸಿತು ? ಯಾವ ಕಾರಣಗಳಿಂದಾಗಿ ? ಎಂಥ ಪ್ರಭಾವಗಳ ಮೂಲಕವಾಗಿ ? ಈ ಪ್ರೇರಕಶಕ್ತಿಗಳೇ ಕನ್ನಡ ಕಾದಂಬರಿ ಯನ್ನು ಆಧುನಿಕವಾಗಿಸಿದುವಾದ್ದರಿಂದ ಈ ಸಾಹಿತ್ಯಪ್ರಕಾರದ ಬೆಳವಣಿಗೆಯ ದೃಷ್ಟಿಯಿಂದ ಅವು ಮಹತ್ವದ ಚಾರಿತ್ರಿಕ ಅಂಶಗಳಾಗುತ್ತದೆ.

೪

ಯಾವ ಬದಲಾವಣೆಯಾದರೂ ಇದ್ದಕ್ಕಿದ್ದಹಾಗೆ ಆಕಾಶದಿಂದ ಅವತರಿಸು ವುದಿಲ್ಲ. ಪರಿಸರದಲ್ಲಿಯ ಪ್ರಭಾವಕಾರಕ ಶಕ್ತಿಗಳನ್ನು ಅರಗಿಸಿಕೊಂಡಾಗಲಿ, ಪ್ರತಿಭಟಿಸಿಯಾಗಲಿ. ಅವನ್ನು ಪ್ರಶ್ನಾರ್ಥಕವಾಗಿ ನೋಡಿಯಾಗಲಿ ಮನೋವೃತ್ತಿ ಗಳು ನಿಧಾನವಾಗಿ ರೂಪುಗೊಳ್ಳುತ್ತವೆ. ಹೊಸ ಮನೋವೃತ್ತಿಗಳು ರೂಪು ಗೊಳ್ಳುವುದರಲ್ಲಿ ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಅನೇಕ ಬೆಳವಣಿಗೆಗಳು ಸಹಕರಿಸಿದುವು. ನಮ್ಮ ನಾಡಿನ ಆಧುನಿಕ ಚರಿತ್ರೆಯಲ್ಲಿ ಈ ಕಾಲಾವಧಿ ಒಂದು ಮಹತ್ವದ ಸಂಧಿಕಾಲ. ಹೊಸ ಶಕ್ತಿಗಳು ಜೀವನವನ್ನು ಪ್ರಭಾವಿ ಸಿದ ಕಾಲ ಅದು. ಸಾಮಾಜಿಕ ಹಾಗೂ ಧಾರ್ಮಿಕ ವಿಚಾರಗಳ ಕ್ಷೇತ್ರದಲ್ಲಿ, ವಿದ್ಯಾಕ್ಷೇತ್ರದಲ್ಲಿಯಂತೆ ರಾಜಕೀಯ ವಿಚಾರಗಳ ಕ್ಷೇತ್ರದಲ್ಲಿ ಹೊಸ ಗಾಳಿ ಬೀಸ ತೊಡಗಿ ಕಾಲಕ್ರಮದಲ್ಲಿ ಬಲಗೊಂಡು ವಿದ್ಯಾವಂತರ ವಿಚಾರಕ್ರಮವನ್ನು ಬದ ಲಾಯಿಸಿತು. ಎಲ್ಲ ಕ್ಷೇತ್ರಗಳಲ್ಲಿಯೂ ಪರಿವರ್ತನೆ ಕಾಣಿಸಿಕೊಂಡ ಈ ಕಾಲಾ ವಧಿಯಲ್ಲಿ ನಡೆವ ವಿಚಾರಮಥನವನ್ನು ವಿವರವಾಗಿ ವಿಶ್ಲೇಷಿಸುವುದಾಗಲಿ, ವಿವರಿಸುವುದಾಗಲಿ ಇಲ್ಲಿ ಪ್ರಸ್ತುತವಾಗಲಾರದು. ಆದರೆ ಅವನ್ನು ಸಾಧ್ಯ ವಾಗಿಸಿದ ಪ್ರೇರಕ ಪ್ರಭಾವಗಳನ್ನು ಸ್ಥೂಲವಾಗಿಯಾದರೂ ನಾವು ಗುರುತಿಸ ಬೇಕು. (೧) ಮೊದಲನೆಯದಾಗಿ, ಹೊಸ ವಿದ್ಯಾಭ್ಯಾಸದ ಫಲವಾಗಿ ಉಂಟಾದ ಪಾಶ್ಚಾತ್ಯ ಸಾಹಿತ್ಯ ಹಾಗೂ ಸಾಂಸ್ಕೃತಿಕ ವಿಚಾರಗಳ ಸಂಪರ್ಕ. (೨) ಎರಡನೆಯ ದಾಗಿ, ಇಂಥ ವಿದ್ಯಾಭ್ಯಾಸದ ಪದ್ಧತಿಯನ್ನು ಪುರಸ್ಕರಿಸಿ ಸಾಮಾಜಿಕ ಕ್ಷೇತ್ರದಲ್ಲಿ ರಾಮಮೋಹನ್‌ರಾಯರಂಥವರು ಮೊದಲು ಮಾಡಿದ ಸುಧಾರಕ ವಿಚಾರಗಳ ಪ್ರಭಾವ. (೩) ಮೂರನೆಯದಾಗಿ, ಕ್ರೈಸ್ತ ಧರ್ಮೋಪದೇಶಕರು ತಮ್ಮ

ಧರ್ಮದ ಪ್ರಚಾರದ ಅನುಕೂಲಕ್ಕಾಗಿ ಹಿಂದೂ ಧರ್ಮದ ಆಚಾರವಿಚಾರಗಳನ್ನು ಪ್ರತ್ಯಕ್ಷವಾಗಿಯಾಗಲಿ, ಪರೋಕ್ಷವಾಗಿಯಾಗಲಿ, ತೆಗಳುತ್ತಿದ್ದುದರ ಪರಿಣಾಮವಾಗಿ ನಡೆವ ಹಿಂದೂಧರ್ಮದ ಪುನರುತ್ಥಾನದ ಪ್ರಯತ್ನಗಳು. (೪) ನಾಲ್ಕನೆಯದಾಗಿ, ಬ್ರಿಟಿಷರ ಆಧಿಪತ್ಯ ದೇಶದಲ್ಲಿ ನೆಲೆಗೊಳ್ಳುತ್ತಿದ್ದಂತೆಯೆ ಮೊದಲು ಬಂಡಾಯದಿಂದ, ಪಾಶ್ಚಾತ್ಯ ರಾಜಕೀಯ ವಿಚಾರಗಳ ಪರಿಚಯದಿಂದ, ಮತ್ತು ಒಂಬತ್ತನೆಯ ದಶಕದಲ್ಲಿ ಸ್ಥಾಪನೆಯಾದ ಕಾಂಗ್ರೆಸ್ ಸಂಸ್ಥೆಯಿಂದ, ಜಾಗೃತವಾಗತೊಡಗಿದ ದೇಶಾಭಿಮಾನ; ಮತ್ತು (೫) ಕೊನೆಯದಾಗಿ, ಬರವಣಿಗೆಗೆ ನೇರವಾಗಿ ಸಂಬಂಧಿಸಿದಂತೆ, ಪತ್ರಿಕೆಗಳು ಹಾಗೂ ನಿಯತಕಾಲಿಕೆಗಳ ಉದಯದಿಂದ ಗದ್ಯಕ್ಕೆ ಸ್ವಾಭಾವಿಕವಾಗಿಯೇ ದೊರಕಿದ ಪ್ರೋತ್ಸಾಹ ಹಾಗೂ ಅದು ಗಳಿಸುತ್ತ ಹೋದ ಜನಪ್ರಿಯತೆ, ಈ ಐದೂ ಅಂಶಗಳನ್ನು ಒಟ್ಟಾಗಿ ನೋಡಿದಾಗ ಅವೆಲ್ಲವುಗಳ ಹಿಂದೆ ಒಂದಿಲ್ಲೊಂದು ರೀತಿಯಲ್ಲಿ ಪಾಶ್ಚಾತ್ಯ ವಿಚಾರಗಳ ಸಂಪರ್ಕ ಸಂಘರ್ಷಗಳೇ ಮುಖ್ಯವಾದ ಪ್ರೇರಣೆಯಾಗಿದ್ದದ್ದು ಕಂಡುಬರುತ್ತದೆ.

ರಾಮಮೋಹನರಾಯ್ ಅವರಿಂದ ಪ್ರಚೋದಿತವಾದ ಸಾಮಾಜಿಕ ಸುಧಾರಣೆಯ ವಿಚಾರಗಳನ್ನು, ಕ್ರೈಸ್ತ ಧರ್ಮದ ಪ್ರಚಾರಕ್ಕೆ ಪ್ರತಿಕ್ರಿಯೆಯಾಗಿಯೇ ಆಗಲಿ ಪಾಶ್ಚಾತ್ಯವಿದ್ವಾಂಸರು ತೊಡಗಿದ ನಮ್ಮ ಸಾಹಿತ್ಯಸಂಸ್ಕೃತಿಗಳ ಸಂಶೋಧನ ಅನ್ವೇಷಣಗಳ ಪರಿಣಾಮವಾಗಿಯೇ ಆಗಲಿ ಮೂಡಿದ ಧಾರ್ಮಿಕ ಜಾಗ್ರತಿಯ ವಿಷಯವನ್ನು, ಹಾಗೆಯೇ ನಿಧಾನವಾಗಿಯಾದರೂ ಸ್ಪಷ್ಟವಾಗಿ ರೂಪುಗೊಳ್ಳುತ್ತಿದ್ದ ದೇಶಾಭಿಮಾನದ ಮನೋವೃತ್ತಿಯನ್ನು, ನಾವು ಇಲ್ಲಿ ಬದಿಗಿರಿಸಿದರೂ ಸಾಹಿತ್ಯಪ್ರಪಂಚಕ್ಕೆ ನೇರವಾಗಿ ಸಂಬಂಧಿಸಿದಂತೆ ಹೊಸ ವಿದ್ಯಾಭ್ಯಾಸದ ಕ್ರಮ ಪಾಶ್ಚಾತ್ಯಸಾಹಿತ್ಯದ ಪರಿಚಯಕ್ಕೆ ಅವಕಾಶಗಳನ್ನು ಒದಗಿಸಿತು. ಅದರ ಗುಣ ಗೌರವಕ್ಕೆ ಮನಸೋತವರು ಅಲ್ಲಿಯ ಕೃತಿಗಳ ಅನುವಾದಕ್ಕೆ ತೊಡಗಿದರು. ಈ ಕೆಲಸದಲ್ಲಿ ಮೊದಲಿಗರಾದವರು ಕ್ರಿಶ್ಚಿಯನ್ ಪಾದ್ರಿಗಳೇ. ಈ ದಿಸೆಯಲ್ಲಿ ಅವರು ಮಾಡಿದ ಕೆಲಸ ಬಹಳ ದೊಡ್ಡದು. ಅವರ ಉದ್ದೇಶಗಳೇನೇ ಇದ್ದರೂ ನಮ್ಮದಲ್ಲದ ಒಂದು ಸಾಹಿತ್ಯದ ಪರಿಚಯವನ್ನು ನಿಕಟವಾಗಿಸುವುದರಲ್ಲಿ, ಅಂಥ ಪರಿಚಯದ ಮೂಲಕ ಹೊಸ ದೃಷ್ಟಿ ರೂಪುಗೊಳ್ಳುವುದರಲ್ಲಿ ಅವರು ಮಾಡಿದ ಕೆಲಸ ಅವಿಸ್ಮರಣೀಯವಾಗಿದೆ. ಹಾಗೆಯೇ ಗದ್ಯದ ಬರವಣಿಗೆಯನ್ನು ಒಂದು ರೂಪಕ್ಕೆ ತಂದು ಅದನ್ನು ಪ್ರಚುರಪಡಿಸುವುದರಲ್ಲಿಯಾದರೂ ಅವರಿಗೆಯೇ ಅಗ್ರಸ್ಥಾನ ಸಲ್ಲುತ್ತದೆ. ಶತಮಾನದ ಮಧ್ಯಭಾಗದಲ್ಲಿ ಪ್ರಾರಂಭವಾದ ಈ

ಅನುವಾದ ಕಾರ್ಯ ಈ ಶತಮಾನದ ಮೊದಲ ದಶಕದ ಕೊನೆಯುವರೆಗೂ ಅವ್ಯಾಹತವಾಗಿ ನಡೆಯಿತು.

ಹೀಗೆ ಅನುವಾದಿತ ಮತ್ತು ಕೆಲವು ಸಂದರ್ಭಗಳಲ್ಲಿ ರೂಪಾಂತರಿತವಾದ ಕೃತಿಗಳ ಸಂಖ್ಯೆ ದೊಡ್ಡದು, ಅವನ್ನು ಪಟ್ಟಿಮಾಡುವ ಕೆಲಸಕ್ಕೆ ನಾನು ಇಲ್ಲಿ ತೊಡಗುವುದಿಲ್ಲ. ಅಂಥವನ್ನು ಕುರಿತು ಡಾ. ಹಾವನೂರರರು ತುಂಬ ಪರಿಶ್ರಮ ದಿಂದ ತಮ್ಮ "ಹೊಸ ಕನ್ನಡದ ಅರುಣೋದಯ" ಎಂಬ ಬೃಹತ್‌ಪ್ರಬಂಧದಲ್ಲಿ ಸವಿವರವಾಗಿ ಬರೆದಿದ್ದಾರೆ. ಪಾದ್ರಿಗಳು ಅನುವಾದಿಸಿಕೊಟ್ಟ ಹಳೆ ಹೊಸ ಒಡಂಬಡಿಕೆಯ ಕಥೆಗಳ ಜೊತೆಯಲ್ಲಿ ಬೇರೆ ಸಾಹಿತ್ಯಕೃತಿಗಳು, ಅಲ್ಲಾಉದ್ದೀನನ ಅದ್ಭುತರಮ್ಯ ಕಥೆಗಳು, ಶೇಕ್ಸ್‌ಪೀಯರ ನಾಟಕಗಳ ಗದ್ಯಾನುವಾದಗಳು ಶತ ಮಾನದ ಕೊನೆಯುವರೆಗೂ ಬೇರೆಯುವರಿಂದ ಕನ್ನಡಕ್ಕೆ ಬಂದು ಸಾಹಿತ್ಯಾಸಕ್ತರ ನೋಟ ಬೇರೆ ಕಡೆಗೆ ಹರಿದು ಬೇರೆಯಾದ ವಸ್ತುವಿಷಯುಗಳನ್ನು ಮತ್ತು ನಿರೂ ಪಣೆಯ ಹೊಸ ದೃಷ್ಟಿಯನ್ನು ರೂಢಿಸಿಕೊಳ್ಳಲು ಅನುಕೂಲವಾಯಿತು. ಈ ಅನುವಾದ ರೂಪಾಂತರಗಳು ಮುಂಬರುವ ಸ್ವತಂತ್ರ ನಿರ್ಮಿತಿಗೆ ಮುನ್ಸೂಚನೆ ಗಳಾಗಿ, ಪ್ರೇರಕಶಕ್ತಿಗಳಾಗಿ ನಿಂತವು ಎನ್ನುವುದು ಗಮನಾರ್ಹ ವಿಷಯುವಾಗಿದೆ. ಸಾಹಿತಿ ಎಂಥ ಪ್ರತಿಭಾನ್ವಿತನಾದರೂ ಬೆಳೆದುನಿಂತ ಒಂದು ಸಾಹಿತ್ಯಪರಂಪರೆಯ ಪರಿಚಯುವಾದಾಗ ಅದನ್ನು ಅನುಕರಣೆಯ ಮೂಲಕ ಮುಂದುವರಿಸಿಕೊಂಡಾ ದರೂ ಹೋಗುತ್ತಾನೆ ; ಅದನ್ನು ಪ್ರತಿಭಟಿಸಿಯಾದರೂ ನಿಲ್ಲುತ್ತಾನೆ. ಇಲ್ಲವೆ ತನ್ನ ಆಶೋತ್ತರಗಳಿಗೆ ಸರಿಹೋಗುವಂತೆ ಅವನ್ನು ಮಾರ್ಪಡಿಸಿಕೊಳ್ಳುತ್ತಾನೆ. ಅದರ ಸತ್ವವನ್ನು, ದೃಷ್ಟಿಯನ್ನು, ಆಳವಡಿಸಿಕೊಂಡು ತನ್ನ ಉದ್ದೇಶಗಳಿಗಾಗಿ ಅವನ್ನು ದುಡಿಸುತ್ತಾನೆ. ನಮ್ಮ ಮೊದಲಿನ ಕಾದಂಬರಿಕಾರರು, ಈ ಶತಮಾನದ ಆದಿಭಾಗದಲ್ಲಿಯುವರು, ಈ ಮೂರನೆಯ ದಾರಿಯನ್ನು ಹಿಡಿದುಕೊಂಡು ಮುಂದು ವರಿದರು. ಕಂಡುಕೊಂಡ ಹೊಸ ರೀತಿ ವಿಧಾನಗಳನ್ನು ತಮ್ಮವಾಗಿಸಿಕೊಂಡು ಹೊಸ ವಸ್ತುವಿಷಯುಗಳ ನಿರೂಪಣೆಯ ಮೂಲಕ ಸ್ವತಂತ್ರರಚನೆಗೆ ತೊಡಗಿದರು.

೫

ಅನುವಾದ ಅಥವಾ ರೂಪಾಂತರಗಳ ಮೂಲಕ ಕನ್ನಡಕ್ಕೆ ಬಂದ ಎಲ್ಲ ಕೃತಿ ಗಳನ್ನು ನಾವಿಲ್ಲಿ ನಿರ್ದೇಶಿಸಬೇಕಿಲ್ಲವಾದರೂ ಹೊಸರೀತಿ ವಿಧಾನಗಳನ್ನು ಅನು ಕರಣೀಯುವೆಂದು ಗ್ರಹಿಸುವಂತೆ ಮಾಡಿದ ಕೆಲವೊಂದು ಕೃತಿಗಳನ್ನು ನಾವು ನೆನೆಯು

ಬೇಕು. ಕಾದಂಬರೀಪ್ರಪಂಚಕ್ಕೆ ಸೇರಿದಂತೆ ನಮಗೆ ಮೊದಲಿಗೆ ಸಿಕ್ಕುವುದು ಬನಿಯನ್ನಿನ "ಪಿಲ್‌ಗ್ರಿಮ್ಸ್ ಪ್ರೊಗ್ರೆಸ್", ಜಿ. ವೀಗಲ್ ಅವರಿಂದ "ಯಾತ್ರಸ್ಥನ ಸಂಚಾರವು" ಎಂಬ ಹೆಸರಿನಲ್ಲಿ ಅನುವಾದಿತವಾಗಿ ೧೮೪೭ರಲ್ಲಿ ಹೊರಬಂದಿತು. ಅದಕ್ಕೂ ಮೊದಲು ಮೂರು ವರ್ಷಗಳ ಹಿಂದೆಯೆ ಮೇರಿ ಮರ್ಥಾ ಶೆರ್ವುಡ್ ಅವರ "ದಿ ಆಯಾ ಎಂಡ್ ದಿ ಲೇಡಿ—ಎ ನಾವೆಲ್ ಆಫ್ ಇಂಡಿಯನ್ ಲ್ಯಾಫ್" ಎಂಬ ಕಾದಂಬರಿಯನ್ನು ಸಿ. ಕ್ಯಾಂಪಬೆಲ್ ಅವರು "ದೊರೆಸಾನಿಯನ್ನೂ ದಾದಿಯನ್ನೂ ಕುರಿತ ಕಥೆ" ಎಂದು ಕನ್ನಡಿಸಿ ೧೮೪೪ರಲ್ಲಿಯೇ ಪ್ರಕಟಿಸಿದ್ದರು. ೧೮೫೪ರಲ್ಲಿ ಡಿಫೋನ "ರಾಬಿನ್‌ಸನ್ ಕ್ರೂಸೋ" ಕೃಷ್ಣಸ್ವಾಮಿ ಅಯ್ಯಂಗಾರರಿಂದ ಅನುವಾದವಾಗಿ ಬಂದಿತು, "ಹಿಸ್ಟರಿ ಆಫ್ ಲಿಟಲ್ ಹೆನ್ರಿ ಎಂಡ್ ಹಿಸ್ ಬೆರರ್" ಎಂಬ ಕಾದಂಬರಿ "ಚಿಕ್ಕ ಹೆನ್ರಿ ಮತ್ತು ಅವನ ಬೋಯಿಯ ಕಥೆ" ಎಂಬ ಹೆಸರಿನಲ್ಲಿ ಮೊಗ್ಲಿಂಗ್ ಅವರಿಂದ ಅನುವಾದಿತವಾಗಿ ೧೮೬೭ರಲ್ಲಿ ಪ್ರಕಟವಾಯಿತು. ಥಾಮಸ್ ಡೇ ಅವರ "ಸ್ಯಾಂಡ್‌ಫರ್ಡ್ ಎಂಡ್ ಮರ್ಟನ್" "ಸುಮತಿ ಮದನಕುಮಾರರ ಚರಿತ್ರೆ" ಎಂದು ಎಂ. ಎಸ್. ಪುಟ್ಟಣ್ಣ ಅವರಿಂದ ರೂಪಾಂತರಗೊಂಡು ೧೮೯೩ರಲ್ಲಿ ಹೊರಬಂದಿತು. ಹಾಗೆಯೇ ಎಂ. ಎಲ್. ಶ್ರೀಕಂಠೇಗೌಡರು ಎಚ್. ಟೇಲರ್ ಅವರ "ಎ ಸಿಸೀಲಿಯನ್ ಸಮರ್"ಅನ್ನು "ಕನ್ಯಾ ವಿತಂತು" ಎಂದು ೧೮೯೫ರಲ್ಲಿಯೂ ಮೇರಿಯಾ ಎಜ್ವರ್ಥಳ "ದಿ ಲಿಟಲ್ ಮರ್ಚಂಟ್ಸ್"ನ್ನು "ಚಿಕ್ಕ ಬಣಜಿಗರು" ಎಂದು ಅನುವಾದಿಸಿ ಪ್ರಕಟಿಸಿದರು. ಅಣ್ಣಾಜೀರಾವ್ ಅವರು ಬುಲ್ವರ್ ಲಿಟನ್ನನ "ಹ್ಯಾರೊಲ್ಡ್"ನ್ನು "ಉಲ್ಲಾಸಿನಿ" ಎಂದು ೧೯೦೨ರಲ್ಲಿ ಹಾಗೂ ಫೀಲ್ಡಿಂಗನ ಬೃಹತ್ಕಾದಂಬರಿಯಾದ "ಟಾಮ್ ಜೋನ್ಸ್"ನ್ನು "ಶರಣಾಗತ" ಎಂದು ಅನುವಾದಿಸಿ ೧೯೦೫ರಲ್ಲಿ ಪ್ರಕಟಿಸಿದರು.

ಈ ಮತ್ತು ಇಂಥ ಅನುವಾದಗಳ ಹಾಗೂ ಇತರ ಇಂಗ್ಲೀಷ್ ಕೃತಿಗಳ ರೂಪಾಂತರಿತ ಕಥಾನಕಗಳ ಪ್ರಭಾವ ಅಂದು ಸ್ವತಂತ್ರವಾಗಿ ಬರೆಯಬೇಕೆನ್ನುವವರ ಮೇಲೆ ಎಷ್ಟರಮಟ್ಟಿಗಿನದಿದ್ದಿತು ಎನ್ನುವುದನ್ನು ನಿಷ್ಕೃಷ್ಟವಾಗಿ ಅಳತೆ ಮಾಡಿ ಹೇಳಲಾಗುವುದಿಲ್ಲ. ಆದರೆ ಅಂಥವುಗಳ ಸೊಗಸಿಗೆ, ನಾವೀನ್ಯಕ್ಕೆ ಅವರು ಮಾರು ಹೋಗಿದ್ದರೆನ್ನುವುದು ಸ್ಪಷ್ಟವಾಗಿದೆ. ಕಥೆ ಅದ್ಭುತರಮ್ಯವಾಗಿದ್ದರೂ ಸ್ವತಂತ್ರವಾಗಿದ್ದ ಮುರಿಗಾರಾಧ್ಯರ "ಶೃಂಗಾರಚಾತುರ್ಯೋಲ್ಲಾಸಿನಿ" ೧೮೯೭ರಲ್ಲಿ ಪ್ರಕಟವಾಯಿತು. ಅದರ ಮುನ್ನುಡಿಯಲ್ಲಿ ಅವರು ಹೇಳುವ ಮಾತುಗಳು

ಅಂದಿನ ಸಾಹಿತ್ಯಪ್ರಪಂಚದಲ್ಲಿ ಗಾಳಿ ಎತ್ತ ಬೀಸುತ್ತಿತ್ತು ಎನ್ನುವುದನ್ನು ಸ್ಪಷ್ಟವಾಗಿ ಸೂಚಿಸುತ್ತವೆ. ಆ ಮಾತುಗಳು ಹೀಗೆ: "ಇಂಗ್ಲೀಷಿನಲ್ಲಿರುವ ಯಾವುದಾದರೂ ಒಂದು 'ನಾವೆಲ್'ಅನ್ನು ಕನ್ನಡದಲ್ಲಿ ಭಾಷಾಂತರ ಮಾಡಿ ಬರೆಯಬೇಕೆಂಬ ಆಲೋಚನೆಯು ತನ್ನ ಮನಸ್ಸಿನಲ್ಲಿ ಮೊದಲು ಜನಿಸಿತು. ಆದರೆ, ಅಂತಹ ಒಂದೆರಡು ಇಂಗ್ಲೀಷ್ ಕಾವ್ಯಗಳನ್ನು ಚೆನ್ನಾಗಿ ವಿಚಾರ ಮಾಡುತ್ತ ನೋಡುವಲ್ಲಿ ಕೆಲವು ವಿಷಯಗಳು ನಮ್ಮ ಹಿಂದೂ ಮರ್ಯಾದೆಗಳಿಗನುಸಾರವಾಗಿ ಕಂಡುಬರಲಿಲ್ಲವಾದುದರಿಂದ ಆ ಮಾರ್ಗವನ್ನು ಬಿಡಲೇಬೇಕಾಯಿತು. ನಂತರ ನಮ್ಮಲ್ಲಿಯೇ ಪುರಾಣ ಪ್ರಸಿದ್ಧವಾಗಿ ಪದ್ಯರೂಪವಾಗಿರುವ ಯಾವುದಾದರೊಂದು ಇತಿಹಾಸವನ್ನು ಗದ್ಯರೂಪವಾಗಿ ಮಾಡಬೇಕೆಂದು ಆಲೋಚಿಸುವಲ್ಲಿ 'ಇಂಗ್ಲೀಷ್ ನಾವೆಲ್'ಗಳ ಮರ್ಯಾದೆಯನ್ನು ಬಿಡಬೇಕಾಗಿ ಬಂದುದರಿಂದ ಅದೂ ಮನಸ್ಸಿಗೆ ಅಭಿರುಚಿಸಲಿಲ್ಲ. ಆದಕಾರಣ, ವಿಷಯದಲ್ಲಿ ಹಿಂದೂ ಮರ್ಯಾದೆಯನ್ನೇ ಇಟ್ಟುಕೊಂಡು, ಇಂಗ್ಲೀಷ್ 'ನಾವೆಲ್' ಪದ್ಧತಿಯನ್ನು ಅನುಸರಿಸಿ ಬರೆಯಲು ಅನುಕೂಲವಾಗುವಂತೆ ಹೊಸದಾಗಿ ಒಂದು ಕಥೆಯನ್ನು ಕಲ್ಪನೆ ಮಾಡಿಕೊಂಡೆನು." ಇಂಗ್ಲೀಷ್ 'ನಾವಲ್'ನ ಆಕರ್ಷಣೆ ಎಷ್ಟು ಪ್ರಬಲವಾಗಿತ್ತೆನ್ನುವುದರ ಜೊತೆಗೆ ಕಲ್ಪಿಸಿಕೊಳ್ಳಬೇಕಾದ ಕಥೆ ನಾವೆಲ್ಲಿನ "ಪದ್ಧತಿಯನ್ನು" ಅನುಸರಿಸಿದರೂ "ಹಿಂದೂ ಮರ್ಯಾದೆಯನ್ನು ಇಟ್ಟುಕೊಂಡೇ" ಬರೆಯಬೇಕೆಂಬ ಅಭಿಲಾಷೆಯೂ ಪ್ರಬಲವಾಗಿತ್ತೆನ್ನುವುದು ಈ ಮಾತುಗಳಿಂದ ಸ್ಪಷ್ಟವಾಗುತ್ತದೆ. ಕನ್ನಡದ ಮೊದಲ ಸ್ವತಂತ್ರ ಕಾದಂಬರಿಕಾರರಲ್ಲಿ ಬೆಳೆಯುತ್ತಿದ್ದ ಹೊಸ ದೃಷ್ಟಿಯಲ್ಲಿಯ ಒಂದೆರಡು ಮಹತ್ವದ ಅಂಶಗಳನ್ನು ನಾವು ಇಲ್ಲಿ ಗುರುತಿಸಬಹುದಾಗಿದೆ. ಅಷ್ಟುಮಾತ್ರವಲ್ಲದೆ, ಬಂಗಾಲದ ಪ್ರತಿಭಾನ್ವಿತ ಕಾದಂಬರಿಕಾರರೂ, ಒಂದಿಲ್ಲೊಂದು ರೀತಿಯಲ್ಲಿ ಭಾರತದಲ್ಲಿಯ ಎಲ್ಲ ದೇಶೀಯ ಕಾದಂಬರಿಯ ಬರವಣಿಗೆಯ ಮೇಲೆ ತಮ್ಮ ಪ್ರಭಾವವನ್ನು ಬೀರಿದವರೂ ಆದ ಬಂಕಿಮಚಂದ್ರರು ಕೂಡ ಇಂಗ್ಲೀಷ್ ಕಾದಂಬರಿಯ ಪ್ರಭಾವಕ್ಕೆ ಹೊರತಾಗಿರಲಿಲ್ಲ. ಲಾರ್ಡ್ ಲಿಟ್ಟನ್ ಬರೆದ "ಲಾಸ್ಟ್ ಡೇಜ್ ಆಫ್ ಪಾಂಪೆಯಿ" ಎಂಬ ಕಾದಂಬರಿಯಲ್ಲಿ ಬರುವ ನಿಡಿಯಾ ಎಂಬ ಹೂ ಮಾರುವ ಹುಡುಗಿಯ ಪಾತ್ರ ಅವರ "ರಜನಿ" ಕಾದಂಬರಿಗೆ ಪ್ರೇರಕವಾಯಿತೆಂದೂ ವಿಲ್ಕಿ ಕಾಲಿನ್ಸನ "ವುಮನ್ ಇನ್ ವ್ಹಾಯಿಟ್"'ನಲ್ಲಿಯ ಕಥನಕ್ರಮ (ಮುಖ್ಯಪಾತ್ರಗಳೇ ಕಥೆಯನ್ನು ಹೇಳುವ ಕ್ರಮ)ವನ್ನು ತಾವು ಅದರಲ್ಲಿ ಬಳಸಿರುವುದಾಗಿ ತಾವೇ (ತಮ್ಮ

ವಿಜ್ಞಾಪನದಲ್ಲಿ) ತಿಳಿಸಿದ್ದಾರೆ. "ರಾಜಮೋಹನನ ಹೆಂಡತಿ" ಕಾದಂಬರಿಯನ್ನು ಬರೆದಾದ ನಂತರ ಪುಷ್ಟವಾದ ಐತಿಹಾಸಿಕ ಕಾದಂಬರಿಯೊಂದನ್ನು ಬರೆಯುವ ಅಪೇಕ್ಷೆಯಿಂದ ವಾಲ್ಟರ್ ಸ್ಕಾಟ್‌ನ ಬ್ರೈಡ್ ಆಫ್ ಲ್ಯಾಮರ್‌ಮೂರ್, ಟ್ಯಾಲಿಸ್ಮನ್, ಐವಾನ್ಹೊ, ಕ್ವೆಂಟಿನ್ ಡರ್ವಾರ್ಡ್ ಮತ್ತು ಲಿಟ್ಟನ್ನನ ಲಾಸ್ಟ್ ಡೇಜ್ ಆಫ್ ಪೊಂಪೆಯಿ ಕಾದಂಬರಿಗಳನ್ನು ಓದಿ ಅವುಗಳಿಂದ ಸ್ಫೂರ್ತಿ ಪಡೆದದ್ದನ್ನು "ಕಪಾಲಕುಂಡಲಾ" "ರಜನೀ" ಮುಂತಾದ ಕಾದಂಬರಿಗಳಲ್ಲಿ ಸ್ಪಷ್ಟವಾಗಿ ಸೂಚಿಸಲಾಗಿದೆ. ಇಂಥ ಪ್ರಭಾವಗಳನ್ನು ಅರಗಿಸಿಕೊಂಡು ತಮ್ಮ ಸ್ವತಂತ್ರ ಪ್ರತಿಭೆಯ ಮೂಲಕ ಐತಿಹಾಸಿಕ ಕಾದಂಬರಿಯ ಜನಕರಾಗಿ ಇತರ ದೇಶೀಯ ಭಾಷೆಗಳಲ್ಲಿಯ ಬರವಣಿಗೆಗೆ ಬಂಕಿಮರು ಸ್ಫೂರ್ತಿಯಾದರು ಎನ್ನುವುದು ಹೊರಗಿನಿಂದ ಬಂದ ಸತ್‌ಪ್ರಭಾವ ಪ್ರತಿಭೆಗೆ ಹೇಗೆ ಪೋಷಕವಾಗಬಲ್ಲದು ಎನ್ನುವುದಕ್ಕೆ ಒಂದು ಒಳ್ಳೆಯ ನಿದರ್ಶನ. ಒಟ್ಟಿನಲ್ಲಿ ಇಂದು ನಾವು "ಕಾದಂಬರಿ" ಎಂದು ಕರೆಯುವ ಸಾಹಿತ್ಯಪ್ರಕಾರವನ್ನು ನಾವು ಪಡೆದುಕೊಂಡದ್ದು ಇಂಗ್ಲೀಷಿನ ಪ್ರಭಾವ ಮತ್ತು ಅನುಕರಣೆಯ ಮೂಲಕ. ಅದಕ್ಕೆ ಕೈ ಹಾಕಿ ಸ್ವತಂತ್ರ ರಚನೆಗೆ ತೊಡಗಿದವರು ಅದನ್ನು ತಮ್ಮ ತಮ್ಮ ಧೃಷ್ಟಿಗಳಿಗೆ ಅನುಗುಣವಾಗುವಂತೆ ಬಳಸಿಕೊಂಡರು. ಕನ್ನಡದ ಮೊದಲ ಸ್ವತಂತ್ರ ಕಾದಂಬರಿಕಾರರೆನಿಸಿಕೊಂಡ ಆರು ಜನ ಮಹನೀಯರಲ್ಲಿ ಗಳಗನಾಥ ಒಬ್ಬರನ್ನು ಹೊರತುಪಡಿಸಿದರೆ ಉಳಿದ ಐವರೂ ಇಂಗ್ಲೀಷ್ ವಿದ್ಯಾಭ್ಯಾಸವನ್ನು ಪಡೆದವರು. ಇಂಗ್ಲೀಷಿನಲ್ಲಿಯ ಕಾದಂಬರಿಯ ರೀತಿಯಲ್ಲಿ ಕನ್ನಡ ಕಾದಂಬರಿಗಳನ್ನು ಬರೆಯಬೇಕೆಂದವರು. ಮುರಿಗಾರಾಧ್ಯರು ಇಂಗ್ಲೀಷ್ ಕಾದಂಬರಿಗೆ ಮನಸೋತವರಾಗಿದ್ದರೆನ್ನುವುದು ಮೇಲ್ಕಾಣಿಸಿದ ಅವರ ಮಾತುಗಳಲ್ಲಿಯೇ ವ್ಯಕ್ತವಾಗುತ್ತದೆ. ಮೊದಲ ಸ್ವತಂತ್ರ ಸಾಮಾಜಿಕ ಕಾದಂಬರಿಯನ್ನು ಬರೆದ ಗುಳವಾಡಿ ವೆಂಕಟರಾಯರು ಪೋಲೀಸ್ ಇಲಾಖೆಯಲ್ಲಿ ಅಧಿಕಾರಿಗಳಾಗಿದ್ದರು. "ವಾಗ್ದೇವಿ"ಯನ್ನು ಬರೆದ ಬೋಳಾರ ಬಾಬುರಾಯರು ರೆವೆನ್ಯೂ ಇಲಾಖೆಯಲ್ಲಿ ತಹಸೀಲದಾರ್–ಮ್ಯಾಜಿಸ್ಟ್ರೇಟರಾಗಿದ್ದರು. ಕೆರೂರು ವಾಸುದೇವಾಚಾರ್ಯರು ಕಾಲೇಜು ವ್ಯಾಸಂಗಮಾಡಿ ಲಾಯರಾಗಿದ್ದರೂ ಪತ್ರಿಕಾ ವ್ಯವಸಾಯಕ್ಕೆ ಬಂದವರಾಗಿದ್ದರು. ಎಂ. ಎಸ್. ಪುಟ್ಟಣ್ಣ ಅವರು ಮೊದಲು ಉಪಾಧ್ಯಾಯರಾಗಿ ಮತ್ತೆ ಅಮಲ್‌ದಾರರಾಗಿ ನಿವೃತ್ತರಾದವರು. ಈ ಶತಮಾನದ ಆದಿಭಾಗದಲ್ಲಿ ಹೊರಬಂದ ಸ್ವತಂತ್ರ ಕೃತಿಗಳನ್ನು ಬರೆದವರೆಲ್ಲರೂ (ಗಳಗನಾಥರನ್ನುಳಿದು) ಇಂಗ್ಲೀಷ್ ವಿದ್ಯಾಭ್ಯಾಸದಿಂದ ಹಾಗೂ ಇಂಗ್ಲೀಷ್ ಸಾಹಿತ್ಯ

ದಿಂದ ಪ್ರಭಾವಿತರಾಗಿದ್ದರೆನ್ನುವುದಕ್ಕೆ ಹೆಚ್ಚಿನ ಪ್ರಮಾಣ ಬೇಕಿಲ್ಲ.

ಆದರೆ ಈ ಅನುವಾದ ಮತ್ತು ರೂಪಾಂತರಗಳ ಪ್ರಭಾವ ಇಂಗ್ಲೀಷಿನಿಂದ ಬಂದ ಕೃತಿಗಳಿಗೆ ಮಾತ್ರ ಸೀಮಿತವಾಗಿರಲಿಲ್ಲ. ಅಂಥದೇ ಪ್ರಭಾವಗಳಿಗೆ ಮೊದಲಿಗೆಯೇ ಮುಂದುವರಿದಿದ್ದ ಕೆಲವೊಂದು ದೇಶೀಯ ಭಾಷೆಗಳಲ್ಲಿಯ ಕೃತಿಗಳೂ ಈ ಕಾಲಾವಧಿಯಲ್ಲಿ ಕನ್ನಡಕ್ಕೆ ಬಂದುವು. ತೆಲುಗು, ತಮಿಳು, ಮಲೆಯಾಳಿಯಿಂದ ಕೆಲವೊಂದು ಕೃತಿಗಳು ಅನುವಾದವಾಗಿ ಬಂದರೂ ಕನ್ನಡ ಕಾದಂಬರಿಯ ಬೆಳವಣಿಗೆಯ ಮೇಲೆ ನಿಶ್ಚಿತವಾದ ಪ್ರಭಾವವನ್ನು ಬೀರಿ ಅಂಥ ಬೆಳವಣಿಗೆಗೆ ಅಗತ್ಯವಾಗಿದ್ದ ವಾಚನಾಭಿರುಚಿಯನ್ನು ಬೆಳೆಯಿಸಿದ ಶ್ರೇಯಸ್ಸು ಬಂಗಾಲಿಯಿಂದ ಹಾಗೂ ಮರಾಠಿಯಿಂದ ಕನ್ನಡಕ್ಕೆ ಬಂದ ಕೃತಿಗಳಿಗೆ ಸಲ್ಲುತ್ತದೆ. ಬಂಗಾಲಿಯಿಂದ ಬಂಕಿಮಚಂದ್ರ ಹಾಗೂ ಮರಾಠಿಯಿಂದ ಹರಿನಾರಾಯಣ ಆಪಟೆಯವರ ಕಾದಂಬರಿಗಳನ್ನು ಕ್ರಮವಾಗಿ ಬಿ. ವೆಂಕಟಾಚಾರ್ಯರು ಮತ್ತು ಗಳಗನಾಥರು ಕನ್ನಡಿಸಿಕೊಟ್ಟರು. ವೆಂಕಟಾಚಾರ್ಯರು ಬಂಕಿಮ ಕಾದಂಬರಿಗಳನ್ನು ನೇರವಾಗಿ ಕನ್ನಡಿಸಿದರಾದರೆ ಗಳಗನಾಥರು ಆಪಟೆಯವರ ಕೃತಿಗಳನ್ನಾಧರಿಸಿ, ಕೆಲವು ಸಲ ನೇರ ಅನುವಾದ ರೂಪದಲ್ಲಾದರೆ ಇನ್ನು ಕೆಲವು ಸಲ ಭಾವಾನುವಾದ ಮಾಡಿಕೊಂಡು ಐತಿಹಾಸಿಕ ಕಾದಂಬರಿಗಳನ್ನು ರಚಿಸಿದರು. ಇವರಿಬ್ಬರ ಕೃತಿಗಳು ಅನನ್ಯಸಾಧಾರಣವಾದ ಜನಪ್ರಿಯತೆಯನ್ನು ಗಳಿಸಿ ವಾಚನಾಭಿರುಚಿಯನ್ನು ಬೆಳೆಯಿಸಿದುವೆನ್ನುವುದು ಅವುಗಳ ಮಹತ್ವದ ಕೊಡುಗೆ. ಅದರಿಂದಾಗಿ ಕಾದಂಬರೀಪ್ರಕಾರ ಸ್ಥಿರವಾಗಿ ನಿಲ್ಲುವಂತಾಯಿತು. ಆದರೆ ಅವರಿಬ್ಬರೂ ಕಾದಂಬರೀಪ್ರಕಾರ ಸಾಧಿಸಬಹುದಾದ ಉದ್ದೇಶಗಳಿಗೆ ಒದಗಿಸಿದ ಅಂತಸ್ಸತ್ವ ಇನ್ನೂ ಮಹತ್ವದ ಕಾಣಿಕೆಯಾಗಿದೆ. ಬಂಕಿಮರೇ ಆಗಲಿ, ಗಳಗನಾಥರೇ ಆಗಲಿ, ಕೇವಲ ಮನೋರಂಜನೆಗೆಂದು ಕಾದಂಬರಿಗಳನ್ನು ಬರೆದವರಲ್ಲ. ಅವರಿಬ್ಬರಿಗೂ ಕಾದಂಬರಿ ಒದಗಿಸಬಲ್ಲ ಮನೋರಂಜನೆ ಓದುಗನ ಮನಸ್ಸನ್ನು ಸೆರೆಹಿಡಿಯುವ ಒಂದು ಸಾಧನವಾಗಿದ್ದಿತು. ಹಾಗೆ ಸೆರೆಯಾದ ಮನಸ್ಸಿನಲ್ಲಿ ಬೇರೆಯಾದ, ಮಹತ್ವದ ವಿಚಾರಗಳನ್ನು ಬಿತ್ತರಿಸುವುದು ಅವರ ಗುರಿಯಾಗಿತ್ತು. ಈ ಬೇರೆ ವಿಚಾರಗಳಲ್ಲಿಯೇ ಅವರ ಜೀವನದೃಷ್ಟಿ ವ್ಯಕ್ತವಾಗುತ್ತಲ್ಲದೆ ಅದರ ಮೂಲಕವಾಗಿಯೇ ರೂಪುಗೊಂಡ ಕಥಾಸಂವಿಧಾನಗಳು ಹೆಚ್ಚಿನ ಅರ್ಥವ್ಯಾಪ್ತಿಯನ್ನೂ, ಸಾಹಿತ್ಯಶಕ್ತಿಯನ್ನೂ ಮಹತ್ವವನ್ನೂ ಪಡೆಯುತ್ತವೆ. ಬಂಕಿಮಚಂದ್ರರು ಸ್ವಪ್ರತಿಭೆಯಿಂದ ಸ್ವತಂತ್ರ ಕೃತಿಗಳನ್ನು ರಚಿಸಿದರು ; ಗಳಗನಾಥರು ಆಪಟೆಯವರ ಕೃತಿಗಳನ್ನಾಧರಿಸಿ ತಮ್ಮ ಕೃತಿಗಳನ್ನು ರಚಿಸಿದರು.

ಈ ವ್ಯತ್ಯಾಸವೊಂದನ್ನು ಬದಿಗಿರಿಸಿದರೆ, ಅವರಿಬ್ಬರೂ ತಮ್ಮ ಕೃತಿಗಳ ಮೂಲಕ ಸಾಧಿಸಬೇಕೆಂದ ಉದ್ದೇಶದಲ್ಲಿ, ಅದನ್ನು ರೂಪಿಸಿದ ಮನೋಭಾವದಲ್ಲಿ ಅಚ್ಚರಿ ಪಡುವಂಥ ಸಾಮ್ಯ ಎದ್ದುಕಾಣುತ್ತದೆ. ಇಬ್ಬರಿಗೂ ಸಮಾನವಾಗಿ ಮುಖ್ಯ ವಾಗಿದ್ದದ್ದು ಸ್ವದೇಶಾಭಿಮಾನ, ಸ್ವಧರ್ಮನಿಷ್ಠೆ ಮತ್ತು ಸ್ವಭಾಷಾಪ್ರೇಮ. ವೆಂಕಟಾಚಾರ್ಯರ ಅನುವಾದಗಳ ಮೂಲಕ ಹಾಗೂ ಗಳಗನಾಥರ ಕೃತಿಗಳ ಮೂಲಕ ಈ ಮೂರು ಬಗೆಯ ನಿಷ್ಠೆಗಳು ಕನ್ನಡ ಕಾದಂಬರಿಯ ಅಂತರಂಗದ ಸತ್ವವನ್ನು ಹೆಚ್ಚಿಸಿದುವು. ಕಾದಂಬರೀ ಪ್ರಕಾರ ಸಾಧಿಸಬಹುದಾದ ಉದ್ದೇಶ ಉಪಯುಕ್ತತೆಗಳ ವ್ಯಾಪ್ತಿಯನ್ನು ವಿಸ್ತರಿಸಿ ಸಾಹಿತ್ಯ ಪ್ರಪಂಚದಲ್ಲಿ ಅದರ ಸ್ಥಾನ ವನ್ನು ಭದ್ರಪಡಿಸಿದವು.

ಆಧುನಿಕ ಭಾರತೀಯ ಸಾಹಿತ್ಯ ಪ್ರಪಂಚದಲ್ಲಿ ಬಂಕಿಮರ ಸಾಧನೆ ಅದ್ವಿತೀಯವಾದದ್ದು. ಅದರ ವಿವರಣೆ ವಿಶ್ಲೇಷಣೆಗಳು ಇಲ್ಲಿ ಅಪ್ರಸ್ತುತ. ಆದರೆ ಬಂಕಿಮರು ಬಂಗಾಲಿಗಳಿಗಾಗಿ ಮಾಡಿದ್ದನ್ನು ಗಳಗನಾಥರು ಕನ್ನಡಿಗರಿಗಾಗಿ ಮಾಡಿ ದರು ಎಂದು ಹೇಳಬಹುದಾಗಿದೆ, ಈ ಮಾತನ್ನು ಅವರವರ ಸಾಹಿತ್ಯಸಿದ್ಧಿಯ ದೃಷ್ಟಿಯಿಂದ ಹೇಳಲಾಗುತ್ತಿಲ್ಲ. ಹಾಗೆ ನಾನು ಹೇಳುತ್ತಿರುವುದು ಅವರಿಬ್ಬರನ್ನು ಕಾರ್ಯಪ್ರವೃತ್ತರನ್ನಾಗಿ ಮಾಡಿದ ಅಂತಃಪ್ರೇರಣೆಯ ದೃಷ್ಟಿಯಿಂದ ಹಾಗೂ ಸಾಧಿಸಬೇಕೆಂಬ ಉದ್ದೇಶಗಳ ದೃಷ್ಟಿಯಿಂದ. "ಪ್ರಬುದ್ಧ ಪದ್ಮನಯನೆ"ಯ ಮುನ್ನುಡಿಯಲ್ಲಿ ಗಳಗನಾಥರು ತಮ್ಮ ಉದ್ದೇಶವನ್ನು ಹೀಗೆ ವಿವರಿಸಿದ್ದಾರೆ:

"ಓದುವವನ ಯೋಗ್ಯತೆ ಇದ್ದಂತೆ ಬೇರಬೇರೆ ಜನರಿಗೆ ಬೇರೆ ಬೇರೆ ಪ್ರಕಾರದ ಗ್ರಂಥಗಳು ವಾಚನಾರ್ಹಗಳಾಗುವವು. ಶಾಸ್ತ್ರೀಯ ವಿಷಯಗಳ, ಗಹನ ವಿಷಯಗಳ ಗ್ರಂಥಾವಲೋಕನವು ವಿದ್ವಾಂಸರಿಗೆ ಮಾತ್ರ ಸಾಧ್ಯವಾದದ್ದು, ಸಾಧಾರಣ ಜನರಿಗೆ ಆ ಗ್ರಂಥಗಳು ದುರ್ಬೋಧವಾಗಿ ಅವರ ಓದುವ ಲವಲವಿ ಕೆಯು ನಷ್ಟವಾಗುವ ಸಂಭವವುಂಟು. ಕಾರಣ ವಾಚನಾಭಿರುಚಿ ಇಲ್ಲದ ಜನರಲ್ಲಿ ವಾಚನಾಭಿರುಚಿಯನ್ನು ಹುಟ್ಟಿಸಲಿಕ್ಕೂ ಉದ್ಯೋಗಾತಿಶಯದಿಂದ ಕ್ರಾಂತರಾದ ವರಿಗೆ ವಿಶ್ರಾಂತಿಯಲ್ಲಿ ಆನಂದಗೊಳಿಸಲಿಕ್ಕೂ ಮನೋರಂಜನವಾಗಿ ನೀತಿಬೋಧನ ವಾಗುವುದಕ್ಕೂ ಉತ್ತಮ ಕಾದಂಬರಿಗಳು ಬೇಕೇಬೇಕು. ಮಾತೃಭಾಷಾಸೇವೆ ಯನ್ನು ಮಾಡಲೆಳಸಿ ನಾನು ಈ ಕಾದಂಬರೀ ರೂಪವಾದ ಅಲ್ಪ ಪ್ರಯತ್ನವನ್ನು ಮಾಡಿರುತ್ತೇನೆ."

ವಾಚನಾಭಿರುಚಿ, ಮನೋರಂಜನೆ, ನೀತಿಬೋಧೆ ಎನುವ ಮೂರು

ಮಾತುಗಳು ಗಳಗನಾಥರ ಲೇಖನ ವ್ಯವಸಾಯದ ಹಿಂದಿನ ಮೂಬಗೆಯ ಉದ್ದೇಶವನ್ನು ಸಾರುತ್ತವೆ. ಎಲ್ಲವೂ ಮಹತ್ವದ ಉದ್ದೇಶಗಳಾದರೂ ಮೊದಲಿನ ಎರಡು ಮೂರನೆಯದಕ್ಕೆ ಸಾಧನಗಳು ಎನ್ನುವುದನ್ನು ಅವರ ವ್ಯಕ್ತಿತ್ವದ ಪರಿಚಯದಿಂದ, ಅವರ ವೈಯಕ್ತಿಕ ಜೀವನ ಕ್ರಮದಿಂದ, ಲೇಖನದ ಜೊತೆಯಲ್ಲಿ ಅವರು ತೊಡಗಿ ನಡೆಸಿದ ಇತರ ಕಾರ್ಯಕಲಾಪಗಳಿಂದ, ಕೊನೆಯಲ್ಲಿ ಅವರ ಲೇಖನಗಳಿಂದಲೇ ಗೊತ್ತಾಗುತ್ತದೆ. ಅವರ ಬರಹದ ಮೊತ್ತದಲ್ಲಿ ಅರ್ಧದಷ್ಟು ಕಾದಂಬರಿಯಂಥ ಲೌಕಿಕ ಸಾಹಿತ್ಯವಿದ್ದರೂ ಉಳಿದರ್ಧ ಧಾರ್ಮಿಕ ಹಾಗೂ ಆಧ್ಯಾತ್ಮಿಕ ವಿಷಯಗಳಿಗೆ ಸಂಬಂಧಿಸಿದ್ದಾಗಿದೆ. (ಈ ಮಾತನ್ನು ಬಂಕಿಮರ ವಿಚಾರದಲ್ಲಿಯೂ ಹೇಳಬಹುದಾಗಿದೆ.) ಮೂಲತಃ ಗಳಗನಾಥರ ಮನೋಧರ್ಮ ಸನಾತನಧರ್ಮಶ್ರದ್ಧೆಯಲ್ಲಿ ರೂಪಿತವಾದದ್ದು. ಸನಾತನ ಹಿಂದೂ ಧರ್ಮದ ಶಾಸ್ತ್ರ ವಿಧಾನಗಳಲ್ಲಿ, ನೀತಿ ರೀತಿಗಳಲ್ಲಿ, ವಿಧಿನಿಷೇಧಗಳಲ್ಲಿ ಅಚಲವಾದ ವಿಶ್ವಾಸವುಳ್ಳವರು ಅವರು. ಕಾದಂಬರಿಯನ್ನು ಕುರಿತು ಅವರು ಹೇಳಿದ "ನೀತಿಬೋಧೆ" ಎನ್ನುವ ಮಾತನ್ನು ಅವರ ಈ ನಂಬಿಕೆಗಳ ಹಿನ್ನಲೆಯಲ್ಲಿ ಅರ್ಥಮಾಡಿಕೊಳ್ಳಬೇಕಾಗುತ್ತದೆ. ಸನಾತನ ಹಿಂದೂ ಧರ್ಮದ ಮೌಲ್ಯಗಳನ್ನು ಎತ್ತಿಹಿಡಿಯುವುದೇ ಅವರ ಲೇಖನದ ಉದ್ದೇಶ ಎಂದು ಹೇಳಿದರೆ ಅತ್ಯುಕ್ತಿಯಾಗಿ ಕಂಡೀತು. ಆದರೆ ಅದು ನಿಜದ ಮಾತು. ಕಾದಂಬರಿಗಳನ್ನು ಅಷ್ಟಕ್ಕಾಗಿಯೇ ಬರೆದರು ಎಂದು ಹೇಳಲಾಗದಿದ್ದರೂ ನೀತಿಬೋಧೆಯೇ ಮುಖ್ಯ ಗುರಿಯಾಗಿದ್ದಿತೆನ್ನುವುದನ್ನಾಗಲಿ, ವಿಷಯುವಸ್ತುಗಳ ಆಯ್ಕೆಯಲ್ಲಿ ಮತ್ತು ಕಥಾಯೋಜನೆಯ ವಿಧಾನಗಳಲ್ಲಿ ಈ ಮನೋಧರ್ಮ ವ್ಯಕ್ತವಾಗುತ್ತದೆನ್ನುವುದನ್ನಾಗಲಿ ಅಲ್ಲಗಳೆಯಲಾಗುವುದಿಲ್ಲ. ಅವರು ಉದ್ದೇಶಿಸಿದ ನೀತಿಬೋಧೆಯ ನೆಲೆಬೆಲೆಗಳು ಈ ನಂಬಿಕೆ ಶ್ರದ್ಧೆಗಳ ತಳಪಾಯದ ಮೇಲೆಯೇ ನಿಂತಿದ್ದವು ಎಂಬುದನ್ನು ಅವರ ಕೃತಿಗಳ ವಿಮರ್ಶೆ ಗಮನಿಸಲೇಬೇಕಾದ ಅಂಶವಾಗಿದೆ. ಅವರು ವೀರರ ಕಥೆಗಳನ್ನು ಬರೆದರು. (ಮರಾಠರ ಚರಿತ್ರೆಗೆ ಸಂಬಂಧಪಟ್ಟ ಎಂಟು ಕಾದಂಬರಿಗಳನ್ನು, ರಜಪೂತರ ಚರಿತ್ರೆಗೆ ಸಂಬಂಧಪಟ್ಟಂತೆ ಎಂಟು ಕಾದಂಬರಿಗಳನ್ನು, ಕರ್ನಾಟಕದ ಚರಿತ್ರೆಗೆ ಸಂಬಂಧಿಸಿದಂತೆ ನಾಲ್ಕನ್ನು ಬರೆದರು.) ಈ ಚರಿತ್ರೆಯಲ್ಲಿಯ ವೀರರ ಸಾಹಸಗಳನ್ನು ಕುರಿತು ಬರೆದರು. ಆದರೆ ಈ ವೀರಾವೇಶಕ್ಕೆ, ಸಾಹಸಕ್ಕೆ, ದೇಶಾಭಿಮಾನದ ಜೊತೆಯಲ್ಲಿ ಸ್ವಧರ್ಮನಿಷ್ಠೆಯೂ ಒಂದು ಪ್ರೇರಕ ಶಕ್ತಿಯಾಗಿದ್ದಿತು. ಅವರು ಆರಿಸಿಕೊಂಡ ಮಹಾರಾಷ್ಟ್ರದ, ರಜಪೂತರ ವೀರರೆಲ್ಲರೂ ಅಂಥ ನಿಷ್ಠೆಯಿಂದಲೇ

ಸ್ಫೂರ್ತರಾಗಿದ್ದರು ಎನ್ನುವುದು ಗಮನಾರ್ಹವಾದ ಅಂಶವಾಗಿದೆ. ಸ್ವಧರ್ಮಕ್ಕಾಗಿ, ಸ್ವರಾಜ್ಯಕ್ಕಾಗಿ ವೀರ, ಸಾಹಸ, ಅಭಿಮಾನ ಎನ್ನುವುದೇ ಅವರ ಐತಿಹಾಸಿಕ ಕಾದಂಬರಿಗಳ ತಾತ್ವಿಕ ಬುನಾದಿಯಾಗಿದೆ. ತನ್ನ ಭಾಷೆಯ ಬಗೆಯಲ್ಲಿನ ಅಭಿಮಾನ ತನ್ನ ನಾಡಿನ ಬಗೆಯಲ್ಲಿಯ ಅಭಿಮಾನದ ಒಂದು ಮುಖ ಎನ್ನುವ ವಿಚಾರ ಸುಸ್ಪಷ್ಟನೇ ಆಗಿವೆ. ಗಳಗನಾಥರ ಕಾದಂಬರಿಗಳು ಈ ಮೂರುಬಗೆಯ ಧೋರಣೆಯನ್ನು ಪ್ರತಿಬಿಂಬಿಸುತ್ತವೆ.

ರಾಷ್ಟ್ರೀಯ ಭಾವನೆಯ ಉದಯ, ಹಿಂದೂಧರ್ಮ ಸಂಸ್ಕೃತಿಯ ಪುನರುತ್ಥಾನದ ಪ್ರಯತ್ನಗಳು ಹಾಗೂ ಸಾಮಾಜಿಕ ಜೀವನದಲ್ಲಿ ಸಾಂಪ್ರದಾಯಿಕವಾಗಿ ನಡೆದು ಬಂದ ಕುರುಡು ಕಟ್ಟುಳೆಗಳನ್ನು ಇಲ್ಲದಾಗಿಸಿ ಅದನ್ನು ನಿಜವಾದ ಅರ್ಥದಲ್ಲಿ ಆಧುನಿಕವಾಗಿಸಬೇಕೆಂಬ ಮನೋವೃತ್ತಿಯ ಬೆಳವಣಿಗೆ. ಈ ಮೂರು ಅಂಶಗಳು ಹತ್ತೊಂಬತ್ತನೆಯ ಶತಮಾತದ ಉತ್ತರಾರ್ಧದಲ್ಲಿ ನಡೆದ ವಿಚಾರಮಂಥನದ ಮುಖ್ಯಾಂಶಗಳೆಂದು ಆಗಲೆ ಸೂಚಿಸಿಯಾಗಿದೆ. ಈ ಮೂರರಲ್ಲಿ ಎರಡನೆಯದಾದ ಪರಂಪರೆಯ ಪುನರುತ್ಥಾನ ಸಮಾಜಜೀವನದ ಸುಧಾರಣೆಗೆ ವಿರೋಧವಾಗಿ ಕಾಣಬಹುದು. ಆದರೆ ಅದರ ಉದ್ದೇಶ ಧರ್ಮದ ಹೆಸರಿನಲ್ಲಿಯ ಕುರುಡುಕಟ್ಟಳೆಗಳನ್ನು ಮುಂದುವರಿಸುವುದಾಗಿರಲಿಲ್ಲ. ನಮ್ಮ ಸಾಂಸ್ಕೃತಿಕ ಪರಂಪರೆಯನ್ನು ಸರಿಯಾಗಿ ಅರ್ಥವಿಸಿಕೊಳ್ಳಬೇಕೆಂಬ ಆಕಾಂಕ್ಷೆ ಅಲ್ಲಿ ಮುಖ್ಯವಾಗಿತ್ತು. ಇನ್ನೊಂದು ದೃಷ್ಟಿಯಿಂದ, ಕ್ರೈಸ್ತಧರ್ಮೋಪದೇಶಕರು ನಡೆಸುತ್ತಿದ್ದ ಮತಾಂತರಗಳನ್ನು ಮತ್ತು ಅವನ್ನು ಸಾಧಿಸುವುದಕ್ಕೆಂದು ಅವರು ಹಿಂದೂಧರ್ಮ ಮತ್ತು ಸಂಸ್ಕೃತಿಯ ವಿಷಯದಲ್ಲಿ ತಾಳಿದ್ದ, ಅನೇಕ ಸಲ ಬಹಿರಂಗವಾಗಿ ವ್ಯಕ್ತಪಡಿಸುತ್ತಿದ್ದ, ತೆಗಳಿಕೆಯ ಧೋರಣೆಯನ್ನು ಪ್ರತಿಭಟಿಸುವ ಅಗತ್ಯವೂ ಇಂಥ ಪುನರುತ್ಥಾನದ ಕಾರ್ಯಕ್ಕೆ ಪ್ರೇರಕವಾಗಿತ್ತು. ಇದರ ಪರಿಣಾಮವೆಂದರೆ ಸಮಾಜ ಸುಧಾರಣೆಯ ಧೋರಣೆಗಳಲ್ಲಿ ಪ್ರತಿಭಟನೆಯ ಜೊತೆಯಲ್ಲಿ ಪುನರುತ್ಥಾನದ ಆಕಾಂಕ್ಷೆಯ ಅಂಶಗಳೂ ಸೇರಿಕೊಳ್ಳುತ್ತಿದ್ದವು. "ಇಂದಿರಾಬಾಯಿ"ಯಂಥ ಮೊದಲ ಸಾಮಾಜಿಕ ಕಾದಂಬರಿಗೆ "ಸದ್ಧರ್ಮವಿಜಯ"ವೆಂಬ ಪರ್ಯಾಯ ಶೀರ್ಷಿಕೆಯನ್ನು ಇರಿಸಿಕೊಳ್ಳುವುದರಲ್ಲಿ, ವಾಸುದೇವಾಚಾರ್ಯರು ತಮ್ಮ "ಇಂದಿರೆ"ಗೆ ಮುನ್ನುಡಿಯಾಗಿ ಬರೆದ ಮಾತುಗಳಲ್ಲಿ, ಈ ಮನೋಧರ್ಮ ವ್ಯಕ್ತವಾಗುತ್ತದೆ. ಸಾಮಾಜಿಕ ಜೀವನದಲ್ಲಿಯ ಕುರುಡು ಕಟ್ಟಳೆಗಳು ಇಲ್ಲದಾಗಬೇಕು, ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ ಅನ್ಯಾಯ ಅನಾಚಾರಗಳು ಇಲ್ಲದಾಗ

ಬೇಕೆಂಬ ನಿಷೇಧಾತ್ಮಕ ದೃಷ್ಟಿಯ ಜೊತೆಗೆ ಯಾವುದಿರಬೇಕು, ಯಾವುದರಿಂದ ಸಮಾಜಸ್ವಾಸ್ಥ್ಯ ಸಾಧ್ಯ, ಎಂಬುದರ ವಿಷಯದಲ್ಲಿ ಈ ಎಲ್ಲ ಸ್ವತಂತ್ರ ಲೇಖಕರು ನಮ್ಮ ಸಾಂಸ್ಕೃತಿಕ ಪರಂಪರೆಯನ್ನೇ ಆಶ್ರಯಿಸಿದ್ದು ಕಂಡು ಬರುತ್ತದೆ. ಆದ್ದರಿಂದ ಪಾಶ್ಚಾತ್ಯ ವಿದ್ಯಾವ್ಯಾಸಂಗದಿಂದುಂಟಾದ ಹೊಸ ವಿಚಾರಗಳ ಸಂಪರ್ಕದಿಂದಾಗಿ ಇವರಿಗೆ ಸುತ್ತಲಿನ ಜೀವನದಲ್ಲಿ ಕೊರತೆಗಳನ್ನು ತೋರಿಸುವುದು ಮುಖ್ಯವಾಗಿದ್ದಷ್ಟೇ ಯಾವುದು ಸಾಮಾಜಿಕ ಪ್ರಗತಿಯ ದೃಷ್ಟಿಯಿಂದ ಅಗತ್ಯ ಎನ್ನುವುದನ್ನು ಸೂಚಿಸುವುದೂ ಅಷ್ಟೇ ಮುಖ್ಯವಾಗಿತ್ತು. ಈ ಶತಮಾನದ ಆದಿಯಲ್ಲಿ ಹೊರಬಂದ ಕನ್ನಡದ ಮೊದಲ ಸಾಮಾಜಿಕ ಕಾದಂಬರಿಗಳಲ್ಲಿ ಇದು ಒಂದು ಮಹತ್ವದ ಅಂಶವೆನ್ನುವುದನ್ನು ಅವನ್ನು ವಿಮರ್ಶಿಸುವಾಗ ನಾವು ನೆನೆಯಬೇಕಾಗುತ್ತದೆ. ಆದರೆ ಕಾದಂಬರೀ ಪ್ರಕಾರದ ಬೆಳವಣಿಗೆಯ ದೃಷ್ಟಿಯಿಂದ ಇನ್ನೂ ಮುಖ್ಯವಾದ ಅಂಶವೆಂದರೆ ಈ ಲೇಖಕರು ಅದ್ಭುತ ರಮ್ಯವಾದ, ಅವಾಸ್ತವವಾದ ಕಥಾವಿಷಯಗಳನ್ನು ಬದಿಗಿರಿಸಿ ತಮ್ಮ ಸುತ್ತಲಿನ ಜೀವನದಲ್ಲಿಯ ಸಮಸ್ಯೆಗಳತ್ತ ತಮ್ಮ ಗಮನವನ್ನು ಹರಿಸಿದರು ಎನ್ನುವುದು. ಮನೋರಂಜನೆಗೊಂದು ಸಾಧನವಾಗಿದ್ದ ಕಥಾಯೋಜನೆಯನ್ನು ಇದ್ದ ಸಮಾಜವನ್ನು ಚಿತ್ರಿಸುವುದಕ್ಕಾಗಿ, ಅದನ್ನು ವಿಮರ್ಶಿಸುವುದಕ್ಕಾಗಿ ಒಂದು ಸಾಧನವನ್ನಾಗಿರಿಸಿಕೊಂಡರು ಎನ್ನುವುದು. ಇಂಥ ಕೆಲವು ಮೊದಲ ಕೃತಿಗಳನ್ನು ಚಾರಿತ್ರಿಕ ದೃಷ್ಟಿಯಿಂದ ನಾವು ಗಮನಿಸಬೇಕು.

೧೮೯೬ರಲ್ಲಿ ಪ್ರಕಟವಾದ ಮುರಿಗಾರಾಧ್ಯರ "ಶೃಂಗಾರ ಚಾತುರ್ಯೋಲ್ಲಾಸಿನಿ"ಯಾಗಲಿ ೧೮೯೮ರಲ್ಲಿ ಪ್ರಕಟವಾದ ಗಳಗನಾಥರ "ಪ್ರಬುದ್ಧ ಪದ್ಮನಯನೆ"ಯಾಗಲಿ ಸಮಾಜಾಭಿಮುಖವಾದ ವಾಸ್ತವ ದೃಷ್ಟಿಯ ಕೃತಿಗಳಾಗಿರದೆ ಸ್ವತಂತ್ರವಾಗಿದ್ದರೂ ಅದ್ಭುತರಮ್ಯ ಪರಂಪರೆಗೆಯೇ ಸೇರಿದ್ದುವಾದ್ದರಿಂದ ಮುಂದಿನ ಬೆಳವಣಿಗೆಗೆ ಅವು ದಿಕ್ಸೂಚಿಯಾಗಿ ನಿಲ್ಲುವುದಿಲ್ಲ. ಸ್ವತಂತ್ರವಾಗಿ ಕಾದಂಬರೀ ರಚನೆಗೆ ತೊಡಗಬೇಕೆಂಬ ಲವಲವಿಕೆಗೆ ಅವು ಸಾಕ್ಷಿಯಾಗಿ ನಿಲ್ಲಬಲ್ಲವೇ ಹೊರತು ವಸ್ತುರೀತಿಗಳೆರಡರ ದೃಷ್ಟಿಯಿಂದಲೂ ಅವನ್ನು ಆಧುನಿಕವೆನ್ನಲಾಗುವುದಿಲ್ಲ. ಆ ದೃಷ್ಟಿಯಿಂದ ಆಧುನಿಕವೆನ್ನಬಹುದಾದ ಮುಂದಿನ ಬೆಳವಣಿಗೆಗಳಿಗೆ ಕೈಗಂಬಗಳಾಗಿ ನಿಂತಿದ್ದ, ಆದ್ದರಿಂದಲೇ ಆಧುನಿಕ ಕನ್ನಡ ಕಾದಂಬರಿಯ ಮೊದಲ ಹೆಜ್ಜೆಗಳೆನ್ನಬೇಕಾದ ಕೃತಿಗಳೆಂದರೆ (೧) ೧೮೯೯ರಲ್ಲಿ ಪ್ರಕಟವಾದ ಗುಳವಾಡಿ ವೆಂಕಟರಾಯರ 'ಇಂದಿರಾಬಾಯಿ''; (೨) ೧೯೦೫ರಲ್ಲಿ ಪ್ರಕಟವಾದ ಬೋಳಾರ ಬಾಬೂರಾಯರ 'ವಾಗ್ದೇವಿ'' (೩) ೧೯೦೮ರಲ್ಲಿ ಪ್ರಕಟವಾದ ಕೆರೂರ ವಾಸುದೇವಾಚಾರ್ಯರ

"ಇಂದಿರಾ" ಮತ್ತು (೪) ೧೯೧೫ರಲ್ಲಿ ಪ್ರಕಟವಾದ ಎಂ. ಎಸ್. ಪುಟ್ಟಣ್ಣ ಅವರ "ಮಾಡಿದ್ದುಣ್ಣೋ ಮಹಾರಾಯ" ಈ ನಾಲ್ಕೂ ಕಾದಂಬರಿಗಳು ಮುಂದೆ ಬೆಳೆದ ಸಾಮಾಜಿಕ ಕಾದಂಬರಿಗಳಿಗೆ ಅಸ್ತಿಭಾರ ಹಾಕಿ, ಆ ಪ್ರಕಾರ ಸ್ಥಿರವಾಗಿ ನೆಲೆನಿಲ್ಲು ವಂತೆ ಮಾಡಿದವು.

೮

ಗುಳವಾಡಿಯವರ "ಇಂದಿರಾಬಾಯಿ" ಆ ಹೆಸರಿನ ಒಬ್ಬ ಬಾಲವಿಧವೆಯ ಕಷ್ಟಗಳನ್ನು ಹಾಗೂ ಕೊನೆಯಲ್ಲಿ ತಂದೆ ತಾಯಿಗಳಿಂದ ಓಡಿಹೋಗಿ ಸುಧಾರಕರೊಬ್ಬರ ಆಶ್ರಯದಲ್ಲಿ ಅವರಲ್ಲಿಯೇ ಆಶ್ರಯ ಪಡೆದು ವಿದ್ಯಾವಂತನಾಗಿ ಅಧಿಕಾರಪದವಿಗೆ ಬಂದಿದ್ದ ಸುಶಿಕ್ಷಿತ ಯುವಕನನ್ನು ಮರುಮದುವೆಯಾದದ್ದನ್ನು ಚಿತ್ರಿಸುತ್ತದೆ. ಆದರೆ ಕಾದಂಬರಿಯಲ್ಲಿ ಕೇಂದ್ರಪಾತ್ರಗಳಷ್ಟೇ ಅವು ವ್ಯವಹರಿಸುವ ಸಾಮಾಜಿಕ ಹಿನ್ನೆಲೆ ಮಹತ್ವದ್ದಾಗಿ ಕಾದಂಬರಿ ಒಂದು ಅಥವಾ ಕೆಲವು ವ್ಯಕ್ತಿಗಳ ಕಥೆ ಮಾತ್ರವಾಗಿ ಉಳಿಯದೆ ಅಂದಿನ ಸಮಾಜದ ಚಿತ್ರವಾಗಿ ನಿಲ್ಲುತ್ತದೆ. ಮೈನೆರೆಯುವ ಮೊದಲೇ ಮದುವೆಯಾದ ಗಂಡ ವೇಶ್ಯಾಸಂಗಕ್ಕೆ ಬಲಿಯಾದಾಗ ಬಂದ ಬಾಲವೈಧವ್ಯ, ಅದನ್ನು ಅನುಭವಿಸಬೇಕಾದವಳ ಮನಸ್ಸನ್ನು ಆಧ್ಯಾತ್ಮಿಕ ವಿಚಾರಗಳತ್ತ ತಿರುಗಿಸಬೇಕೆಂದ ತಂದೆತಾಯಿಗಳ ಪ್ರಯತ್ನದ ಅಂಗವಾಗಿ ಮನೆಗೆ ಬಂದು ತಂಗಿದ ಒಬ್ಬ ಸೋಗಿನ ಸಂತ ಮಾಡಲೆಳಿಸಿದ ಅಪಚಾರವನ್ನು ತಪ್ಪಿಸಿ ಕೊಂಡು ಪಾರಾಗಬೇಕಾದ ಸನ್ನಿವೇಶ, ಇನ್ನೊಬ್ಬರಲ್ಲಿ ಆಶ್ರಯ ಪಡೆದು ವಿದ್ಯಾ ವಂತನೊಬ್ಬನನ್ನು ಮರುಮದುವೆಯಾದಾಗ ಮಠಾಧಿಪತಿಗಳು ಹಾಕುವ ಬಹಿ ಷ್ಕಾರ, ಇತ್ಯಾದಿ ಅಂಶಗಳು ಕಥೆಯ ಅಂಗವಾಗಿ ಬಂದು ಸಮಕಾಲೀನ ರೂಢಿ ರೀತಿಗಳನ್ನು ಪ್ರತಿಬಿಂಬಿಸುತ್ತವೆ. ಧಾರ್ಮಿಕ ವಿಧಿ, ಸಂಪ್ರದಾಯ, ಕಂದಾಚಾರದ ಕಟ್ಟುನಿಟ್ಟುಗಳನ್ನು ಕಡೆಗಣಿಸಿ ಸುಧಾರಣೆಯತ್ತ ಸಾಗುವ ಸಮಾಜದ ಸಂಕ್ರಮಣಾ ವಸ್ಥೆಯನ್ನು ಈ ಕಾದಂಬರಿ ಚಿತ್ರಿಸುತ್ತದೆ. ಸುಧಾರಣೆಗಾಗಿ ತವಕಿಸುವ ತರುಣ ಪೀಳಿಗೆ, ಕಟ್ಟುಪಾಡುಗಳನ್ನು ಕೊಡವಿ ನಿಂತವರನ್ನು ಬಹಿಷ್ಕರಿಸುವ ಮಠ, ಸ್ವಾರ್ಥಕ್ಕಾಗಿ ಪರಿಸ್ಥಿತಿಯ ಲಾಭಪಡೆಯಲೆತ್ನಿಸುವ ಕಪಟ ಮಧ್ಯವರ್ತಿಗಳು ಇಂಥ ಅನೇಕ ಪಾತ್ರಗಳ ಮೂಲಕ ಮುಂದೆ ಸಾಗುವ ಕಥೆ ಧಾರ್ಮಿಕ ಹಾಗೂ ಸಾಮಾಜಿಕ ಮೌಲ್ಯಗಳನ್ನು ಒರೆಗೆ ಹಚ್ಚುತ್ತದೆ ; ಮಠ, ಗುರುಪೀಠ ಗಳಂಥ ಧರ್ಮಸಂಸ್ಥೆಗಳ, ಸಾಧುಸಂತರ ವಿವಿಧ ವಿಧಾನಗಳನ್ನು, ಆಚಾರವಿಚಾರ

ಗಳನ್ನು ವಿಮರ್ಶಿಸುತ್ತದೆ; ಶಿಷ್ಯ ಕೋಟಿಯ ಡಾಂಭಿಕತನವನ್ನು, ಅನ್ಯೋನ್ಯ ವಾದ ಸಮಯಸಾಧಕರ ಸ್ವಾರ್ಥವನ್ನು ಬಯಲಿಗೆಳೆಯುತ್ತದೆ. ಕಥೆ ಮುಖ್ಯ ವಾದರೂ ಸಮಕಾಲೀನ ಸಾರಸ್ವತ ಸಮಾಜದಲ್ಲಿಯ ಡಂಭಾಚಾರಗಳನ್ನು ಬಯಲಿ ಗೆಳೆಯುವುದಕ್ಕಾಗಿಯೇ ಅದನ್ನು ಕಟ್ಟಿಕೊಂಡ ಹಾಗೆ ಭಾಸವಾಗುತ್ತದೆ. ಆದರೆ ಕಥೆ ಮೊದಲಿನಿಂದ ಕೊನೆಯವರೆಗೆ ಇಂದಿಗೂ ಓದಿಸಿಕೊಂಡು ಹೋಗುತ್ತದೆ. ಧರ್ಮಾಧಿಕಾರಿಗಳ ಅನಾಚಾರಗಳನ್ನು ನೇರವಾಗಿ ಚಿತ್ರಿಸುವ ಧೈರ್ಯ ಇಂದಿಗೂ ಕಾಣದಾಗಿರುವಾಗ ಇನ್ನೂ ಹಳೆಯಕಾಲದ್ದಾಗಿದ್ದ ಅಂದಿನ ಪರಿಸರದಲ್ಲಿ ಲೇಖ ಕರು ಇಂಥ ಒಂದು ವಿಷಯವನ್ನೆತ್ತಿಕೊಂಡರು ಎನ್ನುವುದು ಅವರ ಸುಧಾ ರಣಾಪೇಕ್ಷೆಗೆ ಸಾಕ್ಷಿಯಾಗಿದ್ದಂತೆ ನಡೆದದ್ದನ್ನು ಯಥಾವತ್ತಾಗಿ ಚಿತ್ರಿಸುವುದರ ಸಾರ್ಥಕತೆಯ ವಿಷಯದಲ್ಲಿ ಅವರಿಗಿದ್ದ ನಂಬಿಕೆಗೂ ಸಾಕ್ಷಿಯಾಗುತ್ತದೆ. ಇಂಥ ವಾಸ್ತವ ಚಿತ್ರಣದ ಮೂಲಕ ವ್ಯಕ್ತಪಡಿಸಬೇಕೆಂದುಕೊಂಡ ಜೀವನದೃಷ್ಟಿ "ಸತ್ಯತೆ, ಹೃದಯನಿರ್ಮಲತೆ ಇವೆರಡು ಸಾಧನಗಳೇ ನಮಗೆ ಇಹಪರಗಳ ಲ್ಲಿಯೂ ಸಾರ್ಥಕಗಳಾಗಿವೆ" ಎಂಬ ಅವರ ಮುನ್ನುಡಿಯ ಮಾತುಗಳಲ್ಲಿ ಕಾಣಿಸಿ ಕೊಳ್ಳುತ್ತದೆ.

"ಇಂದಿರಾಬಾಯಿ"ಯಲ್ಲಿ ಸಾಧುಸಂತರು, ಮಠಾಧಿಪತಿಗಳು ಆನುಷಂಗಿಕ ವಾಗಿ ಬಂದರೆ ಬೋಳಾರ ಬಾಬೂರಾಯರ "ವಾಗ್ದೇವಿ"ಯಲ್ಲಿ ಒಬ್ಬ ಮಠಾ ಧೀಶರು ಮತ್ತು ಅವರು ಮೋಹಿಸಿ ವಶಪಡಿಸಿಕೊಂಡ ಮದುವೆಯಾದ ಹೆಂಗಸು ವಾಗ್ದೇವಿಯೇ ಕೇಂದ್ರಪಾತ್ರಗಳಾಗುತ್ತಾರೆ. ಧರ್ಮಪೀಠವೊಂದರಲ್ಲಿ ನಡೆ ಯುವ ಅನಾಚಾರ, ಪೀಠಾಧಿಕಾರ ಹಾಗೂ ಅದರ ಸ್ವತ್ತುಗಳಿಗಾಗಿ ನಡೆಯುವ ಒಳಜಗಳದ ರಾಜಕೀಯ, ಕಾವಿಬಟ್ಟೆಯ ತೆರೆಯ ಹಿಂದುಗಡೆಯಲ್ಲಿ ನಡೆಯುವ ಅನೇಕ ಸಂಚುಗಳ ನಾಟಕ ಈ ಕಾದಂಬರಿಗೆ ವಸ್ತುವಾಗಿದೆ. ಮೊದಲಿನದರಲ್ಲಿ ಸಾರಸ್ವತ ಸಮಾಜದ ಮಠಗಳಾದರೆ ಎರಡನೆಯದಲ್ಲಿ ಮಾಧ್ವ ಸಮಾಜ ಮತ್ತು ಮಠ ಕಾಣಿಸಿಕೊಳ್ಳುತ್ತವೆ. ತನ್ನಲ್ಲಿ ಹುಟ್ಟಿದ ಗಂಡುಮಗುವನ್ನು ಯತಿಪೀಠಕ್ಕೆ ಉತ್ತರಾಧಿಕಾರಿಯಾಗಿಸಬೇಕೆಂಬ ಷರತ್ತಿನ ಮೇಲೆ ಮಠಾಧಿಪತಿಗಳೊಬ್ಬರಿಗೆ ವಶಳಾದ ವಾಗ್ದೇವಿ ಅವರ ಅನಾಚಾರದ ತನಿಖೆ ಮಾಡಬಂದವರನ್ನೇ ವಶಪಡಿಸಿ ಕೊಂಡು ಯತಿಯ "ಮರ್ಯಾದೆ"ಯನ್ನು ಉಳಿಸುತ್ತಾಳಲ್ಲದೆ ತನ್ನ ಮಗಳ ನಿಮಿತ್ತವಾಗಿ ಮಠದಲ್ಲಿಯೇ ನಡೆದಿದ್ದ ಕೊಲೆಯೊಂದನ್ನು ಕೊತವಾಲ ಹಾಗೂ ಆತನ ಮೇಲಧಿಕಾರಿಯೊಡನೆ ಸ್ನೇಹ ಬೆಳೆಯಿಸಿ ಮುಚ್ಚಿಬಿಡುತ್ತಾಳೆ. ಯತಿಗಳು

ಅಪಸ್ಮಾರಕ್ಕೆ ಬಲಿಯಾಗಿ ನಿಧನವಾದಾಗ ಆಕೆಯ ಮಗ ಅಧಿಕಾರವಹಿಸಿಕೊಳ್ಳು ವುದಕ್ಕೆ ಇತರ ಮಠಗಳಿಂದ ತಡೆಯುಂಟಾಗುತ್ತದೆ. ವಾಗ್ದೇವಿ ಮಠದಲ್ಲಿಯ ಧನಕನಕಾದಿಗಳನ್ನು ಎತ್ತಿಹಾಕಿ ಮಗನೊಂದಿಗೆ ಓಡಿಹೋಗುತ್ತಾಳೆನ್ನುವುದು ಕಥೆ ಯಲ್ಲಿಯ ಮುಖ್ಯಾಂಶ. ಹೆಣ್ಣಿನ ಮೋಹಜಾಲದಲ್ಲಿ ಸಿಕ್ಕಿಬಿದ್ದ ಮಠಾಧಿಪತಿ ಹಾಗೂ ಇತರರು, ಅಂಥ ಬಲೆಯನ್ನು ಬೀಸುವ ಹೆಣ್ಣುಗಳು, ಆಸೆಬುರುಕ ಬ್ರಾಹ್ಮಣರು, ಭ್ರಷ್ಟರಾದ ಅಧಿಕಾರಿಗಳು, ತಮ್ಮ ಜಾತಿಯ ಹಮ್ಮಿನಲ್ಲಿಯೇ ಮೆರೆಯುವ ದಿವಾನರು. ಅಲ್ಪಲಾಭಕ್ಕಾಗಿ ಅನಾಚಾರಗಳಲ್ಲಿ ಸಹಕರಿಸುವ ಪಾರು ಪತ್ಯಗಾರರು ; ಮಠದ ಸ್ವತ್ತಿನ ವಿಷಯದಲ್ಲಿಯ ವ್ಯಾಜ್ಯಗಳಲ್ಲಿ ಪಾಲುದಾರರಾಗಿ ಅಲ್ಲಿಯ ತೊಡಕುಗಳನ್ನು ಇನ್ನೂ ತೊಡಕಾಗಿಸುವ ಸಮಯ ಸಾಧಕರು, ಎಂಬಂಥ ಪಾತ್ರಗಳು ಜೀವಂತವಾಗಿ ಚಿತ್ರಿತವಾಗಿವೆ. ಕಥೆಯ ಸನ್ನಿವೇಶಗಳು ಕುತೂಹಲಕಾರಿಯಾಗಿ ಬೆಳೆಯುತ್ತ ಹೋಗುತ್ತವೆ. ಆದರೆ ಕಥೆಗಿಂತ ಮುಖ್ಯ ವಾದದ್ದು ಅದರಲ್ಲಿ ಎದ್ದು ಕಾಣುವ ಸಾಮಾಜಿಕ ಪ್ರವೃತ್ತಿಗಳ ಬಗೆಯಲ್ಲಿಯ ಲೇಖಕರ ದೃಷ್ಟಿ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಬೋಳಾರರದು ಕ್ರಾಂತಿಕಾರಿಯಾದ ಸುಧಾರಣಾವಾದವಲ್ಲ, ಅಷ್ಟೊಂದು ಬಗೆಯ ಅನಾಚಾರಗಳಿಗೆ ಆಶ್ರಯವಾಗಿದ್ದ ಮಠದ ವಿರುದ್ಧ ಯಾವ ಕ್ರಿಯೆಯೂ ನಡೆಯುವುದಿಲ್ಲ. ಆದರೆ ಇಂಥದು ನಡೆಯಬಾರದು ಎನ್ನುವುದು, ಅಂಥದೆಲ್ಲವನ್ನೂ ನಡೆಯಗೊಟ್ಟವರಿಗೆ, ಅದರಲ್ಲಿ ಸಹಕರಿಸಿದವರಿಗೆ, ಒದಗುವ ಗತಿ ಕಥೆಯ ಕೊನೆಯಲ್ಲಿ ವ್ಯಕ್ತವಾಗುತ್ತದೆ. ಯತಿಗಳು ಅಪಸ್ಮಾರಕ್ಕೆ ತುತ್ತಾಗುತ್ತಾರೆ ; ಅಷ್ಟೆಲ್ಲ ಕಾರುಭಾರ ಮಾಡಿ ಮೆರೆದಿದ್ದ ವಾಗ್ದೇವಿ ಎದ್ದು ಓಡಿಹೋಗಬೇಕಾಗುತ್ತದೆ. ಆಕೆಯ ಷರತ್ತು ಫಲಿಸುವುದಿಲ್ಲ. ನಡೆದಿರಬಹುದಾದ ಒಂದು ಘಟನಾವಲಿಯನ್ನು ದೂರ ನಿಂತು ಯಥಾವತ್ತಾಗಿ ಚಿತ್ರಿಸುವ ಈ ಕಾದಂಬರಿ ಓದುಗರನ್ನು ಸೆರೆಹಿಡಿಯಬಲ್ಲ ಒಂದು ಕಥೆಯನ್ನು ಹೇಳುವುದರ ಜೊತೆಗೆ ಸಮಕಾಲೀನ ಸಮಾಜ ವಿಮರ್ಶೆಗೊಂದು ಮಾಧ್ಯಮ ವಾಗಿಯೂ ನಿಲ್ಲುತ್ತದೆ.

ಸ್ತ್ರೀಶಿಕ್ಷಣ, ವಿಧವಾವಿವಾಹಗಳಂಥ ಸಮಸ್ಯೆಗಳನ್ನು ಕುರಿತು ಚರ್ಚೆಗಳ ನ್ನೊಳಗೊಂಡು ಅವನ್ನಾಧರಿಸಿದ ಸನ್ನಿವೇಶಗಳಿಂದ ಕೂಡಿದ ಕಾದಂಬರಿ ಕೆರೂರು ವಾಸುದೇವಾಚಾರ್ಯರ ' ಇಂದಿರಾ." ಕಾಲೇಜು ದಿನಗಳಿಂದಲೇ ಸ್ನೇಹಿತರಾಗಿದ್ದ ಜಯರಾಯ ಮತ್ತು ಕಮಲಾಕಾಂತ ಇಬ್ಬರೂ ದೇವಯಾನಿ ಎಂಬ ಯುವತಿ ವಿಧವೆಯನ್ನು ಪ್ರೀತಿಸುತ್ತಾರೆ. ಆಕೆಯನ್ನು ತಾನು ಪಡೆಯಬೇಕೆಂದು ಜಯ

ರಾಯು ಮಾಡಿದ ಸಂಚು ವಿಫಲವಾಗುತ್ತದೆ. ಕಮಲಾಕಾಂತ ಬೇರೊಂದು ಮದುವೆ ಯಾದಾಗ ವಿದ್ಯಾಕಲಾಸಂಪನ್ನಳಾದ ದೇವಯಾನಿ ಅವಿವಾಹಿತಳಾಗಿಯೇ ಉಳಿಯು ತ್ತಾಳೆ. ಕಮಲಾಕಾಂತನ ಮಗ ರಮಾಕಾಂತ, ಜಯರಾಯನ ಮಗಳಾದ ಇಂದಿರೆ ಯನ್ನು ಪ್ರೀತಿಸುತ್ತಾನೆ. ಜಯರಾಯನಿಗೆ ಅದು ಒಪ್ಪಿಗೆ ಇರಲಿಲ್ಲ. ಬಾಪ್ಕಳ ಪಂತನೆಂಬ ಡಾಕ್ಟರನ ಸೋದರಿ ಮೂರು ಸಲ ವಿಧವೆಯಾಗಿ ಸಮಾಜ ಕಾರ್ಯದಲ್ಲಿ ತೊಡಗಿದ್ದ ಪಂಡಿತೆ ತನ್ನ ಶಿಷ್ಯೆ ಕಮಲಳನ್ನು ರಮಾಕಾಂತನಿಗೆ ಗಂಟುಹಾಕಬೇಕೆಂದಿರುತ್ತಾಳೆ. ಕೊನೆಯಲ್ಲಿ ಸಿರಿವಂತ ಶ್ರೀಕಂಠನಿಗೆ ತನ್ನನ್ನು ಕೊಡಬೇಕೆಂದಿದ್ದ ತಂದೆಯ ಅಪೇಕ್ಷೆಯನ್ನು ನೇರವಾಗಿ ತಿರಸ್ಕರಿಸಿ ಇಂದಿರೆ ರಮಾ ಕಾಂತನನ್ನು ಮದುವೆಯಾಗುತ್ತಾಳೆ.

"ಬಾಲ್ಯದಲ್ಲಿಯೇ ಕನ್ನಿಕೆಯರ ವಿವಾಹವು ಉಚಿತವಾದದ್ದಲ್ಲ" ಎಂದೂ, ವಿಧವೆಯರ ಪುನರ್ವಿವಾಹಕ್ಕೆ ಶಾಸ್ತ್ರಗಳೊಪ್ಪುತ್ತವೆಂದೂ, ಕೆಲವು ಸ್ಥಿತಿಯಲ್ಲಿದ್ದ ವಿಧವೆಯರ ಪುನರ್ವಿವಾಹವನ್ನು ಮಾಡಲೇಬೇಕಂತಲೂ ಸಾಮಾಜಿಕ ಸುಧಾ ರಣೇಚ್ಛುಗಳು ಪ್ರತಿಪಾದಿಸುತ್ತಾರೆ" ಎಂದು ಲೇಖಕರು ತಮ್ಮ "ಪ್ರಾಥಮಿಕ ನಿರೂಪಣ"ದಲ್ಲಿ ತಿಳಿಸುತ್ತಾರೆ. "ಪುನರ್ವಿವಾಹವು ಕರ್ತವ್ಯವಿರಲಿ, ಇರದೇ ಇರಲಿ, ವಿಧವೆಯರ ವಪನ ಅನಾಚಾರವಾದದ್ದು...ಈ ಪರಿಸ್ಥಿತಿಗೆ ನಮ್ಮ ಸಮಾಜವು ಬಂದ ಬಳಿಕ ನಮ್ಮ ಕಥಾನಕವು ಪ್ರಾರಂಭವಾಗುತ್ತದೆ." ಅಂಥ ಸುಧಾರಣೆಗಳು ಅಗತ್ಯ, ಅಪೇಕ್ಷಣೀಯ, ಎಂದು ಒಪ್ಪಿಕೊಂಡೇ ಲೇಖಕರು ಸಂಯೋಜಿಸಿದ ಕಥೆಯು ಸನ್ನಿವೇಶ ಮಾಲಿಕೆ ಮುಂದೆ ನಡೆಯಬಹುದಾದ್ದರ ಒಂದು ಮುನ್ನೋಟದಂತಿದೆ. ಇಂಥ ವಿಚಾರಗಳನ್ನು ಪ್ರಚುರ ಪಡಿಸುವುದು ಕಾದಂಬರಿಯ ಒಂದು ಉದ್ದೇಶವಾದರೆ "ನಮ್ಮ ಮಾತೃಭಾಷೆಯ ದೀನವಾದ ಅವಸ್ಥೆಯನ್ನು ದೂರಮಾಡು"ವುದು ಇನ್ನೊಂದು ಉದ್ದೇಶವಾಗಿದೆ. "ಕನ್ನಡ ಭಾಷೆಯು ನಿಜವಾಗಿ ಕರ್ಕಶವಾದದ್ದಲ್ಲ. ಚಿತ್ರಕಲೆಯನ್ನರಿಯದವನು ಸಿಕ್ಕ ಸಿಕ್ಕ ಬಣ್ಣಗಳನ್ನು ತೆಗೆದುಕೊಂಡು ಮನಸ್ಸಿಗೆ ಬಂದಂತೆ ರಬಟೆಯಾಗಿ ಬಡಿದುಬಿಟ್ಟು ತಾನೊಳ್ಳೇ ಕಸ್ತು ಮಾಡಿದೆನೆಂದು ತನ್ನನ್ನು ತಾನೇ ಕೊಂಡಾಡಿಕೊಳ್ಳುವಂತೆ ಕೇವಲ ಶಬ್ದಾಲಂಕಾರದ ಕಿಟಿಕಿಟಿಹಚ್ಚಿದ್ದಲ್ಲವೆ ಕರ್ಣಕಟುಗಳಾದ ಸಂಧಿಸಮಾಸಗಳನ್ನು ಮಾಡಿಯೂ ಅಪ್ರಸಿದ್ಧವಾದ ಶಬ್ದಗಳನ್ನು ಜೋಡಿಸಿಯೂ ಹಳಗನ್ನಡ ಶಬ್ದ ಗಳನ್ನು ಶ್ರಮಬಟ್ಟು ಹುಡುಕಿ ತಂದು ಹಾಕಿಯೂ ಕನ್ನಡ ಭಾಷಾಸುಂದರಿಗೆ ಹುಚ್ಚಿಯ ಸ್ವರೂಪವನ್ನು ತಂದಿಟ್ಟಿರುತ್ತಾರೆ." ಸರಿಪಡಿಸಬೇಕಾಗಿದ್ದ ಸಾಮಾ

ಜಿಕ ಜೀವನದಲ್ಲಿಯ ಸಮಸ್ಯೆಗಳೊಡನೆ ಅವನ್ನು ಕುರಿತು ಬರೆಯಬೇಕೆಂದವ, ಸರಳ ಗದ್ಯದ ಭಾಷೆಯನ್ನೂ ರೂಢಿಸಿಕೊಳ್ಳಬೇಕಾಗಿತ್ತೆನ್ನುವುದನ್ನು, ಅಂಥ ಪ್ರಯತ್ನವನ್ನು ವಾಸುದೇವಾಚಾರ್ಯರು ಸಫಲವಾಗಿ ಮಾಡಿದರೆನ್ನುವುದನ್ನು ಅವರ ಕಾದಂಬರಿಯೇ ಹೇಳುತ್ತದೆ.

ಯಾವ ಸಾಮಾಜಿಕ ಸಮಸ್ಯೆಯ ಗೊಡವೆಗೂ ಹೋಗದೆ ಸಮಕಾಲೀನ ಜೀವನದ ಒಂದು ಚಿತ್ರವನ್ನು ಪುಟ್ಟಣ್ಣನವರ "ಮಾಡಿದ್ದುಣ್ಣೋ ಮಹಾರಾಯ" ಕಾದಂಬರಿ ಒದಗಿಸುತ್ತದೆ. ರಾಜಾಶ್ರಯದಲ್ಲಿಯ ಸಾಂಬಶಾಸ್ತ್ರಿಗಳ ಸೋದರಳಿಯ ಸದಾಶಿವದೀಕ್ಷಿತ ವಿದ್ಯಾವಿನಯಸಂಪನ್ನ. ಮೊದಲ ಹೆಂಡತಿ ತೀರಿದಾಗ ಸಂಜವಾಡಿಯ ನೀಲಕಂಠ ಜೋಯಿಸರ ಮಗಳನ್ನು ಮದುವೆಯಾಗಿ (ಅವರ ಮಗ ಇಲ್ಲಾದ್ದರಿಂದ) ಅವರ ಮನೆತನದ ಉಸ್ತುವಾರಿಯನ್ನು ನೋಡಿಕೊಳ್ಳುತ್ತ ಅಲ್ಲಿಯೇ ನೆಲೆಸುತ್ತಾನೆ. ವಿದ್ಯಾರ್ಥಿಗಳನ್ನು ಹಿಂಸಿಸುತ್ತಿದ್ದ ನಾರಪ್ಪಯ್ಯನೆಂಬ ಶಿಕ್ಷಕನನ್ನು ಅವರಿಂದ ಪಾರು ಮಾಡಿದರೂ ಕೃತಘ್ನನಾದ ಆತ ಊರಲ್ಲಿಯ ಲಕ್ಷ್ಮೀದೇವಾಲಯದ ಪೂಜಾರಿಯಾಗಿದ್ದರೂ ಮಂತ್ರ ಮಾಟ ಕಳ್ಳತನಗಳಲ್ಲಿ ತೊಡಗಿರುತ್ತಿದ್ದ ಸಿದ್ಧನ ಜೊತೆ ಸೇರಿ ಸದಾಶಿವನ ತಬ್ಬಲಿ ಮಗುವನ್ನು ಮದುವೆಯಾಗಿ ಬಂದಿದ್ದ ಸೀತಮ್ಮನ ಬಗೆಯಲ್ಲಿ ಆತ ಇರಿಸಿಕೊಂಡಿದ್ದ ಅಪೇಕ್ಷೆಯನ್ನು ಉತ್ತೇಜಿಸುತ್ತಾನೆ. ಸೀತೆ ಒಲಿಯದಿದ್ದಾಗ ಸಿದ್ಧನ ಮಂತ್ರಮಾಟಗಳಿಂದ ನಿಶ್ಚೇಷ್ಟಳಾಗಿದ್ದ ಆಕೆಯನ್ನು ಮೃತಳೆಂದು ಭಾವಿಸಿ ಚಿತೆ ಉರಿಯುವ ಮೊದಲೇ ಹಿಂದಿರುಗುತ್ತಾರೆ. ಅದೇ ದಾರಿಯಿಂದ ಬರುತ್ತಿದ್ದ ಇನ್ನೊಬ್ಬ ಮಂತ್ರವಾದಿ ಆಕೆಯನ್ನು ಉಳಿಸುತ್ತಾನೆ. ಸಿದ್ಧನ ಆಟ ಬಯಲಾಗುತ್ತದೆಯಲ್ಲದೆ ಪೋಲೀಸರು ಬಂದು ಕಳ್ಳತನವೆಲ್ಲವನ್ನು ಪತ್ತೆಮಾಡಿದಾಗ ಕೆಡಕಿನಲ್ಲಿ ತೊಡಗಿದ್ದವರೆಲ್ಲರಿಗೂ ತಕ್ಕ ಶಾಸ್ತಿಯಾಗುತ್ತದೆ. ಸದಾಶಿವ ಹೆಂಡತಿ ಸೊಸೆಯೊಂದಿಗೆ ಮೈಸೂರಿಗೆ ಹಿಂದಿರುಗುತ್ತಾನೆ. ಕಾದಂಬರಿಯ ಹೆಸರೇ ಹೇಳುವಂತೆ ಕೆಟ್ಟದ್ದಕ್ಕೆ ಕೆಟ್ಟ ಫಲ ಎಂಬ ಮಾತಿಗೆ ದೃಷ್ಟಾಂತವೆಂಬಂತೆ ಕಥೆಯ ಯೋಜನೆಯನ್ನು ಮಾಡಲಾಗಿದೆ. ಘಟನೆಗಳು, ವಿವರಗಳು, ಉಪಕಥೆಗಳು ಕಥಾಯೋಜನೆಯ ಏಕತೆಗೆ ಭಂಗತರುವಂಥವಾದರೂ ಅವೆಲ್ಲವನ್ನೂ ಹೇಳುವಾಗಿನ ಭಾಷೆಯ ಸಹಜವಾದ ಸೊಗಸು ಎಲ್ಲವನ್ನೂ ಮರೆಯಿಸುತ್ತದೆ. ಜನಸಾಮಾನ್ಯರ ಆಡುಮಾತಿನ ಮೋಡಿ ಕಾದಂಬರಿಯುದ್ದಕ್ಕೂ ಹರಡಿಕೊಂಡು ಕಥಾನಕವನ್ನು ಹೃದ್ಯವಾಗಿಸುತ್ತದೆ.

೬

ಈ ಕೆಲವು ಮೊದಲ ಕೃತಿಗಳನ್ನು ಪರಿಶೀಲಿಸಿದಾಗ ವಿಷಯದ ಆಯ್ಕೆಯಲ್ಲಿ, ನಿರೂಪಣದ ವಿಧಾನದಲ್ಲಿ, ಹಾಗೂ ಅವೆರಡರ ಮೂಲಕ ಸಾಧಿಸಬೇಕೆಂದ ಉದ್ದೇಶದಲ್ಲಿ ಪರಿವರ್ತನೆಯಾದದ್ದು ಕಂಡುಬರುತ್ತದೆ. ಈ ಪರಿವರ್ತನೆಯ ಮೂಲಕವೇ ಕಾದಂಬರಿ ಹೊಸ ದಾರಿಗಳನ್ನು ಹುಡುಕಿಕೊಂಡು, ಬೆಳವಣಿಗೆಯ ಹೊಸ ಸಾಧ್ಯತೆಗಳನ್ನು ಕಂಡುಕೊಳ್ಳುವಂತಾಯಿತು. ವಿಷಯದ ಆಯ್ಕೆಯಲ್ಲಿ ಅದ್ಭುತರಮ್ಯ ಕಥಾನಕಗಳ ರೀತಿಯನ್ನು ಬಿಟ್ಟುಕೊಟ್ಟು ಆದುವರೆಗೆ ನಿತ್ಯಜೀವನದಿಂದ ದೂರವಾಗಿದ್ದ, ಕಲ್ಪನಾರಾಜ್ಯಕ್ಕೆ ಸೇರಿದ ಘಟನೆಗಳನ್ನು ಬದಿಗಿರಿಸಿ, ನಿತ್ಯಜೀವನಕ್ಕೆ ಹತ್ತಿರವಾದ, ಅಸಂಭಾವ್ಯವಲ್ಲದ ಸಂಗತಿಗಳನ್ನು ಆಯ್ದುಕೊಳ್ಳುವುದರಲ್ಲಿ ಹೊಸ ದೃಷ್ಟಿ ಸ್ಪಷ್ಟವಾಗಿ ಗೋಚರಿಸುತ್ತದೆ. ಅದುವರೆಗೆ ಮನೋರಂಜನೆಯ ಸಾಧನೆಗಾಗಿ ಜೀವನವಿಮುಖವಾಗಿದ್ದ ಕಾದಂಬರಿಕಾರನ ದೃಷ್ಟಿ ಜೀವನಕ್ಕೆ ಅಭಿಮುಖವಾಗಿ ಕೆಲಸಮಾಡತೊಡಗುತ್ತದೆ. ಅದರ ಮೂಲಕವೇ ಮನೋರಂಜನೆಯನ್ನು ಸಾಧಿಸಬಲ್ಲದು ಮಾತ್ರವಲ್ಲದೆ ಅಂಥ ರಂಜನೆ ಹೆಚ್ಚು ಅರ್ಥಯುತವಾದದ್ದು, ಅದನ್ನು ಕುರಿತು ಯೋಚನೆಗೆ ತೊಡಗಿಸುವಂಥದಾದ್ದರಿಂದ ಒಂದಿಲ್ಲೊಂದು ರೀತಿಯಲ್ಲಿ ಜೀವನಕ್ಕೆ ಉಪಕಾರಿಯಾಗಬಲ್ಲದ್ದು ಎನ್ನುವುದನ್ನು ತೋರಿಸಿಕೊಟ್ಟಿತು. ಎರಡನೆಯದಾಗಿ, ನಿರೂಪಣೆಯ ವಿಧಾನದಲ್ಲಿ ಪಾಶ್ಚಾತ್ಯ ಕಾದಂಬರಿಯನ್ನೇ ಮೇಲ್ಪಂಕ್ತಿಯಾಗಿಸಿಕೊಂಡದ್ದರಿಂದ ಅಸಾಮಾನ್ಯ ಘಟನೆಗಳ ಅಸಂಭಾವ್ಯ ಯೋಜನೆಗಿಂತ ಸಾಮಾನ್ಯ ಘಟನೆಗಳ ಸಂಭಾವ್ಯವಾದ ಯೋಜನೆ ಹೆಚ್ಚು ಪರಿಣಾಮಕಾರಿಯಾಗಬಲ್ಲದು, ಓದುಗನನ್ನು ಸಹಜ ಸ್ವಾಭಾವಿಕತೆಯಿಂದ ಸೆರೆಹಿಡಿಯಬಲ್ಲದು ಎನ್ನುವುದನ್ನು ತೋರಿಸಿಕೊಟ್ಟರು. ಕಾದಂಬರಿಯನ್ನು ವಾಸ್ತವತೆಯ ಹೆದ್ದಾರಿಯಲ್ಲಿರಿಸಿ ಅದನ್ನು ಜೀವನ ಶೋಧಕ್ಕೆ ತೊಡಗಿಸಿದರು. ಮೂರನೆಯದಾಗಿ, ಮನೋರಂಜನೆಯ ಉದ್ದೇಶವನ್ನು ಕೈಬಿಡಲಿಲ್ಲವಾದರೂ ಅದರ ಜೊತೆಯಲ್ಲಿ ಕಾದಂಬರಿ ವಿಚಾರದ ಪ್ರಚೋದನೆಯನ್ನು ಮಾಡಬಲ್ಲದು, ನಿತ್ಯಜೀವನವನ್ನು ಕಾಡುವ, ಕೆಡಿಸುವ, ಕಷ್ಟಗಳಿಗೆ ಕಾರಣವಾಗುವ, ಕೊರತೆಗಳನ್ನು ಎತ್ತಿತೋರಿಸಿ, ಅವುಗಳತ್ತ ಓದುಗರ ಗಮನ ಹರಿಯುವಂತೆ ಮಾಡಬಲ್ಲದು ಎನ್ನುವುದನ್ನೂ ತೋರಿಸಿದರು. ಮನಸ್ಸಿನ ವಿಲಾಸದ ಜೊತೆಯಲ್ಲಿ ವಿಕಾಸವನ್ನು ಸಾಧಿಸಬಲ್ಲದು ಎನ್ನುವುದನ್ನು ತೋರಿಸಿಕೊಟ್ಟರು. ಅವರು ಒತ್ತಿಹೇಳುವ ಜೀವನಮೌಲ್ಯಗಳು ಇಂದಿನ ತಲೆಮಾರಿನವರಿಗೆ ಹಳೆಯದಾಗಿ ಕಂಡರೂ ಅವು ಹಿಂದೂಸಂಸ್ಕೃತಿಯ ಮೂಲಾಧಾರದ ಮೇಲೆ

ನೆಲೆನಿಂತುವಾಗಿವೆ ಎನ್ನುವುದನ್ನು ನಾವು ಮರೆಯುವಹಾಗಿಲ್ಲ, ಕೊನೆಯದಾಗಿ, ಕಥೆ ನಿತ್ಯಜೀವನಕ್ಕೆ ಹತ್ತಿರವಾದಾಗ ಅದನ್ನು ಹೇಳುವ ಭಾಷೆಯಾದರೂ ಜೀವನಕ್ಕೆ ಹತ್ತಿರದ್ದಾಗಿರಬೇಕು, ಸಾಮಾನ್ಯ ಭಾವನೆಗಳನ್ನು ಸಾಮಾನ್ಯನಿಗೂ ಅರ್ಥವಾಗುವಂತೆ ಹೇಳುವ ಸಾಮರ್ಥ್ಯವನ್ನು ಪಡೆದಿರಬೇಕು ಎಂಬ ಅಭಿಲಾಷೆ, ಪ್ರಯತ್ನ, ಆತುರ ಕೂಡ ಈ ಕಾದಂಬರಿಕಾರರಲ್ಲಿ ಎದ್ದು ಕಾಣುತ್ತದೆ, ಒಂದು ಕಡೆ ನಮ್ಮ ಸಾಂಸ್ಕೃತಿಕ ಪರಂಪರೆಯ ಮೌಲ್ಯಗಳನ್ನು ಒತ್ತಿಹೇಳಿ, ಸಮಕಾಲೀನ ಜೀವನದಲ್ಲಿಯ ಕೊರತೆಗಳನ್ನು ಬಯಲಿಗೆಳೆದು, ಭಾಷೆಯ ಶಕ್ತಿಯುತವಾದ ಬೆಳವಣಿಗೆಯ ವಿಷಯದಲ್ಲಿ ಕಳಕಳಿಯನ್ನು ತೋರಿದ ಈ ಮೊದಲ ಕಾದಂಬರಿಕಾರರು ಮುಂದಿನ ಬೆಳವಣಿಗೆಗಳಿಗೆ ಗಟ್ಟಿಯಾಗಿ ಅಡಿಪಾಯ ಹಾಕಿದರು. ಹೊಸ ಸಾಧ್ಯತೆಗಳತ್ತ ಬೆರಳೆತ್ತಿ ಬೆಳೆಯುವ ದಾರಿಯನ್ನು ತೋರಿಸಿದರು.

೧೦

ಕೆರೂರು ವಾಸುದೇವಾಚಾರ್ಯರದು ಶಾಸ್ತ್ರವಿದ್ಯಾಸಂಪನ್ನವಾದ ವೈದಿಕ ಮನೆತನ, ಮೂಲತಃ ಬಾಗಿಲುಕೋಟೆಯ ಹತ್ತಿರದ ಕೆರೂರು ಗ್ರಾಮದವರಾದರೂ ವಾಸುದೇವಾಚಾರ್ಯರ ಅಜ್ಜಂದಿರಾದ ಯಲಗುರ್ದಾಚಾರ್ಯರು ತಮ್ಮ ಆರು ಮಂದಿ ಗಂಡುಮಕ್ಕಳ ಲೌಕಿಕ ವಿದ್ಯಾಭ್ಯಾಸದ ಅನುಕೂಲಕ್ಕಾಗಿ ಬಾಗಿಲುಕೋಟೆಯಲ್ಲಿ ಬಂದು ನೆಲೆಸಿದರು. ಸಾಂಪ್ರದಾಯಿಕ ಸಂಸ್ಕೃತ ಪಾಂಡಿತ್ಯಕ್ಕೆ ಹೆಸರಾದ ಅವರ ಮನೆತನದಲ್ಲಿಯ ಯಲಗುರ್ದಾಚಾರ್ಯರ ಎರಡನೆಯ ಚಿರಂಜೀವರಾದ ಸ್ವಾಮಿರಾಯಾಚಾರ್ಯರು ನ್ಯಾಯ-ವ್ಯಾಕರಣಾದಿ ಷಟ್‌ಶಾಸ್ತ್ರಗಳಲ್ಲಿ ಅದ್ವಿತೀಯ ಪಂಡಿತರೆಂದು ಭಾರತದಾದ್ಯಂತವೂ ಹೆಸರುಪಡೆದವರಾಗಿದ್ದರು. ವಾಸುದೇವಾಚಾರ್ಯರಲ್ಲಿ ನಾವು ಗುರುತಿಸಬಹುದಾದ ಸಂಸ್ಕೃತದ ಬಗೆಯಲ್ಲಿಯ ಆಳವಾದ ಶ್ರದ್ಧೆ ಪ್ರೀತಿಗಳು ಹಿರಿಯರಿಂದ ಅನೂಚಾನವಾಗಿ ಇಳಿದು ಬೆಳೆದು ಬಂದಿದ್ದವು. ಯಲಗುರ್ದಾಚಾರ್ಯರ ಹಿರಿಯ ಮಕ್ಕಳಾದ ಶ್ರೀನಿವಾಸಾಚಾರ್ಯರು ವಾಸುದೇವಾಚಾರ್ಯರ ತಂದೆ. ವಾಸುದೇವಾಚಾರ್ಯರ ಜನನವಾದದ್ದು ಬಾಗಿಲುಕೋಟೆಯ ಹಳೆಯ ಭಾಗವಾದ ಕಿಲ್ಲೆಯಲ್ಲಿ, ೧೮೬೬ರ ಅಕ್ಟೋಬರ್ ತಿಂಗಳ ೧೫ನೆಯ ದಿನಾಂಕದಂದು.

ಆಚಾರ್ಯರ ಬಾಲ್ಯ ಬಾಗಿಲುಕೋಟೆಯಲ್ಲಿ. ಅವರ ತಾಯಿಯ ತವರೂರಾದ ತೋಳಮಟ್ಟಿಯಲ್ಲಿ ಹಾಗೂ ಮನೆತನದ ಮೂಲ ಗ್ರಾಮವಾದ ಕೆರೂರಿನಲ್ಲಿ

ಕಳೆಯಿತು. ಅವರ ಅನೇಕ ಬರಹಗಳಲ್ಲಿ ಈ ದೇಶಭಾಗದ ವರ್ಣನೆ ಬರುತ್ತದೆ. ಮುಲ್ಕೀ ಪರೀಕ್ಷೆಯುವರೆಗಿನ ಪ್ರಾಥಮಿಕ ಶಿಕ್ಷಣವನ್ನು ಬಾಗಿಲುಕೋಟೆಯಲ್ಲಿ ಪೂರೈಸಿಕೊಂಡು ಇಂಗ್ಲೀಷ್ ವಿದ್ಯಾಭ್ಯಾಸಕ್ಕಾಗಿ ತಮ್ಮ ಕಕ್ಕಂದಿರಾದ ಬಾಬಾಚಾರ್ಯ ಕೆರೂರು ಅವರು ಡೆಪ್ಯುಟಿ ಎಜುಕೇಶನ್ ಇನ್ಸ್‌ಪೆಕ್ಟರಾಗಿದ್ದ ಬೆಳಗಾಂವಿಗೆ ತೆರಳಿದರು. ಅವರಿಗೆ ಧಾರವಾಡಕ್ಕೆ ವರ್ಗವಾಗಿ ಹೋಗಿದ್ದರಿಂದ ವಾಸುದೇವಾಚಾರ್ಯರು ಅಲ್ಲಿಂದಲೇ ಮುಂಬಯಿ ವಿಶ್ವವಿದ್ಯಾನಿಲಯದ ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ೧೮೮೭ರಲ್ಲಿ ಪಾಸಾದರು. ಕಾಲೇಜು ವ್ಯಾಸಂಗಕ್ಕಾಗಿ ಪುಣೆಗೆ ಹೋಗಿ ಎರಡುವರ್ಷ ಓದನ್ನು ಮುಂದುವರಿಸಿದರಾದರೂ ಕಾರಣಾಂತರಗಳಿಂದ ಕಾಲೇಜು ವ್ಯಾಸಂಗವನ್ನು ಮುಗಿಸಲಾಗಲಿಲ್ಲ. ಪುಣೆಯಲ್ಲಿ ಲ್ಯಾಂಡ್ ರೆಕಾರ್ಡ್ಸ್ ಇಲಾಖೆಯ ಕೆಲಸದಲ್ಲಿದ್ದ ಇನ್ನೊಬ್ಬ ಕಕ್ಕಂದಿರಾದ ಕೃಷ್ಣಾಚಾರ್ಯರೊಂದಿಗೆ ಇರುತ್ತಿದ್ದರೂ ಪರೀಕ್ಷೆಗೆ ಸಂಬಂಧಿಸಿದಂತೆ ನಿಯಮಿತವಾದ ಓದಿಗಿಂತಲೂ ಹೆಚ್ಚಾಗಿ ಬೇರೆ ವಿಷಯಗಳ ವ್ಯಾಸಂಗ ಹಾಗೂ ಅಲ್ಲಿಯ ವಾತಾವರಣದ ಅಂಗವೆಂಬಂತಿದ್ದ ಹೊಸ ಸಾಮಾಜಿಕ ಹಾಗೂ ರಾಜಕೀಯ ವಿಚಾರಗಳ ಕ್ಷೋಭೆ ಅವರ ಆಸಕ್ತಿಯನ್ನು ಸೆಳೆದುವೆಂದು ಕಾಣುತ್ತದೆ. ಮರಳಿ ಬಾಗಿಲುಕೋಟೆಗೆ ಬಂದು ಕಾನೂನು ವ್ಯಾಸಂಗದಲ್ಲಿ ತೊಡಗಿದರು. ೧೮೯೫ರಲ್ಲಿ ನ್ಯಾಯವಾದಿಯ ಸನದನ್ನು ಪಡೆದು ಪ್ರತಿಷ್ಠಿತರ ವೃತ್ತಿ ಎನಿಸಿಕೊಂಡಿದ್ದ ವಕೀಲಿಯನ್ನು ಪ್ರಾರಂಭಿಸಿದರು.

ಆದರೆ ಆ ವೃತ್ತಿಯಲ್ಲಿ ಅವರ ಮನಸ್ಸು ನಿಲ್ಲಲಿಲ್ಲ. ಸ್ವಂತದ ಸಂಪಾದನೆಗಿಂತ ಸಮಾಜಕ್ಕೆ ಉಪಯುಕ್ತವಾದ ಕೆಲಸದಲ್ಲಿ ತೊಡಗಿರಬೇಕೆಂಬ ಮನಸ್ಸಿನ ಅವರ ಒಲವು ಕಾರ್ಯಕ್ಷೇತ್ರವನ್ನು ವಿಸ್ತರಿಸುವಂತೆ ಮಾಡಿತೆಂದು ಕಾಣುತ್ತದೆ. ಈ ಅವಧಿಯಲ್ಲಿ ಅವರು ಬಾಗಿಲುಕೋಟೆಯ ನಗರಪಾಲಕೆಯ ಶಾಲಾ ಮಂಡಲಿಯ ಕಾರ್ಯಾಧ್ಯಕ್ಷರಾಗಿ ಕೆಲಸಮಾಡಿದರು. ಬರವಣಿಗೆಯತ್ತ ಅವರು ಒಲಿದದ್ದು ಹೇಗೆ ಅಥವಾ ಎಂದಿನಿಂದ ಎನ್ನುವುದರ ವಿಷಯದಲ್ಲಿ ವಿವರಗಳು ಸಿಕ್ಕುವುದಿಲ್ಲ. ಮನಸ್ಸಿದ್ದೋ ಇಲ್ಲದೆಯೋ ಅಥವಾ ಸಮಾಜಸೇವೆಯ ಅನುಕೂಲವಿರುವುದು ವಕೀಲಿಯ ವೃತ್ತಿಯಲ್ಲಿಯೇ ಎಂದುಕೊಂಡೋ ಆ ವೃತ್ತಿಯನ್ನು ನಡೆಸಿಕೊಂಡು ಹೋಗುತ್ತಿರುವಾಗಲೇ ಅವರು ಬರವಣಿಗೆಯತ್ತ ಹೊರಳಿ ಅವರ ಕಲೆಯನ್ನು ರೂಢಿಸಿಕೊಂಡರೆಂದು ಊಹಿಸಬಹುದಾಗಿದೆ. ಸಾಹಿತ್ಯ ಪ್ರಪಂಚದಲ್ಲಿ ಅವರು ಸಿದ್ಧಹಸ್ತರಾದ ಲೇಖಕರಾಗಿಯೇ ಇದ್ದಕ್ಕಿದ್ದಹಾಗೆ ಕಾಣಿಸಿಕೊಳ್ಳುತ್ತಾರೆ. ಅವರು ಬರೆದ ಮೊದಲ ಕೃತಿಯಾದರೂ ಅವರ ಉತ್ತಮ ಕೃತಿ

ಯಾಗಿಯೇ ಉಳಿದ "ಇಂದಿರಾ" ಕಾದಂಬರಿ ೧೯೦೮ರಲ್ಲಿ ವಿಜಾಪುರದಲ್ಲಿ ಅಚ್ಚಾಗಿ ಪ್ರಕಟವಾಯಿತು. ಮುಂದೆ ಅವರ ಬದುಕು ಬರವಣಿಗೆಯ ಮೀಸಲಾಯಿತು. ವಕೀಲವೃತ್ತಿಯಲ್ಲಿಯ ಅವರ ಸಂಪಾದನೆ ಚೆನ್ನಾಗಿಯೇ ಇದ್ದಿತಾದರೂ ಅದನ್ನು ಬಿಟ್ಟು ಬರವಣಿಗೆಯ ಮೂಲಕ ಅನಿಶ್ಚಿತವಾದ ನಿರ್ವಾಹ ಮಾರ್ಗವನ್ನು ಅವರು ಒಪ್ಪಿ ಅಪ್ಪಿಕೊಂಡದ್ದನ್ನು ನೆನೆದರೆ ಬರೆಯುತ್ತಿರಬೇಕೆಂಬ ಅವರ ಸಮಾಜಾಭಿಮುಖವಾದ ಒಳಒತ್ತಡ ಎಷ್ಟು ಬಲವತ್ತರವಾಗಿದ್ದಿರಬೇಕೆನ್ನುವುದನ್ನು ಊಹಿಸಬಹುದು. ಅಂದಿನ ಸಂದರ್ಭದಲ್ಲಿ ಬರವಣಿಗೆಯನ್ನೇ ವ್ಯವಸಾಯವನ್ನಾಗಿಸಿಕೊಂಡ ಅವರ ಪ್ರೇರಣೆಯನ್ನು ಒಂದು ಸಾಹಸವೆಂದೇ ಹೇಳಬೇಕಾಗುತ್ತದೆ.

ತಮ್ಮ ಮೊದಲ ಸ್ವತಂತ್ರ ಕೃತಿಯಾದ "ಇಂದಿರಾ" ಕಾದಂಬರಿಯನ್ನು ಆಚಾರ್ಯರು ಬಾಗಿಲುಕೋಟೆಯಲ್ಲಿ ಬರೆದರು. ನಡು ನಡುವೆ ವಿಜಾಪುರದಲ್ಲಿಯೂ ಇರುತ್ತಿದ್ದ ಈ ಅವಧಿಯಲ್ಲಿ ಅವರು ತಮ್ಮ ಮೊದಲ ನಾಟಕವಾದ "ನಲದಮಯಂತಿ" ಎಂಬ ಹೆಸರಿನ "ಸಾಗ್ರಸಂಗೀತ" ಸ್ವತಂತ್ರ ನಾಟಕವನ್ನು ಬರೆದರು, ಬರೆಯಬೇಕೆಂಬ ಲವಲವಿಕೆ ಹಾಗೂ ಸಮಾಜ ಹಿತಾಭಿಮುಖವಾದ ಅವರ ದೃಷ್ಟಿ ಅವರನ್ನು ಪತ್ರಿಕೋದ್ಯಮದತ್ತ ನಡೆಸಿದವು. ಅದಕ್ಕಾಗಿ ಅವರು ೧೯೧೫ರಲ್ಲಿ ಧಾರವಾಡದಲ್ಲಿ ಬಂದು ನೆಲಸಿ ಅಲ್ಲಿಯ "ಸಚಿತ್ರಭಾರತ"ವೆಂಬ ಮಾಸಪತ್ರಿಕೆಯ ಸಂಪಾದಕರೆಂದು ಕೆಲಸ ಮಾಡಿದರು. ೧೯೧೬–೧೭ರಲ್ಲಿ ಮಾಸಪತ್ರಿಕೆಯ ಸಂಪಾದಕರಾಗಿದ್ದಂತೆಯೇ ಏಪ್ರಿಲ್ ೧೯೧೭ರಲ್ಲಿ "ಶುಭೋದಯ" ಎಂಬ ವಾರಪತ್ರಿಕೆಯನ್ನು ಪ್ರಾರಂಭಿಸಿದರು. "ಸಚಿತ್ರಭಾರತ" ಸಾಹಿತ್ಯಕ್ಕೆ ಮೀಸಲಾಗಿದ್ದಂತೆ "ಶುಭೋದಯ" ಸಾಮಾಜಿಕ ಹಾಗೂ ರಾಜಕೀಯ ವಿಚಾರಗಳಿಗೆ ಮೀಸಲಾಗಿದ್ದಿತು. ವಾರಪತ್ರಿಕೆಯಲ್ಲಿಯ ಎಲ್ಲ ಬರಹಗಳನ್ನು ವಾಸುದೇವಾಚಾರ್ಯರೇ ಬರೆಯುತ್ತಿದ್ದರು. ಈ ಎರಡು ಪತ್ರಿಕೆಗಳಲ್ಲಿಯೇ ಅವರ ಬಹುಮುಖವಾದ, ಸಾಹಿತ್ಯ ಹಾಗೂ ಸಾಹಿತ್ಯೇತರ ಬರವಣಿಗೆ ಅವರ ಬದುಕಿನ ಕೊನೆಯ ಆರು ವರ್ಷಗಳಲ್ಲಿ ಪ್ರಕಟವಾಯಿತು. ತಮ್ಮ "ಶುಭೋದಯ" ಪತ್ರಿಕೆಯ ಧ್ಯೇಯವಾಕ್ಯವನ್ನಾಗಿರಿಸಿಕೊಂಡ ಪದ್ಯದಲ್ಲಿ ಅವರ ಆಸಕ್ತಿಗಳ ವೈವಿಧ್ಯವನ್ನು ಮತ್ತು ಅವರ ಬರವಣಿಗೆಯ ಹಿಂದಿನ ಪ್ರೇರಣೆಯ ಸ್ವರೂಪವನ್ನು ನಾವು ಗುರುತಿಸಬಹುದಾಗಿದೆ, ಅವರ ವಾರಪತ್ರಿಕೆಯ ಧ್ಯೇಯವಾಕ್ಯ ಹೀಗಿತ್ತು—

"ವೀರ ವಿಚಾರಯುಕ್ತ ವರ ಧಾರ್ಮಿಕ ನೈತಿಕ ರಾಜಕೀಯ ಸಾಂ
ಸಾರಿಕ ವಿದ್ಯೆಯುದ್ಯಮ ಕಲಾಕೃಷಿಕರ್ಮ ಸುಲೇಖಮಾಲೆಯಿಂ
ಚಾರುಚರಿತ್ರ ಸಂಪದಭಿವೃದ್ಧಿ ಸಮಾಜಹಿತ ಪ್ರಬಂಧದಿಂ
ಭಾರತಸಾರ ಕಲ್ಪಲತೆಯಂತೆಸೆಯುತ್ತಿಹುದೀ ಶುಭೋದಯಂ"

೧೧

ವಾಸುದೇವಾಚಾರ್ಯರಲ್ಲಿಯ ಬರಹಗಾರ ರೂಪುಗೊಳ್ಳುತ್ತಿದ್ದ ಕಾಲ ಮತ್ತು ಸಿದ್ಧಹಸ್ತರಾದ ಲೇಖಕರೆಂದು ಕಾಣಿಸಿಕೊಂಡು ತಮ್ಮ ಸಾಹಿತ್ಯ ಕೃತಿಗಳನ್ನು ಮತ್ತು ರಾಜಕೀಯ ಹಾಗೂ ಸಾಮಾಜಿಕ ವಿಷಯಗಳಿಗೆ ಸಂಬಂಧಿಸಿದ ಬಿಡಿ ಲೇಖನಗಳನ್ನು ಬರೆಯುತ್ತಲೇ ಇದ್ದ ಕಾಲ—ಅಂದರೆ ಹತ್ತೊಂಬತ್ತನೆಯ ಶತಮಾನದ ಕೊನೆಯ ಮತ್ತು ಇಪ್ಪತ್ತನೆಯ ಶತಮಾನದ ಮೊದಲಿನ ಎರಡು ದಶಕಗಳ ಕಾಲಾವಧಿ—ಆಧುನಿಕ ಭಾರತದ ಚರಿತ್ರೆಯಲ್ಲಿ ಅತ್ಯಂತ ಮಹತ್ವದ ಸಂಧಿಕಾಲವಾಗಿತ್ತು. ಸ್ವದೇಶಾಭಿಮಾನ ಜಾಗೃತವಾಗಿ ರಾಜಕೀಯ ಚಳುವಳಿ ಚುರುಕುಗೊಳ್ಳುತ್ತಿದ್ದ ಕಾಲ ಅದಾಗಿದ್ದಿತು ಮಾತ್ರವಲ್ಲದೆ ಪಾಶ್ಚಾತ್ಯ ವಿಚಾರಗಳ ಪರಿಣಾಮವಾಗಿ ಸಾಮಾಜಿಕ ಜೀವನದಲ್ಲಿಯೂ ಬದಲಾವಣೆಯ ಧೋರಣೆಗಳು ಕಾಣಿಸಿಕೊಂಡ ಕಾಲವೂ ಅದಾಗಿತ್ತು. ಆ ಮೂರು ದಶಕಗಳಲ್ಲಿಯ ಮುಖ್ಯ ಘಟನೆಗಳನ್ನು ನೆನೆದರೆ ಸಾಕು. ಎಂಥ ಕ್ಷೋಭೆಯ, ಎಂಥ ಪರಿವರ್ತನೆಯ ಕಾಲಾವಧಿ ಅದಾಗಿತ್ತು ಎನ್ನುವುದು ಗೊತ್ತಾಗುತ್ತದೆ. ಲೋಕಮಾನ್ಯ ಟಿಳಕರ ವಿಚಾರಣೆ ಹಾಗೂ ಸೆರೆಮನೆಯ ವಾಸ, ಬಂಗಾಳದ ವಿಭಜನೆ, ಮೊದಲನೆಯ ಜಾಗತಿಕ ಯುದ್ಧ, ಗಾಂಧೀಜಿಯವರ ಚಂಪಾರಣ್ಯ ಸತ್ಯಾಗ್ರಹದ ಮೂಲಕ ರಾಜಕೀಯದಲ್ಲಿ ಅವತರಿಸಿದ ಅಸಹಕಾರದ ಹೊಸ ಧೋರಣೆ, ಜಾಲಿಯನವಾಲಾಬಾಗದ ದುರಂತ, ಮೋರ್ಲೆಮಿಂಟೊ ಹಾಗೂ ಚೆಮ್ಸಫೋರ್ಡ ರಾಜ್ಯಾಂಗಯೋಜನೆಗಳು, ಕೊನೆಗೆ ರೌಲಟ್ ಕಾಯಿದೆ ಮತ್ತು ಅದು ಪ್ರೇರಿಸಿದ ಚಳುವಳಿ ಎಂದು ಮುಂತಾಗಿ ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟ ವರ್ಷವರ್ಷವೂ ತೀವ್ರವಾಗುತ್ತ ನಡೆದಿತ್ತು. ಇದಕ್ಕೆ ಸರಿಸಮನಾಗಿ ಸಾಮಾಜಿಕ ಕ್ಷೇತ್ರದಲ್ಲಿ ಸ್ತ್ರೀಶಿಕ್ಷಣ, ವಿಧವಾ ಪುನರ್ವಿವಾಹ, ಸಾಂಪ್ರದಾಯಿಕ ಅಂಧಶ್ರದ್ಧೆಗಳ ಬಗೆಯಲ್ಲಿ ಅಸಹನೆ, ಅಸ್ಪೃಶ್ಯೋದ್ಧಾರ, ಎಂದು ಮುಂತಾಗಿ ಹೊಸ ವಿಚಾರಗಳ ಗಾಳಿ ತನ್ನ ಪ್ರಭಾವವನ್ನು ಬೀರಿ ವಾದವಿವಾದಗಳಿಗೆ ಎಡೆ ಮಾಡಿಕೊಟ್ಟಿತ್ತು. ಸಂಧಿಕಾಲದ ಈ ಎಲ್ಲ

ವಿಚಾರಕ್ಷೋಭೆ ಆಚಾರ್ಯರ ಸಾಹಿತ್ಯಕೃತಿಗಳಲ್ಲಿ ಅಪ್ರತ್ಯಕ್ಷವಾಗಿಯಾದರೆ ಅವರ ಪತ್ರಿಕಾಲೇಖನಗಳಲ್ಲಿ ಪ್ರತ್ಯಕ್ಷವಾಗಿ ತನ್ನ ಅಭಿವ್ಯಕ್ತಿಯನ್ನು ಪಡೆಯುತ್ತದೆ.

ವಾಸುದೇವಾಚಾರ್ಯರು ರಾಜಕೀಯದಲ್ಲಿ ಪ್ರತ್ಯಕ್ಷವಾಗಿ ಭಾಗವಹಿಸಲಿಲ್ಲವಾದರೂ ಸಮಕಾಲೀನ ರಾಜಕೀಯ ವಿದ್ಯಮಾನಗಳಲ್ಲಿಯ ಒಂದಂಶವನ್ನೂ ಬಿಡದೆ ಅವನ್ನು ಕುರಿತು ಸ್ವತಂತ್ರವಾಗಿ ಯೋಚನೆ ಮಾಡಿ ಜನಗಳಿಗೆ ತಿಳುವಳಿಕೆಯನ್ನು ತಂದುಕೊಡುವ ದೃಷ್ಟಿಯಿಂದ ಬರೆಯುತ್ತಿದ್ದರು. ರಾಜಕೀಯ ಧೋರಣೆಗಳಲ್ಲಿ ಅವರು ಲೋಕಮಾನ್ಯ ಟಿಳಕರ ಅನುಯಾಯಿಗಳು. ಅವರ ವಿಚಾರಗಳನ್ನು ಅನುಮೋದಿಸುತ್ತಿದ್ದರಲ್ಲದೆ ಅವರ ವಿಷಯದಲ್ಲಿ ಗಾಢ ಗೌರವಭಾವವುಳ್ಳವರಾಗಿದ್ದರು. ಅವರು ಬರೆದ "ಲೋಕಮಾನ್ಯ ಟಿಳಕರವರ ಚರಿತ್ರಸಾರವು" ಎಂಬ ಜೀವನಪರಿಚಯ ಗ್ರಂಥರೂಪದಲ್ಲಿ ಪ್ರಕಟವಾಗಿದ್ದಿತು (೧೯೨೦). ನಾಡಿನ ಮುನ್ನಡೆಗೆ ರಾಜಕೀಯ ಸ್ವಾತಂತ್ರ್ಯ ಮೊದಲ ಅಗತ್ಯ, ಸ್ವಾತಂತ್ರ್ಯ ಕೈಗೆ ಬಂದಾಗ ಆರ್ಥಿಕ ಹಾಗೂ ಸಾಮಾಜಿಕ ಸಮಸ್ಯೆಗಳು ತಮ್ಮ ಪರಿಹಾರವನ್ನು ತಾವಾಗಿಯೇ ಕಂಡುಕೊಳ್ಳುತ್ತವೆ; ಸ್ವರಾಜ್ಯ ಜನ್ಮಸಿದ್ಧವಾದ ಹಕ್ಕು; ಕೊಡದಿದ್ದರೆ ಕಸಿದುಕೊಳ್ಳುತ್ತೇವೆ, ಎನ್ನುವುದು ಟಿಳಕರ ಧೋರಣೆಯ ಮುಖ್ಯಾಂಶವಾಗಿತ್ತು. ಆಚಾರ್ಯರು ಈ ಧೋರಣೆಯನ್ನು ಪುರಸ್ಕರಿಸಿ ಬರೆಯುತ್ತಿದ್ದರಲ್ಲದೆ ಉದಾರಮತವಾದಿಗಳ ಮಂದಗತಿಯ ಸಹಕಾರಬುದ್ಧಿಯನ್ನು ಅವರು ತೀವ್ರವಾಗಿ ಖಂಡಿಸುತ್ತಿದ್ದರು.

ಸಾಮಾಜಿಕ ವಿಚಾರಗಳಲ್ಲಿ ಅವರ ದೃಷ್ಟಿ ಪ್ರಗತಿಪರವಾಗಿದ್ದರೂ ಭಾರತೀಯ ಸಂಸ್ಕೃತಿಯ ನೆಲಗಟ್ಟಿನ ಮೇಲೆಯೇ ಹೊಸ ಬಾಳು ರೂಪುಗೊಳ್ಳಬೇಕೆಂದು ವಾದಿಸುತ್ತಿದ್ದರು. ಹೊಸ ದೃಷ್ಟಿಯ ಪುರಸ್ಕರ್ತರ ಡಂಭಾಚಾರಗಳನ್ನು "ಇಂದಿರಾ" ಕಾದಂಬರಿಯಲ್ಲಿ ವ್ಯಂಗ್ಯ ವಿನೋದಕ್ಕೆ ಗುರಿಮಾಡಿದ್ದನ್ನು, ಹಾಗೆಯೇ ಅದೇ ವಿಚಾರಗಳು ಸುಸಂಸ್ಕೃತವಾದ ನಡೆನುಡಿಗಳಿಗೆ ಪ್ರೇರಣೆಗಳಾಗಿ ಹೇಗೆ ಸತ್ತ್ವಭಾವಗಳಾಗಿ ಕೆಲಸ ಮಾಡಬಲ್ಲವು ಎನ್ನುವುದಕ್ಕೆ ಅದೇ ಕಾದಂಬರಿಯಲ್ಲಿಯ ಮುಖ್ಯ ಪಾತ್ರಗಳು ಒದಗಿಸುವ ನಿದರ್ಶನಗಳನ್ನು ನೆನೆದಾಗ ಆಚಾರ್ಯರ ಪುರೋಗಾಮಿ ದೃಷ್ಟಿಯ ಗೊತ್ತುಗುರಿಗಳು ಎಂಥವಾಗಿದ್ದವು ಎನ್ನುವುದು ಸ್ಪಷ್ಟವಾಗುತ್ತದೆ. ರೂಢಸಂಪ್ರದಾಯಗಳ ಸಂಕೋಲೆಗಳಿಂದ ಬಿಡಿಸಿಕೊಂಡು ಹೊಸದಾಗಿ ರೂಪುಗೊಳ್ಳಬೇಕೆಂಬ ಬದುಕಿನ ಹವಣಿಕೆಯ ಚಿತ್ರವನ್ನು "ಇಂದಿರಾ" ಕಾದಂಬರಿ ಒದಗಿಸುತ್ತದೆ. ಅವರ ಈ ಕಾದಂಬರಿ ಅವರ ಸಾಮಾ

ಜಿಕ ವಿಚಾರಗಳನ್ನು ಈ ರೀತಿ ಪ್ರತಿಬಿಂಬಿಸುತ್ತದೆ. ಸಮಕಾಲೀನ ಸಾಮಾಜಿಕ ಜೀವನದ ಸಮಸ್ಯೆಗಳನ್ನು ಕುರಿತು ಅದರು ತಮ್ಮ ಅನೇಕ ಬಿಡಿಲೇಖನಗಳಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯಗಳಾದರೂ ಇಂಥದೇ ಸಮತೂಕದ ಮುಂಧೋರಣೆಯನ್ನು ಪ್ರತಿಧ್ವನಿಸುತ್ತವೆ. ಪ್ರಚಾರದ ಮಾತುಗಳಿಂದ ಅಥವಾ ಒತ್ತಾಯಿಸುವ ಕಾನೂನುಗಳಿಂದ ಸಮಾಜ ಸುಧಾರಣೆ ಸಿದ್ಧಿಸುವುದಿಲ್ಲ. ದೇಶ ಕಾಲ ಪರಿಸ್ಥಿತಿಗಳಿಗೆ ಅನುಗುಣವಾದ "ಶಿಕ್ಷಣದ ಮೂಲಕವಾಗಲಿ ಯಾವದಾದರೂ ಆಕಸ್ಮಿಕವಾದ ಕ್ರಾಂತಿಕಾರಿ ಘಟನೆಯಿಂದಾಗಲಿ ಸಮಾಜ ಸುಧಾರಣೆಗಳು ತಾವಾಗಿಯೇ ವ್ಯವಹಾರದಲ್ಲಿ ಬರುವವು. ಕಾಯಿದೆಗಳ ಬಲದಿಂದಾಗಲಿ ಅಧಿಕಾರಬಲದಿಂದಾಗಲಿ ಅವುಗಳನ್ನು ಜಾರಿಯಲ್ಲಿ ತರಲು ಯತ್ನಿಸುವುದು ಅನರ್ಥಕರವಾದದ್ದು" ಎಂದು ಅವರು ಅಂದು ಬರೆದದ್ದು ಇಂದಿಗೂ ಅರ್ಥಪೂರ್ಣವಾಗಿದೆ. ವಿಟ್ಠಲಭಾಯಿ ಪಟೇಲರು ಮಿಶ್ರವಿವಾಹದ ಬಗೆಯಲ್ಲಿ ಕೌನ್ಸಿಲ್‌ನಲ್ಲಿ ಮಸೂದೆಯನ್ನು ತಂದಾಗ ವಾಸುದೇವಾಚಾರ್ಯರು "ಇಂಥ ಸುಧಾರಣೆಗಳು ಪರಿಸ್ಥಿತಿಗೆ ಅನುಗುಣವಾಗಿ ತಾವಾಗಿಯೇ ಜರುಗತಕ್ಕವು. ಪರಾಶರ ಋಷಿಯು ಮತ್ಸ್ಯಕನ್ಯೆಯನ್ನು ವರಿಸಿ ಮಹರ್ಷಿ ವ್ಯಾಸರಿಗೆ ಜನ್ಮವನ್ನು ಕೊಟ್ಟಾಗ ಸಮಾಜಸುಧಾರಕರ ಚಿತಾವಣೆಯ ಅವಶ್ಯಕತೆ ಇದ್ದಿರಲಿಲ್ಲ" ಎಂದು ಬರೆದರು. ಸಮಾಜ ಸುಧಾರಣೆಗಾಗಿ ಮಾಡಿದ ಕಾನೂನುಗಳ ವಿಧಿನಿಯಮಗಳು ಜಾತೀಯ ಹಾಗೂ ಧಾರ್ಮಿಕ ಭಾವನೆಗಳನ್ನು ಉದ್ರೇಕಿಸಿ ಧರ್ಮಗಳ ಬಗೆಗಿನ ದುರಭಿಮಾನವನ್ನು ಜಾತಿಮತ್ಸರವನ್ನು ಉತ್ತೇಜಿಸಬಲ್ಲವು ಎಂದ ಅವರ ಮಾತಿನ ಯಥಾರ್ಥತೆಯನ್ನು ಇಂದು ನಾವು ಅನುಭವಿಸುತ್ತಿದ್ದೇವೆ. ಒಟ್ಟು ಸಮಾಜದ ಸ್ವಾಸ್ಥ್ಯವನ್ನು ಗಮನಿಸದ ಸುಧಾರಣೆಯ ಧೋರಣೆ ವಿನಾಶಕಾರಿಯಾಗಬಲ್ಲದೆಂಬ ಅವರ ದೃಷ್ಟಿ ಕೇವಲ ಸುಧಾರಣೆಯತ್ತ ಹರಿದಿರಲಿಲ್ಲ ಎಂಬುದನ್ನು ಎತ್ತಿತೋರಿಸುತ್ತದೆ.

ಪರಕೀಯರ ಅಧಿಕಾರದಿಂದ ಬಿಡುಗಡೆ ದೇಶಕ್ಕೆ ಮೊದಲ ಅಗತ್ಯವಾಗಿದ್ದಂತೆ ಕನ್ನಡಿಗರಿಗೆ ತಮ್ಮತನದ ಅರಿವು ಅಷ್ಟೇ ಅಗತ್ಯ ಎಂಬ ಸ್ಪಷ್ಟ ಅಭಿಮತ ಆಚಾರ್ಯರದಾಗಿತ್ತು, ಅಂದಿನ ಉತ್ತರ ಕರ್ನಾಟಕ ದಕ್ಷಿಣ ಮಹಾರಾಷ್ಟ್ರವಾಗಿದಕ್ಕೆ ಕನ್ನಡಿಗರ ಅಭಿಮಾನಶೂನ್ಯತೆಯೇ ಕಾರಣವಾಗಿತ್ತು. ಹಿರಿಯರೆಂದೆನಿಸಿಕೊಂಡವರು, ಸಮಾಜದ ಮುಂದಾಳುಗಳು ಮರಾಠಿಯ ಬಗೆಯಲ್ಲಿ ತೋರುತ್ತಿದ್ದ ಗೌರವಭಾವನೆಯನ್ನು ಕನ್ನಡದ ಬಗೆಯಲ್ಲಿ ತಳೆದಿರಲಿಲ್ಲ. ಅಂದಿನ ಸನ್ನಿವೇಶವನ್ನು ವಾಸುದೇವಾಚಾರ್ಯರು ಶಾಸ್ತ್ರೀಯವಾಗಿ ವಿಶ್ಲೇಷಿಸಿ ಬರೆದು ಕನ್ನಡಕ್ಕೆ ಸಲ್ಲಬೇಕಾದ

ಸ್ಥಾನಮಾನಕ್ಕಾಗಿ ಹೋರಾಡಿದರು. "ಭೂದೇವಿಯ ತೊಡೆಯಮೇಲೆ ಆಡುತ್ತಲೂ ಕಷ್ಟಾರ್ಜಿತ ವಸ್ತುಗಳಲ್ಲಿ ವ್ಯವಹಾರ ಮಾಡುತ್ತಲೂ ಭಾಷಾಮಾತೆಯ ಸೊಲ್ಲಿಗೆ ಸೊಲ್ಲುಗೊಡುತ್ತಲೂ ಜೀವನವೃತ್ತಿಯನ್ನು ನಡೆಸುವ ನಮ್ಮ ಲಿಂಗಾಯತ ಬಾಂಧವರೆ ಹತಭಾಗ್ಯಳಾದ ಕನ್ನಡಮಾತೆಯನ್ನು ಕಾಪಾಡಿಕೊಳ್ಳುತ್ತ ಬಂದಿದ್ದರಿಂದಲೇ ಇಂದಿಗೆ ಕರ್ನಾಟಕವು ಕರ್ನಾಟಕವಾಗಿ ಉಳಿದುಕೊಂಡಿದೆ" ಎಂದು ಸಲ್ಲಬೇಕಿದ್ದಲ್ಲಿ ಕೃತಜ್ಞತೆಯನ್ನು ಸಲ್ಲಿಸಿದ್ದಾರೆ. ಮರಾಠಿಯ ಬಗೆಯಲ್ಲಿಯ ವಿದ್ಯಾವಂತರ ಮೋಹ ಒಂದು ಕಡೆಯಿಂದಾದರೆ ಕನ್ನಡದ ಅಭಿಮಾನವಿದ್ದವರಲ್ಲಿಯ ಹಳಗನ್ನಡದ ರೀತಿಯ ಮೋಹ ಇನ್ನೊಂದು ಕಡೆಯಿಂದ ಲಲಿತವಹ ಕನ್ನಡದ ಬರವಣಿಗೆಗೆ ಆತಂಕವಾಗಿದ್ದನ್ನು ಗುರುತಿಸಿ ಓದಿದವರಿಗೆ ಸಹಜವಾಗಿ ಅರ್ಥವಾಗುವ ಬರಹದ ರೀತಿಯನ್ನು ಜನಪ್ರಿಯವಾಗಿಸಿದರು. "ಇಂದಿರಾ" ಕಾದಂಬರಿಯನ್ನು ಬರೆಯುವಾಗ ಕನ್ನಡದ ಬರಹವನ್ನು ಸರಳವಾಗಿಸುವುದೂ ಅವರ ಉದ್ದೇಶವಾಗಿತ್ತು ಎನ್ನುವುದನ್ನು ಅವರ "ವಿಜ್ಞಾಪನೆ" ಸ್ಪಷ್ಟವಾಗಿ ತಿಳಿಸುತ್ತದೆ. ಸ್ವದೇಶಾಭಿಮಾನದ ಅಂಗವಾಗಿ ಸ್ವಪ್ರಾಂತಾಭಿಮಾನ, ಅದಕ್ಕೆ ಪೋಷಕವಾಗಿ ಸ್ವಭಾಷಾಭಿಮಾನ, ಸಮುದಾಯ ಸ್ವಾಸ್ಥ್ಯಕ್ಕೆ ಚ್ಯುತಿಬಾರದ ರೀತಿಯಲ್ಲಿ ಹೊಸ ಬದುಕನ್ನು ರೂಪಿಸಬಲ್ಲ ಸಮಾಜ ಸುಧಾರಣೆಯ ವಿಚಾರಗಳ ಪ್ರತಿಪಾದನೆ ಅವರ ಬರವಣಿಗೆಯ ಹಿಂದಿನ ಪ್ರೇರಣೆಗಳಾಗಿದ್ದುವೆಂದು ಸ್ಥೂಲವಾಗಿ ನಿರ್ದೇಶಿಸಬಹುದು.

* * *

ಸಾಮಾನ್ಯವಾಗಿ ವಾಸುದೇವಾಚಾರ್ಯರ ಹೆಸರು ಬಂದಾಗ ಅವರು ಬರೆದ "ಇಂದಿರಾ" ಕಾದಂಬರಿಯೊಂದರ ನಿರ್ದೇಶ ಮಾತ್ರ ಬರುತ್ತದೆ. ಆದರೆ ಅವರು ಬರೆದದ್ದು ಅದೊಂದನ್ನೇ ಅಲ್ಲ; ಚಾರಿತ್ರಿಕ ದೃಷ್ಟಿಯಿಂದ "ಇಂದಿರಾ" ಕಾದಂಬರಿಗೆ ವಿಶೇಷ ಮಹತ್ವವಿದ್ದರೂ ಅವರು ಬೇರೆ ಕಾದಂಬರಿಗಳನ್ನು, ನಾಟಕಗಳನ್ನು ಮತ್ತು ಸಣ್ಣ ದೊಡ್ಡ ಕಥೆಗಳನ್ನೂ ಬರೆದರೆನ್ನುವುದನ್ನು ನಾವು ಮರೆಯಲಾಗುವುದಿಲ್ಲ. "ಇಂದಿರಾ" ಕಾದಂಬರಿಯನ್ನುಳಿದು ಅವರು "ಯವನ ಸೈರಂಧ್ರಿ" ಎಂಬ ಅನುವಾದಿತ ಕಾದಂಬರಿಯನ್ನು, "ಯದುಮಹಾರಾಜ" ಮತ್ತು "ಭಾತೃಘಾತಕನಾದ ಔರಂಗಜೇಬ" ಎಂಬ ಸ್ವತಂತ್ರ ಐತಿಹಾಸಿಕ ಕಾದಂಬರಿಗಳನ್ನೂ ಬರೆದಿದ್ದಾರೆ.

"ಯವನ ಸೈರಂಧ್ರಿ" ಹಾಗೂ "ಯದುಮಹಾರಾಜ" ಕಾದಂಬರಿಗಳಲ್ಲಿಯ ಕಥಾಭಾಗಗಳು ಬೇರೆಬೇರೆಯವಾಗಿದ್ದರೂ ಮನೋರಂಜಕವಾಗಿ ಕಥೆಯನ್ನು

ಹೇಳುವುದೇ ಅವೆರಡರ ಉದ್ದೇಶವಾಗಿತ್ತೆಂದು ಕಾಣುತ್ತದೆ. ಮೊದಲನೆಯದು ಚಾರಿತ್ರಿಕ ಹಿನ್ನೆಲೆಯನ್ನಿರಿಸಿಕೊಂಡ ಒಂದು ಪ್ರಣಯ ಕಥೆ. ಅಕಬರನ ಆಸ್ಥಾನಕ್ಕೆ ಸೇರಿದ ಪಾತ್ರಗಳು ಕಾದಂಬರಿಯಲ್ಲಿ ಕಾಣಿಸಿಕೊಂಡರೂ ಮುಖ್ಯ ಕಥೆ ಕಲ್ಪಿತ ಪಾತ್ರಗಳಾದ ನರೇಂದ್ರನಾಥ, ಶ್ರೀಶಚಂದ್ರ, ಹೇಮಲತಾ ಮತ್ತು ಜಗತ್ಸುಂದರಿ ಯರದ್ದೇ ಆಗಿದೆ. ನಾಯಿಕೆಯಾದ ಹೇಮಲತೆ ಯವನ ಸೈರಂಧ್ರಿಯಾಗಿ ಫಕೀರ ಗಾಯಕನಾದ ನರೇಂದ್ರನೊಡನೆ ವಿವಿಧ ವೇಷಾಂತರಗಳಲ್ಲಿ ಅಲೆದಾಡುವ ಸನ್ನಿವೇಶಗಳು ಕುತೂಹಲಕಾರಿಯಾಗಿದ್ದಂತೆ ವಿನೋದ ಪೂರ್ಣವೂ ಆಗಿವೆ. "ಯದುಮಹಾರಾಜ" ಚಾರಿತ್ರಿಕ ಘಟನೆಗಳನ್ನು ವಿವರಿಸುತ್ತದೆ. ಚಾಮರಾಜ ಒಡೆಯರನ್ನು ಕೊಂದು ಅಧಿಕಾರವನ್ನಾಕ್ರಮಿಸಿಕೊಂಡ ಮಾರನಾಯಕನನ್ನು ಯದುವಂಶದ ಕೃಷ್ಣರಾಜರು ತಂತ್ರ ಪ್ರತಿತಂತ್ರಗಳಿಂದ ಕೊನೆಗಾಣಿಸಿ ಮೈಸೂರಿ ನಲ್ಲಿ ಧರ್ಮರಾಜ್ಯವನ್ನು ಸ್ಥಾಪಿಸಿದ ವಿಷಯ ಇಲ್ಲಿಯ ಕಥಾವಸ್ತು. ಎರಡೂ ಕಾದಂಬರಿಗಳಲ್ಲಿಯ ಕುತೂಹಲಕಾರಿಯಾದ ಸನ್ನಿವೇಶರಚನೆ, ಆ ರಚನೆಗೆ ಅನು ಕೂಲವಾಗಿರುವಂಥ ಪಾತ್ರಸೃಷ್ಟಿಯ ಮೂಲಕ ಕಥೆಗಳು ಸರಾಗವಾಗಿ ಮುಂದು ವರಿಯುತ್ತವೆ. ಗಂಭೀರ ಸನ್ನಿವೇಶಗಳೂ ಚಮತ್ಕಾರವಾಗಿ, ಲೀಲಾಜಾಲವಾಗಿ, ನಡೆದುಹೋಗುತ್ತವೆ. ಮೊದಲಿನಿಂದ ಕೊನೆಯವರೆಗೆ ಓದುಗನನ್ನು ಸೆರೆಹಿಡಿ ಯುತ್ತವೆ.

ಇವೆರಡಕ್ಕೆ ವಿರುದ್ಧವಾಗಿ "ಭ್ರಾತೃಘಾತಕನಾದ ಔರಂಗಜೇಬ" ಒಂದು ಗಂಭೀರ ಕೃತಿಯಾಗಿದೆ. ಔರಂಗಜೇಬನ ದುಷ್ಕೃತ್ಯಗಳು ಮೊಗಲ ಸಾಮ್ರಾಜ್ಯದ ವೈಭವ ಅಳಿದು ಹೋಗುವುದಕ್ಕೆ ಕಾರಣವಾದುದನ್ನು ವಿವರಿಸುವ ಇಲ್ಲಿಯ ಚಾರಿತ್ರಿಕ ಘಟನೆಗಳ ಸಂಯೋಜನೆಯ ಪರಿಣಾಮವಾಗಿ ಔರಂಗಜೇಬನ ಕಥೆ ಮನುಷ್ಯ ಜೀವನದ ಪಾಪಪುಣ್ಯಗಳ ಕಥೆಯಾಗುತ್ತದೆ. ಅಹಂಕಾರ, ಅಧಿಕಾರ ದಾಹ, ಎಷ್ಟು ಬಗೆಯಾಗಿ ಜೀವನವನ್ನು ವಿಕೃತಗೊಳಿಸಿ ಅದನ್ನು ವಿನಾಶದತ್ತ ನಡೆಸಬಹುದೆಂಬ ಯೋಚನೆಯನ್ನು ಇಲ್ಲಿಯ ಕಥಾನಕ ಮೂಡಿಸುತ್ತದೆ. ಪಾಪಕ್ಕೆ ತಕ್ಕ ಪ್ರತಿಫಲ ತಪ್ಪಿದ್ದಲ್ಲ ಎಂಬ ಮಾತು ಸಹಜವೆನಿಸಿದರೂ ಕಾದಂಬರಿಯಲ್ಲಿಯ ದುರಂತ ಸನ್ನಿವೇಶಪರಂಪರೆ ಆ ಮಾತನ್ನು ಓದುಗನ ಅನುಭವವನ್ನಾಗಿಸಿ ಮನವರಿಕೆ ಮಾಡಿಕೊಡುತ್ತದೆ. ವಸ್ತುವಿನ್ಯಾಸ ಹಾಗೂ ಪಾತ್ರಸೃಷ್ಟಿ ಅನ್ಯೋನ್ಯಪೋಷಕ ವಾಗಿ ದುರಂತಾನುಭವದ ತೀವ್ರತೆಯನ್ನು ಹೆಚ್ಚಿಸುತ್ತವೆ. ಪಾತ್ರಗಳ ಸ್ವಭಾವ ಗಳಿಗೆ ಅನುಗುಣವಾಗಿ ಬೆಳೆಯುವ ಸನ್ನಿವೇಶಗಳ ಮೂಲಕ ಜೀವನಕ್ಕೆ ಸಂಬಂಧಿಸಿದ

ಸತ್ಯಾಂಶಗಳು ಪ್ರಕಟವಾಗುವುದರಿಂದ ಚಾರಿತ್ರಿಕ ಘಟನೆಗಳು ಸ್ವಾಭಾವಿಕವಾಗಿಯೇ ಒಂದು ಬಗೆಯ ನೈತಿಕ ದರ್ಶನದ ಆವಿಷ್ಕಾರಗಳಾಗಿ ಪರಿಣಮಿಸುತ್ತವೆ.

ವಾಸುದೇವಾಚಾರ್ಯರು ಬರೆದು ಪ್ರಕಟಿಸಿದ ನಾಟಕಗಳು ನಾಲ್ಕು—"ನಲದಮಯಂತಿ", "ವಸಂತಯಾಮಿನೀ ಸ್ವಪ್ನ ಚಮತ್ಕಾರ", "ಸುರತ ನಗರದ ಶ್ರೇಷ್ಠಿ" ಮತ್ತು "ಪತಿವಶೀಕರಣ." ಇವಲ್ಲದೆ 'ರುಕ್ಮಿಣೀಹರಣ" ಮತ್ತು "ಪುರಂದರದಾಸ" ಎಂಬೆರಡು ನಾಟಕಗಳು ಅಪೂರ್ಣವಾಗಿ ಹಸ್ತಪ್ರತಿಯಲ್ಲುಳಿದಿವೆ. ಪ್ರಕಟವಾದ ನಾಲ್ಕು ನಾಟಕಗಳಲ್ಲಿ ಮೊದಲನೆಯದೊಂದೇ ಸ್ವತಂತ್ರ ಕೃತಿ. ಉಳಿದ ಮೂರು ಇಂಗ್ಲಿಷ್ ಮೂಲಗಳನ್ನಾಧರಿಸಿದ ರೂಪಾಂತರಗಳು. "ನಲದಮಯಂತಿ" ಪೌರಾಣಿಕ ಕಥೆಯನ್ನಾಧರಿಸಿ ಅಂದು ಜನಪ್ರಿಯವಾಗಿದ್ದ ಮರಾಠಿ ನಾಟಕಗಳ ಮಾದರಿಯಲ್ಲಿ ಧಾರಾಳವಾಗಿ ಸಂಗೀತವನ್ನು ಬಳಸಿಕೊಂಡು ರಚಿಸಲಾದ ನಾಟಕ. "ವಸಂತಯಾಮಿನೀ ಸ್ವಪ್ನ ಚಮತ್ಕಾರ' ಹಾಗೂ "ಸುರತ ನಗರದ ಶ್ರೇಷ್ಠಿ" ಕ್ರಮವಾಗಿ ಶೇಕ್ಸಪೀಯರನ "ಎ ಮಿಡ್ಸಮರ್ ನೈಟ್ಸ್ ಡ್ರೀಮ್" ಮತ್ತು "ದಿ ಮರ್ಚೆಂಟ್ಸ್ ಆಫ್ ವೆನೀಸ್" ನಾಟಕಗಳ ರೂಪಾಂತರಗಳು. ಕೊನೆಯದಾದ "ಪತಿವಶೀಕರಣ" ಗೋಲ್ಡ್ ಸ್ಮಿತ್‌ನ "ಶಿ ಸ್ಟೂಪ್ಸ್ ಟು ಕಾಂಕರ್" ನಾಟಕದ ರೂಪಾಂತರ. ಈ ಮೂರೂ ನಾಟಕಗಳು ಇಂಗ್ಲೀಷ್ ಮೂಲಗಳನ್ನಾಧರಿಸಿ ಬರೆದುವಾದರೂ ಅವು ಅನುವಾದಗಳಲ್ಲ. ಕಥಾಭಾಗವನ್ನು ಎರವಲಾಗಿ ತೆಗೆದುಕೊಂಡಿದ್ದರೂ ಪಾತ್ರಪರಿಸರಗಳೆರಡನ್ನೂ ಇಲ್ಲಿಯವಾಗಿ ಪರಿವರ್ತಿಸಿಕೊಂಡಿದ್ದರಿಂದ ಅವನ್ನು ರೂಪಾಂತರಗಳೆಂದೇ ಹೇಳಬೇಕು. ಮೂಲ ಯಾವುದು ಎಂದು ಹೇಳದಿದ್ದರೆ ಇಂಗ್ಲೀಷ್ ತಿಳಿಯದವರು ಈ ನಾಟಕಗಳನ್ನು ಸ್ವತಂತ್ರ ಕೃತಿಗಳೆಂದೇ ಭಾವಿಸುವಂತಾಗುತ್ತದೆ. ಅಷ್ಟರಮಟ್ಟಿಗೆ ರೂಪಾಂತರದ ಕಾರ್ಯ ಸಫಲವಾಗಿ ನೆರವೇರಿದೆ. ಇಂಗ್ಲೀಷ್ ನಾಟಕಗಳನ್ನು ಸಂಪೂರ್ಣವಾಗಿ ಭಾರತೀಯವಾಗಿಸಿದ್ದಾರೆ. ವಿಶೇಷವಾಗಿ "ಪತಿವಶೀಕರಣ"ವಂತೂ ಇಲ್ಲಿಯದೇ ಕಥೆ, ಸ್ವತಂತ್ರವಾಗಿಯೇ ಬರೆಯಲಾದ ನಾಟಕ, ಎಂಬ ಭ್ರಮೆಯನ್ನು ಹುಟ್ಟಿಸುತ್ತದೆ. ಅಷ್ಟರಮಟ್ಟಿಗೆ ಇಲ್ಲಿಯ ಜೀವನದ ವಿವರಗಳನ್ನು ಅಲ್ಲಿಯ ಕಥೆಯ ಸನ್ನಿವೇಶಗಳಿಗೆ ಯಥಾವತ್ತಾಗಿ ಹೊಂದಿಸಿಕೊಳ್ಳಲಾಗಿದೆ.

ಕಾದಂಬರಿಗಳನ್ನು ಮತ್ತು ನಾಟಕಗಳನ್ನು ಬರೆದ ವಾಸುದೇವಾಚಾರ್ಯರು ಸಣ್ಣಕಥೆಗಳನ್ನು ಮತ್ತು ನೀಳ್ಗತೆಗಳನ್ನು ಬರೆದರೆನ್ನುವುದನ್ನೂ ನೆನೆಯಬೇಕು. ಆದೇ ಹೊಸದಾಗಿ ತಲೆಯೆತ್ತಿ, ಶ್ರೇಷ್ಠವಾದ ಒಂದು ಸಾಹಿತ್ಯಪ್ರಕಾರವಾಗಿ ಬೆಳೆಯಲಿದ್ದ

ಸಣ್ಣಕಥೆ ಆಚಾರ್ಯರ ಕೈಯಲ್ಲಿ ಹೇಗೆ ರೂಪುಗೊಂಡು ನಿಂತಿತ್ತು ಎನ್ನುವುದು ಆಶ್ಚರ್ಯಕರವಾದ ಸಂಗತಿಯಾಗಿದೆ. ಅವರ ಇತರ ಕೃತಿಗಳಂತೆ ಅವರ ಕಥೆಗಳಾದರೂ ಪುನರ್ಮುದ್ರಣದ ಅವಕಾಶವಿಲ್ಲದೆ ಓದುಗರಿಂದ ದೂರವಾಗಿ ಉಳಿದಿವೆ. ಆ ಪ್ರಕಾರದ ಪ್ರಾರಂಭಾವಸ್ಥೆಯಲ್ಲಿಯೇ ವಾಸುದೇವಾಚಾರ್ಯರು ಸಣ್ಣಕಥೆಯ ನಿರ್ವಹಣೆಯಲ್ಲಿ ಎಂಥ ತಂತ್ರಪರಿಣತಿಯನ್ನು ಸಾಧಿಸಿಕೊಂಡಿದ್ದರು ; ಪರಿಮಿತವಾದ ವ್ಯಾಪ್ತಿಯಲ್ಲಿ ಸ್ಪಷ್ಟವಾದ ಪರಿಣಾಮವನ್ನು ಸಾಧಿಸಬಲ್ಲ ಎಂಥ ಕಲೆಗಾರಿಕೆಯನ್ನು ತಮ್ಮದಾಗಿಸಿಕೊಂಡಿದ್ದರು ಎನ್ನುವುದನ್ನು ತಿಳಿಯಬೇಕಾದರೆ ಅವರ ಕಥೆಗಳನ್ನು ಓದಿ ವಿಶ್ಲೇಷಿಸಿ ನೋಡಬೇಕು. ಅವರು ಬರೆದ ಅನೇಕ ಕಥೆಗಳಲ್ಲಿ ಕೆಲವು ಮೂರು ಸಂಕಲನಗಳಲ್ಲಿ ಪುಸ್ತಕರೂಪದಲ್ಲಿ ಹೊರಬಂದುವು. “ ತೊಳೆದ ಮುತ್ತು ” ಸಂಕಲನದಲ್ಲಿ ಹನ್ನೆರಡು ಸಾಮಾಜಿಕ ಜೀವನಕ್ಕೆ ಸಂಬಂಧಿಸಿದ ಕಥೆಗಳು ಮತ್ತು ಮೂರು ಪತ್ತೇದಾರಿ ಕಥೆಗಳು ಸೇರಿವೆ. ಮೊದಲ ಪ್ರಕಾರದಲ್ಲಿಯ “ ಮಲ್ಲೇಶಿಯ ನಲ್ಲೆಯರು ”, “ ಪ್ರಕೃತಿಬಲ ” ಮತ್ತು “ ಗುಲ್‌ಬಾಯಿ ” ಶ್ರೇಷ್ಠ ಕಥೆಗಳಾಗಿದ್ದು ಇಂದಿಗೂ ಕುತೂಹಲಕಾರಿಯಾಗಿ ಓದಿಸಿಕೊಂಡು ಹೋಗಬಲ್ಲವು. ಪತ್ತೇದಾರಿ ಕಥೆಗಳು ರೂಪಾಂತರಗಳೆಂದು ಕಾಣುತ್ತವೆ. ಅವರ ಕೈಯಲ್ಲಿ ಶರ್ಲಾಕ್ ಹೋಮ್ಸ್ ಸರಲಾಕ್ಷ ಹುಲೀಮೀಸೆಯನಾಗುತ್ತಾನೆನ್ನುವುದೊಂದೇ ಸಂಗತಿ ಅವರ ರೂಪಾಂತರ ನೈಪುಣ್ಯಕ್ಕೆ ಸಾಕ್ಷಿ. “ ಪ್ರೇಮವಿಜಯ ” ಸಂಕಲನದಲ್ಲಿ ಹನ್ನೊಂದು ಕಥೆಗಳಿವೆ. ಐತಿಹಾಸಿಕ ಕಥೆಗಳಲ್ಲಿ ಕುತೂಹಲ ಕೆರಳಿಸುವ ಸನ್ನಿವೇಶಗಳಾದರೆ ಸಾಮಾಜಿಕ ಕಥೆಗಳಲ್ಲಿ ವಿಡಂಬನೆಯ ಅಂಚಿನಲ್ಲಿ ನಿಲ್ಲುವ ವಾಸ್ತವ ಪ್ರಪಂಚದ ಚಿತ್ರಗಳು ಕಥೆಗಳನ್ನು ಹೃದ್ಯವಾಗಿಸುತ್ತವೆ. “ ಪಂಡಿತಬೃಹಲ್ಲಾಂಗೂಲವ್ಯಾಘ್ರ ”ವೆಂಬ ಒಂದು ಕಥೆಯ ಹೆಸರೇ ಬರೆದವರ ದೃಷ್ಟಿಯನ್ನು ಸೂಚಿಸುತ್ತದೆ. “ ಬೆಳಗಿದ ದೀಪಗಳು ” ಸಂಗ್ರಹದಲ್ಲಿ ಒಂಬತ್ತು ಚಾರಿತ್ರಿಕ ಕಥೆಗಳಿವೆ. ಅದರಲ್ಲಿ ಬರುವ “ ನರಗುಂದದ ಸಾವಿತ್ರೀಬಾಯಿ ”ಯ ದುರಂತದ ಕಥೆಯಲ್ಲಿ ಆಕೆ ಇಂಗ್ಲೀಷರ ಕೈಗೆ ಸಿಕ್ಕಬೇಕಾದ ಅವಮಾನವನ್ನು ತಪ್ಪಿಸುವುದಕ್ಕೆ ಜಲಸಮಾಧಿಯಾಗುವ ಸನ್ನಿವೇಶ ಹೃದಯದ್ರಾವಕವಾಗಿ ಚಿತ್ರಿತವಾಗಿದೆ. ವಿಷಯ ಚಾರಿತ್ರಿಕವೇ ಇರಲಿ, ಸಾಮಾಜಿಕವೇ ಇರಲಿ, ಉಚಿತವಾದ ಪಾತ್ರಸೃಷ್ಟಿ ಹಾಗೂ ಅಚ್ಚುಕಟ್ಟಾದ ಕಥಾರಚನೆಯ ಮೂಲಕ ಕಥೆಗಳೆಲ್ಲವೂ ಅಪೇಕ್ಷಿತವಾದ ಪರಿಣಾಮವನ್ನು ಗುರಿ ಇಟ್ಟಂತೆ ಸಾಧಿಸುತ್ತವೆ,

೧೨

"ಇಂದಿರಾ" ಕಾದಂಬರಿ ಇದೀಗ ಅನೇಕ ದಶಕಗಳ ನಂತರ ಪುನರ್ಮುದ್ರಿತವಾಗುತ್ತಿದೆ. ನನ್ನ ಹತ್ತಿರವಿದ್ದ ಮೊದಲ ಮುದ್ರಣದ ಪಾಠವನ್ನು ಅನುಸರಿಸಿಯೇ ಇದ್ದ ಹಾಗೆ ಅಚ್ಚಾಗಿದೆ, ಕಾದಂಬರಿಯೇ ಓದುಗರೆದುರಿರುವಾಗ ಅದರ ವಿಷಯವನ್ನು ವಿಸ್ತರಿಸಿ ಓದುವವರ ಕುತೂಹಲವನ್ನು ಕೆಡಿಸುವ ಮನಸ್ಸು ನನಗಿಲ್ಲ. ಆದರೆ ಈ ಕಾದಂಬರಿಗೆ ನಮ್ಮಲ್ಲಿ ಈ ಸಾಹಿತ್ಯಪ್ರಕಾರದ ಬೆಳವಣಿಗೆಯಲ್ಲಿ ಒಂದು ಮಹತ್ವದ ಸ್ಥಾನವಿದೆಯಾದ್ದರಿಂದ ಯಾವ ರೀತಿಯ ಮಹತ್ವ ಅದು ಎನ್ನುವುದನ್ನು ಕುರಿತು ಒಂದೆರಡು ಮಾತುಗಳನ್ನು ಹೇಳಬೇಕು. ಕನ್ನಡದಲ್ಲಿಯ ಮೊದಲ ಸ್ವತಂತ್ರ ಸಾಮಾಜಿಕ ಕಾದಂಬರಿಗಳಲ್ಲಿ ಇದೊಂದು ಎನ್ನುವುದು ಚಾರಿತ್ರಿಕ ದೃಷ್ಟಿಯಿಂದ ಮಹತ್ವದ ಸಂಗತಿಯಾಗಿದ್ದಷ್ಟೂ ಪ್ರಾರಂಭದ ಕಾಲಾವಧಿಗೆ ಸೇರಿದ್ದರೂ ವಸ್ತು ವಿಷಯ ರಚನೆ ರೀತಿಗಳಲ್ಲೆಲ್ಲವೂ ಅದು ಮುಂಬರುವ ಬೆಳವಣಿಗೆಗೆ ಒಂದು ಸ್ಪಷ್ಟವಾದ ದಿಕ್ಸೂಚಿಯಾಗಿದೆ ಎನ್ನುವುದು ಇನ್ನೂ ಮಹತ್ವದ ಸಂಗತಿಯಾಗಿದೆ.

ಕಾದಂಬರಿಯ ಬೆಳವಣಿಗೆಯ ದೃಷ್ಟಿಯಿಂದ ಮಾತ್ರವಲ್ಲದೆ ಅದು ಚಿತ್ರಿಸಬೇಕೆಂದ ಸಮಾಜಜೀವನವನ್ನು ಅದು ಆಂತರಿಕ ಕ್ಷೋಭಗೊಳಗಾಗಿಸಿದ ಪರಸ್ಪರ ವಿರುದ್ಧ ವಿಚಾರಗಳ ಸಂಘರ್ಷದ ದೃಷ್ಟಿಯಿಂದಲೂ "ಇಂದಿರಾ" ಕಾದಂಬರಿ ಸಂಧಿಕಾಲಕ್ಕೆ ಸೇರಿದ ಕೃತಿಯಾಗಿದೆ. ಕಾದಂಬರಿಕಾರರು ಸಮಾಜಾಭಿಮುಖವಾಗಿ ತಮ್ಮ ದೃಷ್ಟಿಯನ್ನು ತಿರುಗಿಸಿ ಅದರ ವಾಸ್ತವ ಚಿತ್ರಣದ ಮೂಲಕ ಅದನ್ನು ಕಾಡುತ್ತಿದ್ದ ಸಮಸ್ಯೆಗಳತ್ತ ಓದುಗರ ಗಮನವನ್ನು ಹರಿಯಿಸುವ ಯತ್ನ ಆದೇ ತೊಡಗಿತ್ತು. ಗುಳವಾಡಿ ಹಾಗೂ ಬೋಳಾರ ಅವರ ಕೃತಿಗಳು ಈ ಹೊಸ ದೃಷ್ಟಿಯನ್ನು ಹೊಂದಿದ್ದವು. ಆದರೆ "ಇಂದಿರಾ ಕಾದಂಬರಿಯನ್ನು ಅವರಿಬ್ಬರ ಕಾದಂಬರಿಗಳೊಡನೆ ಹೋಲಿಸಿ ನೋಡಿದಾಗ ವಾಸುದೇವಾಚಾರ್ಯರು ಒದಗಿಸಿದ ವಿಚಾರಗಳ ಹಿನ್ನೆಲೆ ಹೆಚ್ಚು ವಿಸ್ತಾರವಾದದ್ದಾಗಿ ಕಂಡುಬರುತ್ತದೆ. ಗುಳವಾಡಿ ಹಾಗೂ ಬೋಳಾರರ ಕಾದಂಬರಿಗಳು ವಿಶಿಷ್ಟವಾದ ಸಮಸ್ಯೆಗಳನ್ನು ತಮ್ಮ ಕೇಂದ್ರವಾಗಿಸಿಕೊಳ್ಳುತ್ತಾರಾದರೆ ವಾಸುದೇವಾಚಾರ್ಯರು ಆ ಕಾಲದ ವಿಚಾರಗಳ ತಿಕ್ಕಾಟವನ್ನೇ ಇಡಿಯಾಗಿ ತಮ್ಮ ಕಥೆಗೆ ಹಿನ್ನೆಲೆಯನ್ನಾಗಿಸಿಕೊಳ್ಳುತ್ತಾರೆ. ಮುಖ್ಯಕಥೆಯ ಬೆಳವಣಿಗೆಯ ಮೂಲಕ ಹಾಗೂ ಅದಕ್ಕಾಗಿ ಯೋಜಿಸಿಕೊಂಡ ಪಾತ್ರಗಳ ಸ್ವಭಾವದರ್ಶನದ ಮೂಲಕ ತಮ್ಮ ದೃಷ್ಟಿಯ ಪರಿಹಾರವನ್ನೂ ಸೂಚಿ

ಸುತ್ತಾರೆ. ಹೀಗಾಗಿ "ಇಂದಿರಾ" ಕಾದಂಬರಿ ರಮಾಕಾಂತ ಇಂದಿ
ಪ್ರಣಯಕಥೆಯಾಗಿದ್ದಷ್ಟೂ, ಅಂದಿನ ಸಮಾಜ ಜೀವನವನ್ನು ಬಾಧಿಸ
ವಿಚಾರಗಳ ತಾಕಲಾಟದ ಕಥೆಯೂ ಆಗಿದೆ. ಹಿನ್ನೆಲೆಯಲ್ಲಿಯ ಪಾತ್ರಗಳ
ನುಡಿಗಳಲ್ಲಿ ಈ ತಾಕಲಾಟದ ಪ್ರತಿಧ್ವನಿಗೊಳ್ಳುತ್ತದೆಯಾದರೆ ಮುಖ್ಯ ಪಾ
ನಡೆನುಡಿಗಳಲ್ಲಿ ಅದಕ್ಕೆ ಸಮರ್ಪಕವಾದ ಉತ್ತರ ಸಿಕ್ಕುತ್ತದೆ. ಈ
ಕಾದಂಬರಿಯ ಒಳರಚನೆಯ ಅಸ್ತಿಭಾರವಾಗಿರುವುದು ತಂತ್ರದ ದೃಷ್ಟಿ
ಒಂದು ಗಮನಾರ್ಹವಾದ ಸಂಗತಿಯಾಗಿದೆ.

ಕಾದಂಬರಿಯ ಮುಖ್ಯಕಥೆ ರಮಾಕಾಂತ ಮತ್ತು ಇಂದಿರೆಯರ ನ
ಪ್ರಣಯಕ್ಕೆ ಸಂಬಂಧಿಸಿದ್ದು, ಸಕೃದ್ದರ್ಶನದಲ್ಲಿಯೇ ಆಕರ್ಷಿತರಾಗಿದ್ದ
ಪ್ರಣಯಕ್ಕಿದ್ದ ಒಂದೇ ಒಂದು ಆತಂಕವೆಂದರೆ ಇಂದಿರೆಯ ತಂದೆಯಾದ
ರಾಯ. ಲಕ್ಷ್ಮೀಪುತ್ರನಾದ ಶ್ರೀಕಂಠನಿಗೆ ಆಕೆಯನ್ನು ಕೊಟ್ಟರೆ ಸಮಾ
ತಾನು ಪ್ರತಿಷ್ಠೆಯನ್ನು ಪಡೆಯಬಹುದೆಂಬ ಆತನ ಸ್ವಾರ್ಥಪರವಾದ
ಮಗಳ ಅಭಿಲಾಷೆಗೆ ಅಡ್ಡಿಯಾಗಿ ಆತನನ್ನು ಕುಟಿಲಕಾರಸ್ಥಾನಗಳಲ್ಲಿ ತೊ
ತ್ತದೆ. ಇಂದಿರೆಯ ಮದುವೆ ಶ್ರೀಕಂಠನೊಡನೆ ಗೊತ್ತಾಗಿದೆ ಎಂಬ ವರ್ತ
ರಮಾಕಾಂತನನ್ನು ನಿರಾಶೆಯತ್ತ ತಳ್ಳುತ್ತದಾದರೆ ಆತ ವಿಧವೆಯಾದ ಯ
ಕಮಲೆಯನ್ನು ಮದುವೆಯಾಗಲಿದ್ದಾನೆಂಬ ಸುಳ್ಳು ಇಂದಿರೆಯ ಕಳವಳಕ್ಕೆ
ವಾಗುತ್ತದೆ. ಆದರೆ ಸುಳ್ಳು ಬಯಲಾದಾಗ ಇಂದಿರೆ ತನ್ನ ಅಪೇಕ್ಷೆ
ತಂದೆಯ ಹತ್ತಿರ ನೇರವಾಗಿ ಹೇಳಿ ಆತಂಕವನ್ನು ಪರಿಹರಿಸಿಕೊಳ್ಳುತ್ತಾಳೆ.
ಗಳ ಮೇಲೆ ಆತಂಕಗಳನ್ನು ಸೇರಿಸಿ ಇನ್ನೇನು ನಿರಾಶೆ ಅನಿವಾರ್ಯವೆನಿಸ
ಮಾಡಿ ಕೊನೆಗೆ ಆತಂಕಗಳನನ್ನು ಒಂದಿಲ್ಲೊಂದು ರೀತಿಯಲ್ಲಿ ಪರಿಹರಿಸಿಬಿಡ
ಪ್ರಣಯ ಕಥೆಗಳು ಸಾಮಾನ್ಯವಾಗಿ ಅನುಸರಿಸುವ ವಿಧಾನ, ವಾಸುದೇವಾಚಾ
ಆ ವಿಧಾನವನ್ನು ಇಲ್ಲಿ ಅನುಸರಿಸುವುದಿಲ್ಲ, ನೇರವಾದ ಒಂದು ಮಾ
ಆತಂಕ ಪರಿಹಾರವಾದದ್ದನ್ನು ನೋಡಿದರೆ ಕಾದಂಬರಿಕಾರರಿಗೆ ಪ್ರಣಯಕ್ಕೆ
ಗಿದ ಆತಂಕವನ್ನು ಪರಿಹರಿಸುವುದಕ್ಕಿಂತ ಅದು ಬೆಳೆದ ಬಗೆಯನ್ನು, ತಾಳ್ಮೆ
ವಳಿಕೆಗಳಿಂದ ಅವರಿಬ್ಬರೂ ಸನ್ನಿವೇಶವನ್ನು ಎದುರಿಸಿದ ಬಗೆಯನ್ನು ವಿ
ವುದೇ ಮುಖ್ಯವೆನಿಸಿದಂತೆ ಕಾಣುತ್ತದೆ. ಅವರಿಬ್ಬರ ನಡುವಿನ ಪ್ರಣಯ ಸುಕು
ವಾದದ್ದು. ಅದನ್ನು ಸುಕುಮಾರವಾಗಿಯೇ ಕಾದಂಬರಿಕಾರರು ಚಿತ್ರಿಸಿದ್ದಾರೆ.
ಸನ್ನಿವೇಶದಲ್ಲಿಯೂ ರಮಾಕಾಂತ ಇಂದಿರೆಯರು ಭಾವಾವಿಷ್ಟರಾಗುವುದಿಲ್ಲ.

ತಮ್ಮ ಮಧುರ ಭಾವನೆಗಳನ್ನು ಅವರು ತಮ್ಮ ನೆನವರಿಕೆಗೆ ಮೀಸಲಾಗಿರಿಸಿ
ಿರುವಂತೆ ತಮ್ಮ ಹೃದಯದ ಕಳವಳವನ್ನು ತಮ್ಮಷ್ಟಕ್ಕೆಯೆ ಇರಿಸಿಕೊಂಡಿರು
ಇದಕ್ಕೆ ಕಾರಣ ಅವರಿಬ್ಬರು ವಿದ್ಯಾವ್ಯಾಸಂಗದಿಂದ, ಲಲಿತಕಲೆಗಳಲ್ಲಿಯ
ಮದಿಂದ. ಪಡೆದಿದ್ದ ಮನಸ್ಸಂಸ್ಕಾರ. ಅವರಿಬ್ಬರ ನಡುವಿನ ಆಕರ್ಷಣೆ
ಬಲವತ್ತರವಾಗಿದ್ದರೂ ನಿರಾಶೆಯ ಸಂದರ್ಭ ಕಾಣಿಸಿಕೊಂಡಾಗ ತನ್ನ
ವನ್ನು ನುಂಗಿಕೊಂಡು ರಮಾಕಾಂತ ದೇಶಾಂತರ ಹೋಗಬಯಸುತ್ತಾನಾದರೆ
ರೆ (ತಂದೆ ಹೇಳಿದ ಸುಳ್ಳನ್ನು ನಂಬಿ) ತಂದೆಯ ಅಪೇಕ್ಷೆಯನ್ನು ಮೀರು
ತನ್ನ ಕರ್ತವ್ಯವಲ್ಲ ಎಂದುಕೊಂಡಿರುತ್ತಾಳೆ. ಈ ತಾಳ್ಮೆ ಅವರಿಬ್ಬರ ಪ್ರಣ
ಸಾತ್ವಿಕತೆಯ ಮಾಧುರ್ಯವನ್ನು ತಂದುಕೊಡುತ್ತದೆ. ಯಾವ ಸಂದರ್ಭ
ಯೂ ಔಚಿತ್ಯದ ಎಲ್ಲೆಯನ್ನು ಮೀರದ ಅವರ ನಡೆನುಡಿಗಳಾದರೂ ಅದೇ
ನೆಯನ್ನು ಬೆಳೆಯಿಸಿ ಬೆಳಗಿಸುತ್ತವೆ. ಹಾಗೆಂದೇ "ಇಂದಿರಾ" ಕಾದಂಬರಿ
ಕಾಂತ ಇಂದಿರೆಯರ ಕಥೆ ಮಾತ್ರವಾಗದೆ ಅವರ ಪ್ರಣಯ ಭಾವದ
ಯೂ ಆಗುತ್ತದೆ. ಅದು ಹುಟ್ಟಿ ಬೆಳೆದ ಬಗೆ, ಅದರ ವಿವಿಧ ಪರಿಗಳನ್ನು
ಬ್ಬರು ಅನುಭವಿಸಿದ ಬಗೆ, ಸೆರೆಯಾದ ಹೃದಯಗಳು ತೋರಿದ ಸಂಯಮ
ಯೇ ವ್ಯಕ್ತವಾಗುವ ಭಾವಮಾಧುರ್ಯದ ಬಗೆ, ಇದೇ ಕಾದಂಬರಿಯಲ್ಲಿ
ಘಟನೆಗಳಿಗಿಂತ ಹೆಚ್ಚಾಗಿ ಓದುಗನನ್ನು ಸೆರೆಹಿಡಿಯುತ್ತವೆ. ಇದನ್ನು ಹಾಗೂ
ದನ್ನು ಸಾಧ್ಯವಾಗಿಸುವ ಮನಸ್ಸಂಸ್ಕಾರ ಸಿದ್ಧಿಸುವುದು ವಿದ್ಯಾವ್ಯಾಸಂಗದಿಂದ,
ಕಲೆಗಳ ಶ್ರೀಮಂತ ಪ್ರಭಾವದಿಂದ ಎನ್ನುವುದನ್ನು ಚಿತ್ರಿಸುವುದೇ ಕಾದಂಬರಿ
ಉದ್ದೇಶ ಎಂದು ಧಾರಾಳವಾಗಿ ಹೇಳಬಹುದಾಗಿದೆ.

ರಮಾಕಾಂತ ಇಂದಿರಯರ ಮನಸ್ಸಂಸ್ಕಾರದಲ್ಲಿ, ಅವರು ತೋರುವ ಸಹನೆ
ಮಗಳಲ್ಲಿ, ಸಂವೇದನಶೀಲತೆಯಲ್ಲಿ ಆಧುನಿಕ ವಿದ್ಯಾಭ್ಯಾಸದ ಸಫಲತೆಯನ್ನು
ರ್ಯರು ಗುರುತಿಸಿದ್ದಾರೆ. ಈ ಸಫಲತೆ ಅವರಿಬ್ಬರಲ್ಲಿ ಒಂದು ಬಗೆಯಾಗಿ
ಕೊಂಡರೆ ಅವರಿಬ್ಬರಿಗೂ ನೈತಿಕ ಪೋಷಣೆಯನ್ನು ಒದಗಿಸಿ ಅವರ ಹಿತ
ಯನ್ನು ಮಾಡುವ ದೇವಯಾನಿಯಲ್ಲಿ ಇನ್ನೂ ಆಳವಾಗಿ ಧ್ವನಿತವಾಗುತ್ತದೆ.
ಬಾಲವೈಧವ್ಯ, ಮರುಮದುವೆಯನ್ನು ಮಾಡಿಕೊಳ್ಳಬೇಕೆಂದಾಗ ಎದುರಿಸ
ಗಿ ಬಂದ ನಿರಾಶೆ, ಅದನ್ನು ಗೆದ್ದು ಬೆಳೆಯಿಸಿಕೊಂಡ ಸಾತ್ವಿಕ ಮನೋ
, ಕಲಾಭಿರ , ತನ್ನ ಬದುಕಿನ ನೋವು ನಿರಾಶೆಗಳನ್ನು ಮರೆತು ಅದರ
ಕ್ಷೆಗಳನ್ನು ತನಗೆ ಹತ್ತಿದವರಾಗಿದ್ದವರ ಬದುಕಿನ ಸಫಲತೆಯಲ್ಲಿ ಈಡೇರಿಸಿ

ಕೊಳ್ಳುವ ಮನಸ್ಸಿನ ಔದಾರ್ಯ ಆಕೆಯನ್ನು ನಿಜವಾದ "ವಿದ್ಯಾವತಿ' ಯ
ನ್ನಾಗಿಸಿವೆ. ಆಕೆಯ ವಿದ್ಯಾಭ್ಯಾಸದ ಪರಿಣತಿ ಕ್ರಿಯಾಮುಖವಾಗಿ ಒಳ್ಳೆಯದರತ್ತ
ಒಲಿದು ಅನಕ್ಕೊಂದು ರಕ್ಷಾಕವಚವಾಗಿ ನಿಲ್ಲುತ್ತದೆ. ಅಂಥವರು ರಮಾಕಾಂ
ಇಂದಿರೆಯರಿಗೆ ಬೆನ್ನುಗಾವಲಾಗಿ ನಿಂತು ಅವರ ಬದುಕನ್ನು ಸುಖವಾಗಿಸಿದಳೆನು
ವುದು ಸ್ವಾಭಾವಿಕವೇ. ಈ ಮೂರು ಪಾತ್ರಗಳು ಅಂದಿನ ಸಮಾಜದಲ್ಲಿ ಕಾಣಿ
ಕೊಂಡ ವಿಚಾರಗಳ ತಾಕಲಾಟಕ್ಕೆ ವಾಸುದೇವಾಚಾರ್ಯರು ಕಂಡುಕೊಂಡ ಸಮಾ
ಧಾನದ ಉತ್ತರವನ್ನು ಹೇಳುತ್ತವೆ.

ಈ ದೃಷ್ಟಿಯಿಂದ ನೋಡಿದಾಗ ಪಂಡಿತೆ ರಾಧಾಬಾಯಿ, ಬಾಪ್ಕಳಪಂತ
ಮತ್ತು ಕಮಲಾ ಎದುರುಪಾತ್ರಗಳ ಒಂದು ಗುಂಪಾಗಿ ಕಾಣುತ್ತಾರೆ. ತನ
ನಿರಾಶೆಯನ್ನು ಗೆದ್ದು ನಿಂತ ದೇವಯಾನಿಗೆ ಇದಿರಾಗಿ ನಿರಾಶೆಯನ್ನು ಗೆಲ್ಲಲಾಗ
ಒಂದಲ್ಲ ಮೂರು ಮದುವೆಗಳನ್ನು ಮಾಡಿಕೊಂಡೂ ಅತೃಪ್ತಳಾಗಿಯೇ ಉಳಿದಿದ
ರಾಧಾಬಾಯಿಯ ಸಮಾಜಸೇವಾಕಾರ್ಯದ ಆಟೋಪಗಳು ತನ್ನ ಅಸ್ವಂತಪ್ತಿಯ
ಮತ್ತೊಂದು ಮುಖ ಮಾತ್ರ. ಬಾಪ್ಕಳಪಂತನ ಮರಾಠಿಯ ಅಭಿಮಾನ ಆತ
ಮನಸ್ಸಿನ ಬಾಗಿಲುಗಳನ್ನೇ ಮುಚ್ಚಿಬಿಟ್ಟಿದೆ. ಸ್ತ್ರೀಸ್ವಾತಂತ್ರ್ಯವನ್ನು ಕುರಿತ
ಉದ್ದಾಮವಾಗಿ ಬಹಿರಂಗ ಭಾಷಣಗಳನ್ನು ಬಿಗಿಯಬಲ್ಲ ಕಮಲೆ ರಮಾಕಾಂತ
ಮೋಹಕ್ಕಾಗಿ ತನ್ನ ಅಂತರಂಗವನ್ನು ಸೆರೆಯಾಗಿಸಿದ್ದಾಳೆ. ಪಂಡಿತೆಯ ಆತ್ಮಸಂಭ
ವಿತ ಮನೋವೃತ್ತಿ ತನ್ನಿಂದ ಸಮಾಜೋದ್ಧಾರ ಸಾಧ್ಯ ಎಂಬ ಆತ್ಮವಂಚನೆ
ಆಕೆಯನ್ನು ಈಡುಮಾಡುತ್ತದೆ. ಬಾಪ್ಕಳಪಂತನ ಮೂಢ ಅಭಿಮಾನ ತನ್ನನು
ತಾನೇ ಅಪಹಾಸ್ಯಕ್ಕೆ ಗುರಿಯಾಗಿಸುತ್ತದೆ. ಕಮಲೆಯ ಯೌವನ ಮತ್ತು ವೈಯಕ್ತಿ
ಬಯಕೆಗಳು ಆಕೆಯ ಮನಸ್ಸಿನ ಒಳಹೊರಗುಗಳ ನಡುವೆ ವಿರೋಧವನ್ನುಂಟು
ಮಾಡುತ್ತವೆ. ಈ ಮೂವರೂ ಕಲಿತವರು. ಸುಧಾರಕ ವಿಚಾರಗಳ ಪ್ರಚಾರಕರು
ಇವರ ಕಲಿಕೆ ಪ್ರಚಾರದ ಮಾತುಗಳಿಗೊಂದು ಸಾಧನವಾಯಿತೇ ಹೊರತು ತಮ
ಬದುಕಿನ ಸಮಸ್ಯೆಗಳನ್ನು ತಿಳುವಳಿಕೆಯಿಂದ ಸರಿಪಡಿಸಿಕೊಳ್ಳಲು ಸಹಾಯಕವಾಗ
ಲಿಲ್ಲ. ತಮ್ಮ ತಿಳುವಳಿಕೆಯನ್ನು ತಿದ್ದಿಕೊಳ್ಳದವರು, ತಮ್ಮ ಸ್ವಂತದ ಸಮಸ್ಯೆಗಳನು
ಬಗೆಹರಿಸಿಕೊಳ್ಳಲಾಗದವರು ಸಮಾಜದ ಸಮಸ್ಯೆಗಳನ್ನು ಪರಿಹರಿಸುತ್ತೇವೆಂದು
ಮುಂದಾಗಿ ಡಂಗುರ ಹೊಡೆದುಕೊಂಡು ಮೆರೆಯುವುದು ಅಪಹಾಸ್ಯಕ್ಕೊಂದು
ವಿಷಯ ಮಾತ್ರ ಎಂಬ ವ್ಯಂಗ್ಯವಿನೋದ ದೃಷ್ಟಿಯಿಂದ ಕಾದಂಬರಿಕಾರರು ಈ
ಪಾತ್ರವರ್ಗವನ್ನು ಸೃಷ್ಟಿಸಿದ್ದಾರೆಂದು ಕಾಣುತ್ತದೆ. ಅವರ ದೃಷ್ಟಿಯಲ್ಲಿ ವಿದ್ಯಾ

ಭ್ಯಾಸದ ವಿಫಲತೆಗೆ ಅಥವಾ ವಿಪರೀತಕ್ಕೆ ಇರುವ ನಿದರ್ಶನಗಳಾಗಿ ನಿಲ್ಲುತ್ತಾರೆ.

ಯಾವ ಸಂಸ್ಕಾರದ ಪ್ರಭಾವಗಳಿಗೂ ಒಳಗಾಗದೆ ತಾವೇ ತಾವಾಗಿ ಉಳಿದ ಪಾತ್ರಗಳ ಗುಂಪಿಗೆ ಸೇರಿದವರೆಂದರೆ ಇಂದಿರೆಯ ತಂದೆಯಾದ ಜಯರಾಯ, ಆಕೆಯನ್ನು ಮದುವೆಯಾಗಲಿದ್ದ ಶ್ರೀಕಂಠ ಮತ್ತು ಮದುವೆಯಾಗಬೇಕೆಂಬ ಬಯಕೆಯನ್ನಿರಿಸಿಕೊಂಡಿದ್ದ ನಟೇಶ. ಮೂವರೂ ಒಂದೊಂದು ರೀತಿಯಲ್ಲಿ ಅಸಂಸ್ಕೃತರು. ತಾಯಿ ಇಲ್ಲದ ಒಬ್ಬಳೇ ಮಗಳ ತಂದೆಯಾಗಿದ್ದರೂ ಸ್ವಂತದ ಪ್ರತಿಷ್ಠೆಗಾಗಿ ಮಗಳ ಸುಖವನ್ನು ಬಲಿಯಾಗಿಸಲು ಜಯರಾಯ ಸಿದ್ಧನಾಗಿರುತ್ತಾನಲ್ಲದೆ ಅದಕ್ಕಾಗಿ ಸುಳ್ಳುಗಳ ಸಂಚನ್ನು ಹೂಡುತ್ತಾನೆ. ಅಂಥದೇ ಸುಳ್ಳಿನ ಮೂಲಕ ಹಿಂದೊಮ್ಮೆ ರಮಾಕಾಂತನ ತಂದೆ ಮತ್ತು ದೇವಯಾನಿಯ ಬದುಕಿನಲ್ಲಿ ನಿರಾಶೆಯನ್ನು ತುಂಬಿದ ಆತ ಸಮಾಜದಲ್ಲಿಯ ಸ್ಥಾನಮಾನಗಳಿಗಾಗಿ ತನ್ನ ಮಗಳ ಹಾಗೂ ರಮಾಕಾಂತನ ಅಪೇಕ್ಷೆಗೆ ಆತಂಕವಾಗಬಯಸುತ್ತಾನೆ. ಔದಾರ್ಯದ ಸೋಂಕಿಲ್ಲದ್ದು ಹಿರಿಯದನ್ನು ಕಾಣದ, ಮನಸ್ಸು ಆತನದು. ಶ್ರೀಕಂಠ ಇಂದಿರೆಯ ಚೆಲುವನ್ನು ಮೆಚ್ಚುತ್ತಾನಾದರೂ ಆಕೆಯ ಮನಸ್ಸಿನ ಯೋಗ್ಯತೆಯನ್ನು ತಿಳಿಯಲಾರ. ಜಯರಾಯನಿಂದ ತಾನು ಪಡೆಯಬಹುದಾದ ಅನುಕೂಲಗಳಿಗೆ ಇಂದಿರೆ ಒಂದು ಸಾಧನ ಮಾತ್ರ. ಆಕೆಯನ್ನು ಕಳೆದುಕೊಂಡಾಗ ಯಾವ ಭಾವನೆಯನ್ನೂ ವ್ಯಕ್ತಮಾಡದ ಆತನಲ್ಲಿ ಆಕೆಯ ವಿಷಯದಲ್ಲಿ ಸ್ವಾರ್ಥಮೂಲವಲ್ಲದ ಎಂಥ ಆಸಕ್ತಿಯೂ ಇರಲಿಲ್ಲ. ತನ್ನದೆನ್ನುವ ಒಂದು ಮನಸ್ಸೇ ಇರಲಿಲ್ಲವೆನ್ನಬಹುದಾದ ಸುಖವಸ್ತು ಅವನೊಬ್ಬನೆನ್ನಬೇಕಾಗುತ್ತದೆ. ಸಾಲದ್ದಕ್ಕೆ ಬೇರೆ ಯಾವ ಯಾವವೋ ಸಹವಾಸಗಳು. ನಟೇಶನಲ್ಲಿಯ ಕೀಳರಿಮೆ ಆತನನ್ನು ಇಲ್ಲದ ಸಾಹಸಗಳಲ್ಲಿ ತೊಡಗಿಸಿ ಅಪಹಾಸ್ಯಕ್ಕೀಡುಮಾಡುತ್ತದೆ. ತನ್ನಕಿಂತ ಮೇಲಿನವರೆಂದುಕೊಂಡವರ ಬಗೆಯಲ್ಲಿ ಅಸಹನೆಯನ್ನು ಮೂಡಿಸುತ್ತದೆ, ತನಗೆ ಸಲ್ಲದ್ದಕ್ಕಾಗಿ ಹಾತೊರೆದು ನಿರಾಶೆಗೊಂಡು ಎಲ್ಲೆಲ್ಲಿಯೋ ಅಲೆದಾಡಿ ಹಿಂದಿರುಗಿ ತಾನು ಬಯಸಿದ್ದನ್ನು ಪಡೆಯಲಿದ್ದವನನ್ನು ಮುಗಿಸಿಬಿಡಬೇಕೆಂಬ ಕ್ಷಣಿಕ ವಿಷ ಆತನಿಗೆಯೇ ಮುಳುವಾಗುತ್ತದೆ. ಮೂಲತಃ ಆತ ಕೆಟ್ಟವನಲ್ಲ, ಆದರೆ ಕೀಳರಿಮೆ ಆತನ ಸ್ವಭಾವದಲ್ಲಿ ಕಹಿಯನ್ನು ಬಿತ್ತಿದೆ.

ಹೀಗೆ ಮೂರು ವಿಧವಾಗಿ ಮಾಡಲಾದ ಪಾತ್ರಗಳ ಯೋಜನೆಯೇ ಕಾದಂಬರಿಯ ಕಟ್ಟಡಕ್ಕೆ ಮೂಲಾಧಾರವಾಗಿದೆ. ಬಾಹ್ಯ ಘಟನೆಗಳಾದರೂ ಈ ಒಳರಚನೆಯಲ್ಲಿಂದಲೇ ಉಗಮ ಪಡೆಯುತ್ತವೆ. ತೊಡಕು ತೊಡಕಿನ ಕುತೂ

ಹಲಕಾರಿಯಾದ ಪುಟನೆಗಳಿಲ್ಲದೆಯೂ ಕಾದಂಬರಿ ಓದುಗನ ಆಸಕ್ತಿಯನ್ನು ಉಳಿಸಿಕೊಂಡು ಹೋಗುತ್ತದೆನ್ನುವುದರ ರಹಸ್ಯವನ್ನು ಪಾತ್ರಗಳ ಯೋಜನೆ ಮತ್ತು ಸನ್ನಿವೇಶದ ಬೆಳವಣಿಗೆಗಳ ನಡುವಿನ ಸಹಜಸಂಬಂಧದಲ್ಲಿ ನಾವು ಗುರುತಿಸಬೇಕಾಗುತ್ತದೆ. ಪಾತ್ರಯೋಜನೆ ಕಾದಂಬರಿಯ ಘಟನಾವಲಿಯನ್ನು ನಿರ್ಧರಿಸುವುದರ ಜೊತೆಗೆ ಅದರ ಒಟ್ಟು ಆಶಯವನ್ನು ಸ್ಪಷ್ಟವಾಗಿ ನಿರ್ದೇಶಿಸುವುದರಲ್ಲಿಯೂ ಸಹಕರಿಸುತ್ತದೆ ಎನ್ನುವುದು ಕಾದಂಬರಿಯ ರಚನಾವಿಧಾನದಲ್ಲಿಯ ಕೌಶಲವನ್ನು ಎತ್ತಿ ತೋರಿಸುತ್ತದೆ, ಈ ರಚನಾವಿಧಾನದಲ್ಲಿ ಒತ್ತು ಬೀಳುವುದು ಹೊರ ಜಗತ್ತಿನಲ್ಲಿಯ ಘಟನೆಗಳ ಮೇಲಾಗಿರದೆ ಪಾತ್ರಗಳ ಒಳಮನಸ್ಸಿನಲ್ಲಿಯ ತುಡಿತಗಳ ಮೇಲೆ ಎನ್ನುವುದು ತಂತ್ರದ ದೃಷ್ಟಿಯಿಂದ ಸಾಮಾನ್ಯ ವಿಷಯವಲ್ಲ. ಎಪ್ಪತ್ತು ವರ್ಷಗಳ ಹಿಂದಿನ ಈ ಕಾದಂಬರಿಯಲ್ಲಿ ಕಂಡುಬರುವ ತಂತ್ರದ ಪರಿಣತಿ ಸೋಜಿಗವನ್ನುಂಟುಮಾಡುತ್ತದೆ.

ವಿಷಯ ನಿರೂಪಣೆಯ ದೃಷ್ಟಿಯಿಂದ ಆಧುನಿಕ ವಿಚಾರಗಳ ಸಂಧಿಕಾಲಕ್ಕೆ ಸೇರಿದಂತೆ ಕಾದಂಬರಿಯ ರೀತಿಯಾದರೂ ಆ ಪ್ರಕಾರದ ಬೆಳವಣಿಗೆಯ ಸಂಧಿಕಾಲಕ್ಕೆ ಸೇರಿದ್ದಾಗಿದೆ. ಕಾದಂಬರಿ ಎಂದರೆ ಅದ್ಭುತರಮಣೀಯಾಂಶಗಳಿಂದ ಕೂಡಿದ ರಂಜಕವಾದ ಕಥಾನಕ ಎಂಬ ಕಲ್ಪನೆ ಅಳಿದು ಹೋಗುತ್ತಿದ್ದ ಕಾಲವದು. ವಾಸ್ತವ ಜೀವನದ ಚಿತ್ರಣದತ್ತ ಹಾತೊರೆಯುತ್ತಿದ್ದ ಬರವಣಿಗೆಯ ಈ ಪ್ರಕಾರ ಅದ್ಭುತ ರಮಣೀಯಾಂಶಗಳನ್ನು ಬುದ್ಧಿಪೂರ್ವಕವಾಗಿ ತೊರೆಯುವುದರಲ್ಲಿತ್ತು. "ಇಂದಿರಾ" ಅದ್ಭುತಾಂಶಗಳನ್ನು ಪೂರ್ತಿಯಾಗಿ ಬದಿಗಿರಿಸಿ ವಾಸ್ತವತೆಯ ಹೆದ್ದಾರಿಯಲ್ಲಿ ಬಂದು ನಿಂತ ಕೃತಿಯಾಗಿದೆ. ಮುಂದಿನ ಆರೇಳು ದಶಕಗಳಲ್ಲಿ ವಾಸ್ತವತೆ ಬೆಳೆದ ಬಗೆಗೆ ರೂಢಿಯಾಗಿದ್ದ ಇಂದಿನ ಓದುಗನಿಗೆ ಇಲ್ಲಿಯ ವಾಸ್ತವಿಕತೆಯೂ ಕೆಲವುಮಟ್ಟಿಗೆ ಕೃತ್ರಿಮವಾಗಿ ಕಾಣಬಹುದು, ಕಾದಂಬರಿಕಾರನ ವರ್ಣನೆಗಳಲ್ಲಿ ಮತ್ತು ಪಾತ್ರಗಳ ಸಂಭಾಷಣೆಯ ರೀತಿಯಲ್ಲಿ ಕೃತ್ರಿಮತೆಯ ಅಂಶಗಳಿಲ್ಲದಿಲ್ಲ. ಕಥೆಯ ಮಧ್ಯದಲ್ಲಿ ಕಾದಂಬರಿಕಾರ ನಿವೇದಕನಾಗಿ ಪ್ರತ್ಯಕ್ಷವಾಗಿ ಕಾಣಿಸಿಕೊಂಡು ಓದುಗನನ್ನು ಕೈಹಿಡಿದು ನಡೆಸಿಕೊಂಡು ಹೋಗುವುದಾದರೂ ಹಳೆಯ ಸಂಪ್ರದಾಯದ ಕೃತ್ರಿಮತೆಯೇ. ಹಾಗಿದ್ದರೂ ಕಾದಂಬರಿಯ ರೀತಿ ವಾಸ್ತವಚಿತ್ರಣದ ರೀತಿ ಎಂದೇ ಹೇಳಬೇಕಾಗುತ್ತದೆ. ಅದು ಆ ರೀತಿಯ ಪ್ರಾರಂಭದ ದೆಸೆ ಎನ್ನುವುದನ್ನು ಮರೆತು ಇಂದಿನ ಮಾನಕಗಳಿಂದ ಅಂದಿನ ರೀತಿಯನ್ನು ವಿಮರ್ಶಿಸುವುದು ನ್ಯಾಯವಾಗಲಾರದು.

ಇಲ್ಲಿ ನಾವು ಕಾಣುವುದು ವಾಸ್ತವಿಕವಿಧಾನದ ಪ್ರಾರಂಭದ ದೆಸೆಯನ್ನಾದರೂ ಅದರ ಹೆಜ್ಜೆ ಖಚಿತವಾಗಿದ್ದಂತೆ ಅದರ ಮುನ್ನೋಟ ಸ್ಪಷ್ಟವಾಗಿದೆ. ಪಾತ್ರಗಳ ಸ್ವಭಾವಸತ್ವವನ್ನು ಅನುಸರಿಸಿಕೊಂಡು ಹೋಗುವ ಕಥಾರಚನೆಯಲ್ಲಿ ಈ ವಿಧಾನದ ಒಂದು ಪರಿಯನ್ನು ನಾವು ಕಾಣುತ್ತೇವೆ. ಆದರೆ ಅದಕ್ಕೂ ಸ್ಪಷ್ಟವಾಗಿ ಈ ಕಾದಂಬರಿಯಲ್ಲಿಯ ವಾಸ್ತವಿಕತೆಯ ರೀತಿ ಎರಡು ವಿಧದಲ್ಲಿ ನಮ್ಮ ಲಕ್ಷ್ಯವನ್ನು ಸೆಳೆಯುತ್ತದೆ. ಸನ್ನಿವೇಶಗಳ ಸಂಭಾವ್ಯತೆಯಲ್ಲಿ ಹಾಗೂ ಸಂಭಾಷಣೆಯನ್ನು ವಿಪುಲವಾಗಿ ಬಳಸಿ ಅವುಗಳ ಮೂಲಕ ಕಥೆಯನ್ನು ಹೆಚ್ಚಾಗಿ ನಮ್ಮ ಕಣ್ಣೆದುರಿನಲ್ಲಿಯೇ ನಡೆಸಿಕೊಂಡು ಹೋಗುವ ವಿಧಾನದಲ್ಲಿ. ಅಸಂಭಾವ್ಯವೆನ್ನಬಹುದಾದ ಯಾವ ಒಂದು ಘಟನೆಯೂ ಕಾದಂಬರಿಯಲ್ಲಿ ನಡೆಯುವುದಿಲ್ಲ. ಯಾವ ಒಂದು ಸಂಗತಿಯೂ ಆಕಸ್ಮಿಕ ಅಥವಾ ಕಾಕತಾಲೀಯ ಎನಿಸುವುದಿಲ್ಲ. ಪೂರ್ವನಿರ್ಧಾರಿತವಾದ ಬೆಳವಣಿಗೆಗಳನ್ನು ಮನಸ್ಸಿನಲ್ಲಿರಿಸಿಕೊಂಡು ಸನ್ನಿವೇಶಗಳನ್ನು ಯೋಜಿಸಿಕೊಳ್ಳಲಾಗಿದೆ ಎಂಬ ಭಾವನೆ ಉಂಟಾಗುವುದಿಲ್ಲ. ಸನ್ನಿವೇಶಗಳು ತಾವಾಗಿಯೇ ರೂಪುಗೊಂಡು ನಿಲ್ಲುವಂತೆ ಭಾಸವಾಗುತ್ತದೆ. ಒಂದು ಕಡೆಯಿಂದ ಪಾತ್ರಗಳ ಸ್ವಭಾವಸತ್ವ ಇನ್ನೊಂದು ಕಡೆಯಿಂದ ಸಂಭಾವ್ಯತೆಯ ಬಗೆಯಲ್ಲಿ ಜಾಗೃತವಾದ ಅರಿವು ವಾಸ್ತವಿಕತಗೆ ಪೋಷಕವಾಗಿ ಕೆಲಸ ಮಾಡಿವೆ. ಇದಕ್ಕೆ ಸಹಾಯಕವಾಗುವಂತೆ ಕಾದಂಬರಿಯುದ್ದಕ್ಕೂ ವಿವರಣೆಯ ರೀತಿಗಿಂತ ಹೆಚ್ಚಾಗಿ ದೃಶ್ಯಯೋಜನೆಯನ್ನೇ ಬಳಸಿಕೊಂಡಿದ್ದರಿಂದ ನಡೆಯುವುದೆಲ್ಲವೂ ತನ್ನ ಕಣ್ಣೆದುರಿನಲ್ಲಿಯೇ ನಡೆಯುತ್ತಿದೆ ಎಂಬ ಭಾವನೆ ಓದುಗನಲ್ಲಿ ಬಲಗೊಳ್ಳುತ್ತದೆ. ಮಾತಿನ ರೀತಿಯಲ್ಲಿ ಅಲ್ಲಲ್ಲಿ ಕಾಣಿಸಿಕೊಳ್ಳುವ ಕೃತ್ರಿಮಾಂಶಗಳು ಮನಸ್ಸಿನಿಂದ ಮರೆಯಾಗಿ ನಡೆಯುತ್ತಿದ್ದ ನಾಟಕವೇ ಓದುಗರನ್ನು ಸೆರೆಹಿಡಿಯುತ್ತದೆ. ಆರಂಭಕಾಲದ ಈ ಕಾದಂಬರಿ ಇಷ್ಟೊಂದು ಪ್ರಮಾಣದಲ್ಲಿ ಸಂಭಾಷಣೆಯನ್ನು ಬಳಸಿಕೊಂಡದ್ದು ಆಶ್ಚರ್ಯಕರವಾದ ಸಂಗತಿಯೇ. ಪಾತ್ರದರ್ಶನ ಮತ್ತು ಸನ್ನಿವೇಶದ ಮುನ್ನಡೆಯನ್ನು ಏಕಕಾಲಕ್ಕೆ ಸಾಧಿಸುವ ಸಂಭಾಷಣೆಗಳ ಬಳಕೆಯಲ್ಲಿ ಮುಂದೆ ಈ ಸಾಹಿತ್ಯಪ್ರಕಾರ ವಾಸ್ತವಿಕತೆಯ ವಿಧಾನಗಳನ್ನು ರೂಢಿಸಿಕೊಂಡ ದಾರಿಯ ಸ್ಪಷ್ಟವಾದ ಮುನ್ಸೂಚನೆಯನ್ನು ಕಾಣಬಹುದು.

ಕೊನೆಯದಾಗಿ, ವಾಸುದೇವಾಚಾರ್ಯರ ಕನ್ನಡ ಶೈಲಿಯನ್ನು ಕುರಿತು ಒಂದೆರಡು ಮಾತುಗಳನ್ನು ಹೇಳಬೇಕು. ಅವರ ಬರವಣಿಗೆಯ ರೀತಿಯಾದರೂ ಸಂಧಿಕಾಲದ್ದೆ. ಕನ್ನಡವನ್ನು ಒಂದು ಶಕ್ತಮಾಧ್ಯಮವನ್ನಾಗಿಸಬೇಕೆಂಬ ಸಫಲ ಪ್ರಯತ್ನ

ಅವರದಾಗಿದೆ. ಸಮಕಾಲೀನವಾಗಿ ಪ್ರಚಾರದಲ್ಲಿದ್ದ ಆಡಂಬರದ ರೀತಿಯ ಬಗೆಯಲ್ಲಿ ಅವರು ಹೇಳಿದ ಮಾತುಗಳನ್ನು ಆಗಲೆ ಉದ್ಧರಿಸಿಯಾಗಿದೆ. ಕನ್ನಡ ಬರವಣಿಗೆ ಸಂಧಿಸಮಾಸಗಳ ಬಿಗಿ ಹಿಡಿತದಿಂದ, ಬಳಕೆ ತಪ್ಪಿದ ಮಾತುಗಳ ಬಳಕೆಯಿಂದ, ಸಂಕೀರ್ಣವಾದ ವಾಕ್ಯರಚನೆಯ ರೀತಿಯಿಂದ ದೂರವಾಗಿರಬೇಕೆಂಬ ತಮ್ಮ ಅಭಿಲಾಷೆಯನ್ನು ಅವರು ಕಾರ್ಯಗತವಾಗಿಸಿದರು. ಬರೆಯುವುದು ಓದುವವನಿಗಾಗಿ. ಆದ್ದರಿಂದ ಓದುವವನಿಗೆ ಅರ್ಥವಾಗುವ ರೀತಿಯಲ್ಲಿ ಬರೆಯುವುದು ಮುಖ್ಯ ಎಂದು ನಂಬಿದವರು ಅವರು. ಸಾಹಿತ್ಯಕಾರರಾಗಿದ್ದಂತೆ ಪತ್ರಿಕಾಕರ್ತರೂ ಆಗಿದ್ದ ಅವರಿಗೆ ಓದುಗನ ಮನಸ್ಸನ್ನು ಮುಟ್ಟುವಂತೆ ಬರೆಯಬೇಕಾದದ್ದು ಅನಿವಾರ್ಯವಾಗಿತ್ತು. ಅದಕ್ಕೆ ಅನುಕೂಲವಾಗುವ ಶೈಲಿಯನ್ನು ಅವರು ರೂಢಿಸಿಕೊಂಡರು. ಸರಳವಾದ ಸಹಜಗತಿ ಅವರ ಶೈಲಿಯ ಮುಖ್ಯ ಲಕ್ಷಣವಾಗಿದೆ. ಕಂಡ ದೃಶ್ಯದ ವರ್ಣನೆಯೇ ಆಗಲಿ, ರಾಜ್ಯಾಂಗಕ್ಕೆ ಸಂಬಂಧಿಸಿದ ವಿಚಾರಗಳ ವಿಶ್ಲೇಷಣೆಯೇ ಆಗಲಿ, ತಿಳಿಸಬೇಕೆಂಬುದನ್ನು ಸ್ಪಷ್ಟವಾಗಿ ತಿಳಿಸಬಲ್ಲ ರೀತಿ ಅವರದು. ಇಂದಿನ ಓದುಗರಿಗೆ ಕೆಲವೊಂದು ಸಂದರ್ಭಗಳಲ್ಲಿ ಅವರ ರೀತಿ ಹಳೆಯದಾಗಿ ಕಾಣುವುದು ಸಾಧ್ಯವಿದೆ. ಆದರೆ ಇಂದಿನ ರೀತಿಗೆ ದಾರಿಯನ್ನು ಕಡಿದುಕೊಟ್ಟವರು ಅವರು. ಅನೇಕ ಕಡೆಗಳಲ್ಲಿ ಸಂಭಾಷಣೆಯ ರೀತಿ ನಾಟಕೀಯವೆನಿಸಬಹುದು. ಆದರೆ ಯಾವುದನ್ನು ಹಿಂದೆಬಿಟ್ಟು ಎಷ್ಟನ್ನು ಸಾಧಿಸಿದರು ಎನ್ನುವುದನ್ನು ನೆನೆಯದೆ ವಾಸ್ತವಿಕ ಕಥಾರಚನೆಯಲ್ಲಿ ಹೇಗೋ ಹಾಗೆ ಹೊಸ ಕನ್ನಡದ ಶೈಲಿಯನ್ನು ರೂಪಿಸುವುದರಲ್ಲಿ ಅವರು ಮಾಡಿದ ಕೆಲಸ ನಮಗೆ ಅರ್ಥವಾಗದು. ಎಪ್ಪತ್ತು ವರ್ಷಗಳ ಹಿಂದಿನ ಅವರ ಬರವಣಿಗೆಯನ್ನು ಓದುತ್ತಿದ್ದ ಹಾಗೆ ಶಕ್ತಿಯುತವಾದ ಎಷ್ಟು ಪಡಿನುಡಿಗಳನ್ನು, ಅರ್ಥಯುತವಾದ ಎಷ್ಟು ಪದಗಳನ್ನು, ಕನ್ನಡದ ಬರವಣಿಗೆ ಕಳೆದುಕೊಂಡಿದೆ ಎನ್ನುವುದರ ಅರಿವಾಗುತ್ತದೆ. ಒಂದೇ ರೀತಿಯ ಬರವಣಿಗೆಯ ರೀತಿಯನ್ನು ರೂಢಿಸಿಕೊಳ್ಳುತ್ತಿದ್ದ ಇಂದಿನ ನಾವು ವಾಸುದೇವಾಚಾರ್ಯರ ಕನ್ನಡದಲ್ಲಿ ಎದ್ದು ಕಾಣುವ ಸೊಗಡನ್ನು, ಹೆಡಸನ್ನು, ಜೀವಂತಿಕೆಯನ್ನು ಕಳೆದುಕೊಳ್ಳುತ್ತಿದ್ದೇವೆ ಎನ್ನುವುದು ಯೋಚನೆಮಾಡಬೇಕಾದ ಅಂಶವಾಗಿದೆ. ರಾಜಕೀಯದಲ್ಲಿ, ಸಾಮಾಜಿಕ ವಿಚಾರಗಳಲ್ಲಿ, ಸಾಹಿತ್ಯಕೃತಿಗಳನ್ನು ರೂಪಿಸಿದ ಅವರ ದೃಷ್ಟಿಯಲ್ಲಿ, ಮುನ್ನಡೆ ಅವರ ಮೂಲಮಂತ್ರವಾಗಿತ್ತು. ಈ ಮುನ್ನಡೆಯನ್ನು ಅವರು ಹಾಗೂಹೀಗೂ ಕಾಲೆಳೆಯುತ್ತ ಸಾಧಿಸಲಿಲ್ಲ. ಇದ್ದದ್ದಹಾಗೆ ಹತ್ತಲ್ಲ ನೂರು ಹೆಜ್ಜೆ ಮುಂದೆ ನಡೆದರು. ಅವರ ಎಲ್ಲ ಕೃತಿಗಳೂ ಅಷ್ಟನ್ನು ತೋರಿಸಿ

ಕೊಡುತ್ತವೆ. ಅದರಲ್ಲಿಯೂ ವಿಶೇಷವಾಗಿ ಅವರ ‘ಇಂದಿರಾ’ ಕಾದಂಬರಿ. ಅದರೊಂದಿಗೆ ಕನ್ನಡ ಕಾದಂಬರಿ ಎಲ್ಲಾರ್ಥದಲ್ಲಿಯೂ ಆಧುನಿಕವಾಯಿತು. ಮುಂದಿನ ಸಾಧನೆಗಳಿಗೆ ಕೈಮರವಾಯಿತು.

ವಾಸುದೇವಾಚಾರ್ಯರ ಕೃತಿಗಳನ್ನು ಕುರಿತು ಮೇಲೆ ಬರೆದ ಕೆಲವು ಮಾತುಗಳು ಅವರ ಬರವಣಿಗೆಯ ಚಾರಿತ್ರಿಕ ಮಹತ್ವವನ್ನು ಮನವರಿಕೆ ಮಾಡಿಕೊಡಬಹುದು ಎಂದುಕೊಂಡಿದ್ದೇನೆ. ಅವರ ಕೃತಿಗಳ ಪುನರ್ಮುದ್ರಣ ನಡೆಯಬೇಕಾದಂತೆ ಅವರು ಮಾಡಿದ ಕಾರ್ಯದ ವಿಶ್ಲೇಷಣೆ ವಿಮರ್ಶೆಗಳ ಕೆಲಸವೂ ನಡೆಯಬೇಕಾಗಿದೆ. ಎಪ್ಪತ್ತು ವರ್ಷಗಳ ಹಿಂದೆಯೇ ಕಥೆ ಕಾದಂಬರಿಗಳಲ್ಲಿ ಅವರು ಸಾಧಿಸಿಕೊಂಡಿದ್ದ ಪರಿಣತಿ ಮುಂದಿನ ಬೆಳವಣಿಗೆಗೆ ಯಾವ ವಿಧದಲ್ಲಿ ಮಾರ್ಗದರ್ಶಕವಾಯಿತೆನ್ನುವುದನ್ನು ಸಾಹಿತ್ಯ ಚರಿತ್ರಕಾರರು ಗುರುತಿಸಬೇಕಾಗಿದೆ. ಹಾಗೆಯೇ ಕನ್ನಡದ ಗದ್ಯವನ್ನು ಆಧುನಿಕವಾಗಿಸುವುದರಲ್ಲಿ ಅವರು ಮಾಡಿದ ಕೆಲಸವನ್ನು, ಅವರ ಶೈಲಿಯ ವೈಶಿಷ್ಟ್ಯಗಳನ್ನು ವಿಶ್ಲೇಷಿಸಿ ತೋರಿಸಬೇಕಾಗಿದೆ. ವಾಸುದೇವಾಚಾರ್ಯರು ೧೯೨೧ರ ಜನವರಿ ೨೧ರಂದು ನಿಧನರಾದರು. ಅವರು ಇಲ್ಲದಾಗಿ ಅರ್ಧ ಶತಮಾನವಾಗಿ ಹೋದರೂ ಅವರನ್ನಾಗಲಿ (ಮುದ್ದಣನೊಬ್ಬನನ್ನು ಹೊರತುಪಡಿಸಿ) ಅವರ ಇತರ ಸಮಕಾಲೀನರನ್ನಾಗಲಿ ಕುರಿತು ವಿಶೇಷ ಸಂಶೋಧನೆ ಅಥವಾ ವಿಮರ್ಶೆಯ ಕಾರ್ಯ ನಡೆಯದಿದ್ದುದು ದುರದುಷ್ಟಕರ ಸಂಗತಿ. ಆಚಾರ್ಯರ ಸಾಹಿತ್ಯದೃಷ್ಟಿಯು ಅನೇಕ ಮುಖಗಳ ಕಡೆಗೆ ವಿಮರ್ಶಕರ ಗಮನ ಹರಿಯುವಂತಾದರೆ ಈ ಮುನ್ನುಡಿಯ ಬರಹ ಸಾರ್ಥಕವೆಂದು ಭಾವಿಸುತ್ತೇನೆ.

೨೫–೮–೧೯೭೮
ಬೆಂಗಳೂರು

ವಿ. ಎಂ. ಇನಾಂದಾರ್

ಇಂದಿರಾ

ಹೊಸ ಪರಿಚಯ

ವಸಂತಮಾಸವು ಅರ್ಧಗಳೆಯಲಿಕ್ಕೆ ಬಂದಿತ್ತು. ನಾಲ್ಕೂ ದಿಕ್ಕುಗಳಲ್ಲಿ ವಸಂತಲಕ್ಷ್ಮಿಯು ತನ್ನೈಶ್ವರ್ಯದ ಪ್ರದರ್ಶನವನ್ನು ಮಂಡಿಸಿದ್ದಳು. ವನೋಪವನಗಳಲ್ಲಿಯ ವಿವಿಧವಾದ ವೃಕ್ಷಲತೆಗಳು ಬಗೆ ಬಗೆಯ ಬಣ್ಣದ ಹೂಗಳಿಂದ ಬೆಂಗಳೂರಿನ ಸುತ್ತುಮುತ್ತಿನ ಪ್ರದೇಶಕ್ಕೆ ವಿಲಕ್ಷಣವಾದ ಶೋಭೆಯನ್ನು ಕೊಟ್ಟಿದ್ದವು. ರಾಜಮಂದಿರಗಳ ಸುತ್ತಲೂ, ಶ್ರೀಮಂತರ ಮನೆಗಳೆಡೆಗೂ, ಇದ್ದ ಚಿತ್ರಮಯವಾದ ಉದ್ಯಾನಗಳು ರವಿವರ್ಮನಂಥ ಚಿತ್ರಕಲಾನಿಪುಣನನ್ನು ಕೂಡ ಚಕಿತನನ್ನಾಗಿ ಮಾಡುವವು. ಕೋಕಿಲೆಗಳು ವಸಂತರಾಜನ ಮಹಾತ್ಮೆಯನ್ನು ಕೊಂಡಾಡುತ್ತವೇನೋ ಎಂಬಂತೆ ಶ್ರುತಿಮನೋಹರವಾಗಿ ಕಲಕಂಠ ಧ್ವನಿಯನ್ನು ಮಾಡುತ್ತಿದ್ದವು. ಕಾಮೀಜನರಂತೆಯೇ ಮಂದಮಾರುತನು ಗಂಧ ಮಾಲ್ಯಾನುಲೇಪನಗಳನ್ನು ಹೊಂದಿರುವನೋ ಎಂಬಂತೆ ಅವನು ಹಾಯ್ದೆಡೆಗೆ ಸುವಾಸವು ಬರುತ್ತಿತ್ತು.

ಈ ಮಧುಮಾಸದಲ್ಲಿ ಒಂದು ದಿನ ಪ್ರಾತಃಕಾಲದ ತಂಗಾಳಿಯಲ್ಲಿ ತಿರುಗಾಡಿ ಸದ್ವಿಕಾರಗಳಿಗೆ ಪ್ರೋತ್ಸಾಹನೆಯನ್ನು ಕೊಡುವಂಥ ವಸಂತ ಶೋಭೆಯನ್ನು ನೋಡುತ್ತ ಪಟ್ಟಣವನ್ನು ಪ್ರವೇಶಿಸಿ ಅಲ್ಲಿ ವಿಸ್ತೀರ್ಣವಾಗಿಯೂ ಸ್ವಚ್ಛವಾಗಿಯೂ ಇರುವಂಥ ಬೀದಿಗಳನ್ನೂ ಅವುಗಳೆರಡೂ ಮಗ್ಗುಲಿಗೂ ರಮ್ಯವಾಗಿರುವ ಮನೆಗಳ ಸಾಲುಗಳನ್ನೂ, ಮಾತಾಡಲು ಕೂಡ ಅವಕಾಶವರಿಯದ ಗ್ರಾಹಕರಿಂದಲೂ ಅಂಗಡಿಗಾರರಿಂದಲೂ ತಳಕಮಳಕಾಗಿರುವ ಪೇಟೆಗಳನ್ನೂ, ಧಾರ್ಮಿಕರ ಕೀರ್ತಿಯನ್ನು ಸ್ವರ್ಗಕ್ಕೆ ಮುಟ್ಟಿಸಲುದ್ಯುಕ್ತವಾಗಿವೆಯೋ ಎಂಬಂತೆ ಗಗನ ಚುಂಬಿತವಾಗಿ ಕಟ್ಟಿರುವ ದೇವಾಲಯಗಳನ್ನೂ, ಛತ್ರಗಳನ್ನೂ, ಔಷಧಾಲಯಗಳನ್ನೂ ಸೂಕ್ಷ್ಮರೀತಿಯಿಂದ ನಿರೀಕ್ಷಿಸುತ್ತ ಒಬ್ಬ ತರುಣನು ನಡೆದಿರುವನು. ಇವನಿಷ್ಟು ಮನಗೊಟ್ಟು ನಗರ ಶೋಭೆಯನ್ನು ನೋಡುವುದರ ಮೇಲಿಂದ ಬೆಂಗಳೂರಿಗೆ ಹೊಸಬನೇ ಸರಿ. ಇವನು ಶೇಷಮ್ಮನ ಛತ್ರದ ಹತ್ತಿರವಿರುವುದೊಂದು ಮನೆಯಲ್ಲಿ ಸೇರಿದನು. ದೊಡ್ಡದಾದ ಪುರಾತನ ಮನೆಯದು. ಅದಕ್ಕೆರಡಂತಸ್ತು

ಗಳಿದ್ದವು. ಹೊರವಂಗ್ಗಲಿಗಿದ್ದ ಸೋಪಾನದಿಂದ ಮೇಲಿನಂತಸ್ತಿನಲ್ಲಿದ್ದ ತನ್ನ ಸ್ಥಳಕ್ಕೆ ಈ ತರುಣನು ಹೋದನು. ಅಲ್ಲಿ ಪ್ರಶಸ್ತವಾದ ನಡುಮನೆಯೂ ಅದ ರೆರಡೂ ಬದಿಗೆರಡು ಕೋಣೆಗಳೂ ಇದ್ದವು. ನಡುಮನೆಯ ಮಧ್ಯದಲ್ಲಿ ದೊಡ್ಡ ದಾದೊಂದು ಮೇಜೂ ನಾಲ್ಕಾರು ಕುರ್ಚಿಗಳೂ ಪುಸ್ತಕಗಳಿಂದ ತುಂಬಿದ ಎರಡು ಕನ್ನಡಿಯ ಕಪಾಟುಗಳೂ ಮುಂತಾದ ಒಡವೆಗಳಿದ್ದವು. ಮೇಜಿನ ಮೇಲೆ ಹತ್ತೆಂಟು ಪುಸ್ತಕಗಳೂ ಲೇಖನ ಸಾಮಗ್ರಿಯೂ ಇದ್ದವು. ಈ ತರುಣನು ಬರುವವನೇ ಮೈಮೇಲಿನ ಬಟ್ಟೆಗಳನ್ನು ತೆಗೆದಿಟ್ಟು ಆರಾಮ ಕುರ್ಚಿಯಲ್ಲಿ ಕುಳಿತು ಕೊಂಡನು.

ಅಷ್ಟರಲ್ಲಿ ಮನೆಯ ಕೆಳಭಾಗದಲ್ಲಿದ್ದ ಭೋಜನೋಪಹಾರಗೃಹದ ಸ್ಥೂಲ ಕಾಯದ ಚಾಲಕನು "ಗೋಪಾಲ, ಮೇಲೆ ರಮಾಕಾಂತರು ಬಂದಿದ್ದಾರೆ; ಉಪ ಹಾರ ಕಾಫಿಗಳಿನ್ನೊಯ್ದು ಕೊಡು" ಎಂಬ ತನ್ನ ಸೇವಕನಿಗೆ ಕೂಗಿ ಹೇಳಿದನು. ರಮಾಕಾಂತನೆಂದರೆ ಈ ನಮ್ಮ ತರುಣ ಗೃಹಸ್ಥನು ಸಿದ್ಧನಾಗಿ ಉಪಹಾರಕ್ಕೆ ಕುಳಿತನು.

ರಮಾಕಾಂತನು ಜಾತ್ಯಾ ಸದೃಢನಿದ್ದು ಗರಡಿಸಾಧಕದಿಂದ ಅವನ ಶರೀರವು ಹುರಿಕಟ್ಟಾಗಿತ್ತು. ಅವನ ಉನ್ನತವಾದ ದೇಹವೂ ವಿಶಾಲವಾದ ಎದೆಯೂ ಬೀಸಾದ ಕೈಕಾಲುಗಳೂ ನೋಡುವವರಿಗೆ ಇವನೇನು ಸಾಕ್ಷಾತ್ ದಿಲೀಪನೇ ಬಂದಿ ರುವನೇನೋ ಎಂಬಂತೆ ಭಾವಿಸುತ್ತಿದ್ದವು. ಇವನ ಮೈಬಣ್ಣವು ಗೌರವರ್ಣ ದಿದ್ದು ಮುಖವು ಸುಂದರವಾದದ್ದೆಂದು ಹೇಳಲಭ್ಯಂತರವಿಲ್ಲ. ಈ ತರುಣನ ವಿಶಾಲವಾದ ಹಣೆಯಿಂದಲೂ ಹೊಳೆಯುವ ಕಣ್ಣುಗಳಿಂದಲೂ ನಿಡಿದಾದ ಮೂಗಿನಿಂದ ಈತನು ಸುಸ್ವಭಾವದವನೂ ಬುದ್ಧಿವಂತನೂ ಇರುವನೆಂದು ಊಹಿ ಸುತ್ತೇವೆ.

ಉಪಹಾರದನಂತರ ರಮಾಕಾಂತನು ತಾನಿದ್ದ ಸ್ಥಳವನ್ನು ಚೆನ್ನಾಗಿ ಪರೀಕ್ಷಿಸಿ ನೋಡಲಾರಂಭಿಸಿದನು. ಈ ಭವ್ಯವಾದ ಮನೆಯೂ ಇದರ ಸುತ್ತಲಿದ್ದ ಹಾಳಾದ ಉದ್ಯಾನವೂ, ವೈಭವವೂ ಶಾಶ್ವತವಾದದ್ದಲ್ಲೆಂದು ಹೇಳುತ್ತವೇನೋ ಎಂಬಂತೆ ಕಾಣಿಸುತ್ತಿದ್ದವು. ಮಾಸಿಹೋದ ಬಂಗಾರದ ಲಾಜಾವರಿಯು ಬಾಗಿಲ ಗಳಲ್ಲಿ ಇನ್ನೂ ಕೊಂಚ ಕಾಣಿಸುತ್ತಿತ್ತು. ಗೋಡೆಗಳ ಮೇಲೆ ಪ್ರವೀಣರಿಂದ ತೆಗೆಸಿದ ಚಿತ್ರಗಳ ಗುರ್ತುಗಳಿದ್ದವು. ಆರಾಮ ಕುರ್ಚಿಯಲ್ಲಿ ಕುಳಿತು ರಮಾಕಾಂತನು ನೋಡುತ್ತಿರಲಾಗಿ ಇವನ ದೃಷ್ಟಿಯು ಮನೆಯ ಮೇಲ್ಕಟ್ಟಿನ

ಕಡೆಗೆ ಹೋಯಿತು. ಅಲ್ಲಿ ಒಳ್ಳೇ ಕೌಶಲದಿಂದ ತೆಗೆದ ಲಕ್ಷ್ಮೀದೇವಿಯ ಮನೋಹರವಾದ ಚಿತ್ರವು ಯಾರಿಗೂ ನಿಲುಕದಂತಿದ್ದುದರಿಂದ ಹೇಗೆ ತೆಗೆದಂತೆಯೇ ಅನೂನವಾಗಿತ್ತು, ಉದ್ಧತನಾದ ಐರಾವತನು ನೀರಿನಲ್ಲಿ ಧುಮುಕಿದ್ದರಿಂದ ಹೊರಟ ತರಂಗಗಳ ಸಮೂಹದಿಂದ ಅಲ್ಲಿದ್ದ ಕಮಲಲತೆಯು ಹೊಯ್ದಾಡಿದಂತೆಯೂ ಅದನ್ನು ನೋಡಿ ಕ್ಷುಭಿತವಾದ ಕುರುಂಡವಗಳು ತೀರಕ್ಕೆ ಓಡಲುದ್ಯುಕ್ತವಾದಂತೆಯೂ, ಪ್ರಸನ್ನೆಯಾದ ಲೋಕಮಾತೆಯು ತನ್ನ ಪದ್ಮನಿವಾಸವನ್ನು ಬಿಟ್ಟು ಭಕ್ತರ ದುಃಖಗಳನ್ನು ದೂರಮಾಡುವದಕ್ಕೆ ಈಗಲೇ ಹೊರಟರುವಳೋ ಎಂಬಂತೆ ತೋರಿಸಿರುವ ಚಿತ್ರಕಾರನ ಹಸ್ತಕೌಶಲಕ್ಕೇ ಬೆರಗಾಗಿ ತದೇಕಧ್ಯಾನನಾಗಿ ರಮಾಕಾಂತನು ಕುಳಿತಿರುವಾಗ ಯಾರೊ ಬಾಗಿಲದ ಮೇಲೆ ಕಯ್ಯೊಡೆದ ಸಪ್ಪಳವಾಯಿತು. ರಮಾಕಾಂತನು ಫಕ್ಕನೆ ತಿಳಿವೆದ್ದು "ಯಾರವರು ? ಬನ್ನಿರಿ" ಎಂದನು. ಅಷ್ಟರಲ್ಲಿ ಬಾಗಿಲ ನೂಕಿ ಒಬ್ಬ ತರುಣನು ಬಂದನು, ಇವನನ್ನು ನೋಡಿ ರಮಾಕಾಂತನು ಒಳ್ಳೇ ಆನಂದದಿಂದ "ಓಹೋ ರಂಗರಾವ, ಇದೇನಲಭ್ಯ ಲಾಭವು ! ದಯಮಾಡಿ ವಿಶ್ರಮಿಸಿಕೊಳ್ಳಿರಿ."

ರಂಗರಾಯನು ಕುಳಿತುಕೊಂಡು "ನಿನ್ನೆ ನಾನು ಚಾಮರಾಜಪೇಟೆಗೆ ಹೋಗುವಾಗ್ಯೆ ಇದೇ ಸ್ಥಳದಲ್ಲಿ ನೀವು ನಿಂತದ್ದು ಕಂಡಂತಾಯಿತು, ಈ ದಿವಸ ಮುಂಜಾನೆ ನಾನು ದಿವಾನರ ಕೂಡ ರಥದಲ್ಲಿ ಕುಳಿತು ಲಾಲಬಾಗದ ಕಡೆಗೆ ತಿರುಗಾಡಲಿಕ್ಕೆ ಹೋಗುವಾಗ್ಯೆ ನಿಮ್ಮನ್ನು ಬೀದಿಯಲ್ಲಿ ಕಂಡೆನು. ಆ ಮೇಲೆ ನಿಸ್ಸಂದೇಹವಾಗಿ ಇಲ್ಲಿರುವವರು ನೀವೇ ಎಂದು ತಿಳಿದು ನಿಮ್ಮ ದರ್ಶನಾಪೇಕ್ಷೆಯಿಂದ ಬಂದೆನು."

"ರಂಗರಾವ, ನಿಮ್ಮ ದರ್ಶನಲಾಭದಿಂದ ನನಗೆ ತುಂಬಾ ಆನಂದವಾಗಿರುವದು. ಸ್ನೇಹಿತರ ಸಮಾಗಮವು ಹೀಗೇ ಸಂಭವಿಸುವದೆಂಬದು ಹೇಳಲಾಗದು. ಬೆಂಗಳೂರಲ್ಲಿ ನಿಮ್ಮನ್ನು ಕಾಣುವೆನೆಂಬುದನ್ನು ನಾನೆಣಿಸಿದ್ದೇ ಇಲ್ಲ."

"ಇರಲಿ ರಮಾಕಾಂತರೇ, ತಾವಿಲ್ಲಿಗೆ ಏನು ಕಾರಣ ಬರೋಣಾಯಿತು ?"

"ಏನೋ, ಬೆಂಗಳೂರು ಬಹು ರಮಣೀಯವಾದದ್ದೆಂದೂ ಇಲ್ಲಿಯ ಹವೆಯು ಬಹು ತಂಪಾದದ್ದೆಂದೂ ಕೇಳಿ ಕೆಲಕಾಲ ಇಲ್ಲಿರಬೇಕೆಂದು ಬಂದೆನು."

"ಸಿವ್ಹಿಲ್ ಎಂಜಿನೀಯರ ಪರೀಕ್ಷೆಯಲ್ಲಿ ನಿಮಗೆ ಅಗ್ರಸ್ಥಾನವೇಕೆ ದೊರಿಯಲಿಲ್ಲ ? ತಾರತಮ್ಯದಲ್ಲಿ ನೀವು ಮೂರನೆಯವರಾದಿರೆಂದು ನಾನು 'ಇಂದು ಪ್ರಕಾಶ'ದಲ್ಲಿ ನೋಡಿದೆನು."

"ಯಾಕೆಂದರೆ! ಪುಣೆಯಲ್ಲಿ ನನಕಿಂತಲೂ ಬುದ್ಧಿವಂತರಿಲ್ಲೆಂದು ನಿ
ತಿಳುವಳಿಕೆಯೇನು? ಮೇಲಾಗಿ ಪರೀಕ್ಷೆಯ ಸುಮಾರಕ್ಕೆ ನನ್ನ ತಂದೆಗಳು
ಬಿದ್ದವರು ತೀರಿಕೊಳ್ಳಲಿಲ್ಲವೆ?"

"ಏನು! ಕಮಲಾಕಾಂತರು ತೀರಿಕೊಂಡರೇನು? ಬಹಳೇ ಕೇಡಾಯಿ
ವಿಚಾರನಿಷ್ಠರು, ಸ್ವಾತಂತ್ರ್ಯಪ್ರಿಯರು, ಸ್ವಾರ್ಥತ್ಯಾಗಿಗಳು, ಘನವಿದ್ವಾಂಸ
ಹೀಗೆ ಒಂದು ಗುಣವೇ ಎರಡು ಗುಣಗಳೇ! ಅವರನ್ನು ಎಷ್ಟು ಕೊಂಡಾಡಿದ
ಸಾಲದು. ಮುಂಬಯಿಯ ವಿಶ್ವನಾಥ ನಾರಾಯಣ ಮಂಡಲೀಕರೂ, ಉ
ಹಿಂದೂಸ್ಥಾನದ ಪಂಡಿತ ಅಯೋಧ್ಯಾನಾಥರೂ, ಕರ್ನಾಟಕಕ್ಕೆ ವಿಭೂಷಣ
ನಮ್ಮ ಕಮಲಾಕಾಂತರೂ ಹೀಗೆ ಒಬ್ಬರ ಹಿಂದೊಬ್ಬರು ನಮ್ಮ ದೇಶದ ಆ
ಸ್ತಂಭರಾದ ಮಹಾನುಭಾವರು ನಮ್ಮನ್ನಗಲಿ ಹೋದ ಪಕ್ಷದಲ್ಲಿ ಮುಂದೆ ನಿ
ನಿಯಾಮಕರಾರಾಗುವರೋ ತಿಳಿಯದು." ಎಂದು ರಂಗರಾಯನು ನಿಜ
ದುಃಖದೊಂದಿಗೆ ನುಡಿದನು.

ರಮಾಕಾಂತನು ಕೈವಸ್ತ್ರದಿಂದ ತನ್ನ ಕಣ್ಣೊರಿಸಿಕೊಂಡು "ರಂಗರ
ನಾನು ನಿರ್ಭಾಗ್ಯನಾದ್ದರಿಂದಲೇ ಇಂಥ ತಂದೆಗಳನ್ನು ಕಳಕೊಂಡೆನು. ಯ
ನಿದೆ! ಈ ಮಾತು ಹೆಚ್ಚಿಗೆ ಬೆಳಿಸಿ ಫಲವಿಲ್ಲ."

ಕ್ಷಣಹೊತ್ತು ಇಬ್ಬರೂ ಒಬ್ಬರನೊಬ್ಬರು ನೋಡಲಾರದೆ ಕೆಳಗೆ ಮ
ಮಾಡಿಕೊಂಡು ಉದ್ವಿಗ್ನರಾಗಿ ಕುಳಿತುಕೊಂಡರು.

ಕಡೆಗೆ ರಮಾಕಾಂತನೇ ವಿಚಾರ ಹೊಂದಿ ನುಡಿದದ್ದು "ರಂಗರ
ನೀವಿನ್ನೂ ಕಾಫಿ ಉಪಹಾರಗಳನ್ನು ತಕ್ಕೊಂಡಿರಲಿಕ್ಕಿಲ್ಲ. ಈಗಲೇ ತರಿಸಿ ಕೆ
ವೆನು. ಉದ್ವೇಗದ ವಿಚಾರಗಳನ್ನು ತಲೆಯಲ್ಲಿ ಹಾಕಿಕೊಂಡರೆ ಬರುವದೇನು

"ಕ್ಷಮಿಸಿರಿ. ನಾನು ಕಾಫಿ ತಕ್ಕೊಂಡೇ ಇತ್ತಕಡೆಗೆ ಬಂದಿರುವೆನು." ಎ
ರಂಗರಾಯನೆಂದನು.

"ನೀವು ಸ್ವತಃ ಕಾಫಿ ಬೆಳೆಯುವವರು. ನಮ್ಮಂಥವರು ಕೊಟ್ಟ
ನಿಮಗೆ ಸರಿಬರುವದೆ?"

"ಕಾಫಿ ಬೆಳೆಯುವವರು ಅನ್ಯರಲ್ಲಿ ಕಾಫಿ ತೆಗೆದುಕೊಳ್ಳಕೂಡದೇ?
ಗೊಂದು ಡಬ್ಬಿ ಕಾಫೀಪುಡಿ ಕಳಿಸಿಕೊಡುವೆನು. ಅದರ ಮಾಧುರ್ಯವನ್ನಾ
ನೋಡಿರಿ. ಮಾತಿನಲ್ಲಿ ನಾನು ಬಂದ ಕಾರ್ಯವನ್ನೇ ಮರೆತು ಬಿಟ್ಟೆನು. ಈ

ಸಾಯಂಕಾಲಕ್ಕೆ ಬಡಸ್ನೇಹಿತನ ಮನೆಗೆ ಭೋಜನಕ್ಕೆ ದಯಮಾಡಬೇಕು."

"ಏಕಾಗವಲ್ಲದು. ಸಂತೋಷದಿಂದ ಬರುವೆನು. ನಿಮ್ಮಂತೆ ನಾನೇನು ಮಾಡುವವನಲ್ಲ. ಆದರೆ ನೀವೀಗಲೇ ಹೋಗಕೂಡದು." ಎಂದು ರಮಾಕಾಂತನೆಂದನು.

"ಇಲ್ಲ; ನಮ್ಮಾಸ್ತಿಯ ಸಂಬಂಧ ದಿವಾನರಲ್ಲಿ ಸ್ವಲ್ಪ ಕೆಲಸವಿದೆ. ದೊಡ್ಡವರ ಕೆಲಸ! ಅವರಲ್ಲಿ ವ್ಯಾಳ್ಯಕ್ಕೆ ಸರಿಯಾಗಿ ಕೈಕಟ್ಟಿಕೊಂಡು ಕುಳ್ಳಿರಬೇಕಲ್ಲ! ನಾಳೆ ಬೆಳಿಗ್ಗೆ ಕಾಫಿಗೆ ಇಲ್ಲಿಯೇ ಬರುವೆನು. ನಮಸ್ಕಾರ" ಎಂದು ಹೇಳಿ ರಂಗರಾಯನು ಹೋದನು.

ರಂಗರಾಯನು ಹೋದನಂತರ ರಮಾಕಾಂತನು 'ಒಂದು' 'ಬಂಗಾಲೀ' 'ಟಾಯಿಮ್ಸ್ ಆಫ್' 'ಇಂದುಪ್ರಕಾಶ' 'ಕೇಸರೀ' ಮುಂತಾದ ಮೇಜಿನ ಮೇಲೆ ಬಿದ್ದ ವರ್ತಮಾನಪತ್ರಗಳನ್ನು ತಕ್ಕೊಂಡು ರಾಜಕೀಯ ಸಾಮಾಜಿಕ ವಿಷಯಂಗಳನ್ನು ಮನಮುಟ್ಟಿ ಓದತೊಡಗಿದನು, ಒಂದೆರಡು ತಾಸಿನ ಮೇಲೆ ಮತ್ತೆ ಯಾರೋ ಪಾವಟಿಗೆಗಳನ್ನೇರಿ ಬರುವ ಸಪ್ಪಳವಾಯಿತು. ಬಾಗಿಲವು ತೆಗದೇ ಇಟ್ಟಿತ್ತು. ಕೂಡಲೇ ಸೈನ್ಯದ ಅಧಿಕಾರಿಯಂತೆ ಜಂಬತೋಟ್ಟು ಎದೆಯುಬ್ಬಿಸಿಕೊಂಡು ಒಂದು ಮಗ್ಗಲಿಗೆ ಓರೆಯಾಗಿ ಸೆಟೆಕೊಂಡು ನಡೆಯುವನೊಬ್ಬನು ಪ್ರವೇಶಿಸಿದನು. ಇವನು ಜರತೀಡಿಕೆಯ ರುಮಾಲು ಸುತ್ತಿದ್ದನು. ಮೀಗಚ್ಚೆಯ ಧೋತ್ರವನ್ನುಟ್ಟು ಬೆಳ್ಳೀಹಿಡಿಕೆಯ ಬೆತ್ತವನ್ನು, ಸೈನಿಕನು ತುಪಾಕಿಯನ್ನು ಹೊರುವಂತೆ ಹೆಗಲಮೇಲಿಟ್ಟುಕೊಂಡಿದ್ದನು. ಆಳು ಗಿಡ್ಡದಾಗಿದ್ದು ಮೈಬಣ್ಣ ಕೆಂಪದಾಗಿತ್ತು. ಇವನು ತನ್ನ ಮೀಸೆಗೆ ಎಣ್ಣೇ ಹಚ್ಚಿ ಹುರಿ ಮಾಡಿದ್ದನು. ಈ ಗೃಹಸ್ಥನು ತನ್ನ ಉದ್ಧಟತನಕ್ಕಾಗಿ ಅಧಿಕಾರ ಕಳಕೊಂಡು ಬೆಂಗಳೂರಲ್ಲಿ ಸ್ವತಂತ್ರ ಔಷಧಾಲಯವನ್ನು ತೆಗೆಯಬೇಕೆಂಬ ವಿಚಾರದಲ್ಲಿದ್ದನು. ಈತನ ಹೆಸರು ಬಾಷ್ಕಳಪಂತ ಡಾಕ್ಟರ.

"ನಮಸ್ಕಾರ ರಾಯರೇ. ಬಡವನ ಗುರ್ತು ಹತ್ತಿತೇ? ನಾನು ಬಂದದ್ದರಿಂದ ತಮ್ಮ ಕೆಲಸಕ್ಕೆ ವ್ಯತ್ಯಾಸ ಬರಲಿಲ್ಲವಷ್ಟೆ?" ಎಂದು ಡಾಕ್ಟರರು ಕೇಳಿದರು.

"ನಮಸ್ಕಾರ. ಬನ್ನಿರಿ. ವ್ಯತ್ಯಾಸವೇತರದು? ಸುಮ್ಮಗೆ ವರ್ತಮಾನ ಪತ್ರಗಳನ್ನು ನೋಡುತ್ತ ಕುಳಿತಿದ್ದೆನು. ತಾವು ಡಾಕ್ಟರ ಬಾಷ್ಕಳಪಂತರಲ್ಲೇ? ಬಟ್ಟೆಗಳನ್ನು ಕಳೆಯಿರಿ. ಭೋಜನಕ್ಕೆ ತಾಟುಗಳನ್ನು ತರಿಸುವೆನು" ಎಂದು ರಮಾಕಾಂತನು ಹೇಳಿದನು.

"ಸಾಗಲಿ. ನಾನು ಭೋಜನಮಾಡಿಯೇ ಬಂದಿರುವೆನು, ಇಲ್ಲಿ ಕುಳಿತು ಬೆಂಗಳೂರ ಹೋಟಲ್ಲಿನ ಊಟ ಹೇಗಿರುವದೋ ನೋಡುವೆನು" ಎಂದು ಬಾಪ್ಕಳಪಂತನು ಕುರ್ಚಿಯ ಮೇಲೆ ವೈಯ್ಯಾರದಿಂದ ಕಾಮಣ್ಣನಂತೆ ಕುಳಿತು ಕೊಂಡನು.

"ನಿಮ್ಮ ಬೆಂಗಳೂರು" ಎಂದು ಹೇಳಿದಿರಿ, ಡಾಕ್ಟರರೇ, ಈ ಪ್ರಾಂತದವ ರಲ್ಲೇನು ನೀವು ?"

"ಅಲ್ಲ; ನಾನು ರಾಯಗಡ ಪ್ರಾಂತದ ಮಹಾರಾಷ್ಟ್ರ ಬ್ರಾಹ್ಮಣನು. ಮರಾಠಾ. ನಾನು ನೌಕರೀಮೂಲಕ ದೇಶಸಂಚಾರಿಯಾದುದರಿಂದ ನನ್ನ 'ಮರಾಠಿ' ಆಚಾರವಿಚಾರಗಳು ಹೋಗಿ ಬಿಟ್ಟಿವೆ. ನನ್ನ ಉತ್ಸಾಹವು ಮಾತ್ರ ಪೂರ್ವ ದಂತೆಯೇ ಸ್ಥಿರವಾಗಿ ಉಳಿದಿದೆ. ರಮಾಕಾಂತರಾಯರೇ, ಮಹಾರಾಷ್ಟ್ರರು ಅಕೃತಜ್ಞರೆಂದಿಗೂ ಆಗಲರಿಯರು. ವಸ್ತುಸ್ಥಿತಿ ಹಾಗಿರುವುದು. ನಾನು ಸುಳ್ಳು ಹೇಳುವುದಿಲ್ಲ. ನಿನ್ನಿನ ಜಗಳದಲ್ಲಿ ನೀವು ನನಗೆ ಸಹಾಯಮಾಡಿದಿರಿ. ನನ್ನ ಕೃತಜ್ಞತೆಯನ್ನು ತೋರಿಸುವುದಕ್ಕಾಗಿಯೇ ನಾನಿಲ್ಲೀವರೆಗೆ ಬಂದು ತಮ್ಮ ದರ್ಶನ ಲಾಭ ಹೊಂದಿದೆನು."

"ಅಯ್ಯೋ ಬಿಡಿರಿ! ನಾನು ಮಾಡಿದ್ದಾದರೂ ಏನು ?" ಎಂದು ರಮಾ ಕಾಂತನು ನುಡಿದನು.

"ತಮ್ಮಂಥ ಸದ್‌ಗೃಹಸ್ಥರು ತಮ್ಮ ಗೌರವವನ್ನು ತಾವೇ ಮಾಡಿಕೊಳ್ಳು ವರೇ ? ಭೀಮಸೇನನಂಥ ನಿಮ್ಮನ್ನು ಕಂಡು ಆ ನಾಲ್ಕು ಜನ ಟೊಣಪರಾದ ತುರಕರು ಜೀವವುಳಿಯುವುದೇ ಸಾಕಾಗಿ ದಿಕ್ಕಾಪಾಲಾಗಿ ಓಡಿದರು. ಇಲ್ಲದಿದ್ದರೆ ಅವರು ನನ್ನ ಷೋಡಶೋಪಚಾರ ಪೂಜೆಯನ್ನೇ ಮಾಡಿಬಿಡುತ್ತಿದ್ದರು. ವಸ್ತು ಸ್ಥಿತಿ ಹೀಗಿದೆ, ನಾನು ಸುಳ್ಳು ಹೇಳುವುದಿಲ್ಲ. ತಮ್ಮಂಥ ಸದ್ಗೃಹಸ್ಥರೇ ಈಗಿಲ್ಲ. ಈಗೇನು, ಎಲ್ಲರೂ ಸದ್‌ಗೃಹಸ್ಥರೇ. ನಾಮಧಾರಿಗಳು, ಆಗಲಿ. ತಾವು ಆಪೋಶನ ತಕ್ಕೊಳ್ಳಿರಿ" ಎಂದು ಡಾಕ್ಟರನಂದನು.

"ತಾವು ಒಲ್ಲದಿದ್ದರೆ ನನ್ನುಪಾಯವಿಲ್ಲ" ಎಂದು ಹೇಳಿ ರಮಾಕಾಂತನು ಭೋಜನಕ್ಕಾರಂಭಿಸಿದನು.

"ಉಂಡಾತಾಯಿತು ರಾಯರೇ, ಸಾಗಲಿ. ಇಲ್ಲಿ ನಾನು 'ಸಿಗರ' ಸೇದ ಬಹುದಷ್ಟೆ ?"

"ಎಳ್ಳಷ್ಟಾದರೂ ಅಡ್ಡಿಯಿಲ್ಲ, ನಡೆಯಲಿ ನಿಮ್ಮ ಕಾರಖಾನೆ" ಎಂದು

ವಿನೋದದಿಂದ ರಮಾಕಾಂತನು ಸಮ್ಮತಿ ಕೊಟ್ಟನು.

"ಇನ್ನೇನು ಚಿಂತೆಯಿಲ್ಲ" ಎಂದಾಡಿ ಡಾಕ್ಟರನು ತ್ರಿಚನಾಪಲ್ಲಿಯ 'ಬಹಾದ್ದೂರ' ತೆಗೆದು ಚರಕ್ಕನೆ ಕಡ್ಡಿಕೊರೆದು ಬಾಯಿಯೊಳಗಿಂದ ದುಂದು ಹೊಗೆ ತೆಗೆದನು. ಆ ಮೇಲೆ ರಮಾಕಾಂತನನ್ನು ಕುರಿತು "ರಾಯರೇ, ನಿಮ್ಮ ಸ್ಥಳವು ಚೆನ್ನಾಗಿದೆ. ಇದಕ್ಕೆ ಬಾಡಿಗೆ ಏನು ಕೊಡುತ್ತೀರಿ? ಆಗೋ ಆ ತಲೇ ಮೇಲಿನ ಚಿತ್ರ, ನೋಡಿರಿ; ಎಷ್ಟು ಸೊಗಸಾಗಿದೆ! ಅದೇನು ರಂಭೆಯದೋ? ರತಿ ದೇವಿಯದೋ? ಹೀಗೇನಾದರೂ ಇರಬಹುದು. ಏನು ಕುರ್ಚಿಗಳಿವು? ಬಾಲಕಿಯರ ಆಟಿಗೆಗಳಾಗಿವೆ. ನಾನಾದರೆ ಇವುಗಳನ್ನು ಹೊರಗೆ ಚಲ್ಲಿ ಕೊಡುತ್ತಿದ್ದೆನು. ನಾನು ಸುಳ್ಳು ಹೇಳುವುದಿಲ್ಲ."

"ಇವಕ್ಕೂ ಒಳ್ಳೇಯವುಗಳೆಲ್ಲಿಂದ ಬರಬೇಕು ಡಾಕ್ಟರರೇ?" ಎಂದು ರಮಾಕಾಂತನೆಂದನು.

"ಸಿಕ್ಕದೇನು? ನೀವು ನನ್ನನ್ನು ಕೇಳಿರಿ, ಇದೇ ಬಳೇಪೇಟೆಯಲ್ಲಿ ನನ್ನ ಸ್ನೇಹಿತನೊಬ್ಬನಿದ್ದನು. ಬಳೇಪೇಟೆ ಈಗ ಹಾಳಾಗಿ ಹೋಗಿದೆ. ಮುಂಚಿನ ಬಳೇಪೇಟೆ ಈಗ್ಗೆ ನೋಡಿದರೆ ಗುರ್ತು ಕೂಡಾ ಸಿಕ್ಕುವಂತಿಲ್ಲ, ನಾನೇನು ಹೇಳುತ್ತಿದ್ದೆ ಒಳ್ಳೇದು? ಹಾಂ! ಜ್ಞಾಪಕವಾಯಿತು. ಕುರ್ಚಿ ಮೇಜುಗಳನ್ನು ಕುರಿತು ಹೇಳುತ್ತಿದ್ದೆನು. ನನ್ನ ಹೆಸರು ಹೇಳಿರಿ, ಅಂದರೆ ಆ ನನ್ನ ಸ್ನೇಹಿತನು ನಿಮಗೆ ಬೇಕಾದ ಒಡವೆಗಳನ್ನು ಯೋಗ್ಯಕ್ರಯ ತಕ್ಕೊಂಡು ಕೊಡುವನು. ರಾಯರೇ, ನಿಮ್ಮ ಸ್ಥಳವು ಮಾತ್ರ ಅಪ್ರತಿಮವಾದದ್ದು. ನಮ್ಮಕ್ಕನು ಈ ಸ್ಥಳವನ್ನು ಕಂಡರೆ ಹಿಗ್ಗುವಳು. ನಮ್ಮಕ್ಕನಾರು ನಿಮಗೆ ಗೊತ್ತಿಲ್ಲೇನು? ಸರಸ್ವತಿಸದನದ ಚಾಲಕಳಾದ ಪ್ರಖ್ಯಾತ ಪಂಡಿತೆ ರಾಧಾಬಾಯಿಯ ಹೆಸರು ನೀವು ಕೇಳಿರಬಹುದು. ಆಕೆಯು ನಿಮ್ಮನ್ನು ನೋಡಿ ಆನಂದಪಡುವಳು. ಒಂದು ದಿವಸ ನಿಮಗೆ ಅವಳ ಭೆಟ್ಟಿಯನ್ನು ಮಾಡಿಸುವೆನು" ಎಂದು ಮಾತನಾಡಿ ಬಾಪ್ಕುಳಪಂತನು ಆರ್ಭಟೆಯಿಂದ 'ಬಾಹದ್ದೂರ' ಮತ್ತೆ ಸೇದಿ ಹೊಗೆಬಿಟ್ಟನು.

ರಮಾಕಾಂತನು ನೀರು ಕುಡಿದು ತಾಲಿಯನ್ನು ಕೆಳಗಿರಿಸಿ "ಡಾಕ್ಟರರೇ, ನೀವು ಒಳ್ಳೇ ಸಜ್ಜನರಾಗಿರುವಿರಿ."

"ರಮಾಕಾಂತರಾವ್, ನಾನು ಸುಳ್ಳು ಹೇಳುವುದಿಲ್ಲ. ನೀವು ಆ ಪಂಡಿತೆಯನ್ನು ಕಂಡು ಸಂತೋಷಪಡುವಿರಿ. ಯಾರಿಗಾದರೂ ಹೀಗೇ ಆಗುವದು ಲಿಂಗು ಪಂತಲು, ರಾನಡೇ, ಕೃಷ್ಣಸ್ವಾಮಿ ಮುಂತಾದ ಮಹಾನ್ಮಹಾನ್ ಪ್ರಭೃತಿ

ಗಳು ಈ ಪಂಡಿತೆಯು ಅವತಾರಕಳೇ ಎಂದು ಕೆಲಕಾಲ ನಡಕೊಳ್ಳುತ್ತಿದ್ದರು. ಪ್ರತಿಯೊಂದು ಮಾತಿನಲ್ಲಿ ಅವಳದೂ ನನ್ನದೂ ಮತಭೇದವಿದ್ದರೂ ನಮ್ಮೀರ್ವರ ನಡುವೆ ಪೂರ್ಣವಾದ ಪ್ರೇಮಭಾವವಿದೆ."

"ಅಹುದೇನು ?" ಎಂದು ರಮಾಕಾಂತನು ನಸುನಕ್ಕನು.

"ಸಮಸ್ತ ವಿಷಯಗಳಲ್ಲಿ ಮತಭೇದವಿದೆ ಅಂತಲ್ಲ. ನಾನು ಪುಣೆಯ ಕಾಕಾ ಜೋಶೀಯವರ ಮತಾನುವರ್ತಿಯು ; ಪಂಡಿತೆಯು ಅಮೇರಿಕನ್ ಮಿಶನರಿಯವರ ಸೂತ್ರದಂತೆ ನಡೆಯುವಳು, ಹಿಂದೂ ಸ್ತ್ರೀಯರು ಇಂಗ್ರೇಜಿ ಸ್ತ್ರೀಯರಂತೆ ವರ್ತಿಸಿ ಧರ್ಮಾಂತರವನ್ನು ಕೂಡ ಮಾಡುವದು ಇಷ್ಟವೆಂದು ಅವಳಭಿಪ್ರಾಯವು ; ನಾನು ಸ್ತ್ರೀಶಿಕ್ಷಣಕ್ಕೆ ಪ್ರತಿಕೂಲನು. ಆದರೂ ಒಮ್ಮೊಮ್ಮೆ ನನಗೆ ನಮ್ಮ ರಾಧಾಬಾಯಿಯಂತೇ ಹೋಗಬೇಕಾಗುತ್ತದೆ. ಹೊತ್ತು ಬಂದ ಹಾಗೆ ಕೊಡೆ ಹಿಡಿಯಬೇಕಲ್ಲ ! ನೀವಾದರೂ ಈ ಪ್ರಾಂತಕ್ಕೆ ಹೊಸಬರೇ ಇರುವಿರೆಂದು ನನಗೆ ತಿಳಿದಿದೆ."

"ಎಂಟು ವರ್ಷದವನಿದ್ದಾಗ್ಗೆ ಇಲ್ಲಿಗೊಂದಾವರ್ತಿ ಬಂದಿದ್ದೆನು. ಪುನಃ ಇಲ್ಲಿಗೆ ಬಂದದ್ದು ಮೊನ್ನೆಯೇ."

ಈ "ಪಟ್ಟಣವು ನಿಮ್ಮ ದೃಷ್ಟಿಯಿಂದ ಚನ್ನಾಗಿರುವದೋ ?" ಎಂದು ಬಾಷ್ಕಳಪಂತನು ಕೇಳಿದನು.

"ಓಹೊ ! ಮಲ್ಲೇಶ್ವರ, ಚಾಮರಾಜಪೇಟೆ, ಬಸವನಗುಡಿ ಮುಂತಾದ ಶಾಖೆಗಳು ಎಷ್ಟು ರಮಣೀಯವಾಗಿ ಕಟ್ಟಿವೆ ! ಲಾಲಬಾಗ ತೋಟವು ನೋಡ ತಕ್ಕಂಥಾದ್ದು. ಇಲ್ಲಿಯ ಶ್ರೀಮಂತರು ಒಳ್ಳೇ ಸೊಬಗಿನಿಂದಿರುವರು. ನನಗಾದರೂ ಇಲ್ಲಿಯೇ ಸ್ಥಿರವಾಗಿ ನಿಲ್ಲಬೇಕೆಂಬ ಮನಸ್ಸಾಗಿದೆ. ನಿಮಗೇನಾದರೂ ಹೇಳುವದದೆಯೇನು ?"

"ಏನೂ ಇಲ್ಲ. ನಿಮ್ಮ ವರ್ಣನೆ ಸಾಗಲಿ. ನೀವು ಯಾವದೇ ಮಾತನಾಗಲಿ ಒಳ್ಳೇ ಮನೋರಂಜಕವಾಗಿ ಹೇಳುವಂತೆ ಕಾಣುತ್ತದೆ. ಆದರೆ ಈ ಪಟ್ಟಣವು ನನ್ನ ಮನಸ್ಸಿಗೆ ಸರ್ವಥಾ ಬರುವದಿಲ್ಲ.

"ಏಕೆ ಡಾಕ್ಟರರೇ ?"

"ಇಲ್ಲಿ ಏನುವುಳಿದಿದೆ ? ಎಲ್ಲರೂ ಫಿರಂಗಿಗಳಂತೆ ಉಡಿಗೆ ತೊಡಿಗೆ ಮಾಡುವರು. ಪರದೇಶೀಯರ ದುರಾಚರಣೆಗಳು ನಮ್ಮಲ್ಲಿ ಸೇರಿಕೊಳ್ಳುಹತ್ತಿದವು. ಇಲ್ಲಿ ಸರಾಯಿ ಕುಡಿಯುವವರು ಸ್ವಲ್ಪ ಜನರಿರುವರೇನು ? " ಎಂದು ಡಾಕ್ಟರನು

ತನ್ನ ಡಂಭ ತೋರಿಸಿದನು.

ನಾನೇನು ಇಂಥವರನ್ನು ಕಂಡಿಲ್ಲ, ಈ ಜನರು ನಿಮಗೇ ಮಾತ್ರ ಸಿಕ್ಕು ತ್ತಾರೋ ತಿಳಿಯದು. ವಿದ್ಯಾಪ್ರಸಾರಣೆಯು ಹೆಚ್ಚಾದುದರಿಂದ ಜನರು ಪ್ರಶಸ್ತ ವಾದ ವಿಚಾರದವರೂ, ಸನ್ಮಾರ್ಗಿಗಳೂ ಆಗಿರುವರೆಂದು ನಾನು ನಂಬುತ್ತೇನೆ.''

" ರಾಯರೇ, ನಿಮಗೂ ನಿಮ್ಮ ವಿದ್ಯಾಪ್ರಸಾರಣೆಗಳಿಗೂ ಜೋಡಿ ನಮ ಸ್ಕಾರವಿರಲಿ. ಶಂಕರಾಚಾರ್ಯ, ವಿದ್ಯಾರಣ್ಯ, ಜಯತೀರ್ಥ, ಮುಂತಾದ ಪ್ರಭೃತಿಗಳ ಪ್ರಗಲ್ಭವಾದ ತತ್ವಗಳನ್ನು ಯಾವ ಪ್ರಶಸ್ತ ವಿಚಾರದ ಪಂಡಿತನು ಪರ್ಯಾಲೋಚಿಸಿರುವನು ? ಅದಿರಲಿ. ಮುಂಬಯಿ ಬಂಗಾಲ ಮುಂತಾದ ವಿದ್ಯಾ ಪ್ರಚುರವಾದ ಪ್ರಾಂತಗಳ ಸುಶಿಕ್ಷಿತರಂತೆ ರಾಜಪಕ್ಷ ಪ್ರಜಾಪಕ್ಷ ಇವುಗಳ ನಡುವೆ ನಡೆದ ಘನಘೋರ ವಾದದಲ್ಲಿ ತಲೆಹಾಕಿದವರಾರಿರುವುದಿಲ್ಲ ? ಇದ ಕ್ಕಾಗಿಯೇ ನಾನು ನನ್ನ ನೌಕರಿಯನ್ನು ಕಾಲಿಲೊದ್ದು ಸ್ವತಂತ್ರನಾಗಲಿಲ್ಲವೆ ?''

ರಮಾಕಾಂತನು ನಕ್ಕು " ನಿಮ್ಮಂಥವರ ಪುಣ್ಯದಿಂದಲೇ ನಮ್ಮ ರಾಜ್ಯವು ನಮಗೆ ಸಿಕ್ಕರೆ ಸೈ ! !''

"ನಿಮ್ಮಂಥ ನಗೆಯಾಡುವವರಿಂದಲೇ ನಮ್ಮ ದೇಶದ ಗತಿ ಹೀಗಾಗಲಿಲ್ಲವೆ?''

" ಹಾಗಲ್ಲ ಡಾಕ್ಟರರೇ, ರಾಜಕೀಯ ವಿಷಯದಲ್ಲಿ ಮನಸು ಹಾಕಬೇಕಾ ದರೆ, ನಮಗೆ ಜಗತ್ತಿನ ಇತಿಹಾಸದ ಜ್ಞಾನವು ಸಂಪೂರ್ಣವಾಗಿರಬೇಕು. ನಮ್ಮಲ್ಲಿ ವಾಕ್ಚಾತುರ್ಯ ಬೇಕು, ಸ್ವಾರ್ಥತ್ಯಾಗವಿರಬೇಕು, ಸಹನಶೀಲತೆ ಬೇಕು, ಇದಕ್ಕೂ ಮಹತ್ವವಾದವುಗಳಾದ ಕೆಲವು ಗುಣಗಳು ಬೇಕು ; ಅಂದರೇ ನಾವು ಆಡಿದ್ದಕ್ಕೆ ಮರ್ಯಾದೆ ದೊರೆಯುವುದು. ಬಾಷ್ಕಳಪಂತರೇ, ರಾಜಕೀಯ ವಿಷಯವು ನಿಮ್ಮಂಥವರ ತುತ್ತೇ ಅಲ್ಲ. ಅದಿರಲಿ ಡಾಕ್ಟರ್, ನಿಮ್ಮ ನೌಕರಿ ಯಾಕೆ ಹೋಯಿತು ?''

" ರಮಾಕಾಂತರೇ, ಅದನ್ನು ಕೇಳಬೇಡಿರಿ. ಸದ್ಯಕ್ಕೆ ಮೊಚ್ಚೇ ಹೊಲಿಯು ವವರದೇ ಪ್ರಾಬಲ್ಯವಾಗಿದೆ. ವಿದ್ಯೆಗೂ ಜಾಣತನಕ್ಕೂ ಸರಕಾರದಲ್ಲಿ ಮಾನವೇ ಇಲ್ಲ. ಸರಳ ಮಾತಾಡ ಹೋದರೆ ನನಗೆ ಮನೆಗಪ್ಪಣೆಯಾಯಿತು. ವಸ್ತುಸ್ಥಿತಿ ಹೀಗದೆ, ನಾನು ಸುಳ್ಳಾಡುವದಿಲ್ಲ.''

" ಬಹಿರಂಗದಲ್ಲಿ ನನಗೇನು ಹಾಗೆ ತೋಚುವದಿಲ್ಲ. ' ಅಂದರ ಕೀ ಬಾತ ರಾಮ ಜಾನೇ '! ನೀವು ಸ್ವತಂತ್ರವಾದ ಔಷಧಾಲಯವನ್ನು ತೆಗೆಯುವವರಿರು ವಿರಲ್ಲವೇ ?''

"ಅಹುದು ನಮಗೇನು ವೈದ್ಯರಿಗೆ ? ಮರಗೀ ಬೇನೆ ಪ್ಲೇಗುಗಳು ನಮ್ಮ ಕೈ ಹಿಡಿದರಾಯಿತು."

"ಒಳ್ಳೆ ಸದಿಚ್ಛೆ !" ಎಂದು ರಮಾಕಾಂತನು ಗಹಗಹಿಸಿ ನಕ್ಕನು.

"ಹೊಟ್ಟೇಕಿಚ್ಚಿಗೇನು ಮಾಡುವದು ರಾಯರೇ ? ಈ ಮಾತು ಹೋಗಲಿ, ನೀವು ನಮ್ಮಲ್ಲಿ ಭೋಜನಕ್ಕೊಂದಾವರ್ತಿ ದಯಮಾಡಬೇಕು. ಎಂದು ಬರುವ ದಾಗುವದು ಹೇಳಿಬಿಡಿರಿ. ಆ ದಿವಸ ನಮ್ಮ ರಾಧಕ್ಕ ಪಂಡಿತೆಯದೂ ನಿಮ್ಮದೂ ಪರಿಚಯ ಮಾಡಿ ಕೊಡುತ್ತೇನೆ. ನೀವೀರ್ವರೂ ವಿವಾದಪಟುಗಳಾದ್ದರಿಂದ ಒಳ್ಳೇ ಸ್ನೇಹಿತರಾಗುವಿರಿ."

ರಮಾಕಾಂತನಿಗೆ ಸ್ತ್ರೀಯರ ಪರಿಚಯವು ಒಳ್ಳೇ ಮನೋವೇಧಕವಾದ ದ್ದೆಂದೆನಿಸಲಾರಂಭಿಸಿತು. ಇವನಿಗೆ ಇದುವರೆಗೆ ಸ್ತ್ರೀಯರ ಪರಿಚಯವೇ ಇದ್ದಿಲ್ಲ. ಚಿಕ್ಕಂದಿನಲ್ಲಿಯೇ ಇವನ ತಾಯಿಯು ತೀರಿಕೊಂಡದ್ದರಿಂದ ತನ್ನ ತಂದೇ ಹೊರ್ತಾಗಿ ಬೇರೆ ಆಪ್ತರೊಡನೆ ಇರುವ ಪ್ರಸಂಗ ಬಂದಿದ್ದಿಲ್ಲ. ಸ್ತ್ರೀಯರಿದ್ದ ಮನೆಯಲ್ಲಿಯೇ ಈತನು ವರ್ತಿಸಿದ್ದಿಲ್ಲ. ಡಾಕ್ಟರನ ಆಮಂತ್ರಣ ತಕ್ಕೊಳ್ಳ ಬೇಕೋ ಬೇಡವೋ ಎಂಬ ವಿಚಾರದಲ್ಲಿ ತೊಡಗಿರುವಾಗಲೇ ಬಾಷ್ಕಳಪಂತನು ಕೂಗಿ, "ಜಯರಾವ್ ಸಾವಕಾರರೇ, ನಮಸ್ಕಾರ ಹೀಗೆ ಬನ್ನಿರಿ" ಎಂದು ಯಾರನ್ನೋ ಕರೆದನು.

"ರಮಾಕಾಂತರೇ, ಈ ಚಮತ್ಕಾರ ನೋಡಿರಿ ! ನನಗತ್ಯವಶ್ಯಕರಾದ ಸನ್ಮಿತ್ರರು ಇಲ್ಲಿಯೇ ಹೇಗೆ ಬಂದೊದಗಿರುವರು ! ಇವರನ್ನಿಲ್ಲಿ ಕಾಣಬಹುದೆಂಬ ತೊಂದರೆಯಲ್ಲಿ ನಾನಿದ್ದೆನು. ಹೊಸ ಪರಿಚಯಸ್ತರಾದ ನಿಮ್ಮ ದರ್ಶನಕ್ಕೆ ಬಂದ ಕಾಲದಲ್ಲಿ ನನ್ನ ಪ್ರಾಚೀನ ಸ್ನೇಹಿತರ ಬಾಹುಪಾಶದಲ್ಲಿ ಸಿಕ್ಕೆನು. ನನ್ನೀ ದ್ವಿವಿಧದ ಸ್ನೇಹಿತರಲ್ಲಿ ಪರಸ್ಪರ ಪರಿಚಯವನ್ನುಂಟುಮಾಡುವೆನು. ಜಯ ರಾಯರೇ, ಇವರು ವಿಶ್ವವಿದ್ಯಾಲಯದ ಪದವೀಧರರಾದ ರಮಾಕಾಂತರಾವ್ ದೇಸಾಯರು. ರಮಾಕಾಂತರೇ, ಇವರು ಈ ಪ್ರಾಂತಕ್ಕೆ ದೊಡ್ಡ ಸಾಹುಕಾರ ರಾದ ಜಯರಾಯರು. ಈ ಜಯರಾಯರ ಹೆಸರು ಕೇಳದವರು ಇಡೀ ಮೈಸೂರು ಸಂಸ್ಥಾನದಲ್ಲಿ ಸಿಕ್ಕಲಿಕ್ಕಿಲ್ಲ. ವಸ್ತುಸ್ಥಿತಿ ಹೀಗಿರುವದು, ನಾನು ಸುಳ್ಳು ಹೇಳು ವದಿಲ್ಲ."

"ಮಾತ್ರ ನಾನೆಲ್ಲಿರುವೆನೆಂಬದು ನಿಮಗೆ ಗೊತ್ತಾಗಲಿಲ್ಲ !" ಎಂದು ಜಯರಾಯನು ನಕ್ಕನು.

ಜಯರಾಯನು ಆಜಾನುಬಾಹುವಾದ ಆಳು. ಮೋರೆ ದೊಡ್ಡದಿದ್ದು ಇವನು ದಷ್ಟಪುಷ್ಟನಾಗಿದ್ದನು. ಈತನು ಸುಮಾರು ಐವತ್ತೈದು ವರ್ಷದವನಾಗಿದ್ದರೂ ಹುಡುಕಿದರೂ ಬಿಳೀ ಕೂದಲು ಸಿಕ್ಕುವಂತಿದ್ದಿಲ್ಲ. ಬೆಲೆಯುಳ್ಳ ಪೋಷಾಕು ತೊಟ್ಟದ್ದರಿಂದ ಇವನೇನು ಮುನಿಸಿಪಾಲಿಟಿಯ ಪಂಚನೋ, ಸಾರ್ವಜನಿಕ ಸಭೆಯ ಸಭಾಸದನೋ ಎಂಬಂತೆ ಕಾಣುತ್ತಿದ್ದನು.

"ರಮಾಕಾಂತರೇ, ನಾವಿಲ್ಲಿ ಬಂದದ್ದರಿಂದ ನಿಮ್ಮ ಕೆಲಸಕ್ಕೆ ವ್ಯತ್ಯಯ ಬಂದಿತೇನು ? ಈ ಡಾಕ್ಟರರು ನಮ್ಮ ಸ್ನೇಹಿತರು. ಅವರು ಕರೆದದ್ದರಿಂದ ನಾನು ಬಂದೆನು. ಅನಾಯಾಸವಾಗಿ ತಮ್ಮ ಪರಿಚಯವಾಯಿತು, ಇದೇನು ಸಣ್ಣಪುಟ್ಟ ಲಾಭವಲ್ಲ."

"ಮಿಶ್ರಮಿಸಿಕೊಳ್ಳಿರಿ, ಹಾಗೇ ನಿಂತು ಮಾತಾಡುವದೇಕೆ ?" ಎಂದು ರಮಾಕಾಂತನು ವಿನಯದಿಂದ ನುಡಿದನು.

"ಇರಲಿ. ಈಗ ನನಗೆ ಕೆಲಸದ ಅವಸರವಿದೆ. ಇದೇ ಮನೆಯ ಕೆಳಬದಿಯಲ್ಲಿ ನಮ್ಮ ವ್ಯಾಪಾರಸ್ತರ ಸಭೆ ಕೂಡಿತ್ತು, ಅದಕ್ಕಾಗಿ ನಾನು ಬಂದಿದ್ದೆನು. ಬಾಷ್ಕಳಪಂತ, ಕೂಡಿದಾಗ್ಗೆ ಇವರನ್ನು ನಮ್ಮ ಮನೆಗೆ ಅಗತ್ಯವಾಗಿ ಕರಕೊಂಡು ಬರತಕ್ಕದ್ದು. ರಾಯರೇ ಬರುತ್ತೇನೆ, ಅಪ್ಪಣೆ ಕೊಡಿರಿ." ಎಂದು ಜಯರಾಯನು ಮುಗುಳುನಗೆ ನಕ್ಕು ರಮಾಕಾಂತನನ್ನು ನೋಡಿದನು.

"ಜಯರಾವ್, ಶ್ರೀರಂಗಪಟ್ಟಣದಲ್ಲಿ ಎಲ್ಲವೂ ಕ್ಷೇಮವೇ ? ನಮ್ಮ ಅನುತ್ಸೇಕಾಬಾಯಿಯವರು ಚನ್ನಾಗಿರುವರೊ ? " ಎಂದು ಡಾಕ್ಟರನು ಕೇಳಿದನು.

"ಚನ್ನಾಗಿದ್ದಾಳೆ" ಎಂದು ಹೇಳಿ ಜಯರಾಯನು ಸಾವಕಾಶ ಪಾವಟಿಗೆಗಳನ್ನಿಳಿದು ನಡೆದನು. ಡಾಕ್ಟರನೂ ಜಯರಾಯನ ಬೆನ್ನು ಹತ್ತಿಯೇ ಹೋದನು.

ಇವರು ಹೋದಬಳಿಕ ರಮಾಕಾಂತನು ರಮೇಶಚಂದ್ರದತ್ತರವರು ಭೂಮಿಯ ಕಂದಾಯದ ವಿಷಯವಾಗಿ ಹಿಂದುಸ್ತಾನ ಸರಕಾರಕ್ಕೆ ಬರೆದ ಲೇಖನವನ್ನು ಓದುತ್ತ ಕುಳಿತನು. ಅಷ್ಟರಲ್ಲಿ ಅಂಚೆಯವನು ಕೆಲವು ಪತ್ರಗಳನ್ನೂ, ವರ್ತಮಾನಪತ್ರಗಳನ್ನೂ ತಂದು ಮೇಜಿನ ಮೇಲಿಟ್ಟನು. ಆ ಪತ್ರಗಳನ್ನೋದಿಕೊಂಡು, ಒಂದು ಪತ್ರದ ವಿಷಯವಾಗಿ ಮಾತ್ರ ರಮಾಕಾಂತನು ಯೋಚನೆಯಲ್ಲಿ ಬಿದ್ದಂತೆ ಕುಳಿತನು. ಈ ಪತ್ರದ ಅಭಿಪ್ರಾಯ ಕೆಳಗೆ ಬರೆದಂತೆ ಇತ್ತು.

ಶ್ರೀರಂಗಪಟ್ಟಣ, ತಾ॥......

ರಾ॥ ರಾ॥ ರಮಾಕಾಂತ ದೇಸಾಯಿ ಇವರಿಗೆ. ದೇವಯಾನಿ ಶಾನುಭೋಗ ಕೃತಾನೇಕ ಆಶೀರ್ವಾದಗಳು. ಸಾಂಪ್ರತು,

'ಬೆಂಗಳೂರ ಸಮಾಚಾರ' ಪತ್ರದಲ್ಲಿ ಬಾಪ್ಕಳಪಂತ ಡಾಕ್ಟರನಿಗೂ ಚಂದಾಬೇಗನೆಂಬ ತುರಕುನಿಗೂ ಬೀದಿಯಲ್ಲಿ ಜಗಳ ಹತ್ತಿದ್ದರಲ್ಲಿ ನೀವು ಡಾಕ್ಟರನಿಗೆ ಸಹಾಯ ಮಾಡಿ ಜಗಳ ನೊಂದಿಸಿದಿರೆಂದು ಬರೆದದ್ದೋದಿದ್ದರಿಂದ ನೀವು ಬೆಂಗಳೂರಿಗೆ ಬಂದದ್ದು ವಿದಿತವಾಯಿತು.

ನಿಮ್ಮ ತಂದೆಗಳದೂ ನನ್ನದೂ ಪರಿಚಯ ಬಹಳ. ಅವಸರ ನೋಡಿಕೊಂಡು ಒಂದು ಸಾರೆ ಇಲ್ಲೀವರೆಗೆ ಬಂದು ದರ್ಶನ ಕೊಟ್ಟು ಹೋಗುವಿರೆಂದು ಆಶಿಸುತ್ತೇನೆ. ಸಮಕ್ಷ ಭೆಟ್ಟಿಯಾದನಂತರ ಎಲ್ಲವೂ ವಿದಿತವಾಗುವದು. ಇಂತಿ ಆಶೀರ್ವಾದಗಳು.

ದೇವಯಾನಿ ಶಾನುಭೋಗ

ಈ ದೇವಯಾನಿ ಯಾರು, ತನಗೇಕೆ ಪತ್ರ ಬರೆದಿರುವಳು? ಇದೇ ಹೋದ ಜಯರಾಯನು ಶ್ರೀರಂಗಪಟ್ಟಣದವನೇ. ಇವಳಾದರೂ ಅದೇ ಊರವಳು. ಜಯರಾಯನು ಅಕಸ್ಮಾತ್ತಾಗಿ ಇದೇ ದಿವಸ ಭೆಟ್ಟಿಯಾದನು. ಅವನು ಹೋದನೋ ಇಲ್ಲೊ ಅಷ್ಟರಲ್ಲಿಯೇ ಈ ಪ್ರಾಣಿಯ ಪತ್ರ ಬಂದಿತು. ಇದೊಂದು ವಿಲಕ್ಷಣವಾದ ಯೋಗಾಯೋಗವು. ಇವಳೇನು ಸುವಾಸಿನಿಯೋ ಗತಭರ್ತೃಕೆಯೋ ಹೇಗೆ ತಿಳಿಯಬೇಕು? ಗಂಗಾಭಾಗೀರಥೀಸಮಾನಳೆಂದು ಬರೆದರೂ ಸಂಕಟ, ಕುಂಕುಮಶೋಭಿತ ಸೌಭಾಗ್ಯವತಿಯೆಂದು ಒಕ್ಕಣಿಕೆ ಮಾಡಿದ ಪಕ್ಷದಲ್ಲಿ ಇವಳು ಗತಭರ್ತೃಕೆಯಿದ್ದರೆ ಹೇಗೆ?

ತನ್ನ ತಂದೆಯ ಪರಿಚಯವಿವಳಿಗಿರುವ ಕಾರಣವೇನು? ತಂದೆಯವರು ಮರಣದ ಪೂರ್ವದಲ್ಲಿ ತಮ್ಮೊಬ್ಬ ಸ್ನೇಹಿತಳಾದ ಸಾಧ್ವಿಯು ಶ್ರೀರಂಗಪಟ್ಟಣದಲ್ಲಿರುವಳೆಂದು ಹೇಳಿದ್ದರು. ಪ್ರಾಣೋತ್ಕ್ರಮಣದ ಕಾಲಕ್ಕೆ "ದೇವಯಾನಿ"ಯ ಹೆಸರು ತಕ್ಕೊಂಡಿದ್ದರು. ಆ ಸ್ನೇಹಿತಳೂ ಆ ದೇವಯಾನಿಯೂ ಇವಳೇ ಇರಬಹುದೆ? ಇವಳು ನನ್ನ ತಂದೆಯವರ ಪ್ರೀತ್ಯಾಸ್ಪದಳೋ? ಹಾಗಿದ್ದರೆ ವಿಶುದ್ಧವಾದ ಕೀರ್ತಿಗೆ ಕಲಂಕ ಹತ್ತಿರಬಹುದೇ? ಛೆಃ! ಇಂಥ ಸಂಶಯವನ್ನು ತಕ್ಕೊಳ್ಳುವದು ಅಯೋಗ್ಯವಾದ ಮಾತು. ಹೀಗೆ ರಮಾಕಾಂತನು ಒಳ್ಳೇ

ಯೋಚನೆಯಲ್ಲಿ ಬಿದ್ದಿದ್ದನು.

ಏನೇ ಇರಲಿ, ತಾನು ನಾಳೆ ಸಾಯಂಕಾಲಕ್ಕೆ ಶ್ರೀರಂಗಪಟ್ಟಣಕ್ಕೆ ಬರುವೆನೆಂದು ದೇವಯಾನಿಯ ಹೆಸರಿಲೆ ಪತ್ರ ಬರೆದು ಹಾಕಿದನು.

ಆ ದಿವಸ ಸಾಯಂಕಾಲ ರಮಾಕಾಂತನು ರಂಗರಾಯನ ಮನೆಗೆ ಹೋದನು. ಈ ಸ್ನೇಹಿತರಿಬ್ಬರೂ ಆ ರಾತ್ರಿ ಪರಸ್ಪರ ಸಮಾಚಾರಗಳನ್ನು ಹೇಳುತ್ತ, ಒಳ್ಳೇ ಆನಂದದಿಂದ ಕೆಲಹೊತ್ತು ಕಳೆದರು. ರಮಾಕಾಂತನು ದೇವಯಾನಿಯ ಪತ್ರದ ಸುದ್ದಿಯನ್ನು ರಂಗರಾಯನಿಗೆ ತಿಳಿಸಿ ತನಗೆ ನಾಳೇ ದಿನ ಶ್ರೀರಂಗಪಟ್ಟಣಕ್ಕೆ ಹೋಗಬೇಕಾದ್ದರಿಂದ ಭೋಜನಕ್ಕೆ ಬರುವದಾಗುವದಿಲ್ಲೆಂದು ಹೇಳಿ ತನ್ನ ಮನೆಗೆ ಬಂದು ಮಲಗಿಕೊಂಡನು.

ಮೂವರು ಪುರಾತನ ಸ್ನೇಹಿತರು

ನಮ್ಮ ವಾಚಕರಿಗೆ ಈ ದೇವಯಾನಿ ಯಾರು ? ಇವಳು ಕಮಲಾಕಾಂತನ ಪರಿಚಯಸ್ಥಳು ಹೇಗೆಂಬುದನ್ನು ತಿಳಿಸುವ.

ಕಮಲಾಕಾಂತನು ವಿಜಾಪುರದ ಹತ್ತರಿದ್ದ ನವರಸಪುರದ ದೇಸಾಯರಾದ ಶ್ರೀಮಂತ ಶ್ರೀಕಾಂತರಾಯರ ತಮ್ಮನು. ಈತನು ಮುಂಬಯಿಯಲ್ಲಿಯ ಎಂಜಿನೀಯರ ಕಾಲೇಜಿನಲ್ಲಿ ಅಭ್ಯಾಸಕ್ಕಿದ್ದನು. ಜಯರಾಯನೂ ಮುಂಬಯಿಯಲ್ಲಿ ಬೇರೊಂದು ಕಾಲೇಜಿನಲ್ಲಿ ಕಲಿಯುತ್ತಿದ್ದನು. ಇವರಿಬ್ಬರೂ ಸ್ನೇಹಿತರಾಗಿದ್ದರು. ಜಯರಾಯನು ಸ್ವಲ್ಪ ದಿವಸಗಳಲ್ಲಿಯೇ ಅಭ್ಯಾಸ ಬಿಟ್ಟು ಬೆಂಗಳೂರಲ್ಲಿ ವ್ಯಾಪಾರಕ್ಕೆ ಹೋಗಿ ನಿಂತನು. ಕಮಲಾಕಾಂತನು ಅಪ್ರತಿಮ ಬುದ್ಧಿಶಾಲಿಯಾದದ್ದರಿಂದ ನಾಲ್ಕು ವರುಷ ಅಲ್ಲಿಯೇ ನಿಂತು ಎಂಜಿನಿಯರ ಪರೀಕ್ಷೆಯಲ್ಲಿ ಅಗ್ರಸ್ಥಾನವನ್ನು ಪಡೆದನು.

ಸರಕಾರದಲ್ಲಿರುವದಕ್ಕಿಂತಲೂ ಬೆಂಗಳೂರಲ್ಲಿ ನಿಂತು ಸ್ವತಂತ್ರ ಉದ್ಯೋಗ ಮಾಡಿದಲ್ಲಿ ಹೆಚ್ಚು ಮರ್ಯಾದೆಯೂ ಧನವೂ ಸಿಕ್ಕುವದೆಂದು ಕಮಲಾಕಾಂತನಿಗೆ ಜಯರಾಯನು ಬೋಧಿಸಿ ಪತ್ರ ಬರೆದಿದ್ದನು. ಅದಕ್ಕೊಪ್ಪಿಕೊಂಡು ಕಮಲಾಕಾಂತನು ಬೆಂಗಳೂರಿನಲ್ಲಿ ಬಂದು ನಿಂತುಕೊಂಡನು. ಅವನಿಗಲ್ಲಿ ಹೇರಳವಾಗಿ ರೊಕ್ಕ ಸಿಗುವಂತೆಯೂ ಕಂಡುಬಂದಿತು.

ಇವರೀರ್ವರು ಮುಂಬಯಿಯಲ್ಲಿರುವಾಗಲೇ ವಾಸುದೇವರಾವ ಮೋಡಕ, ವಿಷ್ಣುಪಂತ ಭಿಡೆ, ಬಖಲೆ ಮುಂತಾದ ಸುಧಾರಕಾಗ್ರಣಿಗಳ ಮತಕ್ಕೊಳಗಾಗಿ

ಪುನರ್ವಿವಾಹ, ಸ್ತ್ರೀಶಿಕ್ಷಣ ಮೊದಲಾದ ವಿಷಯಗಳ ಪಕ್ಷಪಾತಿಗಳಾಗಿದ್ದರು.

ಅದೇ ಕಾಲದಲ್ಲಿ ಬಳ್ಳಾಪುರ ಸುಬ್ಬರಾಯನೆಂಬ ಆಸ್ತಿಯುಳ್ಳ ಗೃಹಸ್ಥನ ಮಗಳಾದ ದೇವಯಾನಿಯು ಹದಿನಾಲ್ಕು ವರುಷದವಳಿದ್ದಾಗಲೇ ವಿಧವೆಯಾದಳು. ಇವಳು ತೀಕ್ಷ್ಣವಾದ ಬುದ್ಧಿಯುವಳಿದ್ದು ದೇಶಭಾಷೆಯ ಶಾಲೆಗಳಲ್ಲಿ ದೊರಕುವಷ್ಟು ವಿದ್ಯೆಗಳಿಸಿದ್ದಳು. ವಿಧವೆಯಾದನಂತರ ಸುಬ್ಬರಾಯನು ಇವಳಿಗೆ ಉಚ್ಚಸ್ರ್ರತಿಯ ಶಿಕ್ಷಣ ಕೊಟ್ಟು, ಚಿತ್ರಕಲೆ, ಕಶೀದೆ ಮುಂತಾದ ಉಪಯುಕ್ತವಾದ ಶಿಕ್ಷಣವನ್ನಾದರೂ ಕೊಡಿಸಿದ್ದನು. ಸುಬ್ಬರಾಯನಾದರೂ ಸುಧಾರಕರ ಪಂಥದವನಾದ್ದರಿಂದ ದೇವಯಾನಿಯ ಪುನರ್ವಿವಾಹ ಮಾಡಬೇಕೆಂಬ ವಿಚಾರದಲ್ಲಿದ್ದನು.

ಕಮಲಾಕಾಂತನೂ ಜಯರಾಯನೂ ಅವಿವಾಹಿತರೇ ಇದ್ದರು. ದೇವಯಾನಿಯ ಸೌಂದರ್ಯವನ್ನೂ ಅವಳ ವಿದ್ಯಾಭಿರುಚಿಯನ್ನೂ ನೋಡಿ, ಈ ತರುಣರೀರ್ವರು ದೇವಯಾನಿಯ ಪ್ರೀತಿಯನ್ನು ಸಂಪಾದಿಸುವ ಹವಣಿಕೆಗೆ ಬಿದ್ದರು.

ಎರಡು ಪದಾರ್ಥಗಳಲ್ಲೊಂದನ್ನಾರಿಸಿಕೊಳ್ಳುವದು ಸಹಜವಾದ ಮಾತೇ. ಜಯರಾಯ ಕಮಲಾಕಾಂತರ ಬುದ್ಧಿಚಾತುರ್ಯಗಳನ್ನೂ ಗುಣರೂಪಗಳನ್ನೂ ನಾಲ್ಕಾರು ತಿಂಗಳು ಪರೀಕ್ಷಿಸಿ, ರೂಪದಿಂದಧಿಕನಾದವನೂ, ಉದಾರಮನಸ್ಸಿನವನೂ ಬುದ್ಧಿಚಾತುರ್ಯಯುಕ್ತನೂ ಆದ ಕಮಲಾಕಾಂತನನ್ನೇ ವರಿಸುವದನ್ನು ದೇವಯಾನಿಯು ನಿಶ್ಚಯಿಸಿದಳು. ಅನ್ಯವಿಷಯಗಳಲ್ಲಿ ಪಾಲುಕಾರನು ಸೇರಬಹುದು. ಕೆಲವು ಕೆಲಸಗಳಲ್ಲಿ ಪಾಲುಕಾರನು ಬೇಕೇ ಆಗುವನು. ಆದರೆ ಪ್ರೀತಿಯು ಮಾತ್ರ ಪಾಲುಕಾರನನ್ನು ಶತ್ರುವಿನಂತೆ ಲೆಕ್ಕಿಸುವದು. ದೇವಯಾನಿಯು ಕಮಲಾಕಾಂತನಲ್ಲಿ ಪಕ್ಷಪಾತವಿಟ್ಟದ್ದು ಕಂಡು ಜಯರಾಯನ ಮಯ್ಯುರಿಯಹತ್ತಿತು. ಜಯರಾಯನು ಪಕ್ಷಪಾತವನ್ನು ತೋರಿಸುವ ದೇವಯಾನಿಯ ಮೇಲೆ ಕೋಪಿಸಿಕೊಳ್ಳಬೇಕೋ, ಏನು ನಿರಪರಾಧಿಯಾದ ಕಮಲಾಕಾಂತನಮೇಲೊ ? ಕಾಮಪರವಶನಾದವನು ಅಂಧನಾಗುವನೆಂಬುದು ಸುಳ್ಳಲ್ಲ. ಜಯರಾಯನು ಕಮಲಾಕಾಂತನ ಮೇಲೆ ಡಂಕಿಟ್ಟನು. ಬಹಿರಂಗದಲ್ಲಿ ಮಾತ್ರ ಸ್ನೇಹಿತನಂತಿದ್ದು, ದೇವಯಾನಿಯು ತನ್ನನ್ನು ವರಿಸದಿದ್ದರೂ ಚಿಂತೆಯಿಲ್ಲ, ಕಮಲಾಕಾಂತನಿಗೆ ಅವಳ ಪ್ರಾಪ್ತಿಯಾಗಗೊಡಬಾರದೆಂಬ ಯೋಚನೆ ಮಾಡಹತ್ತಿದನು.

ನಿಜಾಮು ಸರಕಾರದವರು ಕಟ್ಟಿಸುವ ಕೆಲವು ಮಂದಿರಗಳನ್ನು ಹೇಗೆ ಕಟ್ಟಿಸ ಬೇಕೆಂಬದರ ನಿಬಂಧನೆ ಮಾಡಿಕೊಡುವದಕ್ಕಾಗಿ ಕಮಲಾಕಾಂತನು ಹೈದರಾಬಾದಿಗೆ ಹೊರಟುಹೋದನು. ಈ ಪ್ರಸಂಗ ಸಾಧಿಸಿ, ಕಮಲಾಕಾಂತನು ಹೈದರಾಬಾದಿ ನಲ್ಲಿ ವೆಂಕಟರಾವ ಬಹದ್ದೂರರ ಆಗ್ರಹಕ್ಕೊಳಕ್ಕಾಗಿ ಅವರ ಮಗಳ ಕೂಡ ಲಗ್ನ ವಾಗಲಿಕ್ಕೊಡಂಬಟ್ಟಿರುವನೆಂದು ಜಯರಾಯನು ಸುಳ್ಳು ಸುದ್ದೀ ಬೀರಿದನು. ಪ್ರೀತಿಬದ್ಧಳಾದ ದೇವಯಾನಿಗೆ ಈ ವರ್ತಮಾನ ಕೇಳಿ ಅತಿಶಯವಾದ ವ್ಯಥೆ ಯಾಯಿತು. ಕಮಲಾಕಾಂತನು ಹೈದರಾಬಾದಿನಲ್ಲಿ ನಾಲ್ಕಾರು ತಿಂಗಳು ನಿಂತದ್ದ ರಿಂದ ದೇವಯಾನಿಗೆ ಸಂಶಯವು ದೃಢವಾಯಿತು. ಆದದ್ದರಿಂದ ಯಾರ ಕೂಡಾ ದರೂ ಮಾತಾಡುವದೇ ದೇವಯಾನಿಗೆ ಬೇಸರಾಯಿತು; ಅದರಲ್ಲಂತೂ ಜಯ ರಾಯನ ಕೂಡ ಅವಳು ಮಾತೇ ಬಿಟ್ಟಳು.

ಕಮಲಾಕಾಂತನು ಬೆಂಗಳೂರಿಗೆ ಬಂದ ನಂತರ ದೇವಯಾನಿಯು, ಮನಸ್ಸು ನೊಂದವಳಾದ್ದರಿಂದ, ಅವನ ಕೂಡ ಚೆನ್ನಾಗಿ ಮಾತಾಡಲಿಲ್ಲ. ಕಮಲಾಕಾಂತನ ಮೇಲಿದ್ದ ಅವಳ ಪ್ರೀತಿಯು ಎಳ್ಳಷ್ಟಾದರೂ ಕಡಿಮೆಯಾಗಿದ್ದಿಲ್ಲವಾದರೂ, ಆತನು ತನ್ನನ್ನು ಹೀಯಾಳಿಸಿದನೆಂಬ ತಿಳುವಳಿಕೆಯಿಂದ, ಅವಳ ಮನಸ್ಸು ಸಂಕೋಚಗೊಂಡಿತ್ತು. ದೇವಯಾನಿಯ ಮನಸ್ಸು ತಿರುಗಲಿಕ್ಕೇನು ಕಾರಣ ವಾಯಿತೆಂದು ಕಮಲಾಕಾಂತನು ಜಯರಾಯನನ್ನು ಕೇಳಲಾಗಿ, ಆ ವಂಚಕನು ಸುಳ್ಳು ಕಾರಣ ಹೇಳಿ ಕಮಲಾಕಾಂತನನ್ನು ನಿರಾಶೆಗೊಳಿಸಿದನು.

ಆ ಮೇಲೆ ಕಮಲಾಕಾಂತನು ಬೆಂಗಳೂರು ಬಿಟ್ಟು ನವರಸಪುರಕ್ಕೆ ಬಂದನು. ಅಲ್ಲಿ ತನ್ನ ಅಣ್ಣನ ಆಗ್ರಹಕ್ಕೊಳಗಾಗಿ ಲಗ್ನಮಾಡಿಕೊಂಡು ಕಲಕತ್ತೆಗೆ ಹೋಗಿ ನಿಂತನು.

ಕಮಲಾಕಾಂತನು ಬೆಂಗಳೂರು ಬಿಟ್ಟು ಹೋದ ನಂತರ ಜಯರಾಯನು ದೇವಯಾನಿಯ ಪ್ರೀತಿಯನ್ನು ಸಂಪಾದಿಸಲಿಕ್ಕೆ ಹಗ್ಗ ಹಾಕಿ ನೋಡಿದರೂ ಲಭ್ಯಾಂಶ ತೋರಲಿಲ್ಲ. ಕಡೆಗವನು ಶ್ರೀರಂಗಪಟ್ಟಣದೊಬ್ಬ ನಿಪುತ್ರಿಕನಾದ ಚಿನಿವಾರನ ಮಗಳನ್ನು ಲಗ್ನ ಮಾಡಿಕೊಂಡದ್ದರಿಂದ ಅವನಿಗೆ ಹತ್ತು ಸಾವಿರ ರೂಪಾಯಿಗಳ ಗಂಟು ಹತ್ತಿತು. ಜಯರಾಯನು ಜಾತ್ಯಾ ಲೋಭಿಯಾದುದರಿಂದ ಈ ಸಮ್ಮಂಧ ಮಾಡಿದ್ದೇ ಒಳ್ಳೇದಾಯಿತೆಂದೆಣಿಸಿ ಸಂತೋಷ ಹಚ್ಚಿಕೊಂಡಿದ್ದನು.

ಕಮಲಾಕಾಂತನು ಹೈದರಾಬಾದದ ಸಮ್ಮಂಧ ಮಾಡಿಕೊಳ್ಳುವನೆಂದು ಜಯರಾಯನೆಬ್ಬಿಸಿದ ಸುದ್ದಿಯು ಸುಳ್ಳೆಂದು ದೇವಯಾನಿಯ ಮನಗಂಡಿತು.

ಕಮಲಾಕಾಂತನಿಗೆ ತಾನು ತೋರಿಸಿದ ಅನಾದರದ ಮೂಲಕ ಆತನು ನಿರಾಶೆಯಿಂದ ಎದ್ದು ಹೋದನೆಂದು ತಿಳಿದು, ದೇವಯಾನಿಗೆ ಬಹಳ ದುಃಖವಾಯಿತು. ಆದರೆ ಮಾಡುವುದೇನು ? ಕಮಲಾಕಾಂತನಂತೂ ಲಗ್ನಮಾಡಿಕೊಂಡುಬಿಟ್ಟನು. ಅವಳ ಪ್ರೇಮಾಂಕುರವು ಕಂದಿಹೋಯಿತು, ಕಮಲಾಕಾಂತನನ್ನು ಬಿಟ್ಟು ಅನ್ಯರನ್ನು ವರಿಸಲಿಕ್ಕಿಲ್ಲೆಂದು ಅವಳು ನಿರ್ಧಾರ ಮಾಡಿದಳು. ದೇವಯಾನಿಯ ತಂದೆಯಾದರೂ ಅದೇ ಕಾಲಕ್ಕೆ ತೀರಿಕೊಂಡದ್ದರಿಂದ ಅವಳು ಚಿತ್ರಕಲೆಯನ್ನು ಕೈಕೊಂಡು ಅನೇಕ ಮನೋಹರವಾದ ಭಾವಚಿತ್ರಗಳನ್ನೂ, ಅರಸು ಅರಸಿಯರ ತಸಬೀರುಗಳನ್ನೂ, ತೆಗೆದು ಇಟ್ಟಳು. ಚಾಮರಾಜೇಂದ್ರ ಒಡೆಯರ ಚಿತ್ರವನ್ನು ನೋಡಿ, ಅರಸರು ಮೆಚ್ಚಿ, ಐದು ಸಾವಿರರೂಪಾಯಿಗಳನ್ನು ಅವಳಿಗೆ ಬಹುಮಾನವಾಗಿ ಕೊಟ್ಟರು, ಉಳಿದ ಚಿತ್ರಗಳು ರಾಜಾಸೂರ್ಯವರ್ಮನ ಹೆಸರಿನಿಂದ ಪ್ರಸಿದ್ಧ ಮಾಡಲ್ಪಟ್ಟವು. ಇವುಗಳಿಂದಿಲೂ ದೇವಯಾನಿಗೆ ಕೆಲವು ಹಣ ಸಿಕ್ಕಿತು. ಈ ಹಣವನ್ನೆಲ್ಲ ಜಯರಾಯನ ಹತ್ತಿರ ವ್ಯಾಪಾರಕ್ಕಿಟ್ಟು ಸ್ವತಂತ್ರಳಾಗಿರುವುದಕ್ಕೆ ಇವಳಿಗೆ ಅನುಕೂಲವಾಯಿತು. ಬೆಂಗಳೂರಿನಂಥ ಸಂದಟಿತವಾದ ಪಟ್ಟಣದಲ್ಲಿರುವದು ದೇವಯಾನಿಯ ಮನಸ್ಸಿಗೆ ಬಾರದೆ ಏಕಾಂತಸ್ಥಳದಲ್ಲಿರಬೇಕೆಂದೆಣಿಸಿ ಶ್ರೀರಂಗಪಟ್ಟಣದಲ್ಲಿ ಬಂದು ನಿಂತಿದ್ದಳು.

ನಾಗರಿಕ ತರುಣಿಯು

ರಮಾಕಾಂತನು ದೇವಯಾನಿಗೆ ಪತ್ರ ಬರೆದ ಮರುದಿವಸ ಶ್ರೀರಂಗಪಟ್ಟಣಕ್ಕೆ ಹೋಗುವದಕ್ಕಾಗಿ ಬೆಂಗಳೂರ ಸ್ಟೇಶನಕ್ಕೆ ಬಂದು ಹೊಗೆಬಂಡಿಯಲ್ಲಿ ಕುಳಿತು ನಡೆದನು. ಗಾಡಿಯು ' ಭುಸ್ ಭುಸ್ ' ಎಂದು ಒಳ್ಳೇ ತ್ವರೆಯಿಂದ ಓಡಹತ್ತಿತು. ರಮಾಕಾಂತನು ಸುತ್ತುಮುತ್ತಿನ ರಮಣೀಯವಾದ ಪ್ರದೇಶವನ್ನು ನೋಡುತ್ತ ತಾನೆಲ್ಲಿಗೆ ನಡೆದೆನೆಂಬುದನ್ನು ಮರೆತುಬಿಟ್ಟನು. ಮುಂದಿನ ಸ್ಟೇಶನ್ನಿಗೆ ಗಾಡಿಯು ನಿಲ್ಲಲೋಣ ರಮಾಕಾಂತನಿಗೆ ತನ್ನ ಪ್ರವಾಸವು ನೆನಪಾಯಿತು.

ದೇವಯಾನಿಯು ಎಂಥ ಸ್ವಭಾವದವಳಿರಬಹುದು ? ಶ್ರೀರಂಗಪಟ್ಟಣದಲ್ಲಿ ತಾನೆಷ್ಟು ದಿವಸವಿರಬೇಕಾಗುವದು ? ತನ್ನ ಪ್ರಯೋಜನವಲ್ಲೇನಿರುವದು ? ಟೀಪೂ ಸುಲ್ತಾನನ ರಾಜಧಾನಿಯ ಅವಸ್ಥೆ ಈಗೇನಾಗಿರುವದು ? ಅಲ್ಲೇನೇನು ಚಮತ್ಕಾರ ನೋಡತಕ್ಕದ್ದು ಮೊದಲಾದ ವಿಚಾರಗಳಲ್ಲಿ ರಮಾಕಾಂತನ ಮನಸ್ಸು ತೊಡಕಿತ್ತು. ಸೂರ್ಯನು ಅಸ್ತಂಗತನಾಗಿ ಇನ್ನೂ ತುಸು ಕಣ್ಣುಬೆಳಕಿರುವಾಗಲೇ ಬಂಡಿಯು

ಶ್ರೀರಂಗಪಟ್ಟಣದ ಸ್ಟೇಶನದಲ್ಲಿ ನಿಂತಿತು. ಕೂಲಿಯವನು ಬಂದು ರಮಾಕಾಂತನ ಸಾಮಾನುಗಳನ್ನು ಗಾಡಿಯಿಂದ ತೆಗೆದು ಕೆಳಗಿಟ್ಟನು. ಊರಲ್ಲಿ ಹೋಗುವುದಕ್ಕೆ ಪ್ರಶಸ್ತವಾದ ವಾಹನಗಳಿದ್ದಿಲ್ಲ. ಇನ್ನೇನು ಮಾಡಬೇಕೆಂದು ರಮಾಕಾಂತನು ಯೋಚನೆಯಲ್ಲಿ ಬಿದ್ದು ಬಳಿಯಲ್ಲಿದ್ದೊಬ್ಬ ಮನುಷ್ಯನನ್ನು ಕರೆದು ದೇವಯಾನೀ ಬಾಯಿ ಶಾನುಭೋಗರ ಮನೆ ಗೊತ್ತುಂಟೇನೆಂದು ಕೇಳಲು, ಅವನು 'ನಾನರಿಯೆ ಸ್ವಾಮೀ' ಎಂದು ಹೇಳಿದನು.

ರಮಾಕಾಂತನು ನಿಂತ ಸ್ಥಳದಲ್ಲಿಯೇ ರೂಪವತಿಯಂತೆ ಕಾಣುವ ಯುವತಿಯಳೊಬ್ಬಳು ಕಲಾಬತ್ತಿನ ಶಾಲು ಹೊದ್ದುಕೊಂಡು ನಿಂತಿದ್ದಳು.

"ನಂಜುಂಡಾ, ಧನಿಯರು ಬರಲಿಲ್ಲವೇನಪ್ಪಾ" ಎಂದು ಮಧುರವಾದ ವಾಣಿಯಿಂದೀ ತರುಣಿಯು ತನ್ನ ಸೇವಕನನ್ನು ಕೇಳಿದಳು.

"ಎಲ್ಲ ಕಡೆಯಲ್ಲಿಯೂ ಒಳಹೊಕ್ಕು ನೋಡಿದೆನು. ಬಂದಂತೆ ಕಾಣುವುದಿಲ್ಲ ತಾಯಮ್ಮನವರೇ."

"ಏಕೆ ಬರಲಿಲ್ಲವೋ ಕಾಣೆನು" ಎಂದು ನಿರಾಸೆಯಿಂದ ನುಡಿದು, ತನ್ನ ತಂದೆಯು ಬಾರದೇ ಇದ್ದದ್ದು ನಿಜವೆಂದು ತಿಳಿದ ಬಳಿಕ ಈ ತರುಣಿಯ ದೃಷ್ಟಿಯು ರಮಾಕಾಂತನ ಕಡೆಗೆ ಹೋಯಿತು. ಅವನು ದೇವಯಾನಿಯ ಮನೆ ವಿಚಾರಿಸಿದ್ದು ಕೇಳಿ ಶ್ರೀರಂಗಪಟ್ಟಣಕ್ಕೆ ಇವನು ಹೊಸಬನಿರುವನೆಂದೆಣಿಸಿ ಕನಿಕರಪಟ್ಟು ತನ್ನ ಸೇವಕನಿಗೆ ಹೇಳಿದ್ದು :—

"ನಂಜುಂಡಾ, ಅಲ್ಲಿ ನಿಂತಿರುವ ಗೃಹಸ್ಥರು ಹೊಸಬರಾಗಿ ಕಾಣುತ್ತಾರೆ. ನಮ್ಮ ದೇವಯಾನಿಯಮ್ಮನವರ ಮನೆಗೆ ಬಂದಿರುವಂತೆ ಅವರ ಮಾತಿನಿಂದ ತಿಳಿಯುತ್ತದೆ. ಅವರಿಷ್ಟವಿದ್ದರೆ ನಮ್ಮ ರಥದಲ್ಲಿ ಬರಬಹುದೆಂದು ಹೇಳು."

ನಂಜುಂಡನು ರಮಾಕಾಂತನ ಬಳಿಗೆ ಬಂದು "ಬುದ್ಧೀ, ತಮಗೆ ದೇವಯಾನಿಯಮ್ಮನವರ ಮನೆಗೆ ಹೋಗುವದಿದ್ದರೆ, ನಮ್ಮ ಧನಿಯರ ರಥದಲ್ಲಿ ಬರಬಹುದು. ಅಲ್ಲಿ ನಿಂತುಕೊಂಡವರು ನಮ್ಮ ಧನಿಯರ ಮಕ್ಕಳು ; ಅವರಾಜ್ಞೆಯ ಮೇರೆಗೆ ನಾನು ವಿಜ್ಞಾಪನೆ ಮಾಡಿಕೊಳ್ಳುತ್ತೇನೆ."

ಊರೊಳಗೆ ಹೋಗುವದಕ್ಕೆ ರಮಾಕಾಂತನಿಗೆ ಬೇರೆ ಸಾಧನವೇ ಇದ್ದಿರಲಿಲ್ಲ. ಮೇಲಾಗಿ ಇಂಥ ತರುಣಿಯು ನಾಗರಿಕತನದಿಂದ, ಕೊಟ್ಟ ಆಮಂತ್ರಣವನ್ನಾದರೂ ಹೇಗೆ ದೂಡಬಹುದೆಂದೆಣಿಸಿ ನಂಜುಂಡನ ಮಾತಿಗವನು ಒಪ್ಪಿಕೊಂಡನು. ನಂಜುಂಡನು ರಮಾಕಾಂತನನ್ನು ಆ ತರುಣಿಯಿದ್ದಲ್ಲಿಗೆ ಕರೆ

ದೊಯಿಂದು "ಅಮ್ಮನವರೇ, ರಾಯರು ನಮ್ಮ ರಥದಲ್ಲಿ ಬರಲೊಪ್ಪಿಕೊಂಡಿದ್ದಾರೆ" ಎಂದು ಹೇಳಿದನು.

"ತಾವು ದೇವಯಾನಿಯಮ್ಮನವರ ಮನೆಗೆ ಹೋಗುವದೆಂದು ಕೇಳಿದೆನು. ಈ ಸ್ಟೇಶನದಲ್ಲಿ ಸರಿಯಾದ ವಾಹನಗಳು ದೊರಕುವದಿಲ್ಲ. ದೇವಯಾನಿಯಮ್ಮನವರ ಮನೆ ನಮ್ಮ ಮನೆಗೆ ಹೋಗುವ ಮಾರ್ಗದಲ್ಲಿಯೇ ಇದೆ. ನೀವು ನಮ್ಮ ರಥದಲ್ಲಿ ಬರಬಹುದು." ಎಂದು ಮಂಜುಲವಾದ ವಾಣಿಯಿಂದ ಕುಲಯುವತಿಯರಿಗುಚಿತವಾದಷ್ಟು ಆಗ್ರಹದಿಂದ ಹೇಳಿದಳು.

ಈ ತರುಣಿಯ ನಡೆನುಡಿಯಲ್ಲಿ ಕಿಂಚಿತ್ತಾದರೂ ವಿಲಾಸಿನಿಯ ಭಾವ ಕಂಡುಬರಲಿಲ್ಲ. ಅವಳ ಸರಳವಾದ ಸ್ವಭಾವವೂ, ವಿಶುದ್ಧವಾದಾಚರಣೆಯೂ, ದೊಡ್ಡಮನಸ್ಸೂ ಅವಳಾಡಿದ ಸ್ವಲ್ಪ ಮಾತುಗಳಲ್ಲಿಯೇ ವ್ಯಕ್ತವಾದವು. ಸಂಜೆಯ ಮಬ್ಬು ಹೆಚ್ಚಾಗುತ್ತ ನಡೆದದ್ದರಿಂದಲೂ, ಅವಳು ತನ್ನ ತಲೇ ಮೇಲೆ ಶಾಲು ಹೊದ್ದುಕೊಂಡದ್ದರಿಂದಲೂ ಈ ತರುಣಿಯ ರೂಪಲಾವಣ್ಯಗಳು ರಮಾಕಾಂತನಿಗೆ ಚೆನ್ನಾಗಿ ಕಂಡುಬರಲಿಲ್ಲ.

ಈ ಮಾದರಿಯ ತರುಣಿಯರ ಕೂಡ ಮಾತನಾಡುವ ಪ್ರಸಂಗವು ರಮಾಕಾಂತನಿಗೆಂದೂ ಬಂದಿದ್ದಿಲ್ಲ. ಇವನಾದರೂ ಸ್ವತಃ ಉದಾತ್ತವಿಚಾರದವನಾಗಿದ್ದುದರಿಂದ ಈ ತರುಣಿಯ ಕೂಡ ವಿಶೇಷ ಮಾತು ಬೆಳಸಲಿಚ್ಛಿಸಲಿಲ್ಲ, ಅವಳುಪಕಾರವನ್ನು ಸ್ವಲ್ಪ ಶಬ್ದಗಳಲ್ಲಿಯೇ ಕೊಂಡಾಡಿದನು.

ರಥವು ಸಾಗಿದ ಮೇಲೆ ಆ ತರುಣಿಯು "ತಮ್ಮದ್ಯಾವೂರಾಯಿತು? ಇಲ್ಲಿಗೇನು ಕಾರಣ ಬರೋಣವಾಯಿತು?" ಎಂದು ವಿನಯದಿಂದ ಕೇಳಿದಳು.

ತಾನು ನವರಸಪುರದ ದೇಸಾಯರ ಮನೆತನದವನೆಂದೂ ತನ್ನ ತಾಯಿ ತಂದೆಗಳಿಬ್ಬರೂ ತೀರಿಕೊಂಡಿರುವರೆಂದೂ ಹೇಳಿ ತಾನು ದೇವಯಾನಿಯ ಮನೆಗೇಕೆ ಹೋಗುವನೆಂಬುದನ್ನು ಕೂಡಾ ತಿಳಿಸಿದನು.

ಇಷ್ಟಾದ ಬಳಿಕ ಅವರೀರ್ವರ ನಡುವೆ ಮತ್ತೇನೂ ಮಾತಾಗಲಿಲ್ಲ. ರಮಾಕಾಂತನ ಮನಸ್ಸಿನಲ್ಲಿ ಮಾತ್ರ ಏನೋ ಚಮತ್ಕಾರವೆನಿಸಿತು. ಮೊದಲೇ ಸ್ತ್ರೀಸಂಪರ್ಗವಿಲ್ಲದ ತರುಣನಿವನು. ಇಂಥ ರೂಪವತಿಯೂ ಸುಶಿಕ್ಷಿತಳೂ, ಮೇಲಾಗಿ ಶ್ರೀಮಂತರ ಮಗಳು, ಆಗಿರುವ ಈ ಲಲನೆಯು ತನ್ನ ಹತ್ತಿರ ಕುಳಿತಿರುವಳಾದ್ದರಿಂದ ರಮಾಕಾಂತನ ಮೈಯಲ್ಲಿ ವಿದ್ಯುತ್ಪ್ರವಾಹವು ಸಂಚಾರ ಮಾಡಿದಂತಾಯಿತು. ಆದರೆ ಇದಕ್ಕೆ ಕಾಮವಿಕಾರವೆಂದು ಮಾತ್ರ ಹೇಳಕೂಡದು.

ಕತ್ತಲಾಗುತ್ತ ನಡೆದದ್ದರಿಂದ ನಗರರಚನೆಯು ಚೆನ್ನಾಗಿ ಕಂಡುಬರಲಿಲ್ಲ. ಕೆಲಹೊತ್ತು ರಥವು ನಡೆದ ಬಳಿಕ ನಂಜುಂಡನದನ್ನು ನಿಲ್ಲಿಸಿ ರಮಾಕಾಂತನನ್ನು ಕುರಿತು "ಬುದ್ಧೀ, ದೇವಯಾನಿಯಮ್ಮನವರ ಮನೆ ಬಂದಿತು" ಎಂದು ಹೇಳಿ ರಥದಿಂದಿಳಿದು ಅದರ ಬಾಕಿಲ ತೆರೆದು ಮಗ್ಗಲಿಗೆ ನಿಂತನು. ರಮಾಕಾಂತನು ಕೆಳಗಿಳಿದ ಕೂಡಲೆ ನಂಜುಂಡನು ಆತನ ಸಾಮಾನು ಹೊತ್ತುಕೊಂಡು, ದೇವರೂ, 'ಹೀಗೆ ದಯಮಾಡಿಸಬೇಕೆಂದು' ಹಾದಿ ತೋರಿಸಿದನು. ರಮಾಕಾಂತನು ತನ್ನ ಪರಾಮರ್ಶೆ ತಕ್ಕೊಂಡ ಉದಾರಳಾದ ತರುಣಿಗೆ ಬರುತ್ತೇನೆಂದು ಹೇಳಿ, ಅವಳ ಅಪ್ಪಣೆ ತಕ್ಕೊಂಡು, ನಂಜುಂಡನ ಹಿಂದಿನಿಂದ ನಡೆದನು. ನಜುಂಡನು ದೇವ ಯಾನಿಯ ಬಾಕಿಲಿಕ್ಕೆ ಹೋಗಿ "ಸರದಾರಸಿಂಗ! ಬಾಕಿಲ ತೆರೆ. ಅತಿಥಿಗಳ್ಯಾರೋ ನಿಮ್ಮಲ್ಲಿಗೆ ಬಂದಿರುವರು." ಎಂದು ಕೂಗಿ ಹೇಳಿದನು.

ತತ್‌ಕ್ಷಣವೇ ಬಾಕಿಲ ತೆಗೆದು ಕೈಯಲ್ಲಿ ಕಂದೀಲು ತಕ್ಕೊಂಡು ಅರವತ್ತು ವರ್ಷದ ಮುದುಕನಾಗಿದ್ದರೂ ದೃಢಾಂಗನಾಗಿದ್ದ ಹಿಂದೂಸ್ಥಾನೀ ಭಯ್ಯಾ ಜಾತಿಯ ಸೇವಕನು ಬಂದು "ಏನ್ ನಂಜಾಪಾ, ರಾವ್‌ಸಾಬ್ ಬಂದ್ರು?" ರಾವ್‌ಸಾಬ್ ರಾಮರಾವ್ ಎಂದು ಶರಣು ಮಾಡಿ ರಮಾಕಾಂತನ ಸಾಮಾನು ತಕ್ಕೊಂಡು ಅವನನ್ನು ಉಪ್ಪರಿಗೇ ಮೇಲೆ ಕರೆದೊಯ್ದನು. ಅಲ್ಲಿಟ್ಟ ಕೋಚದ ಮೇಲೆ ರಮಾಕಾಂತನಿಗೆ ಕುಳ್ಳಿರ ಹೇಳಿ ಆತನ ಸಾಮಾನು ಜತನದಿಂದಿಳಿಸಿಟ್ಟು "ಬಾಯಿಸಾಬ್ ಈಗ ಬರತೇ" ಎಂದು ಹೇಳಿ ಸರದಾರಸಿಂಗನು ನಡೆದನು.

ರಮಾಕಾಂತನು ತನ್ನ ಪೆಟ್ಟಿಗೆ ತೆರೆದು ಪ್ರವಾಸದ ಬಟ್ಟೆಗಳನ್ನು ಕಳೆದು ಉತ್ತಮವಾದವುಗಳನ್ನು ಧರಿಸಿ ದೇವಯಾನಿಯ ದರ್ಶನಕ್ಕೆ ಸಿದ್ಧನಾದನು. ಈ ಉಪ್ಪರಿಗೆಯಲ್ಲಿ ವಿಶಾಲವಾದ ಸದರು ಮನೆಯೂ, ಅದಕ್ಕೆ ಹತ್ತಿದ್ದೊಂದು ಕೋಣೆಯೂ, ಬೀದಿಯ ಮಗ್ಗಲು ಚಂದ್ರಶಾಲೆಯೂ, ಇದ್ದವು. ಸದರು ಮನೆ ಯಲ್ಲಿ ಜಂತಿಯಿಂದಿಳಿಬಿಟ್ಟ ಪ್ರಕಾಶಮಯವಾದ ದೀಪವಿತ್ತು. ನೆಲಕ್ಕೆ ತುಂಬಾ ಚಿತ್ರಮಯವಾದ ರತ್ನಗಂಬಳಿ ಹಾಸಿತ್ತು. ಎದುರು ಬದರು ಗೋಡೆಗಳಿ ಗಾನಿಸಿ ಎರಡು ಬೆಲೆಯುಳ್ಳ ಕೋಚಗಳನ್ನಿಟ್ಟಿದ್ದರು. ಮಧ್ಯದಲ್ಲಿ ಸಿಸಂವೆ ಕಟ್ಟಿಗೆಯ ದುಂಡುಮೇಜು ಇತ್ತು. ಗೋಡೆಗಳಿಗೆ ಮನೋಹರವಾದ ಚಿತ್ರಪಟ ಗಳನ್ನು ಪರಿಷ್ಕಾರವಾಗಿ ತೂಗುಹಾಕಿದ್ದರು. ಗೋಡೆಗಳಲ್ಲಿಯೇ ಎರಡು ಕಪಾಟ ಗಳಿದ್ದು ಅವುಗಳಲ್ಲಿ ಪುಸ್ತಕಗಳು ತುಂಬಿದ್ದವು. ಇವೆಲ್ಲ ನೋಡಲಾಗಿ ಮನೆಯ ಯಜಮಾನತಿಯು ಸ್ವಚ್ಛತಾಪ್ರಿಯಳೂ, ಸುಖಸಾಧನಗಳ ಅಭಿರುಚಿಯುಳ್ಳ

ವಳೂ, ಕಲಿತವಳೂ ಆಗಿರುವಳೆಂದು ಸಹಜವೇ ತಿಳಿಯುವಂತಿತ್ತು.

ನಿರೀಕ್ಷಣದಲ್ಲಿ ನಿಮಗ್ನನಾಗಿ ನಿಂತಿರುವನೀ ತರುಣನು. ಅಷ್ಟರಲ್ಲಿ ಓರಣ ವಂತೆಯಾದ ಮನೆಕೆಲಸ ಮಾಡುವ ಶೂದ್ರಕುಮಾರಿಯು ಬಂದು "ರಾಯರೇ, ತಮ್ಮ ಪೋಷಾಕು ಹಾಕಿಕೊಳ್ಳುವದಾಗಿದ್ದರೆ ಅಮ್ಮನವರು ಈಗಲೇ ಬರುವರು" ಎಂದು ಸೂಚನೆ ಕೊಟ್ಟಳು. ರಮಾಕಾಂತನು, ಸಿದ್ಧನಾಗಿರುವೆನೆಂದು ಹೇಳಲು ಆ ಕುಮಾರಿಯು ತನ್ನ ಒಡತಿಯ ಬಳಿಗೆ ಹೋದಳು.

ನಾಲ್ಕಾರು ನಿಮಿಷಗಳಲ್ಲಿಯೇ ಮಾನನೀಯಳಂತೆ ಕಾಣುವ ನಾಲ್ವತ್ತೈದು ಐವತ್ತು ವರ್ಷದ ಪ್ರಾಯದವಳಾದ ಸ್ತ್ರೀಯಳು ಒಳಗೆ ಬಂದಳು. ಇವಳ ತಲೆ ಯಲ್ಲೊಂದೊಂದು ನರೆಗೂದಲುಗಳು ಕಾಣುತ್ತಿದ್ದವು. ಆದರೂ ಚೆನ್ನಾಗಿ ಬಾಚಿ ಓರಣ ಮಾಡಿದ್ದರಿಂದ ಅಯಿಬು ಕಾಣುತ್ತಿದ್ದಿಲ್ಲ. ಮುಖ ನೋಡಲು ಇವಳು ಚಿಕ್ಕಂದಿನಲ್ಲಿ ಒಳ್ಳೇ ಸುಂದರಿಯೆಂದೆನಿಸಿಕೊಂಡಿರಲಿಕ್ಕೆ ಸಾಕು. ಸೂಕ್ಷ್ಮವಾದ ಬನಾರಸಿ ಸೀರೆಯನ್ನುಟ್ಟುಕೊಂಡು ಮೈಯಲ್ಲಿ ಉಣ್ಣೀ ವಸ್ತ್ರದ ರವಿಕೆಯನ್ನು ತೊಟ್ಟುಕೊಂಡಿದ್ದಳು. ಹಣೆಗೆ ಸೌಭಾಗ್ಯಾಲಂಕಾರವಿಲ್ಲದ್ದರಿಂದ ಇವಳು ವಿಧ ವೆಯೇ ಸರಿ. ಇವಳನ್ನು ಕಂಡ ಕೂಡ್ಲೆ ಆದರಬುದ್ಧಿಯುಂಟಾಗಿ ರಮಾಕಾಂತ ನೆದ್ದು ನಿಂತನು.

"ರಮಾಕಾಂತ, ಬಂದಿಯಾ. ನಿಂತೆ ಏಕೆ ಕೂತುಕೋ" ಎಂದು ಹೇಳಿ ತಾನೂ ತೂಲಿಕಾಮಯವಾದ ಆರಾಮಕುರ್ಚಿಯಲ್ಲಿ ಕುಳಿತುಕೊಂಡಳು.

"ನನ್ನ ಪತ್ರಕ್ಕೆ ಮರ್ಯಾದೆ ಕೊಟ್ಟು ನೀನು ಬಂದದ್ದರಿಂದ ನನಗೆ ಬಹಳೇ ಆನಂದವಾಗಿದೆ. ನೀನು ನಾಳೆಗೆ ಬರುವಿಯೆಂದೆಣಿಸಿ ಸ್ಟೇಶನಕ್ಕೆ ನನ್ನ ಗಾಡಿ ಕಳಿಸಲಿಲ್ಲ. ಎಲ್ಲವೂ ಕ್ಷೇಮವೋ ?" ಎಂದು ಕೇಳಿದಳು.

"ಹೀಗಿರುವೆನು ನೋಡಿರಿ. ಕ್ಷೇಮವೇ ಸರಿ. ಇರುವನೊಬ್ಬ ಹಿರಿಯ ರನ್ನು ಕಳಕೊಂಡುಬಿಟ್ಟಿರುವೆನು."

ದೇವಯಾನಿಗೆ ಕಮಲಾಕಾಂತರ ನೆನಪಾಗಿ ಅವಳ ಕುತ್ತಿಗೆ ಬಿಗಿದು ಬಂತು. ಅಶ್ರುಗಳು ತುಂಬಿ ಬರಲು ತನ್ನ ಸೆರಗಿನಿಂದ ಕಣ್ಣೊರಿಸಿಕೊಂಡು "ಕಮಲಾಕಾಂತರು ತೀರಿಕೊಂಡ ವಾರ್ತೆಯನ್ನು ವರ್ತಮಾನಪತ್ರಗಳಿಂದ ತಿಳು ಕೊಂಡೆನು. ಅಂಥ ಸದ್ಗುಣಿಗಳಾದ ತೀರ್ಥರೂಪರನ್ನು ಕಳಕೊಂಡದ್ದು ನಿನ ಗೊಂದು ಮಹತ್ತಾದ ಹಾನಿಯೇ ಸರಿ. "ಕಾಂತೂ"—ದೇವಯಾನಿಯು ಕಮಲಾಕಾಂತನಿಗೆ ಪ್ರೇಮದಿಂದ ಕಾಂತೂ ಎಂದು ಕರೆಯುತ್ತಿದ್ದಳು. ಅದೇ

ಹೆಸರನ್ನು ಪ್ರೇಮದಿಂದ ಈಗುಚ್ಚರಿಸಿದಳು—"ಕಾಂತೂ, ಹೀಗೆ ಸಮೀಪಕ್ಕೆ ಬಾ, ನಿನ್ನ ಮುಖವನ್ನು ಚೆನ್ನಾಗಿ ನೋಡುವೆನು."

ರಮಾಕಾಂತನು ಆದರದಿಂದವಳ ಹತ್ತಿರ ಹೋಗಿ ನಿಲ್ಲಲು "ತಂದೆಯ ಹೋಲಿಕೆ ಸಂಪೂರ್ಣವಾಗಿದೆ. ನಿನ್ನ ವಯಸ್ಸಿನವರಿದ್ದಾಗ್ಗೆ ಕಮಲಾಕಾಂತರು ಹೆಚ್ಚು ಸುಂದರರಾಗಿ ಕಾಣುತ್ತಿದ್ದರು. ನಾನೀಗ ಕಮಲಾಕಾಂತರ ಮಗನ ಕೂಡ ಮಾತಾಡುತ್ತಿದ್ದರೂ ಅವರು ಬೆಂಗಳೂರಲ್ಲಿದ್ದದ್ದು ಮೊನ್ನೆ ಮೊನ್ನೆಯೇ ಎಂಬಂತೆ ಭಾಸವಾಗುತ್ತದೆ. ಆಗ ನಾವು ಪರಮಸ್ನೇಹಿತರಾಗಿದ್ದೆವು ಕೇವಲ ಆ ಸ್ನೇಹ ಕ್ಕೋಸ್ಕರವೇ ನಾನು ನಿನ್ನ ಮೇಲೆ ಮಮತೆ ಮಾಡುತ್ತೇನೆ. ಕಾಂತೂ, ನಿನ್ನ ಮುಂದೆ ಕಮಲಾಕಾಂತರೆಂದಾದರೂ ನನ್ನ ಮಾತು ತೆಗದಿದ್ದರೇನು ?"

"ವಿಶೇಷವಾಗಿ ತೆಗೆದಿದ್ದಿಲ್ಲ, ಮಾತ್ರ ಮರಣಕಾಲ ಸಮೀಪಿಸಿದಾಗ್ಯೆ, ಮೈಸೂರ ಪ್ರಾಂತದಲ್ಲಿ ತಮ್ಮೊಬ್ಬ ಸನ್ಮಾನಿತಳಾದ ಸ್ನೇಹಿತಳಿರುವಳೆಂದೂ, ಅವಳ ಪರಿಚಯವನ್ನು ನಾನು ಅವಶ್ಯವಾಗಿ ಮಾಡಬೇಕೇದೂ ಹೇಳಿದರು." ಎಂದು ರಮಾಕಾಂತನು ಮೆಲ್ಲಗೆ ನುಡಿದನು.

"ನನ್ನ ಹೆಸರು ಹೇಳಿದರೇನು ?"

"ಇಲ್ಲ. ಪ್ರಾಣೋತ್ಕ್ರಮಣದ ಕಾಲದಲ್ಲಿ ಮಾತ್ರ ಎರಡಾವರ್ತಿ 'ದೇವ ಯಾನೀ' ಎಂದು ಉಚ್ಚರಿಸಿದರು."

ಇದನ್ನು ಕೇಳಿ ದೇವಯಾನಿಯ ಮುಖಚರ್ಯೆಯ ಮೇಲೆ ಆವೇಶ ಬಂದಂತೆ ಕಾಣಿಸಿತು. ಅವಳ ನೇತ್ರಗಳಿಂದ ಅಶ್ರುಬಿಂದುಗಳು ಪಳಪಳ ಉದುರಿದವು. ದೇವಯಾನಿಯು ರಮಾಕಾಂತನ ಬೆನ್ನಮೇಲೆ ಕೈಯಾಡಿಸಿ "ಕಾಂತೂ, ನೀನು ಕಮಲಾಕಾಂತರಂತೆ ಸುಶೀಲನೂ ಉದಾರಮನಸ್ಸಿನವನೂ ಆಗಲೆತ್ನಿಸಿ ಅವರ ಹೆಸರು ಮುಂದಕ್ಕೆ ತರುವಂತೆ ಮಾಡು. ಬೆಂಗಳೂರು ಈಗ ಮುಂಚಿನ ಬೆಂಗಳೂರಲ್ಲ. ಅಲ್ಲಿ ತರುಣರು ಬೇಗ ಭ್ರಷ್ಟರಾಗುವ ಕೆಟ್ಟ ಸಾಧನಗಳು ಹೆಚ್ಚಾಗಿವೆ. ಕಮಲಾಕಾಂತರಂಥ ಗುಣಗಳಿದ್ದವರೇ ಬೆಂಗಳೂರಲ್ಲಿ ಪಾರಾಗ ಬೇಕು. ಹಿರಿಯರನ್ನು ಹೀಯಾಳಿಸುವದು ಈಗಿನ ಪೋರರ ವ್ರತವೇ ಆಗಿರುವದು. ನಿನ್ನ ತಂದೆಯವರ ಅಲೌಕಿಕವಾದ ಗುಣಗಳನ್ನು ಧ್ಯಾನಕ್ಕೆ ತಂದುಕೊಂಡು ಒಳ್ಳೇ ಎಚ್ಚರದಿಂದ ವರ್ತಿಸುತ್ತಿರು. ತಿಳಿಯಿತೇ ?"

"ನನ್ನ ತಂದೆಯವರ ಗುಣಗಳು ನನಗೆ ತಿಳಿದಷ್ಟು ಮತ್ಯಾರಿಗೂ ತಿಳಿದಿರಲಿ ಕ್ಕಿಲ್ಲ. ಈ ಮಾತು ನನಗ್ಯಾರೂ ಕಲಿಸಲಿವಶ್ಯವಿಲ್ಲ" ಎಂದು ರಮಾಕಾಂತನು

ಸ್ವಲ್ಪ ಆವೇಶದೊಂದಿಗೆ ನುಡಿದನು.

"ನಿನಗುಪದೇಶ ಮಾಡಲಿಕ್ಕೆ ನನಗಧಿಕಾರವಿಲ್ಲೆಂದು ನಿನ್ನಭಿಪ್ರಾಯವಿರುವುದೇನು ? ನನ್ನದೂ ಕಮಲಾಕಾಂತರದೂ ಸ್ನೇಹವು ನೀನು ಹುಟ್ಟುವದಕ್ಕಿಂತಲೂ ಪೂರ್ವದ್ದು ಕಂಡಿಯಾ !" ಎಂದು ದೇವಯಾನಿಯು ಗಂಭೀರಮುದ್ರೆ ತಾಳಿ ಹೇಳಿದಳು.

ಇದನ್ನು ಕೇಳಿ ರಮಾಕಾಂತನು ಮನಸ್ಸಿನಲ್ಲಿ ಹಿಂಜರಿದನು. "ಅಮ್ಮಾ ಕ್ಷಮಿಸಿರಿ, ನಾನು ತಿಳಿಯದೇ ಆಡಿದೆನು" ಎಂದು ನಮ್ರನಾಗಿ ಬೇಡಿಕೊಂಡನು.

"ಹೋಗಲಿ ಬಿಡು. ನೀನು ಹಸಿದಿರುವಿಯಾದೀತು. ಉಪಹಾರ ತಕ್ಕೋ ನಡೆ."

"ಅಷ್ಟು ಹಸಿವೆ ನನಗಾಗಿಲ್ಲ. ಭೋಜನದ ಸಮಯವು ಸಮೀಪಿಸಿರುವದಲ್ಲ !"

"ಸುಮ್ಮನೆ ಏಳು. ಬೆಂಗಳೂರು ಬಿಟ್ಟನಂತರ ಮಧ್ಯದಲ್ಲಿ ನಿನಗುಪಹಾರವೆಲ್ಲಿ?" ಹೀಗೆಂದು ದೇವಯಾನಿಯು ಮೇಜಿನ ಮೇಲಿದ್ದ ಯಂತ್ರಕ್ಕೆ ಕೈಬಡಿಯಲು, ಅದು ಗಂಟೆ ಬಾರಿಸಿತು. ಸಂಗಡಲೇ ಅಡಿಗೆಯವಳು ಉಪಹಾರ ತಂದಿಟ್ಟಳು.

ರಮಾಕಾಂತನು ಉಪಹಾರದಲ್ಲಿ ತೊಡಗಿದನು. "ರಮಾಕಾಂತ, ನೀನು ದೇಶಸಂಚಾರ ಮಾಡಿರುವಿಯಲ್ಲವೆ ? ಕೂಡಿದಾಗ್ಗೆ ನಿನ್ನ ಸಂಚಾರದಲ್ಲೇನೇನು ಕಂಡಿ. ಏನೇನು ಮಾಡಿದಿ ಇದನ್ನೆಲ್ಲಾ ವಿಸ್ತಾರವಾಗಿ ಹೇಳು. ನಿನ್ನ ಗೃಹಕೃತ್ಯದ ಸಮಾಚಾರವನ್ನು ಕೂಡ ಸಂಕೋಚವಿಲ್ಲವೆ ನನ್ನ ಮುಂದೆ ಹೇಳಲಿಕ್ಕೇನು ಚಿಂತೆಯಿಲ್ಲ."

"ತಮಗೆ ಕೂಡಿದಾಗ್ಗೆ ಹೇಳುವೆನು."

"ಕಾಂತೂ, ನಾನು ಸ್ಟೇಶನಕ್ಕೆ ಗಾಡೀ ಕಳಿಸಲಿಲ್ಲ. ಇದು ಪ್ರಮಾದವೇ ಆಯಿತು. ಮನೆಗೆ ಬರಬೇಕಾದರೆ ನಿನಗೆ ತೊಂದರೆಯಾಗಿದ್ದೀತು."

"ಏನೂ ತೊಂದರೆಯಾಗಲಿಲ್ಲ, ಸುಯೋಗದಿಂದ ಸ್ಟೇಶನದಲ್ಲಿ ಸುಸ್ವಭಾವದವಳಾದ ನಾಗರಿಕ ತರುಣಿಯೊಬ್ಬಳು ಭೆಟ್ಟಿಯಾದಳು. ಅವಳೇ ನನ್ನನ್ನಿಲ್ಲೀವರೆಗೆ ಕರತಂದಳು."

"ನಾಗರಿಕ ತರುಣಿಯು ! ಯಾವ ತರುಣಿಯು ? ನಗರವಾಸಿಗಳಾದ ನಿಮ್ಮಂಥ ಹೊಸ ತರುಣರು ಬೆಸ್ತರ ಪೋರಿಗೆ ಕೂಡಾ ನಾಗರಿಕ ತರುಣಿಯೆಂದು ಕರೆಯುವ ದಾಕ್ಷಿಣ್ಯ ಕಲಿತಿರುವಿರೇನು ?"

“ಹಾಗಲ್ಲವಮ್ಮಾ, ಕಲಾಬತ್ತಿನ ಶಾಲು ಹೊದ್ದುಕೊಂಡ, ಸುಶಿಕ್ಷಿತೆಯಾದ ತರುಣಿಯು ಜೋಡುಕುದುರೆಯ ಅಂದವಾದ ಫೈಟನದಲ್ಲಿ ಕುಳ್ಳಿರಿಸಿಕೊಂಡು ನನ್ನನಿಲ್ಲೀವರೆಗೆ ತಂದುಬಿಟ್ಟಳು.”

“ಕಾಂತೂ, ನೀನು ದಿನ ಹೋದ ನಾರಿಯರ ಮುಂದೆ ತೋರಿಸುವ ಮರ್ಯಾದಶೀಲತೆಯನ್ನು ಯುವತಿಯರ ಸಹವಾಸದಲ್ಲಿಡುವದಿಲ್ಲೆಂದು ಕಾಣುತ್ತದೆ. ಅಪರಿಚಿತೆಯಾದ ತರುಣಿಯ ಕೂಡ ನೀನು ಒಮ್ಮೆಲೇ ಹೇಗೆ ಮಾತಾಡಲುದ್ಯುಕ್ತನಾದೆ ? ಕಲಕತ್ತಾ ಪುಣೆಗಳ ರೀತಿಗಳು ಹೀಗೇ ಇರುವವೇನು ?” ಎಂದು ದೇವಯಾನಿಯು ಸಿಟ್ಟುಮಾಡಿ ಕೇಳಿದಳು

ರಮಾಕಾಂತನು ಕಿಂಚಿತ್ ನಾಚಿಕೊಂಡು ನಸುನಕ್ಕು ನುಡಿದದ್ದು : “ಅವಳನ್ನು ನಾನು ಮಾತಾಡಿಸಹೋಗಲಿಲ್ಲ. ನಾನು ತೊಂದರೆಯಲ್ಲಿದ್ದದ್ದು ಕಂಡು ಆ ಸುಜ್ಞಳು ತನ್ನ ಜವಾನನನ್ನು ನನ್ನ ಬಳಿಗೆ ಕಳುಹಿಸಿ ನಿಮ್ಮ ಗುರ್ತು ತನಗಿದೆ, ತನ್ನ ರಥದಲ್ಲಿ ಬರಬಹುದೆಂದು ಹೇಳಿಸಿದಳು.”

“ಅದಕ್ಕೆ ನೀನೊಪ್ಪಿಕೊಂಡೆ ! ಆಗಲಿ, ಅವಳ ವಿಷಯಕ್ಕೆ ನಿನ್ನಭಿಪ್ರಾಯವೇನಿರುವುದು ?”

“ಅದಕ್ಕೆ ಅವಳು ಸೌಜನ್ಯವುಳ್ಳವಳಂತೂ ಸರಿಯೇ, ಕತ್ತಲಾಗುತ್ತ ಬಂದದರಿಂದ ಅವಳ ಮುಖವು ಚೆನ್ನಾಗಿ ಕಾಣಬರಲಿಲ್ಲ ; ಮೇಲಾಗಿ ಅವಳು ತಲೇ ಮೇಲೆ ಶಾಲು ಹೊದ್ದುಕೊಂಡಿದ್ದಳು.”

“ಹೀಗೋ ? ಅವಳು ನಿನ್ನ ಕಡೆಗೆ ತಿರಿಗಿ ಒಮ್ಮೆಯಾದರೂ ನೋಡಲಿಲ್ಲೇನು ?”

“ತಲೆ ತಗ್ಗಿಸಿಕೊಂಡು ನನ್ನ ಕೂಡ ಸ್ಟೇಶನದಲ್ಲಿ ಸ್ವಲ್ಪ ಮಾತಾಡಿದಳು. ತಿರುತಿರುಗಿ ನೋಡುವಳೇಕೆ ?” ಎಂದು ರಮಾಕಾಂತನು ತುಸು ನಕ್ಕು ನುಡಿದನು.

“ಪಾಪ ! ನಾಳೇ ನೀನು ಅವಳ ಮುಖವನ್ನು ಚೆನ್ನಾಗಿ ನೋಡಿಕೊಳ್ಳುವಿಯಂತೆ, ನೀನು ಬರುವ ದಿವಸವೇ ಅವಳು ಸ್ಟೇಶನಕ್ಕೆ ಹೋಗಿರಬೇಕೆಂದರೆ ! ಒಳ್ಳೇದು, ಆದದ್ದಾಯಿತು.”

“ಏಕೆ ? ಇದರಿಂದೇನಾದರೂ ದುಷ್ಪರಿಣಾಮ ಸಂಭವಿಸುವದೇನು ?” ಎಂದು ರಮಾಕಾಂತನು ದೇವಯಾನಿಯ ಮುಖವನ್ನು ದಿಟ್ಟಿಸಿನೋಡಿ ಕೇಳಿದನು.

“ಈ ಪರಿಣಾಮದ ಭಯವು ಅವಳಿಗೇನಿಲ್ಲ. ಇಷ್ಟು ಮಾತ್ರ ನಾನು ಹೇಳಬಲ್ಲೆನು.

"ಅವಳು ಹೃದಯಂಗಮ್ಯಳಿರುವಂತೆ ಕಾಣುತ್ತಾಳೆ." ಎಂದು ಗಟ್ಟಿಮನಸ್ಸು ಮಾಡಿಕೊಂಡು ರಮಾಕಾಂತನು ನುಡಿದನು.

"ಅವಳು ಹೃದಯಂಗಮ್ಯಳಿರುವಳಲ್ಲವೇ! ರಮಾಕಾಂತರಾಯರೇ, ನೀವು ಗೂಢಾರ್ಥವನ್ನುಪಯೋಗಿಸುವಿರೇನು? ನನ್ನಂಥವಳಿಗೆ ಅವಳು ಹೃದಯಂಗಮ್ಯಳೇ ಇರುವಳು. ಇಷ್ಟೇ ಅಲ್ಲ, ಅವಳು ವಿನಯಗುಣಸಂಪನ್ನೆಯೂ ಇರುವಳು. ಆದರೆ ನಿನ್ನ ವಿಚಾರ ನೀನು ನೋಡಿಕೊಳ್ಳತಕ್ಕದ್ದು."

ಮುಂದೆ ಒಂದೆರಡುಗಳಿಗೇ ಪರ್ಯಂತರ ಆ ಹರಟೆ ಈ ಹರಟೆ ನಡೆಯಿತು. ಆ ಮೇಲೆ ಓರಣವಂತೆಯಾದ ಆ ಶೂದ್ರಕುಮಾರಿಯು ಬಂದು "ಅಮ್ಮಾ, ಭೋಜನ ಸಿದ್ಧವಾಗಿದೆ, ಕೈಕಾಲು ತೊಳೆದುಕೊಳ್ಳಬೇಕು" ಎಂದು ಹೇಳಿದಳು. ರಮಾಕಾಂತನೂ ದೇವಯಾನಿಯೂ ಕೆಳಗಿಳಿದು ಭೋಜನಶಾಲೆಗೆ ಬಂದು ಕುಳಿತು ಕೊಂಡರು.

ಹರಟೆಯ ಕೂಡ ನಡೆದ ಭೋಜನವು ರಮಾಕಾಂತನಿಗೆ ಸ್ವಲ್ಪ ಜಡ ಹೋಯಿತು. ರಮಾಕಾಂತನು ಜಾತ್ಯಾ ಭಿಡೆಯಸ್ತನು 'ಈ ಜಿಲ್ಪಿ ತಕ್ಕೋ.' ನಮ್ಮ ಶೇಷಮ್ಮನಂಥ ಜಿಲ್ಪಿ ಈ ಪ್ರಾಂತದಲ್ಲಿ ಯಾರಿಗೂ ಮಾಡಲಿಕ್ಕೆ ಬರುವದಿಲ್ಲ. ವಡೆಯು ಬಹು ರುಚಿಯಾಗಿದೆ, ಶ್ರೀಖಂಡವು ಬೇಸಿಗೆಯಲ್ಲಿ ಬಹುಹಿತಕರ ವಾದದು; ಶೇಷಮ್ಮಾ, ಈ ರಾಯರಿಗೆ ಇನ್ನೊಂದು ಬಟ್ಟಲ ಶ್ರೀಖಂಡ ಬಡಿಸಿರಿ! ಹೀಗೆ ಒಳ್ಳೇ ಅಂತಃಕರಣದಿಂದ ದೇವಯಾನಿಯು ಮನಬಿಚ್ಚಿ ವರ್ತಿಸುವಳು. ಹೆಂಗಸರ ಕೂಡ ಇಷ್ಟು ಪ್ರಶಸ್ತವಾಗಿ ಮಾತಾಡುವ ಪ್ರಸಂಗವು ರಮಾಕಾಂತನಿಗೆ ಬಂದಿದ್ದೇ ಇಲ್ಲ. ದೇವಯಾನಿಯು ವೃದ್ಧರಿಗುಚಿತವಾದ ಅಧಿಕಾರದೊಂದಿಗೆ ಮಾತಾಡುತ್ತಿದ್ದರೂ ಅವಳ ನಡೆನುಡಿಗಳು ಯುವತಿಯರಂತೆ ಸೊಗಸಾಗಿದ್ದವು. ಬಾಲ್ಯದಲ್ಲಿಯೇ ಅವಳ ಸೌಖ್ಯಲತೆಗೆ ಬೆಂಕಿ ಹತ್ತಿ ಸುಟ್ಟುಹೋಗಿದ್ದರೂ ತನ್ನ ಮನೋನಿಗ್ರಹದಿಂದ ಆಸೆಯಲ್ಲಿ ಕೊಳೆಯದೇ ಧೈರ್ಯ ತೊಟ್ಟು ಇದ್ದದರಲ್ಲಿ ಸುಖ ಹಚ್ಚಿಕೊಂಡಿದ್ದಳು. ಇವಳನ್ನು ನೋಡದಿದ್ದರೆ ರಮಾಕಾಂತನಿಗೆ ಪ್ರತಿಷ್ಠ ರಾದ ಬಾಲವಿಧವೆಯರು ಹೇಗಿರುವರೆಂಬುದು ತಿಳಿಯುವದೇ ಕಷ್ಟವಾಗುತ್ತಿತ್ತು.

ರಮಾಕಾಂತನು ಕೇವಲ ದೇವಯಾನಿಯ ಆಗ್ರಹಕ್ಕೊಳಗಾಗದೇ ಮಿತಾಹಾರ ಮಾಡಿ ಕೈತೊಳೆದನು. ಆಮೇಲೆ ದೇವಯಾನಿಯು ಈತನನ್ನು ಉಪ್ಪರಿಗೆ ಮೇಲೆ ಕರೆದೊಯ್ದಳು. ಚಂದ್ರಶಾಲೆಯು ಬೇಸಿಗೆಯಲ್ಲಿ ವಿಶ್ರಮಿಸುವುದಕ್ಕೆ ರಮಣೀಯ ವಾಗಿರುವದರಿಂದ ಇವರು ಅಲ್ಲಿಗೆ ಹೋಗಿ ಕುಳಿತುಕೊಂಡರು. "ಗಂಗಾ,

ತಾಂಬೂಲ ತಕ್ಕೊಂಡು ಬಾ" ಎಂದು ದೇವಯಾನಿಯು ಆ ಶೂದ್ರಕುಮಾರಿಗಾಜ್ಞಾಪಿಸಿದಳು.

ಮಂದವಾದ ತಂಗಾಳಿ ಬಿಟ್ಟಿತ್ತು. ಸಂಪಿಗೆ, ಬಕುಲ, ಕೇತಕಿ, ಮಲ್ಲಿಗೆ ಮುಂತಾದ ಹಲವು ಪುಷ್ಪಗಳ ಸುವಾಸದ ಮನೋಹರವಾದ ಮಿಶ್ರಣವು ಈ ಗಾಳಿಯಲ್ಲಿ ತುಂಬಿತ್ತು. ರಜನೀಕಾಂತನು ತನ್ನ ಪತ್ನಿಯಲ್ಲಿದ್ದ ವಿರಹಜನಿತವಾದ ತಮಸ್ಸನ್ನು ತನ್ನ ಕರಪಾಶದಿಂದ ಹೋಗಲಾಡಿಸಿದ್ದನು, ಬಳಿಯಲ್ಲಿಯೇ ಕಾವೇರಿಯು ಮೃದಂಗನಾದದೊಡನೆ ನೃತ್ಯಮಾಡುವಳೋ ಏನೋ ಎಂಬಂತೆ, ದುಮ್, ದುಮ್, ಎಂಬ ಧ್ವನಿಯೊಂದಿಗೆ ನಡೆದಿರುವಳು. ಈ ರಮಣೀಯತೆಯನ್ನನುಭವಿಸುತ್ತ ಕೆಲಹೊತ್ತು ಆರಾಮದಿಂದ ಕುಳಿತರು.

"ರಮಾಕಾಂತ, ನಾನು ನಿತ್ಯ ಸಂಜೆಯಲ್ಲಿ ಇದೇ ಸ್ಥಳದಲ್ಲಿ ಕುಳಿತು ನೈಸರ್ಗಿಕ ಶೋಭೆಯನ್ನು ನೋಡುತ್ತ ವಿನೋದ ಹೊಂದುತ್ತೇನೆ. ನನ್ನ ದೇಹಕ್ಕೆ ವರ್ತಮಾನಕಾಲದ ಉಪಚಾರಗಳು ಸಲ್ಲುತ್ತಿದ್ದರೂ, ನಾನು ಮುಂಚಿನ ಕಾಲದ ಆನಂದದಾಯಕವಾದ ಸಂಗತಿಗಳನ್ನು ಧ್ಯಾನಕ್ಕೆ ತಂದುಕೊಂಡು ಎಚ್ಚರಿಕೆಯಲ್ಲಿದ್ದರೂ ಸ್ವಪ್ನದಲ್ಲಿದ್ದವಳಂತೆ ಕಾಲಕಳೆಯುತ್ತೇನೆ. ಈ ದಿವಸ ಮಾತ್ರ ನೀನು ಬಂದುದರಿಂದ ಸದ್ಯಃಸ್ಥಿತಿಯಲ್ಲಿ ನನ್ನ ಲಕ್ಷ್ಯವದೆ ಆವಿರಲಿ. ಇಷ್ಟುದಿವಸ ನೀನೇನು ಮಾಡುತ್ತಿದ್ದಿ, ಇನ್ನು ಮುಂದೇನು ಮಾಡತಕ್ಕ ವಿಚಾರದಲ್ಲಿರುವಿ, ಎಂಬುದನ್ನು ನನಗೆ ಕೇಳಬೇಕಾಗಿದೆ. ನಿನ್ನ ತಂದೆಗಳು ಹೃದ್ಗತವನ್ನು ಬಚ್ಚಿಡದೇ ಹೇಳುತ್ತಿದ್ದರು." ಎಂದು ದೇವಯಾನಿಯು ಕೇಳಿದಳು.

ರಮಾಕಾಂತನು ಅದೇ ಸಂಜೆಗೆ ಬಂದಿಳಿದ ಹೊಸಬನು, ದೇವಯಾನಿಯನ್ನು ಮೊದಲೆಂದೂ ನೋಡಿದವನಲ್ಲ. ಹೀಗಿದ್ದರೂ ಆ ಪ್ರಾಣಿಯು ಸ್ವಲ್ಪ ಕಾಲದಲ್ಲಿಯೇ ಮಮತೆಯ ಕೃತಿಗಳಿಂದಲೂ, ಸರಳ ಸ್ವಭಾವದಿಂದಲೂ, ಸಲಿಗೆಯ ಮಾತುಗಳಿಂದಲೂ ರಮಾಕಾಂತನ ಮನಸ್ಸಿನಲ್ಲಿಯ ಸಂಕೋಚವನ್ನು ಹೋಗಲಾಡಿಸಿದಳು. ರಮಾಕಾಂತನು ತನ್ನ ವೃತ್ತಾಂತವನ್ನೆಲ್ಲ ಸ್ವಲ್ಪದರದಲ್ಲಿ ನಿರೂಪಿಸಿದನು. ಈ ವೃತ್ತಾಂತವು ಕಮಲಾಕಾಂತನ ಮರಣದ ಪರ್ಯಂತರ ಬರಲು, ಆ ಮಹಾತ್ಮನು ತನ್ನ ನಿಮಿತ್ತವಾಗಿಯೇ ವಿರಕ್ತನಂತಾಚರಿಸಿ ಕಡೆಗೆ ಮೃತ್ಯುಮುಖದಲ್ಲಿ ಬಿದ್ದನಲ್ಲಾ ಎಂದು ತಿಳಿದು, ದೇವಯಾನಿಯು ಬಹಳೇ ದುಃಖಿತಳಾದಳು. ಹಣೆಯನ್ನು ಕಯ್ಯಲೂರಿಕೊಂಡು ತನ್ನ ಮನೋರಮಣನ ಪ್ರಸನ್ನವಾದ ಮೂರ್ತಿಯನ್ನು ಧ್ಯಾನಕ್ಕೆ ತಂದುಕೊಂಡು, ಪರಮಾತ್ಮನ ಧ್ಯಾನಪರಾಯಣಳಾಗಿ

ಸಮಾಧಿಸ್ಥನಾದ ಯೋಗಿಯಂತೆ, ಈ ಸಾಧ್ವಿಯು ಮೈಮರೆತು ಕುಳಿತುಕೊಂಡಳು. ರಮಾಕಾಂತನು ಆಮೇಲೆ ನಡೆಸಿದ ವೃತ್ತಾಂತದ ಕಡೆಗೆ ಅವಳ ಲಕ್ಷ್ಯವೇ ಇದ್ದಿಲ್ಲ, ಅವನ ಚರಿತ್ರೆಯಾದರೂ ಮುಗಿಯಲಿಕ್ಕೆ ಬಂದಿತ್ತು. ರಮಾಕಾಂತನ ಸೊಲ್ಲು ನಿಂತ ಕೂಡಲೆ ದೇವಯಾನಿಯು ನಿದ್ರೆ ತಿಳಿದೆದ್ದವಳಂತೆ ಥಕ್ಕನೆ ಎಚ್ಚತ್ತು “ಕಾಂತಾ, ಬೇಸಿಗೆಯಾಗಿದ್ದರೂ ಈ ಸ್ಥಳದಲ್ಲಿ ರಾತ್ರಿಯಲ್ಲಿ ಚಳಿ ಹತ್ತುತ್ತದೆ. ನಿನ್ನ ಪಂಚೆಯನ್ನು ಚೆನ್ನಾಗಿ ಮೈಮೇಲೆ ಹಾಕಿಕೋ ಎಂದು ಹೇಳಿದಳು.

“ನನಗೇನು ಚಳಿಯೆನಿಸುವುದಿಲ್ಲ. ನಿಮಗೆ ಶಾಲು ತಂದುಕೊಡುತ್ತೇನೆ” ಎಂದು ಹೇಳಿ ಒಳಗಿದ್ದ ಶಾಲು ತಂದು ಆ ಹಿತೈಷಿಣಿಯ ಕೈಯಲ್ಲಿ ಕೊಟ್ಟನು.

ತನ್ನ ಸುತ್ತಲೂ ಪ್ರಸರಿಸಿದ್ದ ಚಂದ್ರಿಕೆಯಲ್ಲಿ ಯಥಾಸುಖವಾಗಿ ಮಲಗಿಕೊಂಡು ಆನಂದದಿಂದ ಗಾನಮಾಡುವ ವಸಂತಲಕ್ಷ್ಮಿಯೋ ಎಂಬಂತೆ ಮಂಜುಳವಾದ ಸಪ್ಪಳದೊಂದಿಗೆ ಹರಿಯುವ ಕಾವೇರಿಯನ್ನು ನೋಡಿ “ಕಾಂತಾ, ಈ ನದಿಯ ಘೋಷವು ಕಿವಿಗೆ ಹೇಗಿಂಪಾಗಿರುವುದು ಕೇಳುವಿಯಾ, ಗಾನದಕಿಂತಲೂ ಮಧುರವಾಗಿದೆ. ನಿನಗೆ ಗಾಯನದಲ್ಲಿ ಪರಿಶ್ರಮವುಂಟೇನು ?” ಎಂದು ದೇವಯಾನಿಯು ಕೇಳಿದಳು.

“ತಕ್ಕಮಟ್ಟಿಗೆ ಉಂಟು.”

“ಹಾಗಾದರೆ ಗೀತಗೋವಿಂದದಲ್ಲಿಯ ಒಂದೆರಡು ಪದಗಳನ್ನೂ ಅಷ್ಟಪದಿಗಳನ್ನೂ ಅಂದು ತೋರಿಸತಕ್ಕದ್ದು. ಈಗಲೇ ಅಲ್ಲ. ರಾತ್ರಿ ಬಹಳಾಗಿರಬೇಕು. ಮತ್ಯಾವಾಗಾದರೂ ಅನ್ನುವಿಯಂತೆ. ಮಲಗಿಕೊಳ್ಳು ನಡೆ” ಎಂದು ಹೇಳಿದಳು.

ಮದ್ದೂರ ನಟೇಶನು

ಶ್ರೀರಂಗಪಟ್ಟಣದ ಮಧ್ಯಬೀದಿಯಲ್ಲಿದ್ದದ್ದೊಂದು ಚಿಕ್ಕ ಮನೆಯಲ್ಲಿ ಮದ್ದೂರ ಸಾವಿತ್ರಮ್ಮನೆಂಬ ವಿಧವೆಯಿದ್ದಳು. ಇವಳು ಬೆಂಗಳೂರಿನ ಬಳೇಪೇಟೆಯಲ್ಲಿ ಮೊದಲು ಭೋಜನಗೃಹವನ್ನಿಟ್ಟಿದ್ದಳು. ಅವಳಿಗೆ ನಟೇಶನೆಂಬೊಬ್ಬ ಮಗನಿದ್ದನು. ನಟೇಶನು ಮಿಡಲ್ ಕ್ಲಾಸದವರೆಗೆ ಹಾಗೂ ಹೀಗೂ ಅಭ್ಯಾಸ ಮಾಡಿ ಶಾಲೆಯ ಕೈಬಿಟ್ಟುಬಿಟ್ಟನು. ತನ್ನ ಬುದ್ಧಿವಂತನಾದ ಮಗನಿಗೆ ಚೆನ್ನಾಗಿ ವ್ಯಾಸಂಗಮಾಡಿಸಲಿಲ್ಲೆಂದು ಶಾಲಾಧಿಕಾರಿಗಳ ಮೇಲೂ, ಅವನು ಪರೀಕ್ಷೆಯಲ್ಲಿ ತೇರ್ಗಡೆ ಹೊಂದಲಿಲ್ಲವೆಂದು ಪರೀಕ್ಷಕರ ಮೇಲೂ ಕೋಪಿಸಿಕೊಂಡು ಸಾವಿತ್ರಮ್ಮನು ತನ್ನ ಉದ್ಯೋಗ ಬಿಟ್ಟುಕೊಟ್ಟು ಶ್ರೀರಂಗಪಟ್ಟಣದಲ್ಲಿ ಬಂದು

ನಿಂತಳು. ಅವಳ ಹತ್ತಿರ ಅಲ್ಪಸ್ವಲ್ಪ ಹಣವೂ ಕೂಡಿತ್ತು. ಅಡಿಗೆಯಲ್ಲಿ ಪ್ರವೀಣಳಾದ್ದರಿಂದ ಶ್ರೀಮಂತರ ಮನೆಯ ಹೆಣ್ಣುಮಕ್ಕಳು ಸಾವಿತ್ರಮ್ಮನ ಮನೆಗೆ ಬಂದು ಶಾವಿಗೇ ಫೇಣಿ ಹೇಗೆ ಮಾಡಬೇಕು, ಲಡ್ಡು ಹೇಗೆ ಮಾಡಬೇಕು, ಜಿಲ್ಬೀಹಿಟ್ಟು ಕಲಿಸಿಡುವುದು ಹೇಗೆ, ಅದು ಹೇಗೆ, ಇದು ಹೇಗೆಂದು ಕೇಳಿಕೊಂಡು ಹೋಗುವರು. ಇದಕ್ಕಾಗಿ ಸಾವಿತ್ರಮ್ಮನು ಎಲ್ಲರಿಗೂ ಬೇಕಾದವಳಾಗಿದ್ದರಿಂದ ಅವಳ ಚರಿತಾರ್ಥವು ಸುಲಭವಾಗಿ ಸಾಗುತ್ತಿತ್ತು. ಸಾವಿತ್ರಮ್ಮನು ಮೈಕೈಯಿಂದ ಈಡಾಗಿದ್ದು ಕೆಲಸಕ್ಕೂ ದಾಷ್ಟಗಿತ್ತಿಯಾಗಿದ್ದಳು.

ಸಾವಿತ್ರಮ್ಮನ ಕೂಡ ನಟೇಶನು ಶ್ರೀರಂಗಪಟ್ಟಣಕ್ಕೆ ಬರಲಿಲ್ಲ. ಭಟ್ಟ ಶಾಮಯ್ಯನೆಂಬ ನಟೇಶನ ಸೋದರಮಾವನಿದ್ದನು. ಈತನ ಬಳಿಯಲ್ಲಿದ್ದು ನಟೇಶನೇನಾದರೊಂದು ಉದ್ಯೋಗದಲ್ಲಿ ಸೇರುವ ವಿಚಾರದಲ್ಲಿದ್ದನು. ಕೆಲವು ದೊಡ್ಡವರ ಮಕ್ಕಳ–ಸೋಮಾರಿಗಳೂ ದುರ್ವ್ಯಸನಿಗಳೂ ಆದ ಶ್ರೀಮಂತರ ಮಕ್ಕಳ ಜೊತೆಗೆ ಬಿದ್ದು ಸೊಬಗಿನ ಉಡಿಗೆತೊಡಿಗೆಗಳನ್ನು ಮಾಡಿಕೊಂಡು ನಟೇಶನು ಮೆರೆಯಲಾರಂಭಿಸಿದನು. ಪಾದ್ರಿಗಳು ಮುದ್ರಿಸಿದ ಸತ್ಯಾರ್ಥದೀಪಿಕೆ. ಪುನರ್ವಿವಾಹಮಂಡನ, ಲಿಂಗಂಪಂತರು ಬರೆದ ಆರ್ಯಮತಖಂಡನೆ, ಅಶ್ಲೀಲವಾದ ಕಾದಂಬರಿ ನಾಟಕಗಳು ಮುಂತಾದವುಗಳನ್ನೋದಿ ನಟೇಶನು ವೃಥಾಭಿಮಾನ ಹೊಂದಿದವನಾಗಿದ್ದನು.

ಭಟ್ಟಶಾಮಯ್ಯನು—ಈ ಭಟ್ಟರು ಕೇವಲ ಸೂಪಶಾಸ್ತ್ರಸಂಪನ್ನರೇ ಇದ್ದರು !—ಪುಣೆ ಬೆಂಗಳೂರ ಮಾರ್ಗದಲ್ಲಿ ಹೊಗೆಬಂಡಿಯ ಪ್ರಯಾಣಸ್ತರಿಗೆ ಉಪಹಾರ ಮಾರಲಧಿಕಾರ ಹೊಂದಿದ್ದನು. ಈತನು ಉಪಹಾರದ ಪೆಟ್ಟಿಗೆಯನ್ನು ಹೊತ್ತುಕೊಂಡು ಹೊಗೆಬಂಡಿಯ ಡಬ್ಬಿಗಳಲ್ಲೊಳನುಗ್ಗಿ ಒಳ್ಳೇ ಗರ್ಜನೆ ಮಾಡಿ "ಏಳರಿ, ಏಕೆ ಉಪವಾಸ ಮಲಗಿದ್ದೀರಿ ? ಈ ಪಕೊಡಾ ನೋಡಿದಿರಾ ಎಷ್ಟು ರುಚಿಯಾಗಿದೆ ! ಇದನ್ನು ತಿಂದರೆ ಅಗ್ನಿಮಾಂದ್ಯವು ಪರಿಹಾರವಾಗುತ್ತದೆ. ಇಕೋ ನೋಡಿರಿ, ಮೈಸೂರಪಾಕ್. ಇದರಂಥ ಪೌಷ್ಟಿಕವನ್ನು ರಾಜ್ಯವೈದ್ಯನೇನು ಮಾಡಬಲ್ಲನು ! ಇದು ತಕ್ಕೊಳ್ಳಿ, ರಾಗಿಮುದ್ದೆ. ರಾಗೀಮುದ್ದೆಯೆಂದು ಕಡಿಮೆ ತಿಳುಕೊಳ್ಳಬೇಡಿರಿ. ಇದು ಚಾಮರಾಜೇಂದ್ರರಿಗೆ ಕೂಡಾ ತಪ್ಪಿದ್ದಲ್ಲ. ಈ ಪ್ರಕಾರ ಮಾತಾಡಿ ರೊಕ್ಕವಿಳಕೊಳ್ಳುವುದರಲ್ಲಿ ಭಟ್ಟಶಾಮಯ್ಯನು ಬಹು ಜಾಣನಿದ್ದನು.

ಶಾಮಯ್ಯನು ತನ್ನ ಸೋದರಳಿಯನನ್ನು ತನ್ನುದ್ಯೋಗದಲ್ಲಿಯೇ ತೊಡಗಿಸಬೇಕೆಂದು ಮಾಡಿದ್ದನು. ಆದರೆ ನಟೇಶನು ದೊಡ್ಡವರ ಮಕ್ಕಳ ಕೂಡಾಡಿದವ

ನಾದ್ದರಿಂದ ಅವನಿಗೀ ಉದ್ಯೋಗವು ಸರಿಬರಲಿಲ್ಲ. ಅತ್ತಿತ್ತ ಯತ್ನಮಾಡಿ ಪೋಲೀಸ ಹವಾಲದಾರನಾದನು. ಕಪ್ಪುಬಣ್ಣದ ಡ್ರೆಸ್ ಹಾಕಿಕೊಂಡು ಕಾಲಲ್ಲಿ ಬೂಟು ಮೆಟ್ಟಿಕೊಂಡು, ನಟೇಶನು ಒಳ್ಳೇ ಹೆಮ್ಮೆಯಿಂದ ಚರ್‌ಪರ್ ನಡೆಯು ವನು. ಇಂಥ ಅಧಿಕಾರಸಂಪನ್ನನಾದ ಬಳಿಕ ತನ್ನ ತಾಯಿಯನ್ನು ಕಂಡು ಬರ ಬೇಕೆಂದು ಶ್ರೀರಂಗಪಟ್ಟಣಕ್ಕೆ ನಟೇಶನು, ರಮಾಕಾಂತನು ಬಂದ ಮಾರನೇ ದಿವಸ ಬೆಳಿಗ್ಗೆ ಬಂದನು.

ಸಾವಿತ್ರಮ್ಮನು ಮಗ ಬಂದದ್ದನ್ನು ಕಂಡು ಹಿರ್ರನೆ ಹಿಗ್ಗಿ "ನಟೇ, ಬಂದಿಯಾ ಎಷ್ಟು ದೊಡ್ಡವನಾಗಿರುವಿಯಪ್ಪಾ ! ಮುಖ ತೊಳೆದುಕೋ, ಉಪ ಹಾರ ಮಾಡುವಿಯಂತೆ" ಎಂದು ಹೇಳಿ ಅವನು ಸಿದ್ಧನಾಗುವಷ್ಟರಲ್ಲಿಯೇ ದೋಸೆ, ಇಡ್ಲಿ, ಕಾಫಿಗಳನ್ನು ತಂದು ನಟೇಶನ ಮುಂದಿರಿಸಿ, ತಾನೂ ಅವನ ಹತ್ತಿರ ಕುಳಿತುಕೊಂಡಳು. ಉಪಹಾರವಾದ ಕೂಡಲೆ ನಟೇಶನು ಹೊಗೆಸೊಪ್ಪಿನ ಸುರಳಿಯನ್ನು ಸೇದಲಾರಂಭಿಸಿದನು. ಅದನ್ನು ಕಂಡು ಸಾವಿತ್ರಮ್ಮನು ಅಂದದ್ದು :

"ನಟೇ, ಹೊಗೆಸೊಪ್ಪೇಕೆ ಸೇದುವಿಯೋ ?"

"ಅವ್ವಾ, ನೀನೇನು ಬಲ್ಲಿ. ಪಟ್ಟಣಗಳಲ್ಲಿ ಪ್ರತಿಷ್ಠಿತರು ಹೊಗೆಸೊಪ್ಪು ಸೇದುವುದುಂಟು. ನಮ್ಮಂಥ ಅಧಿಕಾರಸ್ಥರಂತೂ ಸೇದಲೇಬೇಕು."

"ಇದನ್ನು ನಾನೇನು ಬಲ್ಲೆನು ? ಹಾಗಿದ್ದರೆ ಸೇದು. ನಟೇ, ನಿನ್ನ ಸಂದುಕದ ಲ್ಲೇನದೆ ?"

"ಅದರಲ್ಲಿ ನನ್ನ ಡ್ರೆಸ್ ಇದೆ. ಡ್ರೆಸ್ ಅಂದರೆ ಸರಕಾರದವರು ನಮಗೆ ಅಧಿಕಾರ ಕೊಡುವಾಗ್ಗೆ ಕೊಟ್ಟ ಬಟ್ಟೆಗಳು. ಇವುಗಳನ್ನು ಹಾಕಿಕೊಂಡೆನೆಂದರೆ ರಾಜರ ಮಗನೇ ಯಾಕಾಗವಲ್ಲನು ಅವನನ್ನು ಹಿಡಿದು ಕುಳ್ಳಿರಿಸುವುದಕ್ಕೆ ನಮಗೆ ಬರುತ್ತದೆ."

ಇದನ್ನು ಕೇಳಿ ಸಾವಿತ್ರಮ್ಮನು ಅಗಾಧಪಟ್ಟು ತನ್ನ ಬಾಯಿ ಮೇಲೆ ಕೈ ಇಟ್ಟುಕೊಂಡಳು.

"ನಟೇಶಾ, ನೀನಿಂಥ ಯೋಗ್ಯತೆಗೆ ಬಂದದ್ದು ಯಜಮಾನರು ಕಾಣಲಿಲ್ಲ" ಎಂದು ಆ ಮೂಢಭಾವದ ಮುದುಕಿಯು ತನ್ನ ಕಣ್ಣೀರೊರಿಸಿಕೊಂಡಳು.

ನಟೇಶನು ತನ್ನ ಪೆಟ್ಟಿಗೆ ತೆರೆದು ಡ್ರೆಸ್ಸನ್ನು ಮೈಮೇಲೆ ಹಾಕಿಕೊಂಡು, ಬೂಟು ಗಳನ್ನು ಮೆಟ್ಟಿ, ಆ ಗೋಡೆಯಿಂದೀ ಗೋಡೆಗೆ ಅಳತೆಯ ಹೆಜ್ಜೆಗಳನ್ನಿಡುತ್ತ ತಿರುಗಾಡಹತ್ತಿದನು. ಸಾವಿತ್ರಮ್ಮನು ಒಳ್ಳೇ ಕೌತುಕದಿಂದ ಮಗನ ವೈಭವವನ್ನು

ನೋಡುತ್ತ—

"ನಟೇಶಾ, ನೀನು ಶಾಮಯ್ಯನುದ್ಯೋಗದಲ್ಲಿ ಸೇರಿದ್ದರೆ ನೆಟ್ಟಗಾಗುತ್ತಿದ್ದಿಲ್ಲೇನು ?" ಎಂದು ಕೇಳಿದಳು.

"ಆ ಹಾಳು ಕೆಲಸಕ್ಕೆ ಉದ್ಯೋಗವೆನ್ನಬಹುದೆ! ನಮ್ಮಂಥ ವಿದ್ಯಾವಂತರಿಗದು ತಕ್ಕದ್ದಲ್ಲ."

"ಇತ್ತಿತ್ತ ನಿನ್ನ ವಿದ್ಯಾವ್ಯಾಸಂಗ ಬಹಳಾಯಿತೇನು ?" ಎಂದು ಅಭಿಮಾನದಿಂದ ತಾಯಿಯು ಕೇಳಿದಳು.

"ಓಹೊ! ಎಷ್ಟೆಂದು ಹೇಳಲಿ! ದಯಾನಂದ ಸರಸ್ವತಿ, ಈಶ್ವರ ಚಂದ್ರ, ಕೇಸಬಚಂದ್ರಸೇನ್, ವೀರೇಶಲಿಂಗಂ ಪಂತುಲು ಮುಂತಾದವರ ನಿಬಂಧಗಳನ್ನೋದಿರುವೆನು. ಎಷ್ಟೋ ನಾಟಕ ಕಾದಂಬರಿಗಳನ್ನೋದಿರುವೆನು. ನಮ್ಮ ಕೃಷ್ಣಮಾಚಾರ್ಯರ ಕಲ್ಲುಬಂಡೆಯಂಥ ಮೃತ್‌ಶಕಟಕ ನಾಟಕವನ್ನು ಕೂಡಾ ಓದಿಹಾಕಿದ್ದೇನೆ" ಎಂದು ಹವಾಲದಾರರು ಹೇಳಿದರು.

"ನಟೀ, ನಾನು ಬೆಂಗಳೂರಲ್ಲಿದ್ದಾಗ್ಗೆ ಕೆಲವು ನಾಟಕಗಳನ್ನು ನೋಡಿದೆನು. ಆದರೆ ನಿನ್ನೀ ಮೃಚ್ಛಕಟಿಗೆ ನಾಟಕ ನೋಡಲಿಲ್ಲ. ಅದರಲ್ಲಿಯು ಕಥೆ ಏನಿರುವುದು?'

"ಏನು ಮಣ್ಣೋ, ಕೃಷ್ಣಮಾಚಾರ್ಯರ ಮೃತ್‌ಶಕಟಕದಲ್ಲಿಯ ಕನ್ನಡ ಅಕ್ಷರಗಳ ಗುರುತು ಮಾತ್ರ ಹತ್ತಿತು. ಅದರರ್ಥವು ಬರೆದವರಿಗೊಬ್ಬರಿಗೇ ತಿಳಿದರೆ ಸೈ. ಅನ್ಯರ ಪಾಡೇನು? ಆ ಅಪ್ರತಿಮ ಗ್ರಂಥದ ಅರ್ಥಮಾಡುವುದಕ್ಕಾಗಿ ಮೂಲ ಸಂಸ್ಕೃತ ನಾಟಕವನ್ನು ಹಿಡುಕೊಂಡು ಅಕ್ಷರಾಕ್ಷರಕ್ಕೆ ತಲೆಯೊಡಕೊಂಡು ಪಂಡಿತರು ಮಣ್ಣು ಮುಕ್ಕಿ ಹೋದರು. ನಮ್ಮ ಆಚಾರ್ಯರಂಥವರು ಇನ್ನೂ ಹತ್ತು ಜನರು ಕೂಡಿ ಕನ್ನಡ ಭಾಷೆಯನ್ನು ಪರಿಶೋಧಿಸಿಬಿಟ್ಟರೆ, ಈ ಭಾಷೆಯು ಬರುವ ಹತ್ತು ವರ್ಷಗಳಲ್ಲಿ ಇತ್ತೋ ಇಲ್ಲವೋ ಎಂಬುದಾಗಿ ಹೋಗಲಿಕ್ಕೆ ಸಂದೇಹವಿಲ್ಲ. ಧಾರವಾಡದೇಶದಲ್ಲಿ ಕೂಡಾ ಕೆಲವು ಪಂಡಿತರು "ಅಳಲೀ ಭಕ್ತಿ" ಎಂಬ ನ್ಯಾಯದಿಂದ ತಮ್ಮ ಕೈಲಾದಮಟ್ಟಿಗೆ ಈ ಮಹತ್ಕಾರ್ಯಕ್ಕೆ ನೆರವಾಗುತ್ತಿರುವರೆಂದು "ರಾಜಹಂಸ"ವು ಹೇಳುತ್ತದೆ.

ಸಾವಿತ್ರಮ್ಮನು ನಟೇಶನ ಉಪಹಾರದ ಪಾತ್ರೆಗಳನ್ನು ತೊಳೆಯಲಿಕ್ಕೆ ಹಿತ್ತಲಕ್ಕೆ ಹೋದಳು, ನಟೇಶನು ತನ್ನ ಹೊಗೆಸೊಪ್ಪು ಯಥಾಸ್ಥಿತವಾಗಿ ಸೇದುತ್ತ ಪೆಟ್ಟಿಗೆಯ ಮೇಲೆ ಕುಳಿತನು.

ಪರಿಚಯದ ಪರಿವೃದ್ಧಿಯು

ಕಾವೇರೀ ನದಿಯು ಎರಡು ಸರಳಾಗಿ ಒಡೆದು, ಆ ಎರಡು ಸರಳುಗಳು ಮುಂದೆ ಮತ್ತೆ ಕೂಡಿದ್ದರಿಂದ ಒಂದು ನಡುಗಡ್ಡೆಯಾಗಿದೆ. ಈ ನಡುಗಡ್ಡೆಯಲ್ಲಿ ಶ್ರೀರಂಗಪಟ್ಟಣದ ಕೋಟೆ ಕಟ್ಟಿದೆ. ಬೇರೊಂದು ಮೂರನೇ ಸರಳೇ ಪಶ್ಚಿಮ ವಾಹಿನೀ ಎಂಬ ಪವಿತ್ರವಾದ ತೀರ್ಥವು. ಉತ್ತರ ದಿಕ್ಕಿನ ಸರಳಿನಾಚೆಗೆ ಚಿಕ್ಕ ದೊಡ್ಡ ಗುಡ್ಡಗಳಿವೆ. ಈ ಗುಡ್ಡಗಳೂ, ವ್ಯಕ್ತಮಯವಾದ ಆ ಗುಡ್ಡಗಳ ಕೆಳ ಭಾಗಗಳೂ, ಕಾವೇರೀನದಿಯ ಮೂರು ಸರಳುಗಳೂ, ಆ ಸರಳುಗಳಗುಂಟ ಬೆಳೆದ ವನರಾಜಿಯೂ, ಕೂಡಿ ಆ ಪ್ರದೇಶಕ್ಕೆ ಸ್ವಾಭಾವಿಕವಾಗಿರುವ ಚಿತ್ತವೇಧಕವಾದ ಶೋಭೆ ಬಂದಿರುತ್ತದೆ. ಪ್ರಾಚೀನವಾದ ಶ್ರೀರಂಗನಾಥನ ಭವ್ಯವಾದ ದೇವಾಲಯವೂ, ಈಗ್ಗೆ ಹಾಳಾಗಿದ್ದರೂ ಭವ್ಯವಾದ ಕೋಟೆಯೂ ದರ್ಯಾದೌಲತ್ ಎಂಬ ಮನೋಹರವಾದ ಟೀಪೂ ಸುಲ್ತಾನನ ವಸಂತ ಪ್ರಾಸಾದವೂ, ಅದರ ಸುತ್ತಲೂ ಬಹು ರಮ್ಯವಾಗಿದ್ದ ತೋಟವೂ, ಶಿಲ್ಪಕಲಾಪ್ರವೀಣರ ಜಾಣ್ಮೆ ಕಂಡುಬರುವಂತೆ ಕಟ್ಟಿದ ಹೈದರಅಲ್ಲೀ ಟೀಪುಸುಲ್ತಾನರ ಕಬರಸ್ತಾನಗಳೂ ಮುಂತಾದ ಅನೇಕ ಚಮತ್ಕಾರಗಳ ಸಮಾಹಾರದಿಂದ ಶ್ರೀರಂಗಪಟ್ಟಣವು ಸರ್ವೇ ದಾಶ್ಚರ್ಯವನ್ನುಂಟುಮಾಡುವದಾಗಿಯೂ, ರಮಣೀಯವಾಗಿಯೂ ಇರುವುದು.

ಒಂದೇ ನೂರು ವರ್ಷಗಳ ಹಿಂದೆ ಇಲ್ಲಿ ಪ್ರಬಲನಾದ ರಾಜನ ಸಿಂಹಾಸನ ವಿತ್ತು. ಆ ಕಾಲದಲ್ಲಿದ್ದ ಸಾಮಾನ್ಯಜನರ ಮನೆಗಳನ್ನು ಕೂಡಾ ಈಗ ನೋಡ ಬಹುದು. ಆದರೆ ಆ ಬಲಾಢ್ಯನಾದ ಸುಲ್ತಾನನ ಭದ್ರನಾದ ಅರಮನೆಯ ಹೆಂಟೆಯನ್ನೊಂದನ್ನಾದರೂ ಕಾಣುವಂತಿಲ್ಲ, ಇದೇ ನಗರದಲ್ಲಿ ನವಕೋಟಿ ನಾರಾಯಣನಿದ್ದನೆಂದೂ, ಹಾಳು ಬಿದ್ದಂಥಾದ್ದೊಂದು ಸ್ಥಳವು ಆವನ ವಿಭ ವೈಶ್ವರ್ಯಗಳಿಂದೊಪ್ಪುವ ಭವ್ಯವಾದ ಮನೆಯನ್ನು ಒಂದು ಕಾಲದಲ್ಲಿ ಹೊತ್ತು ಕೊಂಡಿತ್ತೆಂದೂ. ಬಂಡಿ ಹೊಡೆಯುವ ತುರಕರು ಹೇಳುತ್ತಾರೆ. ಬ್ರಹ್ಮದೇವ ರಿಂದ ಕೂಡಾ ಒಡಿಯಲಸಾಧ್ಯರಾದ ಜ್ಞಾನಲವ ದುರ್ವಿದಗ್ಧರೂ, ದ್ರವ್ಯಲವ ದುರ್ವಿದಗ್ಧರೂ ಇವುಗಳನ್ನು ನೋಡಿ ಬೋಧ ತಕೊಳ್ಳತಕ್ಕದ್ದು.

ಈ ಪಟ್ಟಣದಲ್ಲೀಗ ರಾಜನಿಲ್ಲ, ಮಂತ್ರಿ ಸೇನಾನಾಯಕರಿಲ್ಲ, ಅಶ್ವಶಾಲೆ ಗಜಶಾಲೆಗಳಿಲ್ಲ. ಶೆಟ್ಟಿಸಾಹುಕಾರರಿಲ್ಲ. ಇದಕ್ಕೀಗ ಪಟ್ಟಣವೆಂಬ ಹೆಸರೇ ದಂಡ. ಆದರೆ ಕಾವೇರಿಯ ಸ್ಫಟಿಕದಂತೊಪ್ಪುವ ಸರಳುಗಳನ್ನೂ, ಆ ಚಿತ್ರಮಯವಾದ ಗುಡ್ಡಗಳನ್ನೂ, ಆ ಮನೋಹರವಾದ ವನಶೋಭೆಯನ್ನೂ ಟೀಪುವಿನ ಶತ್ರು

ಗಳೆತ್ತಿಕೊಂಡೊಯ್ಯಲಿಲ್ಲವಲ್ಲ ! ಕೃತ್ರಿಮಗಳು ಹಾಳಾದವಷ್ಟೆ ?

ಅಂಭೋಜಿನೀವನನಿವಾಸ ವಿಲಾಸಮೇವ ।
ಹಂಸಸ್ಯ ಹಂತಿ ನಿತರಾಂ ಕುಪಿತೋ ವಿಧಾತಾ ॥
ನ ತ್ವಸ್ಯ ದುಗ್ಧಜಲಭೇದವಿಧೌ ಪ್ರಸಿದ್ಧಾಂ ।
ವೈದಗ್ಧ್ಯಕೀರ್ತಿಮಪಹರ್ತುಮಸೌ ಸಮರ್ಥಃ ॥

ಈ ಪಟ್ಟಣದಲ್ಲಿ ಪ್ರಮುಖರ ಮನೆಗಳು ಬಹಳಿದ್ದಿಲ್ಲ. ನಾಲ್ಕಾರು ಜನ ಸರಕಾರಿ ಅಮಲದಾರರೂ ಗತವೈಭವರಾದ ಒಬ್ಬಿಬ್ಬರೂ ಇನಾಮದಾರರೂ, ಕಾವೇರಿ ತೀರದ ವಾಸಕ್ಕಾಗಿ ಬಂದಿದ್ದ ಧರ್ಮಬುದ್ಧಿಯುಳ್ಳ ಕೆಲವು ಜನ ಪೆನ್‌ಶನ್‌ದಾರರೂ, ಇಲ್ಲಿ ಮನೆಮಾಡಿಕೊಂಡಿದ್ದರು. ಇಲ್ಲಿಯ ಸೃಷ್ಟಿಜನ್ಯ ರಮಣೀಯತೆಗೆ ಮೆಚ್ಚಿ ಬೆಂಗಳೂರಿನ ಕೆಲವು ಜನ ಶ್ರೀಮಂತರು ಯಾವಾಗಾದರೂ ಬಂದಿರುವುದಕ್ಕಾಗಿ ಮನೆಗಳನ್ನು ಕಟ್ಟಿಸಿಟ್ಟಿದ್ದರು.

ಜಯರಾಯನೂ ಒಂದು ರಮಣೀಯವಾದ ಮನೆ ಕಟ್ಟಿಸಿ, ಜಾಣರಾದ ತೋಟಿಗರನ್ನು ಕರೆಸಿ, ಅದರ ಸುತ್ತಲೂ ರಮ್ಯವಾದ ಉದ್ಯಾನವನ್ನು ಸಿದ್ಧಪಡಿಸಿದ್ದನು. ಈ ಮನೆಯಲ್ಲಿ ಜಯರಾಯನು ತನ್ನ ಮಗಳನ್ನೂ, ಒಬ್ಬಿಬ್ಬ ಸೇವಕರನ್ನೂ, ಮನೆಕೆಲಸ ನೋಡಿಕೊಂಡು ಹೋಗುವುದಕ್ಕೆ ದೂರಿನಾಪ್ತಳಾದೊಂದು ಮುದುಕಿಯನ್ನು ಇಟ್ಟಿದ್ದರು.

ಜಯರಾಯನು ಮನೆ ಮಾಡಿದ ಸ್ವಲ್ಪ ದಿವಸದಲ್ಲಿಯೇ ದೇವಯಾನಿಯು ತಾನೊಂದು ಮನೆ ಕೊಂಡು ಅದರಲ್ಲಿ ತನಗಿಷ್ಟವಿದ್ದಂತೆ ಹೆಚ್ಚುಕಡಿಮೆ ಮಾಡಿ ಆ ಮನೆಯನ್ನು ಒಳ್ಳೇ ಮನಸ್ಸುಗೊಟ್ಟು ಅಲಂಕರಿಸಿದ್ದಳು, ಮನೆಯ ಸುತ್ತಲೂ ಚಿಕ್ಕದಾದ ತೋಟವು ಒಳ್ಳೇ ಪ್ರೇಕ್ಷಣೀಯವಾಗಿತ್ತು. ದೇವಯಾನಿಯು ಕಾಶೀಯಾತ್ರೆಗೆ ಹೋಗಿ ಮರಳಿ ಬರುವಾಗ್ಯೆ ಸರದಾರಸಿಂಗನನ್ನು ಕರತಂದಿದ್ದಳು.

ಸರದಾರಸಿಂಗನ ತಂದೆಯು ಕಾನಪೂರದ ಬಂಡಿನಲ್ಲಿ ಮಡಿದಿದ್ದನು. ತಂದೆ ಸತ್ತಾಗ್ಗೆ ಇವನು ಹತ್ತು ವರ್ಷದವನಿದ್ದನು. ಬಂಡಿನ ವರ್ತಮಾನವನ್ನು ಹೆಚ್ಚು ಕಡಿಮೆಯಾಗಿ ಕೇಳಿ, ಹಿಂದಿನಿಂದ ತಾನದಕ್ಕೆ ಉಪ್ಪುಖಾರ ಹಚ್ಚಿ, ಸರದಾರಸಿಂಗನು ಒಳ್ಳೇ ಆವೇಶದೊಡನೆ ಮೂಢಜನರಿಗೆ ಕಥೆ ಹೇಳಿ ತನ್ನ ಪ್ರತಿಷ್ಠೆ ಬೆಳೆಸಿಕೊಂಡಿದ್ದನು. ಯಾರಿಗಾದರೂ ಕಸ ಬಂದಿರಲಿ, ಕಾಲುಧೂಳಿಯಾಗಿರಲಿ ಇವನು "ಬಾಬಾ ಆಯಾ, ರೋಟಿ ಖಾಯಾ, ಪಾನೀ ಪಿಯಾ, ಚಲ್‌ಗಯಾ" ಎಂಬ ಮಂತ್ರ ಹಾಕುವನು. ತಲೆನೋವಿಗೂ ಹೊಟ್ಟೆಕಡತಕ್ಕೂ ಗಿಡಮೂಲಿಕೆಗಳನ್ನು

ಕೊಡುವನು. ಇವನ ತಪ್ಪುತಡೆಯಾದ ಕನ್ನಡಕ್ಕೆ ಕೂಡಾ ಎಷ್ಟೋ ಜನರು ಸುಮ್ಮಸುಮ್ಮನೇ ಇವನನ್ನು ಮಾತಾಡಿಸಿ ವಿನೋದಪಡುವರು. ರಾತ್ರಿಯಲ್ಲಿ ಹಿಂದುಸ್ಥಾನೀ ಪದಗಳನ್ನು ದಿಮುಡಿ ಬಾರಿಸುತ್ತ ಭಜನೆ ಮಾಡುತ್ತಿದ್ದನು. ಇವುಗಳಿಂದ ಸರದಾರಸಿಂಗನು ಎಲ್ಲರಿಗೂ ಪರಿಚಯುದವನಾಗಿದ್ದನು.

ಜಯರಾಯನೂ ದೇವಯಾನಿಯೂ ಶ್ರೀರಂಗಪಟ್ಟದಲ್ಲಿ ಮನೆಮಾಡಿದ್ದಕ್ಕೆ ಏಳೆಂಟು ವರ್ಷಗಳಾಗಿದ್ದವು. ಜಯರಾಯನು ತನ್ನ ಮನೆಯಲ್ಲಿ ತನ್ನ ಮಗಳನ್ನಿಟ್ಟಿದ್ದನೆಂದು ಮೇಲೆ ಹೇಳಿದ್ದೇವೆ. ಅವಳ ಹೆಸರು ಇಂದಿರೆಯು. ಇವಳು ಮನಸ್ವಿನಿಯೂ, ಸ್ವಾವಲಂಬನಪ್ರಿಯಳೂ ಇದ್ದು ಸ್ನೇಹಿತರಿಗೆ ಪ್ರೇಮಭಾವದವಳೂ ಮೃದುಭಾಷಿಣಿಯೂ ಆಗಿರುವಳು. ಇಂದಿರೆಗೆ ವಾಚನದ ಹವ್ಯಾಸ ಬಹಳಿತ್ತು. ರಾತ್ರಿ ಆರಾರು ತಾಸಿನವರೆಗೆ ಓದುತ್ತ ಕೂಡ್ರುವಳು. ಆದರೂ ಅರುಣೋದಯಕ್ಕೆದ್ದು ಕೆಲಸಕ್ಕೆ ದಕ್ಷಳಾಗಿ ನಿಂತಿರುವಳು. ಕೂಡಿದಾಗ್ಗೆ ದೇವಯಾನಿಯ ಮನೆಗೆ ಹೋಗಿ ಅವಳ ವಿಲಕ್ಷಣವಾದಾಚರಣೆಯನ್ನೂ, ಖಂಡತುಂಡಾದ ಮಾತುಗಳನ್ನೂ ಕೇಳಿ, ಸೋಜಿಗ ಬಡುವಳು. ಮೈಸೂರ ಮಹಿಳಾ ವಿದ್ಯಾಲಯದಲ್ಲಿದ್ದ ತನ್ನ ಗೆಳತಿಯರನ್ನು ಕರಸಿಕೊಂಡು, ಅವರೊಂದಿಗೆ ನಾಲ್ಕಾರು ದಿವಸ ಆನಂದದಿಂದ ಕಾಲ ಕಳೆಯುವಳು. ಏನಾದರೊಂದು ಕೆಲಸವಿದ್ದರೆ ಯಾರನ್ನೂ ಕೇಳದೇ ತಾನೇ ಮಾಡಿ ನೋಡಿ, ಎಲ್ಲೇಕೆ ತಪ್ಪಿತೆಂಬುದನ್ನು ಮನನ ಮಾಡಿಕೊಂಡು, ಆ ಕೆಲಸವನ್ನು ತಾನೇ ಹಾದಿಗೆ ತರುವಳು. ಇಂದಿರೆಯು ಚತುರಳೂ ಚಪಲೆಯೂ ಸಶಕ್ತಳೂ ಇರುವುದರಿಂದ ಎಷ್ಟು ಶ್ರಮ ಮಾಡಿದರೂ ಅವಳಿಗದೇನೂ ಅನಿಸುತ್ತಿದ್ದಿಲ್ಲ. ಏನಾದರೊಂದು ಸಾಹಸದ ಕೆಲಸ ಬಂದರೆ ಅವಳಿಗದೊಂದು ಉಬ್ಬೇ ಎನಿಸುವುದು. ಯಾರಾದರೂ ಹೊಸಬರು ಬಂದರೆ ಸಾಕು. ಅವರ ಪರಿಚಯ ಮಾಡಿಕೊಂಡು ಅವರ ಗುಣಾವಗುಣಗಳನ್ನು ಚೆನ್ನಾಗಿ ಪರೀಕ್ಷಿಸಿ, ವಿಶೇಷ ಗುಣವಿಲ್ಲದಿದ್ದರೆ ಅವರ ಉಸಾಬರಿ ಬಿಟ್ಟುಬಿಡುವಳು. ಆದರೆ ಅವಳು ಅವಿಚಾರಿಯೂ ನಡತೆಹೀನಳೂ ಎಂದು ಹೇಳುವ ಪ್ರಜ್ಞೆ ಯಾರದು? ಇವಳು ಸ್ನೇಹರಹಿತಳೆಂದೂ ಯಥಾರ್ಥಭಾವದವಳಲ್ಲೆಂದೂ ವರು ಹೇಳುವರು. ಇದು ಅನ್ಯಾಯವಾದ ತೀರ್ಪೇ ಸರಿ. ಕೌತುಕವನ್ನು ಹುಡುಕುವ ಹವ್ಯಾಸವವಳಿಗಿತ್ತು. ಅದು ಸಿಕ್ಕದಿದ್ದ ಪಕ್ಷದಲ್ಲಿ ಆ ಸ್ಥಳವನ್ನು ಬಿಟ್ಟು ಹೋದಲ್ಲಿ ಅವಳದೇನು ತಪ್ಪು? ಮಧುಕರವು ಮಕರಂದವಿಲ್ಲದ ಪುಷ್ಪವನ್ನು ಬಿಟ್ಟುಹೋದರೆ ಅದರದೇನು ಅನ್ಯಾಯವು? ಆದರೆ ಸದ್ಗುಣಿಗಳು ಭೆಟ್ಟಿಯಾದರೆ

ಅವರ ಗುಣಗಳನ್ನು ನಿರೀಕ್ಷಿಸಿ ಇಂದಿರೆಯು ಆನಂದಪಡುವಳು ; ಇಂಥವರಿಂದೇ ನಾದರೂ ಕಲಿತುಕೊಳ್ಳುವದಿದ್ದರೆ ಕಲಿತುಕೊಳ್ಳುವಳು.

ದೇವಯಾನಿಯ ಮನೆಗೆ ಬಂದ ತರುಣನು ಎಂಥವನಿರುವನೆಂಬುದನ್ನರಿತು ಕೊಳ್ಳುವ ಲವಲವಿಕೆಯು ಇಂದಿರೆಗೆ ಹತ್ತಿತ್ತು. ಮುನ್ನಾದಿನ ಸಂಜೆಯು ಮಬ್ಬಿನಲ್ಲಿ ಇವನು ಬೆಳಿಗೆಯುವನಾದ ಹುಡುಗನೇ ಇರುವನೆಂದು ತಿಳಿದಿದ್ದಳು. ಹುಡುಗರಲ್ಲಿ ಸರಸವಾದ ವಿಚಾರಗಳಿರುವುದಿಲ್ಲೆಂದು ತಿಳಿದು, ಇಂದಿರೆಗೆ ಅವರ ಗೊಡವೆ ಬೇಕಾಗಿದ್ದಿಲ್ಲ. ಆದರೆ ಸ್ಟೇಶನದಿಂದ ಮನೆಗೆ ಬರುವ ಮಾರ್ಗದಲ್ಲಿ ರಮಾಕಾಂತ ನಾಡಿದ ಅಲ್ಪ ಭಾಷಣದಿಂದಲೇ ಇವನು ಹುಡುಗನಿದ್ದರೂ ಚಾಣಾಕ್ಷನಿರುವ ನೆಂದು ಕಂಡುಕೊಂಡಿದ್ದಳು.

ಇಂದಿರೆಯು ಬೆಳಿಗ್ಗೆದ್ದು, ದೇವಯಾನಿಯ ಮನೆಗೆ ಹೋಗುವುದಕ್ಕಾಗಿ ನಂಜುಂಡನಿಗೆ ರಥವನ್ನು ಸಿದ್ಧಪಡಿಸುವುದಕ್ಕೆ ಹೇಳಿ, ರಥ ಸಿದ್ಧವಾದ ಬಳಿಕ ಹೊರಟಳು. ಮಾರ್ಗದಲ್ಲಿ ಸಾವಿತ್ರೆಮ್ಮನ ಮನೆಯಿದ್ದದ್ದರಿಂದ ಗೃಹಕೃತ್ಯದ ಕೆಲವು ಮಾತುಗಳನ್ನು ಕೇಳಬೇಕೆಂದು ಚಟ್ಟನೆ ರಥದಿಂದಿಳಿದು ಸಾವಿತ್ರೆಮ್ಮನ ನಡುಮನೆ ಯವರೆಗೆ ಭರ ಭರ ಹೊರಟಳು. ಅದರಲ್ಲಿ ಕಪ್ಪುಬಣ್ಣದ ಪೋಷಾಕು ಹಾಕಿ ಕೊಂಡು ಲಷ್ಕರೀ ಅಮಲದಾರನ ಜಂಭದಿಂದ ಉನ್ನತನಾದವನೊಬ್ಬನು ಎಡೆ ಯಾಡುವುದನ್ನು ಕಂಡು ಚಕಿತಳಾಗಿ ಗಕ್ಕನೆ ನಿಂತಳು. ಇಂದಿರೆಯು ರುಳಿಸಪ್ಪಳ ಕೇಳಿ ಅಲ್ಲಿ ನಡೆದ ಮೆರವಣಿಗೆಗೆ ವ್ಯತ್ಯಯ ಬಂದಿತು. ಸಾವಿತ್ರೆಮ್ಮನು ಲಗುಬಗೆ ಯಿಂದ ಬಂದು ಇಂದಿರೆಯನ್ನು ನೋಡಿ "ಇಂದಿರಾಬಾಯವರೇ ಬನ್ನಿರಿ ; ಬಡವರ ಮನೆಗೆ ಭಾಗೀರಥಿಯು ಬಂದಂತಾಯಿತಲ್ಲ! ಏನು ಕಾರಣ ಬರೋಣಾಯಿತು ?" ಎಂದು ಆದರದಿಂದ ಕೇಳಿದಳು.

"ಅಂಥದೇನು ಮಹತ್ವವಾದ ಕೆಲಸವಿದ್ದಿಲ್ಲ. ಏನು ನಡಿಸಿರುವಿರಿ ?"

"ನಮ್ಮ ನಟೇಶನು ಇದೇ ಬೆಂಗಳೂರಿಂದ ಬಂದನು ; ಅವನೊಡನೆ..."

"ನಟೀ ಅಲ್ಲವೇ ಇವನು ? ನೋಡದಿರಲಿಕ್ಕೇನು ? ಅವನೀಗೇನು ಜಮಾ ದಾರನೋ ಫೌಜದಾರನೋ ಆದಂತೆ ಕಾಣುತ್ತದಲ್ಲ. ನಟೀ, ನಿನಗೇನನ್ನಬೇಕಪ್ಪಾ, ನಟೇಶನೋ ನಟೇಶರಾಯನೋ ?" ಎಂದು ಇಂದಿರೆಯು ಕೇಳಿದಳು.

"ಹೇಗಾದರೂ ಕರೆಯಿರಿ ; ನಟೀ ಎಂದು ಕರೆದರೂ ಚಿಂತೆ ಇಲ್ಲ" ಎಂದು ನಟೇಶನು ನಿಂತಲ್ಲಿಂದಲೇ ಹೇಳಿದನು,

"ನಟೇಶ, ನೀನು ಸಣ್ಣವನಿದ್ದಾಗ್ಗೆ ನಮ್ಮಲ್ಲಿಯ ಪುಸ್ತಕಗಳನ್ನೊಯ್ದು

ಓದುತ್ತಿದ್ದಿ. ಈಗಾದರೂ ಓದುವ ಕ್ರಮವನ್ನಿಟ್ಟಿರುವಿಯೇನು; ನೀನೇನಾದರೂ ನಿಬಂಧ ಮುಂತಾದವುಗಳನ್ನು ಬರೆದಿರುವಿಯೇನು? ಸಾವಿತ್ರಮ್ಮಾ, ನಟೇಶನು ಚಿಕ್ಕವನಿದ್ದಾಗ್ಯೆ ಪಾದ್ರಿಗಳ ಸೋಗು ಹಾಕಿಕೊಂಡು ತದ್ರೂಪ ಅವರಂತೇ ಮಾತಾಡುತ್ತಿದ್ದನು. ಆಗ್ಯೆ ನಾವು ಇವನೊಳ್ಳೇ ವ್ಯಾಖ್ಯಾನಕಾರನಾಗುವನೆಂದು ಮಾಡಿದ್ದೆವು. ನಟೀ, ನೀನೀಗ ವ್ಯಾಖ್ಯಾನಗಳನ್ನು ಕೊಡುತ್ತಿರುವಿಯೇನು?" ಎಂದು ಇಂದಿರೆಯು ಬಾಲ್ಯಸ್ನೇಹ ನೆನಪಾಗಿ ಕೇಳಿದಳು.

"ಇಂದಿರಾಬಾಯವರೇನು ಕೇಳುತ್ತಾರೆ, ನೋಡು ನಟೇಶಾ, ಏನಾದರೂ ಹೇಳಬಾರದೇ?" ಎಂದು ಸಾವಿತ್ರಮ್ಮನು ನಟೇಶನು ಸುಮ್ಮನಿದ್ದದ್ದು ಕಂಡು ನುಡಿದಳು.

"ಓಹೋ ಪುಷ್ಕಳ ಬರೆದಿದ್ದೇನೆ. ಮಿತ ಮದ್ಯಪಾನ, ವಿಧವಾಶ್ರಮಗಳ ಅವಶ್ಯಕತೆ, ಭಿನ್ನ ಭಿನ್ನ ಜಾತಿಯವರ ಪಙ್ತಿವ್ಯವಹಾರದ ಲಾಭ, ಪುನರ್ವಿವಾಹ ಮುಂತಾದ ವಿಷಯಗಳ ಮೇಲೆ ಪಂಡಿತರು ಬರೆದ ನಿಬಂಧಗಳ ಭಾಷಾಂತರ ಕನ್ನಡದಲ್ಲಿ ಮಾಡಿರುವೆನು."

"ನೋಡಪ್ಪಾ!!" ಎಂದು ತಿರಸ್ಕಾರವ್ಯಂಜಕ ಧ್ವನಿಯಿಂದ ಇಂದಿರೆಯೆಂದಳು ಸಾವಿತ್ರಮ್ಮನನ್ನು ಕುರಿತು—

"ಸಾವಿತ್ರಮ್ಮಾ, ತಂದೆಗಳು ಮನೆನೋಡಿಕೊಂಡು ಹೋಗುವ ಭಾರ ನನ್ನ ಮೇಲೆ ಹಾಕಿಬಿಟ್ಟಿರುವರು. ನಾನೇನಷ್ಟು ತಿಳಿದವಳೇ! ಇನ್ನೊಂದು ನಾಲ್ಕು ದಿವಸಗಳಲ್ಲಿ ತಾವೂ ನಾಲ್ಕು ಜನ ಸ್ನೇಹಿತರೂ ಕೂಡಿ ಬರುವರಂತೆ. ಏನೇನು ವ್ಯವಸ್ಥೆ ಮಾಡಿಡಬೇಕೋ ತೋಚಲೊಲ್ಲದು. ನಟೇಶನು ನಮ್ಮ ಒಲೆಯ ಮುಂದಿನ ಮಾತುಗಳನ್ನು ಕಟ್ಟಿಕೊಂಡೇನು ಮಾಡುವನು? ನಟೀ, ಎಂಟು ತಾಸಿನ ಕಡಿಗೆ ನಮ್ಮ ಮನೆಗೆ ಸಾವಿತ್ರಮ್ಮ ಬರುವರು, ಆಗ್ಯೆ ನೀನೂ ಬಾ." ಎಂದು ಇಂದಿರೆಯು ಹೇಳುತ್ತಲೇ ನಟೇಶನು ತನ್ನದೇನೂ ಕೆಲಸವಿಲ್ಲೆಂದು ತಿಳಿದು ಹೊರಟುಹೋದನು.

ಸಾವಿತ್ರಮ್ಮನೂ ಇಂದಿರೆಯೂ ಒಂದು ಗಳಿಗೇ ಪರ್ಯಂತರ ಮಾತಾಡುತ್ತ ಕುಳಿತರು.

ತನ್ನ ಪೋಷಾಕದ ಪರಿಣಾಮವು ಇಂದಿರೆಯ ಮೇಲಾಗಲಿಲ್ಲೆಂದು ಎದೆಗುಂದಿದವನಾಗಿ, ನಟೇಶನು ನಡುಮನೆಯ ಕೋಣೆಯಲ್ಲಿ ಹೋಗಿ ಬಟ್ಟೆಗಳನ್ನು ಕಳೆದು ಕುಳಿತುಕೊಂಡನು. ಇಂದಿರೆಯ ಮೇಲಾದ ಸೌಂದರ್ಯವು, ನಟೇಶನ

ಮನಸ್ಸಿನಲ್ಲಿ ಒಳಿತಾಗಿ ನಟ್ಟಿತು. ಪ್ರಭಾಮಯವಾದ ಅವಳ ಕಣ್ಣುಗಳ ಭಾವವನ್ನು ಹೇಗೆ ಬಣ್ಣಿಸಬಹುದು ? ನಟೇಶನಿಗೆ ಹುಚ್ಚೇ ಹಿಡಿದಂತಾಯಿತು. ಅನ್ನವಿಕ್ರಯ ಮಾಡುವವರ ಮಗನೆಂದು ಆ ಮಾನಿನಿಯು ತನ್ನನ್ನು ಧಿಕ್ಕರಿಸಿದಳೊ ? ಮಧ್ಯಾಹ್ನಕ್ಕೆ ತನ್ನ ಮನೆಗೆ ಬರಹೇಳಿದ್ದನ್ನು ನಿರಾಕರಿಸುವಳೋ ? ಇವಳು ನಿಜವಾಗಿ ದುಃಸಾಧ್ಯಳಿರುವಳೇನು ? ಪಂಚತಂತ್ರದಲ್ಲಿ ಕೌಲಾಲಿಕನಿಗೆ ರಾಜಕನ್ನೆಯನ್ನು ಕೊಡಲಿಲ್ಲವೇನು ? ನಾನಾದರೆ ಕೌಲಾಲಿಕನಕ್ಕಿಂತ ಶ್ರೇಷ್ಠನೇ. ಇಂದಿರೆಯು ರಾಜಕನ್ನೆಯಲ್ಲ. ಅಂದ ಮೇಲೆ ಅವಳು ದುಃಸಾಧ್ಯಳು ಹೇಗೆ ? ಹೀಗೆ ಧೇನಿಸುತ್ತ, ನಟೇಶನು ಕಿಟಕಿಯೊಳಗಿಂದ ಇಂದಿರೆಯನ್ನು ಎವೆಬಡಿಯದೆ ನೋಡುತ್ತ ಒಂದೇ ಸ್ಥಿತಿಯಲ್ಲಿ ಅವಳು ಮನೆ ಬಿಟ್ಟು ಹೋಗುವ ತನಕ ಕುಳಿತೇ ಇದ್ದನು.

ಆ ದಿವಸ ಮುಂಜಾನೆ ದೇವಯಾನಿಯೂ ರಮಾಕಾಂತನೂ ಉಪಹಾರ ಮಾಡಿ ಚಂದ್ರಶಾಲೆಯಲ್ಲಿ ಬಂದರು. ದೇವಯಾನಿಯು ತನ್ನ ನಿತ್ಯದ ಆರಾಮ ಕುರ್ಚಿಯಲ್ಲಿ ವಿರಾಜಮಾನಳಾದಳು. ರಮಾಕಾಂತನು ಕಟಾಂಜನ ಹಿಡಕೊಂಡು ನಿಂತು ಎತ್ತ ನೋಡಿದತ್ತ ಸಂದಣಿತವಾದ ವಿವಿಧ ಜಾತಿಯ ವೃಕ್ಷಗಳನ್ನೂ, ಅವುಗಳ ಮಧ್ಯದೊಳಗಿಂದ ಮನೋಹರವಾಗಿ ಕಾಣುವ ಸುರಮ್ಯವಾದ ಮಂದಿರಗಳ ಭಾಗಗಳನ್ನೂ, ಹಾಲು ಚೆಲ್ಲಿದಂತೆ ಕಾಣುವ ಕಾವೇರಿಯ ಪ್ರವಾಹವನ್ನೂ ನೋಡುತ್ತಿದ್ದನು. ಪಕ್ಷಿಗಳು ಉಲ್ಲಾಸದಿಂದ ಕಲಕಲಾಟ ಮಾಡುತ್ತಿದ್ದವು. ಮಂದಮಾರುತನು ಗಂಧವಹನೆಂಬ ಅಂದವಾದ ಹೆಸರಿಗೆ ಕುಂದು ತರಬಾರದೆಂದು ಆನಂದದಿಂದ ಕುಂದಕುಟ್ಮಲಗಳ ಮಕರಂದವನ್ನು ತಂದು ಮುಂದರಿದುಬಂದಂತೆ ಕಂಡನು.

"ಕಾಂತೂ, ಏಕೆ ನಿಂತಿ, ಕೂತುಕೋ" ಎಂದು ದೇವಯಾನಿಯು ಹೇಳಲು ರಮಾಕಾಂತನು ಕುಳಿತುಕೊಂಡನು. ಅವರೀರ್ವರು ಅನೇಕ ವಿಷಯಗಳ ಮೇಲೆ ಮಾತಾಡುತ್ತಿರಲು, ಜಯರಾಯನ ಸುದ್ದಿ ಹೊರಟಿತು. ಅವನ ಕುಲಗೋತ್ರವಾವದು, ಅವನು ರೊಕ್ಕಸ್ತನಾದದ್ದು ಹೇಗೆ, ರಮಾಕಾಂತನು ಅವನ ಮಗಳ ರಥದಲ್ಲಿಯೇ ಬಂದಿರಬೇಕು, ಇತ್ಯಾದಿ ಮಾತುಗಳು ನಡೆದವು.

"ಕಾಂತೂ, ಸ್ವಲ್ಪ ತಡಿ ! ಯಾರೋ ಬಾಕಿಲ ಬಡಿದಂತೆ ಕೇಳಲಿಲ್ಲವೇ ?" ಎಂದು ದೇವಯಾನಿಯು ಕೇಳಿದಳು.

ರಮಾಕಾಂತನು ಎದ್ದು ಹೋಗಿ ನೋಡುವಷ್ಟರಲ್ಲಿ, ಬಾಕಿಲ ತೆರೆದು

ಸುರಾಂಗನೆಯಂತೆ ಕಾಣುವ ಹದಿನೆಂಟು ಹತ್ತೊಂಬತ್ತು ವರ್ಷದ ಪ್ರಾಯದವಳಾದ ಲಲನೆಯೊಬ್ಬಳು ರಭಸಗ್ಗನೆ ಇವನೆದುರಿನಲ್ಲಿ ನಿಂತಳು. ಉಭಯತರದೂ ಏಕದೃಷ್ಟಿಯಾಯಿತು. ಹೀಗೆ ಏಕದೃಷ್ಟಿಯಾಗಲು ತನ್ನಿಂದನುಚಿತವಾಯಿತೆಂದು ಶಂಕಿಸಿ ರಮಾಕಾಂತನು ಕೆಳಗೆ ನೋಡಹತ್ತಿದನು. ಆದರೆ ನಿನ್ನೆ ಸಾಯಂಕಾಲದಲ್ಲಿ ತನ್ನನ್ನು ರಥದಲ್ಲಿ ಕುಳ್ಳಿರಿಸಿಕೊಂಡು ಬಂದ ಸೌಜನ್ಯಯುಕ್ತಳಾದ ಕುಲಾಂಗನೆಯು ಇವಳೇ ಎಂದು ಗುರುತು ಹಿಡಿದನು. ಅದೇ ಮನೋಜ್ಞವಾದ ಮೈಕಟ್ಟು, ಅದೇ ಕೇತಕೀವರ್ಣದಂತೊಪ್ಪುವ ಮೈಬಣ್ಣ, ಅದೇ ಗೌರವವುಳ್ಳ ನಡತೆಯು ಸ್ಪಷ್ಟವಾಗಿ ಈಗ ಕಂಡವು. ಈ ಅಂಗನೆಯನ್ನು ಮಾತಾಡಿಸಬೇಕೋ, ಏನು ಸುಮ್ಮನೆ ತಿರಿಗಿ ದೇವಯಾನಿಯ ಹತ್ತಿರ ಹೋಗಿ ಆಶ್ರಯವನ್ನು ಪಡಕೊಳ್ಳಬೇಕೋ ಎಂದು ರಮಾಕಾಂತನು ಯೋಚಿಸುತ್ತಿರುವಾಗಲೇ, ಆ ನರಜನ್ಮಕ್ಕೆ ಬಂದ ಮೋಹಿನಿಯು ಕೋಕಿಲೆಯಕಿಂತಲೂ ಮಂಜುಲವಾದ ಧ್ವನಿಯಿಂದ :

"ನನ್ನ ಕೂಡ ರಥದಲ್ಲಿ ನಿನ್ನೆ ಬಂದವರು ತಾವೇ ಅಲ್ಲವೆ? ಬಾಕಿಲ ಬಡಿದರೂ ಯಾರೂ ಓ ಕೊಡಲಿಲ್ಲಾದ್ದರಿಂದ ದೇವಯಾನಿಯಮ್ಮನವರೊಬ್ಬರೇ ಇರುವರೆಂದೆಣಿಸಿ ಬಾಕಿಲ ತೆರೆದು ಬಂದೆನು. ನಾನು ಬಂದದ್ದು ಅಪ್ರಾಸಂಗಿಕವಾಗಲಿಲ್ಲವಷ್ಟೇ?" ಎಂದು ಕೇಳಿದಳು,

"ನಿನ್ನೆ ಸ್ವಲ್ಪ ಕತ್ತಲಾಗಿದ್ದರಿಂದ ನನ್ನ ಗುರುತು ತಾವು ಹಿಡಿಯುವಿರೋ ಇಲ್ಲೋ ಎಂದು ತಿಳಿದಿದ್ದೆನು. ತಮ್ಮ ಗುರುತು ಮಾತ್ರ ನನಗೊಮ್ಮೆಲೆ ಹತ್ತಿತು. ತಾವು ಬಂದದ್ದು ವಿಹಿತವೇ ಆಗಿರುವದು" ಎಂದಿಷ್ಟು ಮಾತಾಡಬೇಕಾದರೆ ರಮಾಕಾಂತನಿಗೆ ವಿದ್ವಾಂಸರ ಸಭೆಯಲ್ಲಿ ಹೊಸತಾಗಿ ಮಾತಾಡುವವನ ಪರಿಯಾಯಿತು,

"ದೇವಯಾನಿಯಮ್ಮನವರು ತಮ್ಮ ಪ್ರೀತಿಯ ಸ್ಥಳದಲ್ಲಿಯೇ ಇರುವರಷ್ಟೆ?" ಎಂದಿಂದಿರೆಯು ಚಂದ್ರಶಾಲೆಗೆ ಬಂದು, ದೇವಯಾನಿಯ ಹೆಗಲಮೇಲೆ ತನ್ನ ಹಸ್ತವನ್ನಿಟ್ಟು ಅಸ್ತವ್ಯಸ್ತವಾದ ಅವಳ ಶಾಲನ್ನು ಚೆನ್ನಾಗಿ ಹೊದಿಸಿದಳು. ರಮಾಕಾಂತನೂ ತನ್ನ ಕುರ್ಚಿಯ ಮೇಲೆ ಬಂದು ಕುಳಿತನು.

"ಇಂದಿರಾ, ಬಂದಿಯಹುದಲ್ಲೊ? ನೀನು ಬಂದೇ ಬರುವಿಯೆಂದು ನಾನು ತರ್ಕಿಸಿದ್ದೆನು," ಎಂದು ದೇವಯಾನಿಯು ಇಂದಿರೆಯ ಉಲ್ಲಸಯುಕ್ತವಾದ ಮುಖವನ್ನು ನೋಡಿ ನುಡಿದಳು.

“ ದೇವಯಾನಿಯಮ್ಮಾ. ಈ ಮಾತಿಗೆ ನೀವು ಅಣ್ಣಂಭಟ್ಟರ ಮೊರೆ ಹೊಕ್ಕಿರೇಕೆ ? ನನ್ನಿಚ್ಛೆಗೆ ಬಂದಾಗ್ಗೆ ನಾನಿಲ್ಲಿಗೆ ಬರಬಹುದೆಂಬ ಬಗ್ಗೆ ನೀವು ನನಗೆ ಸನದು ಮಾಡಿಕೊಟ್ಟಿರುವಿರಲ್ಲವೆ ?” ಎಂದು ಇಂದಿರೆಯು ಮೃದುಹಾಸದಿಂದ ಕೇಳಿದಳು.

“ ಹಗಲೆಲ್ಲ ನೀನೆಲ್ಲಿ ಬರುತ್ತೀ ? ಹೇಗೇ ಇರಲಿ, ಈ ಹೊತ್ತಿಗೆ ನೀನು ಕರೆಸಿದಂತೆ ಬರುವಿಯೆಂದು ನನಗೆ ತಿಳಿದಿತ್ತೆಂಬುದು ನಿನ್ನ ಬರುವಿಕೆಯಿಂದ ಸಿದ್ಧವಾಯಿತಲ್ಲ !”

“ ಅಹುದೇನು ! ! ” ಎಂದು ಇಂದಿರೆಯು ಉದ್ಗಾರ ತೆಗೆದು ಗೋಣು ಹಾಕಿದಳು.

“ ಇಷ್ಟೇ ಅಲ್ಲ ; ನೀನೇಕೆ ಬಂದಿರುವಿ ಎಂಬುದು ಕೂಡಾ ನನಗೆ ತಿಳಿದದೆ.”

“ ಅವ್ವಯ್ಯಾ ! ಹೇಳಿಬಿಡಿರಿ ನೋಡುವ, ಅದೇನು ಗೂಢವಿರುವದು ?” ಎಂದು ಇಂದಿರೆಯು ಕೇಳಿದಳು.

“ ಒಡೆದೇ ಹೇಳಲಿಯಾ ? ನನ್ನ ಮನೆಗೆ ಬಂದ ತರುಣನೆಂಥವನಿರುವನೆಂಬದನ್ನು ತಿಳುಕೊಳ್ಳುವ ಅಭಿಲಾಷೆಯಿಂದ ನೀನು ಧಾವಿಸಿ ಬಂದಿರುವಿ. ಈಗಾಯಿತೇ ! ಅಹುದೋ ಇಲ್ಲವೋ ಹೇಳಿಬಿಡು.”

“ ಅಹುದು. ನಾನದಕ್ಕಾಗಿಯೇ ಬಂದಿರುವೆನು. ಆದರಲ್ಲೇನಾಯಿತು ? ಇದಕ್ಕೆ ನೀವಿಷ್ಟು ಮುಗುಳುನಗೆ ನಗುವದೇಕೆ ? ಈ ನಿಮ್ಮತಿಥಿಗಳಿಗೂ ನಿಮ್ಮ ಭಾವಾರ್ಥ ತಿಳಿದಿರಲಿಕ್ಕಿಲ್ಲ.” ಆ ಮೇಲೆ ರಮಾಕಾಂತನನ್ನು ಕುರಿತು, “ ನೋಡಿದಿರಾ ರಾಯರೇ, ದೇವಯಾನಿಯಮ್ಮನವರು ನನ್ನನ್ನು ಕಂಡರೆ, ಸಾಕುಬೇಕು ಮಾಡಿಕೊಡುವರು. ನಾವು ಹೆಣ್ಣುಮಕ್ಕಳು ನಮ್ಮ ಮನಸ್ಸಿನಲ್ಲಿಯ ಭಾವವನ್ನು ಹೊರಗೆಡವವುದಿಲ್ಲವಂತೆ. ನಾವು ಕೇಳಿದ ಪ್ರಶ್ನೆಗೆ ಸರಳವಾದ ಉತ್ತರ ಕೊಡುವದಿಲ್ಲವಂತೆ. ಹೀಗೆ ನಮ್ಮ ಅಮ್ಮನವರ ಅಭಿಪ್ರಾಯ ; ಅದಕ್ಕಾಗಿಯೇ ನಾನು ಏನಾದರೂ ಉತ್ತರ ಕೊಡಬೇಕಾದರೆ ಇಲ್ಲಿ ಒಳ್ಳೇ ಜಾಗರೂಕಳಾಗಿ ಕೊಡುತ್ತಿರುತ್ತೇನೆ,”

“ ರಮಾಕಾಂತ, ಇವರ ನಮ್ಮ ನಡುವೆ ಹೀಗೆ ವಿನೋದಗಳು ಸದಾ ನಡೆಯುತ್ತವೆ. ಈ ಗೊಡವೆಗೆ ನೀನು ಬರತಕ್ಕದ್ದಲ್ಲ. ಈ ಊರಲ್ಲಿ ನಮಗೆ ವಿನೋದದ ಸಾಧನೆಗಳೇ ಕಡಿಮೆ. ಇವಳ ಕೂಡ ಬುದ್ಧ್ಯಾ ಜಗಳ ತೆಗೆದು ವಿನೋದಪಡುವೆನು. ಇವಳ ನಡಾವಳಿಯ ವಿಷಯವಾಗಿ ನಾನು ನಿರಾಮಯ

ಳಾಗಿರುವೆನು. ಇವಳು ಸ್ವೇಚ್ಛೆಯಿಂದ ನನ್ನಧಿಕಾರಕ್ಕೊಳಗಾಗಿರುವಳು. ಕಾರಣ ನಮ್ಮ ಮಾತಿನಲ್ಲಿ ಅನ್ಯರು ಕೈ ಹಾಕಲರಿಯರು" ಎಂದು ದೇವಯಾನಿಯು ವಾದಿಗಳು ವಿಷಯನಿರೂಪಣೆ ಮಾಡಿದಂತೆ ಮಾತಾಡಿದಳು.

ಇಂಥ ರೂಪವಂತನಿಗೆ ರಮಾಕಾಂತನೆಂಬ ಹೆಸರು ಒಳ್ಳೇ ಅನುರೂಪ ವಾಗಿರುವದು, ಎಂದು ಮನಸ್ಸಿನಲ್ಲಿಯೇ ಅಂದು, ರಮಾಕಾಂತನ ಕಡೆಗೆ ನೋಡಿ ಇಂದಿರೆಯು "ದೇವಯಾನಿಯವರ ವಾದ ಸರಿಯಾದದ್ದೇನು.?" ಎಂದು ಕೇಳಿ ದಳು.

"ಅದೇನೋ ನನಗೆ ತಿಳಿಯದು, ನಾನು ಹೊಸಬನಾದ್ದರಿಂದ ಮಧ್ಯಸ್ಥಿಕೆ ಮಾಡುವ ಅಧಿಕಾರ ನನಗಂತೂ ಬಾರದು" ಎಂದು ರಮಾಕಾಂತನು ಗಂಭೀ ರತೆಯ ಆವಿರ್ಭಾವದೊಡನೆ ಹೇಳಿದನು.

"ಹಾಗೇ ಆಗಲಿ. ನಾವು ಹೊಸ ಮಂದಿಯನ್ನು ಕಾಣುವದೇ ದುರ್ಲಭ. ಮೇಲಾಗಿ ನೀವು ನಮ್ಮ ನಿಯಾಮಕರ ಮನೆಯಲ್ಲಿಯೇ ಇಳಿದಿರುವಿರಿ; ಅಂದಮೇಲೆ ನೀವು ನಮ್ಮ ಮನೆಗೇ ಬಂದಂತಾಯಿತು. ನಿಮ್ಮ ದರ್ಶನಾಪೇಕ್ಷೆ ಮಾಡುವದು ಅನುಚಿತವಾದ ಸಂಗತಿಯೇ? ನೀವೇ ಹೇಳಿರಿ" ಎಂದು ಇಂದಿರೆಯು ನುಡಿದಳು.

"ನೀನು ಬಂದದ್ದು ಅನುಚಿತವಾಯಿತೆಂದು ನಾನು ಯಾವಾಗ ಹೇಳಿ ದೆನು? ನೀನು ಖಿನ್ನೆಯಾದಿಯೇನು? ಇಂದಿರಾ, ನಿಂತಿರುವಿಯೇಕೆ ಕುಳಿತು ಕೊಳ್ಳಬಾರದೇ?" ಎಂದು ದೇವಯಾನಿಯು ಪ್ರೇಮದಿಂದಾ ವಿನೀತೆಯ ಕೈಹಿಡಿದು ಕೋಚದ ಮೇಲೆ ಕುಳ್ಳಿರಿಸಿ ಜಯರಾಯನೆಂದು ಬರುವನೆಂದು ಕೇಳಿದಳು.

"ಇನ್ನೂ ನಾಲ್ಕಾರು ದಿವಸಗಳ ಪರ್ಯಂತರ ಬರುವಂತೆ ಕಾಣುವದಿಲ್ಲ. ಮನೆಯಲ್ಲಿ ನಾನೊಬ್ಬಳೇ ಆಗಿರುವದರಿಂದ ಬಹಳ ಬೇಸರ ಬಂದಂತಾಗಿದೆ. ಅಪ್ಪನು ಬಂದರೆ ನಾಲ್ಕಾರು ಜನರನ್ನು ಕರಕೊಂಡು ಬರುವನಂತೆ. ಅದು ಇದಕ್ಕೂ ಕಷ್ಟ. ಆ ಜನರು ವ್ಯಾಪಾರ, ಹುಂಡಿ, ನಾಟಕ ತಮಾಷೆಗಳ ಹೊರ್ತಾಗಿ ಬೇರೆ ಮಾತೇ ಆಡುವದಿಲ್ಲ."

"ನಿನಗೆ ವ್ಯೆಮುರೆ ಕೆಲಸವಿದ್ದರೇ ನೀನು ಮೆತ್ತಗಾಗಿರುವಿ. ಇನ್ನೂ ನಾಲ್ಕಾರು ದಿವಸಗಳ ವರೆಗೆ ನಿನ್ನನ್ನು ಹಿಡಿಯುಬೇಕ್ಯಾರು?" ಎಂದು ದೇವ ಯಾನಿಯು ತೀಕ್ಷ್ಣವಾಗಿ ಮಾತಾಡಿದಳು.

"ಕೇಳಿದಿರಾ ರಮಾಕಾಂತರೇ, ರಾಣೀಬಾಗದೊಳಗಿಂದ ತಪ್ಪಿಸಿಕೊಂಡು ಬಂದ ವನ್ಯಪಶುವೋ ಏನೋ ಎಂಬಂತೆ ದೇವಯಾನಿಯಮ್ಮನವರು ನನ್ನನ್ನು ತಿಳಿಯುವಂತೆ ಕಾಣುತ್ತದೆ."

"ಅಮ್ಮಣೀ, ನೀನು ಅಂಥವಳೇ ಇರುವಿ. ನಿನ್ನನ್ನೊಯ್ದು ಬೆಂಗಳೂರಲ್ಲಿ ದೊಡ್ಡ ದೊಡ್ಡ ಜನರ ಸಮಾಜದಲ್ಲಿ ಸೂತ್ರದ ಮೇಲೆ ನಡಕೊಳ್ಳ ಹಚ್ಚಿದರೇ ನೀನು ಎಳೆಗೆ ಬರುವಿ. ಹೀಗೆ ವರುಷಾ ನಾಲ್ಕು ತಿಂಗಳಂತೆ ನಾಲ್ಕು ವರುಷ ಕುದುರೆಗೆ ನಡಿಗೇ ಕಲಿಸಿದಂತೆ ಮಾಡತಕ್ಕದ್ದೆಂದು ಜಯರಾಯರಿಗೆ ಹೇಳುವವಳಿದ್ದೇನೆ. ಸದ್ಯಕ್ಕೆ ಹೇಗಿದ್ದವಳನ್ನು ಅನುಭೋಗಿಸಬೇಕಲ್ಲ. ನಿನ್ನ ಹೊರ್ತು ನಮಗೆಲ್ಲಿ ಗತಿಯಿದೆ?"

"ಎಷ್ಟು ಸೆಳೆಯುತ್ತೀರಿ ಸೆಳೆಯಿರಿ. ನಿಮ್ಮ ಕೈಯಲ್ಲಿಯೇ ಸಿಕ್ಕಿರುವೆನು; ನನಗಾದರೂ ಬೇರೆ ಗತಿಯೆಲ್ಲಿರುವದು?" ಎಂದಿಂದಿರೆಯು ನಗುತ್ತ ನುಡಿದು ರಮಾಕಾಂತನನ್ನು ಕುರಿತು—"ರಾಯರೇ ನಾನಿಷ್ಟು ಯೋಗ್ಯಳಂತೆ ಕಾಣುವೆನೇ?" ಎಂದು ಕೇಳಿದಳು.

"ನಿಮ್ಮ ರೂಪಲಾವಣ್ಯಗಳು ಮನೋರಮವಾಗಿವೆ. ಆಚರಣೆಯಲ್ಲಂತೂ ಅಭಿಜಾತರೇ ಇರುವಿರಿ" ಎಂದು ಧೈರ್ಯದಿಂದಲೂ ಸಾಹಸದಿಂದಲೂ ರಮಾಕಾಂತನು ಆಡಿಬಿಟ್ಟನು.

"ಇಷ್ಟು ವರ್ಣಿಸಲಿಕ್ಕೆ ಸ್ಥಳವೆಲ್ಲಿದೆ? ಆದರೂ ಅಯೋಗ್ಯಳಿಲ್ಲವೆಂದು ಪ್ರಮಾಣಪತ್ರ ದೊರಕಿತು ಸಾಕು." ಎಂದು ಇಂದಿರೆಯು ಸ್ಮಿತವದನೆಯಾಗಿ ನುಡಿದಳು.

ದೇವಯಾನಿಯು ಇವರೀರ್ವರ ಕಡೆಗೂ ಚಕಿತಳಾಗಿ ನೋಡಹತ್ತಿದಳು. ಆದರೂ ರಮಾಕಾಂತನೂ ಇಂದಿರೆಯೂ ನಿರ್ದೋಷಿಗಳಾಗಿದ್ದರು. ರಮಾಕಾಂತನಿಗೆ ಮಾತ್ರ ದೇವಯಾನಿಯು ತನ್ನನ್ನು ನೋಡಿದ ಕೂಡ್ಲೆ, ಹೆದರಿಕೆ ಬಂದಂತಾಯಿತು. ತಾನು ಇಂದಿರೆಯನ್ನು ವರ್ಣಿಸಿದ್ದು ದೇವಯಾನಿಯ ದೃಷ್ಟಿಯಿಂದ ಅನುಚಿತವಾಯಿತೋ? ಎಂದು ಸಂಶಯ ಪಟ್ಟವನಾಗಿ ಕೆಳಗೆ ನೋಡಹತ್ತಿದನು.

"ನಾನು ಯಾವಾಗಲೂ ಬುದ್ಧ್ಯಾ ಇವಳ ಮೇಲೆ ಟೀಕೆ ಮಾಡುತ್ತೇನೆ. ಯಾರಾದರೂ ಸ್ವಲ್ಪು ಸ್ತುತಿಸಿದರೆ ಸಾಕು ಇವಳನ್ನು ಹಿಡಿಯುವವರಾರು!" ಎಂದು ರಮಾಕಾಂತನ ವಿಷಾದಕ್ಕೆ ಮರೆಹಾಕುವದಕ್ಕಾಗಿ ದೇವಯಾನಿಯು

ನುಡಿದಳು.

"ರಮಾಕಾಂತ, ಇಲ್ಲಿ ನೋಡತಕ್ಕಂಥ ಇತಿಹಾಸಪ್ರಸಿದ್ಧವಾದ ಸ್ಥಳಗಳೂ ಸ್ವಾಭಾವಿಕ ಶೋಭೆಯ ವನಸ್ಥಳಗಳೂ ಇರುವವು. ಸರದಾರಸಿಂಗನಿಗೆ ಗಾಡೀ ಸಿದ್ಧಮಾಡಲಿಕ್ಕೆ ಹೇಳಲಿಯಾ? ಇಂದಿರಾ, ನೀನೂ ಹೋಗಬಹುದು; ರಮಾಕಾಂತನು ನಮ್ಮವನೇ ಇದ್ದು ಸುಶೀಲನಾಗಿರುವನು." ಎಂದು ದೇವಯಾನಿಯು ಹೇಳಿದಳು.

"ಇಲ್ಲಿ ನೋಡತಕ್ಕಂಥ ಸ್ಥಳಗಳನ್ನು ತೋರಿಸಿ, ಅವುಗಳ ಸಂಗತಿಯನ್ನು ಹೇಳಲು ನನಗಿಂತಲೂ ಬಲ್ಲವರ್‍ಯಾರಿರುವರು? ಹೋಗಬಹುದೆಂದರೆ ಹೋಗುವೆನೇನು? ನಿಮ್ಮಾಗ್ರಹ ಬಿದ್ದರೆ ಮಾತ್ರ ಹೋಗುವೆನು."

"ಎಷ್ಟು ಪರಸ್ಪರ ವಿರುದ್ಧವಾದ ಮಾತುಗಳನ್ನಾಡುವಿ, ಇಂದಿರೆ! ನನ್ನಾಗ್ರಹವಿದ್ದರೆ ಮಾತ್ರ ಹೋಗುವವಳಾದರೆ, ಈ ರೀತಿ ಮುಂದರಿದು ಆತ್ಮಶ್ಲಾಘನೆಯನ್ನೇಕೆ ಮಾಡಿಕೊಂಡಿ? ನಿನ್ನ ಮನಸ್ಸಿದ್ದರೆ ನಾನು ಬೇಡೆನ್ನುವದಿಲ್ಲ."

"ಅಮ್ಮಾ, ನೀವು ಬಂದರೆ ಆಗುವದಿಲ್ಲೇನು?" ಎಂದು ಇಂದಿರೆಯು ಕೇಳಿದಳು.

"ಒಲ್ಲೆ, ಮಹಾರಾಯಳೇ, ಹತ್ತುವದೂ ಇಳಿಯುವದೂ ನನ್ನಿಂದ ಸರ್ವಥಾ ಆಗದು. ನನ್ನನ್ನು ಕಟ್ಟಿಕೊಂಡು ಹೋದರೆ ನಿಮಗೆ ತೊಂದರೆಯೇ ಆಗುವದು. ಗಂಗೆಯನ್ನು ಕರಕೊಂಡು ಹೋಗು.

"ಇಂದಿರಾಬಾಯಿಯವರಿಗೆ ವಿನಾಕಾರಣ ನನ್ನ ಮೂಲಕ ತ್ರಾಸವಾಯಿತು" ಎಂದು ರಮಾಕಾಂತನಂದನು.

"ಇಂದಿರೆಯು ಪರೋಪಕಾರಿಯೂ, ಅತಿಥಿಗಳಿಗೆ ಆದರ ತೋರಿಸುವವಳೂ ಇದ್ದದ್ದು ನಿಜ. ಆದರೆ ಈ ಪ್ರಸಂಗದಲ್ಲಿ ಪರೋಪಕಾರ ಆದರಗಳೇ ಹೇತುವೆಂದು ನಾನು ಹೇಳಲಾರೆನು. ನಮ್ಮ ಬಾಯೀಸಾಹೇಬರಿಗೆ ನಿರುದ್ಯೋಗದಿಂದ ಕುಳಿತಿರುವದು ಸೇರುವದಿಲ್ಲ. ಈ ಕಾಲದಲ್ಲಿ ನೀನು ಅನಾಯಾಸವಾಗಿ ಬಂದಿರುವಿ. ಎರಡು ದಿವಸ ಇವಳು ಉಲ್ಲಾಸದಿಂದಿರುವಂತೆ ನೀನು ನಡಕೊಂಡರೆ ನನಗೂ ಸಮಾಧಾನವೆನಿಸುವದು." ಎಂದು ರಮಾಕಾಂತನಿಗೆ ಹೇಳಿದರೂ ಇಂದಿರೆಯ ಮುಖವನ್ನೇ ದೇವಯಾನಿಯು ನೋಡುತ್ತಿದ್ದಳು.

"ಇಂದಿರಾದೇವೀ, ನನ್ನದಷ್ಟು ಕೆಲಸ ಮಾಡುವಿಯಾ? ಕೆಳಗೆ ಸರದಾರಸಿಂಗನಿಗೆ ಗಾಡೀ ಸಿದ್ಧಮಾಡಲಿಕ್ಕೆ ಹೇಳು, ಗಂಗೆಯನ್ನು ಅವನ ಬಳಿಗೆ ಕಳಿಸುವ

ನೆಂದರೆ ಅವಳಿಗೂ ಸರದಾರಸಿಂಗನಿಗೂ ಇಲಿಗೂ ಬೆಕ್ಕಿಗೂ ಬಿದ್ದಂತಾಗುತ್ತದೆ.''

"ನನ್ನನ್ನೇದಾರೂ ನೆವದಿಂದ ಕಳಿಸಿಕೊಟ್ಟು ಹಿಂದಿನಿಂದ ನನ್ನಾಚರಣೆಯ ಮೇಲೆ ತೀಕ್ಷ್ಣವಾದ ಟೀಕೆ ಮಾಡಬೇಕೆನ್ನುವಿರಿ. ನನಗೇನು ಕಲಿಸುತ್ತೀರೇನು ?'' ಎಂದು ನಗುತ್ತ ಪಟಪಟ ಹಾವಭಾವಗಳನ್ನಿಳಿದು ಇಂದಿರೆಯು ಹೇಳಿದಳು.

"ರಮಾಕಾಂತ, ನೀನು ವಿಚಾರವಂತನಿರುವಿ ; ಇಂದಿರೆಯಾದರೂ ತಿಳಿದವಳೇ ಇರುವಳು. ಈ ತರುಣಿಯ ಮೇಲೆ ನನ್ನ ಪ್ರೇಮ ಬಹಳ. ನೀವಿಬ್ಬರೂ ಕುಲೀನರೂ ಸದಾಚಾರಿಗಳೂ ಇರುವದರಿಂದ, ಏನೂ ಸಂಶಯ ತಕ್ಕೊಳ್ಳದೇ ಇಂದಿರೆಯನ್ನು ನಿನ್ನ ಕೂಡ ಕಳಿಸುವೆನು. ಈ ಉದಾತ್ತಚರಿತೆಯಾದ ಪ್ರಮದೆಯ ಕೂಡ ಸ್ನೇಹವಿಟ್ಟು ಉಲ್ಲಾಸದಿಂದಿರಲಭ್ಯಂತರವಿಲ್ಲ. ಇಂದಿರೆ, ಬಂದಿಯಾ, ರಥವು ಸಿದ್ಧವಾಗಿರುವದೆ ?''

ಚಾಣಾಕ್ಷನಾದ ರಮಾಕಾಂತನೊಡನೆ ವನಶೋಭೆಯನ್ನು ನೋಡುವದು ಮನೋರಂಜಕವಾದ ಮಾತೆಂದು ತಿಳಿದು ಇಂದಿರೆಗೆ ಉಲ್ಲಾಸವಾಗಿತ್ತು. ಅವಳ ಮನೋಹರವಾದ ಮುಖವು ಪ್ರಫುಲ್ಲಿತವಾಗಿತ್ತು. ಅವಳು ನಗೆಮುಖದಿಂದ ಉತ್ತರ ಕೊಟ್ಟದ್ದು—"ಓಹೋ ! ಸಿದ್ಧವಿದೆ.''

"ಇಂದಿರಾ, ನೀನು ಬರುಬರುತ್ತ ಅಪ್ರತಿಮ ಲಾವಣ್ಯವತಿಯಾಗುತ್ತ ನಡದಿಯವ್ವಾ'' ಎಂದು ಹೇಳಿ ದೇವಯಾನಿಯು ಅವಳನ್ನು ಹತ್ತರಕ್ಕೆ ಎಳಕೊಂಡು ಮೈಮೇಲೆ ಕೈಯಾಡಿಸಿ ಮುಂಗುರುಳುಗಳನ್ನು ತೀಡಿದಳು.

ದೇವಯಾನಿಯು ಈ ಯುವತಿಯ ಸ್ತುತಿ ಬುದ್ಧ್ಯಾ ಮಾಡುತ್ತಿದ್ದಿಲ್ಲ. ಇದರ ಉದ್ದೇಶವು ಇವಳ ಕಲ್ಯಾಣಚಿಂತನೆಯೇ. ದೇವಯಾನಿಯು ತನ್ನ ಸ್ತುತಿ ಮಾಡಿದ್ದನ್ನೂ ಮೈದಡವಿದ್ದನ್ನೂ ಅನುಭವಿಸಿ, ಇಂದಿರೆಗೆ ಹಿಡಿಸಲಾರದಷ್ಟು ಆನಂದವಾಯಿತು.

"ದೇವಯಾನಿಯಮ್ಮನವರ ಬಾಯಿಂದ ಸ್ತುತಿ ಬಂದದ್ದು ಕೇಳಿ ನನಗೆ ಆಶ್ಚರ್ಯವಾಯಿತು ; ಸ್ತುತಿಗಂತೂ ಎಲ್ಲ ಸ್ತ್ರೀಯರು ಪ್ರಿಯರೇ'' ಎಂದು ನುಡಿದು ಇಂದಿರೆಯು ಆ ಸಾಧ್ವಿಯ ಕಯ್ ಹಿಡಿದುಕೊಂಡು, ರಮಾಕಾಂತನ ಕಡೆಗೆ ಓರೆಗಣ್ಣಿನಿಂದ ನೋಡಿದಳು. ಆದರೆ ಈ ಸಾರೆ ನೋಡಿದಾಗ್ಯೆ ಅವಳು ಸ್ವಲ್ಪ ನಾಚಿಕೊಂಡಳು.

"ಇಂಥವಳಿಗೆ ಬಾಷ್ಕಳಪಂತನು ಅನುತ್ಸೇಕಾ ಎಂದು ಕರೆದನಲ್ಲವೇ ! ಅವನು ಮೂಢನಿರದೇ ಮತ್ತೇನಿರುವನು ?'' ಎಂದು ರಮಾಕಾಂತನು ತನ್ನ

ಮನಸ್ಸಿನಲ್ಲಿಯೇ ಅಂದುಕೊಂಡನು.

ವಸಂತಮಾಸವು ಮೈಸೂರು ಬೆಂಗಳೂರ ಪ್ರಾಂತದಲ್ಲಿ ಒಳ್ಳೇ ರಮಣೀಯ ವಾಗಿರುವದು. ಉತ್ತರ ಕರ್ನಾಟಕದ ಬೈಲು ಸೀಮೆಯಲ್ಲಿ ಈ ವಸಂತನ ಆಗಮ ವೇಕಾಯಿತೋ ಎಂದಲ್ಲಿಯ ಜನರು ಚಿಂತೆ ಪಡುವರು. ಮೈಸೂರ ಪ್ರಾಂತವು ವಸಂತಲಕ್ಷ್ಮಿಯ ತವರಮನೆಯಾಗಿರುವದರಿಂದಲೂ, ಮಲಯ ಮಾರುತನು ಕೃಷ್ಣರಾಜೇಂದ್ರರ ಪ್ರಜರಲ್ಲೊಬ್ಬನಾದುದರಿಂದಲೂ. ವಸಂತಕಾಲದಲ್ಲಿ ಆ ಪ್ರಾಂತವು ವಿಶೇಷವಾಗಿ ಶೋಭಿಸುತ್ತಿರುವದು. ತರುಸಂತಾನವೆಲ್ಲಾ ಸುಗಂಧ ಮಯವಾದ ಪುಷ್ಪಗಳಿಂದ ಚಿತ್ರಮಯವಾಗಿ ಕಾಣುವದು. ಸರಿತ್ ಸರೋವರ ಗಳಲ್ಲಿ ನಿರ್ಮಲೋದಕವು ಆಹ್ಲಾದಕರವಾಗಿರುವದು. ಮಾರುತನು ಹಲವು ತರದ ಪುಷ್ಪಗಳಲ್ಲಿಯ ಸುಗಂಧವನ್ನು ತನ್ನ ಶೀತಲವಾದ ಪ್ರವಾಹದಲ್ಲಿ ಬೆರಿಸಿ, ರಸಿಕರಿಗೂ ಅರಸಿಕರಿಗೂ ಕೂಡೇ ಹಂಚಿಬಿಡುವನು. ಮದನದೂತಿಯಾದ ಕೋಕಿಲೆಯು ತನ್ನ ಕಲಕಂಠದಿಂದ ವಿಲಾಸಿನಿಯರ ಹೃದಯಗಳನ್ನು ಕಂಪಿಸುವದು. ಇನ್ನೂ ಪ್ರಾತಃಕಾಲವಿದ್ದದರಿಂದ ಸೂರ್ಯನ ಪ್ರಖರವಾದ ಕಿರಣಗಳು ಈ ಸುಖ ಸಾಧನೆಗಳಲ್ಲಿ ಕುಂದು ತಂದಿದ್ದಿಲ್ಲ.

ರಮಾಕಾಂತನು ಇಂದಿರೆಯೊಡನೆ ರಥದಲ್ಲಿ ಕುಳಿತನು. ಈ ಕೋಮ ಲಾಂಗಿಯ ಸಾನ್ನಿಧ್ಯವು ಅವನನ್ನು ವಿಭ್ರಮಗೊಳಿಸಿತು. ಆ ವಸಂತಶೋಭಾ ವೈಚಿತ್ರ್ಯವು ನಾಲ್ಕೂದಿಕ್ಕುಗಳಲ್ಲಿ ಪ್ರಸರಿಸಿದ್ದರೂ, ರಮಾಕಾಂತನ ಚಿತ್ತವು ಅತ್ತ ಹರಿಯಲೊಲ್ಲದು. ಹಿಂಭಾಗದಲ್ಲಿ ಕುಳಿತು, ಗಂಗೆ ಸರದಾರಸಿಂಗರು ವಿಚಿತ್ರವಾದ ವ್ಯಾಜ್ಯ ನಡಿಸಿದ್ದು ಸಹ ಇವರ ಕಿವಿಗೆ ಬೀಳಲಿಲ್ಲ ; ಕುದುರೆಗಳ ಕಡಿವಾಣವನ್ನು ಕೈಯಲ್ಲಿ ತಕ್ಕೊಂಡು ರಥ ಹೊಡೆಯಹತ್ತಿದನು. ಮಗ್ಗಲಲ್ಲಿಯೇ ಆ ಮೋಹ ನಾಂಗಿಯು ಕುಳಿತಿದ್ದಳು; ರಥವು ದಡಕೀ ಹೊಡೆದರೆ ಇಲ್ಲವೆ ತುಸು ಮೈಮರೆತು ಕುಳಿತರೆ ಅವಳ ದೇಹಸ್ಪರ್ಶವಾಗಿ ತನ್ನವಸ್ಥೆ ಏನಾಗುವದೋ ಎಂದಂಜಿ ಕೊಂಡವನಂತೆ ಹುದುಗಿಕೊಂಡು ಕುಳಿತಿದ್ದನು, ಅವಳ ಕೋಮಲಚರಣಗಳೂ, ಸೊಬಗಿನಿಂದುಟ್ಟ ಹಳದೀಬಣ್ಣದ ದುಕೂಲವೂ ಹರಡಿ ಕಂಕಣಗಳಿಂದ ಯುಕ್ತವಾದ ಅವಳ ಮನೋಹರವಾದ ಕರಗಳೂ ಮಾತ್ರ ನಮ್ಮ ರಮಾಕಾಂತನ ದೃಷ್ಟಿಗೆ ಬೀಳುತ್ತಿದ್ದವು, ಆದರೆ ಬೆಳದಿಂಗಳನ್ನೇ ಪಸರಿಸುವದೋ ಏನೋ ಎಂಬಂತಿರುವ ಅವಳ ಪ್ರಸನ್ನವಾದ ಶಶಿಮುಖವೂ, ಮಹಾನ್‌ತಪಸ್ವಿ ಯನ್ನು ಕೂಡಾ ವ್ಯಥಿಸುವಂಥ ಅವಳ ಕಟಾಕ್ಷವೂ ಹೊರಳಿ ನೋಡದ ಹೊರ್ತು

ಹೇಗೆ ಕಾಣಿಸುವವು ? ಅಸಿಧಾರಾವ್ರತಸ್ಥನ ಕಷ್ಟದೊಂದಿಗೆ ಅವನು ರಥ ಹೊಡೆಯಹತ್ತಿದನು. ಮುಂದೆ ಎರಡು ಮಾರ್ಗಗಳೊಡೆಯುತ್ತಿರಲು, ಇಂದಿರೆಯು ಕಯ್ಯೆತ್ತಿ, ಹೀಗೆ ರಥ ಹೊಡೆಯಬೇಕೆಂದು ತೋರಿಸುವಷ್ಟರಲ್ಲಿಯೇ ಕಂಕಣಗಳ ಟಣತ್ಕಾರದೊಂದಿಗೆ ಅವಳ ಕೋಮಲವಾದ ಹಸ್ತವು ರಮಾಕಾಂತನ ಭುಜಕ್ಕೆ ತಗಲಲು, ಕುಸುಮಶರನು ಧನುಸ್ಸಿನ ಟಂಕಾರದೊಡನೆ ತನ್ನ ಐದು ಬಾಣಗಳಿಂದ ಆ ತರುಣನ ಮರ್ಮಭೇದವನ್ನು ಮಾಡಿದನೋ ಎಂಬಂತೆ, ರಮಾಕಾಂತನಿಗೆ ಮೂರ್ಛೆಯೇ ಬಂದಂತಾಯಿತು. ಆದರೂ ಆ ಧೀರನು ಸಮಯವನ್ನು ತಿಳಿದು ಆದಷ್ಟು ಪ್ರಯತ್ನದಿಂದ ತನ್ನ ಚಿತ್ತಸ್ವಾಸ್ಥ್ಯವನ್ನಿಟ್ಟುಕೊಂಡನು. ಇಂದಿರೆಯಾದರೂ ತನ್ನ ಕಯ್ಯೇಕೆ ತಾಕೀತೋ ಎಂದು ಗಾಬರಿಯಾಗಿ ಅಂದದ್ದು "ರಥದಲ್ಲಿ ಸ್ಥಳಸಂಕೋಚವಿದ್ದದರಿಂದ ಮಾರ್ಗ ತೋರಿಸಹೋಗಲು ಫಕ್ಕನೆ ನನ್ನ ಕೈ ತಮಗೆ ತಾಕಿತು, ಕ್ಷಮೆ ಇರಲಿ,"

ರಮಾಕಾಂತನ ಬಾಯಿಂದ ಶಬ್ದಗಳೇ ಹೊರಡಲೊಲ್ಲವು. ಆದರೂ ಗಟ್ಟಿ ಮನಸ್ಸಿನಿಂದ "ಕ್ಷಮೆ ಏಕೆ ಇದರಲ್ಲಿ ? ತಾಕಿದರೇನಾಯಿತು ? ನನ್ನಿಂದೇನೊ ಪ್ರಮಾದವಾಗಲಿಲ್ಲವಷ್ಟೇ ?" ಎಂದು ನುಡಿದು ಇದೊಳ್ಳೇ ಸಮಯವೆಂದು ತಿಳಿದು ಇಂದಿರೆಯ ಆನಂದದಾಯಕವಾದ ಮುಖವನ್ನು ಮುಹೂರ್ತಮಾತ್ರದಲ್ಲಿ ನೋಡಿಕೊಂಡು ರಥ ಹೊಡೆಯಹತ್ತಿದನು.

"ನಾವು ಈಗೆಲ್ಲಿಗೆ ಹೋಗತಕ್ಕದ್ದು?" ಎಂದು ರಮಾಕಾಂತನು ತನ್ನ ಪಾರ್ಶ್ವವರ್ತಿನಿಯನ್ನು ಕೇಳಿದನು.

"ಮೊದಲು ನಾವು ದರ್ಯಾದೌಲತ್ತೆಂಬ ಟೀಪೂ ಸುಲ್ತಾನನ ವಿಲಾಸ ಮಂದಿರವನ್ನೂ ಅದರ ಸುತ್ತಲಿದ್ದ ವಿಸ್ತಾರವಾಗಿದ್ದ ಮನೋಹರವಾದ ತೋಟವನ್ನೂ, ಬದಿಯಲ್ಲಿಯೇ ಅನುಕೂಲಳಾಗಿ ಹರಿಯುವ ಕಾವೇರಿಯನ್ನೂ. ಆ ನದಿಯಾಚೆಗಿದ್ದ ಪ್ರೇಕ್ಷಣೀಯವಾದ ವನಶೋಭೆಯನ್ನೂ ನೋಡಿಕೊಂಡು ಮನೆಗೆ ಹೋಗುವ. ಸಕಲಾದ ಸ್ಥಳಗಳನ್ನು ಯಥಾವಕಾಶವಾಗಿ ನೋಡೋಣಂತೆ."

ಕೂಡಲೇ ರಥವು ದರ್ಯಾದೌಲತ್ತಿನ ತೋಟದ ಬಾಗಿಲಲ್ಲಿ ಬಂದು ನಿಂತಿತು. ಸರದಾರಸಿಂಗನು ಚಟ್ಟನೆ ರಥದಿಂದಿಳಿದು ಕುದುರೆಗಳ ಮುಂದೆ ಬಂದು ನಿಂತನು. ರಮಾಕಾಂತನು ಮೊದಲು ತಾನಿಳಿದು ಆಮೇಲೆ ಜೋಕೆಯಿಂದ ಇಂದಿರೆಯನ್ನಿಳಿಸಿಕೊಂಡನು. ಈರ್ವರೂ ಆ ರಮ್ಯವಾದ ಉಪವನದ ವಿಸ್ತಾರವಾದ ಮಧ್ಯಬೀದಿಯಿಂದ ನಡೆದರು. ಗಂಗೆಯು ಹಿಂಬಾಲಿಸಿ ನಡೆದಳು. ಸುತ್ತಲೂ

ಅನೇಕ ಜಾತಿಯ ಮಧುರವಾಸವುಳ್ಳ ಎಲೆಗಳುಳ್ಳ ಕಂಟಿಗಳೂ, ಸುಗಂಧವನ್ನು ಸ್ರವಿಸುತ್ತಿರುವ ವೃಕ್ಷವಲ್ಲಿಗಳ ಪುಷ್ಪಗಳೂ. ವಿವಿಧವಾದ ವನಶಿಂಗಾರದ ಗಿಡಗಳೂ ಪ್ರೇಕ್ಷಕರ ಮೇಲೆ ಮೋಹಿನೀಮಂತ್ರಗಳ ಪ್ರಯೋಗ ಮಾಡುತ್ತವೆಯೋ ಏನೋ ಎಂಬಂತೆ ತೋರುತ್ತಿದ್ದವು, ಮನೆಗಳಂತೆಯೂ ಗೋಪುರಗಳಂತೆಯೂ ಇನ್ನೂ ಹಲಪ್ರತರದಿಂದಲೂ ಕತ್ತರಿಸಿಟ್ಟ ವೃಕ್ಷವಿಶೇಷಗಳು, ತೋಟಿಗನ ಜಾಣತನದ ಸ್ಮಾರಕಾಲಯಗಳಂತೆ ಪ್ರೇಕ್ಷಣೀಯವಾಗಿದ್ದವು. ನಂದನವನದಂತಿರುವ ಉದ್ಯಾನದ ಮಧ್ಯಭಾಗದಲ್ಲಿ ಕಟ್ಟಿದ ಅತಿಮನೋಹರವಾದ ಟೀಪುವಿನ ವಿಹಾರ ಮಂದಿರವು ನಿರ್ಜನವಾಗಿದ್ದು, 'ಇದರಲ್ಲಿ ಬೇಕುಬೇಕಾದವರು ಸ್ವೇಚ್ಛೆಯಿಂದ ಪ್ರವೇಶ ಮಾಡಬಹುದಲ್ಲವೇ ! ವೈಭವದ ಕಾಲದಲ್ಲಿ ಈ ಮಂದಿರದ ಸೀಮಾಂತರವನ್ನು ಧನವಂತರು ಕೂಡಾ ಸಮೀಪಿಸಿದ್ದರೆ ಅವರವಸ್ಥೆ ಏನಾಗುತ್ತಿತ್ತೋ !' ಎಂದು ಆಲೋಚಿಸುತ್ತ ಆದರಬುದ್ಧಿಯಿಂದ ದೂರದಲ್ಲಿಯೇ ನಿಂತು ನೋಡುತ್ತಿರುವ ರಮಾಕಾಂತನು ಇಂದಿರೆಯ ಸೂಚನೆಯ ಮೇರೆಗೆ ಆ ಮಂದಿರದ ವಿಶಾಲವಾದ ಮೆಟ್ಟಿಲುಗಳನ್ನೇರಿ ಅಲ್ಲಿಂದಲ್ಲಿ ಅವರಿಬ್ಬರೂ ಹೋಗಿ ನಿಂತರು. ಮುಖ್ಯ ಮಂದಿರದ ಹೊರಗೋಡೆಯ ಮೇಲೊಂದು ಮಗ್ಗುಲಲ್ಲಿ, ಟೀಪುವು ಕರ್ನಲ್ ಬೇಲಿಯನ್ನು ಪರಾಜಯ ಮಾಡಿದ ಯುದ್ಧದ ವರ್ಣನೆಯ ಚಿತ್ರಗಳಿದ್ದವು. ಆಚೇಮಗ್ಗಲು ಆ ಕಾಲೀನರಾದ ರಾಜರೂ, ರಾಜಸ್ತ್ರೀಯರೂ, ಸರದಾರರೂ ಮುಂತಾದವರ ಚಿತ್ರಗಳಿದ್ದವು. ಮಂದಿರದೊಳಮಗ್ಗಲಿನ ಗೋಡೆಗಳೆಲ್ಲ ಬಂಗಾರದ ಬಣ್ಣದಿಂದ ಬರೆದ ಅನೇಕ ತರದ ಚಿತ್ರಗಳಿಂದ ತುಂಬಿಹೋಗಿದ್ದವು. ಈ ಮಂದಿರದಲ್ಲಿ ಹೊಸಬರು ಹೊಕ್ಕರೆ ಅವರ ಕಣ್ಣುಗಳೇ ಕುಕ್ಕಿದಂತಾಗುವವು. ಕೆಳಗಿನಂತಸ್ತಿನಲ್ಲೆಲ್ಲ ಅಡ್ಡಾಡಿ ನೋಡಿಕೊಂಡು ಇಂದಿರೆಯೂ ರಮಾಕಾಂತನೂ ಗಂಗೆಯೂ ನದಿಯ ಕಡೆಗೆ ತೆರಳಿದರು. ನದಿಗೆ ಅತಿವಿಶಾಲವಾಗಿ ಕಟ್ಟಿದ ಘಾಟು ಇತ್ತು. ಪಾವಟಿಗೆಗಳನ್ನಿಳಿದು ಕಾವೇರಿಯ ರಮಣೀಯತೆಯನ್ನು ನಿರೀಕ್ಷಿಸುತ್ತ ನೀರಿಗೆ ತಗಲಿದ್ದ ಪಾವಟಿಗೆಯ ಮೇಲೆ ಕುಳಿತು ನದಿಯಲ್ಲಿ ಕಾಲಿಳಿಬಿಟ್ಟುಕೊಂಡು ಈರ್ವರೂ ಕುಳಿತುಕೊಂಡರು. ನದಿಯ ತರಂಗಗಳು ತಮಗೆ ಪರಿಚಿತವಾದ ನೀರಜಗಳ ದರ್ಶನೋತ್ಸುಕತೆಯಿಂದಲೇನೋ ಎಂಬಂತೆ ಇಂದಿರೆಯ ಪಾದಾಂಬುಜಗಳಿಗೆ ಬಡಿಯುತ್ತಿರಲು ಆ ಉದ್ಧತವಾದ ತರಂಗಗಳನ್ನು ನಿರಾಕರಿಸುವಳೋ ಎಂಬಂತೆ ಆ ಮಾನಿನಿಯು ತನ್ನ ಕಾಲುಗಳನ್ನು ನೀರಲ್ಲಿ ವಿನೋದದಿಂದ ಅಲ್ಲಾಡಿಸುತ್ತಿದ್ದಳು; ಸ್ಫಟಿಕದಂತೊಪ್ಪುವ ಆ ನಿರ್ಮಲವಾದ

ಉದಕವನ್ನು ತನ್ನ ಕೈಯಿಂದೆತ್ತಿಹಾಕುತ್ತ ಕೌತುಕಪಟ್ಟು ಇಂದಿರೆಯು ಕೇಳಿದ್ದು :

" ರಮಾಕಾಂತರಾಯರೇ, ಈ ವಿಶುದ್ಧವಾದ ಜಲವನ್ನು ನೋಡಿದಿರಾ. ರಾಮಾಯಣದಲ್ಲಿ ವಾಲ್ಮೀಕಿಮಹರ್ಷಿಗಳು ಪಂಪಾಸರೋವರದ ದಿವ್ಯವಾದ ಸಲಿಲದ ಮೇಲೊಂದುತ್ಪ್ರೇಕ್ಷೆ ಮಾಡಿರುವರು. ತಮ್ಮ ಜ್ಞಾಪಕಕ್ಕೆ ಬರುವುದೇನು?"

" ಅಹುದು ' ಸಜ್ಜನಾನಾಂ ಮನೋ ಯಥಾ ' ಎಂದು ವರ್ಣಿಸಿರುವರು."

" ಓಹೋ! ಒಳ್ಳೇ ಸರಿಯಾಗಿ ಹೇಳಿದಿರಿ. ನಿಮ್ಮ ಗ್ರಂಥಪರಿಶೀಲನವು ಪರಿಪಕ್ವವಾದದ್ದು."

" ಇಷ್ಟು ಸ್ತುತಿಗೇನು ನಾನು ಪಾತ್ರನಲ್ಲ. ಏನೋ ಫಕ್ಕನೆ ನೆನಪಾಯಿತೇ ಹೊರ್ತಾಗಿ ಮತ್ತೇನಿಲ್ಲ." ಎಂದು ನುಡಿದು ರಮಾಕಾಂತನೊಂದು ಕಲ್ಲು ತಕ್ಕೊಂಡು ನೀರಲ್ಲಿ ನೂರಾರು ಸಾರೆ ಪುಟಿಯುವಂತೆಸೆದನು.

ಇಂದಿರೆಯು ರಮಾಕಾಂತರ ವಿನಯವನ್ನು ಕಂಡು ಆದರಯುಕ್ತವಾದ ದೃಷ್ಟಿಯಿಂದ ಅವನ ಮುಖವನ್ನು ನೋಡಿ—

" ಆಧುನಿಕ ಶಿಕ್ಷಣದಿಂದ ಈಗಿನ ತರುಣರ ಮೇಲೆ ದುಷ್ಪರಿಣಾಮಗಳಾಗುತ್ತವೆಂದು ಕೆಲವು ಗುಣಾವಗುಣನಿರೀಕ್ಷಕರ ಮತವಿರುವದೆಂದು ಕೇಳುತ್ತೇನೆ. ಇಂಥ ಶಿಕ್ಷಣ ಹೊಂದಿದ ತರುಣ ತರುಣಿಯರಲ್ಲಿ ಆದ್ಯಕವಿಗಳು ವರ್ಣಿಸಿದಂತೆ ನಿರ್ಮಲಾಂತಃಕರಣದವರು ಸಿಕ್ಕುವರೇನು ? "

" ಅನೇಕರನ್ನು ಕಾಣಬಹುದು, ಶಿಕ್ಷಣಪಂಡಿತಳಾಗಿ ಪಂಪಾಜಲದಂತೆ ನಿರ್ಮಲವಾದ ಭಾವದವಳಾದ ಕುಲವಧುವೊಬ್ಬಳು ನನ್ನ ಹತ್ತರವೇ ಕುಳಿತಿರುವಳಲ್ಲ !" ಎಂದು ದೇವರ ಹೆಸರು ತಕ್ಕೊಂಡು ರಮಾಕಾಂತನು ಆಡಿದನು.

" ಅವ್ವಯ್ಯಾ !! ಈಗಲೇ ನಾನು ಮನಗಂಡ ಕುಶಾಗ್ರಬುದ್ಧಿಯನ್ನು ಯಥಾರ್ಥವಾಗಿ ನಿರೂಪಿಸಿದರೆ ಅದಕ್ಕೆ ತಾವು ಸ್ತುತಿಯೆಂದೆನ್ನೋಣಾಗಲಿಲ್ಲೇನು? ನನ್ನ ಮನಸ್ಸಿನ ನಿರ್ಮಲತೆಯನ್ನು ಕಂಡುಕೊಳ್ಳುವ ಸಾಧನವಿಲ್ಲದಲೇ ಅದು ಪಂಪಾಜಲವಂತಿರುವದೆಂದು ಹೇಳುವದು ಮಾತ್ರ ಸ್ತುತಿಯಲ್ಲವೇ ! ಆಂಗ್ಲರು ತಮ್ಮ ನಾರಿಯರಿಗೆ ಯಥೇಚ್ಛವಾಗಿ ತೋರಿಸುವ ಅತ್ಯಾದರದ ಅನುಕರಣೆಯನ್ನು ತಾವೀಗ ಮಾಡಲಿಲ್ಲವೇನು ?" ಎಂದು ಇಂದಿರೆಯು ಮುಗುಳುನಗೆ ನಕ್ಕು ನುಡಿದಳು.

" ಇವರೀರ್ವರು ಈ ಮೇರೆಗೆ ಕೆಲವು ಹೊತ್ತು ಮಾತಾಡುತ್ತ ಕುಳಿತು ಆ ಮೇಲೆ ಕೈಕಾಲು ತೊಳೆದುಕೊಂಡು, ಆ ಮಹಾನದಿಯ ಅಮೃತೋಪಮವಾದ

ಜಲಪಾನ ಮಾಡಿ ಸುಲ್ತಾನನ ವಿಹಾರಮಂದಿರದ ಕಡೆಗೆ ನಡೆದರು.

"ರಾಯರೇ, ಈ ಪ್ರಾಸಾದದ ಉನ್ನತವಾದ ಶಿಖರದ ಮೇಲೆ ಕುಳಿತು ಕೊಂಡು ನೋಡಿದರೆ, ಈ ಪ್ರದೇಶದ ಯಾವತ್ತೂ ಭಾಗಗಳು ಸ್ಪಷ್ಟವಾಗಿಯೂ ರಮಣೀಯವಾಗಿಯೂ ಕಾಣುವವು. ಇಚ್ಛೆಯಿದ್ದರೆ ಮೇಲೆ ಹತ್ತಿ ಹೋಗೋಣ ನಡೆಯಿರಿ."

"ನೈಸರ್ಗಿಕಶೋಭೆಯನ್ನವಲೋಕಿಸುವ ಉತ್ಸುಕತೆಯು ನಿಮಗೆ ಬಹಳ ವಾಗಿರುವಂತೆ ತೋರುತ್ತದೆ" ಎಂದು ರಮಾಕಾಂತನಂದನು.

"ಇಲ್ಲಿಯೇ ನೋಡಿರಿ: ಈ ಕೃತ್ರಿಮೋದ್ಯಾನಕ್ಕೂ ಅತ್ತಕಡೆಗಿದ್ದ ಸ್ವಾಭಾವಿಕ ಶೋಭೆಗೂ ಎಷ್ಟಂತರವಿರುವದು! ನಾಟಕದಲ್ಲಿಯ ಪಾತ್ರಗಳಿಗೂ ಅವರು ನಿರೂಪಿಸುವ ನಿಜವಾದ ಮಹಾತ್ಮರಿಗೂ ಇದ್ದಷ್ಟು ಭೇದವಿರುವದಲ್ಲವೇ? ಮೇಲೆ ಹೋಗಿ ನೋಡಲಾಗಿ ತಮಗೂ ಹಾಗೇ ತೋರುವದು."

ಆ ರಾಜಮಂದಿರದ ಮೇಲ್ಮಾಳಿಗೆಯನ್ನೇರಿ ನೋಡಲಾಗಿ, ರಮಾಕಾಂತ ನಿಗೆ ಸುತ್ತುಮುತ್ತಲಿನ ಯಾವತ್ತೂ ಪ್ರದೇಶಗಳು ಒಳ್ಳೇ ಚಿತ್ರಮಯವಾಗಿ ಕಾಣಿಸಿದವು. ಪಟ್ಟಣಕ್ಕೆ ಸುತ್ತುಗಟ್ಟಿದ ಕಾವೇರಿಯು ವಿಶಾಲಹೃದಯನಾದ ಶ್ರೀರಂಗನಾಥನ ಕೊರಳಿಗೆ ಹಾಕಿದ ಅದ್ಭುತವಾದ ಮಲ್ಲಿಗೆಯ ಮಾಲೆಯಂತೆ ಶೋಭಿಸುತ್ತಿರುವದು. ವನಲಕ್ಷ್ಮಿಯು ಚಿತ್ರವಿಚಿತ್ರವಾದ ಕಸೀದೆಯುಳ್ಳ ಹಸಿರು ಸೀರೆಯನ್ನುಟ್ಟು ವಯ್ಯಾರ ಮಾಡುವಳೋ ಎಂಬಂತೆ ದಕ್ಷಿಣ ಮಾರುತಸಿಂದ ಅಲ್ಲಾಡಿಸಲ್ಪಟ್ಟ ಸಂದಟಿತವಾದ ಪಲ್ಲವಗಳುಳ್ಳ ವೃಕ್ಷಸಮುದಾಯವು ಕಂಗೊಳಿ ಸಿತು. ಗೋಗಣಗಳನ್ನು ವನಕ್ಕೆ ತೆಗೆದುಕೊಂಡು ಹೋಗುವ ಗೋಪಾಲರು ಕೊಳಲುಗಳನ್ನು ಮಂಜುಳವಾಗಿ ಊದುತ್ತ ಆನಂದದೊಡನೆ ನಡೆದಿರುವರು. ಯುವತಿಯರಾದ ಮಾಲಗಿತ್ತಿಯರು ಹಣ್ಣುಹಂಪಲವ ಪುಟ್ಟಿಗಳನ್ನು ಹೊತ್ತು ಕೊಂಡು ಹಾದಿಸಾಗಬೇಕೆಂದು. "ಕೋಲು ರನ್ನದ ಕೋಲು ಚಿನ್ನದ ಕೋಲು ಮುತ್ತಿನ ಹವಳದ" ಎಂಬ ಪದವನ್ನು ಉತ್ಸಾಹದಿಂದ ಎಲ್ಲರೂ ಸುಸ್ವರವಾಗಿ ದನಿಗೊಟ್ಟು ಹಾಡುತ್ತಬರುವದನ್ನು ಕೇಳಿದರೆ, ದೊರಾಸ್ವಾಮಿಯ ಆರೋಹಣ ಅವರೋಹಣಗಳಿಂದ ಗಾನಮಾಡುವದು ನಿಸ್ಸಾರವಾಗಿ ತೋರುವದು.

"ರಮಾಕಾಂತರೇ, ಅತ್ತ ನೋಡಿರಿ. ಆ ಗಗನಚುಂಬಿತವಾದ ಮರವೂ ಸುತ್ತಲಿನ ಸೌಂದರ್ಯವೂ ಹೇಗೆ ರಮಣೀಯವಾಗಿ ಕಾಣುತ್ತವೆ! ವನ ದೇವತೆಯ ಸಂಪತ್ತು ಕಾಪಾಡಲು ದಕ್ಷನಾಗಿ ನಿಂತ ರಕ್ಷಕನಂತೆ ಆ ವೃಕ್ಷವು

ಪ್ರೇಕ್ಷಣೀಯವಾಗಿ ನನ್ನ ಸಮಕ್ಷದಲ್ಲಿ ನಿಂತಿರುವದು."

"ಶಾಬಾಸು ! ರಸಜ್ಞತೆಯಲ್ಲದೆ ಕವಿತ್ವವು ಕೂಡಾ ನಿಮ್ಮನ್ನಾಶ್ರಯಿಸಿರುವದು" ಎಂದು ಮನಃಪೂರ್ವಕವಾಗಿ ನುಡಿದನು.

ಇಂದಿರೆಯು ಚಕಿತಳಾಗಿ, ನಾಲಿಗೆ ಕಚ್ಚಿಕೊಂಡು ರಮಾಕಾಂತನನ್ನು ಕಡೆಗಣ್ಣಿನಿಂದ ನೋಡಿದಳು. ಪುಣ್ಯಕ್ಕೆ, ಆ ತರುಣನ ದೃಷ್ಟಿಯು ಬೇರೆ ಕಡೆಗೆ ಹೋಗಿತ್ತು. ಇಲ್ಲವಾದರೆ ಈ ಕಟಾಕ್ಷಬಾಣವು ಅವನ ಹೃದಯವನ್ನು ಎಷ್ಟು ಪರಿಯಶಾಗಿ ಭೇದಿಸುತ್ತಿತ್ತೋ ಭಗವಂತನಾದ ಪಂಚಬಾಣನೇ ಬಲ್ಲನು !

"ಇಂದಿರಾಬಾಯಿ, ಸಂದಟಿತವಾದ ಆ ವನದ ಮಧ್ಯದಲ್ಲಿದ್ದ ಆ ಚಿಕ್ಕ ಪರ್ವತವು ಪ್ರಮದವನದಲ್ಲಿ ಧುಮುಕಿದ ಗಜೇಂದ್ರನಂತೆ ಕಾಣುವದಲ್ಲವೇ, ನೋಡಿರಿ !"

ಇಂದಿರೆಯು ಈ ಸಾಮ್ಯತೆಗೆ ಮೆಚ್ಚಿ ವಿಸ್ಮಿತಳಾಗಿ "ಆಗಂತುಕನಾದ ಆ ಮತ್ತಗಜರಾಜನನ್ನು ಕಂಡು ಭೀತಿಯಿಂದಾಕ್ರೋಶಿಸುತ್ತಿರುವ ಪ್ರಮುದಾಗಣದಂತೆ ಮಯೂರಿಗಳು ಹೇಗೆ ಕಲಕಲಾಟವನ್ನೆಬ್ಬಿಸಿರುವವು ಕೇಳಿರೋಣಾಯಿತೇನು ?" ಎಂದು ನಿಪುಣತೆಯಿಂದುತ್ತರಕೊಟ್ಟಳು.

ಇವಳ ಚಾತುರ್ಯಕ್ಕೆ ಬೆರಗಾಗಿ ರಮಾಕಾಂತನು ಇಂದಿರೆಯ ಬೆನ್ನು ಚಪ್ಪರಿಸಲಿಕ್ಕೆ ಕಯ್ಯೆತ್ತಿದವನು, ಧೈರ್ಯಸಾಲದೆ ಕಲ್ಲುಹಾಸಿಗೆಯ ಮೇಲೆ ಒಳಿತಾಗಿ ತನ್ನ ಹಸ್ತವನ್ನಪ್ಪಳಿಸಿದನು.

ಈ ಪ್ರಕಾರ ಮನೋವೇಧಕವಾದ ಸಂವಾದವು ಕೆಲಹೊತ್ತು ನಡೆದನಂತರ ಇಂದಿರೆಯು :

"ರಮಾಕಾಂತರಾವ, ನೀವಿಲ್ಲಿಗೆ ಬಂದದರಿಂದ ಆನಂದದಿಂದ ಹೊತ್ತು ಕಳೆಯಲಿಕ್ಕೆ ನನಗೊಳ್ಳೇ ಸಾಧನವಾಗಿರುವದು. ನಮ್ಮಲ್ಲಿ ಸ್ನೇಹಿತರು ಬರುವದೇ ಕಡಿಮೆ. ಅದರಲ್ಲಿ ಮಾರ್ಮಿಕರಂತೂ ಇಲ್ಲೇ ಇಲ್ಲ. ಅನಾಯಾಸವಾಗಿ ತಮ್ಮಂಥ ಸೂಜ್ಞರ ಪರಿಚಯವಾಯಿತು. ಪರಸ್ಪರ ಸ್ನೇಹಭಾವವಿರಬೇಕೆಂದು ಬೇಡಿಕೊಳ್ಳುತ್ತೇನೆ." ಎಂದು ವಿನಂತಿ ಮಾಡಿಕೊಂಡಳು.

"ಈ ವಿಜ್ಞಾಪನೆಯನ್ನು ನಾನೇ ಮಾಡಿಕೊಳ್ಳತಕ್ಕವನಿದ್ದೆನು. ಆದರೆ ಮಾನಿನಿಯರ ಕೂಡ ಮಾತಾಡಬೇಕಾದರೆ ನನಗೆ ಮುಳ್ಳುಮೇಲೆ ನಡೆದಂತಾಗುತ್ತದೆ. ಅವರು ಯಾವಾಗ್ಯೆ ನನ್ನನ್ನು ಅನಭಿಜಾತನೆಂದು ಧಿಕ್ಕರಿಸುವರೋ ಎಂಬ ಭೀತಿಯು ನನ್ನನ್ನು ಬಿಡುವದೇ ಇಲ್ಲ."

"ರಾಯರೇ, ತಮ್ಮ ನಡತೆಯು ಸ್ತುತ್ಯವಾದದ್ದೇ. ಆದರೆ ಅಷ್ಟು ಕಾತುರ ಭಾವವನ್ನು ಧರಿಸುವ ಕಾರಣವಿಲ್ಲ. ಏಕೆಂದರೆ ತನ್ನಾಚರಣೆಯು ವಿಶುದ್ಧವಾದದ್ದೆಂದು ನಾನು ಈಗ ಹೇಳಬಹುದು. ಅಬಲೆಯರು ಪುರುಷರ ದೋಷಗಳನ್ನೇ ಹುಡುಕುತ್ತಿರುವರೆಂದು ತಿಳಿಯಬೇಡಿರಿ. ಗ್ರಾಮ್ಯವಾದಾಚರಣೆ ಕಂಡರೆ ಮಾತ್ರ ನಮಗೆ ಅಸಹ್ಯವೆನಿಸುವುದು. ನಾವೀರ್ವರು ಇಂದಿನಿಂದ ಸ್ನೇಹಿತರಾಗಿರುವೆವಷ್ಟೇ?"

"ಇದರಲ್ಲೇನು ಸಂದೇಹ!"

"ಮನಃಪೂರ್ವಕವಾಗಿ ಹೇಳುತ್ತೀರಲ್ಲವೆ?" ಎಂದು ಇಂದಿರೆಯು ತನ್ನ ಪಟ್ಟೆ ಮುಂಗುರುಳನ್ನು ಬೆರಳಿನಲ್ಲಿ ತಿರಿಗಿಸುತ್ತ ಮೋರೆ ಮೇಲಕ್ಕೆತ್ತದಲೇ ರಮಾಕಾಂತನ ಮುಖದ ಕಡೆಗೆ ನೋಡಿ ನುಡಿದಳು:

"ಇನ್ನು ಹೆಚ್ಚಿಗೆ ಸ್ಪಷ್ಟವಾಗಿ ಹೇಗೆ ಹೇಳಬೇಕು? ತಮ್ಮ ಲೋಭವೇ ಸ್ಥಿರವಾಗಿದ್ದರಾಯಿತು."

"ಏನನ್ನೋಣಾಯಿತು? ನನ್ನ ಸ್ನೇಹಭಾವವು ಅಸ್ಥಿರವಾದದ್ದೇ? ದೇವಮಾನಿಯಮ್ಮನವರು ನನ್ನ ಮೇಲೆ ನಂಬಿಗೆಯಿಡಬೇಡಿರೆಂದು ನಿಮಗೆ ಹೇಳಲಿಲ್ಲವಲ್ಲ! ರಮಾಕಾಂತರಾಯರೇ, ನಾನು ಕಂಡವರ ಕೂಡ ಸ್ನೇಹ ಬೆಳೆಸಲಿಕ್ಕೆ ಹೋಗುವದಿಲ್ಲ. ಎಂದಾದರೂ ನಾನು ಸ್ನೇಹ ಮಾಡಲಿಚ್ಛಿಸಿದರೆ ಜನರ ಗುಣಾಚರಣೆಗಳನ್ನು ಚಂದಾಗಿ ಪರೀಕ್ಷಿಸಿ ಅವರ ಕೂಡ ನಿರಂತರದ ಸ್ನೇಹಭಾವದೊಡನಿರುವೆನು."

"ಇಂದಿರಾಬಾಯಿ, ನನ್ನಿಂದ ನಿಜವಾಗಿ ತಪ್ಪಾಗಿದ್ದರೆ ಕ್ಷಮಿಸಿರಿ. ತಮ್ಮ ಉಜ್ವಲವಾದ ಮನಸ್ಸೂ, ಮನೋಹರವಾದ ರೂಪಲಾವಣ್ಯಗಳೂ, ರಾಜಕನ್ನೆಯರಲ್ಲಿ ಕೂಡಾ ಇರುವದು ದುರ್ಲಭ. ನಾನು ತಮ್ಮನ್ನು ಸಂತೋಷಪಡಿಸುವದಕ್ಕಾಗಿ ಹೀಗನ್ನುವೆನೆಂದು ತಿಳಿಯಬೇಡಿರಿ. ನಿಮ್ಮಂಥವರ ಸ್ನೇಹಕ್ಕೆ ನಾನೇ ಪಾತ್ರನಿರುವೆನೋ, ಇಲ್ಲೋ ಎಂಬ ಶಂಕೆಯಿಂದಲೇ ಹಾಗೆ ಪ್ರಶ್ನೆ ಮಾಡಿದೆನು. ತಮ್ಮ ಸ್ನೇಹಾಸ್ಪದನಾಗಿರುವೆನೆಂದು ತಿಳಿದು ನಾನು ಧನ್ಯನಾಗಿರುವೆನು."

"ಹೀಗೇನು!" ಎಂದಿಂದಿರೆಯು ನಕ್ಕು ನೀವು ನಿಮ್ಮ ಸೌಜನ್ಯಾತಿಶಯವನ್ನು ಸ್ವಲ್ಪ ಕಡಿಮೆ ಮಾಡಿರಿ. ಸ್ನೇಹಿತಳಾಗಿರುವೆನೆಂದು ಹೇಳುತ್ತೇನೆ. 'ತಾವು' 'ತಮಗೆ' ಮುಂತಾದ ಶಬ್ದಗಳನ್ನು ನನ್ನ ಕೂಡ ಮಾತಾಡುವಾಗ್ಯೆ ಉಪಯೋಗಿಸಬೇಡಿರಿ."

"ನಿಮ್ಮಿಷ್ಟದಂತಾಗಲಿ" ಎಂದು ರಮಾಕಾಂತನು ನಗೆ ಮುಖದಿಂದ ನುಡಿದನು.

"ದೇವಯಾನಿಯಮ್ಮನವರು ನಿಮಗಾಪ್ತರಾಗಬೇಕೇನು ?" ಎಂದು ಇಂದಿರೆಯು ಕೇಳಿದಳು.

"ಇಲ್ಲ. ಅವರು ನಮ್ಮ ತಂದೆಗಳ ಪರಿಚಯಸ್ಥರು. ಅವರನ್ನು ಹಿರಿಯರೆಂದು ತಿಳಕೊಳ್ಳಲಾರಂಭಿಸಿದ್ದೇನೆ."

"ಇನ್ನೂ ಎಷ್ಟು ದಿನ ನೀವಿಲ್ಲಿರುವವರು ?"

"ಕೇವಲ ದೇವಯಾನಿಯಮ್ಮನವರ ದರ್ಶನಲಾಭಕ್ಕಾಗಿ ಬಂದಿರುವೆನು ; ಹೊರ್ತಾಗಿ ಮತ್ತೇನೂ ನನ್ನ ಕೆಲಸವಿಲ್ಲಿಲ್ಲ ; ನಾಳೆಯೊಂದು ದಿನ ಇಲ್ಲಿದ್ದರೆ ಬಹಳಾಯಿತು."

"ಏಕೆ ನಾಲ್ಕುದಿನ ಹೆಚ್ಚಿಗಿದ್ದರೇನಾಗುವದು ? ಬೆಂಗಳೂರಲ್ಲೇನಾದರೂ ವಿಶೇಷಕೆಲಸವಿರುವದೇನು ?"

"ಅಲ್ಲಿಯಾದರೂ ಏನೂ ಇಲ್ಲ, ಇದು ಸತ್ಯ. ಆದರೂ ಏನಾದರೂ ಉದ್ಯೋಗ ಮಾಡಬೇಕಲ್ಲ. ಸದ್ಯಕ್ಕೆ ನಾನು ಬಡವನೇ ಸರಿ. ಹಣಗಳಿಸುವ ದಕ್ಕೇನಾದರೊಂದಾಟ ಹೂಡಲೇಬೇಕಲ್ಲವೇ ? ಬೆಂಗಳೂರಲ್ಲಿ ನನ್ನ ಸ್ನೇಹಿತರ ಸಮ್ಮತಿಯಿಂದ ಏನು ಮಾಡಬೇಕೆಂಬುದನ್ನು ಗೊತ್ತುಪಡಿಸಬೇಕಾಗಿದೆ."

"ಯಾವ ಉದ್ಯೋಗವನ್ನು ಮಾಡಲಿಚ್ಛಿಸುವಿರಿ ? ಪುರೋಭಾಗಿನಿಯಂತೆ ಹೆಚ್ಚು ಮಾತಾಡಿದ್ದಕ್ಕೆ ಕ್ಷಮೆ ಇರಲಿ."

ಎಂಜಿನಿಯರ ಪರೀಕ್ಷೆಯಾಗಿದೆ. ಇದೊಂದುದ್ಯೋಗದ ಭಾಗವೇ ಹೊರ್ತಾಗಿ ಯಾವ ಉದ್ಯೋಗವನ್ನಾದರೂ ಕೈಕೊಳ್ಳಬಹುದಲ್ಲವೇ ?"

"ವಿದ್ವಾಂಸರಿಗೆ ಯಾವದು ತಾನೇ ಅಸಾಧ್ಯವಾಗಿರುವದು ?" ಎಂದು ಇಂದಿರೆಯೆಂದಳು.

"ಹಾಗಿರಬಹುದು, ಆದರೆ ಎಲ್ಲ ಉದ್ಯೋಗಗಳ ಕೆಲವು ದುಡ್ಡಿನ ಕಯ್ಯಲ್ಲಿರುವದಷ್ಟೇ ?"

"ಪಂಡಿತರನ್ನು ದುಡ್ಡು ತಾನೇ ಅರಸುತ್ತ ಬರುತ್ತದೆ. ಲಕ್ಷ್ಮೀ ಸರಸ್ವತೀ ಬೀಗಿತಿಯರು ಅತ್ತೆಸೊಸೆಯರಾದ್ದರಿಂದ ಸರಸ್ವತಿಯು ಪ್ರೀತಿಯ ಮಕ್ಕಳನ್ನು ಲಕ್ಷ್ಮೀದೇವಿಯು ಪೋಷಿಸುತ್ತಾಳೆಂದು [illegible] [illegible] [illegible] ಮಾಡಿ ಹೇಳಿದುಂಟು. ಆದರೆ ಇದರಲ್ಲೇನೂ ಅಭ್ಯಂತರವಿಲ್ಲ. ಸರಸ್ವತಿ

ದೇವಿಯರ ಮಕ್ಕಳು ತಾವಾಗಿ ಧನವನ್ನೊಲ್ಲದಿದ್ದರೆ ಯಾರೇನು ಮಾಡುವರು ?"

"ಯಾರನ್ನುವರು ಹೀಗೆ ? ಅದಿರಲಿ. ಬೆಂಗಳೂರಲ್ಲಿ ನಿಮ್ಮ ಮನೆ ಯಿರುವದಲ್ಲವೇ ? ನಿಮ್ಮ ತಂದೆಗಳಲ್ಲಿರುವರು, ನೀವಿಲ್ಲಿರುವದೇಕೆ ?" ಎಂದು ರಮಾಕಾಂತನು ಕೇಳಿದನು.

"ಒಂದು ಮನೆ ಪೇಟೆಯಲ್ಲಿರುವದು. ಆದರೆ ನಮ್ಮ ತಂದೆಗಳು ಮಲ್ಲೇಶ್ವರ ದಲ್ಲೊಂದು ಹೊಸ ಮನೆ ಕಟ್ಟಲಾರಂಭಿಸಿರುವರು. ಮನೆಯು ಬಹು ರಮಣೀಯ ವಾಗುವದು. ಮಳೆಗಾಲ ಬರುವದರೊಳಗಾಗಿಯೇ ಮನೆ ಕಟ್ಟುವ ಕೆಲಸ ಮುಗಿ ಯುವದು. ತಿಂಗಳೆರಡುತಿಂಗಳಲ್ಲಿಯೇ ನಾನೂ ಬೆಂಗಳೂರಿಗೆ ಹೋಗತಕ್ಕ ವಳು. ಬೆಂಗಳೂರು ತಮ್ಮ ಮನಸ್ಸಿಗೆ ಬಂತೇನು ?"

"ಏನು ಕೇಳುವದು ? ಆ ಪಟ್ಟಣವನ್ನು ಬಿಟ್ಟು ಬೇರೆ ಕಡೆಗೆ ಹೋಗ ಬಾರದೆಂದು ನಿಶ್ಚಯ ಮಾಡಿರುವೆನು."

"ಹಾಗಾದರೆ ಬಂಗಾರದಂತಾಯಿತು. ನಿಮ್ಮಂಥವರ ಕೂಡ ಹರಟೆ ಹೊಡೆದರೂ ಎಷ್ಟು ಮಾತುಗಳನ್ನು ಕಲಿತುಕೊಳ್ಳಬಹುದು." ಎಂದು ಹೇಳಿ ಇಂದಿರೆಯು ರಮಾಕಾಂತನಿಗೆ ಗಡಿಯಾರ ತೆಗೆಯಲಿಕ್ಕೆ ಹೇಳಿದಳು. ರಮಾ ಕಾಂತನು ತನ್ನ ಚಿನ್ನದ ಗಡಿಯಾರ ತೆಗೆದು ನೋಡಲಾಗಿ ಹನ್ನೊಂದೂವರೆ ಗಂಟೆ ಯಾಗಿತ್ತು.

"ಓಹೋ ! ಹೊತ್ತು ಬಹಳಾಯಿತು ; ದೇವಯಾನಿಯಮ್ಮನವರು ಕೋಪಿಸಿಕೊಂಡಿರುವರಾಗಿದ್ದೀತು." ಎಂದು ರಮಾಕಾಂತನು ತನ್ನ ರುಮಾಲು ಸುತ್ತಿಕೊಂಡು ಬಡಿಗೆಯನ್ನೆತ್ತಿಕೊಂಡನು.

"ದೇವಯಾನಿಯರ ಕೋಪ ಹೇಗೇ ಇರಲಿ ; ನಮ್ಮ ಸರದಾರಸಿಂಗನ ಕೋಪ ಹಿಡಿಯುವದೇ ಮೊದಲಿಗೆ ಸಾಕುಬೇಕಾಗುವದು, ರಥದ ಹತ್ತಿರ ಹೋದ ಕೂಡಲೆ ಆ ವಿಶ್ವಾಸಿಕನಾದ ಸೇವಕನು 'ಹಾಗಾಯಿತು ಹೀಗಾಯಿತು. ನಿಮ್ಮ ಹರಟೆಗೆ ಕಡೆಯಿಲ್ಲ ಮೊದಲಿಲ್ಲ' ಎಂದು ವಿಸ್ತಾರವಾದದ್ದೊಂದು ಉಪನ್ಯಾಸ ವನ್ನೇ ಮಾಡುವನು. "ಗಂಗಾ, ಏಳಮ್ಮಾ" ಎಂದು ನುಡಿದು ಇಂದಿರೆಯು ಸಿದ್ಧಳಾದಳು. ಮೂವರೂ ಲಗುಬಗೆಯಿಂದ ಕೆಳಗಿಳಿದು ರಥದ ಕಡೆಗೆ ನಡೆದರು. ಸರದಾರಸಿಂಗನು ರಥದ ಬಳಿಯಲ್ಲಿ ನಿಂತು ಇವರಿನ್ನೂ ಏಕೆ ಬರಲೊಲ್ಲರೆಂದು ಉತಾವಳಿಯಾಗಿದ್ದನು. ಸಂಗಡಲೇ, ಶಚೀಪುರಂದರರಂತೆ ಬರುವ ಈ ಯುಗ್ಮ ವನ್ನು ಕಂಡು, ಅವನ ಮನದಲ್ಲಿ ಸಿಟ್ಟೆಲ್ಲವು ಇಳಿದುಹೋಯಿತು.

"ಸರದಾರಸಿಂಗ, ಬಹಳ್ಹೊತ್ತಾಯಿಂತೇನಪ್ಪಾ ?" ಎಂದು ಇಂದಿರೆಯು ಕೇಳಿದಕೂಡಲೆ, ಮೇಲೆ ಹೇಳಿದಾತೆ ತನ್ನ ಉಪನ್ಯಾಸ ಮಾಡುತ್ತ ಕುದುರೆಗಳನ್ನು ರಥಕ್ಕೆ ಜೋಡಿಸಿದನು. ರಮಾಕಾಂತನು ಒಳ್ಳೇ ವೇಗದೊಂದಿಗೆ ದೇವಯಾನಿಯು ಮನೆಗೆ ರಥ ಹೊಡೆತಂದು ನಿಲ್ಲಿಸಿದನು. ರಥದ ಸಪ್ಪಳ ಕೇಳಿ ದೇವಯಾನಿಯು ಕೆಳಗಿಳಿದು ಬಂದು—

"ಬಂದಿರಾ ! ಬಹುಬೇಗ ಬಂದಿರಿ ! ಇನ್ನೂ ತಾಸೆರಡು ತಾಸು ನಿಂತು ಬರುವಿರೆಂದು ಮಾಡಿದ್ದೆನು, ಶೇಷಮ್ಮನ ಅಡಿಗೆಯಾಗಿ ಮನಸ್ವೀ ಹೊತ್ತಾಯಿತು !"

"ಇಂದಿರಾಬಾಯಿ ಮಾತ್ ಕೇಳ್ಬರೆ ಲೋಕ್ ಬೇಜಾರ ಆಗತೇ. ರಮಾಕಾಂತ ಮಹಾರಾಜನ ವಾಗ್ರಹಸ್ತ ಏನ್ ಮಾಡತಾರೆ" ಎಂದು ಸರದಾರಸಿಂಗನು ದೇವಯಾನಿಯು ಸನ್ನಿಧನಾಗಿ ನುಡಿದನು.

"ನಿನ್ನ ಮಾತು ಕೇಳುತ್ತ ನಾವು ನಿಂತರೆ ಕುದುರೆಗಳನ್ನು ಹೀಗೇ ನಿಲ್ಲಿಸಿಕೊಂಡು, ಸಂಜೇವರೆಗೆ ಮಾತನಾಡುವದನ್ನು ಬಿಟ್ಟರೆ ನನ್ನ ಹೆಸರು ಬದಲಿಡಬೇಕು." ಎಂದಿಂದಿರೆಯು ವಿನೋದದಿಂದ ಪ್ರತ್ಯುತ್ತರ ಕೊಟ್ಟಳು.

"ಬಾಯಿಸಾಬ 'ಇಂದಿರಾ' ನಾವ್ ಠೀಕ ಅದಾನ್ ಕಳ್ರೋಕೀಬಾದರ್" ಎಂದು ಸ್ವಲ್ಪದರಲ್ಲಿಯೇ ಇಂದಿರೆಯು ಕೋಟಿಕ್ರಮವನ್ನು ಖಂಡಿಸಿದನು.

"ಇಂದಿರಕ್ಕಾ, ದಯಮಾಡಿ ಸುಮ್ಮಗಿರಮ್ಮಾ, ತಡಮಾಡಿ ಬಂದದ್ದಲ್ಲದೇ ಮೇಲೆ ಈ ಹರಟೆಯೇ ! ಈ ದಿನ ಇಂದಿರೇ ನೀನಿಲ್ಲಿಯೇ ಭೋಜನಕ್ಕೆ ನಿಲ್ಲು. ಸರದಾರಸಿಂಗ ಕುದುರೇ ಕಟ್ಟಿ ಇಂದಿರಾಬಾಯಿಯುವರ ಮನೆಗೆ ಹೋಗಿ ಅವರಿಲ್ಲಿಯೇ ಊಟಮಾಡುವರೆಂದು ಹೇಳಿಬಾ." ಎಂದಾಜ್ಞಾಪಿಸಿ ಇಂದಿರೆಯು ಕಯ್ ಹಿಡುಕೊಂಡು ಉಪ್ಪರಿಗೆಯ ಮೇಲೆ ದೇವಯಾನಿಯು ನಡೆದಳು. ರಮಾಕಾಂತನೂ ಇವರ ಸಂಗಡಲೇ ನಡೆದನು.

"ಗಂಗಾ, ಶೇಷಮ್ಮಗೆ ಎಲೆಗಳನ್ನು ಬಡಿಸಹೇಳು. ನಾವೀಗಲೇ ಬರುವೆವು" ಎಂದು ದೇವಯಾನಿಯು ಹೇಳಿದಳು.

ಭೋಜನಕ್ಕೆ ಕುಳಿತಾಗ್ಯೆ ದೇವಯಾನಿಯು ರಮಾಕಾಂತನನ್ನು ನೋಡಿ "ಏನೇನು ನೋಡಿಬಂದಿರಿ ?" ಎಂದು ಕೇಳಿದಳು.

"ಜಗನ್ನಾದೌಲತ್ ವಿಲಾಸಮಂದಿರವನ್ನೂ ಅಲ್ಲಿಯ ರಮಣೀಯವಾದ ತೋಟವನ್ನೂ ನೋಡಿದೆವು."

"ಆಯಿತೇನು! ಇಂದಿರೆಯು ಕೂಡ ನೋಡಹೋದರೆ, ಪ್ರತಿಯೊಂದು ವಸ್ತುವನ್ನೂ ಬಣ್ಣಿಸುತ್ತ ನಿಂತವಳು ಮುಂದಕ್ಕೆ ಸಾಗುವದೇ ಇಲ್ಲ. ಹೀಗಾದರೆ ಎಲ್ಲವನ್ನೂ ನೋಡಬೇಕಾದರೆ ನಿನಗಿಡೀ ತಿಂಗಳು ಸಾಲಲಿಕ್ಕಿಲ್ಲ."

"ನಿಮ್ಮ ತಿಥಿಗಳಿಗಿದೇ ಸಂಜೆಗೆ ಮಂತ್ರಾಕ್ಷತೆಗಳನ್ನು ಕೊಡಬೇಕಾಗಿದೆಯೇನು ದೇವಯಾನಿಯಮ್ಮಾ ?" ಎಂದಿಂದಿರೆಯು ಕುಚೋದ್ಯ ಮಾಡಿ ಕೇಳಿದಳು.

"ಅರ್ಥಕ್ಕೆ ಅನರ್ಥ ಮಾಡುವದರಲ್ಲಿ ನೀನು ಬಲು ಜಾಣೆ, ನಿನಗೆ ಆತನನ್ನು ಒಂದು ತಿಂಗಳ ಮಟ್ಟಿಗೆ ಇಟ್ಟುಕೊಳ್ಳುವದದೆ ಅಲ್ಲವೇ ?" ಎಂದು ದೇವಯಾನಿಯು ತೀಕ್ಷ್ಣವಾದ ವಾಗ್ಬಾಣ ಬಿಟ್ಟಳು.

ಪ್ರಸಂಗವು ತನ್ನ ಮೈಮೇಲೆಯೇ ಹೊರಳುವದೆಂದು ತಿಳಿದು ಇಂದಿರೆಯು ಈ ಮಾತೇ ಬಿಟ್ಟು ಶೇಷಮ್ಮಗೆ ಅಂದದ್ದು: "ಶೇಷಮ್ಮಾ, ಎಂದೆಂದೂ ನಿಮ್ಮಡಿಗೆ ಕೆಡುವದಿಲ್ಲ. ಈ ಚಿತ್ರಾನ್ನವೆಷ್ಟು ರುಚಿಯಾಗಿದೆ. ವಡೆಗಳು ಬಹಳೇ ಕುಸುರಾಗಿವೆ! ಹುಗ್ಗಿಯು ಸುವಾಸನೆಯಂತೂ ಮನೆಯೆಲ್ಲ ಇಡಿಗಿದೆ. ದೇವಯಾನಿಯಮ್ಮಾ, ಸಾರು ಸುರಿದು ನೋಡಿರಿ, ನಾಲಿಗೆಯು ಕಿಲ್ಬಿಷವೇ ಬಿಟ್ಟು ಹೋಗುವದು."

ಶೇಷಮ್ಮನ ಅಡಿಗೆಯೇ ಹಾಗಿರುವದು, ಆದರೆ ಈಗ್ಯೆ ನನ್ನ ನಾಲಿಗೆಗೆ ರುಚಿಯೆಲ್ಲಿ! ರಮಾಕಾಂತನು ಬಂಗಾಲ ಮಹಾರಾಷ್ಟ್ರ ದೇಶಗಳಲ್ಲಿದ್ದವನು, ಆವನಿಗೆ ಸೀ ಪದಾರ್ಥ ಬೇಕು. ಶೇಷಮ್ಮಾ, ಅವನ ತಾಟಿನಲ್ಲೆರಡು ಜಿಲ್ಬಿಗಳನ್ನು ಚಲ್ಲಿರಿ."

"ನನಗೆ ಬೇಕಾದಷ್ಟು ತಿನ್ನುವೆನು ಆಗ್ರಹ ಬೇಡ. ಹಿಡಿಸಲಾರದಷ್ಟು ತಿಂದು ಕಕ್ಕಸಬಟ್ಟು ಹೊರಳಾಡುತ್ತ ಬಿದ್ದುಕೊಳ್ಳುವದರಲ್ಲೇನು ಸುಖವಿರುವದು ?" ಎಂದು ರಮಾಕಾಂತನು ಹೇಳಿದನು.

ಭೋಜನೋತ್ತರ ದೇವಯಾನಿಯೂ, ರಮಾಕಾಂತನೂ ಉಪ್ಪರಿಗೆ ಮೇಲೆ ಹೋದರು. ಇಂದಿರೆಯು ಶೇಷಮ್ಮನ ಸಮಾಚಾರಕ್ಕಾಗಿ ನಿಂತವಳು ಹಿಂದಿನಿಂದ

ವಾಸುಕಿಶಯನಾ ನೀನೂರಿಗೆ ಹೋದರೆ ।
ದೋಷವೃದಿಯುಲ್ಲಿಟ್ಟು ನೀನಡೀ ॥

ಈ ಪದವನ್ನು ಹಾಡುತ್ತ, ಕಾಲುಸರಪಣಿಯ ಸಪ್ಪಳದೊಂದಿಗೆ ಲಗುಬಗೆಯಿಂದ ಪಾವಟಿಗೆಗಳನ್ನೇರಿ ಮೇಲೆ ಬಂದಳು.

"ಇಂದಿರೆ, ನೀನೀದಿವಸ ಬಹಳ ಉಲ್ಲಾಸದಲ್ಲಿರುವಿ. ನಿನ್ನ ಮುಖ

ಕಮಲವು ಹೇಗೆ ಪ್ರಫುಲ್ಲಿತವಾಗಿದೆ ಆ ಕನ್ನಡಿಯಲ್ಲಿ ಸ್ವಲ್ಪ ನೋಡಿಕೊಳ್ಳು!" ಎಂದು ದೇವಯಾನಿಯು ಸಂತೋಷದೊಂದಿಗೆ ನುಡಿದಳು.

"ಅವ್ವಯ್ಯಾ! ನಾನೇನು! ಮುಖಕಮಲವೇನು! ದೇವಯಾನಿಯಮ್ಮಾ, ನೀವು ನಿಮ್ಮ ಉದಾಸೀನಭಾವವನ್ನು ಈ ದಿವಸವೆಲ್ಲಿ ಕಳಕೊಂಡಿರಿ?" ಎಂದು ಸ್ವಲ್ಪು ವಯ್ಯಾರದಿಂದಂದು ಅಲ್ಲಿಯೇ ಪಂಜರದಲ್ಲಿದ್ದ ಕೃತ್ರಿಮ ಸಾರಿಕೆಯ ಸೂತ್ರವನ್ನು ಇಂದಿರೆಯು ತಿರಿವಿದಳು. ಕೂಡಲೇ ಆ ಪಕ್ಷಿಯು ತನ್ನ ರೆಕ್ಕೆಗಳನ್ನು ಫಟಫಟ ಬಡಕೊಂಡು ಮಂಜುಲಸ್ವರದಿಂದ ಗಾನಮಾಡುತ್ತ ಸಜೀವಪಕ್ಷಿಯಂತೆ ಅದು ತನ್ನ ಗೋಣು ಅತ್ತಿಂದಿತ್ತ ಇತ್ತಿಂದತ್ತ ತಿರುವುತ್ತಿತ್ತು. ಎಲ್ಲರೂ ಈ ಚಮತ್ಕಾರವನ್ನು ನೋಡುತ್ತ ಕುಳಿತರು. ರಮಾಕಾಂತನಿಗೆ ಇದು ಹೊಸ ಚಮತ್ಕಾರವಾದುದರಿಂದ ಅವನು ಹಿಂದೂಸ್ಥಾನದಲ್ಲಿ ಇಂಥ ಮಾದರಿಯ ಶಿಲ್ಪಿಗಳಿದ್ದರೂ ನಮ್ಮ ಕೈಗಾರಿಕೆಗಳೆಲ್ಲ ಹಾಳಾದವಲ್ಲವೆಂದು ನೆನಿಸಿ ಉದ್ವಿಗ್ನನಾದನು.

"ಅಮ್ಮಾ, ಈ ಚಮತ್ಕಾರವಾದ ವಸ್ತುವಿನ ಬೆಲೆ ಏನಿರುವದು? ಇದು ನಿಮಗೆಲ್ಲಿ ದೊರಕಿತು?"

"ಕಾಂತೂ, ಇದು ನನ್ನ ಯೌವನದ ಸಂಗಾತಿಯು. ನನ್ನ ತಂದೆಯವರು ಇದನ್ನು ತಂದು ಕೊಟ್ಟಿದ್ದರು. ಇದು ಚಮತ್ಕಾರವಾಗಿದ್ದರೂ ನಾನಿದರ ಗೊಡವಿಗೆ ಬಹುಶಃ ಹೋಗುವದಿಲ್ಲ. ಈಗ ನಾವೆಲ್ಲರೂ ಆನಂದದಲ್ಲಿರುವೆವು. ಹಳೇ ಸುದ್ದೀ ತೆಗೆದು ಪ್ರಯೋಜನವಿಲ್ಲ. ನೀನು ಗೀತಗೋವಿಂದದಲ್ಲಿಯ ಪದಗಳನ್ನು ಅನ್ನಲಿಕ್ಕೊಪ್ಪಿರುವಿಯಲ್ಲ! ಅನ್ನು "ನಾಥಹರೇ ಜಯ ನಾಥಹರೇ."

"ಆಗಲಿ, ನನಗಿಂತಲೂ ಗಾಯನದಲ್ಲಿ ಪರಿಶ್ರಮ ಹೆಚ್ಚಿದ್ದವರು ಮಾತ್ರ ನನ್ನ ದೋಷಗಳನ್ನೆಣಿಸಕೂಡದು." ಎಂದು ಇಂದಿರೆಯ ಕಡೆಗೆ ನೋಡಿ ಮಂದಸ್ಮಿತನಾಗಿ ರಮಾಕಾಂತನು ನುಡಿದನು.

"ನನ್ನ ಮೇಲೇಕೆ? ಎಲ್ಲಿಯೋ ನಾಲ್ಕು ಭೂಮದ ಪದಗಳು, ಆರತಿಯ ಹಾಡುಗಳು, ಬಹಳಾದರೆ ಆಧುನಿಕ ಕ್ರಮಿಕ ಪುಸ್ತಕಗಳಲ್ಲಿಯ ಹಾಸ್ಯಾಸ್ಪದಗಳಾದ 'ಏಳಿರೆಲ್ಲರೂ ಸಾಲುಗೊಳ್ಳಿರಿ' ಇಂಥವುಗಳನ್ನು ಹಾಡುವವರಿಗೆ ಗಾನಪರಿಶ್ರಮದ ಹೆಮ್ಮೆಯೇ?" ಎಂದು ತಾನು ಗಾನಪಟುವಾಗಿದ್ದರೂ ವಿನಯದಿಂದ ನುಡಿದು ಉತ್ಸಾಹದಿಂದ ಪಿಯಾನೋಪೇಟಿಯನ್ನು ತೆಗೆದು ಕೌಶಲದಿಂದ ಮಧುರವಾದ ಸ್ವರ ಹಿಡಿದಳು.

ರಮಾಕಾಂತನು ಗಂಭೀರ ಧ್ವನಿಯಿಂದ ಸುಸ್ವರವಾಗಿಯೂ ರಸಭಾವಗಳು

ಪ್ರಕಟವಾಗುವಂತೆಯೂ ಎರಡು ಗಳಿಗೇಪರ್ಯಂತರ ಸೂರೆಮಾಡಿ ಕೊಟ್ಟನು. ದೇವಯಾನಿಯು ದೇಹಪರಿವೆಯಿಲ್ಲದೆ ತಲ್ಲೀನಳಾಗಿ ಕುಳಿತಳು. ತನ್ನೆದುರಿಗಿರುವ ಮನೋಹರವಾದ ಮೂರ್ತಿಗಳನ್ನು ನೋಡಿಯೂ ಅವಮಾನುಷ ಮಾಧುರ್ಯ ಯುಕ್ತವಾದ ಗಾನವಾದನಗಳನ್ನು ಕೇಳಿಯೂ ಅವಳ ಕಣ್ಣುಗಳಿಂದ ಆನಂದಾಶ್ರು ಗಳ ಧಾರೆ ನಡೆದಿರುವದು. ಇವರೀರ್ವರು ಸತಿಪತಿಗಳಾದರೆ ಕಬ್ಬಿನ ಮೇಲೆ ಜೇನಿಟ್ಟಂತಾಗುವದು. ಬ್ರಹ್ಮಾನುಕೂಲವೆಂತಿರುವದೋ ಎಂದು ಯೋಚಿಸಿ ತನ್ನ ಮನಸ್ಸಿನಲ್ಲೇನೋ ಭಗವಂತನಿಗೆ ಬೇಡಿಕೊಂಡಳು.

"ಕಾಂತೂ, ಸಾಕುಮಾಡಪ್ಪಾ ಬಹಳ ದಣಕೊಂಡಿರುವಿ. ಇಂದಿರಾ, ಪೆಟಿಗೆ ಮುಚ್ಚು, ನಿನ್ನ ಕೋಮಲಾಂಗಿಗಳು ಸೋತಿರಲಿಕ್ಕೆ ಸಾಕು. ನೀವೀರ್ವರೂ ನನ್ನನ್ನು ಬಹಳೇ ಸಂತೋಷಪಡಿಸಿದಿರಿ ಕಂದಗಳಿರಾ," ಎಂದು ಪ್ರೇಮದಿಂದ ದೃಷ್ಟಿ ತೆಗೆಯುವದಕ್ಕಾಗಿ ದೇವಯಾನಿಯು ತನ್ನ ಮೊಳಕುಗಳ ಮೇಲೆರಡೂ ಕೈಗಳನ್ನಿಟ್ಟು ಚಟಕು ಮುರಿದಳು.

"ಅಬ್ಬಾ! ಎರಡು ಬಡಿದವು, ನಾನು ಈ ಮೊದಲೇ ಮನೆಯಲ್ಲಿರ ಬೇಕಾಗಿತ್ತು. ದೇವಯಾನಿಯಮ್ಮಾ, ಅಪ್ಪಣೆಕೊಡಿರಿ ರಮಾಕಾಂತರಾಯರಂತೂ ಇನ್ನೂ ನಾಲ್ಕಾರು ದಿವಸ ಇಲ್ಲಿದ್ದೇ ಇರುವರು ?" ಎಂದಿಂದಿರೆಯು ಕೇಳಿದಳು.

"ಏನೂ ಚಿಂತೆ ಮಾಡಬೇಡ, ನಾಲ್ಕು ದಿವಸ ಹೆಚ್ಚು ಆತನನ್ನಿಟ್ಟು ಕೊಳ್ಳುವೆನು. ಆಯಿತೇ ನಿನ್ನ ಮನಸಿನಂತೆ." ಎಂದು ದೇವಯಾನಿಯು ಸಂತೋಷಭರಿತಳಾಗಿ ನಗುತ್ತ ಹೇಳಿದಳು.

"ನೀವೇನಾದರೂ ಅನ್ನುತ್ತೀರಿ ಆಯಿತು" ಎಂದು ಮುಗುಳು ನಗೆ ನಗುತ್ತ ಇಂದಿರೆಯು ತನ್ನ ಶಾಲು ಹೊದ್ದುಕೊಂಡು ಗೋಡೆಗಿದ್ದ ನಿಲುವುಗನ್ನಡಿ ಯಲ್ಲಿ ತನ್ನ ಮುಖ ನೋಡಿಕೊಂಡು ರಮಾಕಾಂತನನ್ನು ಯಾರಿಗೂ ತಿಳಿಯದಂತೆ ಕೊಂಚ ಕಡೆಗಣ್ಣಿನಿಂದ ನೋಡಿ—

'ರಮ್ಯಾಣಿ ವೀಕ್ಷ್ಯ ಮಧುರಾಂಶ್ಚ ನಿಶಮ್ಯ ಶಬ್ದಾನ್ ।
ಪರ್ಯುತ್ಸುಕೀಭವತಿ ಯತ್ಸುಖಿತೋಽಪಿ ಜಂತುಃ ॥

ಎಂಬ ಮಹಾ ಕವಿಯ ಶ್ಲೋಕಾರ್ಥವನ್ನು ರಾಗದಲ್ಲಿ ಮೆಲ್ಲಗೆ ಹಾಡುತ್ತ ಮೆಟ್ಟಿಲು ಗಳನ್ನು ಇಳಿದು ನಡೆದಳು.

ಮತ್ಸರಿಯೂ, ಪ್ರಬಲನಾದ ಪ್ರತಿಸ್ಪರ್ಧಿಯೂ

ಇಂದಿರಾಬಾಯಿಯು ಹೇಳಿದಂತೆ ಸಾವಿತ್ರಮ್ಮನೂ ನಟೇಶನೂ ಕೂಡಿ ಅವಳ ಮನೆಗೆ ಬಂದರು. ಆದರೆ ಯಜಮಾನತಿಯು ಮನೆಯಲ್ಲಿದ್ದಿಲ್ಲ, ಮನೆಯಲ್ಲಿ ಇಂದಿರೆಯು ಆಪ್ತಳಾದ ಸುಬ್ಬಮ್ಮನೆಂಬ ಮುದುಕಿಯೂ, ನಂಜುಂಡನೂ, ಕೆಲಸಮಾಡುವ ತೊತ್ತೂ ಅಲ್ಲಿದ್ದರು. ಈ ಜನರ ಪರಿಚಯು ಸಾವಿತ್ರಮ್ಮಗಿದ್ದ ಮೂಲಕ ಅವಳು ಅವರೊಡನೆ ಹರಟೇ ಕೊಚ್ಚುತ್ತ ಕುಳಿತಳು. ನಟೇಶನು ಮಾತ್ರ ಸದರಿನಲ್ಲಿ ಒಬ್ಬನೇ ಹೋಗಿ ಕುಳಿತುಕೊಂಡು ಬೇಸತ್ತನು. ಎರಡು ಮೂರು 'ಬಹಾದ್ದೂರ್'ಗಳನ್ನು ಬೂದೀ ಮಾಡಿ ಹಾಕಿದನು.

ಇಂದಿರೆಯು ಬಂದರೆ ಅವಳ ಕೂಡ ಹೇಗೆ ಮಾತಾಡಬೇಕು, ಹೇಗೆ ಆಚರಿಸಬೇಕೆಂಬ ಬಗ್ಗೆ ಅವನು ನಾಟಕದಲ್ಲಿಯ ಪಾತ್ರಗಳ ಭಾಷಾಚರಣೆಗಳನ್ನು ಧ್ಯಾನಕ್ಕೆ ತಂದುಕೊಂಡು, ಹೀಗೆ ಹೀಗೆಂದು ನಿಷ್ಕರ್ಷೆ ಮಾಡಿಕೊಂಡಿಟ್ಟು ಕೊಂಡನು. ನಟೇಶನು ತನ್ನ ತಿಳುವಳಿಕೇ ಮೇರೆಗೆ ಸೊಬಗಿನಿಂದ ಪೋಷಾಕು ಮಾಡಿಕೊಂಡಿದ್ದನು. ಇಂದ್ರಧನುಷ್ಯದ ಬಣ್ಣದ ಪೇಟಾ ಮುರಿಗೇ ಮಾಡಿ, ತಲೆಗೆ ಸುತ್ತಿಕೊಂಡಿದ್ದನು. ಹೂವಿನ ಗಿಡದ ರೇಶ್ಮೆ ಅಂಗಿಯನ್ನು ಹಾಕಿಕೊಂಡು ರುದ್ರಗಂಟೆಯ ಗೇಣಂಚಿನ ಸೇಲಮುದ ಪಂಚೆಯನ್ನುಟ್ಟುಕೊಂಡಿದ್ದನು. ಮುಂಗೈಗೆ ಅತ್ತರಗಳನ್ನು ಬಡಕೊಂಡು ಅತ್ತರದಲ್ಲಿ ತೋಯಿಸಿದ ಅರಳೆಯನ್ನು ಕಿವಿಯಲ್ಲಿಟ್ಟುಕೊಂಡಿದ್ದನು. ಗಡಿಯಾರಕ್ಕೆ ಕಟ್ಟಿದ ಕೊಂಬು ಹಿತ್ತಾಳಿಯ ಉದ್ದವಾದ ಸರಪಣಿಯನ್ನು ಕೊರಳಿಗೆ ಹಾಕಿಕೊಂಡಿದ್ದನು. ಕಾಲಲ್ಲಿ ತಳತಳ ಹೊಳಿಯುವ ಕಪ್ಪು ಬಣ್ಣದ ಸ್ಲಿಪರ ಮೆಟ್ಟಿಕೊಂಡಿದ್ದು ಕಯ್ಯಲ್ಲಿ ಅರಗಿನ ಬಣ್ಣದ ಬಡಿಗೆಯಿತ್ತು. ಇಷ್ಟಾದರೂ ಇಂದಿರೆಯು ತನ್ನನ್ನು ಮೆಚ್ಚುವಳೋ ಇಲ್ಲೋ ಎಂಬ ಶಂಕೆಯಲ್ಲಿದ್ದನು. ಅವಳು ಶ್ರೀಮಂತರ ಮಗಳು, ತನ್ನುಭಯ ಪೂರ್ವಜರು ಕೀಳುಸ್ಥಿತಿಯವರು, ಆದರೇನಾಯಿತು! ಅಮೇರಿಕೆಯ ಅಬ್ರಹಾಮ ಲಿಂಕನ್ನನು ಮೊದಲು ಬಡಿಗನಾಗಿದ್ದಿಲ್ಲವೇನು? ನಮ್ಮಲ್ಲಿ ಪೂರ್ಣಯ್ಯನವರ ಮುಂಚಿನ ಸ್ಥಿತಿ ಏಸಿತ್ತೆಂಬುದು ಎಲ್ಲರಿಗೂ ಗೊತ್ತುಂಟಲ್ಲ! ಹೀಗಂದು ಧೈರ್ಯಹೊಂದಿ ನಟೇಶನು ಕನ್ನಡಿಯಲ್ಲಿ ಒಳಿತಾಗಿ ನೋಡಿಕೊಂಡು ಸಮಾಧಾನ ಹೊಂದಿ, ಲಾವಣಿಯ ದಾಟಿಯಿಂದ ಸಿಳ್ಳುಹಾಕುತ್ತ ಕುಳಿತನು.

ಇಷ್ಟರಲ್ಲಿ ಸಾವಿತ್ರಮ್ಮನು ಬಂದು "ನಟೇ, ನೀನು ದೊಡ್ಡವರ ಮನೆಯಲ್ಲಿ ಹೊಗೆಸೊಪ್ಪು ಸೇದುವದೂ ಸಿಳ್ಳು ಹಾಕುವದೂ ಸರಿಯಲ್ಲ." ಎಂದು ಸಿಟ್ಟು

ಮಾಡಿದಳು.

"ದೊಡ್ಡವರಿಗೆ ಕೋಡು ಮೂಡಿರುವವೇನು! ಈ ಜನರು ತಮ್ಮ ದುಡ್ಡಿನ ಅಹಂಕಾರದಲ್ಲಿರುವರೆಂದು ಅವರಿಗೆ ನಾವು ಅಂಜಬೇಕಲ್ಲವೇ?"

"ಹೀಗೇಕೆ ಮಾತಾಡುವಿಯೋ ನಟೇ! ಇಂದಿರಾಬಾಯಿಯವರೆಷ್ಟು ದೊಡ್ಡ ಮನಸ್ಸಿನವರು! ಅವರಿಗಹಂಕಾರವಿರುವುದೇನು! ನಾವು ನಮ್ಮ ಸ್ಥಿತಿ ನೋಡಿ ಕೊಂಡು ದೇವರು ಕೊಟ್ಟದ್ದರಲ್ಲಿ ಸಂತೋಷದಿಂದಿರುವದು ವಿಹಿತವಾದದ್ದಲ್ಲವೇ! ಹಾಗನ್ನಬಾರದಪ್ಪಾ."

"ಇದ್ದದ್ದರಲ್ಲಿ ಸುಖಪಟ್ಟುಕೊಂಡಿರುವದು ತೊತ್ತಿನ ಕೆಲಸ." ಎಂದು ನಟೇಶನು ಶಾಠ್ಯದಿಂದಂದನು.

"ಅಹಾ ನಟೇಶಾ, ಬಹಳ ಪಂಡಿತನಾಗಿರುವಿ ಬಿಡು" ಎಂದು ಸಾವಿತ್ರ್ಯಮ್ಮನು ತನ್ನ ಮಗನಿಗೆ ಛೀ ಹಾಕುವಷ್ಟರಲ್ಲಿಯೇ ನಂಜುಂಡನು ಬಂದು, ಇಂದಿರಾ ಅಮ್ಮನವರು ಬಂದಿರುವರೆಂದು ವರ್ತಮಾನ ಹೇಳಿದರು.

ಇದನ್ನು ಕೇಳಿ, ನಟೇಶನ ಹೆಮ್ಮೆ ಮಾತುಗಳು ಕರಗಿದವು. ತಾನಾದಷ್ಟು ಚಂದಕಾಣುವಂತೆ ಯತ್ನ ಮಾಡಹತ್ತಿದನು. ಕೈವಸ್ತ್ರದಿಂದ ತನ್ನ ಮುಖವನ್ನು ಚೆನ್ನಾಗಿ ಒರಸಿಕೊಂಡನು. ಮೈಮೇಲಿನ ಬಟ್ಟೆಗಳನ್ನು ಸಮಮಾಡಿಕೊಂಡು ಮೀಸೆಗೆ ಹುರಿಯಿಕ್ಕಿ ಕನ್ನಡಿಯಲ್ಲಿ ತನ್ನ ಮುಖವು ನಕ್ಕರೆ ಹೇಗೆ ಕಾಣಿಸುವದೆಂದು ಪರೀಕ್ಷೆಮಾಡಿದನು.

ಸಾವಿತ್ರ್ಯಮ್ಮನು ನಟೇಶನನ್ನು ಕರಕೊಂಡು ಉಪ್ಪರಿಗೆ ಮೇಲೆ ಹೋದಳು. ಸುಶೋಭಿತವಾದ ಸದರಿನಲ್ಲಿ ಅಂದವಾದ ಕುರ್ಚಿಗಳೂ ಕೋಚುಗಳೂ ಇದ್ದವು. ನಟೇಶನು ನೆಟಾಸಿಕೊಂಡು ಹಂಸತೂಲಿಕೆಯ ಕೋಚದ ಮೇಲೆ ವಿರಾಜಮಾನ ನಾದನು. ಇಂದಿರೆಯು ತನ್ನ ವಾಚನಾಲಯದಿಂದ ಹೊರಗೆ ಬಂದ "ಸಾವಿತ್ರ್ಯಮ್ಮಾ, ನೀವು ಬಹಳೊತ್ತು ನನ್ನ ಹಾದೀ ನೋಡಿದ್ದೀರಾದೀತು. ದೇವಯಾನಿಯಮ್ಮ ನವರು ಆಗ್ರಹಮಾಡಿದ್ದರಿಂದ ಅವರಲ್ಲಿಯೇ ಭೋಜನಕ್ಕೆ ನಿಂತೆನು. ನಟೇಶನೂ ಬಂದಿರುವನಲ್ಲ!" ಎಂದು ನಟೇಶನ ಚಮತ್ಕಾರವಾದ ವೇಷವನ್ನು ಕಂಡು ವಿಸ್ಮಿತ ಳಾಗಿ ತುಸು ನಕ್ಕಳು. ಆ ಮಾತು ಈ ಮಾತು ಆಡುತ್ತ ಸುಮಾರು ಅರ್ಧತಾಸು ಹೋಯಿತು. ಆದರೆ ಆ ಹರಟೆಯಲ್ಲಿ ಪ್ರೌಢವಿಚಾರಗಳೂ, ಚಾತುರ್ಯದ ಮಾತುಗಳೂ, ಸ್ವಲ್ಪಾದರೂ ಇಂದಿರೆಗೆ ಕಂಡುಬರಲಿಲ್ಲ. ನಟೇಶನು ತನ್ನ ಮೇಲಧಿಕಾರಿಯಾದ ಯುರೋಪಿಯನ್ ಕಾಮದಾರನ ಗರ್ವಿಷ್ಠತನವನ್ನೂ,

ಏತದ್ದೇಶೀಯರೆಂದರೆ ಮೂರ್ಖರು, ದೊಡ್ಡ ದೊಡ್ಡ ಕಾರ್ಯಗಳನ್ನು ನೆರವೇರಿಸಲಸಮರ್ಥರು, ಅಸತ್ಯವಾದಿಗಳು, ಮುಂತಾದ ಅವನ ಅಭಿಪ್ರಾಯಗಳನ್ನು ಒಳ್ಳೇ ಸದ್ಗುಣಗಳೆಂದು ತಿಳಿದು ವರ್ಣಿಸುತ್ತಿದ್ದನು. ತನ್ನ ಸಾಹೇಬನು ಬೇರೆ ಕಾಮದಾರರನ್ನು ಬಯ್ಯುವಷ್ಟು ತನ್ನನ್ನು ಬಯ್ಯುವದಿಲ್ಲವೆಂದು ಹೇಳಿ ತನ್ನ ಯೋಗ್ಯತೆಯ ಬೆಲೆ ತಿಳುಕೊಳ್ಳುವದಕ್ಕೆ ಇಂದಿರೆಗೆ ಪರ್ಯಾಯದಿಂದ ಹೇಳಿದನು. ಈ ಹರಟೆಗೆ ಬೇಸತ್ತು ಇಂದಿರೆಯು ನಟೇಶನ ಮುಂದೊಂದು ಚಿತ್ರದ ದೊಡ್ಡ ಪುಸ್ತಕವನ್ನಿಟ್ಟು "ನಟೇಶ, ಈ ಚಿತ್ರಗಳು ಬಹು ರಮಣೀಯವಾದವುಗಳು. ಜಗತ್ತಿನಲ್ಲಿಯ ಎಲ್ಲ ಚಮತ್ಕಾರಗಳ ವರ್ಣನೆ ಇದರಲ್ಲಿದೆ" ಎಂದು ಹೇಳಿ, ನಟೇಶನ ಗೊಡ್ಡು ಹರಟೆ ತಪ್ಪಿಸಿಕೊಳ್ಳುವ ಹಂಚಿಕೆ ಮಾಡಿದಳು. ಆ ಮೇಲೆ ಸಾವಿತ್ರೆಮ್ಮನ ಕೂಡ ಸಾಮಗ್ರಿಗಳನ್ನು ಕುರಿತು ಮಾತನಾಡಹತ್ತಿದಳು. ಅವರಿಬ್ಬರು ಹೀಗೆ ಕೆಲಹೊತ್ತು ಕುಳಿತ ಬಳಿಕ ಇಂದಿರೆಯು ನಂಜುಂಡನನ್ನು ಕರೆದು, ಅಡಿಗೆಯವನಿಗೆ ಚಹ ತರಹೇಳಿ ಕಳಿಸಿದಳು.

"ನಮ್ಮ ನಟೇಶಗೆ ಶಾಮಯ್ಯನ ಕೆಲಸ ಬೇಡವಂತೆ; ಅದು ನನಗೆ ವಾಸಿಯಾಗಿ ತೋರುತ್ತದೆ, ಇಂದಿರಾಬಾಯೀ, ನೀವಾದರೂ ಅವನಿಗೆ ತುಸು ಹೇಳಿರಿ." ಎಂದು ಸಾವಿತ್ರೆಮ್ಮನಂದಳು.

"ನನ್ನಂಥವಳ ಮಾತು ಕೇಳುವನೇ ಅವನು! ಅವನು ಶಾಮಯ್ಯನ ಉದ್ಯೋಗ ಕೈಕೊಳ್ಳದಿದ್ದದ್ದು ಒಳ್ಳೇದೇ ಆಯಿತು. ನಟೇಶನಂಥ ಸ್ವಭಾವದವರಿಂದ ಆ ಕೆಲಸ ನೀಗದು. ಅವನ ಪೋಲೀಸ ಕೆಲಸವಾದರೂ ಏನು ಕೆಟ್ಟದು! ಆ ಪೋಷಾಕು ಹಾಕಿಕೊಂಡನಂದರೆ ಹೇಗೆ ಒಪ್ಪುತ್ತಾನೆ" ಎಂದು ಚಾಪಲ್ಯತನದಿಂದ ಇಂದಿರೆಯು ಮಾತಾಡಿದಳು.

ಬಳಿಯಲ್ಲಿಯೇ ಕುಳಿತು ಚಿತ್ರಗಳನ್ನು ನೋಡುತ್ತಿದ್ದ ನಟೇಶನು ಈ ಮಾತು ಕೇಳಿ, ಇಂದಿರೆಯಾಡಿದ್ದು ನಿಜವೆಂದು ತಿಳಿದು ತಾನು ಸ್ವರ್ಗದಲ್ಲಿರುವೆನೋ ಏನೋ ಎಂದು ಭಾವಿಸಿಕೊಂಡನು. ಅವನು ಉಬ್ಬಿದವನಾಗಿ ಇಂದಿರೆಯನ್ನು ಕುರಿತು—

"ಇಂದಿರಾಬಾಯಿಯವರೇ, ಈಗ್ಯೆ ನಾನು ಕೇವಲ ಹವಾಲದಾರನಿದ್ದರೂ ಶೀಘ್ರವೇ ದೊಡ್ಡ ಯೋಗ್ಯತೆಗೇರುವ ಸಂಭವವಿದೆ. ಇಂಥವನು ಅಪ್ಪನು ಹೇಳುವಂಥ ನೀಚಕೆಲಸವನ್ನು ಕೈಕೊಳ್ಳಬಹುದೇ?"

"ಛೀ! ನಟೇಶರಾಯ, ನೀನಂಥವನೇ ಇರುತ್ತೀ."

ಈ ಮಾತು ಕೇಳಿ, ನಟೇಶನು ಉಬ್ಬಿನಿಂದ ಸೆಟೆಕೊಂಡು ಚಟ್ಟನೇ ಎದ್ದು ಆಢ್ಯತೆಯಿಂದ ಸದರಿನಲ್ಲಿ "ಕ್ವಿಕ್ ಮಾರ್ಚ"ದ ಹೆಜ್ಜೆಗಳನ್ನಿಡುತ್ತ ತಿರುಗಾಡ ಹತ್ತಿದನು. ಹೀಗಡ್ಡಾಡುವಾಗ ನಟೇಶನು ತನ್ನ ದೃಷ್ಟಿಯನ್ನು ಇಂದಿರೆಯ ಮುಖದ ಕಡೆಗೆ ಇಟ್ಟದ್ದು ತೆಗಿಯಲೇ ಇಲ್ಲ. ಇಂದಿರೆಯು ಇವನ ಕುಚೇಷ್ಟೆ ಗಳನ್ನು ತಾತ್ಸಾರ ಮಾಡಿ, ತನ್ನ ಕೆಲಸದಲ್ಲಿಯೇ ತೊಡಗಿದಳು. ನಟೇಶನು ಮೂರ್ಖನಿರುವನೆಂದು ತಿಳಿದು, ಇಂದಿರೆಯು ಸ್ವಲ್ಪಾದರು ಕೋಪಿಸಿಕೊಳ್ಳಲಿಲ್ಲ.

"ನಟೇಶಾ, ನಿನಗೆ ಚಾಕರಿಯಲ್ಲಿ ಹೆಚ್ಚು ಸಂಬಳ ಸಿಗುವ ಬಗ್ಗೆ ನಮ್ಮ ತಂದೆಯವರು ಯಾರಿಗಾದರೂ ಹೇಳಿದರೆ, ನಿನಗೆ ಉಪಯೋಗವಾಗುವದು. ನೀನು ನಮ್ಮ ಸಾವಿತ್ರಮ್ಮನ ಮಗನೆಂದು ತಿಳಿದು ನಾನು ನಿನಗೊಂದುಪಕಾರ ಮಾಡಬೇಕೆಂದು ಮಾಡಿದ್ದೇನೆ. ದೇವಯಾನಿಯಮ್ಮನವರ ಮನೆಗೆ ಬಂದ ರಮಾಕಾಂತರಾಯರು ವಿಶ್ವವಿದ್ಯಾಲಯದ ಪದವೀಧರರಿದ್ದು ಉದಾರಮನಸ್ಸಿ ನವರೂ ಸದಾಚಾರಿಗಳೂ ಇರುವರು. ಅವರು ನನ್ನ ಸ್ನೇಹಿತರಾಗಿರುವರು. ಅವರ ಉಪದೇಶವಾದರೂ ನಿನಗೆ ಪ್ರಯೋಜನಕ್ಕೆ ಬರುವದು. ನಿನ್ನ ಮೇಲೆ ದಯವಿಡುವದಕ್ಕೆ ನಾನವರಿಗೆ ಹೇಳುವೆನು. ಸಾವಿತ್ರಮ್ಮಾ, ನೀವು ಆ ರಮಾಕಾಂತ ರಾಯರನ್ನು ನೋಡಿರುವಿರೇನು?" ಎಂದಿಂದಿರೆಯಂದಳು.

"ಇಲ್ಲರಮ್ಮಾ, ಅವರೆಂದು ಬಂದಿರುವರು? ಯಾರಿರುವರು?" ಎಂದು ಸಾವಿತ್ರಮ್ಮನು ಕೇಳಿದಳು.

"ಇವರ ತಂದೆಗಳಾದ ಕಮಲಾಕಾಂತರೂ ನಂನ ತಂದೆಗಳೂ, ದೇವಯಾನಿ ಯಮ್ಮನವರೂ ಬಾಲ್ಯದ ಸ್ನೇಹಿತರು. ಕಮಲಾಕಾಂತರೂ ಅಲೌಕಿಕ ವಿದ್ವಾಂಸ ರಾಗಿದ್ದರಂತೆ" ಎಂದು ಇಂದಿರೆಯು ಹೇಳಿದಳು.

"ಕಮಲಾಕಾಂತರನ್ನು ನಾನು ನೋಡಿದ್ದೆನು. ನೀವು ಹೇಳುವ ರಮಾ ಕಾಂತರು ಕಮಲಾಕಾಂತರ ಚಿರಂಜೀವರಾದ ಮೇಲೆ ಅಂಥ ಸದ್ಗುಣಗಳಾಗಿರು ವದೇನು ಆಶ್ಚರ್ಯ" ಎಂದು ಸಾವಿತ್ರಮ್ಮನಂದಳು.

"ಬೆಳಿಗ್ಗೆ ನಾನವರ ಕೂಡ ದರಿಯಾದೌಲತ್ ನೋಡಲಿಕ್ಕೆ ಹೋಗಿದ್ದೆನು. ಅವರಭಿಪ್ರಾಯಗಳೆಷ್ಟು ಸರಸಾಗಿರುವವೆಂದು ಹೇಳಲಿ! ಅವರ ಕಲ್ಪನಾಶಕ್ತಿ ಯಂತೂ ದೊಡ್ಡ ದೊಡ್ಡ ಕವಿಗಳಿಗೆ ಬಾರದು. ಅವರನ್ನು ಕಂಡರೆ ಆದರ ಬುದ್ಧಿಯು ಹುಟ್ಟದಿರಲಾರದು" ಎಂದು ಇಂದಿರೆಯು ಉತ್ಸಾಹದಿಂದ ಹೇಳಿದಳು.

ಇಂದಿರೆಯಾಡಿದ್ದು ಕೇಳಿ, ನಟೇಶನು ತಾನು ಸರ್ವಸ್ವಿ ಮುಳುಗಿದೆನೆಂದು

ತಿಳಿದು ನಿರಾಸೆಯಿಂದ ಜರ್ರನೆ ಇಳಿದನು. ಅವನ ಮನಸ್ಸಿನಲ್ಲಿಯ ಮುಂಡಿಗೆಗಳೆಲ್ಲಾ ಬಯಲಾದವು. ತಾನು ಸಾವಿತ್ರಮ್ಮನ ಮಗನೆಂದೇ ಇಂದಿರೆಯು ತನ್ನನ್ನು ಮುಂದಕ್ಕೆ ಕರೆದದ್ದು ಹೊರತಾಗಿ ಮತ್ತ್ಯಾವಕಾರಣದಿಂದಲ್ಲವೆಂದು ಯೋಚಿಸಿ ನಾಚಿಕೊಂಡು ಮೊಳಕಾಲುಗಳಲ್ಲಿ ತಲೆಯಿಟ್ಟುಕೊಂಡು ಕುಳಿತನು. ಇಂದಿರೆಯು ರಮಾಕಾಂತನನ್ನತಿಶಯವಾಗಿ ಸ್ತುತಿಸಿದಳು. ಅವನ ಕೂಡ ತಾನೊಬ್ಬಳೇ ದರ್ಯಾದೌಲತ್ತಿಗೆ ಹೋಗಿದ್ದಳು. ಪ್ರಬಲನಾದ ಪ್ರತಿಸ್ಪರ್ಧಿಯು ಒಮ್ಮಿಂದೊಮ್ಮೇ ರಾಕ್ಷಸನಂತೆ ನಿಂತನಲ್ಲಾ! ಏನು ಮಾಡಲಿ! ಘಾತವಾಯಿತೆಂದು ಈ ದುಷ್ಟನು ವೃಥಾಶೋಕಮಾಡಹತ್ತಿದನು. ಇನ್ನೊಂದು ವಿಚಾರ ಅವನ ಮನಸ್ಸಿನಲ್ಲಿ ಬಂದಿತು. ತಾನು ಕುರೂಪಿಯಲ್ಲ; ರಮಾಕಾಂತನು ನಿಜವಾಗಿ ಕುರೂಪಿಯಾಗಿದ್ದರೆ......ಪಂಡಿತರು ಕುರೂಪಿಗಳಾಗಿರಬಾರದೇನು?... ಇನ್ನೂ ಹಾದಿಯದೆ ಎಂದು ಯೋಚಿಸಿ ನಟೇಶನು ಇಂದಿರೆಗಂದದ್ದು:

"ಇಂದಿರಾಬಾಯಿ, ಆ ನಿಮ್ಮ ಸ್ನೇಹಿತರಾದ ರಮಾಕಾಂತರನ್ನು ನಾನು ನೋಡಿಲ್ಲ. ಅವರು ಗುಣನಿಧಿಗಳೆಂದು ಹೇಳಿದಿರಿ, ಆದರೆ ರೂಪದಿಂದಲೂ ಶಕ್ತಿಯಿಂದಲೂ ಹೇಗಿರುವರು?"

"ರೂಪದಿಂದ ಚೆಲುವರೇ ಇರುವರು. ಅವರಂಥ ರೂಪವಂತರನ್ನು ನಾನಂತೂ ಕಂಡಿಲ್ಲ. ದೃಢಾಂಗರೂ ಉತ್ಸಾಹಯುಕ್ತರೂ ನೋಡಲಿಕ್ಕಂತೂ ಕಾಣಿಸುತ್ತಾರೆ."

ಇದನ್ನು ಕೇಳಿಯಂತೂ ನಟೇಶನು ಸತ್ತವನಲ್ಲ ಬದುಕಿದವನಲ್ಲಾಗಿ ಆರಾಮ ಕುರ್ಚಿಯಲ್ಲಿ ಬೆನ್ನಾನಿಸಿಕೊಂಡು ಜಂತೇಕಡೆಗೆ ಮೂಢನಂತೆ ನೋಡುತ್ತ ಕುಳಿತನು.

"ಇಂದಿರಾಬಾಯಿಯವರೇ, ನಮ್ಮ ನಟೇಶನಿಗೆ ಸಂಬಳ ಹೆಚ್ಚಾಗುವಂತೆ ಮಾಡುವುದಕ್ಕೆ ಜಯರಾಯರಿಗೆ ಹೇಳುವಿರಲ್ಲವೇ!" ಎಂದು ಸಾವಿತ್ರಮ್ಮನು ಕೇಳಿಕೊಂಡಳು.

"ಅಗತ್ಯವಾಗಿ ಹೇಳುತ್ತೇನೆ. ನಟೇಶನಲ್ಲಿ ಆರ್ಜವಗುಣ ಕಡಿಮೆ. ಅತಿ ಆರ್ಜವ ಮಾಡುವದೂ ಒಳ್ಳೇದೆಂದು ನಾನನ್ನುವದಿಲ್ಲ. ಬಡವರಾದ ಮೇಲೆ ಈ ಗುಣವು ಅವಶ್ಯವಾಗಿ ಬೇಕು. ನಟೇಶನಿಗೆ ಸಿಟ್ಟು ಬರಲೊಲ್ಲದೇಕೆ."

"ನೀವು ಒಳ್ಳೇದೇ ಹೇಳುತ್ತೀರಿ. ಸಿಟ್ಟು ಬರಲಿಕ್ಕೇನು!" ಎಂದು ಸಾವಿತ್ರಮ್ಮನಂದಳು.

ಅಷ್ಟರಲ್ಲಿ ಚಹ ಬಂದಿತು. ಎಲ್ಲರೂ ಚಹ ತಕ್ಕೊಂಡರು, ಸಾವಿತ್ರಮ್ಮನು ಬೆಂಗಳೂರಲ್ಲಿದ್ದಾಗ್ಗೆ ಚಹ ತಕ್ಕೊಳ್ಳುವದನ್ನು ಅರವುುದಿಕೆಯಾದ ಬಳಿಕ ಕಲಿತಿದ್ದಳು. ನಟೇಶನಿಗೆ ಈ ಮನೆ ಬಿಟ್ಟು ಯಾವಾಗ ಹೊರಬೀಳುವೆನೋ ಎಂದೆನಿಸಿತ್ತು, ತಾಯಿಮಕ್ಕಳು ಇಂದಿರೆಯ ಅಪ್ಪಣೆ ತಕ್ಕೊಂಡು ತಮ್ಮ ಮನೆಯ ಹಾದೀ ಹಿಡಿದರು.

ಮಾರ್ಗದಲ್ಲಿ ಸಾವಿತ್ರಮ್ಮನು ಮಗನನ್ನು ಕುರಿತು, " ನಟೀ, ನೋಡಿದಿಯಾ ಇಂದಿರಾಬಾಯಿಯು ಎಂಥ ದೊಡ್ಡಮನಸ್ಸಿನವಳು " ಎಂದಂದಳು.

" ಅವ್ವಾ, ಅವಳ ಉಪಕಾರವು ಬಹಳಾಗಿರುವದು."

" ಚಿಕ್ಕವಳಿದ್ದರೂ ಎಷ್ಟು ಪ್ರೇಮಲವಾದ ಅಂತಃಕರಣದವಳು ! ಎಷ್ಟು ಸುಶೀಲೆಯು ! ಗರ್ವವಂತೂ ಅವಳಿಗೆ ಗೊತ್ತೇ ಇಲ್ಲ."

" ಕುಲೀನರೂ ಶ್ರೀಮಂತರೂ ಆದವರ ಗುಣಾವಗುಣಗಳನ್ನು ನಮ್ಮಂಥ ದರಿದ್ರರು ಕಟ್ಟಿಕೊಂಡೇನು ಮಾಡುವದು ?" ಎಂದು ನಟೇಶನಂದನು.

ಮನೆಗೆ ಹೋದ ಕೂಡಲೆ ನಟೇಶನು ಹಾಸಿಗೆ ಬಿಚ್ಚಿ ಬಿದ್ದುಕೊಂಡನು. ಅವನ ಚಿತ್ತಕ್ಕೆ ಸಮಾಧಾನವಿದ್ದಿಲ್ಲ. " ಇಂದಿರೆಯು ದೇಶದ ಅರಸಿಯಂತೆ ದೊಡ್ಡಸ್ತನದಿಂದ ನನ್ನನ್ನು ಉಪಕಾರಪಾತ್ರನನ್ನು ಮಾಡಬಂದಳಲ್ಲವೇ ! ಏಕೆಂದರೆ ನಾನು ಬಡವಿಯ ಮಗನು ! ಇವಳೇನು ಕಲಿತವಳಂತೆ ! ಕುಲೀನರು ಅನ್ಯರು, ಶ್ರೀಮಂತರೂ ಬಡವರು ಮುಂತಾದ ಭೇದಭಾವಗಳು ಇವಳಲ್ಲಿ ತುಂಬಿಕೊಂಡೇ ಇವೆ. " ಗುಣಾಃ ಪೂಜಾಸ್ಥಾನಂ " ಎಂಬ ವಾಕ್ಯದ ಮಹತ್ವವೆಲ್ಲಿ ಉಳಿಯಿತು ! ಈ ದಿನದ ವಿದ್ಯೆಯ ಶ್ರೀಗಣೇಶಾಯ ನಮಃ ಅಂದರೆ ಈ ಭೇದಭಾವಗಳನ್ನು ಚನ್ನಾಗಿ ಪಾಲಿಸಿ ಬಡವರನ್ನೂ ಕುಲಹೀನರನ್ನೂ ಧಿಕ್ಕರಿಸುವದೇ. ಆಕಾಶ ಪಾತಾಳಗಳೊಂದೇ ಆದರೂ ಚಿಂತಿಲ್ಲ, ಈ ಕುಲೀನರ ಹಲ್ಲೇ ಮುರಿಯಬೇಕು. ಆಂಗ್ಲರು ಬಂದು, ಈ ಜನರ ಬಗ್ಗು ಬಡಿದಿದ್ದಾರೆ. ಅಂದರೂ ಈ ಮಕ್ಕಳು ಕಣ್ಣು ತೆರೆಯುವುದಿಲ್ಲ. ಆದರೆ ಈ ಪ್ರಾಂತದಲ್ಲಿ ಈ ಜನರದೇ ಪ್ರಾಬಲ್ಯ. ಇವರ ಉರವಣಿಗೆ ಎಷ್ಟು ದಿವಸ ನಡೆಯುತ್ತದೋ ಯಾರು ಬಲ್ಲರು !! " ಹೀಗೆ ಸಂತಪ್ತನಾಗಿ ಬಡಬಡಿಸುತ್ತ ಹೊರಳಾಡುತ್ತಿದ್ದನು.

ಆ ದಿವಸ ನಟೇಶನ ಮನಸಿಗೆ ಶಾಂತತೆಯೇ ಹುಟ್ಟಲಿಲ್ಲ. ಸಾಯಂಕಾಲದ ಭೋಜನವಾದ ನಂತರ ನಟೇಶನು ನದೀತೀರಕ್ಕೆ ಹೋಗಿ ಸಂತಾಪದಿಂದ ಕಾಯಿದ ತನ್ನ ತಲೆಯನ್ನು ನೀರಲ್ಲಿ ತೊಳಕೊಂಡು ಹಾಸು ಬಂಡೆಯ ಮೇಲೆ ಕೈ ಕಾಲು

ಚಾಚಿಕೊಂಡು ಮಲಗಿ ವಿಚಾರದಲ್ಲಿ ಮತ್ತೆ ನಿಮಗ್ನನಾದನು. ಅವನು ನಾನಾ ತರದ ತರ್ಕ ಮಾಡುತ್ತಿದ್ದನು. "ಹೊಳೆಯು ತುಂಬಿ ಬಂದಾಗ್ಗೆ ಇಂದಿರೆಯು ಅಕಸ್ಮಾತ್ತಾಗಿ ಅದರಲ್ಲಿ ಬೀಳಲು ಸಮಯಕ್ಕೆ ನಾನೇ ಬಂದೊದಗಿ ಅವಳ ಪ್ರಾಣ ವುಳಿಸಿದರೆ ತನ್ನ ಕೃತಜ್ಞತೆಯನ್ನು ಹೇಗೆ ತೋರಿಸುವಳು ? ಅವಳ ಮನೆಗೆ ಬೆಂಕಿ ಹತ್ತಲು ನಾಲ್ಕನೆಯ ಪುಸ್ತಕದಲ್ಲಿಯ "ಕೃತಜ್ಞನಾದ ತುರಕ" ನಂತೆ ಇವಳನ್ನು ನಾನು ಗಂಡಾಂತರದಿಂದ ಪಾರುಮಾಡಿದರೆ ನನಗೇನು ಕೊಟ್ಟು ಉಪಕಾರ ತೀರಿಸು ವಳು ? ಪಾಣಿಗ್ರಹಣಕ್ಕೇಕೆ ಒಪ್ಪಬಾರದು ? ಈ ದುಷ್ಟ ರಮಾಕಾಂತನು ಎಲ್ಲಿಂದ ಬಂದು ನನ್ನೆಡೆಗೆ ಅಡ್ಡಾದನೋ ಏನೊ ? ಈ ಇಂದಿರೆಗೆ ಕಾರಭಾರಮಾಡಿ ಅವನಿಗೆ ದರ್ಯಾದೌಲತ್ ತೋರಿಸಲಿಕ್ಕೆ ಯಾರು ಹೇಳಿದ್ದಾರು ! ಇನ್ನೇನಿದೆ ? ಎಲ್ಲವೂ ಕೈಮೀರಿ ಹೋದಂತಾಯಿತು. ಇನ್ನು ಈ ಮೈಸೂರು ಸೀಮೆಗೂ ನಮಗೂ ಸಂಬಂಧವೇ ಬೇಡ. ಅಮೇರಿಕೆಯಲ್ಲಿ ರಾಜ್ಯಕಾರಭಾರ ನಡಿಸುವ ಅಧ್ಯಕ್ಷನೂ ಊರಲ್ಲಿಯ ಕೂಲಿಕಾರನೂ ಸಮಾನಯೋಗ್ಯತೆಯುವರಂತೆ. ಅಮೇರಿಕೆಗಾದರೂ ಹೋಗಿಬಿಡಬೇಕು. ಅಲ್ಲಿಯ ಜನರು ಎಷ್ಟು ಧನ್ಯರಿರುವರು ನೋಡಿರಿ. ಬಡಿಗನು ಅಧ್ಯಕ್ಷನಾಗಬಲ್ಲನು. ಮೊಚ್ಚೆ ಹೊಲಿಯುವವನು ಪ್ರಧಾನನಾಗಲಭ್ಯಂತರವಿಲ್ಲ." ಹೀಗೇ ವಿಚಾರದಲ್ಲಿ ನಟೇಶನಿರುವಾಗ ಅವನೆ ದುರಿಗೆ ಏನೋ ಬರುವದಾಗಿ ಕಾಣಿಸಿತು. ಅಲ್ಲಿ ಭೂತಗಳು ಸಂಚರಿಸುವವೆಂದು ನಟೇಶನು ಹೆಂಗಸರ ಬಾಯಿಂದ ಕೇಳಿದ್ದನು. ಆದ್ದರಿಂದ ಅವನು ಕಪ್ಪರಿಸಿ ಕೊಂಡೆದ್ದು ನಿಂತನು. ತುಸು ಹೊತ್ತಿನ ಮೇಲೆ ಯಾವನೋ ಮನುಷ್ಯನು ತನ್ನ ಕಡೆಗೆ ಬರುವಂತೆ ಭಾಸವಾಯಿತು. ಆದರೆ ಆವನ ಮುಂದಿನಿಂದ ಬೆಂಕಿಯ ಕಿಡಿಯು ಕೂಡಾ ಬರುವಂತೆ ಕಂಡದ್ದರಿಂದ ಅಂಜಿ ನಡುಗಹತ್ತಿದನು, ಆ ಬರುವ ಮನುಷ್ಯನು ನಮ್ಮ ಚರಿತ್ರನಾಯಕನಾದ ರಮಾಕಾಂತನೇ.

ರಮಾಕಾಂತನ ಮನಸ್ಸಿನಲ್ಲಿ ಕೂಡಾ ಇಂದಿರೆಯ ವಿಷಯವಾದ ವಿಚಾರಗಳೇ ಇದ್ದವು. ಇಂದಿರೆಯ ಪೂರ್ಣಚಂದ್ರಮನಂಥ ಮುಖವೂ ಅವಳ ಅವಯವಗಳ ಅನ್ಯೂನವಾದ ಸೌಂದರ್ಯವೂ ಅವಳ ಮನೋಜ್ಞವಾದ ನಡತೆಯೂ ರಮಾ ಕಾಂತನ ಕಣ್ಣಲ್ಲಿ ಕಟ್ಟಿದ್ದವು. ಇಂಥವಳಿಗೆ ತಾನು ತಕ್ಕ ವರನಹುದೋ ಅಲ್ಲವೊ ಎಂದಾಗಾಗ್ಗೆ ತನ್ನನ್ನು ತಾನೇ ಕೇಳಿಕೊಳ್ಳುತ್ತಿದ್ದನು. ಇಂಥ ಸ್ತ್ರೀರತ್ನವನ್ನು ಹೊಂದ ಬೇಕಾದವನು ಅಲೌಕಿಕ ಗುಣಸಿಧಿಯು ವಿದ್ಯಾಸಂಪನ್ನನೂ ಮದನನಕಿಂತಲೂ ಗುಂಜಿತೂಕ ಹೆಚ್ಚು ಸುಂದರನೂ ಆಗಿರಬೇಕೇ ಹೊರ್ತು ಅನ್ಯರ ಭಾಗ್ಯವಿದಲ್ಲ.

ಇಂದಿರೆಯು ಸಿಕ್ಕವರ ಕೂಡ ಸ್ನೇಹಮಾಡುವುದಿಲ್ಲವೆಂದು ತಾನೇ ಹೇಳಿದಳು. ಅದೇ ಇಂದುಮುಖಿಯು ತನ್ನನ್ನು ಸ್ನೇಹಿತನನ್ನಾಗಿ ಮಾಡಿಕೊಂಡಳಲ್ಲ. ಇದಕ್ಕೂ ಹೆಚ್ಚಿನದು ನನ್ನ ದೈವದಲ್ಲಿ ಇದ್ದೀತೇನು? ಹಾಗಾದ ಪಕ್ಷದಲ್ಲಿ ತ್ರಿಭುವನದಲ್ಲಿ ನಾನೊಬ್ಬನೇ ಭಾಗ್ಯಶಾಲಿಯು. ಹೀಗೆ ಅನೇಕತರದ ಮನೋಹರವಾದ ವಿಚಾರ ಗಳಲ್ಲಿ ಮುಳುಗಿದವನು ಬೇಸತ್ತು ಅದೇ ರಾತ್ರಿ ರಮಾಕಾಂತನು ನದಿಯ ಕಡೆಗೆ ನಡೆದನು. ಚಂದ್ರಮನನ್ನು ಪ್ರತಿಬಿಂಬಿಸುತ್ತಿರುವ ಕಾವೇರಿಯ ಸಂಧಾಮಯ ವಾದ ಸಲಿಲದಿಂದ ತನ್ನ ಮಸ್ತಕಕ್ಕೆ ಶೀತೋಪಚಾರ ಮಾಡಿಕೊಂಡು ಓಷಧೀ ನಾಥನೂ ಅಮೃತಕಿರಣನೂ ಆದ ಸಾಕ್ಷಾತ್ ಚಂದ್ರನ ಕರಗಳಿಂದಲೇ ಉಪಚಾರ ಹೊಂದಬೇಕೆಂದು ನದೀತೀರಕ್ಕೆ ಬಂದನು. ರಮಾಕಾಂತನು "ಶಾಂತನು" ಸಿಗರೇಟ್ ಸೇದಿ ಸುಗಂಧವಾದ ಹೊಗೆ ಬಿಡುತ್ತ ಬರುತ್ತಿದ್ದನಾದಕಾರಣ ಅವನ ಮುಂದೆ ಬೆಂಕಿಕಿಡಿಯು ತಾನೇ ನಡೆದುಬರುವದೆಂದು ನಟೇಶನಿಗೆ ಭಾಸವಾಯಿತು. ರಮಾಕಾಂತನು ನಟೇಶನನ್ನು ನೋಡಿ "ಯಾರವರಲ್ಲಿ ಕುಳಿತವರು?" ಎಂದು ಕೇಳಿದನು.

ಮನುಷ್ಯರ ಉಲವು ಕೇಳಿ ನಟೇಶಗೆ ಜೀವದಲ್ಲಿ ಜೀವಬಂದಂತಾಯಿತು. "ನನಗೆ ಮದ್ದೂರ ನಟೇಶನೆಂದು ಕರೆಯುವರು. ತಾವು ಯಾರು?" ಎಂದು ನಟೇಶನು ಕೇಳಿದನು.

"ನಾನು ಹೀಗೇ ಒಬ್ಬ ದೇಶಸಂಚಾರಿಯು. ಕಾವೇರಿಯ ಜಲಸಂಸರ್ಗ ದಿಂದ ಶೀತಲವಾದ ಗಾಳಿಯನ್ನು ಸೇವಿಸುತ್ತ ಆನಂದದಿಂದ ಮಲಗಿದವರಿಗೆ ನಾನು ಬರುವವರಿಂದ ವ್ಯತ್ಯಾಸವಾಗಲಿಲ್ಲವಷ್ಟೇ? ಈ ನಿದಾಘಕಾಲದಲ್ಲಿ ಮಂದಮಾರುತನ ಶೀತಲಸ್ಪರ್ಶವು ಆಹ್ಲಾದಕರವಾಗಿರುವದಲ್ಲವೇ?"

"ಮಂದವಾಯುವೆಲ್ಲಿ? ಈಗಲೇ ಬಿರುಗಾಳಿ ಬಿಟ್ಟು ಮನೋರಥಗಳನ್ನು ಉರುಳಾಡಿಸಿಬಿಡುತ್ತರದಲ್ಲ."

"ಹೀಗೆ ಹೇಗೆನ್ನುವಿರಿ? ನಾನು ನಂಬುವದು ಹೇಗೆ? ಮೃದುಸ್ಪರ್ಶನಾದ ಮಲಯಮಾರುತನು ಆನಂದವನ್ನೀಯುವದನ್ನು ನಾನನುಭವಿಸುತ್ತೇನಲ್ಲವೆ?"

"ಅದೇನೋ ನನಗೆ ತಿಳಿಯದು" ಎಂದು ಉದಾಸೀನನಾದ ನಟೇಶನಂದನು,

"ಶ್ರೀರಂಗಪಟ್ಟಣವು ಬಹು ರಮಣೀಯವಾದ ಸ್ಥಳವು. ಇಲ್ಲಿಯವರು ಸಹಜವಾಗಿ ಸುಖಿಗಳೇ ಇರುವರೆಂದು ನಾನು ನಂಬುತ್ತೇನೆ."

"ಇಲ್ಲಿಯ ಜನರು ಸುಖಿಗಳೋ? ಸುಖವು ಹೇಗಿರುವದೆಂಬುದು

ಮನುಷ್ಯಮಾತ್ರಕ್ಕೆ ಗೊತ್ತುಂಟೇನು ?"

"ನನಗಂತೂ ಇಲ್ಲಿ ಸುಖವೇ ತುಂಬಿರುವಂತೆ ಕಾಣುತ್ತದೆ. ನೀವು ಸಿಗರೆಟ್ಟು ಸೇದುವಿರೇನು ? ಇದನ್ನು ತಕ್ಕೊಳ್ಳಿ ಬಹು ಚನ್ನಾಗಿದೆ." ಎಂದು ರಮಾಕಾಂತನು ತನ್ನ 'ಶಾಂತನು'. ಸಿಗರೆಟ್ಟಿನ ಡಬ್ಬಿಯನ್ನು ನಟೇಶನ ಸ್ವಾಧೀನಮಾಡಿದನು.

ನಟೇಶನು ಆ ಡಬ್ಬಿಯಲ್ಲಿಯದೊಂದು ಸಿಗರೇಟ್ ತಕ್ಕೊಂಡು ಡಬ್ಬಿಯನ್ನು ರಮಾಕಾಂತನಿಗೆ ಕೊಟ್ಟನು. ರಮಾಕಾಂತನು ಕಡ್ಡಿ ಕೊರೆದು ನಟೇಶನಿಗೆ ಸಿಗರೇಟ್ ಹೊತ್ತಿಸಲಿಕ್ಕೆ ಹೇಳಿದನು. ಕಡ್ಡಿಯ ಬೆಳಕಿನಲ್ಲಿ ನಟೇಶನಿಗೆ ರಮಾಕಾಂತನ ಸುಂದರ ವಾದ ಮುಖವು ಕಂಡಿತು. ಇಂದಿರೆಯು ಹೇಳುವ ರಮಾಕಾಂತನಿವನೇ ಇರುವನೋ ಎಂದು ಸಂಶಯಗೊಂಡು ನಟೇಶನು–"ನೀವು ಈ ಊರಿಗೆ ಹೊಸಬರೆಂದು ಹೇಳಿದಿ ರಲ್ಲವೆ" ಎಂದು ಕೇಳಿದನು.

"ಅಹುದು" ಎಂದು ರಮಾಕಾಂತನಂದನು.

"ದೇವಯಾನಿಯ ಮನೆಗೆ ನಿನ್ನೆ ಸಾಯಂಕಾಲಕ್ಕೆ ಬಂದವರು ನೀವೇ ಏನು ?"

"ಅಹುದು ನಾನೇ, ಏಕೆ ?"

"ಹಾಗಾದರೆ ನಿಮ್ಮ ಜೊತೆ ನನಗೆ ಬೇಕಾಗಿಲ್ಲ. ಇದು ತಕ್ಕೊಳ್ಳಿ ನಿಮ್ಮ ಸಿಗರೇಟ್" ಎಂದು ತನ್ನ ಬಾಯಲ್ಲಿಯ ಎಂಜಲ ಸಿಗರೇಟನ್ನು ನಟೇಶನು ರಮಾ ಕಾಂತನಿಗೆ ಕೊಡಹೋದನು.

"ಬುದ್ಧಿವಂತನೇ, ಅನ್ಯರು ಬಾಯಲ್ಲಿಟ್ಟು ಸೇದಿದ ಸಿಗರೇಟನ್ನು ಯಾರಾ ದರೂ ತಿರಿಗಿ ತಕ್ಕೊಂಡಿದ್ದುಂಟೇ ?"

"ಹೀಗೋ ! ಅಂದರೆ ಹಾಳಾಗಲಿ ಸಿಗರೆಟ್ಟು" ಎಂದು ನಟೇಶನು ಉದ್ದಾಮತನದಿಂದ ಸಿಗರೆಟ್ಟನ್ನು ಎಸೆದುಬಿಟ್ಟು ರಮಾಕಾಂತನನ್ನು ಕೆಟ್ಟಗಣ್ಣಿಲೆ ನೋಡಿದನು.

"ಹಾಳಾಗವಲ್ಲದೇಕಾ ಸಿಗರೆಟ್ಟು. ಆದರೆ ಇನ್ನು ಮುಂದೆ ನಿನಗೆ ಯಾರಾ ದರೂ ಸಿಗರೆಟ್ಟು ಕೊಡಬಂದರೆ ಸೇದುವ ಮನಸ್ಸಿದ್ದರೆ ತಕ್ಕೋ. ಇಲ್ಲದಿದ್ದರೆ ಒಲ್ಲೆ ನೆಂದು ಹೇಳು. ಹೀಗೆ ಅಸಭ್ಯತೆಯಿಂದ ವರ್ತಿಸಬಾರದು. ನಿನ್ನಂಥ ಅವಿನೀತನನ್ನು ನಾನೆಲ್ಲಿಯೂ ಕಾಣಲಿಲ್ಲ. ಮದಿರಾದೇವಿಯ ಪರಿಚಯವುಂಟೇನು ನಿನಗೆ ?"

"ಏನನ್ನುವಿಯೋ ನಿಂದಕನೇ ? ಅಪವಾದ ಹೊರಿಸುವಿಯಾ ?" ಎಂದು ಗುದ್ದುಗೆಯೆತ್ತಿ ನಟೇಶನು ನಿಂತನು.

ಇದನ್ನು ನೋಡಿ ರಮಾಕಾಂತನಿಗೆ ಸಿಟ್ಟು ತುಂಬಿತು. ಆದರೂ ತಡೆಕೊಂಡು "ನೀನು ನಿಜವಾಗಿ ಮತಿಭ್ರಷ್ಟನಂತೆ ಕಾಣುತ್ತೀ. ಮನೆಗೆ ಹೋಗಿ ಸ್ವಸ್ಥ ಮಲಗಿಕೋ. ಪೋಲೀಸರು ಕಂಡರೆ ನಿನ್ನನ್ನು ಹಿಡಿದೊಯ್ಯುವರು." ಎಂದು ಹೇಳಿ ರಮಾಕಾಂತನು ಬೇರೆ ಸ್ಥಳದಲ್ಲಿ ಹೋಗಿ ಕೂಡ್ರಬೇಕೆಂದು ನಡೆದನು.

ತನ್ನ ಪ್ರತಿಸ್ಪರ್ಧಿಯ ಸೇಡು ತೀರಿಸಿಕೊಳ್ಳುವದಕ್ಕೊಳ್ಳೇ ಸಮಯ ಸಿಕ್ಕಿತೆಂದೆಣಿಸಿ ನಟೇಶನು ಆವೇಶದಿಂದಂದದ್ದು—"ಹೇಡೀ, ಎಲ್ಲಿಗೆ ನಡದೆ! ನಿನ್ನನ್ನು ನಾನು ಹೀಗೇ ಬಿಡುವೆನೇ? ನಿನ್ನ ಬಾಯಿಂದ 'ದಮ್ಮಯ್ಯ' ಎಂದೆನಿಸೇ ಬಿಡುವೆನು. ಇಲ್ಲದಿದ್ದರೆ ನಿನ್ನ ಸಂತೆಯಾಯಿತೆಂದು ತಿಳಿ" ಎಂದು ರಮಾಕಾಂತನ ಧೋತ್ರ ಹಿಡಿದು ಜಗ್ಗಿದನು.

ರಮಾಕಾಂತನು ನಟೇಶನಿಗಸಾಧ್ಯನಾದ ಸಮರ್ಥನು. ಅವನು ನಟೇಶನನ್ನು ಸಹಜ ದೂಡಿಹಾಕಲು, ಪಾಪ! ನಟಿಯು ದಿಂಡುಳ್ಳಿಕೆಯುಳ್ಳಿ ಸಮೀಪದಲ್ಲಿದ್ದ ಮಡುವಿನಲ್ಲಿ ಬಿದ್ದನು. ರಮಾಕಾಂತನು ಪಶ್ಚಾತ್ತಾಪಪಟ್ಟು ಅವನನ್ನು ಹಿಡಿಯಹೋಗುವಷ್ಟರಲ್ಲಿ ನಟೇಶನು ಒಂದಾವರ್ತಿ ಮುಳುಗಿ ಎದ್ದು ಮತ್ತೆ ಮುಳುಗಿದನು. ರಮಾಕಾಂತನು ಮೈಮೇಲಿನ ಬಟ್ಟೆಗಳೊರಿಸೇ ಮಡುವಿನಲ್ಲಿ ಹಾರಿಕೊಂಡು ನಟೇಶನ ಜುಟ್ಟು ಹಿಡಿದು ಅವನನ್ನು ದಂಡೇ ಮೇಲೆ ತಂದು ಹಾಕಿದನು. ನಟೇಶನು ಗಾಬರಿಯಿಂದ ದೀರ್ಘಶ್ವಾಸಬಿಡುತ್ತಿದ್ದನು. ಮಾತಾಡುವಷ್ಟು ತ್ರಾಣ ಬಂದ ಕೂಡಲೆ ಅವನು ನಮ್ರನಾಗಿ ಅಂದದ್ದು: "ರಾಯರೇ, ದಯಮಾಡಿ ನನ್ನಪರಾಧವನ್ನು ಕ್ಷಮಿಸಿರಿ, ನಾನು ಟೊಣಪನಂತೆ ಆಚರಿಸಿದೆನು. ಪಶುವಿನಂತೇಕನ್ನಲೊಲ್ಲಿರಿ. ಆವಾಗ್ಯೆ ನನ್ನ ಬುದ್ಧಿಗೇನಾಗಿತ್ತೋ ಹೇಳಲಾರೆನು."

"ನೀನು ಬದುಕಿದಿ ಇಷ್ಟೇ ಸಾಕು. ನನ್ನಿಂದ ಪ್ರಮಾದವೇ ಆಗಿತ್ತು. ನಡೆ."

"ನಾನು ನನ್ನಪರಾಧವನ್ನಂಗೀಕರಿಸಿದ್ದೇನೆ, ದಯಮಾಡಿ ಕ್ಷಮಿಸಿರೆಂದು ಸೆರಗೊಡ್ಡಿ ಬೇಡಿಕೊಳ್ಳುತ್ತೇನೆ."

ಹಾಗೇ ಆಗಲೆಂದು ರಮಾಕಾಂತನು ಉದಾರಮನಸ್ಸಿನಿಂದ ನಟೇಶನ ಕೈ ಹಿಡಿದು "ನಾನು ಕಿಂಚಿತ್ತಾದರೂ ಸಿಟ್ಟು ಹಿಡಿದಿಲ್ಲ." ಎಂದು ಹೇಳಿದನು.

"ತಮ್ಮ ಹೆಸರು ರಮಾಕಾಂತರಾಯರಲ್ಲವೆ? ರಮಾಕಾಂತರಾಯರೇ, ನೀವೀದಿವಸ ನನಗೆ ಪ್ರಾಣದಾನ ಕೊಟ್ಟಿರಿ, ಮೇಲೆ ನನ್ನಪರಾಧವನ್ನು ಕ್ಷಮಿಸಿದಿರಿ, ತಮ್ಮುಪಕಾರ ನನ್ನ ಮೇಲೆ ಬಹಳಾಯಿತು."

"ನಟೇಶ ಹೋಗಲಿ ಬಿಡು. ಇಂಥ ಪ್ರಸಂಗದಲ್ಲಿ ಕೈ ಮೇಲೆ ಕೈ ಹಾಕಿದವರು ಒಳ್ಳೇ ಮಿತ್ರರಾಗಿರಲಿಕ್ಕಬೇಕು ಕಂಡಿಯಾ, ನಡಿ ಎಲ್ಲಿಯಾದರೂ ಹೋಗಿ ಬಟ್ಟೆಗಳನ್ನೊಣಗಿಸಿಕೊಂಡು ನಮ್ಮ ನಮ್ಮ ಮನೆಗಳಿಗೆ ಹೋಗುವಾ."

"ನಮ್ಮ ಮನೆಗೆ ನಡೆಯಿರಿ. ನಮ್ಮ ತಾಯಿಯು ಮಲಗಿರುವಳಾದೀತು, ಅಲ್ಲಿ ನಿಮ್ಮ ಬಟ್ಟೆಗಳನ್ನೊಣಗಿಸಿಕೊಂಡು ಹೋಗುವಿರಂತೆ."

ನಟೇಶನ ಮನೆಯಲ್ಲಿ ಕೊಟ್ಟ ಅವನ ಪಂಚೆಯನ್ನುಟ್ಟುಕೊಂಡು ರಮಾಕಾಂತನು ತನ್ನ ಬಟ್ಟೆಗಳನ್ನೊಣಗಹಾಕಿ ಕುಳಿತುಕೊಂಡನು. ನಟೇಶನೂ ಹಾಗೇ ಮಾಡಿ ರಮಾಕಾಂತನ ಹತ್ತರ ಬಂದು ಕುಳಿತ ಬಳಿಕ "ನಟೇಶ್, ಈ ಸುದ್ದಿಯನ್ನಾರಮುಂದೂ ಹೇಳತಕ್ಕದಲ್ಲ, ಹೇಳಿದರೆ ಜನರಲ್ಲಿ ನಗೆಗೇಡಾಗುವದು." ಎಂದು ರಮಾಕಾಂತನು ಹೇಳಿದನು.

"ಇದನ್ನು ನಾನು ಹೇಳತಕ್ಕವನೇ! ನಿಮ್ಮ ಧೀರೋದಾರಗಳಾದ ಗುಣಗಳನ್ನು ನಾನು ಪ್ರಕಟಮಾಡದಿದ್ದರೆ ನಾನು ಕೃತಘ್ನನಾಗುವೆನಲ್ಲ!"

"ನೋಡು ನಟೇಶ್, ಈಸಬಿಲ್ಲವರು ಮುಳುಗುವವರನ್ನುಳಿಸಲೇ ಬೇಕಲ್ಲವೆ?"

"ರಾಯರೇ, ತಾವು ದೊಡ್ಡವರು. ತಾವು ಹೇಳಿದಂತೆ ನಾನು ನಡಕೊಳ್ಳಲೇ ಬೇಕಲ್ಲ! ಈ ದೇಶದಲ್ಲಿ ದೊಡ್ಡವರು ಕೀಳರು ಎಂದು ಜನರಲ್ಲಿ ಭೇದವಿದ್ದ ಮೂಲಕ ಎಷ್ಟೋ ಜನರು ತಮ್ಮ ಇಚ್ಛೆಗೆ ವಿರುದ್ಧವಾಗಿ ಕುರಿಗಳಂತೆ ದೊಡ್ಡವರು ಹೇಳಿದಂತೆ ನಡೆದುಕೊಳ್ಳುತ್ತಾರಲ್ಲ! ನನ್ನದೂ ಅದೇ ಗತಿಯಾಗಿದೆ. ಎಲ್ಲರೂ ಸಮಾನರೆಂದು ಸಾರ್ವತ್ರಿಕ ಮತವಿದ್ದರೆ ನಾನು ಈಗಿರುವದರಕ್ಕಿಂತಲೂ ಹೆಚ್ಚಿನ ಸುಖವನ್ನನುಭವಿಸುತ್ತಿದ್ದೆನು."

"ಶಾಬಾಸ್ ನಟೇಶರಾವ, ಹೀಗೆ ನಿನ್ನ ವಿಚಾರಗಳಿರುವವೇನು! ಬುದ್ಧಿವಂತರು, ಹೆಡ್ಡರು, ಶ್ರೀಮಂತರು, ಬಡವರು, ಸಜ್ಜನರು, ನೀಚರು, ಹೀಗೆ ಭೇದಗಳಿರುವವಷ್ಟೆ! ಈ ಭೇದಗಳನ್ನು ನೀನು ಹೇಗೆ ತಪ್ಪಿಸಬಲ್ಲಿ!

"ನಾನು ಹೇಳುವದು ಹಾಗಲ್ಲ. ಮನುಷ್ಯರಲ್ಲಿ ಗಂಡು, ಹೆಣ್ಣು ಎಂಬ ಭೇದವಿದ್ದಂತೆ, ದೊಡ್ಡವರು ಕೀಳರೆಂಬ ಭೇದವನ್ನು ದೇವರು ಮಾಡಿಲ್ಲ. ಅಮೇರಿಕೆಯಲ್ಲಿ ನೋಡಿರಿ, ಎಲ್ಲ ಜನರೂ ಸಮಾನರೆಂದು ಆ ದೇಶದ ತತ್ವವಿರುವದಷ್ಟೇ!

"ನಾವು ಯಾವ ದೇಶದಲ್ಲಿರುವೆವೋ ಆ ದೇಶದ ನಡಾವಳಿಯಂತಿರಬೇಕು. ಅದು ನಿನ್ನ ಮನಸ್ಸಿಗೆ ಬಾರದಿದ್ದಲ್ಲಿ ನೀನಿಲ್ಲಿರತಕ್ಕದ್ದೇ ಸರಿಯಲ್ಲ. ಹೋಗ

ಬಾರದೇ ಅಮೇರಿಕೆಗೆ ನೋಡೋಣ ?"

"ನಾನೂ ಹೋಗಬೇಕೆಂದೇ ನಿಶ್ಚಯ ಮಾಡಿಕೊಂಡಿರುವೆನು. ಆದರೆ ನನ್ನ ಹತ್ತಿರ ಸಾಕಷ್ಟು ಹಣವಿಲ್ಲ."

ಹೀಗೆ ಇವರಿಬ್ಬರು ಕೆಲಹೊತ್ತು ಮಾತಾಡುತ್ತ ಕುಳಿತ ಬಳಿಕ "ಬಟ್ಟೆಗಳೊಣಗಿರಬಹುದು" ಎಂದು ಹೇಳಿ ರಮಾಕಾಂತನು ತನ್ನ ಬಟ್ಟೆಗಳನ್ನು ಧರಿಸಿ ತನ್ನ ಮನೆಗೆ ಹೊರಟನು.

ಅಪ್ಪಯ್ಯಾ! ಯಾತರ ಮಾತಿಗಿಷ್ಟೊಂದು ?

ಶ್ರೀಮಂತರ ಮಕ್ಕಳಿಗೆ ಕೂಡಾ ದೊರಕದಷ್ಟು ವಿದ್ಯೆಯನ್ನು ರಮಾಕಾಂತನಿಗೆ ಆತನ ತಂದೆಯು ಒಳ್ಳೇ ಪ್ರಯತ್ನಪೂರ್ವಕವಾಗಿ ಕೊಡಿಸಿದ್ದನು. ಸಂಸ್ಕೃತ, ಹಿಂದೀ, ಮಹಾರಾಷ್ಟ್ರ ಮುಂತಾದ ಭಾಷೆಗಳು ರಮಾಕಾಂತನಿಗೆ ಅವಗತವಾಗಿದ್ದು ಆಯಾ ಭಾಷೆಗಳಲ್ಲಿಯ ಮಹತ್ವವಾದ ಗ್ರಂಥಗಳ ಪರ್ಯಾಲೋಚನೆಯನ್ನು ಅವನು ಮಾಡಿದ್ದನು. ಶಾಸ್ತ್ರೀಯ ವಿಷಯಗಳಲ್ಲಂತೂ ಅವನು ವಿಶ್ವವಿದ್ಯಾಲಯದ ಪದವೀಧರನೇ. ಗಾಯನ ಚಿತ್ರಕಲೆಗಳಲ್ಲಿ ಮಾರ್ಮಿಕನಿದ್ದನು. ತನ್ನ ತಂದೆಯು ಕೂಡ ಇಡೀ ಭರತಖಂಡದಲ್ಲೆಲ್ಲಾ ತಿರುಗಾಡಿ ಬಂದಿದ್ದರಿಂದ ಅನೇಕ ದೇಶಗಳಲ್ಲಿಯ ಆಚಾರವಿಚಾರಗಳನ್ನು ತಿಳಿದವನಾಗಿದ್ದನು.

ನವರಸಪುರದ ದೇಸಾಯರ ಮನೆತನದವನಾಗಿದ್ದರೂ ರಮಾಕಾಂತನು ತನ್ನ ಬುದ್ಧಿವೈಭವದಿಂದಲೇ ಘನತೆಗೇರಬೇಕೆಂಬ ಹವ್ಯಾಸವುಳ್ಳವನಾಗಿ ತನ್ನಾಸ್ತಿಯಲ್ಲಿ ಮನಸ್ಸು ಹಾಕದೇ ಬೆಂಗಳೂರಲ್ಲಿ ಬಂದು ನಿಂತಿದ್ದನು. ಮೈಸೂರು ಪ್ರಾಂತದಲ್ಲಿ ಇವನಿಗೆ ಮನೆಮಾರು ಇದ್ದಿಲ್ಲ, ಅವನ ಹತ್ತಿರ ಹೇಳಿಕೊಳ್ಳುವಷ್ಟು ಹಣವೂ ಇದ್ದಿಲ್ಲ. 'ಪ್ರಚ್ಛನ್ನಗುಪ್ತಂ ಧನಂ' ಎಂಬಂತೆ ಇವನ ಧನವೆಂದರೆ ಇವನ ಅಗಾಧವಾದ ವಿದ್ಯಾಚಾತುರ್ಯಗಳೇ. ತನ್ನ ಪ್ರಭಾವವು ಎಷ್ಟಿರುವದೆಂದು ಇವನಿಗೆ ಸಂಪೂರ್ಣವಾಗಿ ತಿಳಿದದ್ದರಿಂದ ಇವನಿಗಾವ ಮಾತಿನದೂ ಆಲೋಚನೆಯಿದ್ದಿಲ್ಲ.

ಮೈಸೂರ ಪ್ರಾಂತದಲ್ಲಿ ದೊಡ್ಡವರು ಕೀಳರೆಂಬ ಭೇದವು ಬಹಳವಾಗಿರುವದೆಂದು ನಟೇಶನ ಮುಖದಿಂದ ಕೇಳಿ ರಮಾಕಂತನು ಸ್ವಲ್ಪ ಶಂಕಿತನಾದನು. ಈ ಭೇದದ ಭರದಲ್ಲಿ ಇಂದಿರೆಯು ತನ್ನನ್ನು ಕೀಳನೆಂದು ಹೀಯಾಳಿಸಲಿಕ್ಕಿಲ್ಲವಲ್ಲ! ಏನು! ತಾನು ನವರಸಪುರದ ದೇಸಾಯರ ತಮ್ಮನ ಮಗನಿರುವನೆಂದೂ ದೈವವು ಅನುಕೂಲವಾದರೆ ತಾನು ನವರಸಪುರದ ದೇಸಾಯಿಯೇ ಆಗುವೆನೆಂದೂ

ಇಂದಿರೆಯು ಮುಂದೆ ಪಂಚಾಂಗ ಬಿಚ್ಚಿ ಹೇಳಬೇಕೋ ? ತಾನು ಕಮಲಾಕಾಂತರ ಮಗನೆಂದು ಅವಳಿಗೆ ಗೊತ್ತದೆ. ಕಮಲಾಕಾಂತರಂತೂ ಸದ್ಗೃಹಸ್ಥರಿದ್ದರೆಂದು ಆಬಾಲವೃದ್ಧರಿಗೆ ಗೊತ್ತಿದ್ದ ಮಾತೇ. ಮನುಷ್ಯನಲ್ಲಿ ಗುಣಾಧಿಕ್ಯವನ್ನು ಕಂಡ ಪಕ್ಷದಲ್ಲಿ ಇಂದಿರೆಯು ಇಂಥ ಭೇದಗಳನ್ನು ಲೆಕ್ಕಿಸುವಳಲ್ಲ, ಹೀಗೆ ಅನೇಕತರದ ವಿಚಾರಗಳಲ್ಲಿ ತೊಳಲುತ್ತ ಆ ರಾತ್ರಿ ರಮಾಕಾಂತನು ಯಾವಾಗ ನಿದ್ರಾವಶನಾದನೋ ಹೇಳಲಾರೆವು.

ಈ ವಿಚಾರಗಳಲ್ಲಿ ತೊಡಗಿ ವಿಷಣ್ಣನಾಗಿ ಮಲಗಿದವನು ಪ್ರಾತಃಕಾಲದ ಪ್ರೈಚ್ಚತ್ತು ಪಕ್ಷಿಗಳ ಮಧುರಧ್ವನಿಯಿಂದಲೂ, ಪುಷ್ಪಗಳ ಮಕರಂದದಿಂದಲೂ ಸುಖಸ್ಪರ್ಶವಾದ ತಂಗಾಳಿಯಿಂದಲೂ ಪ್ರಸನ್ನಮನಸ್ಸಿನವನಾಗಿ ಎದ್ದು ಕುಳಿತನು. ಸ್ನಾನ ಮಾಡಿ ಪೋಷಾಕು ಹಾಕಿಕೊಂಡು ದೇವಯಾನಿಯ ಸಂಗಡ ಚಹ ತಕ್ಕೊಳ್ಳಲಿಕ್ಕೆ ಸಿದ್ಧನಾಗುವಷ್ಟರಲ್ಲಿಯೇ ಪಾವಟಿಗೆಯ ಮೇಲೆ ಪೈಜಣದ ಸಪ್ಪಳವಾಯಿತು. ಈ ಸಪ್ಪಳವು ಇಂದಿರೆಯ ಚರಣನಿಕ್ಷೇಪದಿಂದೇ ಹುಟ್ಟಿರಬಹುದೆಂದು ರಮಾಕಾಂತನು ಗ್ರಹಿಸಿ ಕಾತರಗೊಂಡನು. ಅವನಿಗೆ ತನ್ನ ಹೃದಯವೇ ತನ್ನ ದೇಹವನ್ನು ಬಿಟ್ಟು ಕಡೆಗೆ ನಡೆದಿರುವದೋ ಎಂದೆನಿಸಿತು.

" ಇಂದಿರಾ, ರಾತ್ರಿಯಲ್ಲಿ ಮಲಗಿಕೊಂಡಿದ್ದೆಯೋ ಇಲ್ಲವೋ ? ಇಷ್ಟು ಬೇಗ ಚಹ ಉಪಹಾರಗಳನ್ನು ತಕ್ಕೊಂಡು ಬಂದಿಯಾ ? " ಎಂದು ದೇವಯಾನಿಯು ಅಂದದ್ದು ಕೇಳಿ ರಮಾಕಾಂತನು ಬಾಕಿಲಕಡೆ ನೋಡಲು ಇಂದಿರೆಯ ಮೋಹಕವಾದ ಮೂರ್ತಿಯನ್ನೇ ಕಂಡನು.

ಈ ದಿವಸ ಇಂದಿರೆಯು ಮನಸ್ಸುಕೊಟ್ಟು ಉಡಿಗೆ ತೊಡಿಗೆಗಳನ್ನು ಮಾಡಿಕೊಂಡಿದ್ದಳು. ಅಂಜೂರಿ ಬಣ್ಣದ ಜರದ ಸೀರೆಯನ್ನುಟ್ಟು, ಬಿಳೀ ಜರತಾರಿ ಕುಪ್ಪಸವನ್ನು ತೊಟ್ಟಿದ್ದಳು. ಮೈಮೇಲೆ ಕೇಸರೀಬಣ್ಣದ ಕಲಾಬತ್ತಿನ ಶಾಲು ಹೊದ್ದಿದ್ದಳು. ಅಲಂಕಾರಗಳಿಗೇ ಭೂಷಣವನ್ನು ಕೊಡುವ ಈ ಮನೋಹಾರಿಯು ಅಸಹಾಯುಶೂರನು ತನ್ನ ವಿಶ್ವಾಸಿಕರಾದ ನಿಯಮಿತ ಭಟರನ್ನು ಕಟ್ಟಿಕೊಂಡು ತನ್ನ ಪೌರುಷದ ಮಹಿಮೆಯಿಂದಲೇ ಸುರಾಸುರರು ಕೊಂಡಾಡುವ ಹಾಗೆ ಸಮರವೈಚಿತ್ರ್ಯವನ್ನು ತೋರಿಸುವಂತೆ, ಸ್ವಲ್ಪೇ ವಿಶಿಷ್ಟಾಭರಣಗಳನ್ನಿಟ್ಟುಕೊಂಡು ತನ್ನಷ್ಟ ಸೌಂದರ್ಯದ ಪ್ರಭಾವದಿಂದಲೇ ಶುಕಾಚಾರ್ಯರನ್ನು ಕೂಡಾ ಮೋಹಿಸುವಂತೆ ಕಂಡಳು. ವಾಚಕರೇ ! ಇವಳನ್ನು ನೋಡಿ ರಮಾಕಾಂತನ ಸ್ಥಿತಿ ಏನಾಗಿರಬಹುದೆಂಬದನ್ನು ನೀವಾದರೂ ಹೇಳಬಲ್ಲಿರೇನು ?

ದೇವಯಾನಿಯ ಮಾತಿಗೆ "ಅಂದರೆ ನೀವು ನನಗೆ ಚಹ ಕೊಡಬಾರದೆಂದು ಮಾಡಿರುವಿರೇನು ? ತಾಸು ಹೊತ್ತೇರಿ ಇಲ್ಲಿಗೆ ಬರಬೇಕಾದರೆ ರಾತ್ರಿಯಲ್ಲಿ ಮಲಗಕೂಡದೇನು ದೇವಯಾನಿಯಮ್ಮನವರೇ ?" ಎಂದು ನುಡಿದು ಕಾಜು ಪಾತ್ರೆಯಲ್ಲಿದ್ದ ಚಹವನ್ನು ಬೆಳ್ಳಿಯ ಬಟ್ಟಲಿಗೆ ಹಾಕಿಕೊಂಡು ಕುಳಿತಳು. ಪರಕೀಯಭಾವವಿಲ್ಲದೆ ಸ್ವಂತ ಮನೆಯಂತೆ ಸಥಿಯಿಂದ ನಡಕೊಳ್ಳುವೀ ವಿಮಲ ಹೃದಯಳಾದ ಅಂಗನೆಯನ್ನು ಕಂಡು ದೇವಯಾನಿಗೆ ಮಿತಿಮೀರಿದ ಹರ್ಷ ವಾಯಿತು.

"ಅಕ್ಕಯ್ಯಾ, ನಿನ್ನ ದಾಕ್ಷಿಣ್ಯವನ್ನು ನೋಡಿ ನಾನು ಬೆರಗಾದೆನು. ಹೀಗೆ ನಿತ್ಯದಲ್ಲಿಯೂ ನನ್ನಿಂದ ಸ್ತುತಿಗಳನ್ನು ನೀನು ಸೆಳಕೊಳ್ಳಹತ್ತಿದರೆ ನನ್ನ ವರ್ಚಸ್ವ ವನ್ನೇ ಇಲ್ಲದಂತೆ ಮಾಡುವಿಯಲ್ಲ !" ಎಂದು ನುಡಿದೆದ್ದು ದೇವಯಾನಿಯು ಇಂದಿರೆಯ ಬೆನ್ನು ಚಪ್ಪರಿಸಿದಳು.

"ರಮಾಕಾಂತರಾಯರೆ, ಇನ್ನಿಷ್ಟು ಚಹ ಹಾಕಲೇನು ! ಬಹು ಸೊಗ ಸಾಗಿದೆ" ಎಂದು ಇಂದಿರೆಯು ಆಗ್ರಹದಿಂದ ಅವನ ಬಟ್ಟಲಿನಲ್ಲಿ ಚಹ ಹಾಕಿದಳು.

ಇಂದಿರೆಯು ಕೊಟ್ಟ ವಿಷವನ್ನಾದರೂ ಕುಡಿಯಲಿಕ್ಕೆ ಸಿದ್ಧನಾದವನು ಚಹ ಬಿಡುವನೇ ! ಅದನ್ನೇನು ಪ್ರೇಮರಸವೆಂದು ಭಾವಿಸಿಕೊಂಡನೋ ! ಬಟ್ಟಲಿನಲ್ಲಿ ಒಂದು ಹನಿಯುಳಿಸದೆ ಕುಡಿದುಬಿಟ್ಟು "ಇಂದಿರಾಬಾಯೀ, ನೀವು ಹೇಳಿದಂತೆ ಚಹ ಸರ್ವೋತ್ಕೃಷ್ಟವಾಗಿದೆ." ಎಂದು ರಮಾಕಾಂತನಂದನು.

"ಅಪ್ಪಾ, ಕಂಕಣದ ಕಯ್ಯುಮುಟ್ಟಿದ್ದರಿಂದ ಚಹ ನಿನಗೆ ಸರ್ವೋತ್ಕೃಷ್ಟವೆನಿಸಿ ತಲ್ಲವೇ ! ಅದೇ ಚಹವನ್ನೇ ನಾನು ಕುಡಿದೆನಲ್ಲ. ಸರ್ವಸಾಧಾರಣವಿತ್ತು" ಎಂದು ದೇವಯಾನಿಯು ವಾಗ್ಬಾಣ ಬಿಟ್ಟಳು.

"ಅಮ್ಮಾ, ನೀವು ಬೇಕಾದರೆ ವಾಗ್ಬಾಣಗಳ ಮಳೆಗರಿಯರಿ ನಾನು ಬೇಡನ್ನು ವುದಿಲ್ಲ. ಆದರೆ ಸುಳ್ಳೇಕೆ ? ಈ ಚಹ ಸರ್ವಸಾಧಾರಣವಿರುವದೇನು ?" ಎಂದವಳೇ ಇಂದಿರೆಯು ದೇವಯಾನಿಯ ಬಟ್ಟಲಿನಲ್ಲಿ ಚಹ ಸುರುವಿದಳು.

"ಅಹುದೇ ! ಮೋಸಗಾರ್ತಿ, ಒಳ್ಳೇ ಬಲೆ ಹಾಕಿದಿ ! ಸುಸೂತ್ರವಾಗಿ ಆಗ್ರಹಮಾಡಿದ್ದರೂ ನಿನಗೋಸ್ಕರ ಕುಡಿಯುತ್ತಿದ್ದೆನಲ್ಲ !" ಎಂದು ನಕ್ಕು ದೇವ ಯಾನಿಯು ಚಹ ಕುಡಿದಳು.

ಈ ಪ್ರಕಾರ ವಿನೋದದಿಂದ ಉಪಹಾರವನ್ನು ಮುಗಿಸಿದ ಬಳಿಕ ರಮಾ ಕಾಂತನೂ ಇಂದಿರೆಯೂ ಕೂಡಿ ಟೀಪೂಸುಲ್ತಾನ ಹೈದರಾಲಿಯವರ ಗೋರಿಗಳನ್ನು

ನೋಡಲಿಕ್ಕೆ ಹೊರಟರು. ಮಾರ್ಗದಲ್ಲಿ ಅವರೀರ್ವರೂ ಚೆಲ್ಲುಬಿಟ್ಟು ಮಾತಾಡ ಹತ್ತಿದರು. ಅಲ್ಲಲ್ಲಿ ಕಾಣಿಸುವ ಶೋಭಾಯಮಾನವಾದ ಸ್ಥಾನಗಳ ವಿಷಯಂವಾಗಿಯೂ, ಹೋಗಿಬರುವ ಸ್ತ್ರೀಪುರುಷರ ಉಡಿಗೆ ತೊಡಿಗೆಗಳ ಮೇಲೂ ಚರ್ಚೆ ನಡಿಸಿದರು. ಈ ದೇಶದಲ್ಲಿ ಕೆಲವೊಂದು ವನಸ್ಪತಿಯು ವಿಶೇಷವಾಗಿ ಬೆಳೆಯುವ ಕಾರಣವೇನು ? ಬೇರೆ ದೇಶಗಳಲ್ಲಿ ಬೆಳೆಯುವ ಗಿಡಗಳಿಲ್ಲೇಕೆ ಬೆಳೆಯುವುದಿಲ್ಲ ? ಮುಂತಾದ ಶಾಸ್ತ್ರೀಯ ವಿಷಯಗಳ ಮೇಲೂ ಅವರು ತಮ್ಮ ಅಭಿಪ್ರಾಯಗಳನ್ನು ಹೇಳುತ್ತ ನಡೆದಿದ್ದರು.

ಈ ತೋಟದಲ್ಲಿ ರಮಾಕಾಂತನೂ ಇಂದಿರೆಯೂ ತುಸು ಹೊತ್ತು ವಿಶ್ರಮಿಸಿಕೊಂಡು, ಇಂದಿರೆಯು ರಮಾಕಾಂತನ ಪೂರ್ವವೃತ್ತಾಂತವನ್ನು ಕೇಳಿದಳು. ಅವನು ಅದನ್ನು ಸವಿಸ್ತಾರವಾಗಿಯೂ ಮನೋರಂಜಕವಾಗುವಂತೆಯೂ ಹೇಳಿದನು. ಈ ಉದಾರಚರಿತರಾದ ತಂದೆಮಕ್ಕಳ ನಿರಪೇಕ್ಷ ಬುದ್ಧಿಯನ್ನೂ, ಅವರ ವಿದ್ಯಾಸಂಪತ್ತಿಯನ್ನೂ, ಅವರ ಸರಲಸ್ವಭಾವವನ್ನೂ ಅರಿತವಳಾಗಿ ಇಂದಿರೆಯು ರಮಾಕಾಂತನಲ್ಲಿ ವಿಶೇಷ ಆದರವುಳ್ಳವಳಾದಳು. ರಮಾಕಾಂತನ ಸೌಂದರ್ಯವನ್ನೂ, ಅವನ ಚಾತುರ್ಯವನ್ನೂ, ವಿನೋದಭಾವವನ್ನೂ ಈ ಮೊದಲೇ ನೋಡಿಕೊಂಡಿದ್ದಳು. ಭಗವಂತನು ಈತನನ್ನು ತನ್ನ ಪ್ರೀತ್ಯಾಸ್ಪದನನ್ನಾಗಿ ಮಾಡಿಕೊಂಡು ತನ್ನ ಉತ್ತಮೋತ್ತಮವಾದ ಪ್ರಾಸಾದಗಳನ್ನು ಇವನಿಗೆ ಕೊಟ್ಟುಬಿಟ್ಟಿರುವನೇನೆಂದು ತನ್ನಷ್ಟಕ್ಕೆ ತಾನೇ ವಿಚಾರಿಸಿದಳು.

ಈ ಸ್ಥಳವನ್ನು ನೋಡಿಕೊಂಡು ದೇವಯಾನಿಯು ಭೀತಿಯಿಂದ ಅವರು ತೀವ್ರವೇ ಮರಳಿಬಂದರು. ಇಂದಿರೆಯು ತನ್ನ ಮನೆಗೆ ಹೋಗಿ ಭೋಜನ ತೀರಿಸಿಕೊಂಡವಳೇ ಮತ್ತೆ ದೇವಯಾನಿಯ ಮನೆಗೆ ಬಂದಳು. ಅವಳು ಬರುವದರೊಳಗೇ ರಮಾಕಾಂತ ದೇವಯಾನಿಯರು ಭೋಜನ ಮಾಡಿಕೊಂಡು ಕುಳಿತಿದ್ದರು. ನಿನ್ನಿನಕಿಂತಲೂ ಈ ದಿವಸ ಇಂದಿರೆಯು ಮೈಛಳಿ ಬಿಟ್ಟು ವರ್ತಿಸಹತ್ತಿದಳು. ರಮಾಕಾಂತನಾದರೂ ಶಾಂತಮನಸ್ಸಿನವನಂತೆ ಮಾತಾಡುತ್ತಿದ್ದನು. ಮೂವರೂ ಚತುರರು, ವಿದ್ಯಾಸಂಸ್ಕಾರ ಹೊಂದಿದವರು, ಪರಿಶುದ್ಧವಾದಾಚರಣೆಯವರು. ಇವರ ಹರಟೆಯು ವಿನೋದಮಯವಾಗಿಯೂ ಬೋಧಮಯವಾಗಿಯೂ ಒಳ್ಳೇ ಉತ್ಸಾಹದೊಡನೆ ನಡೆಯಿತು. ಈ ಆನಂದದ ಭರದಲ್ಲಿಯೇ ಇಂದಿರೆಯೆದ್ದು ಪಿಯಾನೋದ ಪೆಟ್ಟಿಗೆಯ ಹತ್ತಿರ ಕುಳಿತು ಮೆಲ್ಲಗೆ ಸ್ವರ ತೆಗೆದಳು.

“ ಇಂದಿರಾ, ಇದೇದಾರಂಭಿಸಿದಿ ; ಈ ದಿವಸ ಗಾಯನದ ಪರ್ಯಾಯವು

ನಿನ್ನ ಮೇಲಿರುವದೋ ನನ್ನಮೇಲೊ ? ನಾನಂತೂ ವೃದ್ಧೆಯು ; ಅರ್ಥಾತ್ ನೀನೇ ನಮ್ಮ ಕರ್ಣತೃಪ್ತಿಯನ್ನು ಮಾಡತಕ್ಕವಳು. ಎಂದು ದೇವಯಾನಿಯು ಹೇಳಿದಳು.

"ನನ್ನ ಗಾಯನವಿದ್ಯೆ ಎಷ್ಟರಮಟ್ಟಿಗಿರುವದೆಂಬದನ್ನು ನಿನ್ನೆಯೇ ಹೇಳಿ ಬಿಟ್ಟಿರುವೆನು." ಎಂಬ ಮುಗುಳನಗೆ ನಕ್ಕಳು.

"ನನ್ನ ಪಾಲಂತೂ ಮುಟ್ಟಿ ಹೋಗಿದೆ." ಎಂದು ರಮಾಕಾಂತನು ಇಂದಿರೆಯ ಮುಖವನ್ನು ನೋಡಿ ಮುಗುಳುನಗೆ ನಕ್ಕು ಮಾತಾಡಿದನು.

"ನಾನೂ ನಿನ್ನೇದಿನ ಪಿಯಾನೋ ಬಾರಿಸಲಿಲ್ಲವೇನು ?"

ದೇವಯಾನಿಯು ರಮಾಕಾಂತನಿಗೆ ಹಾಡಲಿಕ್ಕೆ ಆಜ್ಞೆ ಕೊಟ್ಟು ಇವರ ವಾದವನ್ನು ನಿಲ್ಲಿಸಿದಳು. ಕೂಡಲೆ ರಮಾಕಾಂತನು, 'ಗೋಪಾಲಾ ಮೇರೀ ಕರುಣಾ ಕೆಂವು ನಹೀ ಆವೆ' ಎಂಬ ಹಿಂದುಸ್ಥಾನೀ ಭಕ್ತಿರಸಪ್ರಧಾನವಾದ ಪದ ವನ್ನು ಬಹು ಪ್ರೇಮಲವಾಗಿ ಹಾಡಿದನು. ಇಂದಿರೆಗೆ ಈ ರಾಗ ಪರಿವಾಹಿನಿ ಯಾದ ಗೀತಿಯನ್ನು ಕೇಳಿ ಹಿಡಿಸಲಾರದಷ್ಟು ಆನಂದವಾಯಿತು. ಇವರ ಗಾನ ವಾದನಗಳ ಅತಿರಮಣೀಯವಾದ ಸಂಯೋಗವನ್ನು ಕೇಳಲಿಕ್ಕೆ ಗಂಧರ್ವರು ಸುರ ಮಾರ್ಗದಲ್ಲಿ ನಿಂತಿದ್ದರೂ ನಿಂತಿರಬಹುದು. ಚರ್ಮಚಕ್ಷುಗಳಾದ ನಮಗೆ ಹೇಗೆ ಕಾಣಿಸುವರು ?

ಈ ತರುಣ ತರುಣಿಯರ ಸ್ನೇಹಭಾವವನ್ನು ಕಂಡು ದೇವಯಾನಿಯು ಕೌತುಕಪಟ್ಟಳು. ಆದರೆ ಈ ಸ್ನೇಹದ ಪರಿಣಾಮವೇನಾಗುವದೋ ಎಂದು ವಿಷಾದವನ್ನಾದರೂ ತಾಳಿದಳು. ಇಂದಿರೆಯು ಮೋಹದಲ್ಲಿ ತೀವ್ರವಾಗಿ ಸಿಕ್ಕು ವಳಲ್ಲ. ಆವಳಾಚರಣೆಯಲ್ಲಿ ರಮಾಕಾಂತನನ್ನು ಮೋಹಗೊಳಿಸುವ ಯತ್ನ ವಿದ್ದಂತೆ ಕಂಡುಬರಲಿಲ್ಲ. ಇವಳ ಪ್ರೀತಿಯು ಯಾರ ಮೇಲಾದರೂ ಕುಳಿತರೆ ಅದು ವಜ್ರಲೇಪದಂತಾಗುವದೆಂಬುದು ದೇವಯಾನಿಗೆ ತಿಳಿದಿತ್ತು. ಆದರೆ ಇಂಥ ಪ್ರೀತಿಯ ಅಂಕುರವು ಇಂದಿರೆಯಲ್ಲಿ ಹುಟ್ಟಿರಲಿಕ್ಕಿಲ್ಲೆಂದು ದೇವಯಾನಿಯ ನಂಬಿಗೆ ಯಿತ್ತು. ಆದಕ್ಕಾಗಿ ಆವಳು ಇವರ ಸ್ನೇಹದಲ್ಲಡ್ಡಬರಲಿಲ್ಲ. ಈಗಿದ್ದ ಸ್ನೇಹದ ಅಂತರ ತರಹೋದರೆ ಆ ಪ್ರೀತಿಗೆ ತಾನೇ ಉತ್ತೇಜನ ಕೊಟ್ಟಂತಾಗಿ ಅದು ವರ್ಧಿಸಿ ತಾನಡ್ಡಬಂದ ಪರಿಣಾಮವು ಭಯಂಕರವಾಗುವುದು. ಪ್ರವಾಹಕ್ಕೆ ಒಡ್ಡು ಹಾಕಿದರೆ ಆ ಪ್ರವಾಹವು ಸ್ವಲ್ಪ ತಡೆದಂತೆ ಮಾಡಿ ಹಿಂದಿನಿಂದ ಆ ಒಡ್ಡಿ ಗೊಡ್ಡನ್ನೇ ಒಡೆಬಡಿದು ಭಯಂಕರವಾದ ವೇಗದೊಂದಿಗೆ ಹರಿಯುವಂತೆ ಇವಳ

ಪ್ರೀತಿಯು ಸ್ಥಿತಿಯಾಗುವದು. ಹೀಗಾಲೋಚಿಸಿ ದೇವಯಾನಿಯು ಚತುರೆಯಾದ್ದರಿಂದ ಇವರ ಉಸಾಬರಿ ತೆಗೆಯಲಿಲ್ಲ. ಇವರೀರ್ವರು ಸತಿಪತಿಗಳಾಗುವದು ದೇವಯಾನಿಗೆ ಇಷ್ಟವಿತ್ತು. ಆದರೆ ಈ ಸಂಬಂಧಕ್ಕೆ ಜಯರಾಯನೊಡಂಬಡುವನೋ ಇಲ್ಲೋ? ಇವರೀರ್ವರು ಪ್ರೀತಿಬದ್ಧರಾದ ಮೇಲೆ ಜಯರಾಯನು ಇವರ ವಿವಾಹಕ್ಕೆ ವಿಘ್ನತಂದರೆ ಇವರವಸ್ಥೆ ಏನಾದೀತು? ರಮಾಕಾಂತನು ಗಂಭೀರನಾದ ಪುರುಷನು. ಕೆಲಕಾಲ ಈ ವಿಯೋಗದುಃಖವನ್ನು ಹೇಗಾದರೂ ಸಹನಮಾಡಿಕೊಂಡು ಮುಂದಾದರೂ ಸಂಸಾರಸುಖದಲ್ಲಿ ಬೀಳುವನು. ಆದರೆ ಇಂದಿರೆಗೆ ವಿರಹಾಗ್ನಿಯು ತಗಲಿತಂದರೆ ಬಿಸಿಲಲ್ಲಿ ಚಲ್ಲಿದ ಕುಸುಮಮಾಲೆಯಂತೆ ಅವಳ ಹೃದಯವು ಕಂದಿಹೋದೀತಲ್ಲ! ದೇವಯಾನಿಯು ಯಾರ ಬಗ್ಗೆ ಈಪರಿ ವಿಚಾರದಲ್ಲಿ ಸಿಲ್ಕಿ ತೊಳಲುತ್ತಿದ್ದಳೋ ಆ ತರುಣತರುಣಿಯರು ರವಷ್ಟಾದರೂ ಭವಿಷ್ಯವನ್ನು ಚಿಂತಿಸದೆ ಆನಂದದೊಡನೆ ವಿನೋದ ಗಯ್ಯುತ್ತಿದ್ದರು. ನಲಿನೀ ಪತ್ರದ ಮೇಲೆಯೇ ಜಲಬಿಂದುವಿದ್ದರೂ ಅದರಂಶ ಕೂಡಾ ಆ ಪತ್ರಕ್ಕೆ ಹತ್ತುವದಿಲ್ಲ. ಹಾಗೆಯೇ ಈ ತರುಣರಿಗೆ ಚಿಂತೆಯು ಅಂಶಕೂಡಾ ತಗಲಿದ್ದಿಲ್ಲ.

ಜಯರಾಯರು ಬೆಂಗಳೂರಲ್ಲಿ ಕಟ್ಟಿಸತಕ್ಕ ಮನೆಯ ಕೆಲಸ ಮುಗಿಯಲಿಕ್ಕೆ ಬಂದಿದ್ದು, ಇಂದಿರೆಯನ್ನು ಸ್ವಲ್ಪ ದಿವಸಗಳಲ್ಲಿ ಅಲ್ಲಿಗೆ ಕರಕೊಂಡು ಹೋಗುವ ವಿಚಾರವಿತ್ತು. ಆದರೂ ಬೆಂಗಳೂರಲ್ಲಿಯ ದೊಡ್ಡದೊಡ್ಡವರ ಪರಿಚಯವನ್ನು ಮೊದಲೇ ಮಾಡಿಕೊಟ್ಟಿರುವದು ಒಳ್ಳೇದೆಂದು ಎಣಿಸಿ ಕೆಲವರನ್ನು ಶ್ರೀರಂಗಪಟ್ಟಣ ತೋರಿಸುವ ನೆವದಿಂದ ಕರತಂದು ನಾಲ್ಕು ದಿವಸ ತನ್ನ ಮನೆಯಲ್ಲಿಟ್ಟುಕೊಂಡು ಕಳಿಸಿಕೊಡುತ್ತಿದ್ದನು. ತನ್ನ ಬಾಲ್ಯದ ಸ್ನೇಹಿತನಾದ ಕಮಲಾಕಾಂತನ ಮಗನು ಶ್ರೀರಂಗಪಟ್ಟಣದಲ್ಲಿದ್ದು ಅವನು ತನ್ನ ಮಗಳ ಪರಿಚಯಸ್ಥನಾಗಿರುವನೆಂದೂ ದೇವಯಾನಿಯ ಅತಿಥಿಯಾಗಿರುವನೆಂದೂ ಇಂದಿರೆಯ ಪತ್ರಗಳದ್ವಾರಾ ಜಯರಾಯನಿಗೆ ತಿಳಿಯಬಂದಿತ್ತು. ಅವನ ರೂಪ, ವಿದ್ಯಾ, ಔದಾರ್ಯ, ಧೈರ್ಯ ಮುಂತಾದವುಗಳನ್ನು ಇಂದಿರೆಯು ಯಥಾರ್ಥವಾಗಿ ವರ್ಣಿಸಿದ್ದಳು. ಆದರೂ ತನ್ನ ಮಗಳ ಸ್ವಭಾವವನ್ನು ಚನ್ನಾಗಿ ಬಲ್ಲವನಾಗಿದ್ದರಿಂದ ಅವಳು ರಮಾಕಾಂತನ ಪ್ರೇಮದಲ್ಲಿ ಸಿಲ್ಕುವಳೆಂಬ ಸಂಶಯ ಕೂಡಾ ಜಯರಾಯನ ಮನಸ್ಸಿನಲ್ಲಿ ಹುಟ್ಟಲಿಲ್ಲ. ಮಾತ್ರ ಇವರೀರ್ವರು ದರ್ಯಾದೌಲತ್ತಿನ ಘಾಟಿನಲ್ಲಿ ಕುಳಿತು ನೀರಲ್ಲಿ ಕಾಲಿಳಿಬಿಟ್ಟುಕೊಂಡು ವಿನೋದದಿಂದ ಸಂಭಾಷಿಸುವದನ್ನೂ, ಒಬ್ಬರನ್ನೊಬ್ಬರು ಕಣ್ಣು ತಪ್ಪಿಸಿ ನೋಡಿಕೊಳ್ಳುವದನ್ನೂ ಜಯರಾಯನು ಕಂಡಿದ್ದನಾದರೆ ಏನು

ತಿಳುಕೊಳ್ಳುತ್ತಿದ್ದನೋ ಏನೊ ! ಅಂದರೂ ಇಂದಿರೆಯು ಮನಸ್ಸಿನಲ್ಲಿ ಪಂಚಬಾಣನ ಗಾಳಿಯು ಇನ್ನೂ ಸಂಚಾರ ಮಾಡಿದ್ದಿಲ್ಲವೆಂದು ಹೇಳಬಹುದಾಗಿತ್ತು.

ರಮಾಕಾಂತನ ಮನಸ್ಸಿನ ಸ್ಥಿತಿ ಹಾಗಿದ್ದಿಲ್ಲ. ಇವನಷ್ಟು ಗಾಢವಾಗಿ ಯಾವ ತರುಣನೂ ಪ್ರೇಮವಶನಾಗಿರಲಿಕ್ಕಿಲ್ಲ. ಇಂದಿರೆಯು ಕೂಡಾ ತಿರುಗಾಡ ಲಿಕ್ಕೂ ಮಾತುಕಥೆಯಾಡಲಿಕ್ಕೂ ವ್ಯತ್ಯಯವಿದ್ದಿಲ್ಲ. ಅವಳಗೂಡ ಆನಂದ ದಿಂದ ಹರಟೆ ಹೊಡೆಯುತ್ತಿದ್ದನು. ಈ ಆನಂದದ ಭರದಲ್ಲಿ ಇಂದಿರೆಯು ಸಾನ್ನಿಧ್ಯದ ಯೋಗದಿಂದ ಪಂಚಶರನ ಬಾಣಗಳು ಎಷ್ಟರಮಟ್ಟಿಗೆ ತನ್ನ ಎದೆ ಯನ್ನು ಭೇದಿಸಿರುವವೆಂಬುದು ಅವನಿಗೆ ತಿಳಿಯುಬರಲಿಲ್ಲ. ಈ ಸಾನ್ನಿಧ್ಯ ತಪ್ಪಲಿ ಅಂದರೆ ಈ ಗಾಯವೆಷ್ಟು ಭಯಂಕರವಾಗಿತ್ತೆಂಬುದನ್ನು ಅನುಭವಿಸುವದು ಇನ್ನೂ ಮುಂದೆ ಇಟ್ಟಿತ್ತು.

ತಾನು ಇಂದಿರೆಯು ಮೇಲೆ ಪ್ರೇಮವಿಟ್ಟಿರುತ್ತೇನೆ. ಈ ಪ್ರೇಮವು ದೃಢ ವಾದದ್ದೂ ನಿರಂತರವಾದದ್ದೂ ಎಂದು ರಮಾಕಾಂತನಿಗೆ ತಿಳಿದುಹೋಗಿತ್ತು. ನಾಳೆ ನಾನು ಬೆಂಗಳೂರಿಗೆ ಹೋದರೆ ಇಂದಿರೆಯನ್ನಗಲಿರುವದು ಹೇಗೆ ? ಇಂದಿರೆಗೋಸ್ಕರ ಶ್ರೀರಂಗಪಟ್ಟಣದಲ್ಲಿ ಯಾವ ನೆವದಿಂದ ನಿಲ್ಲಬೇಕು ? ನಿಂತರೂ ತನ್ನ ಚರಿತಾರ್ಥವೆಂತು ಸಾಗತಕ್ಕದ್ದು ! ಮುಂತಾದ ಯೋಚನೆಗಳು ಈಗಲೇ ಅವನನ್ನು ತಿರುಗಣೀ ಮಡಕ್ಕೆ ಹಾಕಿದ್ದವು. ಇಂದಿರೆಯು ತನ್ನೆದುರಿಗಿ ದ್ದಾಗ್ಗೆ ಆ ಮೋಹನಾಂಗಿಯ ರೂಪ ಚೇಷ್ಟಿತಗಳನ್ನು ಭಕ್ತಿಭಾವದಿಂದವಲೋಕಿಸಿ ಸುತ್ತಿರುವನಾದ್ದರಿಂದ ಈ ಬುದ್ಧಿಭ್ರಂಶಕವಾದ ವಿಚಾರಗಳು ಒತ್ತಟ್ಟಿಗಾಗು ತ್ತಿದ್ದವು. ಆದರೆ ಇವನು ರಾತ್ರಿಯಲ್ಲಿ ಏಕಾಂತವಾಸಿಯಾದ ಕೂಡಲೆ ಈ ವಿಚಾರ ಗಳೆಲ್ಲಾ ಒಕ್ಕಟ್ಟಾಗಿ ಇವನನ್ನು ಮುತ್ತುವವು. ಈ ಮುತ್ತಿಗೆಯಲ್ಲಿ ಇವನ ಶತು ಪಕ್ಷವು ಬಲಕಟ್ಟಾದದ್ದಿದ್ದು, ತನ್ನ ಸ್ಥಿತಿಯಲ್ಲಿ ನ್ಯೂನತೆ ಬಹಳೆಂಬಂತೆ ಕಂಡಿತ್ತು. ಇಂದಿರೆಯು ಪ್ರೇಮವು ತನ್ನ ಮೇಲಿದೆಯೋ ಇಲ್ಲವೋ ಎಂಬದೊಂದು ಮೊದಲನೇ ಚಿಂತೆ. ಅವಳ ಪ್ರೇಮವು ತನ್ನ ಮೇಲಿದ್ದರೂ ಜಯರಾಯನು ತಮ್ಮ ವಿವಾಹ ಕ್ಕೊಪ್ಪುವನೋ ಇಲ್ಲವೋ, ಜಯರಾಯನೊಪ್ಪದಿದ್ದರೂ ಅಷ್ಟು ಆಗ್ರಹ ತೊಟ್ಟು ತನ್ನನ್ನೇ ಲಗ್ನ ಮಾಡಿಕೊಳ್ಳುವೆನು ಇಲ್ಲದಿದ್ದರಿಲ್ಲವೆಂಬ ನಿಶ್ಚಯ ಮಾಡುವಷ್ಟು ಮಾನಸಿಕ ಧೈರ್ಯವು ಇಂದಿರೆಯಲ್ಲಿಲ್ಲದಿದ್ದರೇನು ಮಾಡುವದು ! ತಾನು ಧನ ವಂತನಲ್ಲ, ಈ ಪ್ರಾಂತದಲ್ಲಿಯ ಇನಾಮದಾರನಲ್ಲ. ಇನ್ನೂ ತನಗಾವದೂ ಉದ್ಯೋಗವಿಲ್ಲ. ತನ್ನಕ್ಕಿಂತಲೂ ಉತ್ತಮ ಸ್ಥಳಗಳು ಸಾವಿರಾರು ಇಂದಿರೆಯ

ಮುಂದೆ ಬುದುನಿಲ್ಲುವವು. ಅಲ್ಲಿಂದ ತಾನು ಯಾವ ಗಿಡದ ತೊಪ್ಪಲವಾಗುವೆನೋ ಎಂಬದು ಮತ್ತೊಂದು ಆಧ್ಯರ್ಯದ ಕಾರಣವು. ಹೀಗೆ ರಾತ್ರಿಯೆಲ್ಲ ವಿಚಾರದಲ್ಲಿ ಹೋಗುವದು.

ಇಂದಿರೆಯು ಮನಸ್ಸಿನಲ್ಲಿ ಪ್ರೇಮಾಂಕರವು ಮೊದಲಿಗೇ ಹುಟ್ಟಿದ್ದಾಗಿದ್ದರೆ ರಮಾಕಾಂತನು ಇಷ್ಟು ವ್ಯಥೆಗೆ ಗುರಿಯಾಗುತ್ತಿದ್ದಿಲ್ಲ. ಇಂದಿರೆಗೆ ಕಾವುಶರ ತಾಕಿದ್ದರೆ ಅವಳು ಲಜ್ಜಿತಳಾಗಿ ವಿಶೇಷ ಮನಬಿಚ್ಚಿ ಮಾತಾಡುತ್ತಿದ್ದಿಲ್ಲ. ಇವನ ಕೂಡ ದರ್ಯಾದೌಲತ್ತಿಗೆ ಬರುತ್ತಿದ್ದಿಲ್ಲ, ದೇವಯಾನಿಯ ಮನೆಗೂ ಬರುವದು ಕಡಿಮೆ ಮಾಡುತ್ತಿದ್ದಳು. ಹಾಗಾಗಿದ್ದರೆ ರಮಾಕಾಂತನಿಗೆ ಇಂದಿರೆಯ ಗುಣಾತಿಶಯಗಳು ಕಂಡುಬರುತ್ತಿದ್ದಿಲ್ಲ. ಕೇವಲ ರೂಪಕ್ಕೆ ಮೋಹಿತನಾಗುವ ಹುಡುಗನೂ ರಮಾಕಾಂತನಲ್ಲ. ಅರ್ಥಾತ್ ಇಂದಿರೆಯ ಹೆಸರು ಕೂಡಾ ಇವನ ಧ್ಯಾನದಲ್ಲಿ ಉಳಿಯುತ್ತಿದ್ದಿಲ್ಲ. ಮದನಜನಿತ ಲಜ್ಜೆಯು ಇಂದಿರೆಯಲ್ಲಿದ್ದಿಲ್ಲಾದ್ದರಿಂದ ಅವಳ ಮನಸ್ಸು ಮುಕ್ತದ್ವಾರವಾಗಿತ್ತು. ರಮಾಕಾಂತನು ಅಲ್ಲಿ ಅವ್ಯಾಹತನಾಗಿ ಪ್ರವೇಶಿಸಿ ಅಲ್ಲಿಯ ವೈಭವವನ್ನೂ ಸೌಂದರ್ಯವನ್ನೂ ಕಂಡುಕೊಂಡದ್ದರಿಂದ ಆ ಸ್ಥಳವನ್ನು ಬಿಟ್ಟು ಕಡಿದರೂ ಹೊರಗೆ ಬರುವದು ಅವನಿಂದಾಗದಂತಾಯಿತು.

ಸ್ತ್ರೀಪುರುಷರಲ್ಲಿ ಪರಸ್ಪರ ಪ್ರೇಮ ಹುಟ್ಟಬೇಕಾದರೆ ಅವರಲ್ಲಿದ್ದ ವಿಶೇಷ ಗುಣಗಳು ಅನ್ಯೋನ್ಯರ ಹೃದಯಗಳನ್ನೊಂದು ಪ್ರಕಾರದಿಂದ ವೇಧಿಸುತ್ತವೆ. ಹೀಗೆ ವೇಧಿಸುವ ಕಾಲ ಬರುವವರೆಗೂ ಕೆಲವರ ಹೃದಯಗಳು ಅಭೇದ್ಯವಾಗಿರುವವು. ಕೇವಲ ರೂಪ ಲಾವಣ್ಯ ಐಶ್ವರ್ಯಾದಿಗಳು ಪ್ರೀತಿಯನ್ನುತ್ಪಾದಿಸುತ್ತವೆಂತಲ್ಲ. ಇಂದುಮತಿಯು ತನ್ನ ಸ್ವಯಂವರದ ಕಾಲದಲ್ಲಿ ಅಂಗರಾಜನನ್ನು ನೋಡಿ ಹಾಗೆಯೇ ಮುಂದಕ್ಕೆ ಸಾಗಿದಳು. ಆ ನೃಪಶ್ರೇಷ್ಠನು ಕಾಮ್ಯನಿದ್ದಿಲ್ಲವಂತೂ ಅಲ್ಲ ; ಇಂದುಮತಿಯು ಪರೀಕ್ಷೆಹೀನಳಂತೂ ಅಲ್ಲ. ಭವಭೂತಿಯು ಹೇಳುವಂತೆ 'ನ ಖಲು ಬಹಿರುಪಾಧೀನ್ ಪ್ರೀತಯಃ ಸಂಶ್ರಯಂತೇ ' ಕೇವಲ ದೃಷ್ಟಿಗೋಚರವಾದ ಮಾತುಗಳಿಂದಲೇ ಪ್ರೀತಿಯು ಹುಟ್ಟುವದಿಲ್ಲ. ಇಂದಿರೆಯ ಹೃದಯವು ಇನ್ನೂ ವೇಧಿಸಲ್ಪಟ್ಟಿದ್ದಿಲ್ಲ, ಅದರ ಯೋಗವು ಬರುವದಕ್ಕೆ ಇನ್ನೂ ಅವಧಿಯಿತ್ತು.

ಇಂದಿರೆಯೂ ರಮಾಕಾಂತನೂ ಸ್ನೇಹಭಾವದಿಂದ ವರ್ತಿಸುತ್ತಿದ್ದರು. ಪ್ರತಿದಿನ ನೋಡತಕ್ಕ ಸ್ಥಳಗಳನ್ನು ನೋಡಿ ಬರುವರು. ಪರಸ್ಪರರ ವಿಚಾರಗಳನ್ನು ಬದ್ದಿಸಿ ನೋಡುವರು. ದೇವಯಾನಿಯ ಸಂಗತಿಯಲ್ಲಿ ವಿನೋದದಿಂದ ಹರಟೇ

ಹೊಡೆಯುವರು. ಹೀಗೆ ನಾಲ್ಕಾರು ದಿವಸ ಆನಂದದಿಂದ ಕಾಲ ಕಳೆದರು.

ಒಂದು ದಿವಸ ಇಂದಿರೆಯು ಬಂದು ಒಂದು ವರ್ತಮಾನ ಹೇಳಿದಳು: "ದೇವಯಾನಿಯಮ್ಮಾ, ಈ ದಿವಸ ತಂದೆಯವರು ಯಾರನ್ನೋ ನಾಲ್ಕು ಜನಗಳನ್ನು ಕರಕೊಂಡು ಬರುವರಂತೆ. ತಂದೆಯವರ ಪತ್ರ ನೋಡಿ ನನ್ನ ಚಿತ್ತದಲ್ಲಿ ಸಮಾಧಾನವೂ ಅಸಮಾಧಾನವೂ ಬೆರತಿರುತ್ತವೆ. ತಂದೆಗಳೊಬ್ಬರೇ ಬಂದಿದ್ದರೊಳ್ಳೇದಾಗುತ್ತಿತ್ತೆಂದು ನೆನಸುತ್ತೇನೆ."

"ಜಯರಾಯರು ಯಾವಾಗಲೂ ಏಕಾಕಿಯಾಗಿರಬೇಕೆಂಬದು ನಿನ್ನಿಚ್ಛೆಯೋ ?" ಎಂದು ದೇವಯಾನಿಯು ಕೇಳಿದಳು,

"ಅವರೊಬ್ಬರೇ ಇದ್ದರೆ ನನಗೆ ಅವರ ಜೊತೆಯಲ್ಲಿ ಆನಂದದಿಂದ ಕಾಲ ಕಳೆಯಲನುವಾಗುತ್ತದೆ. ಅವರ ಪ್ರೇಮ ನನ್ನ ಮೇಲೆ ಬಹಳ. ನನ್ನಭಿಪ್ರಾಯಗಳನ್ನು ನಿವೇದಿಸಲಿಕ್ಕೂ, ಯೋಗ್ಯವಿದ್ದಲ್ಲಿ ನನ್ನಿಚ್ಛೆಗೆ ಬಂದಂತೆ ಬೇಕಾದ ಕಾರ್ಯ ಮಾಡಲಿಕ್ಕೂ ಅವರಿಂದ ಪ್ರತಿಬಂಧವಿರುವದಿಲ್ಲ. ಬೇರೆ ಜನಗಳಿದ್ದ ಪಕ್ಷದಲ್ಲಿ ನನ್ನನ್ನು ಹಿಡಿದು ಕಟ್ಟಿದಂತೆ ಭಾಸವಾಗುತ್ತದೆ. ಈ ಜನಗಳ ಕೂಡ ಗತಾನುಗತಿಕರಂತೆ ವರ್ತಿಸಬೇಕಾಗುತ್ತದೆ. ಅದು ನನಗೆ ಸೇರುವದಿಲ್ಲ."

"ಇಂದಿರಾ, ನೀನು ಬೆಂಗಳೂರಿಗೆ ಹೋದಿಯೆಂದರೆ ನಿನಗೆ ಗತಾನುಗತಿಕಳೇ ಆಗಬೇಕಾಗುತ್ತದೆ."

"ಮುಂದಿಯಲ್ಲಿ ಹಾಗೆ ವರ್ತಿಸಬೇಕಾದೀತು. ಆದರೆ ಮನೆಯಲ್ಲಿ ನನ್ನನ್ನು ಕಟ್ಟುವವರಾರು ? ಬೆಂಗಳೂರಲ್ಲಿಯ ಜನಸಮಾಗಮವು ಮನೋರಂಜಕವಾಗುವದೋ ಇಲ್ಲವೊ ತಿಳಿಯದು. ಮೂರ್ಖರ ಸಮಾಗಮದಲ್ಲಿ ಬಹಳ ದಿವಸವಿದ್ದು ಆದೇ ದುಡ್ಡು ಬಿದ್ದಂತಾಗಿ ಚಲೋದೆನಿಸಬಹುದೇನು ದೇವಯಾನಿಯಮ್ಮಾ ?" ಎಂದು ಉದ್ವಿಗ್ನತೆಯಿಂದ ಇಂದಿರೆಯು ಕೇಳಿದಳು.

"ಇಂದಿರೆ, ನೀನು ಬೆಂಗಳೂರಿಗೆ ಹೋದಿಯೆಂದರೆ ಎಲ್ಲವೂ ತಿಳಿಯುವದು. ಶ್ರೀರಂಗಪಟ್ಟಣದಲ್ಲಿಯ ನಿನ್ನ ವಿನೋದದ ಸ್ಥಳಗಳನ್ನು ಇನ್ನೊಂದಾವರ್ತಿ ಚನ್ನಾಗಿ ನೋಡಿಕೊಂಡು ಹೋಗು. ಪುನಃ ಆ ಸ್ಥಳಗಳ ಶೋಭೆಯು ನಿನ್ನ ಕಣ್ಣಿಗೆ ಬೀಳುವಂತಿಲ್ಲ."

"ಈ ಸ್ಥಳಗಳು ಪುನಃ ನನ್ನ ಕಂಣಿಗೆ ಬೀಳಲಿಕ್ಕಿಲ್ಲ ! ದೇವಯಾನಿಯಮ್ಮಾ ! ಯಥಾಸುಖವಾಗಿ ಹಂಸತೂಲಿಕೆಯ ಕೋಚದಲ್ಲಿ ಆತುಕೊಂಡು ಕುಳಿತು ಸಂತೋಷದಿಂದ ನಗುತ್ತ ಲಗ್ನ ಮುಹೂರ್ತಗಳಾಗದ ಪೂರ್ವದಲ್ಲಿಯೇ ನಾನು ಮರಣ

ಹೊಂದುವೆನೆಂಬ ಭವಿಷ್ಯವನ್ನು ವರ್ತಿಸುವಿರೇನು ?"

"ಮುದ್ದುಮಗಳೇ, ಹಾಗಲ್ಲಮ್ಮಾ. ಹುಟ್ಟಿದೂರಲ್ಲಿರುವ ತಮ್ಮ ಪ್ರೀತಿಯ ಸ್ಥಳಗಳನ್ನು ಕಂಡು ಆನಂದಪಡುವ ತರುಣಿಯರು ಬೆಂಗಳೂರಿನಂಥ ದೊಡ್ಡ ಪಟ್ಟಣಕ್ಕೆ ಹೋದರೆ ಅಲ್ಲಿಯ ಮನೋಹರವಾದ ಶೋಭೆಗಳನ್ನು ಕಂಡು ತಮ್ಮೂರಲ್ಲಿಯ ಸ್ಥಳಗಳನ್ನು ಸೇರದಂತಾಗುತ್ತಾರೆ. ಇಷ್ಟೇ ನನ್ನಭಿಪ್ರಾಯ ಹೊರ್ತಾಗಿ ಅಂಥ ಭಯಂಕರವಾದ ಅರ್ಥಮಾಡಲಿಕ್ಕೆ ನಿನಗ್ಯಾರು ಹೇಳಿದರು!" ಎಂದು ದೇವಯಾನಿಯು ಮಮತೆಯಿಂದ ನುಡಿದಳು.

ಇಂದಿರೆಯು ಮುಖ ತಗ್ಗಿಸಿಕೊಂಡು ಕುಳಿತಳು. ಸೂರ್ಯನ ಕಿರಣಗಳಿಂದ ಪ್ರಕಾಶಿಸುವ ದೊಡ್ಡ ದೊಡ್ಡ ಸ್ವಾತಿಯ ಬಿಂದುಗಳು ಮೇಘದಿಂದ ಕೆಳಗುದುರುವಂತೆ ನೀಲೋತ್ಪಲದಂತಿರುವ ಇಂದಿರೆಯ ಕಂಣುಗಳಿಂದ ಅವಳ ಕಪೋಲುಗಳ ಮೇಲೆ ಕಂಬನಿಗಳುದರಹತ್ತಿದವು. ತಾನಂದದ್ದನ್ನು ಇಷ್ಟು ಮನಸ್ಸಿಗೆ ಇಂದಿರೆಯು ಹಚ್ಚಿಕೊಂಡದ್ದನ್ನು ನೋಡಿ ದೇವಯಾನಿಗೆ ವಿಷಾದವಾಯಿತು. ಇಷ್ಟರಲ್ಲಿ ರಮಾಕಾಂತನು ಹೊರಗಿನಿಂದ ಬಂದನು. ಅವನೂ ಕೂಡಿ ಅಡ್ಡಾದಲಿಕ್ಕೆ ಹೋಗುವದನ್ನು ಗೊತ್ತುಮಾಡಿಕೊಂಡಿದ್ದರು.

ರಮಾಕಾಂತನಿಗೆ ಜಯರಾಯನು ಬರುವ ವರ್ತಮಾನ ಕೇಳಿ ತಾನು ಭೂಲೋಕದಲ್ಲಿ ಅನುಭವಿಸುವ ಸ್ವರ್ಗಸುಖವು ಇನ್ನುಮೇಲೆ ಬಯಲಾಗುವದೆಂದೆಣಿಸಿ ವ್ಯಸನಪಟ್ಟನು. ತನ್ನ ಮುಖಚರ್ಯೆಯ ಮೇಲಿಂದ ಮನಸ್ಸಿನಲ್ಲಿ ಉದ್ಭವಿಸಿದ ವ್ಯಸನವು ಅನ್ಯರಿಗೆ ವ್ಯಕ್ತವಾಗುವದೆಂದು ತಿಳಿದು ಅವನು ಚಂದ್ರಶಾಲೆಯಲ್ಲಿ ಹೋಗಿ ಶೂನ್ಯಹೃದಯನಾಗಿದ್ದರೂ ಏನೋ ನೋಡುವವನಂತೆ ನಿಂತನು. ತನ್ನೆದುರಿಗಿನ ಪ್ರದೇಶವು ರಮಣೀಯವಾಗಿದ್ದರೂ ಇವನ ಕಂಣಿಗೆ ಸುತ್ತಲೂ ಮಬ್ಬುಬಿದ್ದಂತೆ ಕಂಡಿತು.

"ಇಷ್ಟೇಕೆ ಮಂಜು ಬಿದ್ದಿರುವದೀದಿವಸ ?" ಎಂದು ಹಿಂತಿರಿಗಿ ದೇವಯಾನಿ ಇಂದಿರೆಯನ್ನುದ್ದೇಶಿಸಿ ಕೇಳಿದನು."

"ಛೇ. ಎಲ್ಲಿ ಬಂದಿತು! ಆಕಾಶವು ಸ್ವಚ್ಛವಾಗಿಯೂ ಪ್ರದೇಶವು ರಮಣೀಯವಾಗಿಯೂ ಕಾಣುತ್ತದಲ್ಲ!" ಎಂದು ಇಂದಿರೆಯು ಮೃದುವಾಣಿಯಿಂದುತ್ತರಕೊಟ್ಟಳು.

"ಹೀಗೇನು ?" ಇಷ್ಟೇ ಅಂದು ರಮಾಕಾಂತನು ಕೆಳಗೆ ನೋಡುತ್ತ ನಿಂತನು.

ಕನ್ನಡಿಯಲ್ಲಿ ಇವನ ಹೃದ್ಗತವನ್ನು ತಿಳುಕೊಂಡು ದೇವಯಾನಿಯು ರಮಾಕಾಂತನನ್ನು ದಿಟ್ಟಿಸಿ ನೋಡಿ ಚಿಂತಾಕ್ರಾಂತಳಾದಳು. ಆದರೂ ವಿಷಯಾಂತರ ಮಾಡಬೇಕೆಂದು "ಇಂದಿರೆ! ನಿನ್ನ ತಂದೆಯು ಕೂಡ ಯಾರು ಯಾರು ಬರುವರು ?

"ಭಾಷ್ಕಳಪಂತ ಡಾಕ್ಟರ, ಅವನಕ್ಕ ರಾಧಾಬಾಯಿ. ಮತ್ತಿಬ್ಬರ ಹೆಸರು ಏನೇನು ಮರೆತೋ ಇವೆ" ಎಂದು ಇಂದಿರೆಯು ಹೇಳಿದಳು.

"ನೀವು ಇನ್ನೂ ಕೆಲವು ಸ್ಥಳಗಳನ್ನು ನೋಡಿ ಬರುವವರಿರುವಿರಲ್ಲ! ಹಾಗಿದ್ದರೆ ತೀವ್ರ ಹೊರಡಿರಿ. ಸಾಯಂಕಾಲಕ್ಕೆ ಜಯರಾಯನೂ ಆತನ ಸ್ನೇಹಿತರೂ ಬರುವರು. ಆದರೊಳಗಾಗಿಯೇ ಇಂದಿರಾ, ನೀನು ನಿನ್ನ ಮನೆಯಲ್ಲಿರತಕ್ಕದ್ದು. ಎಂದು ದೇವಯಾನಿಯು ಜಾಗ್ರತೆ ಕೊಟ್ಟಳು.

ಈ ಸೂಚನೆಯ ಮೇರೆಗೆ ರಮಾಕಾಂತನೂ ಇಂದಿರೆಯೂ ಗಂಗೆಯೂ ಸರದಾರಸಿಂಗನನ್ನು ಮುಂದೆ ಹಾಕಿಕೊಂಡು ನಡೆದರು.

"ನಾವು ಎಲ್ಲಿಗೆ ಹೋಗಬೇಕು ?" ಎಂದು ರಮಾಕಾಂತನು ಇಂದಿರೆಯನ್ನು ಕೇಳಿದನು.

"ಪಶ್ಚಿಮವಾಹಿನಿಯನ್ನು ನೋಡುವದುಳಿದಿದೆ. ಆ ಸ್ಥಳವು ಬಹು ರಮಣೀಯವಾಗಿರುತ್ತದೆ; ಅಲ್ಲಿಗೆ ಹೋಗೋಣ ನಡೆಯಿರಿ."

ಇವರು ಪಶ್ಚಿಮವಾಹಿನಿಯ ಸಮೀಪಕ್ಕೆ ಬರುವವರೆಗೂ ಮಾರ್ಗದಲ್ಲಿ ರಮಾಕಾಂತನು ಪಿಟ್ಟೆಂದು ಬಾಯಿ ತೆಗೆಯಲಿಲ್ಲ; ಮಾತಾಡಲಿಲ್ಲ. ಇಂದಿರೆಗೆ ಇವನ ಮೌನದ ಕಾರಣವೇ ತಿಳಿಯಬರಲಿಲ್ಲ. ಮುಖನೋಡಲು ಅವನು ಉದ್ವಿಗ್ನನಾದಂತೆ ಕಂಡನು. ಇವನ ಉದ್ವಿಗ್ನತೆಯ ಕಾರಣವನ್ನು ಕೇಳಲೋ ಬೇಡವೋ ಎಂದು ಅವಳು ತನ್ನ ಮನಸ್ಸಿನಲ್ಲಿ ನಿರ್ಧಾರ ಮಾಡಿಕೊಳ್ಳುವಷ್ಟರಲ್ಲಿಯೇ ಈ ಅವಲೋಕನಾರ್ಥಿಗಳ ವೃಂದವು ಆ ಪರಮಪವಿತ್ರವಾದ ತೀರ್ಥದ ಘಾಟಿನ ಹತ್ತಿರ ಬಂದರು.

"ನನಗೇಕೋ ಆಯಾಸವಾದಂತಾಗಿದೆ; ತುಸು ಹೊತ್ತು ಇಲ್ಲಿ ವಿಶ್ರಮಿಸಿಕೊಳ್ಳೋಣ." ಎಂದು ಹೇಳಿ ಇಂದಿರೆಯು ನೀರಿನಲ್ಲಿ ಕಾಲಿಳಿಬಿಟ್ಟುಕೊಂಡು ಕುಳಿತಳು. ರಮಾಕಾಂತನೂ 'ಸ್ಥಿತಃ ಸ್ಥಿತಾಂ' ಎಂಬಂತೆ ಇಂದಿರೆಯ ಅನುವರ್ತಿಯಾಗಿ ಕುಳಿತುಕೊಂಡನು.

"ನಾವು ಮಾತಾಡುತ್ತ ಬಂದಿದ್ದರೆ ಏನೂ ಆಯಾಸವಾಗುತ್ತಿದ್ದಿಲ್ಲ.

ತಾವ್ಯಾಕೋ ಈ ದಿವಸ ಉದ್ವಿಗ್ನರಾಗಿರುವಿರಿ." ಎಂದು ಇಂದಿರೆಯು ಕೇಳಿದಳು.

"ಸ್ವಲ್ಪ ಉದ್ವಿಗ್ನನಾದಂತಿರುವೆನು. ಏನು ಕಾರಣವೋ ತಿಳಿಯದು."

"ನಿಮ್ಮ ಉದ್ವಿಗ್ನತೆಯನ್ನು ನೋಡಿ ನನಗೂ ಅದರ ಸೊಗಡು ತಾಗಿದಂತಾಗಿದೆ. ಕಾರಣವಿಲ್ಲದೆ ಮನಸ್ಸು ಅಸ್ವಸ್ಥವಾಗುವದದೆಂತು ? ಹೇಳಬಾರದೆಂದು ನಿಮ್ಮ ಸಂಕಲ್ಪವಿದ್ದಂತೆ ಕಾಣುತ್ತದೆ." ಎಂದು ಮನವರಿಸುವ ನುಡಿಯಿಂದ ಇಂದಿರೆಯು ಅಂದಳು.

"ಇಂದಿರಾಬಾಯಿ, ನಿಮ್ಮ ಮುಂದೆ ನಾನು ಮುಚ್ಚಿಟ್ಟುಕೊಂಡು ಮಾತಾಡುವೆನೆ ? ಹೀಗೇಕಾಗಿರುವದೋ ನನಗೆ ನಿಜವಾಗಿ ತಿಳಿಯಲೊಲ್ಲದು. ನಾಳೆ ಬೆಳಿಗ್ಗೆ ಬೆಂಗಳೂರಿಗೆ ಹೋಗಬೇಕೆಂದು ಮಾಡಿದ್ದೇನೆ, ಈ ಊರು ಬಿಟ್ಟು ಹೋಗಲಾರದಕ್ಕೆ ಹೀಗಾಗಿದೆಯೋ ಏನೋ ?"

"ಇಷ್ಟು ಬೇಗ ಹೋಗುವಿರಾ ?"

"ನಾಲ್ಕಾರು ದಿವಸ ಇಲ್ಲಿ ಸುಮ್ಮನೆ ಕಳೆದೆನು ; ಸಾಕಾಗದೇನು ? ಬೆಂಗಳೂರಲ್ಲಿದ್ದರೆ ಏನಾದರೂ ಮಾಡಬಹುದಾಗಿತ್ತು."

"ನಾವೇನು ನಿಮಗೆ ಬಹಳ ದಿವಸ ನಿಲ್ಲಿರೆಂದು ಹೇಳುತ್ತೇವೇನು ? ನಿಮ್ಮಂಥ ಮಹಾನುಭಾವರಿಗೆ ಈ ಊರು ತಕ್ಕದ್ದಲ್ಲವೆಂದು ನಾನು ತಿಳಿದಿದ್ದೇನೆ. ಈಗ್ಯೆ ನೀವು ಬಂದು ಬಹಳ ದಿವಸಗಳಾಗಿಲ್ಲ. ಒಂದು ವಾರಪರ್ಯಂತರ ವಿದ್ದರೇನಾಗುವದು ? " ಎಂದು ಇಂದಿರೆಯು ಸೂಕ್ಷ್ಮರೀತಿಯಿಂದ ಆಗ್ರಹ ಮಾಡಿದಳು.

"ಇಲ್ಲ. ನಾನು ನಾಳಿಗೇ ಹೋಗಬೇಕು. ದಯಮಾಡಿ ನನ್ನನ್ನು ಭಿಡೆಯಕ್ಕೆ ಹಾಕಬೇಡಿರಿ." ಎಂದು ರಮಾಕಾಂತನು ವಿನಯೋಕ್ತಿಯಿಂದ ಹೇಳಿದನು.

"ನಾಳಿಗೆ ಮಾತ್ರ ನಿಮ್ಮನ್ನು ಬಿಡುವದಿಲ್ಲ. ಮುಂದೆ ನಿಮ್ಮ ಮನಸ್ಸಿಗೆ ತಿಳಿದಾಗ್ಯೆ ಹೋಗುವಿರಂತೆ. ದೇವಯಾನಿಯಮ್ಮನವರಿಗೆ ಅಪ್ಪಣೆ ಕೊಡಬೇಡಿರೆಂದು ಹೇಳುತ್ತೇನೆ. ಆ ಮೇಲೆ ನೋಡುವಾ ಹೇಗೆ ಹೋಗುವಿರದು !" ಎಂದು ಇಂದಿರೆಯು ರಮಾಕಾಂತನ ಮುಖವನ್ನು ನೋಡಿದಳು."

"ಆಗಲಿ. ನಿಮ್ಮ ಮನಸ್ಸು ಮುರಿಯುವದು ಹೇಗೆ ? ಎಂದು ಹೇಳಿ ಈ ಮದಿರಾಕ್ಷಿಯು ಪ್ರೇಮದಿಂದ ತನ್ನನ್ನು ನೋಡುತ್ತಿರಲು ಈ ಹಾಳು ಉದ್ವಿಗ್ನತೆಯು ತನ್ನನ್ನೆಲ್ಲಿಂದ ವ್ಯಾಪಿಸಿತೋ ! " ಎಂದು ರಮಾಕಾಂತನು ವ್ಯಸನಪಟ್ಟನು.

"ರಾಯರೇ, ನಾನು ಆಗಲೇ ದೇವಯಾನಿಯಮ್ಮನವರ ಮನೆಗೆ ಬರುವ ವರೆಗೂ ನೀವು ಉಲ್ಲಾಸದಲ್ಲಿದ್ದಿರಿ. ನಾನು ನನ್ನ ತಂದೆಯವರು ಬರುವ ವರ್ತಮಾನ ಹೇಳಿದಾಗಿನಿಂದ ನಿಮ್ಮ ಮನಸ್ಸು ಉದಾಸೀನವಾಗಿರುವಂತೆ ಕಾಣುತ್ತದೆ. ನನ್ನ ವರ್ತಮಾನದಿಂದ ತಮಗೆ ಖಿನ್ನತೆ ಬಂದಿತೇನು ? ನನ್ನ ತಂದೆಯವರು ಬರುವದು ನಿಮಗೆ ಇಷ್ಟವಿಲ್ಲೇನು ?"

"ಜಯರಾಯರು ಬಂದದ್ದು ಇಷ್ಟವಿಲ್ಲವೆಂಬ ಮಾತು ನನ್ನ ಬಾಯಿಂದಾದರೂ ಬಂದೀತೇ ? ಆದರೆ ಅವರ ಜೊತೆಯಲ್ಲಿ ನಾಲ್ಕು ಜನರು ಬರುವರು, ಆದರಿಂದ ನಿಮಗೆ ದೇವಯಾನಿಯವರ ಮನೆಗೆ ಬರಲಿಕ್ಕಾಗುವದಿಲ್ಲ. ಹಾಗಾದಲ್ಲಿ ನಿಮ್ಮ ಸಹವಾಸ ತಪ್ಪುವುದೆಂದು ತಿಳಿದು ನಾನು ಖಿನ್ನರಾಗಿರುವದು ಸತ್ಯ. ಸ್ವಾರ್ಥಪರನಾಗಿ ನಾನು ಹೀಗೆ ಮಾತಾಡಿದ್ದಕ್ಕೆ ನನ್ನನ್ನು ಕ್ಷಮಿಸಿರಿ ಆಯಿತು."

"ಇಷ್ಟೆಯೋ ! ನಾನೂ ನೀವೂ ದಿವಾಲು ಕ್ಷಣಹೊತ್ತು ದೇವಯಾನಿಯಮ್ಮನವರ ಮನೆಯಲ್ಲಿ ಕುಳಿತು ಆನಂದದಿಂದ ಹರಟೆಯಾಡಲಿಕ್ಕೆ ನನಗೆ ಪ್ರತಿಬಂಧವಾಗಲಿಕ್ಕಿಲ್ಲ. ನಮ್ಮ ತಂದೆಯವರದೂ ನಿಮ್ಮದೂ ಗುರ್ತು ಮಾಡಿ ಕೊಡುತ್ತೇನೆ. ಅವರು ಆನಂದದಿಂದ ನಿಮ್ಮನ್ನು ನಮ್ಮ ಮನೆಯಲ್ಲಿ ಸ್ವೀಕರಿಸುವರು. ಹಾಗಾದ ಮೇಲೆ ನಮ್ಮ ಮನೆಯಲ್ಲಿ ಕೂಡಾ ನಾವು ವಿನೋದದಿಂದ ಮಾತು ಕಥೆಯಾಡುತ್ತ ಕೂಡ್ರಬಹುದು. ನಮ್ಮ ತಂದೆಯವರು ನಿಮ್ಮನ್ನು ಬಿಟ್ಟು ಕ್ಷಣಹೊತ್ತು ಅಗಲಲಿಕ್ಕಿಲ್ಲ. ನಿಮ್ಮ ಗುಣಗಳೇ ಹಾಗಿರುವವು. ಮೇಲಾಗಿ ನನ್ನ ಸ್ನೇಹಿತರೆಂದು ನಿಮಗೆ ನಮ್ಮ ಮನೆಯಲ್ಲಿ ಅತ್ಯಾದರ ದೊರೆಯುವದು."

ಇಂದಿರೆಯ ಕೂಡ ಮಾತಿಗೆ ಬಿದ್ದಾಗಿನಿಂದ ರಮಾಕಾಂತನ ಉದಾಸೀನತೆಯು ಕಡಿಮೆಯಾಗಹತ್ತಿ ಮೈಯಲ್ಲಿ ಸ್ಫೂರ್ತಿ ಬರಹತ್ತಿತು.

"ಇಷ್ಟು ಸ್ವಚ್ಛಂದನಾಗಿ ಬಂದು ಕುಳಿತು ಹೇಗೆ ಮಾತಾಡಲಿಕ್ಕೆ ಅವಸರ ದೊರೆಯುವದು ? ನಿಮ್ಮ ಮನೆಯಲ್ಲಿ ನೀವು ಒಬ್ಬರಿಲ್ಲೊಬ್ಬರ ಕೂಡಾದರೂ ಮಾತಿನಲ್ಲಿ ತೊಡಗೇ ಇರುವಿರಿ. ಆ ಅರಿಯದವರ ಮಧ್ಯದಲ್ಲಿ ಹಿಡಿದು ಕೂಡಿಸಿದವರಂತೆ ನನಗೆ ಕುಳಿತು ಬರಬೇಕಾಗುವದು. ಅದಕ್ಕಾಗಿಯೇ ನಾನು ನಾಳೆಯೇ ಬೆಂಗಳೂರಿಗೆ ಹೋಗಿಬಿಡಬೇಕೆಂದು ಮನಸ್ಸು ಮಾಡಿದ್ದೇನೆ. ನನಗಂತೂ ಇದೇ ಕಡೆಯ ಉತ್ಸವದ ದಿವಸವೆಂದು ಕಾಣುತ್ತದೆ."

"ಈ ಜನರು ಬಂದದ್ದರಿಂದ ನನಗಾದರೂ ಉತ್ಸವದಲ್ಲಿ ಎಡರು ಬಂದಂತಾಗಿದೆ. ಸದಾ ಉತ್ಸವದಲ್ಲಿರುವದು ಹೇಗೆ ಸಾಧಿಸುವದು ? ನೀವಾದರೆ ಬೆಂಗಳೂರಿಗೆ

ಹೋಗಿ ಸದುದ್ಯೋಗದಲ್ಲಿ ತೊಡಗಿರುವಿರಾದ್ದರಿಂದ ವಿಷಾದಹೊಂದಬೇಕೆಂಬ ಮನಸ್ಸಿದ್ದರೂ ನಿಮಗೆ ಸಮಯವೇ ದೊರೆಯಲಿಕ್ಕಿಲ್ಲ. ಆದರೆ ನನಗಿಲ್ಲಿ ಅಂಥ ದೇನೂ ಮಾಡತಕ್ಕದ್ದಿಲ್ಲವಲ್ಲ! ನೀವು ಹೋದಿರೆಂದರೆ ನಮಗೇನೋ ಕಳಕೊಂಡಂತಾಗಿ ಹೊತ್ತೇ ಹೋಗದಂತಾಗುವದು. ನಾನೂ ಬೆಂಗಳೂರಿಗೆ ಸ್ವಲ್ಪ ದಿವಸಗಳಲ್ಲಿ ಬರತಕ್ಕವಳು. ಇದೇ ಸ್ನೇಹವನ್ನು ಇಟ್ಟು ನನ್ನ ಕೂಡ ವರ್ತಿಸುವಿರಲ್ಲವೇ" ಎಂದು ಇಂದಿರೆಯು ಮನೋಭಾವದಿಂದ ಮಾತಾಡಿದಳು.

"ಬೆಂಗಳೂರಿಗೆ ಬಂದಿರೆಂದರೆ ಅಲ್ಲಿ ನಿಮಗೆ ದೊಡ್ಡ ದೊಡ್ಡ ಪರಿಚಯಸ್ಥರ ಸಮಾಗಮವಾಗಿ ನನ್ನಂಥವನ ನೆನಪು ಕೂಡಾ ತಮಗುಳಿಯಲಿಕ್ಕಿಲ್ಲ."

"ನೀವಾದರೂ ದೇವಯಾನಿಯಮ್ಮನವರ ಶಾಲೆಯಲ್ಲಿಯೇ ಫಲಜ್ಯೋತಿಷ್ಯ ಕಲಿತಂತೆ ಕಾಣುತ್ತೀರಿ. ಆದರೆ ಭವಿಷ್ಯವಾದದಲ್ಲಿ ನಾನು ಎಳ್ಳಷ್ಟಾದರೂ ನಂಬುಗೆ ಇಡುವುದಿಲ್ಲ. ಆಕಾಶದಲ್ಲಿ ಎಲ್ಲ ಸಂಕ್ರಾಂತಿಯುತಿಗಳು ಒಕ್ಕಟ್ಟಾದರೂ ನನ್ನ ಸ್ವಭಾವದಲ್ಲಿ ಹೆಚ್ಚು ಕಡಿಮೆಯಾಗಲಿಕ್ಕಿಲ್ಲ. ನಿಮ್ಮ ಸ್ನೇಹವಂತೂ ಮರೆಯದಂಥದಾಗಿರುವದು."

ಈ ಮಾತು ಕೇಳಿ ರಮಾಕಾಂತನಿಗೆ ಪರಾಕಾಷ್ಠವಾದ ಸಮಾಧಾನವಾಯಿತು. ಅವನ ಮನಸ್ಸಿನಲ್ಲೊಂದು ಪ್ರಕಾರದ ಉತ್ಸಾಹ ಬಂದಂತಾಗಿ ಅದರ ಭರದಲ್ಲಿ ತಾನೇನು ಮಾಡುವೆನೆಂಬದರಿಯದೆ ರಮಾಕಾಂತನು ತನ್ನ ಕಯ್ಯಲ್ಲಿಯ ಬಡಿಗೆಯನ್ನು ನೆವರಿ ಒಳ್ಳೇಕಸುವಿನಿಂದೆಸೆದುಬಿಟ್ಟನು. ಅದು ಭಂವ್ವೆಂಬ ಸಪ್ಪಳದೊಂದಿಗೆ ಹೋಗಿ ನದಿಯ ಸರಳಿನಾಚೆಗೆ ಬಿದ್ದಿತು.

"ಆ ಅಂದವಾದ ಬಡಿಗೆಯನ್ನು ಹಾಗೆ ಬಿಸಾಡುವರೇ? ಅದನ್ನು ತರುವದು ಹೇಗೆ! ನಿಮ್ಮ ಮನಸ್ಸು ಈ ದಿವಸ ಸ್ಥಿರವೇ ಇಲ್ಲ." ಎಂದು ರಮಾಕಾಂತನ ಮುಖವನ್ನು ಚೆನ್ನಾಗಿ ನಿರೀಕ್ಷಿಸಿ ಮುಗ್ಧಭಾವದಿಂದ ಇಂದಿರೆಯು ನುಡಿದಳು.

ಅಮೃತಸೇಚನೆಗಯ್ಯುವಂಥ ಈ ಮಂಜುಭಾಷಿಣಿಯ ಮಾತು ಕೇಳಿ ರಮಾಕಾಂತನಿಗೆ ವಿಪರೀತವಾದ ಆನಂದವಾಯಿತು. ರಮಾಕಾಂತನು ನಕ್ಕು,

"ಅಂಥದೇನು ಚಿನ್ನದ ಬಡಿಗೆಯದು! ಈಗಲೇ ಅದನ್ನು ತರುವೆನು." ಎಂದು ರಮಾಕಾಂತನು ಸರಳು ದಾಟಿ ತನ್ನ ಬಡಿಗೆಯನ್ನು ಎತ್ತಿಕೊಂಡು ಬಂದು–

"ಇಂದಿರಾಬಾಯಿ, ನನ್ನ ಮೇಲಣ ಸ್ನೇಹವನ್ನು ಚಿರವಾಗಿ ಇಡುವಿರೆಂದು ಕೇಳಿ ನನಗೊಳ್ಳೇ ಉತ್ಸಾಹಬಂದಂತಾಗಿ ಇದನ್ನು ಏನೂ ವಿಚಾರ ಮಾಡದೆ

ಬಿಸಾಡಿದೆನು. ಇನ್ನು ನಡೆಯಿರಿ. ಹಾಗೆ ಆನಂದದಿಂದ ಈ ತೋಟದ ಶೋಭೆಯನ್ನು ನೋಡಿಕೊಂಡು ಹೋಗುವ." ಎಂದು ಹೇಳಿ ತನ್ನ ಸ್ಥಳದಲ್ಲಿ ಬಂದು ಕುಳಿತನು.

"ನಮ್ಮ ಸ್ನೇಹವು ಸ್ಥಿರವಾಗಿರತಕ್ಕದೆಂದು ನಾವಿಬ್ಬರೂ ಪರಸ್ಪರ ಭಾಷೆ ಕೊಟ್ಟದ್ದು ನೀವು ಮರೆತುಬಿಟ್ಟರೇನು?" ಎಂದು ಇಂದಿರೆಯು ಕೇಳಿದಳು.

"ಇದೆಲ್ಲಾ ನಾಳೆ ಬೆಂಗಳೂರಿನಲ್ಲಿ ಪ್ರತ್ಯಯಕ್ಕೆ ಬಂದೇ ಬರುತ್ತದಲ್ಲ!"

"ನನ್ನ ಮಾತಿನ ಮೇಲೆ ನಿಮ್ಮ ನಂಬಿಗೆಯೇ ಇದ್ದಂತೆ ಕಾಣುವದಿಲ್ಲ. ನಾನಂತೂ ನನ್ನ ವಚನಕ್ಕೆ ಮುಟ್ಟುವೆನು. ಬೆಂಗಳೂರಲ್ಲಿ ನಮ್ಮ ಭೆಟ್ಟಿಯಾಗೇ ಆಗುವದು. ನೀವೇನೇನು ಮಾಡುವದನ್ನು ನಿರೀಕ್ಷಿಸುತ್ತಿರುವೆನು. ನೀವೇನಾದರೊಂದು ಮಹತ್ಕಾರ್ಯ ಮಾಡಿದರೆ ಅದನ್ನು ನೋಡಿ ಸಂತೋಷಪಡುವೆನು." ಎಂದಿಂದಿರೆಯು ನಿರ್ಮಲಾಂತಃಕರಣದಿಂದ ಹೇಳಿದಳು.

ಗಜರಾಜನು ತನ್ನನ್ನು ಕಟ್ಟಿದ ಸರಪಣಿಯನ್ನು ಭಿನ್ನಭಿನ್ನಾಗಿ ಪರಿದೊಗೆದು ಮುಕ್ತನಾಗಿ ಒಳ್ಳೆ ಗಂಭೀರತೆಯಿಂದ ಲತಾಮಂಟಪದಲ್ಲಿ ಸೊಂಡೆಯನ್ನು ಹಾಕಿ ಕ್ರೀಡಿಸುತ್ತ ನಿಂತಿರುವಂತೆ ರಮಾಕಾಂತನು ತನ್ನ ಉದ್ವಿಗ್ನತೆಯನ್ನು ತೆಗೆದು ಹಾಕಿ ಪ್ರಸನ್ನಭಾವವನ್ನು ತಾಳಿ ಮೃಣಾಲಕೋಮಲವಾದ ಹಸ್ತವನ್ನು ಸಾದರದಿಂದ ತನ್ನ ಕಯ್ಯಲ್ಲಿ ತಕ್ಕೊಂಡು—

"ಮಹಾಭಾಗಳೇ, ನಿನ್ನ ಕಯ್ಹಿಡಿದೆನೆಂದು ಸಹಸಾ ನನ್ನನ್ನು ಅವಿನೀತನೆಂದು ತಿಳಿಯಬೇಡ. ನಿನ್ನುದಾರಭಾವವನ್ನು ಕಂಡು ಸಂತುಷ್ಟನಾಗಿರುವೆನು. ನಾನು ಎಲ್ಲಿಯು ಮೇಲಿದ್ದರೂ ನಿನ್ನ ಸ್ಮರಣೆಯನ್ನು ಮರೆಯಲಿಕ್ಕಿಲ್ಲ." ಎಂದು ಹೇಳಿ ಮೆಲ್ಲಗೆ ಅವಳ ಕೈ ಬಿಟ್ಟುಕೊಟ್ಟು ಕ್ಷಣಹೊತ್ತು ಅವಳ ಆಹ್ಲಾದಕರವಾದ ಮುಖವನ್ನು ಬಿಡದೇ ನೋಡಿ ಶ್ವಾಸಗರೆದನು? ಆ ಸುಶೀಲೆಯು ದೃಷ್ಟಿಯಲ್ಲಿ ಮನಸಿಜನ ಸಂಚಾರದ ಆವಿರ್ಭಾವವೆಳ್ಳಷ್ಟಾದರೂ ಕಂಡಿದ್ದರೆ ರಮಾಕಾಂತನು ತನ್ನನ್ನು ವ್ಯಥೆಗೊಳಿಸುತ್ತಿದ್ದ ಪಂಚಶರನ ಬಾಧೆಯ ಪುರಾಣವನ್ನು ಬಿಚ್ಚಿ ಹೇಳ ಲಾರಂಭಿಸುತ್ತಿದ್ದನು.

ರಮಾಕಾಂತನ ಹಸ್ತಸ್ಪರ್ಶದಿಂದಲೂ ಅವನ ಆವೇಶದ ಭಾಷಣದಿಂದಲೂ ಇಂದಿರೆಯ ಮನಸ್ಸಿನಲ್ಲಿ ಒಂದು ಪ್ರಕಾರದ ಭಾವನೆಯಾಯಿತು, ಇದರಿಂದ ತನಗಾನಂದವಾಯಿತೋ ಮತ್ತೇನಾದರಾಯಿತೋ ಎಂಬದು ಅವಳಿಗೆ ತಿಳಿಯಲಿಲ್ಲ. ಅವಳ ಎದೆಯು ಹಾರಹತ್ತಿತು. ಸ್ವಲ್ಪ ನಾಚಿಕೊಂಡವಳಾಗಿ ಅವನತಮುಖಿ

ಯಾಗಿ ಕುಳಿತುಕೊಂಡಳು.

ಇಂದಿರೆಯ ಸ್ಥಿತಿಯನ್ನು ನೋಡಿ ರಮಾಕಾಂತನು ಶಂಕಿತನಾಗಿ " ಇಂದಿರಾ ಬಾಯಿ, ನನ್ನ ವರ್ತನವು ಉದ್ದಾಮತನದ್ದೆಂದು ತಮಗೆ ಕಂಡುಬಂದಿದ್ದೀತು. ನನಗಾದ ಆನಂದದ ಭರದಲ್ಲಿ ನಾನು ತಿಳಿಯದೆ ಹಾಗೆ ಮಾಡಿದೆನು. ನನ್ನಿಂದ ತಪ್ಪಾಗಿದ್ದರೆ ಕ್ಷಮಿಸಿರಿ." ಎಂದು ದೈನ್ಯದಿಂದ ನುಡಿದನು.

ಇಂದಿರೆಯು ಸ್ವಲ್ಪ ಮುಖ ತಿರುವಿ ರಮಾಕಾಂತನನ್ನು ನೋಡಿ " ರಮಾಕಾಂತರೆ, ನನಗೆ ಸ್ವಲ್ಪಾದರೂ ಕೋಪಬಂದಿಲ್ಲ. ನಿಮ್ಮಿಂದ ಅಮರ್ಯಾದೆಯ ಕೆಲಸವೇನೂ ಆಗಿಲ್ಲ. ನೀವು ಸದಾಚಾರಸಂಪನ್ನರೆಂಬದನ್ನು ನಾನರಿಯೆನೇನು ? ನಿರ್ಮಲಭಾವದಿಂದ ಕೈಹಿಡಿದರೇನಾಯಿತು ?" ಎಂದು ಹೇಳಿದಳು.

ಪಂಚಶರನು ರಮಾಕಾಂತನ ಹೃದಯವನ್ನು ಭೇದಿಸಿದ ಬಾಣಗಳನ್ನು ಕಾವೇರಿಯ ನಿರ್ಮಲೋದಕದಂತಿದ್ದ ಇಂದಿರೆಯ ಹೃದಯದಲ್ಲಿ ತೊಳೆದು ಅವಳ ಹೃದಯಕ್ಕೆ ಅನುರಾಗದ ಬಣ್ಣವನ್ನು ಕೊಟ್ಟಿದ್ದಿಲ್ಲ. ರಮಾಕಾಂತನನುಭವಿಸುವ ತೀವ್ರವಾದ ವ್ಯಥೆಗೆ ತಾನೇ ಕಾರಣಳೆಂದು ಈ ಮುಗ್ಧೆಗೆ ತಿಳಿಯುವದು ಹೇಗೆ ?

ರಮಾಕಾಂತನು ಕ್ಷಣಹೊತ್ತು ತನ್ನೆದುರಿಗೆ ಹರಿಯುವ ಜಲಪ್ರವಾಹವನ್ನು ನಿರೀಕ್ಷಿಸುತ್ತ ಮನೋವಿಕಾರಗಳನ್ನು ಗಟ್ಟನೆ ನುಂಗಿಕೊಂಡನು. ತನ್ನ ಪ್ರೇಮವು ಇವಳಲ್ಲಿ ದೃಢವಾಗಿರುವದನ್ನು ಇವಳಿಗೆ ತಿಳಿಯಗೊಟ್ಟರೆ ಅನರ್ಥಕ್ಕೆ ಕಾರಣವಾದೀತು; ಒಂದುಪಕ್ಷದಲ್ಲಿ ತನ್ನ ಪ್ರೇಮವು ಇವಳಿಗೆ ರುಚಿಸಿದರೂ ಉಭಯತರ ಅಭೀಷ್ಟೆಯ ನಡುವೆ ಸಾವಿರಾರು ವಿಘ್ನಗಳು ಧ್ವಜೆಯೂರಿಕೊಂಡು ನಿಲ್ಲಬಹುದು: ಪರಸ್ಪರ ವಿಯೋಗವಾದರೆ ಇಬ್ಬರಿಗೂ ವಿರಹದುಃಖವು ಅಸಹ್ಯವಾಗುವದು: ಒಂದು ವೇಳೆ ಅವಳಿಗೆ ನನ್ನನುರಾಗವು ರುಚಿಸದಿದ್ದಲೆ ತನಗಾಗಿದ್ದ ತಾಪವು ಮಾತ್ರ ಇಮ್ಮಡಿಯಾಗುವದು ನಿಶ್ಚಯ. ಈ ಪ್ರಕಾರ ವಿಚಾರದಲ್ಲಿ ಮಗ್ನನಾಗಿ ಕಡೆಗೆ ತನ್ನ ಪ್ರೀತಿಯನ್ನು ತನ್ನ ಹೃದಯದಲ್ಲಿಯೇ ಬಂಧಿಸಿಟ್ಟು ಅದರ ವಾರ್ತೆಯನ್ನು ಕೂಡಾ ಇಂದಿರೆಗೆ ತಿಳಿಯಗೊಡಬಾರದೆಂದು ನಿಶ್ಚಯ ಮಾಡಿಕೊಂಡನು. ಸ್ಯಮಂತಕ ಮಣಿಯು ಜಾಂಬುವಂತನ ಗುಹೆಯಲ್ಲಿ ಗಪ್ಪಾದಂತೆ ರಮಾಕಾಂತನ ಪ್ರೀತಿಯು ಅವನ ಹೃದಯದಲ್ಲಿಯೇ ಅಡಗಿಕೊಂಡಿತು. ಮುಂದೆ ಇಂದಿರೆಗೆ ಈ ಮಣಿಯನ್ನು ಹುಡುಕಿ ತನ್ನ ಸ್ವಾಧೀನಕ್ಕೆ ತಕ್ಕೊಳ್ಳಬೇಕಾದರೆ ಸ್ಯಮಂತಕಾಖ್ಯಾನವನ್ನೇ ಮತ್ತೆ ಮಾಡಿ ತೋರಿಸಬೇಕಾಯಿತು.

ಕಡೆಗೆ ರಮಾಕಾಂತನು ತನ್ನ ಮನದಲ್ಲಿ " ಆಯಿತು. ಇದೇ ನಿಶ್ಚಯವು,

ನಾನು ಇಂದಿರೆಯನ್ನು ಪ್ರೀತಿಸುತ್ತೇನೆಂಬದನ್ನು ಅವಳಿಗೆಂದೂ ಹೇಳುವದಿಲ್ಲ. ಅವಳು ತನ್ನ ಲಾವಣ್ಯರಾಶಿಯನ್ನು ಪೆಟ್ಟಿಗೆಯಲ್ಲಿ ಬೇರೆ ತೆಗೆದಿಟ್ಟು ಬೀಗ ಹಾಕುವದಿಲ್ಲವಲ್ಲ! ಈ ಸರ್ವಾಂಗಸುಂದರಿಯನ್ನು ಆಗಾಗ್ಗೆ ನೋಡಿ ನನ್ನ ಮನೋರಾಜ್ಯದ ಸಿಂಹಾಸನದ ಮೇಲೆ ಕುಳಿತು ಆನಂದ ಹೊಂದಲಿಕ್ಕೆ ಏಕ ಛತ್ರಾಧಿಪತಿಯಾದ ನನಗೆ ಪ್ರತಿಬಂಧ ಮಾಡಲಿಕ್ಕೆ ಈ ಭೂಮಂಡಲದಲ್ಲಿ ಯಾರು ಸಮರ್ಥರಿರುವರು?" ಎಂದು ಭ್ರಮಿಷ್ಟನಂತೆ ಅಂದುಕೊಂಡು ಅಂಜುತ್ತಂಜುತ್ತ ಇಂದಿರೆಯ ಮುಖಕಮಲವನ್ನು ಕದ್ದು ನೋಡಿದನು.

"ಇಂದಿರಾಬಾಯಿ, ದಯಮಾಡಿ ಮನಸಿನಲ್ಲೇನೂ ಹಿಡಿಯತಕ್ಕದ್ದಿಲ್ಲ, ಕಂಡಿರಾ! ನನ್ನ ವರ್ತನವು ಅಸಂಭಾವಿತತನದ್ದೆಂದು ನಿಮಗೆ ಸಂಶಯ ಬಂದಲ್ಲಿ ಹಾಗೆ ಹೇಳಿಬಿಡಿರಿ, ಅಂದರೆ ಹಿಮಾಲಯದಾಚೆಗೆ ಹೋಗಿಬಿಡುವೆನು. ಆಮೇಲೆ ಮೈಸೂರುಪ್ರಾಂತವನ್ನು ಭೂಪಟದಲ್ಲಿ ಕೂಡಾ ನೋಡುವದಿಲ್ಲ."

"ಅವ್ವಯ್ಯಾ! ಯಾತರಮಾತಿಗೆ ಇಷ್ಟೊಂದು?" ಎಂದು ವಿನೋದ ದಿಂದ ಇಂದಿರೆಯು ನುಡಿದು ರಮಾಕಾಂತನೊಡನೆ ಉದ್ಯಾನದ ಶೋಭೆಯನ್ನು ನೋಡಲಿಕ್ಕೆ ಹೋದಳು.

ಅಷ್ಟರಲ್ಲಿ ಬೇರೊಂದು ಮಾರ್ಗದಿಂದ ಯಾವನೋ ಒಬ್ಬನು 'ಸುಂದರಿಯೆ ವಿರಹ ತಾಳಲಾರೆನೇ' ಎಂದು ದೊಡ್ಡ ದನಿ ತೆಗೆದು ಹಾಡುತ್ತ ಹೋಗುತ್ತಿದ್ದನು. ಇವನು ನಮ್ಮ ವಾಚಕರ ಪರಿಚಯದವನಾದ ನಟೇಶನೇ. ನಟೇಶನು ಮಾರ್ಗ ಹಿಡಿದು ಹೋಗುವವನು ತುಸು ನಿಂತು ಬಳಿಯಲ್ಲಿ ನಿಂತಿದ್ದ ಗಂಗೆಯನ್ನು ಮಾತಾಡಿಸಿ ಇವರೀರ್ವರು ರಮಾಕಾಂತ ಇಂದಿರೆಯರೇ ಎಂದು ಕಂಡುಕೊಂಡು ಮುಂದೆ ಸಾಗಿದನು. ಇವರಿಬ್ಬರೂ ಸ್ನೇಹದಿಂದಲೂ ವಿಶ್ವಾಸದಿಂದಲೂ ಅಡ್ಡಾಡುವದನ್ನು ಕಂಡು ನಟೇಶನ ಹೊಟ್ಟೆಯಲ್ಲಿ ಬೆಂಕಿ ಬಿದ್ದಿತು. ರಮಾಕಾಂತನು ತನಗೆ ಮಾಡಿದುಪ ಕಾರವನ್ನು ಮರೆತುಬಿಟ್ಟು "ಈ ಬಡ್ಡೀಮಗನಾದ ರಮಾಕಾಂತನು ನನ್ನ ಭಾಗವನ್ನೆತ್ತಿಕೊಂಡೊಯ್ಯುವನೇನು? ನಾನು ಇಂದಿರೆಯ ಬಾಲ್ಯದ ಸ್ನೇಹಿತನು. ನಿನ್ನೆ ಬಂದೀ ಆಗಂತುಕನಿಗೆ ಈ ವಯ್ಯಾರೆಯ ಕೂಡ ಸ್ನೇಹ ಬೆಳಸಲಿಕ್ಕೆ ಯಾರು ಅಧಿಕಾರ ಕೊಟ್ಟರು? ಆಗಲಿ, ಉಪಾಯವೇನಿದೆ! ಅವನ ಭಾಗದ್ದಿದ್ದರೆ ಆಗಲಿ. ರಮಾಕಾಂತನು ರೂಪವಂತನೂ, ಪಂಡಿತನೂ. ಉದಾರ ಮನಸ್ಸಿನವನೂ, ಇರುವುದರಿಂದ ಇಂದಿರೆಯು ಅವನಿಗೆ ಮೋಹಿತಳಾಗುವದು ಆಶ್ಚರ್ಯವಲ್ಲ. ನಾನು ಬೇಡಂದರೆ ಅವರು ಬಿಡುವರೇ?" ಎಂದು ನಟೇಶನಲ್ಲಿಗೋ ಗುಣು

ಗುಟ್ಟುತ್ತ ನಡೆದನು.

ಇಂದಿರೆಗೆ ಶ್ರೀಕಂಠನು ತಕ್ಕ ವರನಲ್ಲವೇ ?

ಆ ಸಂಜೆಯಲ್ಲಿ ರಮಾಕಾಂತನು ದೇವಯಾನಿಯ ಮುಂದೆ ತನ್ನ ಪ್ರಯಾಣದ ಪ್ರಸ್ತಾಪ ತೆಗೆದನು,

" ಕಾಂತೂ, ನಾನು ನನ್ನ ಸ್ವಾರ್ಥದ ಕಡೆ ನೋಡಿದೆನೆಂದರೆ ಇನ್ನೂ ನಾಲ್ಕು ದಿವಸ ನಿನ್ನನ್ನು ಇಟ್ಟುಕೊಳ್ಳಬೇಕೆಂದೆನಿಸುತ್ತದೆ. ಆದರೆ ನೀನು ಉದ್ಯೋಗ ಮಾಡತಕ್ಕವನು, ಇಲ್ಲಿ ಕುಳಿತರೇನು ಫಲ ! ನಿನ್ನನ್ನು ನಾನು ಪುತ್ರನಂತೆ ಭಾವಿಸುತ್ತೇನೆ. ಸಮಯ ದೊರೆತಾಗ್ಯೆ ಒಂದೆರಡು ದಿವಸ ಬಂದು ಇದ್ದು ಹೋಗುತ್ತ ಬಾ. ಕಮಲಾಕಾಂತರ ಸ್ನೇಹಋಣಾನುಬಂಧಕ್ಕಾಗಿ ನನ್ನ ಕಯ್ಯಿಂದಾದಷ್ಟು ನಿನ್ನ ಹಿತ ಮಾಡಿ ಸ್ನೇಹದ ಋಣದಿಂದ ಮುಕ್ತಳಾಗಲೆತ್ನಿಸುವೆನು. ಜಯರಾಯರು ಶ್ರೀರಂಗಪಟ್ಟಣದಲ್ಲಿ ಈಗ್ಯೆ ಬಂದಿರಬಹುದು. ಅವರ ಗುರ್ತು ನಿನಗೆ ಮಾಡಿ ಕೊಡುವೆನು. ನಿನಗೆ ಅವರಿಂದ ನೀನಾವದೇ ಉದ್ಯೋಗ ಮಾಡಲು ಸಹಾಯವಾದೀತು.

" ಅಮ್ಮಾ, ಒಬ್ಬರ ಆಶ್ರಿತನೆಂದೆನ್ನಿಸಿಕೊಳ್ಳಲಾರೆನು. " ಜಯರಾಯರು ಒಳ್ಳೇವರಿರಬಹುದು. ಅವರ ಪರಿಚಯದಿಂದ ನಾನೇನು ಕೆಡುವುದಿಲ್ಲ."

" ಏನೇ ಇರಲಿ. ಜಯರಾಯನ ಪರಿಚಯ ನಿನಗಿರಬೇಕೆಂದು ನಾನು ಬಯಸುತ್ತೇನೆ. ಆತನ ಕೆಲವು ಗುಣಗಳು ಅನುಕರಣೀಯವಾಗಿವೆ. ಇದರ ಮೇಲಿಂದವನು ಸರ್ವಗುಣಸಂಪನ್ನನೆಂದು ತಿಳಿಯಬೇಡ."

" ಅವನನ್ನು ನೀವು ಸೇರುತ್ತೀರೇನು ?"

" ಸೇರಲೀ ಸೇರದಿರಲಿ. ಆತನೂ ನಾನೂ ಬಹುಕಾಲದ ಪರಿಚಯಸ್ಥರು. ಈ ಕೋಣೆಯನ್ನು ಆ ಗಡಿಯಾರವನ್ನು, ಹೊರಗಿದ್ದ ಕರಿಬೇವಿನ ಗಿಡವನ್ನು ನಾನು ಸೇರುತ್ತೇನೆಂದರೇನು ? ಅವುಗಳವಶ್ಯಕತೆ ಜಯರಾಯನ ಪರಿಚಯದ ಅವಶ್ಯಕತೆಯೂ ನನಗುಂಟು. ಎಷ್ಟೋ ಒಳ್ಳೇ ಕೆಲಸಗಳು ಆತನಿಂದಾಗಿವೆ. ಆತನ ಪರಿಚಯ ನಿನಗಿರಲಿ. " ಎಂದು ದೇವಯಾನಿಯು ಹೇಳಿದಳು.

" ಈ ಜಯರಾಯನು ನನ್ನ ತಂದೆಯ ಬಾಲ್ಯದ ಸಂಗಾಡಿಯೆಂದು ನೀವು ಹೇಳಲಿಲ್ಲವೇ ?"

" ಅಹುದು. ಅವರೀರ್ವರು ಪರಸ್ಪರ ವಿರುದ್ಧವಾದ ಗುಣದವರು. ಜಯ

ರಾಯನು ಯೋಗ್ಯತೆಯಿಲ್ಲದೆ ಶ್ರೀಮಂತನಾದನು. ನಿಮ್ಮ ತಂದೆ ಕಮಲಾಕಾಂತರು ಶ್ರೀಮಂತರಾಗತಕ್ಕವರು, ವಿರಕ್ತಿಯಿಂದ ಬಡವರಾದರು. ಅದಿರಲಿ, ಜಯರಾಯನ ಮಗಳ ವಿಷಯಕ್ಕೆ ನಿನ್ನಭಿಪ್ರಾಯವೇನಿರುವದು ?"

ಇಂದಿರೆಯು ಮಾತು ತೆಗೆದಕೂಡಲೆ ರಮಾಕಾಂತನ ಮೈಮೇಲೆ ರೋಮಾಂಚಗಳೆದ್ದವು. ಈ ಮಾತು ಹೊರಡುವದೆಂದು ಅವನಿಗೆ ತಿಳಿದದ್ದರಿಂದ ಇದಕ್ಕೆ ಹೇಗೆ ಎದೆಕೊಟ್ಟು ನಿಲ್ಲಬೇಕೆಂಬದನ್ನು ಮುಂಚಿತವಾಗಿಯೇ ಕಲಿತುಕೊಂಡಿಟ್ಟಿದ್ದನು.

" ಇಂದಿರೆಯು ಸ್ವಭಾವವು ಬಹು ಮನೋಹರವಾದದ್ದು. ಅವಳು ಕುಶಾಗ್ರಬುದ್ಧಿಯುವಳಾಗಿದ್ದು ವಿನಯಶೀಲಳು. ಶ್ರೀಮಂತರ ಮಗಳಿದ್ದರೂ ಡಂಭರಹಿತಳು. ರೂಪವತಿಯಾಗಿದ್ದರೂ ವೈಯಾರವೇನೂ ಇಲ್ಲ. ಸಾರಾಂಶ ಇವಳು ಅಪ್ರತಿಮಳಾದ ವಧುವೇ."

ದೇವಯಾನಿಯು ರಮಾಕಾಂತನ ಮುಖವನ್ನು ದಿಟ್ಟಿಸಿ ನೋಡಿ "ಇಂದಿರೆಯ ಗುಣಗಳನ್ನು ಯಥಾರ್ಥವಾಗಿ ನಿರೂಪಣ ಮಾಡಿದ್ದು ಕೇಳಿ ನನಗೆ ಸಮಾಧಾನವಾಯಿತು. ಅವಳೂ ನೀನೂ ಸ್ನೇಹಿತರಾಗಿರಬೇಕೆಂದು ನನ್ನಪೇಕ್ಷೆಯಿರುವದು. ಸ್ತ್ರೀಯರಿಗೂ ಪುರುಷರಿಗೂ ಸ್ನೇಹವಿರಬಹುದಷ್ಟೇ ?" ಎಂದು ಕೇಳಿದಳು.

ರಮಾಕಾಂತನಿನ್ನೂ ಇಂದಿರೆಯ ಪ್ರೇಮಪಾಶದಲ್ಲಿ ಸಿಕ್ಕಿಲ್ಲೆಂದು ದೇವಯಾನಿಯು ನಂಬಿಗೆಯಿತ್ತು. ಇಂದಿರೆಯಂತೂ ಸಹಸಾ ಕಾಮನ ಹೂಬಾಣಗಳಿಗೆ ಅಭೇದ್ಯಳೆಂದು ಅವಳ ಗ್ರಹವೇ ಆಗಿತ್ತು. ಆದುದರಿಂದ ರಮಾಕಾಂತನು ಇಲ್ಲಿಂದ ಮನಸ್ಸಿಗೆ ಮುಳ್ಳು ಚುಚ್ಚಿಕೊಳ್ಳದಲೆ ಹೋಗುವನೆಂದು ದೇವಯಾನಿಯು ಸಮಾಧಾನ ಹೊಂದಿದ್ದಳು. ಇದನ್ನು ರಮಾಕಾಂತನು ತಿಳದವನಾಗಿ ತಾನು ದೇವಯಾನಿಯನ್ನು ಮೋಸಗೊಳಿಸಿದೆನೆಂದು ತನ್ನನ್ನು ನಿಂದಿಸಿಕೊಂಡನು. ವಜ್ರಪ್ರಾಯವಾದ ಇಂದಿರೆಯ ವ್ಯಾಮೋಹವನ್ನು ತನ್ನ ಹೃದಯದಲ್ಲಿ ಬಚ್ಚಿಟ್ಟುಕೊಂಡದ್ದು ರಮಾಕಾಂತನಿಗೆ ದುಃಸಹವೇ ಆಗಿತ್ತು. ಆದರೂ ಎದೆಯೊಡಕೊಂಡು ಬಾಯಿಬಿಡುತ್ತ ತಿರುಗುವದರಲ್ಲಿ ನಗೆಗೇಡೇ ಹೊರ್ತಾಗಿ ಮತ್ತೇನಿಲ್ಲವೆಂದು ತಿಳಿದು ವಡವಾಗ್ನಿಯನ್ನು ತಾಳಿಕೊಂಡು ಗಂಭೀರನಾಗಿ ಕಾಣುತ್ತಿರುವ ಸಮುದ್ರನಾಥನಂತೆ ರಮಾಕಾಂತನು ಕಂಡನು.

ವ್ಯಥೆಯು ರಮಾಕಾಂತನ ಮನಸ್ಸಿನಲ್ಲಿ ಕಟೆಯುತ್ತಿರಲು 'ಶೋಕಕ್ಷೋಭೇ ಚ ಹೃದಯಂ ಪ್ರಲಾಪೈರೇವ ಧಾರ್ಯತೆ' ಎಂಬಂತೆ ಇವನು ನಿರ್ಜನವಾದ ಸ್ಥಾನದಲ್ಲಿ ಹೋಗಿ ಗೀತಗೋವಿಂದದಲ್ಲಿಯ ಶ್ರೀ ಕೃಷ್ಣನ ವಿರಹವರ್ಣ

ನೆಯ ಪದಗಳನ್ನು ಮನಸ್ಸೋಕ್ತವಾಗಿ ಹಾಡುತ್ತ ಕುಳಿತುಕೊಂಡನು. ಅಲ್ಲಿಂದ ಬೇಸತ್ತು ಮನೆಗೆ ಬಂದು ಕುಳಿತುಕೊಂಡರೂ ಸಮಾಧಾನವಾಗದೆ ಇಂದಿರೆಯ ಮುಖಕಮಲವನ್ನು ದೂರದಿಂದಾದರೂ ನೋಡಿದರೆ ಸುಖವಾದೀತೆಂದೆಣಿಸಿ ಅವಳ ಮನೆಯ ಮುಂದೆ ಹಾಯ್ದನು. ಅವಳನಲ್ಲಿ ಕಾಣದೇ ಸಾವಿತ್ರಮ್ಮನ ಮನೆಯ ಹತ್ತರದಿಂದ ಹೋದನು. ಅಲ್ಲಿಯೂ ಕಾಣದೆ ಮೂರ್ಖನಂತೆ ತಾನಿದ್ದ ಸ್ಥಳಕ್ಕೆ ದಣಕೊಂಡು ಬಂದನು. ಕಡೆಗೆ ಅಭಾವವೈರಾಗ್ಯವನ್ನು ತೊಟ್ಟು ತಾನಿಂದಿರೆಯನ್ನು ಕಾಣದಿದ್ದದ್ದು ಒಂದರ್ಥದಿಂದ ಒಳ್ಳೇದೇ ಆಯಿತು. ಇಂದಿರೆ ಯನ್ನೆಲ್ಲಾದರೂ ಕಂಡಿದ್ದನಾದರೆ ' ರಮಾಕಾಂತರೇ ' ನೀವಿಲ್ಲೇಕೆಂದು ' ಕೇಳಿದ್ದರೆ ಏನು ಹೇಳಬಹುದಾಗಿತ್ತೆಂದು ಯೋಚಿಸಿ ಅವನು ಸಮಾಧಾನ ಹೊಂದಿದವ ನಂತಾದನು,

ಇಷ್ಟರಲ್ಲಿ ಇಂದಿರೆಯು ತನ್ನ ತಂದೆಯೊಡನೆ ದೇವಯಾನಿಯ ಮನೆಗೆ ಬಂದಿದ್ದಳು. ಇವರ ಸಂಗಡ ಭಾಷ್ಕಳಪಂತನೂ ಪಂಡಿತೆಯೂ ಇದ್ದರು. ಇವರು ಬಂದ ಒಹಳೊತ್ತಿನ ಮೇಲೆ ರಮಾಕಾಂತನು ಬಂದನು. ಜಯರಾಯನೂ ದೇವ ಯಾನಿಯೂ ಬಂದು ಕೋಚದ ಮೇಲೆ ಕುಳಿತು ತಮ್ಮ ವಯೋನುರೂಪ ಹರಟೆ ನಡಿಸಿದ್ದರು. ಭಾಷ್ಕಳಪಂತನು ಪಂಡಿತಾ ರಾಧಾಬಾಯಿಯೊಡನೆ ವಿಸಂಗತವಾದ ಕಥೆ ಹಚ್ಚಿದ್ದನು. ಇಂದಿರೆಯು ತನ್ನ ಕಯ್ಯಲ್ಲಿಯ ಗುಲಾಬೀ ಹೂಗಳನ್ನೂ ಹಾರಿಸಿ ಹಿಡಿಯುತ್ತ ಬೇರೊಂದು ಕೋಚದ ಮೇಲೆ ಕುಳಿತು ಭಾಷ್ಕಳಪಂತನೂ ಪಂಡಿತೆಯೂ ನಡಿಸಿದ ಅರ್ಥಾನರ್ಥಸಂಬಂಧವಿಲ್ಲದ ಸಂವಾದ ವನ್ನು ಕೇಳಿ ವಿನೋದಪಡುತ್ತಿದ್ದಳು.

ಇಂದಿರೆಯು ತನ್ನ ತಂದೆಯು ಬಂದಿರುವನೆಂಬ ಉಬ್ಬಿನಿಂದ ವಸ್ತ್ರಾಲಂಕಾರ ಗಳನ್ನು ಚನ್ನಾಗಿ ಮಾಡಿಕೊಂಡಿದ್ದಳು. ರೇಶ್ಮೆ ರಾಗಾವಳಿಯ ಸೀರೆಯನ್ನುಟ್ಟು ಮುಗಿಲು ಬಣ್ಣದ ಜರಿತಾರೀ ಕುಪ್ಪಸ ತೊಟ್ಟಿದ್ದಳು. ತುರುಬಿಗೆ ಹಾಕಿದ ಅರಳ ಮಲ್ಲಿಗೆಯ ಮಾಲೆಯು ನೀಲಮಯವಾದ ಮುಗಿಲಲ್ಲಿ ಆಕಾಶಗಂಗೆಯಂತೆ ಶೋಭಿ ಸುತ್ತಿರುವದು. ಅವಳಿಟ್ಟ ಅಮೂಲ್ಯವಾದ ನತ್ತಿನ ಮುತ್ತುಗಳ ಪ್ರತಿಬಿಂಬವು ಪ್ರವಾಲದಂತಿರುವ ಅಧರದಲ್ಲಿ ಚತುರನಾದ ಪರೀಕ್ಷಕನಿಗೆ ಕಾಣಿಸಬಹುದಾಗಿತ್ತು. ಚಂದ್ರಮನನ್ನು ಕಂಡು ಅವನ ಪತ್ನಿಯರಾದ ತಾರಕೆಯರು ನಾಚಿಕೊಂಡು ಪರ್ವತಾಗ್ರವನ್ನಾಶ್ರಯಿಸಿಕೊಂಡಂತೆ ಈ ಇಂದುಮುಖಿಯ ಕೊರಳಲ್ಲಿದ್ದ ನಕ್ಷತ್ರ ಮಾಲೆಯು ಅವಳ ವಕ್ಷಃಸ್ಥಳದ ಕೆಳಭಾಗದವರೆಗೆ ಜೋತುಬಿದ್ದಿತ್ತು. ಇಂಥ

ವೇಷದಲ್ಲಿ ಇಂದಿರೆಯು ಅತಿ ಮನೋಹರಳಾಗಿ ಕಾಣುತ್ತಿದ್ದಳೆಂದು ಹೇಳುವದು ಪುನರುಕ್ತಿಯೇ ಸರಿ. ಇವಳನ್ನು ನೋಡಿದವನೇ ರಮಾಕಾಂತನೆದೆ ಧಸ್ಸೆಂದು ಒಳಗೆ ಹೋಗಲೋ ಬೇಡವೋ ಎಂಬ ವಿಚಾರದಲ್ಲಿರುವಷ್ಟರಲ್ಲಿಯೇ ಇವನ ಹೃದಯಂಗಮಳೇ ಎದ್ದು ನಿಂತು "ಬನ್ನಿರಿ ರಮಾಕಾಂತರಾಯರೇ, ನಿಮ್ಮ ಶೋಧವನ್ನೆಷ್ಟಂತ ಮಾಡಬೇಕು." ಎಂದು ಹೇಳಿ ತಾನು ಕುಳಿತಿದ್ದ ಕೋಚದ ಮೇಲೆ ಅವನನ್ನು ಕುಳ್ಳಿರಿಸಿ ಇಂದಿರೆಯು ಬೇರೊಂದು ಕುರ್ಚಿಯ ಮೇಲೆ ಕುಳಿತಳು.

"ಇದುವರೆಗೆ ಎಲ್ಲಿ ಹೋಗೋಣಾಗಿತ್ತು ?"

"ಎಲ್ಲಿಯೂ ಇಲ್ಲ. ಸಂಜೇಹೊತ್ತಾದ್ದರಿಂದ ನದೀಕಡೆಗೆ ಹೋಗಿ ತಿರುಗಾಡಿ ಬಂದೆನು."

"ಸಾಯಂಕಾಲದಲ್ಲಿ ಕಾವೇರೀ ತೀರದ ಶೋಭೆಯು ನೋಡುವಂತಿರುತ್ತದೆ. ತಪೋನಿಧಿಗಳಾದ ಬ್ರಾಹ್ಮಣರು, ಲೋಕಕಲ್ಯಾಣಾರ್ಥವಾಗಿ ಬಿಟ್ಟೂಬಿಡದೆ ಸಂಚಾರಮಾಡಿ ದಣಿಕೊಂಡು ಅಸ್ತಾಚಲದ ಶಿಖರದ ಮೇಲೆ ವಿಶ್ರಮಿಸಿಕೊಂಡ ಸೂರ್ಯನಾರಾಯಣನಿಗೆ ಶೀತೋಪಚಾರವನ್ನು ಮಾಡಲೆಸಗಿರುವಂತೆ ಅರ್ಘ್ಯಗಳನ್ನು ಕೊಡುತ್ತಿರುವರು. ಸುವಾಸಿನಿಯರು ತುರುಬಿಗೆ ಹಾರ ಹಾಕಿಕೊಂಡು ತಾಂಬೂಲವನ್ನು ಸವೆಯುತ್ತ ಆ ಥಳಥಳಿಸುವ ಕೊಡಗಳನ್ನು ತಕ್ಕೊಂಡು ದಂಡೆಯ ಮೇಲೆ ಕುಳಿತುಕೊಂಡು ಪರಸ್ಪರರಿಗೆ ವಿನೋದಹಾಸ್ಯಗಳನ್ನಾಡುತ್ತಿರುವದನ್ನು ನೋಡಲು ಸುರಾಂಗನೆಯರು ವಿಯದ್ಗಂಗೆಯ ಸುಧಾಮಯಸಲಿಲಕ್ಕಿಂತಲೂ ಕಾವೇರಿಯ ನೀರು ಹೆಚ್ಚು ಸವಿಯಾಗಿ ಕಂಡದ್ದರಿಂದ ಸುವರ್ಣಕಲಶಗಳನ್ನು ತಂದು ಈ ನೀರು ಒಯ್ಯುವದಕ್ಕಾಗಿ ಬಂದಿರುವರೋ ಏನೋ ಎಂಬಂತೆ ಕಾಣುತ್ತಿರುವರು—ಎಂದಿಂದಿರೆಯು ವರ್ಣಿಸುತ್ತಿರಲು ಇದನ್ನು ಕೇಳಿ ಬಾಷ್ಕಳಪಂತನು ತನ್ನ ಅಕ್ಕನ ಹಾಳು ಹರಟೆ ಬಿಟ್ಟುಗೊಟ್ಟು ಇಂದಿರಾ ರಮಾಕಾಂತರಿದ್ದಲ್ಲಿಗೆ ಬಂದನು.

"ಓಹೋ ! ಏನಾಶ್ಚರ್ಯವಿದು ನನ್ನ ಪರಮಮಿತ್ರರಿಲ್ಲಿ ಹೇಗೆ ಬಂದರು? ನನ್ನ ಶೂರ ಸಹಾಯಕಾರಿಯಾದ ರಮಾಕಾಂತರೇ, ಇಲ್ಲಿಗೇನು ಕಾರಣ ಬರೋಣಾಯಿತು ? ದೇವಯಾನಿಯಮ್ಮನವರೇ, ಇಲ್ಲಿಗೇನು ಕಾರಣ ಬರೋಣಾಯಿತು ? ದೇವಯಾನಿಯಮ್ಮನವರೇ, ಇಂಥ ಲಭ್ಯಲಾಭ ಘಟಿಸಲು ನಿಮ್ಮಲ್ಲಿ ಇಂದ್ರಜಾಲವಿಲ್ಲವಷ್ಟೇ ? ರಮಾಕಾಂತರೇ, ದಯಮಾಡಿ ಹೀಗೆ ಬನ್ನಿರಿ. ಇವರೇ ನನ್ನ

ಸಹೋದರಿಯುರಾದ ಪಂಡಿತಾ ರಾಧಾಬಾಯೀಯುವರು. ರಾಧಕ್ಕಾ, ಇವರು ನನ್ನ ಪರಮಸ್ನೇಹಿತರಾದ ರಮಾಕಾಂತರಾಯರು. ಅಂದಿನ ಜಗಳದಲ್ಲಿ ನನಗೆ ಸಹಾಯ ಮಾಡಿದವರಿವರೇ."

ರಾಧಾಬಾಯೀಯು ಸುಮಾರು ಐವತ್ತು ವರ್ಷದವಳಾಗಿರಬಹುದು. ಇವಳ ಮುಂಗೂದಲು ಹುಬ್ಬಿನ ಮೇಲೆ ಹಾಯ್ದು ಹೆಗಲ ಮೇಲೆ ಬಿದ್ದಿದ್ದವು. ಬಂಗಾಲೀ ಸ್ತ್ರೀಯರಂತೆ ಬಿಳೀ ಪತ್ತಲವನ್ನುಟ್ಟು ಮೈಯಲ್ಲಿ ಆಂಗ್ಲಸ್ತ್ರೀಯರಂಥ ರವಿಕೆ ತೊಟ್ಟಿದ್ದಳು. ಉದ್ದ ಮೋರೆಯಿದ್ದು ಮೈಬಂಣವು ಕೆಂಪದಾಗಿತ್ತು. ಇವಳು ತನ್ನ ಎಡಮುಂಗೈಗೆ ಚರ್ಮದ ಪಟ್ಟಿಯಲ್ಲಿ ಕೂಡ್ರಿಸಿದ ಗಡಿಯಾರ ಕಟ್ಟಿ ಕೊಂಡಿದ್ದಳು.

"ರಮಾಕಾಂತರೇ, ನಮ್ಮ ಬಾಳೂ (ಬಾಪ್ಕಳ)ನು ನಿಮ್ಮ ಹೆಸರು ಆಗಾಗ್ಗೆ ನನ್ನ ಮುಂದೆ ತೆಗೆಯುತ್ತಿದ್ದನು. ನಿಮ್ಮ ಪ್ರತ್ಯಕ್ಷದರ್ಶನವಾದ್ದರಿಂದ ನನಗೆ ಬಹಳ ಸಂತೋಷವಾಗಿರುವದು" ಎಂದು ಪಂಡಿತೆಯು ಹಾಸ್ಯಮುಖಿಯಾಗಿ ಹೇಳಿದಳು.

"ಅಕ್ಕಾ, ನಮ್ಮ ರಮಾಕಾಂತರಾಯರು ಅಂಥಿಂಥವರಲ್ಲ. ಅವರೂ ನಿಮ್ಮಂತೇ ಸಂಶೋಧಕರ ಪಕ್ಷದವರೂ ಸತ್ಯಾರ್ಥಿಗಳೂ ಆಗಿರುವರು. ನಿಮ್ಮಿಬ್ಬರ ವಿಚಾರಗಳು ಒಂದೇ ಮಾದರಿಯವಿದ್ದ ಮೂಲಕ ನೀವಿಬ್ಬರೂ ಸ್ನೇಹಿತರಾಗುವಿರಿ. ವಸ್ತುಸ್ಥಿತಿ ಹೀಗಿರುವದು; ನಾನು ಸುಳ್ಳು ಹೇಳುವನಲ್ಲ" ಎಂದು ಬಾಪ್ಕಳಪಂತ ನೆಂದನು.

"ರಮಾಕಾಂತರಾಯರ ಮುಖಾವಲೋಕನದಿಂದಲೇ ಅವರು ಸುಧಾರಣಾ ಭಿಮಾನಿಗಳೆಂದು ನಂಬುತ್ತೇನೆ. ಇಂದಿರಾಬಾಯೀ, ನಾನನ್ನುವದು ನಿಜವಲ್ಲವೋ ಹೇಳಿರಿ ಇವರ ಕಂಣುಗಳ ಮೇಲಿಂದಲೇ ತಿಳಿಯುವಂತಿದೆ. ನೋಡಿರಿ ಇವರ ನೇತ್ರಗಳಲ್ಲಿ ರಮಣೀಯತೆಯು ಸಂಪೂರ್ಣವಾಗಿರುವದು. ಏನನ್ನುವಿರಿ, ಇಂದಿರಾ ಬಾಯೀ!" ಎಂದು ಪಂಡಿತೆಯಂದಳು.

"ಅವರ ದೃಷ್ಟಿಯು ಚನ್ನಾಗಿರುತ್ತದೆ." ಎಂದು ಇಂದಿರೆಯೆಂದು ಸುಮ್ಮ ನಾದಳು.

"ಇಂದಿರಾಬಾಯವರನ್ನುವದು ನಿಜವು. ಬಹುದೂರಿನಲ್ಲಿದ್ದ ವಸ್ತುಗಳು ಕೂಡಾ ನನಗೆ ಚೆನ್ನಾಗಿ ಕಾಣಿಸುವವು." ಎಂದು ರಮಾಕಾಂತನು ಇಂದಿರೆಯ ಸೂತ್ರಕ್ಕೆ ಭಾಷ್ಯಮಾಡಿದನು.

"ರಮಾಕಾಂತರೇ, ಪುನರ್ವಿವಾಹ, ಪ್ರಬುದ್ಧಕನ್ಯಾವಿವಾಹ, ಸ್ತ್ರೀಶಿಕ್ಷಣ

ಮುಂತಾದ ವಿಷಯುಗಳ ಬಗ್ಗೆ ನಿಮ್ಮಭಿಪ್ರಾಯಗಳೇನಿರುವವು? ಸ್ತ್ರೀಯರ ಸ್ವಾತಂತ್ರ್ಯಕ್ಕೆ ನೀವು ಅನುಕೂಲರಿರುವಿರೇನು?" ಎಂದು ರಾಧಾಬಾಯಿಯು ಕೇಳಿದಳು.

"ಇವುಗಳ ಬಗ್ಗೆ ನಾನು ಓದಿರುವೆನು. ಆದರೆ ನನ್ನ ಮತವು ಈ ಕಾಲಕ್ಕೆ ಹೀಗೇ ಇರುವದೆಂದು ಹೇಳಲಾರೆನು. ಸ್ತ್ರೀಯರು ಉಚ್ಚ ಪ್ರತಿಯ ಶಿಕ್ಷಣ ಹೊಂದುವದು ಅವಶ್ಯ; ಅವರ ಸ್ವಾತಂತ್ರ್ಯಾತಿಶಯವು ಮಾತ್ರ ನನಗೆ ಸಹಿಸದು."

"ಸ್ತ್ರೀಯರಿಗೆ ಸ್ವಾತಂತ್ರ್ಯವಿರಬಾರದೆಂಬುದು ನಿಮ್ಮ ಮತವೋ? ಇಂಗ್ಲಿಷ ಸ್ತ್ರೀಯರನ್ನು ನೋಡಿರಿ! ಎಷ್ಟು ಸ್ವತಂತ್ರರಾಗಿರುವರು! ಅದಕ್ಕಾಗಿಯೇ ಇಂಗ್ಲಂಡವು ಇಷ್ಟು ಘನತೆಗೇರಿರುವದು."

ಇಷ್ಟರಲ್ಲಿ ನಮ್ಮ ಸುಶೀಲೆಯಾದ ಇಂದಿರೆಯು—"ನೀವು ಯಾತಕ್ಕೆ ಸ್ವಾತಂತ್ರ್ಯವೆಂದೆನ್ನುತ್ತೀರೋ ನನಗೆ ತಿಳಿಯದು. ವಿವಾಹವಾದ ಕೂಡಲೆ ಬರಿಗೈಯಿಂದ ನಾವು ಅತ್ತೇಮನೆಗೆ ಹೋಗುವವರು. ಅಲ್ಲಿ ನಮ್ಮ ಅನ್ನ ವಸ್ತ್ರ ಆಭರಣ ಅಧಿಕಾರಗಳನ್ನು ನಮ್ಮ ಪತಿರಾಜರ ಆಸ್ತಿಯ ಯೋಗ್ಯತೆಯ ಮೇರೆಗೆ ಅನುಭವಿಸುತ್ತೇವೆ. ಹೀಗಿದ್ದು ನಾವು ಯಾರಿಂದ ಸ್ವತಂತ್ರರಾಗಿರಬೇಕು? ತಮ್ಮ ಪ್ರಾಣಕ್ಕಿಂತಲೂ ಹೆಚ್ಚಾಗಿ ನಮ್ಮನ್ನು ಸಂರಕ್ಷಿಸುವ ಪ್ರಾಣೇಶ್ವರರ ಕೂಡೆ ಹುರ್ರೆಂದು ಜಗಳಾಡುವದು ಸ್ವಾತಂತ್ರ್ಯವೇನು? ಸದ್ಯಃಸ್ಥಿತಿಯ ಕಡೆಗೆ ನಾವು ನೋಡಿದರೆ ಸುಕುಮಾರ್ತಿಯರಾದ ಅರ್ಧಾಂಗಿಯರ ವಶವರ್ತಿಗಳಾಗಿ ದೀನರಾಗಿರುವ ಪತಿಗಳ ಸಂಖ್ಯೆಯೇ ಹೆಚ್ಚಿರುವದು. ಮನೆಯಲ್ಲಿಯ ಎಲ್ಲ ವಸ್ತುಗಳ ಸ್ವಾಮಿತ್ವವನ್ನು ಹೊಂದಿ ಪತಿಗಳನ್ನು ಸೂತ್ರಗೊಂಬೆಯಂತೆ ಕುಣಿಸುತ್ತಿರುವ ಗೃಹಿಣೀಜನರಿಗೆ ಸ್ವಾತಂತ್ರ್ಯ ಬೇಕೋ; ಏನು, ತನ್ನಾಪ್ತರಿಷ್ಟರಿಗೆ ಎರವಾಗಿ ತನ್ನ ಮನೆಯಲ್ಲಿ ತಾನೇ ದಾಸನಾಗಿರುವ ಬಡಪತಿಗೆ ಸ್ವಾತಂತ್ರ್ಯ ಬೇಕೋ; ಹೇಳಿರಿ, ಪಂಡಿತಾಬಾಯಿಯವರೇ?" ಎಂದು ಮಾತಾಡಿದಳು.

"ಆಹಾ, ಹೀಗೆ ಗಂಡಸರ ಕಡೆಯಿಂದ ಬಹುಮಾನ ಹೊಂದುವ ಯುಕ್ತಿಗಳನ್ನು ನಾನು ಬಲ್ಲೆನು. ಸ್ತ್ರೀಯರು ಮನೆಬಿಟ್ಟು ಅಗಲಬಾರದು, ಪರಪುರುಷರ ಕೂಡ ಮಾತಾಡಲಾಗದು. ದಾಸಿಯಂತೆ ಪತಿಸೇವೆ ಮಾಡಿಕೊಂಡಿರಬೇಕು. ಎಷ್ಟೋ ಗಂಡಸರು ತಮ್ಮ ಹೆಂಡರನ್ನು ದನಗಳನ್ನು ಬಡಿದಹಾಗೆ ಬಡಿಯುವದನ್ನು ನಾವು ಕೇಳುತ್ತೇವಲ್ಲ! ಈ ಪರಿಯಾದ ಸ್ಥಿತಿಯು ಸ್ತ್ರೀಯರಿಗೊಳ್ಳೆದೇನು ಇಂದಿರಾಬಾಯೀ ಸಾಹೇಬ?"

"ಎಷ್ಟಾದರೂ ತಾವು ಪಂಡಿತೆಯರು, ತಮ್ಮಂಥವರ ಮುಂದೆ ಅಲ್ಪ ವಯಸ್ಕಳೂ ಅನುಭವರಹಿತಳೂ ಆದ ನನ್ನಂಥ ಕುಮಾರಿಕೆಯು ವಾದವೆಲ್ಲಿಗೆ ಮುಟ್ಟುವದು ? ಆದರೂ ತಿಳಿದಷ್ಟು ಹೇಳಲಿಕ್ಕೇನೂ ಭಯವಿಲ್ಲ. ಹೆಂಗಸರಿಗೆ ಮನೆಬಿಟ್ಟು ಹೋಗಲಿಕ್ಕೆ ಪ್ರತಿಬಂಧವಿದೆಂದು ಹೇಳುವದು ಅನ್ಯಥಾವಾದವು. ನಾವು ಹೂವೀಳ್ಯಕ್ಕೆ ಹೋಗುತ್ತೇವೆ. ವನಭೋಜನಕ್ಕೆ ಹೋಗುತ್ತೇವೆ. ಮಿತ್ರೆಯರ ಮನೆಗೆ ಹೋಗಿ ಚಾಟುಗೋಷ್ಠಿಯಮಾಡುತ್ತೇವೆ. ಇದಕ್ಕೆಲ್ಲಾ ಪ್ರತಿಬಂಧವೆನ್ನಬಹುದೇ ? ಉತ್ಶೃಂಖಲರಾಗಿ ತಿರುಗಾಡುವದು ಪುರುಷರಲ್ಲಿ ಕೂಡ ನಿಂದ್ಯವಿದ್ದ ಪಕ್ಷದಲ್ಲಿ ಅದು ಉತ್ತಮೆಯರಿಗುಚಿತವೇ ? ಪತಿವ್ರತೆಯರೂ ಮಾನವಂತೆಯರೂ ಆದ ನಾರಿಯರ ವರ್ಚಸ್ವವು ಸಾರ್ವಭೌಮನ ಹೆಂಡತಿಗೆ ಬಾರದು. ಅಬಲೆಯರಾದ ನಾವು ಸಿಕ್ಕಸಿಕ್ಕಲ್ಲಿ ತಿರುಗಿದರೆ ನಮ್ಮ ಮಾನಕ್ಕೆ ಹಾನಿ ಬಾರದಿದ್ದೀತೆ ! ಅಜ್ಞಾತಹೃದಯರಾದ ಪರಪುರುಷರ ಕೂಡ ಮಾತಾಡಲಿಚ್ಛಿಸುವದು ಪಾತಿವ್ರತ್ಯದ ಉನ್ನತವಾದ ಶಿಖರದಿಂದಿಳಿಯುವ ಸೋಪಾನವು. ಈ ಪ್ರಕೃತಕ್ಕೆ ಇಂದೊಂದೇ ಸಾಮ್ಯ ಸಾಕು. ಮೂರನೇದು ನಾವು ಪತಿಸೇವೆ ಮಾಡಬಾರದೆಂಬುದು. ನಮ್ಮ ಪತಿಗಳು ಕಾಯಾ ವಾಚಾ ಸುಖಸಾಧನಗಳನ್ನು ದೊರಕಿಸುವದು ನಮ್ಮ ಸಲುವಾಗಿಯೇ ಅಲ್ಲವೇ ? ಸಾವಿರಾರು ರೂಪಾಯಿಗಳ ಆಭರಣಗಳು ನಮ್ಮ ಮೈಮೇಲಾದರೆ ಅವರ ಮೈಮೇಲೆ ಗುಂಜಿತೂಕಾದರೂ ಬಂಗಾರವಿರುವದಿಲ್ಲ. ನಮ್ಮನ್ನು ಪ್ರಾಣಪದಕವೆಂದು ತಿಳಿದು ಅತ್ಯಂತವಾಗಿ ಪ್ರೀತಿಸುವ ಪತಿರಾಜರ ಸೇವೆ ಮಾಡಿ ಯಾಕೆ, ಅವರ ಮೇಲೆ ನಮ್ಮ ಜೀವಗಳನ್ನು ಕೂಡ ನಿವಾಳಿಸಿ ಚೆಲ್ಲಿದರೂ ಉಪಕಾರ ತೀರಬಹುದೇ ? ನಾವಾದರೂ ಅವರ ಸೇವೆ ಮಾಡುವದೇನು ? ಆದರ ಧೋತ್ರಗಳಿಗೆ ನಿರಿಗೇ ಹಾಕಿಟ್ಟು ಭೋಜನವಾದ ಕೂಡಲೆ ತಾಂಬೂಲ ಸಿದ್ಧಮಾಡಿಟ್ಟರೆ ನಮ್ಮ ಸೇವೆ ತೀರಿತಲ್ಲವೆ ? ಸದ್ಗುಣೆಯೂ ಸುಶೀಲೆಯೂ ಆದ ಹೆಂಡತಿಯನ್ನು ಅಂಗೈಯಲ್ಲಿಟ್ಟಾಡಿಸುವ ಪ್ರಾಣವಲ್ಲಭನು ಅವಳನ್ನು ಬಡಿಯುತ್ತಾನೆಂಬ ಮಾತು ಎಷ್ಟರಮಟ್ಟಿಗೂ ವಿಶ್ವಸನೀಯವಾದದ್ದಲ್ಲ. ಚಂಡಿಯನ್ನೂ ಗುಣಹೀನೆಯನ್ನೂ ಒಳಿತಾಗಿ ತಳಿಸದೇ ಮತ್ತೇನು ಮಾಡಬೇಕು ?"

"ವಹವ್ವಾ ! ಇಂದಿರಕ್ಕಾ, ನೀವೇ ಧನ್ಯರು. ಇಂಥ ಗುಣಮಣಿಯನ್ನು ಯಾವ ಪುಣ್ಯಶಾಲಿಯು ತನ್ನ ಕಂಠಾಭರಣ ಮಾಡಿಕೊಳ್ಳುವನೋ, ಅವನೇ ನಿಜವಾದ ಭಾಗ್ಯವಂತನು. ಏಕೆ ಪಂಡಿತಾಬಾಯವರೇ, ನಮ್ಮಂಥವರ ಮೇಲೇ ನೀವು ಕುಸ್ತಿಮಾಡುವದು ; ಹೇಗೆ ಬಾಯ್ ತಡೆ ಹಾಕಿದಂತಾಯಿತು ನಿಮಗೆ ! ವಜ್ರವನ್ನು

ವಜ್ರವೇ ಕೊಯ್ಯುವದೆಂಬಂತೆ ಸ್ತ್ರೀಯರಿಗೆ ಸ್ತ್ರೀಯರೇ ವರ್ಮ, ವಸ್ತುಸ್ಥಿತಿ ಹೀಗಿರುವದು ನಾನು ಸುಳ್ಳು ಹೇಳುವದಿಲ್ಲ" ಎಂದು ಡಾಕ್ಟರನಂದನು.

"ಇಂದಿರಾ, ನಿನ್ನ ವಾದವಿವಾದ ಸಾಕುಮಾಡಮ್ಮಾ; ಇಲ್ಲಿ ನಾವು ವ್ಯಾಖ್ಯಾನಗಳನ್ನು ಕೇಳಲಿಕ್ಕೆ ಬಂದಿಲ್ಲ" ಎಂದು ಜಯರಾಯನು ತನ್ನ ಮಗಳ ಜಾಣ್ಮೆಗೆ ಮೆಚ್ಚಿ ಪ್ರೇಮದಿಂದ ನಗುತ್ತ ಹೇಳಿದನು.

"ಇತ್ತಲಾಗಿ ನೀವು ಹೊಸ ಗ್ರಂಥಗಳನ್ನೇನಾದರೂ ಓದಿರುವಿರೇನು?" ಎಂದು ಬಾಪ್ಪಳಪಂತನು ಇಂದಿರೆಯನ್ನು ಕೇಳಿದನು.

"ವಿಶೇಷವೇನೂ ಇಲ್ಲ. ಪ್ರೊಫೆಸರ ಗೋಳೆ ಇವರು ಮಹಾರಾಷ್ಟ್ರಭಾಷೆಯಲ್ಲಿ ಬರೆದ 'ಹಿಂದೂಧರ್ಮ ಆಣಿ ಸುಧಾರಣಾ' ಎಂಬ ಅತ್ಯಂತ ಬೋಧಪರವಾದ ಗ್ರಂಥವನ್ನೋದಿದ್ದೇನೆ. ಅದನ್ನೆಲ್ಲರೂ ಅವಶ್ಯಕವಾಗಿ ಪರಿಶೀಲನಮಾಡತಕ್ಕದ್ದೆಂದು ನಾನು ತಿಳಿಯುತ್ತೇನೆ."

"ಮಹಾರಾಷ್ಟ್ರ ಗ್ರಂಥಸಂಗ್ರಹವು ದೊಡ್ಡದಿದ್ದು ಆ ಭಾಷೆಯಾದರೂ ಬಹು ಸೌಕರ್ಯವುಳ್ಳದ್ದೂ ಸುರಸವಾದದ್ದೂ ಇರುವದು. ಕನ್ನಡವು ಕಾಡುಜನರ ಭಾಷೆಯೇ ಸರಿ. ವಸ್ತುಸ್ಥಿತಿ ಹೀಗಿರುವದು ನಾನು ಸುಳ್ಳು ಹೇಳುವದಿಲ್ಲ." ಎಂದು ಡಾಕ್ಟರನು ನುಡಿದು ಹೆಮ್ಮೆಯಿಂದ ಎಲ್ಲರ ಕಡೆಗೂ ನೋಡಿದನು.

ದೇವಯಾನಿಯು ಸ್ವಸ್ಥಳಾಗಿ ಮೃದ್ವಾಸನದಲ್ಲಿ ಆತುಕೊಂಡು ಕುಳಿತವಳು ಎದ್ದು ಕುಳಿತು, "ಏನಂದಿರಿ ಡಾಕ್ಟರರೇ? ಕನ್ನಡಭಾಷೆಯಲ್ಲಿ ಬರೆದ ಕಾವ್ಯಗಳ ಮಾಧುರ್ಯವು ಮಹಾರಾಷ್ಟ್ರಭಾಷೆಯಲ್ಲಿ ಹುಡುಕಿದರೂ ಸಿಕ್ಕಲರಿಯದು. ಲಕ್ಷ್ಮೀಶ, ಷಡಕ್ಷರಿ, ಅಭಿನವಪಂಪ ಮುಂತಾದ ಕವಿಗಳ ಗ್ರಂಥಗಳನ್ನೋದಿದರೆ ರಸಜ್ಞರಿಗೆ ಉದ್ರೇಕಬಾರದಿರದು."

"ಆದರೆ ಹಳಗನ್ನಡವನ್ನು ಹೊಸಗನ್ನಡವಲ್ಲಿ ಕಲಿಸಿ, ಕರ್ಣಕಟುಗಳಾದ ಸಂಧಿಗಳನ್ನು ಜಾಣತನವೆಂದು ತಿಳಿದು ಮಾಡಿ, ಅರ್ಥ ತಿಳಿಯುವದೊತ್ತಟ್ಟಿಗಿರಲಿ, ಓದಲಿಕ್ಕೂ ಬಾರದಂಥ ಹೊತ್ತಿಗೆಗಳನ್ನು ಬರೆದವರೇ ಈಗ ಪಂಡಿತರೆಂದೆನಿಸುವರು. ಹಳಗನ್ನಡವು ಅಪ್ರಯುಕ್ತವಾದದ್ದೆಂದು ಹಿಂದಕ್ಕುಳಿಯಿತು. ಅದನ್ನು ಮತ್ತೆ ತೆಗೆಯುವದರಲ್ಲಿ ಅರ್ಥವಿಲ್ಲ. ವೇದದ ಭಾಷೆಯಂಥ ಸಂಸ್ಕೃತದಲ್ಲಿ ಕಾಲಿದಾಸಾದಿಗಳಿಗೆ ಗ್ರಂಥ ಬರೆಯಲಿಕ್ಕೆ ಬರುತ್ತಿದ್ದಿಲ್ಲವೇನು? ಚಾಸರನಂಥ, ಇಂಗ್ರಜಿಯಲ್ಲಿ, ಅಡ್ಡಿಸನ್‌ಸ್ಕಾಟ್ ಪ್ರಭೃತಿಗಳಿಗೆ ಬರೆಯುವದು ಅಗಾಧವಾಗಿದ್ದಿಲ್ಲ. ಮಾತ್ರ ಅವರು ಬರೆದಿದ್ದರೆ ನಿಜವಾಗಿ ಮೂರ್ಖರೆಂದೆನ್ನಿಸಿಕೊಳ್ಳುತ್ತಿದ್ದರು. ಮಹಾ

ಭಾರತದ ಕಾಲದಲ್ಲಿ ಧನುರ್ಬಾಣಗಳಿಂದ ಯುದ್ಧಮಾಡುತ್ತಿದ್ದರು, ಆಗಿನ ವೀರರ ಧನುರ್ವಿದ್ಯಾಕೌಶಲವನ್ನು ವ್ಯಾಸರು ಬಹು ರಮಣೀಯವಾಗಿ ವರ್ಣಿಸಿರುವರೆಂದು ನಾವು ಬಿಲ್ಲುಬಾಣಗಳನ್ನು ಹಿಡುಕೊಂಡು ಹಲ ಹಲಲಲಲವೆಂದುತ್ತ ತಲೆಭಾರಾದ ಕಿರೀಟ ಹಾಕಿಕೊಂಡು ನಿಂತರೆ ಎಷ್ಟು ಉಪಹಾಸಕ್ಕೆ ಪಾತ್ರರಾಗುವೆವು! ಈ ಹಳಗನ್ನಡಪ್ರಿಯರೇ ಪ್ರಚಲಿತವಾದ ಕನ್ನಡದಪ್ರಸಾರಕ್ಕೆ ಕಾಲ್ತೊಡಕಾಗಿರುವರು. ಹೊಸಗನ್ನಡಕ್ಕೆ ಹೊಸ ಮಾದರಿಯ ಚಾಲನಿಯನ್ನು ಕೊಟ್ಟು ರಸಾಲಂಕಾರಗಳನ್ನು ವ್ಯಕ್ತಪಡಿಸುವಂತೆ ಸದ್ವಸ್ತುವರ್ಣನೆಯುಳ್ಳ ಗ್ರಂಥಗಳನ್ನು ಪಂಡಿತರು ಬರೆಯಹತ್ತಿದರೆ ಮಹಾರಾಷ್ಟ್ರಭಾಷೆಯು ಎಷ್ಟು ಹಿಂದುಳಿದಿರುವದೆಂಬದನ್ನು ನಾವು ಹಿಂತಿರುಗಿ ನೋಡಬಹುದು. ಭಾಷಾಸೌಕರ್ಯಕ್ಕಾಗಿಯೇ ಮಹಾರಾಷ್ಟ್ರೀಯರು ಶಬ್ದಸಂಧಿಗಳ ಗೋಜಿಗೆ ಹೋಗಲಿಲ್ಲ. ಅರ್ಥಗಾಂಭೀರ್ಯದ ಕಡೆಗೇ ಅವರ ದೃಷ್ಟಿಯಿದ್ದದರಿಂದ ಮಹಾರಾಷ್ಟ್ರ ಭಾಷೆಯು ಈಗಿದ್ದ ಸ್ಥಿತಿಗೆ ಬಂದಿತು."

ಪಂಡಿತೆಯು ಮಹಾರಾಷ್ಟ್ರಭಾಷಾಭಿಮಾನಿಯಾಗಿದ್ದದ್ದರಿಂದ "ಏನೇ ಆಗಲಿ ಸದ್ಯಕ್ಕೆ ಕನ್ನಡದಕಿಂತಲೂ ಮಹಾರಾಷ್ಟ್ರಭಾಷೆಯು ಉನ್ನತವಾಗಿರುವದೋ ಇಲ್ಲವೋ ?" ಎಂದಳು.

"ಸಾಕು ಮಾಡಿರಿ, ಇದೇನು ಕರ್ನಾಟಕ ವಿದ್ಯಾವರ್ಧಕ ಸಂಘವಲ್ಲ. ಆದಷ್ಟು ಚರ್ಚೆಯು ಬಹಳಾಯಿತು" ಎಂದುಬಾಷ್ಕಳಪಂತನೆಂದನು.

"ರಮಾಕಾಂತರಾಯರೇ, ನೀವು ಪುಣೆಯಲ್ಲಿದ್ದಿರಲ್ಲ! ಅಲ್ಲಿ ನಮ್ಮ ಉಪಾಸನಾ ಸಮಾಜದ ಕೆಲಸವು ಬಹು ಚನ್ನಾಗಿ ನಡೆದಿರುವದಲ್ಲವೇ ? ಆ ಸಮಾಜಕ್ಕೆ ನಿಮ್ಮ ಸಹಾನುಭೂತಿಯುಂಟೇನು ? ಆ ಸಮಾಜವು ಎಂಥ ವಿಶುದ್ಧವಾದ ಪಂಥವನ್ನು ತೆಗೆದಿರುವದು, ನೋಡಿರಿ!" ಎಂದು ಪಂಡಿತೆಯು ಉಪಕ್ರಮಿಸಿದಳು.

"ಆ ಪಂಥದವರನ್ನು ಕಂಡು ನನಗೆ ನಿಜವಾಗಿ ಕನಿಕರ ಬರುತ್ತದೆ." ಎಂದು ರಮಾಕಾಂತನೆಂದನು.

ಇದನ್ನು ಕೇಳಿ ಪಂಡಿತಾ ರಾಧಾಬಾಯಿಯು ಎದೆಗುಂದಿದವಳಾಗಿ "ಅದೇಕೆ ?" ಎಂದು ಕೇಳಿದಳು.

"ಆ ಮತವು ನನಗೆ ಕಿಂಚಿತ್ತಾದರೂ ಸಮ್ಮತವಿಲ್ಲ. ನಾನೊಂದು ದಿವಸ ನಿಮ್ಮ ಆ ಸಮಾಜದ ಮಂದಿರಕ್ಕೆ ಹೋಗಿದ್ದೆನು. ನಾನು ಪಾದ್ರಿಗಳ ಚರ್ಚದಲ್ಲಿಯೇ

ಹೋಗಿದ್ದೆನೆಂದು ಭಾಸವಾಯಿತು. ದಂಭದಿಂದ ಕಣ್ಣು ಮುಚ್ಚುವದೇನು. ಮೊಣಕಾಲೂರಿ ಮೇಲಕ್ಕೆ ಕಯ್ಯೆತ್ತಿ ಓ, ಕರ್ತನೆ ! ಓ ಪ್ರಭುವೇ ಎಂದು ಪರಧರ್ಮೀಯರ ಪ್ರಾರ್ಥನೆಯ ಅನುಕರಣ ಮಾಡುವದೇನು ! ಇದನ್ನು ಕಂಡು ಸನಾತನಧರ್ಮ ಪ್ರವರ್ತಕರ ಸಂತತಿಯ ಅವಸ್ಥೆ ಹೀಗಾಯಿತೇ ಎಂದು ನನಗತಿಶಯವಾದ ವಿಷಾದವಾಯಿತು."

"ನಿಮ್ಮಂಥವರಿದ್ದರೆ ದೇಶವು ಚನ್ನಾಗಿ ಸುಧಾರಿಸುವದು ! ಇದಕ್ಕಾಗಿಯೇ ನಿಮ್ಮವಸ್ಥೆ ಹೀಗಾಗಿರುವದು" ಎಂದು ಪಂಡಿತೆಯು ಸಿಟ್ಟಾಗಿ ನುಡಿದಳು.

"ಪಂಡಿತಾಬಾಯವರೇ, ಸುಧಾರಣೆಯೆಂದರೆ ಇದ್ದದ್ದನ್ನು ಸುಧಾರಿಸಿ ಚನ್ನಾಗಿ ಕಾಣುವಂತೆ ಮಾಡುವದಲ್ಲವೇ ? ಇದ್ದದ್ದು ನಿರ್ಮೂಲಮಾಡಿ ಅದರ ಸ್ಥಳದಲ್ಲಿ ವಿಜಾತೀಯದೊಂದು ತಂದಿಟ್ಟರೆ ಅದಕ್ಕೆ ಸುಧಾರಣೆಯೆನ್ನಕೂಡದು."

"ರಮಾಕಾಂತರಾವ್, ವಾಗ್ಯುದ್ಧದಲ್ಲಿ ನೀವು ಸೇನಾಪತಿಗಳೇ ಆಗಿರುವಿರಿ ! ಟೋಗೋ ಬಹದ್ದನು ಬಾಲ್ಟಿಕ್ ಹಡಗಪಡೆಯನ್ನು ಎಲೆಗೆ ಸುಣ್ಣ ಹಚ್ಚುವದರೊಳಗೇ ಇತ್ತೋ ಇಲ್ಲವೋ ಎಂಬಂತೆ ಮಾಡಿದ ಹಾಗೆ ನೀವು ನಮ್ಮ ಪಂಡಿತಾಬಾಯವರ ವಾಕ್ ತೃಣರಾಶಿಯನ್ನು ಒಂದೇ ಕಿಡಿಯಿಂದ ಸುಟ್ಟುಹಾಕಿದಿರಿ ! ಹೇಗೆ, ಪಂಡಿತಾಶಿರೋಮಣಿಗಳೇ ! ನೀವಿನ್ನು ಒಪ್ಪಂದ ಬೇಡಿಕೊಳ್ಳತಕ್ಕದ್ದು" ಎಂದು ಡಾಕ್ತರನು ಎದ್ದುನಿಂತು ತನ್ನ ಹೆಗಲ ಮೇಲೆ ಬಡಿಗೆಯನ್ನಿಟ್ಟುಕೊಂಡು ಒಳ್ಳೇ ಹಾವಭಾವದೊಡನೆ ಅಡ್ಡಾಡಹತ್ತಿದನು.

"ಉಂಡಾಡಿಗೆ ಬಟ್ಟೆಯಂತೆ ಮಾಡಿದರೇನಾಯಿತು ! ನಿನ್ನಂಥವರ ವ್ಯರ್ಥಾವಲ್ಗನಕ್ಕೆ ನಾನಂಜುವೇನೇನು ; ಮಹತ್ವವಾದ ವಿಷಯಗಳಲ್ಲಿ ನಿನಗೇನು ಜ್ಞಾನವಿದೆ !" ಎಂದು ರಾಧಾಬಾಯಿಯು ಸಿಟ್ಟಿನಿಂದ ಕಣ್ಣು ಕೆಂಪಗೆ ಮಾಡಿ ಬಾಷ್ಪಗಳ ಪಂತನಿಗಂದಳು.

ಇಷ್ಟರಲ್ಲಿ ಜಯರಾಯನು ತನ್ನ ಗಡಿಯಾರ ತೆಗೆದು ಓಹೋ, ಹೊತ್ತಾಯಿತು. ರಮಾಕಾಂತರಾಯರೇ, ಈ ರಾತ್ರೆ ನಮ್ಮಲ್ಲಿಗೆ ಭೋಜನಕ್ಕೆ ಬರಬೇಕು. ದೇವಯಾನಿಯವರ ಕಡೆಗೆ ನೋಡಬೇಡಿರಿ. ಅವರಪ್ಪಣೆ ತಕ್ಕೊಂಡಿದ್ದೇನೆ," ಎಂದು ನಸುನಗುತ್ತ ಹೇಳಿದನು.

"ರಮಾಕಾಂತನು, ತೊಂದರೆಯಲ್ಲಿ ಬಿದ್ದನು. ಅಷ್ಟರಲ್ಲಿಯೇ ಇಂದಿರೆಯು ಅವನ ಸಮೀಪಕ್ಕೆ ಹೋಗಿ,

"ನಾಳೇ ಹೋಗುವದು ನಿಶ್ಚಯವಾಗಿರುವದೇನು ?" ಎಂದು ಮೋಹಕ

ವಾದ ನುಡಿಯಿಂದ ಕೇಳಿದಳು.

"ಅಹುದು, ನಾಳೆಗೆ ಹೋಗುವದು ಗೊತ್ತುಮಾಡಿದ್ದೇನೆ."

"ಅಂದ ಮೇಲೆ ನೀವು ನಮ್ಮ ಆಮಂತ್ರಣವನ್ನು ಸ್ವೀಕರಿಸಲಿಕ್ಕೇ ಬೇಕು."

"ನಿಮ್ಮಂಥವರು ಕರೆಯುವದು ಹೆಚ್ಚೋ, ನಾನು ಬರುವದು ಹೆಚ್ಚೋ, ನಿಮ್ಮಂತೆಯೇ ಆಗಲಿ." ಎಂದು ರಮಾಕಾಂತನು ಉಲ್ಲಾಸದಿಂದ ಒಪ್ಪಿಕೊಂಡನು.

ಎಲ್ಲರೂ ಎದ್ದು ದೇವಯಾನಿಯು ಅಪ್ಪಣೆತಕ್ಕೊಂಡು ಹೋಗಲಾರಂಭಿಸಿದರು. ದೇವಯಾನಿಯು ರಮಾಕಾಂತನ ಕೈ ಹಿಡಿದುಕೊಂಡು ಎದ್ದು ನಿಂತು ಎಲ್ಲರೂ ಹೋದ ಬಳಿಕ ಮತ್ತೆ ತನ್ನ ಸ್ಥಳದಲ್ಲಿ ಕುಳಿತುಕೊಂಡಳು.

ಈ ಜನರು ಬೀದಿಯ ಹತ್ತರ ಬಂದಕೂಡಲೆ ಅಲ್ಲಿಯೇ ಸುತ್ತಾಡುತ್ತಿದ್ದ ನಟೇಶನನ್ನು ಕಂಡರು.

"ಓ! ಈ ಗೃಹಸ್ಥರ ಪರಿಚಯ ನನಗುಂಟು. ಬೆಂಗಳೂರಿನಲ್ಲಿಯ ಉಪಾಸನಾ ಸಮಾಜದಲ್ಲಿ ಇವರು ಯಾವಾಗಾದರೂ ಬರುವುದುಂಟು. ಇವರ ಹೆಸರು ....ತುದಿ ನಾಲಿಗೆಯ ಮೇಲಿದೆ. ನೆನಪಾಗಲೊಲ್ಲದು" ಎಂದು ಪಂಡಿತಾ ರಾಧಾಬಾಯಿಯೆಂದಳು.

"ನಟೇಶನು ಸಿಪಾಯಿರಂತೆ ಸಲಾಮು ಮಾಡಿ "ನನ್ನ ಹೆಸರು ಮದ್ದೂರ ನಟೇಶನಲ್ಲವೇ ?" ಎಂದನು.

"ಅಹುದಹುದು ನಟೇಶ್, ನಟೇಶ್ ! ನನ್ನ ಬಾಯಿಗೆ ಬರುವದರಲ್ಲಿಯೇ ನೀವು ಹೇಳಿಬಿಟ್ಟಿರಿ." ಅಷ್ಟರಲ್ಲಿ ರಮಾಕಾಂತನೂ ಇವರನ್ನು ಬಂದು ಕೂಡಿದನು. ಅವನನ್ನು ನೋಡಿ ಪಂಡಿತೆಯು ರಮಾಕಾಂತರಾವ, ಈ ನಟೇಶರು ನಮ್ಮ ಉಪಾಸನಾಸಮಾಜದ ಅಭಿಮಾನಿಗಳು,"

"ನಟೇಶಾ, ನೀನು ಉಪಾಸನಾ ಸಮಾಜಸ್ಥನಾದದ್ದು ನನಗೆ ತಿಳಿಸೇ ಇಲ್ಲ ?" ಎಂದು ಇಂದಿರೆಯು ಕೇಳಿದಳು.

"ಓಹೋ ! ಈ ಸದ್‌ಗೃಹಸ್ಥರು ಭಟ್ಟಶಾಮಣ್ಣನ ಸಂಸ್ಥೆಗೆ ಸಂಬಂಧಿಸಿದವರಲ್ಲವೇ ? ಸ್ಟೇಶನ್ನದಲ್ಲಿ ಕಾಫಿ ದರ ಹೇಗಿರುವದು ! ಶಾಮಣ್ಣನ ಕಾಫಿ ಬಹು ಸೊಗಸಾಗಿರುತ್ತದೆ. ವಸ್ತುಸ್ಥಿತಿ ಹಾಗಿರದು ನಾನು ಸುಳ್ಳು ಹೇಳುವದಿಲ್ಲ" ಎಂದು ಬಾಷ್ಕಳಪಂತನು ನಟೇಶನ ಅಪ್ರತಿಷ್ಠೆ ಮಾಡುವದಕ್ಕೂ ಅವನೊಡನೆ ಉಪಾಸನಾಸಮಾಜದ ಯೋಗ್ಯತೆ ತೋರಿಸುವದಕ್ಕೂ ಮಾತಾಡಿದನು.

"ಶಾಮಣ್ಣನ ಸಂಬಂಧಿಕನಾದರೆ ಕಳುವು ಮಾಡಿದಂತಾಯಿತೇನು ?" ಎಂದು ನಟೇಶನು ತಿರಸ್ಕಾರದಿಂದ ನುಡಿದನು.

"ಉಂಟೇ, ಭಟ್ಟರೆ! ತಾವು ಕೋಪಿಸಿಕೊಂಡಿರೇನು!" ಎಂದು ಡಾಕ್ಟರನು ಖೊಳ್ಳನೆ ನಕ್ಕನು.

"ಡಾಕ್ಟರ, ನಟೇಶನು ಭಟ್ಟನಾಗಿರುವದಿಲ್ಲ. ಅವನು ಪೋಲೀಸ ಹವಾಲದಾರನಿರುತ್ತಾನೆ" ಎಂದು ಇಂದಿರೆಯು ಹೇಳಿದಳು.

"ಭಲೇ ನಟೇಶರಾವ, ನಿಮಗೆ ಪಾಂಥಸ್ತರ ಆದರಾತಿಥ್ಯದಕಿಂತಲೂ ನಗರ ಸಂರಕ್ಷಣೆಯು ಕೆಲಸ ಹೆಚ್ಚು ಸೇರುತ್ತದಾಗಿ ಕಾಣುತ್ತದೆ."

ಇದನ್ನು ಕೇಳಿ ನಟೇಶನು ಕೋಪಿಸಿಕೊಂಡು ತನ್ನ ಮಾರ್ಗ ಹಿಡಿದು ಹೋದನು. ಈ ಜನರು ಜಯರಾಯನ ಮನೆಗೆ ಹೋದರು.

ಭೋಜನೋತ್ತರ ಜಯರಾಯನು ರಮಾಕಾಂತನನ್ನು ತನ್ನ ವಾಚನಾಲಯದಲ್ಲಿ ಕರೆದೊಯ್ದು ಅವನ ಕೂಡ ಮಾತಾನಾಡುತ್ತ ಕುಳಿತನು,

"ರಮಾಕಾಂತರಾವ, ನೀವು ನನ್ನ ಬಾಲ್ಯದ ಸ್ನೇಹಿತನ ಮಕ್ಕಳು. ನನ್ನನ್ನು ನೀವು ಪರಕೀಯನೆಂದು ಭಾವಿಸಬೇಡಿರಿ. ತಾಂಬೂಲ ತಕ್ಕೊಳ್ಳಿ" ಎಂದು ಜಯರಾಯನು ಹೇಳಿ ತಬಕವನ್ನು ಮುಂದೆ ಸರಿಸಿದನು.

"ದೇವಯಾನಿಯಮ್ಮನವರೂ ನೀವೂ ನನ್ನ ತಂದೆಗಳೂ ಸ್ನೇಹಿತರಾಗಿದ್ದಿರೆಂದು ಆ ಸಾಧ್ವಿಯು ನನ್ನ ಮುಂದೆ ಹೇಳಿರುವಳು."

"ಕಮಲಾಕಾಂತರು ಅದ್ವಿತೀಯರಾವ ಬುದ್ಧಿವಾನರು, ಅವರಿಗೆ ಹಣಗಳಿಸುವ ಅಪೇಕ್ಷೆಯಿದ್ದಿಲ್ಲ. ಇದ್ದರೆ ನಮ್ಮಂಥವರಕಿಂತಲೂ ಎಷ್ಟೋ ಪಾಲಿಗೆ ಶ್ರೀಮಂತರಾಗಬಹುದಾಗಿತ್ತು."

"ನಿಷ್ಕಾಮರಿದ್ದ ಮೇಲೆ ಅದರ ಹವ್ಯಾಸಕ್ಕೇಕೆ ಹೋಗುವರು ?" ಎಂದು ರಮಾಕಾಂತನಂದನು.

"ಇದು ಒಳ್ಳೇ ವಿವೇಕವಾದ ಪ್ರಶ್ನೆಯು. ಆದರೂ ಜಗತ್ತಿನಲ್ಲಿ ದುಡ್ಡಿನ ಹೊರತು ಯಾವದೂ ಆಟ ಸಾಗುವಂತಿಲ್ಲವಲ್ಲ ? ವಿದ್ಯೆ ಕಲಿಯುವದು ಹಣ ದೊರಕಿಸುವದಕ್ಕಾಗಿಯೇ. ಹಣದೊರಿಯದ ವಿದ್ಯೆ ತಕ್ಕೊಂಡು ತಲೆಗೆ ಗಟ್ಟಿಸಿಕೊಂಡರೆ ಸೈ." ಎಂದು ಜಯರಾಯನಂದನು.

"ಸುಖ ಹೊಂದುವದಕ್ಕಾಗಿಯೇ ನಾವೆಲ್ಲರು ಹಣಗಳಿಸಬೇಕೆನ್ನುವೆವು. ಕೇವಲ ವಿದ್ಯೆಯಲ್ಲಿಯೇ ಸುಖದ ಪ್ರಾಪ್ತಿಯಾದರೆ ಹಣವನ್ನು ಕಟ್ಟಿಕೊಂಡು

ಮಾಡುವದೇನು ? ಗ್ರೀಕರು ಪಾರ್ಶಿಕರನ್ನು ಗೆದ್ದಾಗ್ಯೆ, ಒಪ್ಪಂದದ ಕಾಲದಲ್ಲಿ ಪಾರ್ಶಿಕರ ವಕೀಲನು ಗ್ರೀಕ ಸೇನಾಪತಿಯ ಬಳಿಗೆ ಬರಲು ಈ ಗ್ರೀಕರ ಬಡತನ ಕಂಡು ನಕ್ಕನು. ಆಗ್ಯೆ ಗ್ರೀಕ ಸೇನಾಪತಿಯು ಹೇಳಿದ್ದು : ಸಂಪತ್ತು ಇಟ್ಟುಕೊಳ್ಳು ವದಕ್ಕಿಂತ ಸಂಪತ್ತುಳ್ಳವರ ಮಿಂಡನಾಗಿರುವದು ಲೇಸು, ಕಾರಣ ಬುದ್ಧಿಶಾಲಿಗಳಿಗೆ ಸಂಪತ್ತಿನ ಬೆಲೆಯಿಲ್ಲ."

"ಶಾಬಾಸ್. ನೀವು ಹೇಳಿದಂತೆ ಶೂರರೂ, ವಿದ್ವಾಂಸರೂ, ಮಾನಧನರೇ, ಆದರೆ ನಮ್ಮ ಶೌರ್ಯವು ಹಾಳಾಗಿಹೋಯಿತು. ವಿದ್ವಾಂಸರು ಲಾಂಗೂಲಚಾಲನ ವೃತ್ತಿಯನ್ನೆತ್ತಿಕೊಂಡಿರುವರು. ಈಗ ಉಂಡು ತಿಂದು ಸುಖದಿಂದಿರುವದೇ ನಮ್ಮ ಕೆಲಸ. ನಾಲ್ಕು ಜನ ದೊಡ್ಡವರ ಪ್ರೇಮ ಸಂಪಾದಿಸಿ, ತಾನೂ ಅವರೊಡನೆ ದೊಡ್ಡವನೆನಿಸಿಕೊಂಡರೆ ನಮ್ಮ ಜನ್ಮ ಸಾರ್ಥಕವಾಯಿತು."

"ನಮ್ಮ ದೇಶದ ದುರ್ದೈವವೇ ಬಂದೊದಗಿದೆ ! ನೀವೇನು ಮಾಡುವಿರಿ ? ನಾವು ಪರಕೀಯರ ಪಾದಾಕ್ರಾಂತರಾಗಿರುವೆವು. ನಮ್ಮಲ್ಲಿ ಶೌರ್ಯವಿರುವದು ರಾಜ್ಯಕರ್ತರಿಗಿಷ್ಟವಿಲ್ಲ. ಇದ್ದ ಶೌರ್ಯವಾದರೂ ಖತೆನಟ್ಟ ಶಸ್ತ್ರಗಳಂತೆ ಅನುಪ ಯುಕ್ತವಾಗಿ ಮುಂದೆ ಸರ್ವಸ್ವೀ ನಷ್ಟವಾಗುವದು, ಶರೀರದ ಯಾವದಾದರೊಂದು ಭಾಗದ ಉಪಯೋಗವು ಬಹುಕಾಲವಾಗದೇ ಬಂದಿತಂದರೆ ಆ ಅವಯುವವು ನಷ್ಟವಾಗುವದೆಂದು ಡಾರ್ವಿನನ ಸಿದ್ಧಾಂತವಿದೆ. ಅದೇ ಪ್ರಕಾರ ನಮ್ಮಲ್ಲಿ ಎರಡು ಮೂರು ತಲೆ ಶೌರ್ಯದ ಉಪಯೋಗವಾಗದಿದ್ದರಿಂದ ನಾವು ಹೆಂಗಸರಿಗೂ ಕಡೆಯಾಗಿರುವೆವು. ನಮ್ಮಲ್ಲಿಯ ವಿದ್ವಾಂಸರಾದರೂ ಪರಪಿಂಡಲೋಲುಪರಾಗಿ ಕೇವಲ ಆತ್ಮಸುಖಕ್ಕಾಗಿ 'ಅಹುದು ದೇವರೂ' 'ಇಲ್ಲ ಬುದ್ಧೀ' ಎಂದು ನಮ್ಮ ಹಿತಶತ್ರುಗಳ ಮುಂದೆ ಕೈಕಟ್ಟಿಕೊಂಡು ಅವರು ಬಿಸಾಡಿದ್ದನ್ನು ಸಂಗಡಲೇ ಬಾಯಲ್ಲಿ ಹಿಡಿದುಕೊಂಡು ದೇಶಹಿತನಾಶಕರೂ ಆತ್ಮಘಾತಿಗಳೂ ಆಗಿರುವರು" ಎಂದು ರಮಾಕಾಂತನಂದು ಜಯರಾಯನ ಮೋರೆ ಕಡೆಗೆ ಚಿಂತಾಕ್ರಾಂತನಾಗಿ ನೋಡಿದನು.

"ರಮಾಕಾಂತರೇ, ನೀವಿನ್ನೂ ಚಿಕ್ಕವರು ; ಜಗತ್ತಿನ ಅನುಭವ ನಿಮಗೆ ಕಡಿಮೆ. ನಾನು ನಿಮ್ಮ ವಿಚಾರದವನೂ ಅಲ್ಲಿ. ನನ್ನ ಮುಂದೆ ಇದೆಲ್ಲಾ ಹೇಳಿ ಫಲವೇನು ?"

ಇಷ್ಟರಲ್ಲಿ ಇಂದಿರೆಯು ಸ್ವಚ್ಛವಾದ ಬೆಳ್ಳಿತಂಬಿಗೆಯಲ್ಲಿ ಪಚ್ಚಕಪ್ಪುರದ ನೀರು ತಂದಿಟ್ಟು ತನ್ನ ತಂದೆಗೂ ರಮಾಕಾಂತನಿಗೂ ಗೋವಿಂದಪೀಳ್ಯಗಳನ್ನು

ಕೊಟ್ಟು ಮತ್ತೇನಾದರೂ ಬೇಕಾಗಿರುವದೇನು ? ಎಂದು ಕೇಳಿದಳು.

" ಏನೂ ಬೇಡಮ್ಮಾ, ಬೇಕಾದರೆ ಹೇಳಿ ಕಳುಹಿಸುವೆನು " ಎಂದು ಜಯ ರಾಯನಂದನು.

ಇಂದಿರೆಯು ರಮಾಕಾಂತನ ಕಡೆ ಮುಖ ತಿರುವಿ " ನಾಳಿಗೇ ಹೋಗುವದು ನಿಶ್ಚಯವೇನು ? " ಎಂದು ಮಂದಹಾಸದಿಂದ ಕೇಳಿದಳು.

" ನಿಶ್ಚಯವೇ, ಹೋಗದಿರುವದಕ್ಕಾದರೂ ನಿಮಿತ್ತ ಬೇಕಲ್ಲ !" ಎಂದು ರಮಾಕಾಂತನು ಇಂದಿರೆಯ ಮೇಲಿಟ್ಟ ತನ್ನ ದೃಷ್ಟಿಯನ್ನು ತೆಗೆಯಲರಿಯದೆ ಕುಳಿತಿದ್ದನು.

" ಹೋಗುವದರೊಳಗಾಗಿ ಮತ್ತೆ ದರ್ಶನಲಾಭ ಕೊಡುವಿರೆಂದು ಆಶಿಸು ತ್ತೇನೆ." ಎಂದು ಹೇಳಿ ಇಂದಿರೆಯು ಹೊರಟುಹೋದಳು.

ಈ ಮೋಹನಾಂಗಿಯ ಮುಖವನ್ನು ನೋಡಿ ರಮಾಕಾಂತನ ದೇಶಾಭಿ ಮಾನದ ಆವೇಶವೆಲ್ಲಾ ಹೊರಟುಹೋಯಿತು.

" ನಮ್ಮ ಇಂದಿರಕ್ಕನೂ ನೀವೂ ಸ್ನೇಹಿತರಾಗುವಿರೆಂದು ಅವಳು ನನಗೆ ಹೇಳಿರುವಳು. ಅವಳ ನಡಾವಳಿ ನಿಮಗೆ ಸರಿಬರುತ್ತದಷ್ಟೇ ? ಇಂದಿರೆಯು ಅಚ್ಚದಿಂದ ಬೆಳೆದವಳು ಅದಕ್ಕಾಗಿ ಹೇಳುತ್ತೇನೆ." ಎಂದು ಜಯರಾಯನು ಕೇಳಿದನು.

" ರಾಯರೇ, ನೀವು ನಿಜವಾಗಿ ಧನ್ಯರು. ನೀತಿವಂತರೂ ಚತುರರೂ ರೂಪವಂತರೂ ಆದ ನಿಮ್ಮ ಇಂದಿರಾಬಾಯಿಯವರು ನಿಮ್ಮೆಲ್ಲ ಸಂಪತ್ತಿನಕಿಂತಲೂ ಹೆಚ್ಚಿನ ಬೆಲೆಯವರು. ಅಚ್ಚೆಯ ದುಷ್ಪರಿಣಾಮವೆಳ್ಳಷ್ಟಾದರೂ ಅವರಿಗೆ ತಗಲ ಲಿಲ್ಲ."

" ನಿಮ್ಮಭಿಪ್ರಾಯ ಕೇಳಿ ನನಗೆ ಆನಂದವಾಯಿತು. ಇಂದಿರೆಯನ್ನು ಬೆಂಗಳೂರಿಗೆ ಕರೆದುಕೊಂಡುಹೋಗಿ ದೊಡ್ಡ ದೊಡ್ಡ ಜನರ ಪರಿಚಯವನ್ನು ಅವಳಿಗೆ ಮಾಡಿಕೊಡುತ್ತೇನೆ. ಅವಳ ಹಿತಕ್ಕಾಗಿ ಎಷ್ಟು ಹಣ ವೆಚ್ಚವಾದರೂ ಚಿಂತಿಲ್ಲ."

" ಇದು ನಿಮ್ಮ ಕರ್ತವ್ಯವೇ."

" ನಾನಾದರೂ ಜಹಗೀರದಾರ, ಕೌನ್ಸಿಲರ, ದಿವಾನ್ ಮುಂತಾದವರ ಸ್ನೇಹಗಳಿಸಿರುವೆನು' ಅವರ ಸಹಾಯದಿಂದ ರಾವಬಹಾದೂರರೆಂಬ ಬಿರುದು ಗಳಿಸಿ ಪ್ರತಿನಿಧಿಗಳ ಸಭೆಯಲ್ಲಿ ಅಗ್ರಗಣ್ಯನಾಗಬೇಕೆಂದು ಮಾಡಿದ್ದೇನೆ. ಕೇವಲ

ವ್ಯಾಪಾರಸ್ಥರಿಗೆ ಮರ್ಯಾದೆಯಿಲ್ಲ."

"ಇದಕ್ಕಾಗಿ ನೀವೇನು ಉಪಾಯವನ್ನು ಯೋಚಿಸಿರುವಿರಿ ? "

"ಇಂದಿರೆಯು ರೂಪವತಿಯೂ ಜಾಣೆಯೂ ಇರುವಳು. ನನ್ನಲ್ಲಿ ಹೇರಳವಾದ ಸಂಪತ್ತಿದೆ. ಯಾವನಾದರೊಬ್ಬ ಜಹಗೀರದಾರನಿಗೆ ಅವಳನ್ನು ಧಾರೆಯೆರೆದು ಕೊಟ್ಟರೆ ಆ ಆಪ್ತತ್ವದಿಂದ ನನ್ನ ಪ್ರತಿಷ್ಠೆ ಬೆಳೆಯುವುದು ; ದೊಡ್ಡ ಜನರಲ್ಲಿ ನನ್ನ ಗಣನೆಯಾಗುವದು."

ಜಯರಾಯನ ಕುತ್ಸಿತವಾದ ವಿಚಾರಗಳನ್ನು ಕೇಳಿ ರಮಾಕಾಂತನಿಗೆ ತಿರಸ್ಕಾರ ಬಂದಿತು. ಆದರೂ ಆಡಿ ಫಲವೇನು ? ತಾನು ಜಯರಾಯನಿಗೆ ಹೊಸ ಪರಿಚಯಸ್ಥನು. ಸಮಾಜದಲ್ಲಿ ಈ ಪರಿಯಾದ ಅಪಕೃಷ್ಟದಶೆಯನ್ನು ಹೇಗೆ ಹೋಗಲಾಡಿಸಬಹುದು ? ಪ್ರಾಚೀನ ಶುದ್ಧ ಮನೆತನಸ್ಥರಲ್ಲಿ ಸುನೀತ ಸದಾಚಾರಗಳಿರಬಹುದು. ಆದರೆ ಈ ಗುಣಗಳಿಲ್ಲದ ಜಹಗೀರದಾರನೊಡನೆ ಮಾಡಿದ ಸಂಬಂಧವು ಹಾನಿಕಾರಕವಾದದ್ದಲ್ಲವೇನು ? ಜಯರಾಯನಿಗೆ ಜಹಗೀರದಾರನಾದ ಅಳಿಯನು ಸಿಕ್ಕರಾಯಿತು, ಅವನೆಂಥವನೇ ಇರಲೊಲ್ಲನೇಕೆ ?

"ನಿಮ್ಮ ಕರ್ತವ್ಯವು ನಿಮಗೆ ತಿಳಿಯುವದು" ಎಂದಿಷ್ಟೇ ಹೇಳಿ ರಮಾಕಾಂತನು ಸುಮ್ಮನಾದನು.

"ಇಲ್ಲಿಯೇ ಶಿವಸಮುದ್ರದ ಜಹಗೀರದಾರರ ದ್ವಿತೀಯ ಚಿರಂಜೀವರಾದ ಶ್ರೀಕಂಠಬಹದ್ದೂರರು ಬಂದಿರುವರು. ಅವರ ಪರಿಚಯ ನಿಮಗೆ ನಾನು ಮಾಡಿಕೊಡುವೆನು, ಇದೇ ಶ್ರೀಕಂಠಬಹದ್ದುರರಿಗೆ ಇಂದಿರೆಯನ್ನು ಕೊಡಬೇಕೆಂದು ಮಾಡಿದ್ದೇನೆ. ಬ್ರಹ್ಮಾನುಕೂಲವು ಹಾಗಿದ್ದರೆ ನನ್ನ ಮನೋರಥವು ಪೂರ್ಣವಾದಂತಾಗುವದು.

"ಶ್ರೀಕಂಠಬಹದ್ದುರರಿಗೆ ಉತ್ಪನ್ನ ಚನ್ನಾಗಿರಬಹುದು ? " ಎಂದು ರಮಾಕಾಂತನು ಕೇಳಿದನು.

"ಶ್ರೀಕಂಠಬಹದ್ದುರರಿಗೆ ಜಹಗೀರಿಯಲ್ಲಿ ಏನೂ ಸಿಕ್ಕುವಂತೆ ಇಲ್ಲ. ಆದರೆ ಅವರು ಒಳ್ಳೇ ಬುದ್ಧಿವಂತರಿದ್ದು ಯಾವದೇ ಉದ್ಯೋಗದಲ್ಲಿ ಬೀಳಲಿ ಅವರು ಯಶಸ್ವಿಗಳಾಗುವರು. ಮೊದಲಿಗವರು ಕಲಾಕೌಶಲದಲ್ಲಿ ಕೈ ಹಾಕಿದರು. ಆದರೆ ಕೆಲವು ಕಾರಣಕ್ಕಾಗಿ ಆ ಉದ್ಯೋಗ ಬಿಟ್ಟರು. ಈಗ ವ್ಯಾಪಾರದಲ್ಲಿ ಮನಸ್ಸು ಹಾಕಿದ್ದಾರೆ. ಅವರಿಗೆ ನಾನು ಹಣ ಪೂರೈಸಿ ಕೊಡಲೊಪ್ಪಿಕೊಂಡಿದ್ದೇನೆ. ರಮಾಕಾಂತರೆ, ನೀವೇನು ಮಾಡುತ್ತೀರಿ ?"

"ನಾನು ಎಂಜನೀಯುರನಿದ್ದೇ ಇದ್ದೇನೆ. ಈ ಕೆಲಸದಲ್ಲಿ ಯಶಸ್ಸು ಬರುವಂತೆ ಕಂಡರೆ ಇಲ್ಲಿಯೇ ಇರಬೇಕು; ಇಲ್ಲದಿದ್ದ ಪಕ್ಷದಲ್ಲಿ ಬಂಗಾಲ, ಜಪಾನ, ಚೀನ ಮುಂತಾದ ದೇಶಗಳಿಗೆ ಹೋಗಬೇಕು."

'ನೀವು ಪ್ರಾರಂಭವಂತೂ ಮಾಡಿರಿ; ನಿಮಗೆ ಅನ್ಯದೇಶಕ್ಕೆ ಹೋಗುವ ಅವಶ್ಯ ಬೀಳುವದಿಲ್ಲ. ನಮ್ಮ ಪ್ರಾಂತದಲ್ಲಿಯೇ ನಿಮಗೆ ಸಾಕಷ್ಟು ಹಣ ಸಿಕ್ಕುವದು. ನಾನು ನನ್ನ ಕಯ್ಯಿಂದಾದಷ್ಟು ಮಾಡಿ ನಿಮಗೆ ನಿಮ್ಮ ಉದ್ಯೋಗದಲ್ಲಿ ಯಶಸ್ಸು ಸಿಕ್ಕುವಂತೆ ಮಾಡುತ್ತೇನೆ. ಈ ಮಾತಿನ ಬಗ್ಗೆ ಬೆಂಗಳೂರಲ್ಲಿ ವಿಶೇಷ ಚರ್ಚೆ ಮಾಡೋಣ, ಹೊರಗೆ ನಮ್ಮ ಅತಿಥಿಗಳಿರುವರು, ಅವರ ಬಳಿಯಲ್ಲಿ ಹೋಗೋಣ ನಡೆಯಿರಿ." ಹೀಗಂದು ಜಯರಾಯನು ರಮಾಕಾಂತನ ಕೈಹಿಡಿದು ಕೊಂಡು ಅತಿಥಿಗಳಿದ್ದೆಡೆಗೆ ಬಂದನು.

ಇವರು ಪುಸ್ತಕಾಲಯದಿಂದ ಹೊರಗೆ ಪ್ರೇಕ್ಷಣೆಯವಾಗಿದ್ದ ದಿವಾಣಖಾನೆಯಲ್ಲಿ ಹಾಯ್ದು ವಿಶ್ರಾಂತಿಗೃಹದಲ್ಲಿ ಪ್ರವೇಶಿಸಿದರು. ಅಲ್ಲಿ ಶ್ರೀಕಂಠಬಹದ್ದರನು ಪಿಯಾನೊ ಬಾರಿಸುತ್ತಿದ್ದನು. ಪಂಡಿತೆಯೂ ಇಂದಿರೆಯೂ ಬಳಿಯಲ್ಲಿಯೇ ಕುಳಿತು ಕೇಳುತ್ತಿದ್ದರು. ಬಾಷ್ಕಳಪಂತನು ತನ್ನ ಮೀಸೆಗಳನ್ನು ತಿದ್ದುತ್ತ ಈ ಬಾರಿಸುವದನ್ನು ಕೇಳಿ ಬೇಸತ್ತವನಂತೆ ನಿಂತಿದ್ದನು. ಜಯರಾಯ ರಮಾಕಾಂತರು ಬಂದಕೂಡಲೆ ಬಾರಿಸುವದು ಬಿಟ್ಟು ಶ್ರೀಕಂಠನು ಇವರನ್ನು ನೋಡುತ್ತ ಕುಳಿತು ಕೊಂಡನು.

ಶ್ರೀಕಂಠನು ಸುಮಾರು ಇಪ್ಪತ್ತೈದು ವರುಷದ ಪ್ರಾಯದವನಾಗಿರಬೇಕು. ತುಂಬಿದ ಮೈಯವನಾಗಿದ್ದರೂ ಇವನ ಮೋರೆಯ ಮೇಲೆ ಸಪ್ಪಗಿನ ಕಳೆಯಿತ್ತು; ಕೂದಲು ತುಸು ಕೆಂಪು ಮೂಡಿಯ ಮೇಲಿತ್ತು. ಇವನ ತಲೆ ಮೇಲೆ ನಾಲ್ಕು ಬೊಟ್ಟಗಲದ ಜರದ ರುಮಾಲು ಇದ್ದು ಅಂಗಿಗಾದರೂ ನಾಟಕದ ರಾಜನಂತೆ ಜರದ ಪಟ್ಟಿಗಳನ್ನು ಹಚ್ಚಿದ್ದನು. ಕಿವಿಯಲ್ಲಿ ದೊಡ್ಡ ಮುತ್ತಿನ ಹತ್ತೇಂಟಿಯಿತ್ತು, ಬಲಗೈಯ ನಾಲ್ಕು ಬೆರಳಿಗೂ ದೊಡ್ಡ ದೊಡ್ಡ ಉಂಗುರಗಳನ್ನಿಟ್ಟಿದ್ದನು.

"ಇನ್ನು ಸಾಕು, ಜಯರಾಯರಿಗೆ ಗಾನವಾದನಗಳಿಂದ ತಲೆನೋವು ಏಳುತ್ತದೆ." ಎಂದು ಶ್ರೀಕಂಠನಂದನು.

"ನಾನೆಂದೂ ಗಾಯನ ನಡೆದಾಗ್ಗೆ ಬೇಸರಭಾವ ತೋರಿಸಿಲ್ಲ" ಎಂದು ಜಯರಾಯನು ನಗುತ್ತ ಉತ್ತರಕೊಟ್ಟನು.

"ನಮ್ಮ ಡಾಕ್ಟರ ಸಾಹೇಬರಿಗಂತೂ ಗಾಯನವು ಆಗಿಯೇಬರುವದಿಲ್ಲ."

ಎಂದು ಶ್ರೀಕಂಠನಂದನು.

"ಯಾರನ್ನುವರು ? ಗಾಯನದಲ್ಲಿ ನನಗಭಿರುಚಿಯುಂಟು. ಆದರೇ ಈಗಲೇ ನಡೆದಂಥ ಹುಡುಗಾಟಿಗೆಯ ಪ್ರಕಾರ ಮಾತ್ರ ನನಗೆ ಸರಿಬರುವದಿಲ್ಲ. ಕರಡೀ ಮಜಲು ಇದಕ್ಕೂ ಹೆಚ್ಚು ಉತ್ಸಾಹಕರವಾದದ್ದು. ನಾನು ಸುಳ್ಳು ಹೇಳುವದಿಲ್ಲ ವಸ್ತುಸ್ಥಿತಿ ಹೀಗಿರುವದು" ಎಂದು ಡಾಕ್ಟರನು ತನ್ನಭಿಪ್ರಾಯಂ ಹೇಳಿದನು.

"ಶ್ರೀಕಂಠಬಹದ್ದರರೇ, ಇವರು ನಮ್ಮ ಮಿತ್ರರಾದ ರಮಾಕಾಂತರಾಯರು, ಇವರು ಮುಂಬಯಿ ವಿಶ್ವವಿದ್ಯಾಲಯದ ಪದವೀಧರರು. ಹಿಂದೂಸ್ಥಾನದಲ್ಲೆಲ್ಲ ಸಂಚಾರಮಾಡಿರುವರು" ಎಂದು ಇಂದಿರೆಯು ಪದ್ಮಪತ್ರದಂತೆ ಆರಕ್ತವಾಗಿದ್ದ ತನ್ನ ಹಸ್ತವನ್ನು ರಮಾಕಾಂತನ ಕಡೆಗೆ ಮಾಡಿ ಹೇಳಿದಳು.

"ಹೀಗೇನು ! ರಮಾಕಾಂತರಾಯರೇ, ನಮಸ್ಕಾರ. ತಮ್ಮ ಪರಿಚಯ ವಾದದ್ದರಿಂದ ನಾನು ಧನ್ಯನಾದೆನು."

"ನಾನಾದರೂ ತಮ್ಮಂಥವರ ಪರಿಚಯವಾದದ್ದು ದೊಡ್ಡ ಲಾಭವೆಂದೆ ಣಿಸುತ್ತೇನೆ. ಜಯರಾಯರೂ ತಮ್ಮ ಸ್ತುತಿ ಬಹಳಾಗಿ ಮಾಡುತ್ತಾರೆ." ಎಂದು ರಮಾಕಾಂತನಂದನು.

"ಪಂಡಿತೆಯು ನಾಲ್ಕುಜನ ನೆರೆದರಾಯಿತು ತನ್ನ ವಿಷಯವನ್ನು ತೆಗಿಯದೆ ಬಿಟ್ಟವಳಲ್ಲ. ಅವಳಂದದ್ದು : "ಮುಂಬಯಿ ಬಂಗಾಲಪ್ರಾಂತಗಳಲ್ಲಿ ಸಂಧಾರಣೆ ಚೆನ್ನಾಗಿ ಆಗಿದೆ. ಶ್ರೀಕಂಠಬಹದ್ದರರೇ, ಅವೆರಡೂ ಪ್ರಾಂತಗಳೂ ವಿದ್ಯಾಪರಿಪ್ಲುತ ವಾದದ್ದವು. ನಾನು ಇವೆರಡೂ ಪ್ರಾಂತಗಳಿಗೆ ಸಂಬಂಧಿಸಿದವಳು. ಪುಣೆಯಲ್ಲಿಯಂ ಪ್ರಸಿದ್ಧರಾದ ಕಾಶೀನಾಥ ಶಾಸ್ತ್ರಿಗಳ ಮಗಳು ನಾನು. ನನ್ನ ಪ್ರಥಮಪತಿ ಗಳಾದರೂ ಶಾಸ್ತ್ರಿಗಳೇ ಆಗಿದ್ದರು. ಆದುದರಿಂದ ನನಗೆ ತಕ್ಕಮಟ್ಟಿಗೆ ಸಂಸ್ಕೃತ ಭಾಷೆಯ ಜ್ಞಾನವಾಯಿತು. ಆದರೆ ಮನೆಯಲ್ಲಿ ತೊತ್ತುಗಳಂತೆ ದುಡಿಯುವದೂ, ಗಂಡಸರನ್ನು ಕಂಡರೆ ಹುಲಿಗಳನ್ನು ಕಂಡಂತೆ ಅಂಜಿ ಒಳಮನೆಯಲ್ಲಿ ಹೋಗು ವದೂ, ಮನೆಯಲ್ಲಿ ವಿನಾಕಾರಣ ಮಡಿ ಮೈಲಿಗೆ ಮಾಡುವದೂ ಇವೆಲ್ಲಕ್ಕೆ ಬೇಸತ್ತು ಬೇಜಾರಾಗಿಹೋಗಿದ್ದೆನು. ಪತಿಗಳು ತೀರಿಕೊಂಡ ಬಳಿಕ ನನಗೆ ಸ್ವಾತಂತ್ರ್ಯದ ಪ್ರಾಪ್ತಿಯಾಯಿತು. ಆ ಮೇಲೆ ಗೋವಿಂದರಾವ ರಾನಡೆ. ಮೋರೋಪಂತ ಭಿಡೆ, ಮೊದಲಾದ ಸುಧಾರಕಾಗ್ರಣಿಗಳು ನನ್ನ ವಿದ್ಯೆಗೆ ಕೌತುಕ ಪಟ್ಟು, ನನಗೆ ಪಂಡಿತಾ ಎಂಬ ಬಹುಮಾನದ ಬಿರುದು ಕೊಟ್ಟರು. ಅವರ ಜೊತೆ

ಯಲ್ಲಿದ್ದಾಗ ನಾನು ಪುನರ್ವಿವಾಹ, ಸ್ತ್ರೀಸ್ವಾತಂತ್ರ್ಯ, ಮುಂತಾದ ವಿಷಯುಗಳನ್ನು ಚನ್ನಾಗಿ ಪ್ರತಿಪಾದಿಸಿದ್ದರಿಂದ ನನ್ನ ಹೆಸರು ನಾಲ್ಕೂ ಕಡೆಗೂ ಪ್ರಸಿದ್ಧವಾಯಿತು. ಪುನರ್ವಿವಾಹ ಮಾಡಿಕೊಳ್ಳಲಿಕ್ಕೆ ನನ್ನ ಸ್ನೇಹಿತರು ಆಗ್ರಹಮಾಡಿದರು. ಸ್ವದೇಶೀಯರಾದ ಸ್ತ್ರೀಪುರುಷರ ಸಂಯೋಗದಿಂದ ಸಶಕ್ತವಾದ ಪ್ರಜೋತ್ಪತ್ತಿಯಾಗುವದಿಲ್ಲವೆಂಬುದು ನನ್ನ ಮತವಿದ್ದದ್ದರಿಂದ ನಾನು ಬಂಗಾಲಕ್ಕೆ ಹೋಗಿ ಕಲಕತ್ತೆಯಲ್ಲಿದ್ದ ಪಂಜಾಬದೇಶದ ಪ್ರಸಿದ್ಧ ಮಲ್ಲನಾದ ರಣಧೀರಸಿಂಗನೊಡನೆ ವಿವಾಹ ಮಾಡಿಕೊಂಡೆನು. ಆದರೆ ದುರ್ದೈವದಿಂದ ನನ್ನ ದ್ವಿತೀಯಪತಿಯಾದರೂ ಪರಲೋಕವಾಸಿಯಾದದ್ದರಿಂದ ಮತ್ತೆ ನನಗೆ ವೈಧವ್ಯಪ್ರಾಪ್ತಿಯಾಯಿತು. ನಾನು ಕೇಶವಚಂದ್ರಸೇನರು ಸ್ಥಾಪಿಸಿದ ಬ್ರಹ್ಮೋಪಂಥಕ್ಕೆ ಸೇರಿ ಸಾಮಾಜಿಕ ವಿಷಯುಗಳ ಊಹಾಪೋಹ ಮಾಡಲಾರಂಭಿಸಿದೆನು. ಮಹಾರಾಷ್ಟ್ರಪ್ರಾಂತದಲ್ಲಿಯಕಿಂತಲೂ ಬಂಗಾಲದಲ್ಲಿ ನನ್ನ ಕೀರ್ತಿಯು ಬಹಳಾಯಿತು. ಮುಂದೆ ನಾನು ಅಮೇರಿಕೆಗೆ ಹೋಗಿ ಬಾಯ್ಬಲ್ ಅಂದರೆ ಪವಿತ್ರಶಾಸ್ತ್ರದ ಅಧ್ಯಯನ ಮಾಡಲು ಏಸುಪ್ರಭುವಿನಂಥ ತಾರಕನಿಲ್ಲವೆಂದು ನನ್ನ ಪೂರ್ಣಗ್ರಹವಾಗಿ ನಾನು ಅಮೇರಿಕೆಯಲ್ಲಿಯ ಫಾದರ ಕನಿಂಘ್ಯಾಮನೆಂಬ ಏಸುವಿನ ಪ್ರತಿನಿಧಿಯು ಅರ್ಧಾಂಗಿಯಾದೆನು. ನನಗೆ ಮೂವರು ಪತಿಗಳಾದರೂ ಸಂತತಿಯಾಗಲಿಲ್ಲ. ಮಕ್ಕಳಾಗಲಿಲ್ಲವೆಂದು ಹಿಂದೂ ಜನರು ಎರಡೇನು ಮೂರೇನು ಹೆಂಡರನ್ನು ಮಾಡಿಕೊಳ್ಳುತ್ತಾರೆ. ಅವರೆಷ್ಟು ಮೂರ್ಖರು ನೋಡಿರಿ! ನನ್ನ ತೃತೀಯಪತಿಗಳು ತೀರಿಕೊಂಡ ಮೇಲೆ ಹಿಂದೂಸ್ಥಾನದ ಸ್ಥಿತಿಯನ್ನು ಸುಧಾರಿಸಬೇಕೆಂದು ಇಲ್ಲಿಗೆ ಬಂದು ಸರಸ್ವತೀಸದನ, ಉಪಾಸನಾಸಮಾಜ, ಮುಂತಾದ ಲೋಕೋಪಯುಕ್ತ ಸಂಸ್ಥೆಗಳನ್ನು ಸ್ಥಾಪಿಸಿದ್ದೇನೆ. ಅವುಗಳ ಮಹತ್ವವು ನಿಮಗೆ ಗೊತ್ತಾಗಿರುವುದು." ಎಂದು ಪಂಡಿತೆಯು ಕೇಳುವವರಿಗೆ ಮುಕ್ತಿಪ್ರದವಾದ ತನ್ನ ಕಥಾಭಾಗವನ್ನು ನಿರೂಪಿಸಿದಳು.

"ರಾಧಕ್ಕಾ, ನಿನ್ನೀ ಕೀರ್ತನವನ್ನು ಕೇಳಿ ನಾವೆಲ್ಲರೂ ಪಾಪರಹಿತರಾದೆವು. ಪತಿಮಾಲಿಕಾವಿಭೂಷಿತೆಯಾದ ನಿನ್ನನ್ನು ನೋಡಿ ಯಾವ ಆರ್ಯಭಗಿನಿಗೆ ಆನಂದವಾಗಲಿಕ್ಕಿಲ್ಲ? ನಮ್ಮ ಕುಲಕೋಟಿಯನ್ನಂತೂ ನೀನು ಉದ್ಧಾರ ಮಾಡಿಬಿಟ್ಟಿರುವಿ." ಎಂದು ಅಪಹಾಸ್ಯಮಾಡಿ ಬಾಪ್ಕಳಪಂತನು ನುಡಿದನು.

"ನಿನ್ನ ಕೂಡ ವಾದಿಸಲು ನನ್ನಿಚ್ಛೆಯಿಲ್ಲ. ನಾನು ನನ್ನ ದೇಹದ ಸ್ವಾಮಿನಿಯು, ನಾನು ವೈಧವ್ಯದಲ್ಲಿ ಕೊಳೆಯುತ್ತ ಬಿದ್ದಿದ್ದರೆ ನಿನ್ನ ಪೂರ್ವಜರಿಗೆ ಸ್ವರ್ಗದಲ್ಲಿ ಅತ್ಯಾನಂದವಾಗುತ್ತಿತ್ತಲ್ಲವೇ?" ಎಂದು ಪಂಡಿತೆಯು ಆಢ್ಯತೆಯಿಂದ

ನುಡಿದಳು.

ಈ ವಾದವು ವಿಕೋಪಕ್ಕೆ ಹೋಗುವದೆಂದು ತಿಳಿದು ಜಯರಾಯನು ಇಂದಿರೆಯ ಹತ್ತರಿದ್ದ ಶಾಲು ತೆಕ್ಕೊಂಡು ಡಾಕ್ತರನ ಕಯ್ಯಲ್ಲಿ ಕೊಟ್ಟು "ಡಾಕ್ತರ ಈ ಶಾಲು ನೋಡಿರಿ. ಇದಕ್ಕೆ ಬೆಲೆಯೇನು ಮುಟ್ಟಿರುವದು ? ಎಂದು ಕೇಳಿದನು.

"ದೊಡ್ಡ ಬೆಲೆಯ ಶಾಲಿದು. ಇದಕ್ಕಿಷ್ಟೇ ಮುಟ್ಟದ್ದೀತೆಂದು ನಾನು ಹೇಳಲಾರೆನು."

"ಇದು ಕಾಶ್ಮೀರದ ಶಾಲು. ಎಷ್ಟು ನಯವಾಗಿದೆ !" ಎಂದು ಪಂಡಿತೆ ಯೆಂದಳು.

"ಇದು ಕಾಶ್ಮೀರದ ಶಾಲಲ್ಲ. ಇಂಗ್ಲಿಶ್ ಗಿರಣಿಯಲ್ಲಿ ಹೊರಟ ಶಾಲು" ಎಂದು ರಮಾಕಾಂತನಂದನು.

"ಇದು ಕಾಶ್ಮೀರದ ಶಾಲಲ್ಲ ! ನಿನ್ನೇ ಶ್ರೀಕಂಠಬಹದ್ದರರು ಹಾಗೆ ಹೇಳಿದ ರಲ್ಲ." ಎಂದು ಪಂಡಿತೆಯು ಇದೊಂದು ದೊಡ್ಡ ನ್ಯಾಯದ ನಿರ್ಣಯವು ಹೇಗಾ ಗುವದು ಎಂಬ ಚಿಂತೆಯಲ್ಲಿದ್ದವಳಂತೆ ಆರ್ತದೃಷ್ಟಿಯಿಂದ ಶ್ರೀಕಂಠನ ಮೋರೇ ಕಡೆಗೆ ನೋಡಿದಳು.

"ಇದು ಕಾಶ್ಮೀರದಿಂದ ಬಂದ ಶಾಲು. ಯಾರಿಲ್ಲನ್ನುವರು ?" ಎಂದು ಶ್ರೀಕಂಠನು ಗಂಭೀರಮುದ್ರೆಯಿಂದಂದನು.

"ಯಾರಾದರೂ ಇದನ್ನು ಕಾಶ್ಮೀರಕ್ಕೆ ತೆಕ್ಕೊಂಡು ಹೋಗಿ ಅಲ್ಲಿಂದ ಮರಳಿ ಇಲ್ಲಿಗೆ ತಂದಿದ್ದರೆ ಇದು ಕಾಶ್ಮೀರದಿಂದ ಬಂದಿರುವದೆಂದು ಹೇಳಬಹುದು." ಎಂದು ರಮಾಕಾಂತನು ಚೇಷ್ಟಾಳತನದಿಂದ ನಕ್ಕನು.

ತನ್ನ ಪ್ರೀತಿಯವನಾದ ಶ್ರೀಕಂಠನ ಅಜ್ಞಾನವನ್ನೂ ರಮಾಕಾಂತನ ಪರೀಕ್ಷಾ ಕೌಶಲವನ್ನೂ ಕಂಡು ಜಯರಾಯನಿಗೆ ಅಸಮಾಧಾನವೆನಿಸಿ "ಏನು ಮಾಡುವಿರಿ ವಾದ ತೆಕ್ಕೊಂಡು ?" ಎಂದು ಹೇಳಿದನು.

ವಿಶೇಷಜ್ಞರಿದ್ದಲ್ಲಿ ತನ್ನ ಮಾರಟವೆಂದಿಗೂ ಇಲ್ಲೆಂದು ಶ್ರೀಕಂಠನಿಗೆ ತಿಳಿಸೇ ಇತ್ತು. ಅದಕ್ಕಾಗಿ ಅವನು ಇಂದಿರೆಯ ಹತ್ತರಿಟ್ಟ ಕುರ್ಚಿಯ ಮೇಲೆ ಹೋಗಿ ಕುಳಿತು ಭಾಸ್ಕರಬುವಾ ಬಖಲೆ, ಅಬದುಲ ಕರೀಮ, ಶಾಮಂಣ ಮುಂತಾದ ವಿಖ್ಯಾತ ಗವಯಿಗಳ ಗಾಯನಕೌಶಲದ ವರ್ಣನೆ ನಡೆಸಿದನು. ಶ್ರೀಕಂಠ ಬಹದ್ದರನಿಗೆ ಚನ್ನಾಗಿ ಹರಟೆ ಹೊಡಿಯಲಿಕ್ಕೆ ಬರುತ್ತಿತ್ತು. ತನಗೆ ಗೊತ್ತಿಲ್ಲದ ವಿಷಯುಗಳಲ್ಲಿ ಕೂಡಾ ಕೈಗಂಟು ಹಾಕಿ ಶ್ರೋತೃಗಳ ಮನೋ

ರಂಜನೆ ಮಾಡುತ್ತಿದ್ದನು. ತನ್ನ ಸುತ್ತಲೂ ನಡೆದ ಸಂಗತಿಗಳನ್ನು ಚೆನ್ನಾಗಿ ಅವಲೋಕಿಸಿ ಬೋಧ ತಕ್ಕೊಳ್ಳುವ ಶಕ್ತಿಯು ಇವನಲ್ಲಿದ್ದಿಲ್ಲ. ಅವನು ಬಹು ತ್ವರದಿಂದ ಮಾತಾಡುತ್ತಿದ್ದನು. ಅವನ ಮಾತಿನಲ್ಲಿ ಯಾವಾಗಲೂ ವಿಷಯಾಂತರ ವಾಗುತ್ತಿತ್ತು. ಸ್ತ್ರೀಯರಿಗೆ ಎಂಥ ಸೀರೆ ಕುಪ್ಪಸಗಳೊಪ್ಪುತ್ತವೆ, ತುರುಬಿಗೆ ಅವರು ಎಥ ಹಾರ ಕಾಕಿಕೊಳ್ಳಬೇಕು. ಬಳೆಗಳಲ್ಲಿ ರಾಣಿಗೋಟು ರಾಜಾ ವರಕಿ, ಹಾಗಲಚಿಕ್ಕಿ, ಮುಗಿಲಬಣ್ಣ, ಹೀಗೆ ಎಷ್ಟು ತರಗಳಿರುವವು. ಸ್ತ್ರೀಯರ ಆಭರಣಗಳ ಯಚ್ಚ್ಛವತ್ತು ಹೆಸರುಗಳು ಮುಂತಾದ ಜ್ಞಾನವು ಅವನಿಗೆ ಪುಷ್ಕಳ ಇತ್ತು.

ರಮಾಕಾಂತನು ಸೋಗಿನವನಾದ ಈ ಶ್ರೀಕಂಠನನ್ನು ಅನಾದರವಾದ ದೃಷ್ಟಿಯಿಂದ ನೋಡುತ್ತಿದ್ದನು. ನಟೇಶನು ಇಂಥ ಮನೆತನಸ್ಥರವನ್ನು ನಿಂದಿಸು ವದು ಸರಿಯಾದದ್ದೆಂದು ಇವನಿಗೆ ಕಂಡುಬಂದಿತು. ಅಷ್ಟರಲ್ಲಿ ಜಯರಾಯನು ಅವನ ಸಮೀಪಕ್ಕೆ ಬಂದು ಕೈಹಿಡುಕೊಂಡು ಕಿಡಿಕಿಯ ಹತ್ತಿರ ಕರೆದೊಯ್ದನು. ಅಲ್ಲಿ ನಿಂತು ಜಯರಾಯನಂದದ್ದು : " ಶ್ರೀಕಂಠನು ಬುದ್ಧಿವಂತನೆಂದು ನಾನು ಹೇಳಿದೆನಲ್ಲ. ನೋಡಿರಿ, ತನ್ನ ಮನೋರಂಜಕವಾದ ಮಾತುಗಳಿಂದ ಇಂದಿರೆಯಂಥ ಚತುರೆಯನ್ನು ಕೂಡಾ ಹೀಗೆ ತಲ್ಲೀನಳನ್ನಾಗಿ ಮಾಡಿಬಿಟ್ಟಿರು ವನು ? ವ್ಯಾಪಾರದಲ್ಲಿ ಕೂಡಾ ಇವನ ಸೂಚನೆಗಳು ಮಹತ್ವವಾದವುಗಳಿರುತ್ತವೆ. ಶ್ರೀಕಂಠನು ಉದಾರನೂ ಇರುವನು. ಲಾಟರಿಯಲ್ಲಿ ಅವನಿಗೆ ಇಪ್ಪತ್ತು ಸಹಸ್ರ ರೂಪಾಯಿಗಳು ಸಿಕ್ಕಿದ್ದವು. ಸರ್ಕಸದಲ್ಲಿ ಇವನಿಗೆ ಲಕ್ಷ್ಯ ಬಹಳಿದ್ದದರಿಂದ ಈ ಹಣವನ್ನೆಲ್ಲಾ ಸರಕಸಿನಲ್ಲಿ ಹಾಕಿದನು. ವ್ಯವಸ್ಥಾಪಕನ ದೋಷದಿಂದಲೂ ಶ್ರೀಕಂಠನ ಔದಾರ್ಯದಿಂದಲೂ ಇಪ್ಪತ್ತುಸಹಸ್ರ ರೂಪಾಯಿಗಳೆಲ್ಲಾ ವೆಚ್ಚ ವಾಗಿ ಹೋದವು. ಆದರೆ ಅವನ ಕಲ್ಪನಾಶಕ್ತಿಯನ್ನು ಕುದುರೆಗಳಾಟದ ಮೇಲಿಂದ ಮನಗಾಣಬಹುದಾಗಿತ್ತು."

"ಇಂಥ ಕಲ್ಪತರು ಹುಟ್ಟುವದರಿಂದಲೇ ಜಗತ್ತಿನಲ್ಲಿ ತಿದ್ದುಪಾಟುಗಳು ಸಾಗಿವೆ" ಎಂದು ರಮಾಕಾಂತನು ಪರಿಹಾಸದಿಂದ ನುಡಿದನು.

"ಈಗ್ಗೆ ಶ್ರೀಕಂಠ ಬಹದ್ದರನು ವ್ಯಾಪಾರಕ್ಕೆ ನಿಂತಿರುವನು, ನಾನೂ ಅವನೂ ಕೂಡಿ ಪಾಲಿನಿಂದ ಒಂದು ವ್ಯಾಪಾರ ತೆಗೆದಿದ್ದೇವೆ. ಆತನ ತಾಯಿ ತಂದೆಗಳು ಅನುಗ್ರಹಮಾಡಿ ನನಗೆ ಆಜ್ಞಾಪಿಸಿದ್ದರಿಂದ ಅದರಲ್ಲಿ ಆತನ ಪಾಲು ಇಟ್ಟಿದೇನೆ.

"ದೊಡ್ಡವರ ಅನುಗ್ರಹ ಸಂಪಾದಿಸಲಿಕ್ಕೆ ಇದೊಂದು ಮಾರ್ಗವೇ ಸರಿ. ಬೆಂಗಳೂರಲ್ಲಿ ಹನುಮಂತದಾಸನು ತಹಸೀಲದಾರ ಶ್ರೀಪಾದಯ್ಯನವರ ಇಚ್ಛೆಗೆ ಬಂದದ್ದು ಕೊಟ್ಟು ಅವರ ಕೃಪೆ ಸಂಪಾದಿಸಿದನು. ಆದರಿಂದ ಯಾರಾದರೂ ಹನುಮಂತದಾಸರನ್ನು ಮುಂದಕ್ಕೆ ಕರೆಯುತ್ತಿದ್ದರೆಂದು ನನ್ನ ಸ್ನೇಹಿತರು ಹೇಳುತ್ತಿದ್ದರು."

"ನಮಗೆ ಹಾಗೆ ಮಾಡೇಬೇಕಾಗುತ್ತದೆ. ಇಂದಿರೆಗೆ ಶ್ರೀಕಂಠನು ತಕ್ಕ ವರನಲ್ಲವೆ ? ನೀವು ಚತುರರೂ ನಮ್ಮ ಸ್ನೇಹಿತರ ಮಕ್ಕಳೂ ಇರುವಿರೆಂದು ಕೇಳುತ್ತೇನೆ."

"ಜಗತ್ತಿನ ಅನುಭವಿಕರು, ನೀವೇ ನೋಡಿರಿ. ಇಂಥ ಮಾತಿನಲ್ಲಿ ನನಗೇನು ತಿಳಿಯುತ್ತದೆ !"

ಪಂಡಿತೆಯು ಮಲಗುವ ಹೊತ್ತಾಯಿತೆಂದು ಸೂಚಿಸಿದ್ದರಿಂದ ರಮಾಕಾಂತನು ಜಯರಾಯನ ಅಪ್ಪಣೆ ತಕ್ಕೊಂಡು ಆ ಮೇಲೆ ಇಂದಿರೆಯನ್ನು ಕಾಣಬೇಕೆಂದು ಅತ್ತಿತ್ತ ನೋಡಿದನು. ಇಂದಿರೆಯು ಎಲ್ಲಿಯೋ ಹೋಗಿದ್ದಳು. ಅವನು ನಿರಾಶೆಯಿಂದ ಹಾಗೇ ಹೊರಟು ತನ್ನ ಮನೆಗೆ ಬಂದನು.

ಮರುದಿವಸ ಮುಂಜಾನೆ ದೇವಯಾನಿಯು ಸರದಾರಸಿಂಗನನ್ನು ಕರೆದು "ಭೋಜನೋತ್ತರ ರಮಾಕಾಂತರಾಯರು ಬೆಂಗಳೂರಿಗೆ ಹೋಗತಕ್ಕವರಿದ್ದಾರೆ. ಅವರ ಸಾಮಾನುಗಳನ್ನು ಕಟ್ಟಿ ಸಿದ್ಧಮಾಡಿಡು, ಶೇಷಮ್ಮಗೆ ಫಲಹಾರ ಮಾಡಿರಲಿಕ್ಕೆ ಹೇಳು." ಎಂದಾಜ್ಞಾಪಿಸಿದಳು.

"ರಮಾಕಾಂತ ಮಹಾರಾಜ ತುರ್ತ ಹೋಗತೇ ? ಎರ್ಡು ದಿನ ಯಾಕೆ ಇರೂದಿಲ್ಲಾ ?" ಎಂದು ಸರದಾರಸಿಂಗನು ಕೇಳಿದನು.

"ಕೆಲಸದವರು ಹೇಗೆ ನಿಲ್ಲುವರು ? ಅವರು ಹೋದರೊದರೆ ಮತ್ತೆ ನಾನೊಬ್ಬಳೇ ಆಗುವೆನು !" ಎಂದು ಚಿಂತಾಕ್ರಾಂತಳಾಗಿ ದೇವಯಾನಿಯಂದಳು.

"ಮಾಯೀಸಾಬ, ಈ ಸರದಾರಸಿಂಗ್ ಇರೂತಾಂಕ್ ಬಿಲ್‌ಕುಲ್ ಕಾಳಜೀ ಮಾಡಬಾರದೂ." ಎಂದು ತನ್ನೆದೆಯ ಮೇಲೆ ಕಯ್ಯಿಟ್ಟುಕೊಂಡು ಪ್ರೌಢತನದಿಂದ ನಿಂತನು.

'ರಮಾಕಾಂತ ಮಹಾರಾಜ್, ನೀವು ಹೋದ್ರೆ ಕುಮಾರೀ ಇಂದಿರಾಬಾಯಿ ಬಹುತ್ ಚಿಂತಾಕುಲ ಆಗತೇ."

"ಕುಮಾರೀ ಇಂದಿರಾಬಾಯಿಯು ನಿನ್ನೆ ರಾತ್ರಿ ಬಹಳ ಆನಂದದಿಂದ

ಇದ್ದಳು. ಚಿಂತಾಕುಲಳೇಕಾಗುವಳು ?" ಎಂದು ರಮಾಕಾಂತನು ನಗುತ್ತ ನುಡಿದನು.

"ಇಂದಿರೆಯು ಆನಂದದಿಂದಿದ್ದದ್ದು ಕೇಳಿ ನನಗೆ ಸಮಾಧಾನವಾಯಿತು. ನೀನವಳ ಪ್ರೀತಿಪಾಶದಲ್ಲಿ ಸಿಕ್ಕು ಅವಳನ್ನೂ ಚಿಂತೆಯಲ್ಲಿ ಹಾಕಿ ಹೋಗುವಿಯೆಂದು ತಿಳಿದಿದ್ದೆನು. ನಿನ್ನ ಹೃದಯಕ್ಕೂ ಅನಂಗನು ಘಾಯ ಮಾಡಿಲ್ಲವೆಂದು ನಂಬು ತ್ತೇನೆ. ಇಂದಿರೆಯು ಅತ್ಯುತ್ತಮಳಾದ ತರುಣಿಯು." ಎಂದು ಹೇಳಿ "ಅತ್ಯುತ್ತಮ ಳಾದ ತರುಣಿಯ ಕಾಲಲ್ಲಿ ನಿಮ್ಮ ತಂದೆಯು ಕಡೆತನಕ ಸುಖ ಕಾಣದೆ ಹೋದನು." ಎಂದು ತನ್ನ ಮನಸ್ಸಿನಲ್ಲಿಯೇ ಅಂದಳು.

ಇಂದಿರೆಯ ಮೇಲೆ ರಮಾಕಾಂತನು ಅತೀವ ಮನಸಿಟ್ಟವನಾದ್ದರಿಂದ ಆವನ ಚಿತ್ತಕ್ಕೆ ಸ್ವಲ್ಪವಾದರೂ ಸ್ವಾಸ್ಥ್ಯವಿದ್ದಿಲ್ಲ. ಆದರೂ ದೇವಯಾನಿಯ ಮಾತಿಗೆ ಶಾಂತಮನಸ್ಸಿನವನಂತೆ ಮುಗುಳುನಗೆ ನಕ್ಕು ರಣಾಂಗಣದಲ್ಲಿ ಘಾಯಹೊಂದಿದ ವೀರನಂತೆ ಏನೂ ವ್ಯಥೆ ತೋರಗೊಡಲಿಲ್ಲ ತತ್ವಜ್ಞಾನದ ವಚನಗಳನ್ನು ಧ್ಯಾನಕ್ಕೆ ತಂದುಕೊಂಡು, ಮಾನಸಿಕ ದುರ್ಬಲತೆಯುವರೇ ಸ್ತ್ರೀಯ ವ್ಯಾಮೋಹಕ್ಕೊಳ ಗಾಗುವರೆಂದು ಇದುವರೆಗೂ ತಾನು ಅನ್ಯರಿಗೆ ಬುದ್ಧಿ ಹೇಳುವದನ್ನು ಪರ್ಯಾ ಲೋಚಿಸಿ ತನ್ನ ಮನಸ್ಸು ಕಲ್ಲುಮಾಡಿಕೊಳ್ಳಲೆತ್ನಿಸುತ್ತಿರುವದರೊಳಗೇ ಇವನ ಸಹಾಯಕಾರಿಗಳನ್ನು ದೂಡಿಹಾಕಿ ತನ್ನ ಹೃದಯವನ್ನು ಪ್ರವೇಶಿಸುವಳೋ ಏನೋ ಎಂಬಂತೆ ತಟ್ಟನೆ ಇಂದಿರೆಯು ರಮಾಕಾಂತನ ಮುಂದೆ ಬಂದು ನಿಂತಳು.

ರಮಾಕಾಂತನು ತನಗೆ ಭೆಟ್ಟಿಯಾಗದೆ ಹೋದಾನೆಂದು ಶಂಕಿಸಿ ಆತನಿಗೆ ಹೋಗಿ ಬರಹೇಳುವದಕ್ಕೆ ಅಕ್ಕರತೆಯಿಂದ ಇಂದಿರೆಯು ಧಾವಿಸಿ ಬಂದಿದ್ದಳು. ಬೆವರಹನಿಗಳಿಂದ ಯುಕ್ತವಾದ ಅವಳ ಕಪೋಲಗಳು ಚಂದ್ರಕಾಂತಮಣಿಯಂತೆ ಕಂಗೊಳಿಸುತ್ತಿದ್ದವು. ಲಗುಬಗೆಯಿಂದ ಬಂದ ಶ್ರಮದಿಂದ ಕೆಂಪುಬಾಲು ಆಗಿದ್ದ ಅವಳ ಮುಖವು ಬಹು ರಮಣೀಯವಾಗಿ ಕಾಣಿಸುತ್ತಿತ್ತು.

"ಉದ್ದಾಮವೃತ್ತಿಯವಳಂತೆ ಕಾಣುವೆನಲ್ಲವೇ, ದೇವಯಾನಿಯಮ್ಮಾ ? ನೀವೇನಾದರೂ ಟೀಕೆ ಮಾಡುವಿರೆಂಬುದು ನನಗೆ ಗೊತ್ತೇ ಇದೆ. ನಿನ್ನೆ ರಾತ್ರಿ ಜನರ ಗದ್ದಲಕ್ಕಾಗಿ ರಮಾಕಾಂತರಾಯರಿಗೆ ಹೋಗಿಬನ್ನಿರೆಂದು ಕೂಡಾ ಹೇಳಲಿಕ್ಕೆ ನನಗೆ ಸಮಯ ಸಿಕ್ಕಲಿಲ್ಲ. ನಮ್ಮ ಮನೆಯಿಂದ ಅವರು ಯಾವಾಗ ಜಾರಿಕೊಂಡು ಹೋದರೆಂಬದೂ ನನಗೆ ತಿಳಿಯಲಿಲ್ಲ. ಈಗಾದರೂ ಮನೆಯಲ್ಲಿ ಉಪಚಾರಾಡಿಸುವ ನೆಂದರೆ ಸಮಯವಿಲ್ಲ. ಹೇಗಾದರೂ ಮಾಡಿ ಬಂದುಬಿಟ್ಟೆನು. ರಮಾಕಾಂತರು

ಊರಿಗೆ ಹೋಗುವ ದಿವಸ ಅವರನ್ನು ಕಾಣದಿರುವದು ಹೇಗೆ ?" ಎಂದು ನುಡಿದು ಇಂದಿರೆಯು ರಮಾಕಾಂತನನ್ನು ನೋಡಿ ಬಾಯಲ್ಲಿಯೇ ನಕ್ಕಳು.

"ಇಂದಿರಕ್ಕಾ, ನಿನ್ನ ಸ್ನೇಹಭಾವವು ವರ್ಣಿಸತಕ್ಕಂಥಾದ್ದು. ಆದರೆ ಮನೆಯಲ್ಲಿ ಎಲ್ಲಿ ಹೋದಳೆಂದು ನಿನ್ನನ್ನು ಹುಡುಕುವರಲ್ಲ ?" ಎಂದು ದೇವಯಾನಿಯು ಕೇಳಿದಳು.

"ನಾನು ಮನೆ ಬಿಟ್ಟು ಬಂದದ್ದು ಯಾರಿಗೂ ತಿಳಿಯುವದರ ಮುಂಚಿತವಾಗಿಯೇ ಮರಳಿ ಹೋಗುವೆನು ; ಇಲ್ಲಿ ನಾನು ಬಹಳೊತ್ತು ನಿಲ್ಲುವದಿಲ್ಲ."

ರಮಾಕಾಂತನು ಮಾತಾಡಲರಿಯದೆ ಸುಮ್ಮನೆ ಕುಳಿತಿದ್ದನು.

"ರಮಾಕಾಂತರಾಯರೇ, ಹೋಗಿ ಬರುವಿರಾ ! ನಾಲ್ಕು ದಿವಸ ನಿಮ್ಮ ಸಮಾಗಮದಲ್ಲಿ ನಾವೆಲ್ಲರೂ ಆನಂದದಿಂದ ಕಾಲಕಳೆದವು. ಬಹಳ ಹೇಳುವದೇನು ! ಗುರ್ತು ಮರೆಯಬೇಡಿರಿ. ನಾನೂ ಬೆಂಗಳೂರಿಗೆ ಬಂದೆನೆಂದರೆ ದಯವಿಟ್ಟು ಮೇಲಿಂದ ಮೇಲೆ ದರ್ಶನಲಾಭ ಕೊಡುತ್ತಿರಬೇಕು. ಅಜ್ಞಾನಿಯಾದ ಅಬಲೆ ನಾನು. ಆಡುವದರಲ್ಲೇನಾದರೂ ತಪ್ಪು ತಡೆಯಾಗಿದ್ದರೆ ಕ್ಷಮಿಸುವ ಭಾಗ ನಿಮ್ಮ ಕಡೆಗೇ ಇರುವದು." ಎಂದು ಹೇಳಿ ಚಿಂತಾಕ್ರಾಂತಳಾಗಿ ಕುಳಿತಳು.

"ಇಂದಿರಾಬಾಯಿವರೇ, ಈ ಅಪರಿಚಿತವಾದ ಸ್ಥಳಕ್ಕೆ ಬಂದು ನನಗೆ ಹೊತ್ತು ಹೇಗೆ ಹೋಗುವದೆಂಬ ಯೋಚನೆಯೇ ಬಿದ್ದಿತ್ತು. ಸುದೈವದಿಂದ ನಿಮ್ಮಂಥ ಚತುರರಾದವರ ಸ್ನೇಹಸಂಪಾದನೆಯಾಗಿ ನಾಲ್ಕು ದಿವಸ ವಿನೋದದಿಂದ ಕಳೆದೆನು. ನಿಮ್ಮ ಸ್ಮರಣೆಯು ಚಿರಕಾಲ ನನ್ನ ಹೃದಯದಲ್ಲಿ ಉಳಿಯುವದು. ಬಡವನ ಮೇಲೆ ಲೋಭವಿಟ್ಟು ಇಲ್ಲಿಯವರೆಗೆ ಶ್ರಮಬಟ್ಟು ಬಂದದ್ದು ನನ್ನ ಮೇಲೆ ಗುಡ್ಡ ಉಪಕಾರವಾಯಿತು. ಇದರಂತೆಯೇ ಕಡೆತನಕ ಇರಲೆಂದ ರಾಯಿತು." ಎಂದು ರಮಾಕಾಂತನು ಸದ್ಗದಿತಕಂಠನಾಗಿ ನುಡಿದನು.

ಇಂದಿರೆಯು ಎದ್ದು "ದೇವಯಾನಿಯಮ್ಮಾ, ನಾನು ಕೂಡ್ರುವಂತಿಲ್ಲ, ಈಗಲೇ ಮನೆಗೆ ಹೋಗಬೇಕು. ಮೈತುಂಬ ಕೆಲಸವಿದೆ. ರಮಾಕಾಂತರೆ, ಹೋಗಿ ಬನ್ನಿರಿ." ಎಂದು ರಮಾಕಾಂತನ ಕಯ್ಯಲ್ಲಿ ಚಿತ್ರಮಯವಾಗಿ ಕಟ್ಟಿದ ಹೂಮಾಲೆಯನ್ನು ಕೊಟ್ಟು ಅವನನ್ನು ಓರೆಗಣ್ಣಿನಿಂದ ನೋಡಿ ಹೋಗಲುದ್ಯುಕ್ತಳಾದಳು.

"ಮನೆಯವರೆಗೆ ಕಳಿಸಲಿಕ್ಕೆ ಬರಲೇನು ? ಒಬ್ಬರೇ ಹೇಗೆ ಹೋಗುವಿರಿ ?" ಎಂದು ರಮಾಕಾಂತನಂದನು.

"ಬೇಡಿರಿ. ಹಗಲೊತ್ತೇತರಂಜಿಕೆ?" ಎಂದು ಇಂದಿರೆಯು ಲಗುಬಗೆಯಿಂದ

ನಡೆದಳು.

ಕೋಲುಮಿಂಚಡಗಿದ ನಂತರ ಕಗ್ಗತ್ತಲೆಯಾಗಲು ದಿಕ್ಕುತಪ್ಪಿದವನಂತೆ ರಮಾಕಾಂತನು ಇಂದಿರೆಯು ಕಣ್ಮರೆಯಾದ ಕೂಡಲೆ ವಿಚಾರಮೂಢನಾಗಿ ಕುಳಿತು ಕೊಂಡನು. ಅವಳ ಮಂಜುಲವಾಣಿಯು ಇವನ ಕಿವಿಯಲ್ಲಿನ್ನೂ ಸುತ್ತಾಡುತ್ತಿತ್ತು. ಆ ಮೋಹನಾಂಗಿಯ ನಗೆಮುಖವು ಇವನ ಕಣ್ಣಲ್ಲಿ ಕಟ್ಟಿತ್ತು. ಬೆಂಗಳೂರಿಗೆ ಹೋಗಲಿಕ್ಕವನ ಮನಸ್ಸು ಒಲ್ಲದಾಯಿತು. ಆದರೆ ಮಾಡುವದೇನು ? ದೇವ ಯಾನಿಯು ಅಸಿಥಿಲವಾದ ನಿಶ್ಚಯದವಳು, ನಿರ್ವಾಹವೇನಿದೆ! ಹೋಗೇ ತೀರ ಬೇಕಲ್ಲ! ಎಂದು ಅವನು ವಿಚಾರಮಾಡುತ್ತಿರುವಾಗ ದೇವಯಾನಿಯು ಗಂಗೆಯನ್ನು ಕರೆಯುವದಕ್ಕಾಗಿ ಗಂಟೆಯನ್ನು ಬಾರಿಸಿದಳು. ಗಂಟೆ 'ಥಣ್ಣೆ'ಂದ ಕೂಡಲೆ ಬಡಿದೆಬ್ಬಿಸಿದವನಂತೆ ರಮಾಕಾಂತನು ಎಚ್ಚತ್ತು ಕುಳಿತನು. ಅಷ್ಟರಲ್ಲಿ ಗಂಗೆಯು ಬಂದಳು.

"ಗಂಗಾ, ಸ್ನಾನದ ಸಿದ್ಧತೆಯಾಗಿದ್ದರೆ ಬಂದು ಹೇಳು." ಎಂದು ದೇವ ಯಾನಿಯು ಗಂಗೆಗಾಜ್ಞಾಪಿಸಿ, ರಮಾಕಾಂತನನ್ನು ಕುರಿತು,

"ಕಾಂತೂ ಇಂದಿರೆಯನ್ನು ಕೂಸಿದ್ದಾಗಿನಿಂದ ನಾನು ಬಲ್ಲೆನು. ಅವಳು ಸುಶೀಲೆಯು. ಅನ್ಯಳು ಹೀಗೆ ನಿನ್ನ ದರ್ಶನಾರ್ಥ ಬಂದಿದ್ದರೆ ಸಂಶಯಕ್ಕೆ ಮಾರ್ಗ ವಿತ್ತು. ಮಾತ್ರ ಇಂದಿರೆಗೆ ಹೆಸರಿಡುವಂತಿಲ್ಲ. ಇವಳೊಡನೆ ಸ್ನೇಹದಿಂದಿರುವದಕ್ಕೆ ನಿನಗೊಂದಾವರ್ತಿ ಹೇಳಿಬಿಟ್ಟಿರುವೆನು."

"ಅಮ್ಮಾ, ನಿಮ್ಮ ಸಮಕ್ಷ ನಾನಿಂದಿರೆಯ ಸ್ಮರಣೆಯನ್ನು ಮರೆಯಲಿಕ್ಕಿಲ್ಲ ವೆಂದವಳಿಗೆ ಹೇಳಿದನಲ್ಲ." ಎಂದು ರಮಾಕಾಂತನುತ್ತರಕೊಟ್ಟನು.

"ಆಗಲಿ. ನಿನ್ನ ಸಾಮಾನುಗಳನ್ನೆಲ್ಲ ನೋಡಿ ಕಟ್ಟಿಕೊಂಡಿರುವಿಯಾ ?"

"ಕಟ್ಟಿಕೊಂಡಿದ್ದೇನೆ. ಒಂದರ್ಥ ಉಳಿದರೂ ಎಲ್ಲಿ ಹೋಗುತ್ತದೆ ?" ಎಂದು ರಮಾಕಾಂತನಂದನು.

"ಇದು ರೀತಿಯಲ್ಲ. ದುರ್ಲಕ್ಷತನವು ಎಳೆಸಿಕ್ಕರೆ ಹಚ್ಚಡವನ್ನೇ ನುಂಗು ವದು. ಅದಕ್ಕೆಳ್ಳಷ್ಟಾದರೂ ಆಸ್ಪದ ಕೊಡಕೂಡದು, ಇನ್ನೊಮ್ಮೆ ನಿನ್ನ ಸಾಮಾನು ಗಳನ್ನು ಚನ್ನಾಗಿ ನೋಡಿಕೋ." ಎಂದು ಉಪದೇಶ ಮಾಡಿದಳು.

ಗಂಗೆಯು ಸ್ನಾನಕ್ಕೆ ಸಿದ್ಧವದೆಂದು ಹೇಳಲು ಇವರೀರ್ವರು ಕೆಳಗಿಳಿದರು.

ರಮಾಕಾಂತನು ಸ್ಟೇಶನಕ್ಕೆ ಹೋಗುವದಕ್ಕಾಗಿ ರಥದಲ್ಲಿ ಕುಳಿತುಕೊಂಡನು. ದೇವಯಾನಿಯು ರಥದ ಹತ್ತರ ಬಂದು ರಮಾಕಾಂತನಿಗೆ ಹೋಗಿಬಾರೆಂದು ಹೇಳಿ

ಕಣ್ಣುತುಂಬಾ ನೀರು ತಂದು, ರಥವು ಮರೆಯಾಗುವವರೆಗೂ ಅಲ್ಲಿಯೇ ನಿಂತು ಕೊಂಡಳು, ಬ್ರಹ್ಮಾನುಕೂಲವಿದ್ದದ್ದಾಗಿದ್ದರೆ ಕಮಲಾಕಾಂತನು ತನಗೆ ಪತಿಯಾಗುತ್ತಿದ್ದನು ! ಈಗಲೇ ಹೋದ ತರುಣನು ತನ್ನ ಹೊಟ್ಟೇಮಗನೇ ಆಗುತ್ತಿದ್ದನಲ್ಲವೇ ! ಎಂದು ದೇವಯಾನಿಯು ಸುಶಿಕ್ಷಿತಳಾಗಿದ್ದರೂ ಸ್ತ್ರೀಸ್ವಭಾವಕ್ಕುಚಿತವಾದ ಕಲ್ಪನೆಯೊಡನೆ ಮೆಲ್ಲಗೆ ಮನೆಯಲ್ಲಿ ನಡೆದಳು.

ರಮಾಕಾಂತನು ಸ್ಟೇಶನಕ್ಕೆ ಬಂದ ಕೂಡಲೆ ಮೊದಲನೇ ತರಗತಿಯ ಪ್ರಯಾಣಸ್ಥರು ವಿಶ್ರಮಿಸುವ ಕೋಣೆಯಲ್ಲಿ ಹೋಗಿ ಕುಳಿತನು. ಸರದಾರಸಿಂಗನು ರಾಮರಾಮ ಮಾಡಲು ಅವನಿಗೈದು ರೂಪಾಯಿ ಕಾಣಿಕೆ ಕೊಟ್ಟು ಕಳಿಸಿದನು.

ಗಾಡಿ ಬರಲಿಕ್ಕಿನ್ನೂ ಅವಕಾಶವಿತ್ತು. ರಮಾಕಾಂತನು ತನ್ನ ' ಶಾಂತನು ' ಸಿಗರೇಟ ತೆಗೆದು ಕಿಡಕಿಯ ಹತ್ತಿರ ಹೋಗಿ ಸೇದಹತ್ತಿದನು. ಅವನು ನಿಂತ ಸ್ಥಳದಿಂದ ಇಂದಿರೆಯ ಮನೆಯ ಹತ್ತರಿದ್ದ ಉನ್ನತವಾದ ವಟವೃಕ್ಷವು ಕಾಣುತ್ತಿತ್ತು. ಸಂಗಡಲೇ ಇಂದಿರೆಯ ನೆನಪಾಗಿ ಸಾವಿರಾರು ಸಂಗತಿಗಳು ಇವನ ಧ್ಯಾನದಲ್ಲಿ ಬರಹತ್ತಿದ್ದರಿಂದ ದೇಹದ ಪರಿವೆಯಿಲ್ಲದೆ ವಿಚಾರಮಾಡುತ್ತ ನಿಂತನು. ಬಾಯಿಯಲ್ಲಿ ಹಿಡಿದಿದ್ದ ಸಿಗರೇಟು ನೊಂದಿ ಹಾಗೆ ಉಳಿದಿತ್ತು. ಇದೇ ಸ್ಟೇಶನದಲ್ಲಿ ಮೊದಲು ತಾನವಳನ್ನು ಕಂಡದ್ದು, ದರ್ಯಾದೌಲತ್ತಿನ ಘಾಟಿನಲ್ಲಿ ತಾವೀರ್ವರು ವಿನೋದದಿಂದ ಕುಳಿತದ್ದು, ದೇವಯಾನಿಯ ಮನೆಯಲ್ಲಿ ತಾವು ಹಾಡಿ ಬಾರಿಸಿದ್ದು, ಇಂದಿರೆಯು ತನ್ನ ದರ್ಶನಕ್ಕಾಗಿ ಈ ದಿನ ಬೆಳಿಗ್ಗೆ ಬಂದದ್ದು ಮುಂತಾದೆಲ್ಲ ಸಂಗತಿಗಳು ನೆನಪಾಗಿ ತದೇಕಧ್ಯಾನದಲ್ಲಿದ್ದನು. ಕರ್ಕಶವಾದ ಗಾಡಿಯ ಸಿಳ್ಳು ಕೇಳಿ ಜಾಗರಾವಸ್ಥೆಗೆ ಬಂದು ಕೂಲಿಯವನ ಮೇಲೆ ತನ್ನ ಸಾಮಾನು ಹೊರಿಸಿಕೊಂಡು ಗಾಡಿಯಲ್ಲಿ ಬಂದು ಕುಳಿತನು. ಅಲ್ಲಿಂದ ತನ್ನ ಪ್ರಾಣೇಶ್ವರಿಯು ಇರುತ್ತಿದ್ದ ಪವಿತ್ರ ಕ್ಷೇತ್ರದ ಕಡೆಗೆ ನೋಡಹತ್ತಿದನು. ಇಂದಿರಾದೇವಿಯ ನಿವಾಸಸ್ಥಾನವಾದ ಶ್ರೀರಂಗಪಟ್ಟಣವು ಸ್ಥಾವರವಾಗಿದ್ದರೂ, ಅಗ್ನಿರಥದ ವೇಗಕ್ಕಾಗಿ, ತನ್ನನ್ನು ಬಿಟ್ಟು ಓಡಿಹೋಗುವಂತೆ ಕಾಣಿಸಿತು.

ಶ್ರೀರಂಗಪಟ್ಟಣದ ಸುತ್ತಲಿನ ಪ್ರದೇಶವು ಕೂಡಾ ಕಣ್ಮರೆಯಾದ ಬಳಿಕ ನಿರಾಶೆಯಿಂದ ಕಿಡಿಕೆಯಲ್ಲಿ ಮೋರೆ ಹಾಕಿಕೊಂಡು ಅತ್ತಿತ್ತ ನೋಡುತ್ತ ಕುಳಿತನು. ಮಗ್ಗಲಲ್ಲಿಯೇ ಮೂರನೇ ತರಗತಿಯ ಗಾಡಿಯಲ್ಲಿ ನಟೇಶನೂ ಕಿಡಿಕಿಯೊಳಗಿಂದ ಹಣಿಕಿ ನೋಡುತ್ತಿದ್ದನು. ಅವನನ್ನು ಕಂಡು ರಮಾಕಾಂತನು " ನಟೇಶ ನೀನೆಲ್ಲಿಗೆ ? ಸ್ಟೇಶನದಲ್ಲೆಲ್ಲಿಯೂ ನೀನು ಕಾಣಿಸಲಿಲ್ಲ." ಎಂದು ಕೇಳಿದನು,

"ನಾನಿದೇ ಗಾಡಿ ಬಿಡುವ ಸಮಯಕ್ಕೆ ಬಂದೊದಗಿದೆನು. ಗಡಬಿಡಿಯಲ್ಲಿ ನಾನು ನಿಮ್ಮನ್ನು ಕಾಣಲಿಲ್ಲ. ನಾನು ಬೆಂಗಳೂರಿಗೆ ಹೊರಟಿರುವೆನು. ನೀವಾದರೂ ಅಲ್ಲಿಗೇ ಪ್ರಯಾಣಮಾಡುವಿರಲ್ಲವೇ ?

"ನಿನಗೊಂದು ತಿಂಗಳದ ಅಪ್ಪಣೆಯಿತ್ತಲ್ಲವೆ ? ಇಷ್ಟುವಸರದಿಂದೇಕೆ ತಿರಿಗಿದೆ ?"

"ಎಂದಾದರೂ ಮರಳಿ ಬರಬೇಕಷ್ಟೇ ? ಮೇಲಾಗಿ ಶ್ರೀರಂಗಪಟ್ಟಣದಲ್ಲಿರಲಿಕ್ಕೆ ನನ್ನ ಮನಸಾಗಲಿಲ್ಲ. ತಡವಾಗಿ ಹೊರಟರೂ ದೈವವು ಎಳಕೊಂಡು ಹೋಗುವಂತೆ ಗಾಡಿಯೂ ಸಿಕ್ಕಿತು." ಎಂದು ನಟೇಶನು ಹೇಳಿದನು.

ನಟೇಶನನ್ನು ದೈವವೇಕೆಳಕೊಂಡು ಹೋಗುತ್ತಿದ್ದೀತು ? ಆದಕ್ಕೆ ಮತ್ಯಾರೂ ದೊರಯಲಿಲ್ಲವೆ ! ಎಂದು ರಮಾಕಾಂತನು ತನ್ನ ಮನದಲ್ಲಿಯೇ ವಿನೋದಮಾಡಿಕೊಂಡನು. ರಮಾಕಾಂತನಿಗನುಕೂಲವಾಗಿ ಇದೇ ದೈವವು ಶುಭಚಿಹ್ನೆ ತೋರಿಸಿತ್ತು. ಇವನು ಹೊರಡುವ ಕಾಲದಲ್ಲಿ ಇಂದಿರೆಯು ಬಂದು ಈ ಹೂಮಾಲೆಯನ್ನು ಕೊಟ್ಟು ಹೋಗುವಳೆಂದು ಯಾರಿಗೆ ತಿಳಿದಿತ್ತು ? ರಮಾಕಾಂತನಿಗೆ ಈ ಶುಭಚಿಹ್ನದ ಪ್ರಭಾವವೂ ತಿಳಿದಿದ್ದಿಲ್ಲ. ನಟೇಶನಿಗೆ ತನ್ನನ್ನು ದೈವವೇಕೆಳಕೊಂಡುಹೋಯಿತೆಂಬುದೂ ತಿಳಿದಿದ್ದಿಲ್ಲ.

"ರಮಾಕಾಂತರೇ, ನಾನು ಬೆಂಗಳೂರಲ್ಲಿ ಬಹಳ ದಿವಸ ನಿಲ್ಲುವದಿಲ್ಲ. ನೀವು ಸೂಚಿಸಿದಂತೆ ಬಂಗಾಲಕ್ಕೆ ಹೋಗಿ ಆನಿ ಬೆಸೆಂಟಳ ಅನುಯಾಯಿಯಾಗಿ ಮುಂದೆ ಪ್ರಸಂಗಬಂದಂತೆ ನಡಕೊಳ್ಳುವೆನು."

"ಬಂಗಾಲಕ್ಕೆ ಹೋದರೂ ನಿನ್ನ ಕೆಲಸವಾದಂತೆ ಆಗುವದು." ಎಂದು ರಮಾಕಾಂತನಂದನು.

"ಎಲ್ಲಿಯಾದರೂ ಹೋಗಿ 'ಏನ ಕೇನ ಪ್ರಕಾರೇಣ' ಎಂಬಂತೆ ಪ್ರಸಿದ್ಧಿ ಹೊಂದಿಯೇ ಪುನಃ ಈ ಪ್ರಾಂತಕ್ಕೆ ಮೋರೆ ತೋರಿಸುವೆನು. ನನ್ನಲ್ಲಿ ಮಂತ್ರವಿಲ್ಲದಿದ್ದರೂ ತಂತ್ರಕ್ಕೆ ಕೊರತೆಯಿಲ್ಲ."

"ಒಳ್ಳೇ ನಿಶ್ಚಯ ಮಾಡಿರುವಿ !' ಎಂದು ರಮಾಕಾಂತನಂದನು.

ಅನುಸಂಧಾನದ ವಿಚಾರಗಳು

ಜಯರಾಯನ ಹೆಂಡತಿಯು ಧರ್ಮನಿಷ್ಠಳೂ ಸದ್ಗುಣೆಯೂ ಆಗಿದ್ದಳು. ಇಂದಿರೆಯು ಒಬ್ಬಳೇ ಮಗಳಾದ್ದರಿಂದ ಇವಳನ್ನು ಜೋಕೆಯಿಂದ ಬೆಳಿಸಿ ದುರ್ಗುಣ

ಗಳು ಇವಳಿಗೆ ತಟ್ಟಬಾರದಂತೆ ಜಾಗ್ರತೆಯಿಂದ ನೋಡುತ್ತಿದ್ದಳು. ಇಂದಿರೆಯನ್ನು ಶಾಲೆಗೆ ಹಾಕಿ ದೇಶಭಾಷೆಯ ವಿದ್ಯಾಭ್ಯಾಸ ಮಾಡಿಸಿದ ಶ್ರೇಯಸ್ಸೆಲ್ಲ ಜಯರಾಯನ ಹೆಂಡತಿಯದೇ. ಇವಳನ್ನು ಮೈಸೂರ ಮಹಿಳಾಪಾಠಶಾಲೆಗೆ ಕಳಿಸಬೇಕೆಂಬ ವಿಚಾರವಾದರೂ ಇವಳ ತಾಯಿಯದೇ. ಆದರೆ ಆ ದುರ್ದೈವಿಯಾದ ತಾಯಿಯು ತನ್ನ ಮಗಳ ಉತ್ಸವಗಳನ್ನು ನೋಡದೆ ತನ್ನ ಕಂಕಣದ ಕಯ್ಮೇಲುಮಾಡಿಕೊಂಡು ಹೊರಟುಹೋದಳು. ಜಯರಾಯನು ತನ್ನ ಮಗಳನ್ನು ಮೈಸೂರ ಮಹಿಳಾ ಪಾಠಶಾಲೆಯಲ್ಲಿ ಮೂರು ವರುಷ ಇಟ್ಟು ಆ ಮೇಲೆ ಇಂದಿರೆಯ ನೈತಿಕ ಮಾನಸಿಕ ಶಿಕ್ಷಣಗಳ ಭಾರವನ್ನು ದೇವಯಾನಿಯ ಮೇಲೆ ಹಾಕಿ ತಾನು ಸ್ವಸ್ಥವಾಗಿ ಬೆಂಗಳೂರಲ್ಲಿ ತನ್ನ ವ್ಯಾಪಾರದಲ್ಲಿಯೇ ನಿರತನಾಗಿದ್ದನು.

ಜಯರಾಯನು ತನ್ನ ಮಗಳಿಗೆ ನಿಷ್ಠುರವಾದ ರೀತಿಯಿಂದ ಉಪದೇಶಗಳನ್ನೆಂದೂ ಮಾಡುತ್ತಿದ್ದಿಲ್ಲ. ಯೌವನಸ್ಥರಿಗೆ ಮೇಲಿಂದ ಮೇಲೆ ಉಪದೇಶ ಮಾಡಹತ್ತಿದರೆ ಉಪದೇಶ ಮಾಡುವವರಿಗೇ ಉಪದೇಶದ ಬೆಲೆ ತಿಳಿದಿಲ್ಲೆಂದು ಅವರು ನಂಬುವರೆಂದು ತಿಳಿದು, ತಾನೂ ಅದರಂತೆ ಮಾಡಿದರೆ ತನ್ನ ಮರ್ಯಾದೆಯಳಿಯಲಿಕ್ಕಿಲ್ಲೆಂಬ ಭೀತಿಯಿಂದ ಆದಷ್ಟು ವಿನೋದದೊಡನೆ ಜಯರಾಯನು ಇಂದಿರೆಗೆ ಉಪದೇಶ ಮಾಡುತ್ತಿದ್ದನು.

ಕೆಲವು ದಿವಸಗಳ ಮೇಲೆ ಜಯರಾಯನು ತನ್ನ ಮಗಳನ್ನು ಬೆಂಗಳೂರಿಗೆ ಕರಕೊಂಡು ಬಂದನು, ಅಲ್ಲಿ ಸಾವಕಾಶವಾಗಿ ದೊಡ್ಡ ದೊಡ್ಡ ಸ್ತ್ರೀಪುರುಷರನ್ನು ತನ್ನ ಮನೆಗೆ ತಂದು ಇಂದಿರೆಗೆ ಅವರ ಪರಿಚಯ ಮಾಡಿಕೊಡ ಹತ್ತಿದನು. ಇಂದಿರೆಯು ಬಂದ ಎಂಟು ದಿವಸಗಳ ಪರ್ಯಂತರ ರಮಾಕಾಂತನು ಯಾವಾಗಾದರೂ ಅವಳ ಮನೆಗೆ ಬಂದು ಭೆಟ್ಟಿಯಾಗಿ ಹೋಗುತ್ತಿದ್ದನು, ಇಂದಿರೆಯ ಸ್ನೇಹವು ರಮಾಕಾಂತನಲ್ಲಿ ಅತಿಶಯವಾದದ್ದನ್ನು ಕಂಡು ಜಯರಾಯನು ಬುದ್ಧ್ಯಾ ರಮಾಕಾಂತನನ್ನು ತನ್ನ ಮನೆಗೆ ಕರೆಯದಂತಾದನು. ಯಾಕಂದರೆ ಜಯರಾಯನ ಮನಸ್ಸಿನಲ್ಲಿ ಇಂದಿರೆಯನ್ನು ಶ್ರೀಕಂಠನಿಗಾಗಲೀ ಮತ್ಯಾವ ಜಹಗೀರದಾರನಿಗಾಗಲೀ ಕೊಡುವದಿತ್ತು. ಇಂದಿರಾ ರಮಾಕಾಂತರ ಪ್ರೀತಿ ಕೂತರೆ ತನ್ನಾಲೋಚನೆಗೆ ಬಾಧೆ ಬಂದೀತೆಂಬ ಭೀತಿಯು ಜಯರಾಯನಲ್ಲಿ ಉಂಟಾಗಿತ್ತು.

ಒಂದು ದಿನ ರಾತ್ರಿ ಇಂದಿರೆಯು ತನ್ನ ಕೋಣೆಯಲ್ಲಿ ಓದುತ್ತ ಕುಳಿತಿದ್ದಳು. ಬೆಳ್ಳಿಯ ದೀಪವೃಕ್ಷದಲ್ಲಿ ಮೇಣಬತ್ತಿಯು ಉರಿಯುತ್ತಿತ್ತು. ಅವಳು

ಕಯ್ಯಲ್ಲಿ ಬಂಕೀಮಚಂದ್ರ ಚಟರ್ಜಿಯವರ "ವಿಷವೃಕ್ಷ" ಎಂಬ ಸುರಸವಾದ ಚಿಕ್ಕ ಕಾದಂಬರಿಯನ್ನು ತಕ್ಕೊಂಡು ಓದುತ್ತ ಕುಳಿತಾಗ್ಯೆ ಜಯರಾಯನು ಬಂದು ಬಾಕಿಲ ಬಡೆದನು. ಇಂದಿರೆಯೆದ್ದು ಬಾಕಿಲ ತೆರೆದಳು.

"ಇಂದಿರಾ, ನಿನಗೆ ನಿದ್ರೆಯಿಲ್ಲೇ ಇಲ್ಲವೇನು ? ರಾತ್ರೆಯಲ್ಲಿ ಓದುವ ಚಟ ನೀನು ಬಿಡುವದಿಲ್ಲ !"

"ಅಪ್ಪಾ, ಇದು ಕೆಟ್ಟದ್ದೇನು ?"

"ಸಂಶಯವೇಕೆ ? ನಮ್ಮಂಥ ವೃದ್ಧರಿಗೆ ನಿದ್ರೆ ಕಡಿಮೆ. ನನಗಂತೂ ಹೊತ್ತೇ ಸಾಲುವದಿಲ್ಲ ; ಆದರೆ ನೀನೂ ಹಾಗೆ ಮಾಡಬಹುದೇ ? ತೀವ್ರ ಮಲಗಿ ಕೊಳ್ಳುವದೊಳ್ಳೇದು."

"ರಾತ್ರೆಯಲ್ಲೆಲ್ಲವೂ ಶಾಂತವಿರುವದರಿಂದ ವಾಚನದಲ್ಲಿ ಮನಸ್ಸು ಚನ್ನಾಗಿ ಕೂಡುತ್ತದೆ."

"ಅಂದರೂ ಆದಷ್ಟು ನಿದ್ದೆ ಕಾಯುವದನ್ನು ಕಡಮೆ ಮಾಡಬೇಕು. ಇಲ್ಲ ದಿದ್ದರೆ ಪ್ರಕೃತಿ ಕೆಟ್ಟು ನಿನ್ನೀ ಅಲ್ಹಾದಕರವಾದ ಸೌಂದರ್ಯವು ಕೆಟ್ಟರೆ ನಿನಗೇ ವಿಷಾದವಾಗುವದಲ್ಲ !"

"ಈಗ್ಯೇನು ಕೆಟ್ಟಿಲ್ಲವಲ್ಲ ! ಇನ್ನು ಮುಂದೆ ನಿಮ್ಮ ಸೂಚನೆಯ ಮೇರಿಗೆ ನಡಕೊಳ್ಳಲೆತ್ನಿಸುವೆನು." ಎಂದು ವಿನೋದದಿಂದ ನುಡಿದು ಇಂದಿರೆಯು ನಕ್ಕಳು.

"ಮುದ್ದು ಮಗಳೇ, ನಿನ್ನ ಲಾವಣ್ಯವು ಹೆಚ್ಚಾಗಿದೆ ಹೊರತು ಕಡಿಮೆ ಯಾಗಿಲ್ಲ. ಇಂದಿರಾ, ನಾನೊಂದು ಮಾತು ಕೇಳುತ್ತೇನೆ. ಯಥಾರ್ಥವಾಗಿ ಉತ್ತರ ಕೊಡುವಿಯಾ ?"

"ಅಪ್ಪಾ, ನಿಮಗೆ ನಾನು ಅಯಥಾರ್ಥವಾದ ಉತ್ತರಗಳನ್ನೆಂದೂ ಕೊಟ್ಟಿಲ್ಲ. ಏನು ಕೇಳುವದದೆ ?"

"ಶ್ರೀಕಂಠ ಬಹದ್ದರನು ನಿನಗೆ ತಕ್ಕ ವರನಾಗಿರುವನೇನು ?"

"ಇಂಥ ಮಾತಿನಲ್ಲಿ ನಾನೇನು ಹೇಳಬೇಕು ? ಶ್ರೀಕಂಠ ಬಹದ್ದರನ ಗುಣ ಪರೀಕ್ಷೆ ಇನ್ನೂ ಚನ್ನಾಗಿ ಆಗಿಲ್ಲ. ಅವನೊಂದು ತಮಾಸೆಯ ಮನುಷ್ಯನಿರುವ ನಲ್ಲವೇ ? ಅವನ ವಯಸ್ಸು ಎಷ್ಟಾದೀತು ?"

"ಅವನ ಮೋರೇ ಮೇಲಿಂದ ವಯಸ್ಸೆಷ್ಟಾದೀತೆಂದು ನಿನಗೆ ತಿಳಿಯು ವಂತಿಲ್ಲವೆ ?"

"ಚಿಕ್ಕವನಿರಬಹುದು, ಆದರೆ ತಾರುಣ್ಯದಲ್ಲಿಯೇ ಅವನಿಗೆ ವೃದ್ಧಾಪ್ಯ

ಬಂದಂತೆ ಕಾಣುತ್ತದೆ.''

"ಈಗಿನ ತರುಣರೇ ಹಾಗಿರುವರು. ಅವರು ಸ್ತ್ರೀಯರೇ ಇರಲಿ ಪುರುಷರೇ ಇರಲಿ, ಮುದುಕಿಯರು ಆರಾರು ತಾಸು ರಾತ್ರಿ ಓದುತ್ತ ಕೂಡ್ರುತಕ್ಕದ್ದು" ಎಂದು ಜಯರಾಯನು ಇಂದಿರೆಯ ಮುಖ ನೋಡಿ ನಕ್ಕನು.

"ಅದೇನೋ, ಶ್ರೀಕಂಠನಕಿಂತ ನೀವೇ ತರುಣರಂತೆ ಕಾಣುವಿರಿ" ಎಂದು ಇಂದಿರೆಯು ದೃಢಾಂಗನೂ ಆಜಾನುಬಾಹುವೂ ಆದ ತನ್ನ ತಂದೆಯನ್ನು ನೋಡಿ ನುಡಿದಳು.

ಜಯರಾಯನು ತನ್ನ ಕೈ ಮೈ ನೋಡಿಕೊಂಡು ಮುಗುಳು ನಗೆ ನಕ್ಕು "ಇಂದಿರಾ, ನಾನು ಐವತ್ತೈದು ವರುಷದ ಉತ್ತರ ವಯಸ್ಸಿನವನು. ತರುಣರ ಸಾದೃಶ್ಯ ನನಗೆ ಹೇಗೆ ಬಂದೀತು ?" ಎಂದನು.

"ಆದರೂ ಶ್ರೀಕಂಠನು ನಿಮ್ಮಕಿಂತ ಮುಂಚೆ ಹುಟ್ಟಿದವನಂತೆ ಕಾಣುತ್ತಾನಲ್ಲ! ಯಾರ ಮಯ್ಯಲ್ಲಿ ರಕ್ತ ಚಿಮ್ಮುತ್ತಿರುವದೋ ಅವರೇ ತರುಣರೆಂದು ಆಯುರ್ವಿದ್ಯಾಪ್ರವೀಣರಾದ ಕೆಲವರ ಅಭಿಪ್ರಾಯವಿರುವದು.''

"ಶ್ರೀಕಂಠನು ರಕ್ತಚಿಮ್ಮುವ ತರುಣನೂ ಚತುರನೂ ಇರುವನು" ಎಂದು ಜಯರಾಯನಂದನು.

"ಹೆಂಗಸರು ಮೂರು ಕಾಲಿನ ಹೆರಳು ಹಾಕಿಕೊಳ್ಳುವದಕ್ಕಿಂತಲೂ ಐದು ಕಾಲಿನ ಹೆರಳು ಹಾಕಿಕೊಂಡರೆ ಅವರಿಗೆ ಹೆಚ್ಚು ಶೋಭೆ ಬರುವದು, ಸಾದಾ ಶರಗಿನಕಿಂತ ತೋಪು ಶರಗಿನ ಸೀರೆಯು ಗೌರವರ್ಣದ ನಾರಿಯರಿಗೆ ಒಪ್ಪುತ್ತದೆ, ಹೂಮಾಲೆಗೆ ನಡುನಡುವೆ ದವನ ಹಾಕಿರಬೇಕು. ಮುಂತಾದ ಹುಚ್ಚುಚ್ಚು ಮಾತುಗಳಿಗೆ ಚಾತುರ್ಯವೆಂದರೆ ಶ್ರೀಕಂಠನು ಚತುರನೇ ಸರಿ.''

"ಹೆಣ್ಣುಮಕ್ಕಳ ವಿನೋದಕ್ಕಾಗಿ ಅವನು ಹೀಗೆ ಮಾತಾಡಿರಬಹುದು, ಅಂದರೇನಾಯಿತು ? ನನ್ನ ಮುಂದೆ ಯಾವಾಗಲೂ ಅವನು ಚಾತುರ್ಯದ ಮಾತುಗಳನ್ನೇ ಆಡುತ್ತಿರುವನಲ್ಲ! ಆದರೂ ನಿನಗೆ ಅಂತಿಂತ ಮಾತುಗಳು ಸರಿಬರುವದಿಲ್ಲೆಂದು ಅವನಿಗೆ ಸೂಚಿಸುತ್ತೇನೆ."

"ಹಾಗೆ ಮಾತ್ರ ಮಾಡಬೇಡಿರಿ. ನಾನು ಮೂರ್ಖಳಿರುವೆನೆಂದು ಶ್ರೀಕಂಠನು ತಿಳುಕೊಂಡರೆ ಒಳ್ಳೇದಾಗುವದು."

ಸದ್ಯಕ್ಕೆ ಈ ಮಾತು ಬೆಳೆಸುವದು ಇಷ್ಟವಲ್ಲೆಂದು ತಿಳಿದು ಜಯರಾಯನು "ರಮಾಕಾಂತನು ಎಂಥ ಮನುಷ್ಯನಿರುವನೆಂಬುದು ನೀನು ಮನಗಂಡಿರುವಿ

ಯೇನು ?" ಎಂದು ಕೇಳಿದನು.

"ಅವನಂಥ ಸಜ್ಜನನೂ, ಚತುರನೂ, ವಿದ್ವಾಂಸನೂ ಆದ ತರುಣನನ್ನು ನಾನು ಕಂಡೇ ಇಲ್ಲ. ಚಾತುರ್ಯಹೀನರು ನಾಲ್ಕು ಮಾತು ಕಲಿತಿಟ್ಟುಕೊಂಡು ಪ್ರಸಂಗ ಬಂದಾಗ್ಯೆ ಅವುಗಳನ್ನಾಡಿ ಚತುರರೆಂದೆನಿಸಿಕೊಳ್ಳುವರು. ಮತ್ತೊಮ್ಮೆ ಅಂಥ ಪ್ರಸಂಗ ಬಂದಿತೆಂದರೆ ಕೀಲಿಕೊಟ್ಟ ಗಡಿಯಾರದಂತೆ ಅವೇ ಮಾತುಗಳನ್ನೇ ಬಾರಿಸುವರು. ಆದರೆ ರಮಾಕಾಂತನ ಚಾತುರ್ಯವು ವಿಲಕ್ಷಣವಾದದ್ದು. ಅವನು ಬಲಾಢ್ಯನೂ ಸುಸ್ವರೂಪಿಯೂ ಇರುವನಲ್ಲವೇ ?"

ಇದನ್ನು ಕೇಳಿ ಜಯರಾಯನಿಗೆ ತನ್ನ ಮನೋರಥದ ಅಚ್ಚೇ ಮುರಿಯಿತೆಂದೆನಿಸಿತು. ಅವನು ವಿಸ್ಮಿತನಾಗಿ ಇಂದಿರೆಯ ಮುಖವನ್ನು ಟಕಮಕ ನೋಡಹತ್ತಿ—

"ರಮಾಕಾಂತನ ಸ್ಥಿತಿಯನ್ನು ನಾನು ಚೆನ್ನಾಗಿ ಬಲ್ಲೆನು. ಅವನು ನನ್ನ ಬಾಲ್ಯದ ಸ್ನೇಹಿತನಾದ ಕಮಲಾಕಾಂತನ ಮಗನು. ಈ ತರುಣನು ಬುದ್ಧಿವಂತನಿದ್ದರೂ ಬಡವನಾಗಿರುವನು. ಅವನಿಗೇನಾದರೂ ಹೊಟ್ಟೆ ಮಾರ್ಗ ಹಚ್ಚಿಕೊಡಬೇಕು" ಎಂದಂದನು. ಹೀಗನ್ನುವುದರಲ್ಲಿ ರಮಾಕಾಂತನ ವಿಷಯಕ್ಕೆ ಇಂದಿರೆಯಲ್ಲಿ ಅನಾದರಬುದ್ಧಿ ಹುಟ್ಟಬೇಕೆಂದು ಜಯರಾಯನ ಉದ್ದೇಶವಿತ್ತು.

"ರಮಾಕಾಂತನೇ ತನ್ನ ಸ್ಥಿತಿ ಹೀಗಿರುವದೆಂದು ನನ್ನ ಮುಂದೆ ಮೊದಲೇ ಹೇಳಿರುವನು. ನೀವು ಅವನಿಗೆ ಬೇಕಾದ ಸಹಾಯ ಮಾಡಬಹುದಲ್ಲವೇ ?"

"ನನ್ನ ಕಯ್ಯಿಂದಾದಷ್ಟು ಸಹಾಯ ಮಾಡೇಮಾಡುತ್ತೇನೆ. ಆದರೆ ನನ್ನ ವಿಚಾರಗಳು ಅವನಿಗೆ ಸರಿಬರುವವೋ ಇಲ್ಲವೋ ಹೇಗೆ ಹೇಳಬೇಕು? ರಮಾಕಾಂತನ ಆಢ್ಯತೆ ನೋಡಿದರೆ ನನ್ನ ಸಹಾಯದ ಅಪೇಕ್ಷೆಯೇ ಅವನಿಗಿಲ್ಲೆಂದು ನಂಬುತ್ತೇನೆ."

"ಅವನು ನಿಮ್ಮ ಸ್ನೇಹಿತನ ಮಗನೇ ಎಂದು ಹೇಳುವಿರಲ್ಲ! ಆ ಕಾರಣ ನಾನು ವಿಶೇಷ ಆಗ್ರಹದೊಂದಿಗೆ ಹೇಳುವ ಅವಶ್ಯವಿಲ್ಲ. ಶ್ರೀಕಂಠನಿಗೆ ಸಹಾಯ ಮಾಡುವದಕಿಂತಲೂ ಇವನಿಗೆ ಸಹಾಯ ಮಾಡಿದರೆ ನಿಮಗೆ ಸುಲಭವಾಗಿ ಕೀರ್ತಿ ಬರುವಂತಿದೆ" ಎಂದಿಂದಿರೆಯು ಹೇಳಿದಳು.

"ನಿನ್ನದೂ ಅವನದೂ ರಹಸ್ಯ ಬಹಳಿದ್ದಂತೆ ಕಾಣುತ್ತದೆ." ಎಂದು ಜಯರಾಯನು ಕಣ್ಣು ಬಡಿದು ನುಡಿದನು.

"ನೀವು ಕಣ್ಣು ಒಡಿಯುವದು ನನಗೆ ತಿಳಿಯುವದಿಲ್ಲೇನು? ಅವನು ನನಗೆ ಹೇಳಿಕೊಂಡು ನನ್ನ ಮುಖಾಂತರ ನಿಮ್ಮ ಸಹಾಯ ಬೇಡುವನೆಂದು ತಿಳಿದಿದ್ದೀರಾದೀತು. ರಮಾಕಾಂತನು ಅಂಥ ಕೀಳುವಿಚಾರದವನೇ ಅಲ್ಲ."

ಜಯರಾಯನ ಮುಖದಲ್ಲಿ ನಗೆ ಕಂಡುಬಂದಿತು. ಅವನ ಮನಸ್ಸಿನಲ್ಲಿಯ ಮತ್ತೊಂದು ಸಂಶಯವು ಹಾರಿಹೋದದ್ದರಿಂದ ಜಯರಾಯನು ಸಂತೋಷ ದಿಂದ ನಕ್ಕನು.

"ನೀವು ನಗಬೇಡಿರಿ. ರಮಾಕಾಂತನು ಅನ್ಯರ ಸಹಾಯ ಬೇಡಿಕೊಳ್ಳುತ್ತ ತಿರುಗಾಡುವನಲ್ಲ. ನಾವಾಗಿಯೇ ತಿಳಿದು ಆ ಧೀರನಿಗೆ ಸಹಾಯ ಮಾಡತಕ್ಕದ್ದು. ಲಾಂಗೂಲಚಾಲನ ಮಾಡುವವನೇ ಅವನು?" ಎಂದು ಇಂದಿರೆಯು ಗಂಭೀರ ತನದಿಂದ ನುಡಿದಳು.

"ರಮಾಕಾಂತನು ನೀನು ಹೇಳುವಂತೆ ಸ್ವಾವಲಂಬಿಯೇ ಇರುವನು. ಸ್ವಾವಲಂಬನವು ಉದ್ಯೋಗಸ್ಥರಿಗೆ ಅವಶ್ಯವಾದ ಗುಣವು. ರಮಾಕಾಂತನು ಕೇಳಿದ ಸಹಾಯ ಮಾಡಲಿಕ್ಕೆ ನಾನು ಸಿದ್ಧನಾಗಿರುವೆನು. ನೀನು ಅತನ ಪಕ್ಷಪಾತ ಹಿಡಿದದ್ದು ನೋಡಿ ನನಗೆ ಆನಂದವಾಗಿರುವದು."

"ಇದರಲ್ಲಿ ಪಕ್ಷಪಾತವೇತರದು? ಪರೀಕ್ಷಿಸುತ್ತ ನಡೆದ ಹಾಗೆ ಅವನ ಗುಣಗಳು ಹೆಚ್ಚಾಗಿಯೇ ಇರುವಂತೆ ಕಂಡು ಬರುತ್ತದೆ. ನೀವು ನಗಬೇಡಿರಿ. ನಾನು ಈ ದಿವಸ ಇವನ ಸ್ತುತಿ ಮಾಡಿ ಮರು ದಿವಸ ನಿಂದಿಸುವೆನೆಂದು ನೀವು ತಿಳಕೊಂಡಿದ್ದೀರಾದೀತು. ನಾನು ಹೀಗೆ ಒಂದೆರಡಾವರ್ತಿ ಮಾಡಿದ್ದೇನಾದೀತು. ರತ್ನಶೋಧಕನು ತಳತಳ ಹೊಳಿಯುವ ಹರಳನ್ನು ರತ್ನವೆಂದೆತ್ತಿಕೊಂಡು ಹಿಂದಿ ನಿಂದ ಅದು ಹರಳೇ ಆದ ಪಕ್ಷದಲ್ಲಿ ಬಿಸಾಡಿ ಬಿಡಬಾರದೇನು? ನನ್ನ ಪರೀಕ್ಷೆ ಯಲ್ಲಿ ರಮಾಕಾಂತನು ಗುಣಮಣಿಯೇ ಎಂದು ನಿಶ್ಚಯವಾಗಿರುತ್ತದೆ. ಅಂದ ಮೇಲೆ ನಾನು ಅವನನ್ನು ಹೇಗೆ ನಿಂದಿಸುವೆನು?" ಎಂದು ಇಂದಿರೆಯು ನಿರ್ವ್ಯಾಜಭಾವದಿಂದ ನುಡಿದಳು.

ಇಂದಿರೆಯು ರಮಾಕಾಂತನಲ್ಲಿ ಪ್ರೀತಿ ಇಟ್ಟಂತೆ ಕಾಣಲಿಲ್ಲಾದ್ದರಿಂದ ಜಯರಾಯನಿಗೆ ಜೀವನದಲ್ಲಿ ಜೀವ ಬಂದಂತಾಯಿತು. ಮುಂದೆ, ತಂದೆ ಮಕ್ಕಳ ಸಂವಾದವು ಅನ್ಯವಿಷಯಗಳ ಮೇಲೆ ಹೊರಳಿತು. ಕಡೆಗೆ ಜಯರಾಯನು ಇಂದಿರೆಯ ಮೇಜಿನ ಮೇಲಿದ್ದ ಗಡಿಯಾರ ನೋಡಿ ಅವಳ ಹೆಗಲ ಮೇಲೆ ಚಪ್ಪರಿಸಿ, ಅಕ್ಕಾ, ನೋಡಿದಿಯಾ ಸರಿ ರಾತ್ರಿಯಾಯಿತು. ಇನ್ನು ದೀಪಕ್ಕೆ

ಅಪ್ಪಣೆ ಕೊಟ್ಟು ಮಲಗಿಕೋ " ಎಂದು ಹೇಳಿ ಜಯರಾಯನು ತನ್ನ ಕೋಣೆಗೆ ಹೊರಟುಹೋದನು.

ಇಂದಿರೆಗೆ ಯಾವದೂ ಕಾರ್ಯ ಸಾಧಿಸಿಕೊಳ್ಳುವ ಚಿಂತೆಯಿಲ್ಲದ್ದರಿಂದ ಅವಳು ಶೀಘ್ರವೇ ನಿದ್ರಾವಶಳಾದಳು. ಆದರೆ ಕಾರ್ಯಸಾಧುವಾದ ಜಯರಾಯನಿಗೆ ಮಾತ್ರ ನಿದ್ದೆ ಬರಲೊಲ್ಲದು, ಎದುರಿಗೇ ಮೇಜಿನ ಮೇಲೆ ಶಾಮದಾನಿಯಲ್ಲಿ ಮೇಣಬತ್ತಿಯುರಿಯುತ್ತಿತ್ತು. ಮೃದುತರವಾದ ಲೇಪಿನಲ್ಲಿ ಕುಸಿಬಿದ್ದಿದ್ದರೂ ಅವನ ಕಣ್ಣಿಗೆ ಕಣ್ಣು ಹತ್ತಲೊಲ್ಲದು. ಅವನು ನಡಿಸಿದ ಅನುಸಂಧಾನದ ವಿಚಾರಗಳು ತಲೆಯಲ್ಲಿ ಭ್ರಮಿಸುತ್ತಿದ್ದವು.

ಶ್ರೀಕಂಠನು ನನ್ನ ಅಳಿಯನಾದರೆ ದೊಡ್ಡವರ ಸಂಬಂಧಿಕನಾಗಿ ಸರದಾರ, ದಿವಾನ, ಮುಂತಾದವರ ಸಮಾನಸ್ಕಂದನಾಗುವೆನು. ಆ ಮೇಲೆ ರಾಜಕಾರಣದಲ್ಲಿ ಕೂಡಾ ನಾನು ಕೈಹಾಕಬಹುದು. ' ರಾವಬಹದ್ದೂರ ' ಎಂಬ ಬಿರುದು ನನಗೆ ದೊರೆಯುವದು. ಇಷ್ಟಾಗದಿದ್ದರೆ ನನ್ನ ಹಣದ ರಾಶಿಯಿಂದೇನು ಪ್ರಯೋಜನ? ಈ ಪರಿಯಾದ ಅವನ ಮನೋರಥಕ್ಕೆ ಅಡ್ಡಕಟ್ಟಿಕೊಂಡು ನಿಂತಂತೆ ತರುಣನೂ ಬಲಾಢ್ಯನೂ ಚತುರನೂ ಆದ ರಮಾಕಾಂತನು ಅವನೆದುರಿಗೆ ಬಂದು ನಿಂತಂತಾಯಿತು. ಇಂಥ ಗುಣರೂಪ ಸಂಪನ್ನನಾದ ಯೌವನಸ್ಥನ ಮುಂದೆ ತಾನು ಗೊತ್ತು ಮಾಡಿಕೊಂಡ ದೊಡ್ಡವರ ಮಗನ ಬೆಳಕು ಹೇಗೆ ಬೀಳಬೇಕು ? ಪ್ರಮದೆಯರಿಗೆ ' ತರುಣ ಕುಲಿನ ಗೋರಾ ' ಎಂಬಂತೆ ರಮಾಕಾಂತನಂಥ ವರನೇ ಬೇಕಾಗಿರುವನು. ಇದಕ್ಕೇನು ಯೋಚನೆಮಾಡಬೇಕು ? ಇಂದಿರೆಯನ್ನು ನಿರ್ಬಂಧಿಸಿ ಅವಳನ್ನು ಬಲಾತ್ಕಾರದಿಂದ ಶ್ರೀಕಂಠನ ಕೊರಳಿಗೆ ಕಟ್ಟಿದರೆ ತನಗಿದ್ದೊಬ್ಬಳೇ ಮಗಳ ಸ್ಥಿತಿ ಏನಾಗುವದೋ ? ಅವಳಗಭಿಮತನಾದ ತರುಣನಿಗೆ ಕೊಟ್ಟರೆ ತನ್ನ ಮನೋರಾಜ್ಯವೆಲ್ಲ ಹಾಳಾಗಿ ಹೋಗುವುದು. ಯಾವ ದೇವಯಾನಿಯ ಪ್ರೀತಿಯ ಸಂಪಾದನಕ್ಕೆ ತಾನೂ ಕಮಲಾಕಾಂತನೂ ಪ್ರಯತ್ನಿಸುತ್ತಿದ್ದರೋ ಅದೇ ದೇವಯಾನಿಯ ಪೋಷ್ಯಪುತ್ರನಾಗಿ ಬಂದು ರಮಾಕಾಂತನು ತನಗೆ ತಿಳಿಯದ ಮಾರ್ಗದಲ್ಲಿಯೇ ಇಂದಿರೆಯ ಸ್ನೇಹಿತನಾದನು, ಇದಕ್ಕೇನು ದೈವಯೋಗವೆನ್ನಬೇಕೋ ಏನು ?

ಕಮಲಕಾಂತ ದೇವಯಾನಿಯರ ಪ್ರೀತಿಯ ವಿಘಾತಕನು ತಾನಾಗಿದ್ದು ಅದರ ಸೇಡು ತೀರಿಸಿಕೊಳ್ಳಬೇಕೆಂದು ದೇವಯಾನಿಯು ಅಗತ್ಯದಿಂದ ರಮಾಕಾಂತನನ್ನು ಕರಿಸಿಕೊಂಡಿರುವಳೇನು ? ಹೀಗಿದ್ದರೂ ಇದ್ದೀತು, ದೇವಯಾನಿಯು

ಯುಕ್ತಿಪ್ರಯುಕ್ತಿಗಳಿಂದ ಇಂದಿರೆಯು ಪ್ರೀತಿಯು ರಮಾಕಾಂತನ ಮೇಲೆ ಕೂಡ್ರುವಂತೆ ಮಾಡಿದರೆ ತಾನು ಮಾಡಿದ್ದಕ್ಕೆ ಸೇರಿಗೆ ಸವ್ವಾಸೇರು ಮುಟ್ಟಿದಂತಾಗುವದು. ಒಳ್ಳೇದು ದೇವಯಾನಿ! ನನ್ನ ಮಗಳಿಗೆ ಸುಖವಿಲ್ಲದಂತಾದರೂ ಚಿಂತಿಲ್ಲ; ನೀನು ರಚಿಸಿದ ವ್ಯೂಹವನ್ನು ಮುರಿಯುವದಕ್ಕಾಗಿಯೇ ಇವರೀರ್ವರ ವಿವಾಹಕ್ಕೆ ವಿಘ್ನ ತರುವೆನು. ಇದನ್ನು ನೀನು ಪದರಿಗೆ ಗಂಟು ಹಾಕಿಕೊಂಡಿರು!" ಈ ರೀತಿ ತನ್ನ ಮನದಲ್ಲಿ ಪ್ರತಿಜ್ಞೆ ಮಾಡಿದನು.

ಅಬಲೆಯರ ಹೃದಯುವು ಕೋಮಲವಾದ ಪುಷ್ಪದಂತಿರುವದು. ಅದನ್ನೊಮ್ಮೆ ಗಾಸಿಮಾಡಿದರೆ ಆಯಿತು. ಬಾಡಿಹೋಗಿ ಮತ್ತೆ ಯಾವ ಉಪಾಯುಗಳಿಂದಲೂ ಪೂರ್ವಸ್ಥಿತಿಯನ್ನು ಹೊಂದಲಾರದು. ಇಂದಿರೆಯು ಉಲ್ಲಾಸವೃತ್ತಿಯುವಳಿರುವಳು. ಅವಳ ಲಾವಣ್ಯವು ಉಲ್ಲಾಸವನ್ನೀಯುವದಾಗಿರುವದು. ಪುಷ್ಪರಾಶಿಯಲ್ಲಿ ಬೆಂಕಿಯನ್ನು ಹಾಕಿದಂತೆ ಆಶಾಭಂಗಮಾಡಿ ಇಂದಿರೆಯು ಸುಕುಮಾರತೆಯನ್ನು ತಾನೇ ಕುಳಿತು ನಾಶಮಾಡಬಹುದೆ? ದೇವಯಾನಿಯ ಗುಟ್ಟಿಗೆ ಕೇರು ಹಾಕಲಿಕ್ಕೆ ಹೋಗಿ ನನ್ನ ಮಗಳ ಸೌಖ್ಯದಲ್ಲಿ ವಿಷಕಲಿಸಿದೆನಾದರೂ ನನ್ನ ಮೇಲಿನ ಸೇಡು ತೀರಿಸಿಕೊಳ್ಳುವೆನೆಂಬ ದೇವಯಾನಿಯು ಪಂಥವು ಗೆದ್ದಂತಾಗುದಿಲ್ಲವೇನು? ಹೀಗೆ ಸಾವಿರಾರು ವಿಚಾರತರಂಗಗಳು ಎಡೆಬಿಡದೆ ಜಯರಾಯನ ತಲೆಗೆ ಹೊಡಿಯುತ್ತಿದ್ದವಾದದ್ದರಿಂದ ಜಯರಾಯನು ಅಸ್ವಸ್ಥಚಿತ್ತನಾಗಿ ಹಾಸಿಗೆಯಲ್ಲಿ ಹೊರಳಾಡುತ್ತಿದ್ದನು.

ಇಂದಿರೆಯು ತಲೆಯಲ್ಲಿ ಮಹತ್ವಾಕಾಂಕ್ಷೆಯು ವಿಷವನ್ನು ಸೇರಿಸಿದೆನೆಂದರೆ ಅವಳು ಶುದ್ಧಾಂತಃಕರಣಗಳನ್ನೊತ್ತಿಟ್ಟು ಲೌಕಿಕ ವಿಷಯಗಳಲ್ಲಿ ಅಭಿಲಾಷೆಯುಳ್ಳವಳಾಗಿ ಧನೈಶ್ವರ್ಯವಂತರಾದವರ ಸೊಸೆಯಾಗಲಿಕ್ಕೊಪ್ಪುವಳು. ಹೀಗಾದರೆ ಒತ್ತಾಯ ಮಾಡಿದ ಅಪವಾದ ತನಗೆ ತಪ್ಪದೆ ತಾನೊಡ್ಡಿದ ಬಲೆಯಲ್ಲಿ ಇಂದಿರೆಯು ಸ್ವೇಚ್ಛೆಯಿಂದ ಬೀಳುವಳು ಎಂದು ಜಯರಾಯನು ವಿಚಾರ ಮಾಡುವಷ್ಟರಲ್ಲಿಯೇ ದೀಪವು ಫಕ್ಕನೆ ನಂದಿಹೋಯಿತು. ತನ್ನ ಯೋಚನೆಗಳಿಗಿದೊಂದು ಅಪಶಕುನವಾಯಿತೆಂದು ಶಂಕಿತನಾಗಿ ಜಯರಾಯನು ಶಾಲು ಮುಸುಕಿಟ್ಟುಕೊಂಡು ಮಲಗಿಕೊಂಡನು.

ಒಂದು ದಿನ ಪ್ರಾತಃಕಾಲದಲ್ಲಿ ಪಂಡಿತ, ಡಾಕ್ತರ, ಶ್ರೀಕಂಠ ಬಹದ್ದರ ಮೊದಲಾದವರು ದಿವಾನಖಾನೆಯಲ್ಲಿ ಮಾತಾಡುತ್ತ ಕುಳಿತಾಗ್ಯೆ ಇಂದಿರೆಯು ಹೀಗೆ ಸಂಭಾಷಣ ಸೂತ್ರ ಹಿಡಿದೆ. "ಮಹತ್ವಾಕಾಂಕ್ಷೆಯುಂದರೇನು?" ಎಂದು

ಅಲ್ಲಿದ್ದವರನ್ನು ನೋಡಿ ಕೇಳಿದಳು.

"ಇದೊಂದು ಒಡೆಯುತಕ್ಕ ಒಗಟವಾಗಿದ್ದರೆ ನಾನು ಅದರಲ್ಲಿ ಮನಸ್ಸು ಹಾಕುವದಿಲ್ಲ. ಹೆಂಗಸರಿಗೂ ಒಗಟಕ್ಕೂ ನಂಟು." ಎಂದು ಶ್ರೀಕಂಠನಂದನು.

"ಹಾಗಲ್ಲ, ಜಿಜ್ಞಾಸುವಾದ ಶಿಷ್ಯನು ಗುರುಗಳನ್ನು ಕೇಳುವಂತೆ ಸರಲವಾದ ಭಾವದಿಂದ ಕೇಳುತ್ತೇನೆ."

"ಮಹಾತ್ಮರಲ್ಲಿಯ ನೀಚವಾದ ಮಾನಸಿಕ ದುರ್ಬಲತೆಗೆ ಮಹತ್ವಾಕಾಂಕ್ಷೆಯನ್ನಬಹುದು." ಎಂದು ಡಾಕ್ತರನಂದನು.

"ಡಾಕ್ತರರೇ, ನೀವು ಈ ಅಸಮರ್ಪಕವಾದ ವ್ಯಾಖ್ಯೆಯನ್ನೆಲ್ಲಿ ಕಲಿತು ಕೊಂಡಿರಿ ?" ಎಂದು ಇಂದಿರೆಯು ಕೇಳಿದಳು.

"ಎಲ್ಲಿ ? ಮೊನ್ನೆದಿನ ಗಣೇಶ ಸುಬ್ಬರಾಯರು ಉಪನ್ಯಾಸ ಮಾಡುವಾಗ್ಗೆ ಮಹತ್ವಾಕಾಂಕ್ಷೆಯ ವ್ಯಾಖ್ಯೆಯನ್ನು ನಾನು ಹೇಳಿದಂತೆಯೇ ಮಾಡಿದರಲ್ಲ !" ಎಂದು ಡಾಕ್ತರನಂದನು.

"ಆಗಲಿ, ಉದಾರಚರಿತರ ಮಾನಸಿಕ ದುರ್ಬಲತೆ ಯಾವದು ?" ಎಂದು ಇಂದಿರೆಯು ಕೇಳಿದಳು.

"ಮಹತ್ವಾಕಾಂಕ್ಷೆಯು, ಮೇಲೇ ಇದೆ ಅಲ್ಲ !"

ಶಾಬಾಸ್ ಡಾಕ್ತರರೇ, ಒಳ್ಳೇ ಉತ್ತರ ಕೊಟ್ಟಿರಿ. ತರ್ಕಶಾಸ್ತ್ರಪ್ರವೀಣರೇ ತಾವು !"

"ಮಹತ್ವಾಕಾಂಕ್ಷೆಯೆಂದರೆ ಸ್ಫೂರ್ತಿಯುಳ್ಳದಾದ ಒಂದು ಗುಣವು, ಮಹತ್ವಾಕಾಂಕ್ಷೆಯ ಲೇಶ ಕೂಡಾ ತಗಲದೇ ಇದ್ದವನು ಮನುಷ್ಯನೇ ಅಲ್ಲ. ವಸ್ತುಸ್ಥಿತಿ ಹೀಗಿರುವದು ನಾನು ಸುಳ್ಳು ಹೇಳುವದಿಲ್ಲ." ಎಂದು ಡಾಕ್ತರ ಬಾಷ್ಕಳಪಂತನು ನುಡಿದನು.

"ಮಹತ್ವಾಕಾಂಕ್ಷೆಯುಂದರೆ ನನಗೊಂದು ಅತ್ಯಂತ ಪ್ರಿಯವಾದ ಗುಣವೆಂದು ಕಾಣುತ್ತದೆ. ಇದು ಎಲ್ಲ ಉದಾತ್ತ ಗುಣಗಳ ಪೋಷಕವಾಗಿರುವದು. ನಾನೂ ಮಹತ್ವಾಕಾಂಕ್ಷಿಣಿಯಾಗಬೇಕೆಂದು ಬಯಸುತ್ತೇನೆ, ನಪೋಲಿಯನ್ನ, ಔರಂಗಜೇಬರಂಥ ಮಹತ್ವಾಕಾಂಕ್ಷೆಯಲ್ಲ. ಆದರೆ ಜಯಶಾಲಿಗಳಾದ ವೀರರನ್ನು ತರುಣಿಯರು ಬಯಸುವಂಥ ಮಹತ್ವಾಕಾಂಕ್ಷೆ ; ಇನ್ನು ಮೇಲೆ ನಾನು ಆ ಪರಿ ಪ್ರೀತಿಬದ್ಧಳಾಗಬೇಕೆಂಬ ಹವಣಿಕೆ ಮಾಡುತ್ತೇನಂತಲ್ಲ, ಆದರೂ ಮಾತು ಹೇಳುತ್ತೇನೆ." ಎಂದು ಪಂಡಿತೆಯು ಏನೋ ಮಾತಾಡಿದಳು.

"ಪುರುಷರಲ್ಲಿ ಮಹತ್ವಾಕಾಂಕ್ಷೆಯುಂದರೆ ಒಂದರ್ಥದಿಂದೊಪ್ಪುವಂತಿದೆ. ಆದರೆ ಸುಕುಮಾರಿಯುರೆಂದೆನ್ನಿಸಿಕೊಳ್ಳುವ ನಮ್ಮ ಹೆಂಗಸರಲ್ಲಿ ಮಹತ್ವಾಕಾಂಕ್ಷೆ ಯಿರುವದೆಂದರೆ ನನಗೆ ಚಮತ್ಕಾರವೆನಿಸುತ್ತದೆ. ಹೆಣ್ಣುಮಕ್ಕಳು ಮಹತ್ವಾಕಾಂಕ್ಷಿಣಿಯುರಾಗುವದೇಕೆ ?" ಎಂದು ಇಂದಿರೆಯು ಕೇಳಿದಳು.

"ಇಂದಿರಾಬಾಯಿ, ನೀವು ಒಳ್ಳೇ ಸರಸಾದ ಪ್ರಶ್ನೆ ಮಾಡಿದಿರಿ. ಮಹತ್ವಾಕಾಂಕ್ಷೆಯು ಕುಲಾಂಗನೆಗನುಚಿತವಾದ ಗುಣವು." ಎಂದು ಡಾಕ್ತರನಂದನು.

"ಏನು ! ಸ್ತ್ರೀಯರಿಗೆ ಮಹತ್ವಾಕಾಂಕ್ಷೆಯು ಅನುಚಿತವಾದದ್ದೇ ? ಈ ವಿಷಯುವನ್ನು ಬೇರೆ ಮಹತ್ವವಾದ ವಿಷಯುಗಳೊಂದಿಗೆ ನಮ್ಮ ಸಭೆಯುಲ್ಲಿ ತೆಗೆಯುವೆನು. ಯೋಗ್ಯತೆಯಿದ್ದವರು ಅಲ್ಲಿ ಬಂದು ವಾದವಿವಾದ ಮಾಡಬಹುದು." ಎಂದು ಪಂಡಿತೆಯು ಆವೇಶದೊಂದಿಗೆ ಹೇಳಿದಳು.

ಶ್ರೀಕಂಠನು ಈ ಮಾತಿನಲ್ಲಿ ಸ್ವಲ್ಪಾದರೂ ಬಾಯಿ ಹಾಕಲಿಲ್ಲ. ಕಲ್ಲುಕೊತಹಾಗೆ ಕುಳಿತಿದ್ದನು. ಇದರಿಂದ ಇಂದಿರೆಯ ಮನಸ್ಸಿನಲ್ಲಿ ಶ್ರೀಕಂಠನ ವಿಷಯುವಾಗಿ ಅನಾದರಬುದ್ಧಿ ಹುಟ್ಟೀತೆಂದು ಜಯುರಾಯನು ಪಂಡಿತೆಯನ್ನೂ ಡಾಕ್ತರನನ್ನೂ ಕೆಲಸದ ನೆವದಿಂದ ತನ್ನ ವಾಚನಾಲಯುಕ್ಕೆ ಕರಕೊಂಡು ಹೋದನು ; ಇಂದಿರೆಯೂ, ಶ್ರೀಕಂಠನೂ ಇಬ್ಬರೇ ಉಳಿದರು, ಇಂದಿರೆಯು ರಮೇಶಚಂದ್ರದತ್ತರು ಬರೆದ "ಪ್ರಾಚೀನ ಹಿಂದೂಸ್ಥಾನ"ವೆಂಬ ಗ್ರಂಥವನ್ನು ತಕ್ಕೊಂಡು ಓದುತ್ತಿದ್ದಳು. ಶ್ರೀಕಂಠನು ನಾಚು, ನಾಟಕ, ಪೋಷಾಕು, ಮುನಸಿಪಾಲಿಟಿ ಮುಂತಾದ ವಿಷಯುಗಳ ಬಗ್ಗೆ ಮಾತುಗಳನ್ನು ಹಚ್ಚಿದನು. ಇಂದಿರೆಯು ಬೇಸತ್ತು ತನ್ನ ಪುಸ್ತಕವನ್ನು ಮೇಜಿನ ಮೇಲಿಟ್ಟು ಇವನ ಹರಟೇ ಕೇಳಬೇಕಾಯಿತು, ಮಾಡುವಳೇನು ? ತನಗೆ ಓದುವದಿದ್ದ ಕಾರಣ ಶ್ರೀಕಂಠನಿಗೆ ಮಾತಾಡಬೇಡವೆಂದು ಹೇಗೆ ಹೇಳುವಳು ?

ಶ್ರೀಕಂಠ ಬಹದ್ದರನಿಗೆ ಪ್ರತಿಯೊಂದು ವಿಷಯುದಲ್ಲಿ ಸ್ವಲ್ಪ ಸ್ವಲ್ಪ ತಿಳಿಯುತ್ತಿದ್ದರೂ ಯಾವ ವಿಷಯುದಲ್ಲಿಯೂ ಅವನಿಗೆ ಚನ್ನಾಗಿ ಜ್ಞಾನವಿದ್ದಿಲ್ಲ. ಪಾಠಶಾಲೆಯುಲ್ಲಿ ಒಂದೆರಡು ವರ್ಷ ಕಾಲ ಮಾತ್ರ ಹಾಕಿದ್ದನು. ಆದರೂ ಇವನು ಕೇವಲ ಮಂದ ಬುದ್ಧಿಯುವನೆಂದು ಹೇಳಕೂಡದು. ಸ್ತ್ರೀಯುರ ಮನರಂಜನ ಮಾಡುವ ಪೂರ್ತಿ ರಸಾಯುನ ಕ್ರಿಯೆಗಳ ಚಿಕ್ಕ ಚಿಕ್ಕ ಪ್ರಯೋಗಗಳನ್ನು ಮಾಡಿ ತೋರಿಸುವನು. ಸಂಸ್ಕೃತ ನಾಟಕಗಳಲ್ಲಿಯ ಕೆಲವು ಶ್ಲೋಕಗಳು ಕೂಡಾ ಇವನಿಗೆ ಪಾಠ ಬರುತ್ತಿದ್ದವು ?

"ಶ್ರೀಕಂಠ ಬಹದ್ದರರೇ, ನೀವು ಅರಿಯದಿದ್ದ ವಿಷಯವು ಯಾವುದೂ ಇರಲಿಕ್ಕಿಲ್ಲ" ಎಂದು ಇಂದಿರೆಯು ಅಂದಳು.

"ಮನಸ್ಸಿದ್ದರೆ ಯಾವುದಾದರೂ ಸಾಧ್ಯವಾಗುವದು. ನಾನು ಹಿಂದು ಸ್ಥಾನದ ನಿವಾಸಿ, ಚೈತನ್ಯ ಚರಿತ್ರೆ, ಮುದ್ರಾಮಂಜೂಷ, ಹೀಗೆ ಅನೇಕ ಗ್ರಂಥ ಗಳನ್ನೋದಿರುವೆನು. ಅರ್ಥಶಾಸ್ತ್ರದಲ್ಲಂತೂ ನಾನು ಪ್ರವೀಣನು. ಹರಬರ್ಟ್ ಸ್ಪೆನ್‌ಸರ, ಮಿಲ್, ಬೇಕನ್ ಮುಂತಾದ ಇಂಗ್ಲಿಷ ತತ್ವವಿದರ ಗ್ರಂಥಗಳನ್ನು ಪರ್ಯಾಲೋಚಿಸಿರುವೆನು" ಎಂದು ಹೇಳಿದನು. ಇದರಲ್ಲಿ ಶ್ರೀಕಂಠನೆಷ್ಟು ಮಂಟ್ಟಿಗೆ ಗುಳಿಗೇ ಕೊಟ್ಟನೋ ಅವನೇ ಬಲ್ಲನು.

ಇಂದಿರೆಯು ಶ್ರೀಕಂಠನ ಸ್ವರೂಪವನ್ನು ಬಲ್ಲವಳಾದ್ದರಿಂದ ಈ ಮಾತು ಕೇಳಿ ಅವಳು ಬೆರಗಾಗಲಿಲ್ಲ. ಆದರೂ ಚೇಷ್ಟೆಗಾಗಿ "ಇಷ್ಟು ವ್ಯಾಸಂಗ ಮಾಡಿದ್ದು ಹೆಚ್ಚಿನ ಮಾತು. ನನಗೆ ಎಷ್ಟೋ ಗ್ರಂಥಗಳ ಹೆಸರು ಕೂಡಾ ಗೊತ್ತಿಲ್ಲ" ಎಂದಂದಳು.

"ಇದಲ್ಲದೆ ದೀನಬಂಧು, ಪ್ರಕಾಶಕ, ಮುಂತಾದ ಜಗನ್ಮಾನ್ಯ ವರ್ತಮಾನ ಪತ್ರಗಳಿಗೆ ಲೇಖನಗಳನ್ನು ಬರೆದು ಕಳುಹಿಸುತ್ತಿರುತ್ತೇನೆ." ಎಂದು ನುಡಿದು ಗರ್ವದಿಂದ ಇಂದಿರೆಯ ಮುಖದ ಕಡೆಗೆ ನೋಡಿದನು.

"ಗ್ರಂಥ, ಕವಿತ್ವ, ಕಾಶ್ಮೀರ ಶಾಲು, ಲೇಖ, ತುರುಬಿನ ಹಾರ ಮುಂತಾದ ವಿಷಯಗಳಲ್ಲಿ ನಿಮಗೆ ಹೆಚ್ಚು ಸೇರಿಕೆಯದು ಯಾವುದು ?"

"ಇವುಗಳನ್ನೆಲ್ಲ ನಾನು ಬಲ್ಲೆನು ? ಆದರೆ ಇವು ನನ್ನ ಸೇರಿಕೆಯ ವಿಷಯ ಗಳಲ್ಲ."

"ನನ್ನ ತಂದೆಯವರು ನೀವು ವ್ಯಾಪಾರದಲ್ಲಿ ಬಹು ಧುರೀಣರೆಂದು ಹೇಳು ತ್ತಾರೆ. ನೀವು ಸರದಾರರ ಮಕ್ಕಳು. ವ್ಯಾಪಾರದಲ್ಲಿ ಕೂಡಾ, ನಿಮಗೆ ಜ್ಞಾನ ಹೇಗಾಯಿತು ?" ಎಂದು ಇಂದಿರೆಯು ಇವನ ಇಂಗಿತವನ್ನು ತಿಳಿದುಕೊಳ್ಳುವದ ಕ್ಕಾಗಿ ತೊಡಕುಪ್ರಶ್ನೆ ಮಾಡಿದಳು.

"ನಿಜವಾಗಿ ಕೇಳಿದರೆ ವ್ಯಾಪಾರವು ನನ್ನ ವಿಷಯವೇ ಅಲ್ಲ. ಏನು ಮಾಡು ವದು ಜಯರಾಯರೇ ಮಾಡುತ್ತಾರೆ. ನಾನು ರಾಜಕಾರಣದಲ್ಲಿ ಮನಸ್ಸು ಹಾಕ ಬೇಕೆಂದೆನ್ನುತ್ತೇನೆ." ಎಂದು ಶ್ರೀಕಂಠನು ನಮ್ರನಾದವನಾಗಿ ಹೇಳಿದನು.

"ಹಾಗಾದರೆ ನೀವಿನ್ನೂ ರಾಜಕೀಯ ವಿಷಯದಲ್ಲಿ ಮನಸ್ಸು ಹಾಕಿಲ್ಲ !"

ಶ್ರೀಕಂಠನು ಉತ್ತರ ಕೊಡದೇ ಸುಮ್ಮನಿದ್ದನು.

"ಶ್ರೀಕಂಠ ಬಹದ್ದೂರ, ನೀವು ರಾಜಕಾರ್ಯದಲ್ಲಿ ಮನಸ್ಸು ಹಾಕಬೇಕೆಂದರೆ ಏನು ಮಾಡುವಿರಿ ?"

"ಮೊದಲು ಮುನಿಸಿಪಾಲಿಟಿಯಲ್ಲಿ ಸೇರಿ ಆಮೇಲೆ ಪ್ರತಿನಿಧಿಗಳ ಸಭೆಯಲ್ಲಿ ಅಗ್ರಗಣ್ಯನಾಗುವೆನು. ಮುಂದೆ ರಾಜ್ಯಸೂತ್ರಗಳು ಕೂಡಾ ನನ್ನ ಕಯ್ಯಲ್ಲಿ ಬರಬಹುದು."

"ಅಂದರೆ ನಿಮಗೆ ಮಹತ್ವಾಕಾಂಕ್ಷೆಯಿದೆ" ಎಂದು ಇಂದಿರೆಯು ನುಡಿದಳು.

"ಮಹತ್ವಾಕಾಂಕ್ಷೆಯು ಎಲ್ಲರಲ್ಲಿಯೂ ಇರುವದು. ನಿಮ್ಮಲ್ಲಿಲ್ಲೇನು ?" ಎಂದು ಶ್ರೀಕಂಠನು ಕೇಳಿದನು.

"ಹೆಂಗಸರಿಗೇತಕ್ಕೆ ಮಹತ್ವಾಕಾಂಕ್ಷೆ ಬೇಕಾಗುವದು ?" ಎಂದಿಂದಿರೆಯು ಪ್ರಶ್ನೆ ಮಾಡಿದಳು :

"ನ್ಯಾಯಾಧೀಶನ ಹೆಂಡತಿಯಾಗಲೀ, ದಿವಾನರ ಹೆಂಡತಿಯಾಗಲೀ ಆದ ಪಕ್ಷದಲ್ಲಿ ಹೆಣ್ಣುಮಕ್ಕಳಿಗೆ ಮಹಾರಾಣಿಯವರ ಪರಿಚಯ ಸುಲಭವಾಗಿ ಆಗುವದು. ಆಮೇಲೆ ಅವರು ಏನು ಮಾಡುವರು ಏನು ಬಿಡುವರು ?"

"ಇದು ಮಹತ್ವಾಕಾಂಕ್ಷೆಯೋ ?" ಎಂದು ಇಂದಿರೆಯು ಮನಸ್ಸಿನಲ್ಲೆಂದು ಕೊಂಡು "ನೀವು ಚಿತ್ರಕಲಾನಿಪುಣರೆಂದು ಹೇಳುತ್ತೀರಲ್ಲ ! ಈ ಕಲಾಭಿಜ್ಞರಲ್ಲಿ ಪ್ರಖ್ಯಾತರಾದವರ ಹೆಸರುಗಳು ನಿಮಗೆ ಗೊತ್ತುಂಟೋ ? ದೇವಯಾನಿ ಅಮ್ಮನವರು ಪ್ರಖ್ಯಾತರಾದ ಚಿತ್ರಕಲಾಪಟುಗಳಲ್ಲಿ ಎಣಿಸಲ್ಪಡುವರೇನು ?"

"ಅವರ ಹೆಸರು ಮೊದಲು ಪ್ರಸಿದ್ಧಿಗೆ ಬಂದದ್ದು ಸರಿ. ಆದರೆ ಈಗಿನ ಕಾಲದಲ್ಲಿ ಅವರ ಹೆಸರು ಯಾರೂ ತಕ್ಕೊಳ್ಳುವದಿಲ್ಲ."

"ಅವರು ಚಿತ್ರ ತೆಗೆಯುವದು ಬಿಟ್ಟೇ ಬಹಳ ದಿವಸಗಳಾಗಿರುವವು. ದೇವಯಾನಿಯವರ ಚಿತ್ರಗಳನ್ನು ನಾನೂ ನೋಡಿದ್ದೇನೆ. ಅವುಗಳ ಮುಂದೆ ರವಿವರ್ಮನ ಚಿತ್ರಗಳು ಕೂಡಾ ಮಂಕಾಳವಾಗಿ ಕಾಣಿಸುವವು."

"ನಾನು ದೇವಯಾನಿಯಮ್ಮನು ಬರೆದ ಚಿತ್ರಗಳನ್ನು ನೋಡಿಯೇ ಇಲ್ಲ."

"ಅರಮನೆಗಳಲ್ಲಿ ದೇವಯಾನಿಯಮ್ಮನವರ ಚಿತ್ರಗಳಿವೆ. ತಮಾಷೆ ಬಂಗಲೇದಲ್ಲಿ ಅವುಗಳನ್ನು ಕಾಣಬಹುದು. ದಿವಾನ ಬಹದ್ದೂರ ಪೂರ್ಣಯ್ಯನವರ ಚಿತ್ರವನ್ನು ದೇವಯಾನಿಯಮ್ಮನವರೇ ಬರೆದಿರುವರು. ನೀವು ಹೇಗೆ ನೋಡಲಿಲ್ಲವೋ ತಿಳಿಯದು."

" ಇದ್ದೀತು. ಮುಂಚಿನ ಕಲಾನಿಪುಣರ ಹೆಸರುಗಳು ತಮಗೆ ತಾವೇ ಕಾಲಾನುಸಾರ ಮರೆತು ಹೋಗುತ್ತವೆ. ಈಗಿನ ಸರ್ವಾಧಿಪತಿಯ ಮೇಲೆ ಚೌರ ಹಾರುತ್ತಿರಲು ಹಿಂದಿನವನ ಹೆಸರು ಕೂಡಾ ಯಾರೂ ತಕ್ಕೊಳ್ಳುವದಿಲ್ಲ. ಜಗತ್ತಿನ ವ್ಯಾಪಾರವೇ ಹೀಗಿರುತ್ತದೆ " ಎಂದು ಶ್ರೀಕಂಠನು ಹೇಳಿದನು.

" ಮಹತ್ವಾಕಾಂಕ್ಷೆಯುವರ ಪರಿಣಾಮವು ಕಡೆಗೆ ಹೀಗಾಗುವದಲ್ಲವೇ ? " ಎಂದು ಇಂದಿರೆಯು ನುಡಿದು ವಿಚಾರದಲ್ಲಿ ಬಿದ್ದವಳಂತೆ ಕಂಡಳು.

ಒಂದೇ ಸೂಕ್ಷ್ಮವಾದ ಆಶಾ ತಂತುವದೆ

ಶ್ರೀರಂಗಪಟ್ಟಣದಿಂದ ರಮಾಕಾಂತನು ಬೆಂಗಳೂರಿಗೆ ಬಂದಮೇಲೊಂದೆರಡು ದಿವಸಗಳಲ್ಲಿಯೇ ರಂಗರಾಯನು ಇವನ ಭೆಟ್ಟಿಗೆ ಬಂದನು. ಈ ಸ್ನೇಹಿತರೀರ್ವರೂ ಒಳ್ಳೇ ಪ್ರೇಮದಿಂದ ಉಭಯ ಕುಶಲಗಳನ್ನು ಕೇಳಿಕೊಂಡು ಮಾತಾಡುತ್ತ ಕುಳಿತು ಕೆಲವು ವ್ಯಾಳ್ಯದನಂತರ ರಂಗರಾಯನಂದದ್ದು :

" ರಮಾಕಾಂತರೇ, ನಾನು ಹಿಂದಕ್ಕೆ ನಿಮಗೆ ಕೊಟ್ಟ ಆಮಂತ್ರಣವು ಹಾಗೇ ಉಳಿದಿರುವದಲ್ಲ. ನೀವು ದೇವಯಾನಿಯಮ್ಮನವರ ಪತ್ರಕ್ಕನುಸಾರವಾಗಿ ನನ್ನ ಆಮಂತ್ರಣವನ್ನು ಹಾಗೇ ಒಗೆದು ನಡೆದಿರಿ."

" ರಾಯರೇ, ತಾವು ದೊಡ್ಡವರು ಕಾಣುತ್ತೀರಿ ! ಆ ದಿವಸ ಊಟಕ್ಕೆ ಬರುವದಾಗುವದಿಲ್ಲೆಂದು ತಮಗೆ ತಿಳಿಸಿ ಹೋದೆನು " ಎಂದು ರಮಾಕಾಂತನಂದನು.

" ಆಗಲಿ ಈ ದಿವಸಾದರೂ ತಪ್ಪಿಸಬೇಡಿರಿ. ಮನೆಯಲ್ಲಿ ಸತ್ಯನಾರಾಯಣ ಮಾಡಿದ್ದೇನೆ. ನಾಲ್ಕು ಜನ ಸ್ನೇಹಿತರೂ ಆಪ್ತರೂ ಬರುವವರು ಇದ್ದಾರೆ. ನನ್ನ ಮನೆಯಲ್ಲಿ ಭೋಜನ ಮಾಡಿದಂತೆಯೂ ಆಗುವದು. ನಾಲ್ಕು ಜನರ ಪರಿಚಯವೂ ಆಗುವದು. ಕಾರಣ ಸಂಜೇ ಐದು ಗಂಟೆಗೆ ನೀವು ದಯಮಾಡಬೇಕು."

" ಅಗತ್ಯ ಆಗಲಿ. ಯಾರಾರು ಬರುವರು ?"

" ನಮ್ಮ ಸೋದರಮಾವಂದಿರಾದ ಟೀ. ಕೃಷ್ಣರಾವ ಪೆನಶನ್ ಇಂಜಿನಿಯರ ; ಕದಂಬಿ ನಾರಾಯಣಾಚಾರ್ಯರು ಇಲ್ಲಿಯ ಎಂಜಿನೀಯರ, ಎಸ್. ಸುಬ್ಬರಾವ ಮುನಿಸೀಫ, ಪೀ. ರಾಮರಾವ, ಮದ್ದೂರ ರೇಶ್ಮೆ ತೋಟದ ಸಾವುಕಾರ, ಮುಂತಾದವರು ಬರುವವರಿದ್ದಾರೆ,"

" ಇಂಥ ಪಂಡಿತರ ಸಮಾಗಮವು ಭೋಜನಕ್ಕಿಂತಲೂ ಇಷ್ಟವಾದ

ಸುಖವೇ ಸರಿ."

"ಒಳ್ಳೇದು ಬರುತ್ತೇನೆ. ನಾಲ್ಕುವರೆ ಗಂಟೆಗೆ ನೀವು ಬರಬೇಕು ಅಂದರೆ ಕಥೆ ಪೂಜೆಯು ಕಾಲದಲ್ಲಿರಲಿಕ್ಕೆ ನಿಮಗೆ ಅವಕಾಶವಾಗುವದು" ಎಂದು ಹೇಳಿ ರಂಗರಾಯನು ಅಪ್ಪಣೆ ತಕ್ಕೊಂಡು ನಡೆದನು.

ರಂಗರಾಯನ ಮನೆ ಚಾಮರಾಜಪೇಟೆಯಲ್ಲಿತ್ತು. ದಿವಾನರಲ್ಲಿ ರಂಗರಾಯನಂತೆ ಕೆಲಸವಾದದ್ದರಿಂದ ಸತ್ಯನಾರಾಯಣ ಮಾಡಿದ್ದನು. ರಮಾಕಾಂತನು ಬಂದಾಗ್ಯೆ ಟೀ. ಕೃಷ್ಣರಾಯರು ಮಾತ್ರ ಉಪನೇತ್ರಗಳನ್ನು ಹಾಕಿಕೊಂಡು "ಹಿಂದೂ" ವರ್ತಮಾನವನ್ನೋದುತ್ತಿದ್ದರು. ಹಿಂದಿನಿಂದ ಉಳಿದವರೂ ಬಂದರು. ಈ ಜನರೆಲ್ಲಾ ಕೂಡ್ರುವ ಸ್ಥಳವು ಚೆನ್ನಾಗಿದೆಯೋ ಇಲ್ಲೋ ನೋಡುವದಕ್ಕಾಗಿ ರಂಗರಾಯನು ಮೇಲೆ ಬಂದನು. ಟೀ. ಕೃಷ್ಣರಾಯರು, "ರಂಗಣ್ಣ, ಇವರೇ ನಿಮ್ಮ ಸ್ನೇಹಿತರಾದ ರಮಾಕಾಂತರೇನು?" ಎಂದು ಕೇಳಿದರು.

"ಆಹುದು, ಕಮಲಾಕಾಂತ ದೇಸಾಯರನ್ನು ನೀವು ಬಲ್ಲಿರಲ್ಲ. ಅವರ ಮಕ್ಕಳೇ ಇವರು. ಇವರೂ ಕಲಕತ್ತೆಯ ಬಿ.ಎ. ಇದ್ದು ಪುಣೆಯ ಎಲ್.ಸಿ.ಇ. ಇದ್ದಾರೆ" ಎಂದು ರಂಗರಾಯನು ಹೇಳಿದನು.

"ಕಮಲಾಕಾಂತರ ಹೆಸರು ಕೇಳದವರಾರು! ಯಾಕೆ ನಾರಾಯಣಾಚಾರ್ಯರೆ, ಕಲಕತ್ತೆಯ ಕಾಲೇಜದಲ್ಲಿ ಗಣಿತ ಗುರುಗಳಾಗಿದ್ದರು; ನೀವು ಕೇಳಿ ಬಲ್ಲಿರಲ್ಲ? ಒಳ್ಳೇ ಬುದ್ಧಿಶಾಲಿಯಾದ ಗಣಿತಜ್ಞನು" ಎಂದು ಟೀ. ಕೃಷ್ಣರಾಯರಂದರು.

"ಓಹೋ ಗೊತ್ತಿಲ್ಲದೇನು! ನಾನು ಕಾಲೇಜಿನಲ್ಲಿದ್ದಾಗ್ಯೆ ಕಮಲಾಕಾಂತರು ಪ್ರಾಕ್ಟೀಸಿಂಗ ಎಂಜಿನೀಯರರಾಗಿ ಇಲ್ಲಿಯೇ ಇದ್ದರಲ್ಲ!" ಎಂದು ಕದಂಬೀ ಆಚಾರ್ಯರಂದರು.

"ರಮಾಕಾಂತರೇ, ನೀವೇನು ಉದ್ಯೋಗ ನಡೆಸಿದ್ದೀರಿ?" ಎಂದು ಟೀ. ಕೃಷ್ಣರಾಯರು ತಮ್ಮ ಚಾಳೀಸು ತೆಗೆದು ಕಯ್ಯಲ್ಲಿ ಹಿಡಿದು ಕೇಳಿದರು.

"ನಾನೂ ಪ್ರಾಕ್ಟಿಸಿಂಗ ಎಂಜಿನೀಯರವಾಗಬೇಕೆಂದು ಮಾಡಿದ್ದೇನೆ. ಸರಕಾರೀ ಉದ್ಯೋಗಸ್ಥನಾಗುವದಕ್ಕಿಂತ ಸ್ವತಂತ್ರ ಉದ್ಯೋಗ ಮಾಡುವದು ಒಳ್ಳೇದು."

"ಕಮಲಾಕಾಂತರ ಚಿರಂಜೀವರೇ ನೀವು!" ಎಂದು ಆ ವೃದ್ಧರಾದ ಎಂಜಿನೀಯರರು ರಮಾಕಾಂತನ ಮಾತು ಮನಸ್ಸಿಗೆ ಸಟ್ಟು ಯಥೇಷ್ಟವಾಗಿ

ನಕ್ಕರು.

"ಹಾಗಾದರೆ ರಂಗಾ, ಇವರನ್ನು ನನ್ನ ಮನೆಗೆ ಕರೆದುಕೊಂಡು ಬಾ; ಪ್ಲಾನ್ ಎಸ್ಟಿಮೇಟ್ ಮಾಡಿಕೊಡಿರೆಂದು ಹತ್ತೆಂಟು ಜನರು ಬೆನ್ನೇ ಹತ್ತಿರು ವರು. ರಮಾಕಾಂತನಂಥವರು ಇದ್ದ ಮೇಲೆ ಈ ಉಸಾಬರಿ ನಮ್ಮ ಮುದುಕರಿ ಗೇಕೆ? ರಮಾಕಾಂತರೆ, ಅಗತ್ಯವಾಗಿ ನಮ್ಮ ಮನೆಗೆ ಬಂದು ನಮ್ಮ ಸಮಕ್ಷ ಪ್ಲಾನ್ - ಎಸ್ಟಿಮೇಟುಗಳನ್ನು ಮಾಡಿರಿ. ಸಾವಿರೆರಡು ಸಾವಿರ ರೂಪಾಯಿ ಇದೇ ತಿಂಗಳಲ್ಲಿ ಬಂದುಹೋಗುವವು. ನನ್ನ ಪರಮಸ್ನೇಹಿತನ ಮಗನಿಗೆ ನಾನು ಸಹಾಯ ಮಾಡದೆ ಮತ್ಯಾರು ಮಾಡಬೇಕು?"

ಎಸ್. ಸುಬ್ಬರಾಯರು ರಮಾಕಾಂತನನ್ನುದ್ದೇಶಿಸಿ "ಎಂಜಿನಿಯರರೇ, ಕೃಷ್ಣ ರಾವಜೀಯವರು ಹೇಳಿದ ಕೆಲಸ ತೀರಿದನಂತರ ಬಡವನದೊಂದು ಕೆಲಸವಿದೆ. ಯೋಗ್ಯ ಫೀ ಕೊಟ್ಟೇ ಕೊಡುತ್ತೇನೆ."

"ಅಕೋ ನೋಡಿರಿ ರಮಾಕಾಂತರೆ! ಪ್ರಾಕ್ಟೀಸಿಂಗ ಎಂಜಿನೀಯರನಿಗೆ ಈ ಪ್ರಾಂತದಲ್ಲಿ ಕೆಲಸ ಕಡಿಮೆ ಇಲ್ಲ" ಎಂದು ಟೀ. ಕೃಷ್ಣರಾಯರಂದರು.

ಭೋಜನೋತ್ತರ ಈ ಮಹಾಜನರೆಲ್ಲ ತಮ್ಮ ತಮ್ಮ ಮನೆಗಳಿಗೆ ಹೊರಟು ಹೋದರು. ರಮಾಕಾಂತರಾವ, ಸತ್ಯನಾರಾಯಣನ ಮಹಾತ್ಮ್ಯ ಕಂಡಿರೋ! ಇದೇ ದಿವಸದಾರಭ್ಯ ನಿಮ್ಮ ಉದ್ಯೋಗಕ್ಕಾರಂಭವಾದಂತಾಯಿತು. ನಮ್ಮ ಮುದುಕನ (ಟೀ. ಕೃಷ್ಣರಾಯರ) ಗೌರವವು ಈ ಊರಲ್ಲಿ ಬಹಳಿದೆ. ಜಯ ರಾಯನ ವಿಚಾರಕ್ಕೆ ನೀವು ಒಳಗಾಗಿದ್ದರೆ ನಿಮ್ಮನ್ನು ಬೇಳೆ ಮಾರಲಿಕ್ಕೆ ಹಚ್ಚು ತ್ತಿದ್ದನು. ಎಂದು ರಂಗರಾಯನಂದದ್ದಕ್ಕೆ ಇಬ್ಬರೂ ಸ್ನೇಹಿತರು ಹೊಟ್ಟೆ ಹಿಡಿಸ ಲಾರದೆ ನಕ್ಕರು.

"ಜಯರಾಯನಾದರೂ ನಮ್ಮ ತಂದೆ ಸ್ನೇಹಿತನೇ. ತಾನಾಗಿ ನನಗೆ ಸಹಾಯ ಮಾಡುವೆನೆಂದು ಹೇಳಿದನು. ಅವನಿಗೇನು ನಿನ್ನ ಸಹಾಯ ಬೇಡೆಂದು ಹೇಳಬಹುದೇ? ನಾನಾದರೂ ಸಹಾಯಕಾರ್ಥವಾಗಿ ಜಯರಾಯನ ಬೆನ್ನು ಹತ್ತಿ ದ್ದಾದರೂ ಅಷ್ಟರಲ್ಲಿಯೇ ಇದೆ."

"ಪದವೀಧರರು ಕೂಡಾ ತಮ್ಮಾಶ್ರಯವನ್ನು ಬಯಸುತ್ತಾರೆಂದು ಈ ವ್ಯಾಪಾರದ ಮುಂದಿಗೆ ತಿಳಿದರೆ ಸಾಕು, ಅವರನ್ನು ಹಿಡಿಯುವರಾರು? ವಿದ್ವಾಂಸರ ಮನೆಮನೆಗೆ ಹೋಗಿ ಈ ಜನರು ಉಪವಾಸ ಮಾಡಿ ಬರುವರು!!"

ಈ ಮೇರೆಗೆ ಮಾತಾಡುತ್ತ ಕೆಲವು ಹೊತ್ತು ಕುಳಿತು ತಾಂಬೂಲವನ್ನು

ಯಥೇಚ್ಛವಾಗಿ ಸವಿದು ಕೋಚಗಳ ಮೇಲೆ ಸ್ವಲ್ಪ ಅಡ್ಡಾಗಿ ತಿರುಗಾಡಲಿಕ್ಕೆ ರಾಣೀಬಾಗಕ್ಕೆ ಹೋದರು.

ರಮಾಕಾಂತನಿಗೆ ಟೀ. ಕೃಷ್ಣರಾಯರ ಸಹಾಯದಿಂದ ಎಷ್ಟೋ ಪ್ಲಾನ್ ಎಸ್ಟಿಮೇಟಗಳ ಪ್ರಕರಣಗಳು ಸಿಕ್ಕವು. ತಿಂಗಳೆರಡು ತಿಂಗಳಲ್ಲಿಯೇ ಉದ್ಯೋಗದ ಚಿಂತೆ ಬಿಟ್ಟಿತು. ಇವನು ಚಾಮರಾಜ ಪೇಟೆಯಲ್ಲಿ ರಂಗರಾಯನ ಮನೆಹತ್ತರಿದ್ದ ಮನೆ ಬಾಡಿಗೆಗೆ ತಕ್ಕೊಂಡು ರಥ ಕುದುರೆಗಳನ್ನಿಟ್ಟುಕೊಂಡು ಒಳ್ಳೆ ವ್ಯವಸ್ಥೆಯಿಂದಿರಹತ್ತಿದನು.

ಟೀ. ಕೃಷ್ಣರಾಯರು ಎಂಜಿನೀಯರರ ಸಂಘವನ್ನು ಸ್ಥಾಪಿಸಿದ್ದರು. ಶಿಲ್ಪ ಶಾಸ್ತ್ರಗಳ ಮೇಲೆ ನಿಬಂಧಗಳನ್ನು ಬರೆಯುವದು ; ಭೂಗರ್ಭಶಾಸ್ತ್ರದ ಜ್ಞಾನ ದಿಂದ ಖನಿಜಪದಾರ್ಥಗಳ ಶೋಧ ಮಾಡುವುದು, ಹೊಸಯಂತ್ರಗಳನ್ನು ಸಿದ್ಧ ಮಾಡಿ ಕಾರಖಾನೆಗಳನ್ನು ಸ್ಥಾಪಿಸಿ ಇತರ ಜನರನ್ನು ಉದ್ಯೋಗಕ್ಕೆ ಹಚ್ಚುವದು, ಸೀಮೆಯ ಕೈಗಾರಿಕೆಗಳು ಮುಳುಗಿದ ಕಾರಣಗಳನ್ನು ಶೋಧಿಸಿ ಆ ಕೈಗಾರಿಕೆಗಳನ್ನು ಪುನರುಜ್ಜೀವನ ಮಾಡುವುದು. ಸ್ವಾಭಾವಿಕ ಸಾಧನಗಳಿಂದ ವಿದ್ಯುತ್ ಶಕ್ತಿಯ ಸಂಚಯ ಮಾಡಲಿಕ್ಕೆ ಬರುವಂತಿದ್ದರೆ ಹಾಗೆ ಮಾಡಿ ಜನರಿಗೆ ಅದರಿಂದ ಲಾಭ ವಾಗುವಂತೆ ಮಾಡುವುದು, ಹೀಗೆ ಅನೇಕ ಕೆಲಸಗಳಲ್ಲಿ ಈ ಸಂಘದವರು ಮನಸ್ಸು ಹಾಕಿದ್ದರಿಂದ ಮೈಸೂರ ಸಂಸ್ಥಾನದ ಸಾಂಪತ್ತಿಕ ಸ್ಥಿತಿಯು ದಿನೇ ದಿನೇ ವೃದ್ಧಿಂಗತ ವಾಗುತ್ತ ನಡೆಯಿತು. ಶ್ರೀಮನ್‌ಮಹಾರಾಜರವರು ಈ ಸಂಘದವರು ಮಾಡುವ ಪ್ರಯೋಗಗಳ ವೆಚ್ಚಕ್ಕಾಗಿ ಹೇರಳ ಹಣಕೊಡುವದಕ್ಕೆ ಒಡಂಬಟ್ಟರು.

ರಮಾಕಾಂತನು ಈ ಸಂಘದ ಸಭೆಯಲ್ಲಿ ಅನೇಕ ನಿಬಂಧಗಳನ್ನು ಓದಿದನು. ಎಷ್ಟೋ ಹೊಸ ಶೋಧಗಳು ಇವನ ಸೂಚನೆಯಿಂದ ಉದ್ಭವಿಸಿದವು. ಇದರಿಂದ ಇವನ ಕೀರ್ತಿಯಶಾಗಿ ಪ್ರಾಪ್ತಿಯೂ ಬೆಳೆಯಲಾರಂಭಿಸಿತು. ಆದರೆ ಈ ಪ್ರತಿಷ್ಠೆಯೂ ದ್ರವ್ಯಲಾಭದ ಸೌಕರ್ಯವೂ ಅವನಿಗೇನು ಸುಖವೆನಿಸಲಿಲ್ಲ. ಇಂದಿರೆಯ ಪ್ರೀತಿಯ ಶಲ್ಯವು ಅವನ ಹೃದಯದಲ್ಲಿ ಸರ್ವದಾ ಚುಚ್ಚುತ್ತಿತ್ತು. ಉದ್ಯೋಗದಲ್ಲಿ ಗಾಢನಾಗಿದ್ದಾಗ್ಗೆ ಮಾತ್ರ ಅವನಿಗೆ ಸಮಾಧಾನವಿರುತ್ತಿತ್ತು. ಈ ಉದ್ಯೋಗ ಬಿಟ್ಟು ವಿಶ್ರಾಂತಿ ಬಯಸಿದನೆಂದನೆಂದರೆ ವ್ಯಸನದಲ್ಲಿಯೇ ಬೀಳುವನು.

ರಂಗರಾಯನು ಎಷ್ಟೋ ಸಾರೆ ರಮಾಕಾಂತನ ಚಿಂತೆಯ ಕಾರಣ ತಿಳು ಕೊಳ್ಳಬೇಕೆಂದು ಯತ್ನಿಸಿದರೂ ನೆಲೆ ಹತ್ತಲಿಲ್ಲ. ಕಾಮಬಾಧೆಯು ಇವನ ಚಿಂತೆಯ ಮೂಲದಲ್ಲಿರುವದೆಂದು ರಂಗರಾಯನು ಊಹಿಸಿಕೊಂಡರೂ ಇವನ ಪ್ರೀತ್ಯಾಸ್ಪದಳು

ಯಶಾರಿರಬಹುದು? ಇಂಥ ರೂಪಗುಣಸಂಪನ್ನನಾದವನಿಗೆ ವಶಳಾಗದಿದ್ದ ಮಾನಿನಿಯಶಾದರೂ ಎಂಥವಳಿರುವಳು! ಎಂಬ ಯೋಚನೆಯಲ್ಲಿ ರಂಗರಾಯನು ಬಿದ್ದನು. ಜಯರಾಯನ ಮನೆಯ ಹೊರತು ಮತ್ಯಾರ ಮನೆಗೂ ರಮಾಕಾಂತನು ಹೋದವನಲ್ಲ. ಮಾರ್ಗದಲ್ಲಿ ಅಕಸ್ಮಾತ್ತಾಗಿ ಕಂಡ ತರುಣಿಯರ ಮೇಲೆ ಆಸಕ್ತ ನಾಗುವಷ್ಟು ಮೂರ್ಖನು ರಮಾಕಾಂತನಲ್ಲ. ಜಯರಾಯನು ತನ್ನ ಮಗಳನ್ನು ಶ್ರೀಕಂಠ ಬಹದ್ದುರನಿಗೆ ಕೊಡುವ ವಿಚಾರದಲ್ಲಿರುವದು ತನಗೆ ತಿಳಿದ ಮೇಲೆ ರಮಾಕಾಂತನಿಗೆ ತಿಳಿಯದೇನು? ಅರ್ಥಾತ್ ಇವನ ಪ್ರೀತಿಪಾತ್ರಳು ಇಂದಿರೆ ಯಿರಲಿಕ್ಕಿಲ್ಲ. ಹೀಗೆ ಎಷ್ಟು ವಿಚಾರ ಮಾಡಿದರೂ ರಮಾಕಾಂತನ ಇಂಗಿತವು ತಿಳಿಯಲೊಲ್ಲದು. ಸ್ವಂತಃ ರಮಾಕಾಂತನು ಚಕಾರಶಬ್ದ ತೆಗೆಯಲೊಲ್ಲನು.

ಒಂದು ದಿನ ರಂಗರಾಯನು ರಮಾಕಾಂತನ ಮನೆಗೆ ಬಂದಾಗ್ಗೆ ಈ ವಿಷಯ ವನ್ನು ಬುದ್ಧ್ಯಾ ತೆಗೆದನು.

"ರಾಯರೇ, ನೀವು ವಿವಾಹ ಮಾಡಿಕೊಳ್ಳುವ ಯೋಚನೆಯನ್ನು ಇನ್ನೂ ಯಾಕೆ ಮಾಡಲೊಲ್ಲಿರಿ? ನಿಮ್ಮ ಸಾಂಪತ್ತಿಕ ಸ್ಥಿತಿಯು ಒಳಿತಾಗಿದೆ. ನನ್ನ ಸ್ನೇಹಿತರ ಮನಗಳಲ್ಲಿ ರೂಪವತಿಯರಾದ ಕನ್ಯೆಯರಿದ್ದಾರೆ. ನನ್ನ ಸ್ನೇಹಿತರು ಆಗ್ರಹದಿಂದ ನನಗೆ ಹೇಳಿದ ಮೂಲಕ ಸೂಚಿಸುತ್ತೇನೆ" ಎಂದು ರಂಗರಾಯನು ಕೇಳಿದನು.

"ಸದ್ಯಕ್ಕೆ ವಿವಾಹ ಮಾಡಿಕೊಳ್ಳುವ ಯೋಚನೆಯಿಲ್ಲ."

"ಏಕೆ? ವೃದ್ಧಾಪ್ಯ ಬರುವ ಮಾರ್ಗ ನೋಡುತ್ತಿರುವಿರೇನು?"

"ಅಹಃ ಹಃ ಹಃ ರಂಗರಾವ್, ನೀವು ಒಳ್ಳೇ ವಿನೋದಿಗಳು. ಹಾಗಲ್ಲ. ಕೆಲವೊಂದು ಕಾರಣಕ್ಕಾಗಿ ನಾನು ಲಗ್ನ ಮಾನಸಿಕ ಮಾಡಿದ್ದೇನೆ."

"ಆದೇ ಕಾರಣ ಹೇಳಿ ಬಿಡಿ ನೋಡುವ!"

"ಸದ್ಯಕ್ಕೆ ಹೇಳುವಂತಿಲ್ಲ" ಎಂದು ರಮಾಕಾಂತನಂದನು.

"ನಾನು ನೋಡಿದ ವಧುಗಳ ವಿವಾಹವಾಗಿ ಹೋದನಂತರ ಅಂಥ ರೂಪ ವತಿಯರು ಪುನಃ ಸಿಕ್ಕುವದುಂಟೇ? ವಿಚಾರ ಮಾಡಿರಿ" ಎಂದು ರಂಗರಾಯ ನಂದನು.

"ಸಿಕ್ಕದಿದ್ದರಿಲ್ಲ. ಹೀಗೆಯೇ ಅವಿವಾಹಿತನಾಗಿದ್ದರೆ ಜಾತಿಬಾಹ್ಯನು ಬೇರೆ ಆಗಲಿಕ್ಕಿಲ್ಲವಲ್ಲ!"

"ಅಂದಮೇಲೆ ನೀವು ಮಹಾತ್ಮರೇ ಇರುವಿರಿ. ನೀವು ಸನ್ಯಾಸವೇಕೆ

ಸ್ವೀಕರಿಸುವದಿಲ್ಲ ?"

"ನಿಜವಾಗಿ ಹೇಳಬೇಕಾದರೆ ಅದೂ ಬಹಳ ದೂರದಲ್ಲಿಲ್ಲ. ಜಗತ್ತಿನಲ್ಲಿ ನಾನು ಸುಖಿಯಾಗಿರುವದಕ್ಕೆ ಒಂದೇ ಸೂಕ್ಷ್ಮವಾದ ಆಶಾತಂತುವದೆ. ಅದು ಚಟ್ಟನೆ ಹರಿದು ಹೋಯಿತೆಂದರೆ ಸಂಸಾರಕ್ಕೂ ನಮಗೂ ಸಂಬಂಧ ತಗಲ ದಂತಾಗುವದು. ನೀವು ಕೌಪೀನ ದಂಡ ಕಾಷ್ಟಗಳನ್ನು ಸಿದ್ಧಮಾಡಿ ಕೊಡುವ ದೊಂದೇ ತಡ."

"ಈ ನಿಮ್ಮ ಆಶಾತಂತುವನ್ನು ದೃಢಪಡಿಸುವಂತಿದ್ದರೆ ನಾನು ಯತ್ನ ಮಾಡುತ್ತೇನೆ."

"ಅದರ ಗೋಜಿಗೇ ನೀವು ಹೋಗಕೂಡದು. ನನ್ನಾಶಾತಂತುವು ಅತಿ ಸೂಕ್ಷ್ಮವಾಗಿರುವದರಿಂದ ಅರಿಯದವರು ಸ್ವಲ್ಪ ಮುಟ್ಟಿದರೆ ಸಾಕು ಅದು ಹರದೇ ಹೋಗುವದು."

ಈ ರೀತಿಯಾಗಿ ರಮಾಕಾಂತನು ತನ್ನ ಹೃತ್‌ಶಲ್ಯವನ್ನು ಯಾರಿಗೂ ಮುಟ್ಟಗೊಡುತ್ತಿದ್ದಿಲ್ಲ. ಶಾರೀರಿಕ ಘಾಯವನ್ನು ಜಾಣನಾದ ವೈದ್ಯನು ಕೂಡಾ ಮುಟ್ಟಿದರೇನಾಗುತ್ತದೋ ಎಂದು ಹೆದರಿ ಹಿಂಜರಿಯುತ್ತೇವೆ, ಅಂದಮೇಲೆ ರಮಾಕಾಂತನು ತನ್ನ ಹೃದ್ಗತವಾದ ಘಾಯವನ್ನು ಹೇಗೆ ಮುಟ್ಟಗೊಡುವನು ?

ಪಂಡಿತಾ ಕಮಲೆಯರು

ವಿರಹಿಗಳ ಸಂಸ್ಕಾರವೂ, ಅವರ ಮನಸ್ತಾಪಗಳೂ, ಆವರ ಬಾಯಿಂದ ಹೊರಡುವ ದುಃಖೋದ್ಗಾರಗಳೂ, ಅವರು ಹಾಸಿಗೆಯ ಮೇಲೆ ಹೊರಳಾಡುತ್ತ ನಡಿಸಿದ ಯೋಚನೆಗಳೂ, ಅವರು ಕಾಮಾಗ್ನಿಯನ್ನು ತಾಳಲಾರದೆ ವ್ಯರ್ಥವಾಗಿ ಮಾಡಿಕೊಳ್ಳುವ ಶೀತೋಪಚಾರಗಳೂ, ವಾಚಕರಿಗೆ ಮಾತ್ರ ಓದಲಿಕ್ಕೆ ಮನೋ ರಂಜಕವಾಗಿರುತ್ತವೆ. ಏಕೆಂದರೆ 'ಮಹದಪಿ ಪರದುಃಖಂ ಶೀತಲಂ ಸಮ್ಯಗಾಹುಃ.' ಆದರೆ ವಡವಾಗ್ನಿಯಿಂದ ಒಳಗಿಂದೊಳಗೆ ಸುಡುತ್ತಿರುವ ಸಾಗರನಂತಿರುವ ಮಾನಸಿಥಿಯಾದ ವಿರಹಿಯು ಅನುಭವಿಸುತ್ತಿರುವ ವಿರಹದ ತಾಪದನ್ನು ದೇವರಿಗೊಂದೇ ಹೇಳಬೇಕು.

ರಮಾಕಾಂತನು ವಿಶೇಷ ಕೆಲಸವಿಲ್ಲದಿದ್ದರೆ ಧೀಮಂತರಂತೆ ಕಾವ್ಯಶಾಸ್ತ್ರಗಳ ವಿನೋದದಲ್ಲಿ ಕಾಲಕಳೆಯಬೇಕೆಂದು, ಅವುಗಳ ವ್ಯಾಸಂಗದಲ್ಲಿ ತೊಡಗುವದರಲ್ಲಿಯೇ ಕಾವ್ಯಗಳಿಗೇ ವಿಷಯಭೂತಳಾದ ಇಂದಿರೆಯ ದಿವ್ಯರೂಪವೇ ಅವನೆದುರಿಗೆ

ಬಂದು ನಿಲ್ಲುವದು. ವನೋಪವನಗಳಲ್ಲಿ ತಿರುಗಾಡಲಿಕ್ಕೆ ಹೋದೇನಂದರೆ ಅಲ್ಲಿಯು ಪ್ರತಿಯೊಂದು ವಸ್ತುವಿನಲ್ಲಿ ತನ್ನ ಪ್ರೀತಿಪಾತ್ರಳ ಸಾದೃಶ್ಯವನ್ನು ಕಂಡು ವ್ಯಥಿತನಾಗುವನು. ಸತಾರ ಬಾರಿಸುವದರಲ್ಲವನು ಪ್ರವೀಣನಿದ್ದು ಅದನ್ನು ಬಾರಿಸಹೋದರೆ ಇಂದಿರೆಯು ಬಾರಿಸುವ ಗತ್ತಿನ ಹೊರ್ತು ಎರಡನೇ ಗತ್ತೇ ಬಾರಿಸಲಿಕ್ಕೆ ಬರಲೊಲ್ಲದು. ವಿಕ್ರಮೋರ್ವಶಿಯಲ್ಲಿ ಪುರೂರವ ರಾಜನು "ನನ್ನ ಊರ್ವಶಿಯನ್ನು ಕಂಡಿರಾ ?" ಎಂದು ಚೇತನಾಚೇತನಗಳನ್ನು ಕೂಡಾ ಕೇಳುತ್ತ ಹೊರಟವನು ಗಿಡಬಳ್ಳಿಗಳನ್ನು ತಬ್ಬಿಕೊಂಡು ತನ್ನ ಬಾಹುಪಾಶದಲ್ಲಿ ಊರ್ವಶಿಯೇ ಇರುವಳೆಂದು ನಟಿಸಿದ್ದು ನೋಡಿ ರಮಾಕಾಂತನು ಪುರೂರವನದೇಕೆ, ಕಾಲಿದಾಸನ ಉಪಹಾಸ ಕೂಡಾ ಒಂದು ವೇಳೆ ಮಾಡುತ್ತಿದ್ದನು. ಆದರೆ ಈಗ ಆ ಕವಿ ಚೂಡಾಮಣಿಯು ಯಥಾರ್ಥವನ್ನು ತಾಂತ್ರಿಕವಾಗಿಯೇ ವರ್ಣಿಸಿಬಿಟ್ಟನೆಂದು ನಮ್ಮ ರಮಾಕಾಂತ ಟೀಕಾಕಾರರು ಮನಗಂಡರು.

ರಮಾಕಾಂತನು ಶ್ರೀರಂಗಪಟ್ಟಣದಿಂದ ಬೆಂಗಳೂರಿಗೆ ಬಂದು ತನ್ನ ಉದ್ಯೋಗದಲ್ಲಿ ಉತ್ಸಾಹದಿಂದ ಮನಸ್ಸು ಹಾಕಿ ತಾನು ಬೆಂಗಳೂರಲ್ಲಿ ವಿಖ್ಯಾತ ನಾದ ಮನುಷ್ಯನಾಗಬೇಕೆಂದೆಣಿಸಿದ್ದನು. ಆದರೆ ವಿರಹ್ಯವ್ಯಥೆಯೆಂಬ ಶುಕ್ಲ ಕಾಷ್ಟವು ಅವನ ಬೆನ್ನೇ ಹತ್ತಿತ್ತು. ಯಾವ ವಿಷಯದಲ್ಲಿಯೂ ಮನಸ್ಸು ನಿಲ್ಲ ಲೊಲ್ಲದು. ದೈವದ ದುರ್ವಿಪಾಕದಿಂದಲೇ ತಾನು ಶ್ರೀರಂಗಪಟ್ಟಣಕ್ಕೆ ಹೋಗಿ ಆ ಮೋಹನಾಂಗಿಯನ್ನು ಕಂಡೆನೋ, ತನ್ನ ತಂದೆಯು ವಿರಹಾಗ್ನಿಯಿಂದಲೇ ಸಂತಪ್ತನಾಗಿ ತೀರಿಕೊಂಡನು ; ಆ ವಿರಹವು ತನಗೆ ಪಿತ್ರಾರ್ಜಿತಾಸ್ತಿಯಾಗಿ ತನ್ನಲ್ಲಿ ಬಂದು ಸೇರಿತೋ ಎಂದು ಒಂದಾವರ್ತಿ ಯೋಚಿಸುವನು, ಪರತಂತ್ರತೆಯ ಲೇಶವನ್ನು ಕೂಡಾ ಸಹಿಸದಂಥ ಅಭಿಮಾನಿಯಾದ ರಮಾಕಾಂತನು ಮುಗ್ಧಳಾದ ಅಬಲೆಯ ಮೋಹಪಾಶದಲ್ಲಿ ಸಿಕ್ಕು ತೊಳಲಾಡುತ್ತಿದ್ದನು. ಕಾರಾಗೃಹದಲ್ಲಿದ್ದ ಬಂದಿಯು ದೇಹದ ಸ್ವಾತಂತ್ರ್ಯವನ್ನು ಕಳಕೊಂಡರೂ ವಿಚಾರ ಸ್ವಾತಂತ್ರ್ಯವು ಅವನನ್ನು ಬಿಡಲಾರದು. ಆದರೆ ರಮಾಕಾಂತನ ಮನಸ್ಸು ಕೂಡಾ ಕಟ್ಟಿ ಹಾಕಲ್ಪ ಟ್ಟಿತ್ತು. ಇತರ ಬಂದಿಗಳನ್ನು ಅಧಿಕಾರಿಗಳು ನಿಯಮಿತ ಕಾಲದ ನಂತರ ಬಿಟ್ಟು ಬಿಡುವದುಂಟು. ಆದರೆ ಇಂದಿರೆಯ ಗುಣಗಳಿಂದ ರಮಾಕಾಂತನು ಬದ್ಧನಾಗಿ ದ್ದರೂ ಸ್ವತಃ ಇಂದಿರೆಗೆ ಈ ವಾರ್ತೆ ಗೊತ್ತಾಗದ್ದರಿಂದ ಇವನನ್ನು ಮುಕ್ತನಾಗಿ ಮಾಡುವವರಾರೂ ಇದ್ದಿಲ್ಲ. ಅದಕ್ಕಾಗಿ ರಮಾಕಾಂತನ ಬಂಧನವು ನಿರಂತರವಾದ ದ್ದೆಂದು ಕಂಡು ಬಂದದ್ದರಿಂದ ಬೇರೆ ವಿರಹಿಗಳಿಗಿಂತ ಈತನ ಸಂತಾಪವು ಹೆಚ್ಚಿನ

ವಾಗಿತ್ತು.

ಒಂದು ದಿನ ಬೆಳಗ್ಗೆದ್ದು ರಮಾಕಾಂತನು ಉಪಹಾರ ಮಾಡಿ ತನ್ನ ಪ್ರೀತಿಯ ಕಾಂತನು ಸಿಗರೇಟಸೇದುತ್ತ ಕಿಟಕಿಯಲ್ಲಿ ನಿಂತಿದ್ದನು. ನಾಗಪಂಚಮಿಯಾದ್ದರಿಂದ ಸ್ತ್ರೀಪುರುಷರು ಸ್ನಾನಮಾಡಿಕೊಂಡು ದೇವಸ್ಥಾನಗಳಿಗೆ ಹೋಗಿ ಬರುತ್ತಿದ್ದರು. ವಸ್ತ್ರಾಲಂಕಾರಗಳಿಂದ ಭೂಷಿತರಾದ ಯುವತಿಯರು ಅರಳು, ತಂಬಿಟ್ಟು, ಹಾಲು, ಗಂಧ, ಪುಷ್ಪ ಮುಂತಾದ ಪೂಜಾದ್ರವ್ಯಗಳನ್ನು ತಟ್ಟೆಗಳಲ್ಲಿಟ್ಟುಕೊಂಡು ಹೋಗಿಬರುವ ತರುಣರನ್ನು ಓರೆನೋಟದಿಂದ ನೋಡುತ್ತ ನಾಗರಾಜನ ಪೂಜೆಗೆ ಗುಂಪುಗುಂಪಾಗಿ ನಡೆದಿರುವರು. ಯೌವನಸ್ಥರು ಸೊಬಗಿನ ಪೋಷಾಕು ಹಾಕಿಕೊಂಡು ತಾರಾಮಂಡಲದಗೂಡ ಗ್ರಹಗಳು ಸಂಚರಿಸುವಂತೆ ಆ ತರುಣಿಯರ ಗುಂಪಿನೆಡೆಯಲ್ಲಿ ಸುಳಿದಾಡುತ್ತಿದ್ದರು, ತಮ್ಮ ತಮ್ಮ ಮನೆ ಮುಂದೆ ಥಳಿ ಹಾಕಿ ರಂಗವಲ್ಲಿಗಳಿಂದ ಬೀದಿಗಳನ್ನು ನಾಗರಿಕರು ಸುಶೋಭಿತವಾಗಿ ಮಾಡಿದ್ದರು. ಇದನ್ನೆಲ್ಲಾ ಕೌತುಕದಿಂದ ರಮಾಕಾಂತನು ನೋಡುತ್ತ ನಿಂತಿದ್ದನು. ಅಷ್ಟರಲ್ಲಿ ಒಬ್ಬ ಸೇವಕನು ಬಂದು ರಮಾಕಾಂತನ ಕಯ್ಯಲ್ಲಿ ಒಂದು ಪತ್ರ ತಂದು ಕೊಟ್ಟನು. ಅದನ್ನು ಓದಿ ನೋಡಲು ಪಂಡಿತಾ ರಾಧಾಬಾಯಿಯು ಸಾಮಾಜಿಕ ಸುಧಾರಣೆಯ ಬಗ್ಗೆ ವಾದವಿವಾದ ಮಾಡಲು ತನ್ನ ಸ್ನೇಹಿತರೊಡನೆ ಉಪಾಸನಾಸಮಾಜದ ಮಂದಿರದಲ್ಲಿ ಸರಿಯಾಗಿ ಹತ್ತುಗಂಟೆಗೆ ರಮಾಕಾಂತನ ಮಾರ್ಗ ಪ್ರತೀಕ್ಷೆ ಮಾಡುತ್ತಿರುವಳೆಂದು ಬರೆದಿತ್ತು. ರಮಾಕಾಂತನು ತೀವ್ರ ಭೋಜನ ಮಾಡಿಕೊಂಡು ಆ ಸಭಾಸ್ಥಾನಕ್ಕೆ ನಡೆದನು.

ಜಗನ್ನಾಥನ್ ಎಂಬನೊಬ್ಬ ಕ್ರೈಸ್ತನು ತನ್ನದೊಂದು ಚಿಕ್ಕಮನೆಯನ್ನು ಉಪಾಸನಾಸಮಾಜದವರಿಗೆ ಕಾಣಿಕೆಯಾಗಿ ಕೊಟ್ಟಿದ್ದನು. ಅಲ್ಲಿ ನಾಲ್ಕು ಬೆಂಚುಗಳೂ ನಾಲ್ಕೆಂಟು ಕುರ್ಚಿಗಳೂ ಒಂದು ಮೇಜೂ ಇದ್ದವು. ಆ ಮೇಜಿನ ಮೇಲೊಂದು ಚಿಕ್ಕದಾದ ಪಿಯಾನೋ ಪೆಟ್ಟಿಗೆಯಿತ್ತು. ರಮಾಕಾಂತನು ಹೋದಾಗ್ಯೆ ಅಲ್ಲಿ ಪಂಡಿತೆಯೂ ಬಾಪ್ಕುಳಪಂತನೂ, ಫಣೀಂದ್ರಾಚಾರ್ಯ ಆಯ್ಯರೂ, ಮದ್ರೂರ ನಟೇಶನೂ ಇದ್ದರು. ರಮಾಕಾಂತನು ಬಂದ ಮೇಲೆ ಮತ್ತೆ ನಾಲ್ಕಾರು ಜನ ಬಂದರು. ಅವರಲ್ಲಿ ನಬೋಕಿಶನ್ ಬಾನರ್ಜಿ ಎಂಬ ಬಂಗಾಲಿ ಗೃಹಸ್ಥನಿದ್ದನು. ರಾಧಾಬಾಯಿಯು ರಮಾಕಾಂತನ ಕಡೆ ಕೈಮಾಡಿ ಈ ಗೃಹಸ್ಥರು ಇಂಥವರು ಎಂದು ನೆರೆದವರಿಗೆ ಹೇಳಿ ಅವನ ಪರಿಚಯ ಮಾಡಿ ಕೊಟ್ಟಳು, ಕಮಲಾಬಾಯಿಯೂ ಯಾಕೆ ತಡ ಮಾಡಿದ್ದಾಳೆಂದು ಅಯ್ಯರು

ಕೇಳಿದರು.

"ಯಾಕೋ ತಿಳಿಯದು. ಅವಳೇ ಈ ದಿವಸ ಸ್ತ್ರೀಸ್ವಾತಂತ್ರ್ಯದ ವಾದ ನಡಿಸತಕ್ಕವಳು." ಎಂದು ಪಂಡಿತೆಯೆಂದಳು.

ಮುಂದೆ ನಾಲ್ಕಾರು ನಿಮಿಷಗಳಲ್ಲಿಯೇ ಕಯ್ಯಲ್ಲಿ ನಾಲ್ಕಾರು ಪುಸ್ತಕಗಳನ್ನು ತಕ್ಕೊಂಡು ಉಪನೇತ್ರ ಹಾಕಿಕೊಂಡು ಕಾಲಲ್ಲಿಯ ಬೂಟುಗಳು ಸಪ್ಪಳಾಗುವಂತೆ ವಯ್ಯಾರದಿಂದ ನಡೆಯುತ್ತ ಒಬ್ಬ ಯುವತಿಯು ಬಂದಳು. ಇವಳು ಬಂದ ಕೂಡಲೆ ಸಭೆಯ ಕೆಲಸಕ್ಕೆ ಆರಂಭವಾಯಿತು, ಎಲ್ಲರೂ ಪಂಡಿತಾ ರಾಧಾಭಾಯಿ ಯವರಿಗೆ ಅಧ್ಯಕ್ಷಳಾಗಲಿಕ್ಕೆ ಪ್ರಾರ್ಥಿಸಿದರು. ಅವಳು ಮುಖ್ಯಾಸನದಲ್ಲಿ ವಿರಾಜ ಮಾನಳಾದಳು.

"ಭಗಿನಿಯರಿರಾ, ಬಾಂಧವರುಗಳಿರಾ, ನಿಮ್ಮೆಲ್ಲರ ಆಗ್ರಹಕ್ಕಾಗಿ ನಾನು ಈ ಮಹಾಸನವನ್ನು ಸ್ವೀಕರಿಸಿದೆನು. ನೀವು ನನಗೆ ತೋರಿಸಿದ ಬಹುಮಾನಕ್ಕಾಗಿ ನಾನು ನಿಮ್ಮೆಲ್ಲರಿಂದ ಅನುಗ್ರಹಿತಳಾಗಿರುವೆನು. ಈ ದಿವಸದ ಕಾರ್ಯಕ್ರಮದ ಪ್ರಕಾರ ನನ್ನ ಭಗಿನಿಯರಾದ ಕಮಲಾಬಾಯವರು ಆಕಾಶದಲ್ಲಿರುವ ನಮ್ಮ ತಂದೆಯ ಸ್ತುತಿಪರವಾದ ಪದವನ್ನಂದು ಆ ಮೇಲೆ ಸ್ತ್ರೀಸ್ವಾಂತಂತ್ರ್ಯದ ಮೇಲೆ ವ್ಯಾಖ್ಯಾನ ಕೊಡುವರು. ಆಮೇಲೆ ಯಾರಿಗಾದರೂ ಏನಾದರೂ ಕೇಳುವದಿದ್ದರೆ ಕೇಳಬೇಕು. ಮೊದಲು ಪ್ರಾರ್ಥನೆ ಸಾಗಲಿ." ಎಂದು ಹೇಳಿ, ಅಧ್ಯಕ್ಷರಾದ ಪಂಡಿತಾ ರಾಧಾಬಾಯಿಯವರು ವಿಶ್ರಮಿಸಿದರು.

ಕಮಲಾಬಾಯಿಯು ಇಂಗ್ಲಿಶ್ ಪದದ ಧಾಟಿಯ ಮೇಲೆ ಪಿಯಾನೋ ಬಾರಿಸಹತ್ತಿದಳು. ಆ ಮೇಲೆ ಎಲ್ಲ ಸಮಾಜದವರು ಅಚ್ಚು ಹಾಕಿಸಿದ ಪ್ರಾರ್ಥನೆಯ ಪುಸ್ತಕಗಳನ್ನು ಕಯ್ಯಲ್ಲಿ ತಕ್ಕೊಂಡು ಮೊಣಕಾಲೂರಿ ನಿಂತರು. ಪಂಡಿತೆಯು ಮೂರು, ಹದಿಮೂರ, ಒಂಭತ್ತು, ಹದಿನೆಂಟನೆ ಪದಗಳನ್ನು ಹಾಡಿದಳು. ಎಲ್ಲರೂ ಪಲ್ಲ ಅನ್ನುತ್ತಿದ್ದರು. ಇದಾದ ಮೇಲೆ ಕಮಲೆಯು ಅಧ್ಯಕ್ಷರ ಹತ್ತರಿದ್ದ ಮೇಜಿನ ಸಮೀಪಕ್ಕೆ ಬಂದು ನಿಂತು, ಎಲ್ಲ ಸಭಿಕರನ್ನು ನೋಡಿ ಒಂದು ಕೈ ಮೇಜಿನ ಮೇಲೆಯೂ ಮತ್ತೊಂದು ಕೈ ತನ್ನ ಟೊಂಕದ ಮೇಲೆಯೂ ಇಟ್ಟುಕೊಂಡು ದೊಡ್ಡ ಧ್ವನಿತೆಗೆದು ಉಪನ್ಯಾಸಕ್ಕಾರಂಭಿಸಿದಳು. ಪಂಡಿತೆಯು ನಡುನಡುವೆ ಚಪ್ಪಳೆ ಹೊಡೆಯುವದನ್ನು ಕಂಡು ಎಲ್ಲರೂ ಚಪ್ಪಳೆ ಹೊಡೆದು ಗೊಂದಲೋ ಗೊಂದಲವೆಬ್ಬಿಸುವರು. ವ್ಯಾಖ್ಯಾತ್ರಿಯೂ ನಡುನಡುವೆ ಮೇಜಿನ ಮೇಲೆ ನೀರು ತುಂಬಿಟ್ಟ ಗ್ಲಾಸ ತಕ್ಕೊಂಡು ತನ್ನ ಗಂಟಲಾರಿಸಿಕೊಳ್ಳುತ್ತಿದ್ದಳು. ತಾಸು ದೀಡು

ತಾಸಿನವರೆಗೆ ಅಸಂಬದ್ಧವಾದ ಮಾತುಗಳಿಂದ ಪರಿಪ್ಲುತವಾದ ಈ ವ್ಯಾಖ್ಯಾನವು ಸಮಾಪ್ತವಾಯಿತು. ಆ ಮೇಲೆ ಈ ಸಮಾಜದ ಕಾರ್ಯದರ್ಶಿಯಾಗಿದ್ದ ನಟೇಶನು ತನ್ನದೊಂದು ವಿಷಯದ ಮೇಲೆ ವ್ಯಾಖ್ಯಾನ ಕೊಡಲೆದ್ದು ನಿಂತನು. ಅಧ್ಯಕ್ಷರು ಕಾರ್ಯಕ್ರಮದಲ್ಲಿ ಈ ವಿಷಯವಿಲ್ಲೆಂದು ನಟೇಶನಿಗೆ ಕೂಡಲಾಜ್ಞಾಪಿಸಿದರು.

" ನನ್ನ ವಿಷಯವು ಮನೆತನಸ್ತರೂ ಸಾಮಾನ್ಯ ಜನರೂ ' ಎಂಬದಿದ್ದು ಈ ಮಹತ್ವವಾದ ವಿಷಯವನ್ನು ಈ ಸಭೆಯಲ್ಲಿ ನಾಲ್ಕಾವರ್ತಿ ತೆಗೆಯಲುದ್ಯುಕ್ತನಾದರೂ ನನಗೆ ಹೇಳಲಪ್ಪಣೆ ದೊರೆಯಲಿಲ್ಲ. ಅಧ್ಯಕ್ಷರು ಈ ದಿವಸ ನನಗೆ ಮಾತಾಡಲಪ್ಪಣೆ ಕೊಡದಿದ್ದರೆ ಈ ಸಭೆಯ ಕಾರ್ಯದರ್ಶಿತ್ವವನ್ನು ಬಿಟ್ಟು ಬಿಡುವೆನು " ಎಂದು ನಟೇಶನಂದನು.

" ಕಾರ್ಯಕ್ರಮದಲ್ಲಿಲ್ಲದ ವಿಷಯಗಳ ಮೇಲೆ ಇಲ್ಲಿ ವ್ಯಾಖ್ಯಾನ ಕೊಡಲಿಕ್ಕೆ ಬರುವದಿಲ್ಲ. ನಟೇಶರಾಯರು ಕಾರ್ಯದರ್ಶಿತ್ವವನ್ನು ಬಿಟ್ಟರೆ ಇನ್ನೊಬ್ಬರು ಕಯ್ಕೊಳ್ಳುವರು." ಎಂದು ಕಮಲೆಯೆಂದಳು.

" ಹಾಗಾದರೆ ಈ ಸಭೆಯ ಸಭಾಸದತ್ವವನ್ನೂ ಕಾರ್ಯದರ್ಶಿತ್ವವನ್ನೂ ಈಗಲೆ ನಾನು ಬಿಟ್ಟುಕೊಟ್ಟೆನು." ಎಂದು ಹೇಳಿ ನಟೇಶನು ಸಭೆಯೊಳಗಿಂದ ಎದ್ದು ನಡೆದನು.

" ನಟೇಶರು ಹೋದ ಬಗ್ಗೆ ನಾನು ದುಃಖಿತಳಾಗಿರುವೆನು. ಆದರೂ ಕಾರ್ಯಕ್ರಮದ ಪ್ರಕಾರ ಕೆಲಸ ನಡೆಯತಕ್ಕದ್ದು ಸರಿಯಾದ ಮಾತು. ಆದ್ಯರೆ, ನೀವು ಪುನರ್ವಿವಾಹ ಮಾಡಿಕೊಂಡದ್ದು ನೋಡಿ ನನಗೆ ಮಿತಿಮೀರಿದ ಆನಂದವಾಗುವದು " ಎಂದು ಅಧ್ಯಕ್ಷರೆಂದರು.

ಬಾನರ್ಜಿ :—ಆದ್ಯರೆ, ನೀವು ಪುನರ್ವಿವಾಹ ಸಶಾಸ್ತ್ರವೆಂದು ಮಾಡಿಕೊಂಡಿರೋ, ಏನು ಇದು ಸಮಾಜಕ್ಕೆ ಕೇವಲ ಹಿತಕರವಾದದ್ದೆಂದು ಮಾಡಿಕೊಂಡಿರೋ ?

ಫಣೀಂದ್ರಾಚಾರ್ಯ:—ಶಾಸ್ತ್ರಸಮ್ಮತವಿರಲಿ ಇಲ್ಲದಿರಲಿ ; ಪುನರ್ವಿವಾಹವು ಸಮಾಜಕ್ಕೆ ಹಿತಕರವಾದದ್ದೆಂದು ನನ್ನ ಮತವಿರುತ್ತದೆ. ಇನ್ನು ಶಾಸ್ತ್ರವೆಂದರೆ ' ನಷ್ಟೆ ಮೃತೆ ' ಎಂಬ ನಾರದರ ವಚನವಿರಲಿಕ್ಕೆ ಪುನರ್ವಿವಾಹವು ಶಾಸ್ತ್ರಸಮ್ಮತವಲ್ಲವೆಂದು ಹೇಳುವ ಗಂಡಸು ಯಾವನಾದರೂ ಇದ್ದರೆ ನನ್ನೆದುರಿಗೆ ಬರಲಿ.

ಗಫೂರಸಾಹೇಬ ;—ವಹವ್ವಾ ! ! ಫಣೀಂದ್ರಸ್ವಾಮೀ, ನೀವು ಈ ಹಿಂದು

ಭಟ್ಟರ ಟೊಂಕವನ್ನೇ ಮುರಿದುಕೊಟ್ಟರು!!

ರಮಾಕಾಂತ :—ನಾನು ಹೊಸಬನಾದ್ದರಿಂದ ಮಧ್ಯದಲ್ಲಿ ಮಾತಾಡಿದ್ದಕ್ಕೆ ಕ್ಷಮೆ ಇರಲಿ. ಫಣೀಂದ್ರಾಚಾರ್ಯರು ನಾರದ ವಚನದ ಆಧಾರ ಹೇಳುತ್ತಾರೆ. 'ನಷ್ಟೇ ಮೃತೆ' ಶ್ಲೋಕದ ಕಡೆಯ ಶಬ್ದಗಳು ಆಚಾರ್ಯರು ಹೇಳಿದಂತೆ ಎಂದಿದ್ದರ ವಿ+ಧೀ ಕ್ರಿಯಾಪದದ ಅರ್ಥವು ಅನುಲ್ಲಂಘನೀಯವಾದ ಅಜ್ಞೆ ಎಂತಾಗುವದು. ಅಂದ ಮೇಲೆ ವಿಧವೆಯರ ಮನಸಿಲ್ಲದಿದ್ದರೂ ಅವರನ್ನು ಹಿಡಿದು ಪುನರ್ವಿವಾಹ ಮಾಡಬೇಕಾಗುವುದು. ನಾರದಸ್ಮೃತಿಯ ಕೆಲವು ಪ್ರತಿಗಳಲ್ಲಿ ನಷ್ಟೇ ಮೃತೆ ಶ್ಲೋಕದ ಕಡೆಯ ಶಬ್ದಗಳು ಪತಿರನ್ಯೇನ ದೃಶ್ಯತೆ ಎಂದಿದ್ದರೆ ಪುನರ್ವಿವಾಹದ ಖಂಡನವೇ ಆಯಿತಲ್ಲ. ಇದಿರಲಿ ಆಚಾರ್ಯರು ಹೇಳಿದಂತೆ ಆ ಶ್ಲೋಕವಿದ್ದು ಅದರರ್ಥವು ಅವರು ಹೇಳಿದಂತಿದ್ದರೆ ವಿವಾಹದಲ್ಲಿ ವಧುವರ ಲಕ್ಷಣವು ಅನನ್ಯಪೂರ್ವಿಕಾಂ ಕಾಂತಾಂ ಎಂತಿರಲು ಅನ್ಯಪೂರ್ವಿಕೆಯಾದ ವಿಧವೆಯ ವಿವಾಹವೆಂತಾಗುವದು ?

ಕಮಲಾ :—ನಮ್ಮ ಸಮಾಜದಲ್ಲಿ ಯಾವ ಧರ್ಮದ ಗ್ರಂಥಗಳನ್ನೂ ಪ್ರಮಾಣವೆಂದೆಣಿಸುವದಿಲ್ಲ. ಯುಕ್ತಿವಾದದಿಂದ ಪುನರ್ವಿವಾಹವನ್ನು ಖಂಡಿಸುವದಿದ್ದರೆ ಈ ವಿಷಯದ ಚರ್ಚೆಯಾಗತಕ್ಕದ್ದು. ಮೇಲಾಗಿ ಇದೇ ವಿಷಯದ ಮೇಲೆ ಇಲ್ಲಿ ವಾದವಿವಾದವಾಗಿ ಈ ಸಭೆಯವರು ಪುನರ್ವಿವಾಹವು ಸಮ್ಮತವೆಂದು ಗ್ರಹಿಸಿಕೊಂಡಿದ್ದಾರೆ.

ಬಾನರ್ಜಿ :—ಹಾಗಾದರೆ ಒಣ ಚರ್ಚೆ ಯಾಕೆ ?

ಅಧ್ಯಕ್ಷ :—ಈ ವಿಷಯದ ಮೇಲೆ ವಾದಕಾರಣವಿಲ್ಲ.

ಬಾನ್ ಮಹಂತಪ್ಪಾ :—ಅದ್ಯರೆಲ್ಲ, ವಿಧವಾವಪನವು ಹಿಂದೂ ಶಾಸ್ತ್ರಗಳ ಪ್ರಕಾರ ಅವಶ್ಯವಾದದ್ದೇನು ?

ಕಮಲಾ :—ಅವರ ಶಾಸ್ತ್ರ ಹೇಗದೋ ನನಗೆ ಗೊತ್ತಿಲ್ಲ. ಅವಶ್ಯವಿದ್ದದ್ದಾದರೆ ಅಲ್ಪವಯಸ್ಕರಾದ ವಿಧವೆಯರ ಕ್ಷೌರ ಮಾಡದೆ ಕೆಲವು ವರ್ಷ ಹಾಗೇ ಬಿಡುತ್ತಾರಲ್ಲ. ಕೆಲವು ವರ್ಷ ಬಿಟ್ಟರೆ ಮುಂದಾದರೂ ಯಾಕೆ ಬಿಡಬಾರದು ? ಇಂತಿಷ್ಟು ವರ್ಷ ಬಿಟ್ಟರಡ್ಡಿ ಇಲ್ಲೆಂದು ಶಾಸ್ತ್ರವಚನಗಳುಂಟೇನು ?

ಗಫೂರ್ :—ಪುರಾಣದಲ್ಲಿ ವಿಧವೆಯರ ಕ್ಷೌರ ಹೇಳಿದೆ.

ಫಣೀಂದ್ರ :—ಔರ್ಧ್ವದೇಹಿಕ ಕ್ರಿಯೆಯ ಕಾಲಕ್ಕೆ ಪುರುಷರಿಗೆ ಕ್ಷೌರ ವಿಧಿಸಿದಂತೆ ಮೃತನ ಹೆಂಡತಿಗಾದರೂ ಕ್ಷೌರ ಹೇಳಿದೆ. ಆದರೆ ಅವಳು ಪುನಃ

ಪುನಃ ಕ್ಷೌರಕೊಳ್ಳಗಾಗಬೇಕೆಂದು ಎಲ್ಲಿ ಹೇಳಿದೆ ?

ಅಧ್ಯಕ್ಷ :—ಮಹಪ್ಪಾ ಆಚಾರ್ಯರೇ ನೀವೊಂದು ಹುಲಿಯೇ ಇರುವಿರಿ.

ಫಣೀಂದ್ರ :—ಈ ವಿಷ್ಣುಪುರಾಣದ ವಚನವಾದರೂ ಮೂಲಗ್ರಂಥದಲ್ಲಿ ಇಲ್ಲ. ಈ ವಚನವನ್ನಾವನೋ ಆಧುನಿಕನು ಹೊಸದಾಗಿ ಸೇರಿಸಿಬಿಟ್ಟಿರುವನು.

ಜಾನ ಮಹಂತಪ್ಪಾ :—ಈ ದೇಶದಲ್ಲಿ ಇದೊಂದು ರೂಢಿಯಾಗಿದೆ. 'ಶಾಸ್ತ್ರಾತ್ ರೂಢಿರ್ಬಲೀಯಸೀ.'

ಬಾನರ್ಜಿ :—ರೂಢಿಯಿಂದ ಸಿದ್ಧವಾದರೆ ಚಿಂತಿಲ್ಲ,

ಅಧ್ಯಕ್ಷ :—ಆಚಾರ್ಯರೇ ಇದಕ್ಕೇನನ್ನುವಿರಿ ?

ಫಣೀಂದ್ರ :—ರೂಢಿಯು ಬಲವತ್ತರವಾಗಬೇಕಾದರೆ ಅದು ಪುರಾತನ ಕಾಲದಿಂದ ನಡೆದುಬಂದಿರಬೇಕು. ಈ ರೂಢಿಯು ಕ್ರಿಸಿಶಕದ ೧೫೦೦ದ ಕಿಂತ ಮುಂಚಿನದಂತೂ ಅಲ್ಲೇಅಲ್ಲ.

ಅಧ್ಯಕ್ಷ :—ಇದಕ್ಕೇನಾದರೂ ಆಧಾರವುಂಟೋ ?

ಫಣೀಂದ್ರ :—ಇಪ್ಪತ್ತು ವರ್ಷಗಳ ಪೂರ್ವದಲ್ಲಿ ವಿದ್ವದ್ವರ್ಯರಾದ ವೆಂಕಟರಾವ ಕಟ್ಟೀ ಇವರು "ವಿಧವಾ ವಪನ ಅನಾಚಾರ"ವೆಂಬ ಗ್ರಂಥವನ್ನು ಪ್ರಸಿದ್ಧ ಮಾಡಿದರು. ಅದರಲ್ಲಿ ಅವರು ವಿಧವಾಜನರ ವಪನವು ಶಾಸ್ತ್ರದಿಂದ ಸಿದ್ಧವಾದ ಮಾತಲ್ಲೆಂದು ಸಪ್ರಮಾಣವಾಗಿ ತೋರಿಸಿರುವರು. ಅದಲ್ಲದೆ ಯಾರಾದರೂ ವಿಧಾವಾ ವಪನಕ್ಕೆ ಸಾಧಕಗಳಾದ ವಚನಗಳನ್ನು ಪ್ರಸಿದ್ಧ ಗ್ರಂಥಗಳ ಆಧಾರದಿಂದ ತೋರಿಸಿದರೆ ಸಹಸ್ರ ರೂಪಾಯಿ ಬಹುಮಾನ ಕೊಡುವೆವೆಂದು ವೆಂಕಟರಾಯರು ಸಾರಿರುವರು. ಮತ್ತು ಕ್ರಿಸ್ತಶಕದ ೧೫೦೦ರ ಕಿಂತ ಪೂರ್ವದಲ್ಲಿ ವಿಧವಾ ವಪನವು ರೂಢಿಯಲ್ಲಿತ್ತೆಂದು ತೋರಿಸಿದವರಿಗೆ ೫೦೦ ರೂಪಾಯಿ ಕೊಡಲಿಕ್ಕೊಪ್ಪಿದರು. ಈ ವರಿಗೆ ಈ ಎರಡೂ ಪಾರಿತೋಷಕಗಳನ್ನೆತ್ತಿಕೊಂಡು ಹೋಗಲಿಕ್ಕೆ ಯಾರೂ ಮುಂದಕ್ಕೆ ಬರಲಿಲ್ಲವಲ್ಲ !

ಅಧ್ಯಕ್ಷ :—"ವಿಧವಾ ವಪನ ಅನಾಚಾರ"ವೆಂಬ ಅಮೂಲ್ಯ ನಿಬಂಧವು ಅಸ್ತಿತ್ವದಲ್ಲಿರಲಿಕ್ಕೂ ಅದನ್ನು ನಾವು ಓದಲಿಲ್ಲ. ಇದು ಲಾಂಛನದ ಮಾತು. ನಮ್ಮ ಸಮಾಜದಿಂದ ಜನರಲ್ಲಿ ಹಂಚಲಿಕ್ಕಾಗಿ ಈ ನಿಬಂಧದ ಐನೂರು ಪ್ರತಿಗಳನ್ನು ಸಂಗಡಲೇ ತರಿಸತಕ್ಕದ್ದು.

ಎಲ್ಲರು :—ಇದಕ್ಕೆ ನಾವು ಸಮ್ಮತಿ ಪಡುತ್ತೇವೆ.

ಅಧ್ಯಕ್ಷ :—ಈ ನಿಬಂಧದ ಶೋಧದ ಸನ್ಮಾನಕ್ಕಾಗಿ ನಾವು ಈ ದಿವಸದ

ಸಭೆಯನ್ನು ಮುರಿಯುತ್ತೇವೆ.

ಕೂಡಲೆ ಪ್ರಾರ್ಥನೆಯಾಗಿ ಸಮಾಜದ ಭಕ್ತರೆಲ್ಲರು ತಮ್ಮ ತಮ್ಮ ಮನೆಗಳಿಗೆ ಹೊರಟು ಹೋದರು. ಪಂಡಿತ, ಆಚಾರ್ಯ, ಕಮಲಾ, ರಮಾಕಾಂತ ಇಷ್ಟು ಜನರುಳಿದರು.

"ರಮಾಕಾಂತರಾವ್, ನನ್ನ ಪ್ರಿಯಶಿಷ್ಯಳಾದ ಕಮಲಾಬಾಯಿ ಮುರಳೂರ ಇವಳ ಪರಿಚಯು ನಿಮಗೆ ಮಾಡಿಕೊಡುತ್ತೇನೆ. ಇವಳು ಪುಣೆಯಲ್ಲಿ ದೇಶಭಕ್ತ ಕರ್ವೆ ಇವರ ವಿಧವಾ ಮಹೋದಧಿಯೆಂಬ ಪಾಠಶಾಲೆಯಲ್ಲಿ ಕಲಿತು ಬಂದಿರು ವಳು. ಪುನರ್ವಿವಾಹವನ್ನು ಪ್ರಚಾರಣೆಯಲ್ಲಿ ತರಲಿಕ್ಕೂ ಬೇರೆ ಸುಧಾರಣೆಗಳನ್ನು ಹಬ್ಬಿಸಲಿಕ್ಕೂ ಇವಳು ಅಶ್ರಾಂತ ಶ್ರಮಪಡುತ್ತಿರುವಳು."

ಕಮಲೆಯು ದಿಟ್ಟತನದಿಂದೆದ್ದು ರಮಾಕಾಂತನ ಕೈ ಹಿಡಿದು ಹಿಂಡಿ ರಕ್ತ ತೆಗೆಯುವಳೋ ಎಂಬಂತೆ ಹಸ್ತಸ್ಪರ್ಶ ಮಾಡಿ "ನಿಮ್ಮ ಪರಿಚಯುವಾದದ್ದರಿಂದ ನನಗೆ ಬಹಳೇ ಸಂತೋಷವಾಗಿರುವದು. ನಮ್ಮ ತಾಯಿಯು ಕೂಡಾ ನಿಮ್ಮನ್ನು ಕಂಡು ಆನಂದ ಪಡುವಳು. ದಯಮಾಡಿ ನಮ್ಮ ಮನೆಗೆ ಒಂದಾವರ್ತಿ ಬರುವಿ ರೆಂದಾಶಿಸುತ್ತೇನೆ." ಎಂದು ನುಡಿದಳು.

"ಕಮಲಾಬಾಯವರ ಪರಿಚಯುವಾದದ್ದರಿಂದ ನನಗೂ ಆನಂದವೇ ಆಗಿರು ವದು" ಎಂದು ರಮಾಕಾಂತನಂದನು.

"ರಮಾಕಾಂತರೇ, ಈ ಆಚಾರ್ಯರ ಗುರುತನ್ನಾದರೂ ನೀವು ಮಾಡಿ ಕೊಳ್ಳಬೇಕು. ಇವರು ಕುಂಭಕೋಣದ ದೊಡ್ಡ ಮನೆತನದವರು, ಮಹಾ ಪರೋಪಕಾರಿಗಳು. ಪುನರ್ವಿವಾಹವು ಪ್ರಚಾರಣೆಯಲ್ಲಿ ಬರಬೇಕೆಂತಲೇ ಸತಿ ಸುತರಿದ್ದಾಗ್ಯೂ ಪುನರ್ವಿವಾಹ ಮಾಡಿಕೊಂಡರು. ಕೆಲವು ಬಹಿರಂಗ ಸುಧಾರಕರು ಅವಿದ್ಧಯೋನಿಯರಾದ ವಿಧವೆಯರನ್ನು ಮಾತ್ರ ಲಗ್ನ ಮಾಡಿಕೊಳ್ಳಲಿಕ್ಕೆ ಒಪ್ಪು ತ್ತಾರೆ. ವಿದ್ಧಯೋನಿಯರನ್ನು ಲಗ್ನ ಮಾಡಿಕೊಳ್ಳಲಿಕ್ಕೆ ಹೇಸಿಕೊಂಡೇ ಇವರು ಹೀಗೆ ಮಾಡುತ್ತಾರಷ್ಟೇ! ಆದರೆ ನಮ್ಮ ಆಚಾರ್ಯರು ಇಂಥ ಸೂಕ್ಷ್ಮ ವಿಚಾರಕ್ಕೆ ಕಿಂಚಿತ್ತಾದರೂ ಒಳಗಾಗದೆ ಮೂವರು ಪತಿಗಳಿಂದ ಸೇವಿತಳಾಗಿ ಮೂರಾವರ್ತಿ ವಿಧವೆಯಾದ ನಾಗಲಕ್ಷ್ಮಿಯೆಂಬ ಪತಿವ್ರತಾ ಶಿರೋಮಣಿಯನ್ನು ಉದ್ಧಾರ ಮಾಡಿದರು.

"ಪಂಡಿತಾಬಾಯವರೇ, ಸುಧಾರಣೆಯ ಸೇವೆಯನ್ನು ನಾನು ಮನಮುಟ್ಟಿ ಮಾಡಿರುವೆನು. ಅಪ್ಪರಿಪ್ಪರ ಹುಡುಗರಿಗೆ ಬೋಧಿಸಿ ಅವರ ತಂದೆ ತಾಯಿಗಳ

ಶ್ರಾದ್ಧ ಪಕ್ಷಗಳನ್ನು ಲೋಪವಮಾಡಿಸಿರುವೆನು. ಪರಂಪರಾಗತವಾದ ಕುಲಧರ್ಮ ಗಳನ್ನು ನಿಲ್ಲಿಸಿ ಬಿಟ್ಟಿರುವೆನು. ಈ ಹುಡುಗರು ಈ ತತ್ವಗಳನ್ನು ಅನ್ಯರಿಗೆ ಬೋಧಿ ಸುತ್ತಿರುವರು. ಅಂದರೂ ನನ್ನ ಸಮಾಧಾನವಾಗಿಲ್ಲ. ಏನು ರಾಯರೇ, ನೀವಾದರೂ ಸುಧಾರಣೇಚ್ಛುಗಳಿರುವಿರೆಂದು ತಿಳಿಯುತ್ತೇನೆ." ಎಂದು ಫಣೀಂದ್ರ ದಾಸಾ ಚಾರ್ಯರು ಮಾತಾಡಿದರು. ರಮಾಕಾಂತನೆದ್ದು ಈ ಸರ್ವಾರಿಷ್ಟ ಕಳೆ ಸುರಿಯು ತ್ತಿದ್ದ ಬ್ರಾಹ್ಮಣಾಧಮನ ಹಸ್ತಸ್ಪರ್ಶ ಮಾಡಲಾರದೆ ದೂರದಿಂದಲೇ ನಮಸ್ಕಾರ ಮಾಡಿದನು.

"ಆಚಾರ್ಯರೆ, ಹಿಂದೂ ಸಮಾಜದಲ್ಲಿ ಅಲ್ಪ ಸ್ವಲ್ಪ ಸುಧಾರಣೆಯಾಗುವದು ಅವಶ್ಯವದೆ. ಆದರೆ ಈಗಿನ "ಸುಧಾರಕ"ರೆಂಬ ಕ್ರೈಸ್ತರ ಗುಮಾಸ್ತರು ಮಂಡಿಸಿದ ಸ್ತೋಮ ಮಾತ್ರ ನನಗೆ ಸರಿಬರುವದಿಲ್ಲ, ನನ್ನಭಿಪ್ರಾಯವು ತಪ್ಪಿರಬಹುದು. ಯಾಕಂದರೆ ನಾನು ಅನುಭವಹೀನನೇ ಇರುವೆನು. ಅದು ಹೇಗೇ ಇರಲಿ ತಮ್ಮಂಥ ಬುದ್ಧಿವಂತರ ಪರಿಚಯುವಾದದ್ದೇ ದೊಡ್ಡ ಲಾಭವೆಂದೆಣಿಸುತ್ತೇನೆ." ಎಂದು ರಮಾಕಾಂತನಂದನು.

"ರಮಾಕಾಂತರಾಯರು ಈ ದಿವಸ ನನ್ನ ಮನೆಗೆ ಬರುವವರಿದ್ದಾರೆ. ಕಮಲಾ, ನೀನಾದರೂ ಅಗತ್ಯವಾಗಿ ಬರತಕ್ಕದ್ದು. ನಾಳಿಗೆ ಅವರೂ ನಾನೂ ಮಿಲಿತರಾಗಿ ನಿನ್ನ ಮನೆಗೆ ಅಗತ್ಯವಾಗಿ ಬರುತ್ತೇವೆ. ರಮಾಕಾಂತರೆ, ದಯಮಾಡಿ ನೀವು ಈ ದಿವಸ ಬಡವಿಯ ಮನೆ ನೋಡಿ ಹೋಗಬೇಕೆಂದು ಇಚ್ಛಿಸುತ್ತೇನೆ." ಎಂದು ಪಂಡಿತಾ ರಾಧಾಬಾಯಿಯು ಹೇಳಿದಳು.

ರಮಾಕಾಂತನೊಪ್ಪಿಕೊಂಡ ಮೇಲೆ ಎಲ್ಲರೂ ಎದ್ದು ಸಂತೋಷದೊಡನೆ ತಮ್ಮ ತಮ್ಮ ಮನೆಗಳಿಗೆ ಹೋದರು.

ನಟೇಶನು ಉಪಾಸನಾಸಮಾಜದಿಂದೆದ್ದವನೆ ರಮಾಕಾಂತನ ಮನೆಗೆ ಹೋಗಿ ಆತನ ಬಾಗಿಲ ಕಾಯುತ್ತ ಕುಳಿತಿದ್ದನು. ರಮಾಕಾಂತನು ಬಂದ ಕೂಡಲೆ ನಟೇಶನು, ಅವನ ಸಂಗಡ ಮನೆಯಲ್ಲಿ ಹೋಗಿ,

"ರಾಯರೆ, ನನಗಿನ್ನು ಬೆಂಗಳೂರು ಸಾಕಾಯಿತು. ಎಲ್ಲಿ ಹೋದರೂ ನನಗೆ ಮಾನವಿಲ್ಲದಂತಾಗಿರುವದು. ನಿನ್ನೆ ನಮ್ಮ ಸಾಹೇಬರು ಬಾಯಿಗೆ ಬಂದಂತೆ ಬಯ್ದು ಚಬುಕದಿಂದ ಹೊಡೆಯ ಬಂದರು. ಈ ದಿವಸ ನಾನು ಮಾತಾಡ ಹೋದರೆ ಪಂಡಿತೆಯೂ ಕಮಲೆಯೂ ಕೂಡಿ ನಾಲ್ಕು ಜನರಲ್ಲಿ ನನ್ನಪಮಾನ ಮಾಡಿದರು, ನಾನು ಕಾಶಿಗೆ ಹೋಗುವೆನು. ಅಲ್ಲಿ ನಿಮ್ಮ ಬೇನಿ ಅಸೆಂಟಳ

ಸಹಾಯದಿಂದ ಅಮೇರಿಕೆಗೆ ಹೋಗಬೇಕೆನ್ನುವೆನು. ಕಾಶಿಯಲ್ಲಿರುವದು ಪ್ರಶಸ್ತ ಕಂಡರೆ ಅಲ್ಲಿಯೇ ಇರುವೆನು. ಕಾಶಿಯಲ್ಲಿ ಯಾರಾದರೂ ನಿಮ್ಮ ಸ್ನೇಹಿತರಿದ್ದರೆ ಪತ್ರ ಕೊಡುವಿರಾ?" ಎಂದು ದೀನವಾಣಿಯಿಂದ ಕೇಳಿದನು.

"ನೀನು ಹೀಗೆ ಎದ್ದು ಹೋದರೆ ಸಾವಿತ್ರಮ್ಮನ ಗತಿಯೇನು?" ಎಂದು ರಮಾಕಾಂತನಂದನು.

"ದೇವರೇ ಗತಿ! ಜಗತ್ತೇ ನನಗೆ ಬೇಡಾದ ಮೇಲೆ ಈ ತಾಯಿಯು ಕೂಡಾ ಬೇಡ. ನಮ್ಮಮ್ಮನೇನು ಸಾಮಾನ್ಯಳೇನು? ಅವಳು ತನ್ನ ಹೊಟ್ಟೇ ತಾನು ತುಂಬಿಕೊಂಡು ಗಂಟು ಮಾಡಿಕೊಂಡಿರುವಳು."

"ಒಳ್ಳೇದು ಕಾಶಿಯಲ್ಲಿ ಬ್ರಹ್ಮಸಮಾಜದ ಕಾರ್ಯದರ್ಶಿಯಾದ ಪ್ರಮಾದ ನಾಥ ದತ್ತರೆಂಬ ನನ್ನ ಕಾಲೇಜದ ಸ್ನೇಹಿತರಿರುವರು. ಅವರು ತಮ್ಮ ಕಯ್ಯಿಂದಾ ದಷ್ಟು ನಿನಗೆ ಸಹಾಯ ಮಾಡುವರು."

ನಟೇಶನು ರಮಾಕಾಂತನ ಕಾಲ್ಗೆರಗಿ ಅವನು ಬರಕೊಟ್ಟ ಪತ್ರವನ್ನು ತಕ್ಕೊಂಡು,

"ರಾಯರೇ ನನ್ನಿಂದಾದ ಅಪರಾಧಗಳನ್ನು ಸರ್ವಥಾ ಮರೆತುಬಿಡಿರಿ. ನಾನಿನ್ನು ನಿಮ್ಮ ದಾಸನಂತೆ ಆಚರಿಸುತ್ತಿರುವೆನು."

"ನಟೇಶಾ, ಎಲ್ಲರೂ ಸಮಾನಮರ್ಯಾದೆಯವರಾಗಿರಬೇಕೆಂಬವನು ಹೀಗೆ ನನ್ನ ದಾಸನಾಗುವಿಯಾ?" ಎಂದು ನಗುತ್ತ ರಮಾಕಾಂತನಂದನು. ನಟೇಶನು ಹಾಗೇ ನಡೆದನು.

ಆ ದಿವಸ ಸಂಜೆ ನಾಲ್ಕು ಗಂಟೆಗೆ ರಮಾಕಾಂತನು ಪಂಡಿತೆಯ ಮನೆಗೆ ಹೋದನು. ಅವಳ ಮನೆಯ ತಲಬಾಗಿಲದ ಮೇಲ್ಭಾಗದಲ್ಲಿ "ಸರಸ್ವತೀ ಸದನದ ಶಾಖೆ ಬೆಂಗಳೂರ" ಎಂಬಕ್ಷರಗಳುಳ್ಳ ಹಲಗೆಯಿತ್ತು. ಮನೆಯು ಬಹು ಪುರಾತನ ವಾದದ್ದಾಗಿದ್ದರೂ ಪಂಡಿತೆಯು ಅದನ್ನು ಒಳ್ಳೇ ಓರಣದಿಂದಿಟ್ಟಿದ್ದಳು. ಪಂಡಿತೆಯು ಕೂಡ್ರುವ ಸ್ಥಳವು ಅಟ್ಟದ ಮೇಲಿತ್ತು. ದೊಡ್ಡದಾದ ಕೋಣೆಯ ಮಧ್ಯದಲ್ಲಿ ಕೆಂಪು ಬನಾತಿನಿಂದ ಆಚ್ಛಾದಿತವಾದ ಮೇಜು ಇಟ್ಟಿತ್ತು. ಅಂದವಾದ ಕನ್ನಡಿಯ ಕಪಾಟುಗಳಲ್ಲಿ ಪುಸ್ತಕಗಳು ತುಂಬಿದ್ದವು. ಬಾಕಿಲದ ಎದುರಿಗಿನ ಗೋಡೆಗೆ ನಿಲುವುಗನ್ನಡಿಯಿತ್ತು. ಆದರೆರಡೂ ಬದಿಗೂ ಅಬ್ರಾಹಾಮ್, ಮೋಸೆಸ, ಕೇಶಬ ಚಂದ್ರಸೇನ್, ರಣಧೀರಸಿಂಗ (ಪಂಡಿತೆಯ ದ್ವಿತೀಯ ಪತಿ ರಾಜರು) ಮುಂತಾದವರ ಚಿತ್ರಗಳಿದ್ದವು.

ರಮಾಕಾಂತನು ಬರುವದಕ್ಕೆ ಮುಂಚಿತವಾಗಿಯೇ ಕಮಲೆಯು ಬಂದು ಈ ಕೋಣೆಯಲ್ಲಿ ಕುಳಿತಿದ್ದಳು. ಇವನು ಬರುವದನ್ನು ಕಿಟಕಿಯೊಳಗಿಂದ ನೋಡಿ ಕಮಲೆಯು ನಿಲುವುಗನ್ನಡಿಯಲ್ಲಿ ತನ್ನ ಮುಖ ನೋಡಿಕೊಳ್ಳುತ್ತಿದ್ದಳು. ಕಮಲೆಯು ಸಶಕ್ತಳಿದ್ದು ಕಿಂಚಿತ್ ಸ್ಥೂಲಳೆಂದರೂ ಬರುವದು. ಗೋವೆಯ ಸ್ತ್ರೀಯರಂತೆ ತಲೆಬಾಚಿಕೊಂಡು ಹೆಣಲು ಹಾಕದೆ ಹಾಗೇ ಸೊಬಗಿನಿಂದ ಕೂದಲು ಕಟ್ಟಿಕೊಂಡು ಅದಕ್ಕೆ ತರತರದ ಬಣ್ಣದ ಪುಷ್ಪದವನಗಳಿಂದ ವಿಚಿತ್ರವಾದ ಮಾಲೆಯನ್ನು ಹಾಕಿಕೊಂಡಿದ್ದಳು. ಕೊರ್ನಾಡ ಸೀರೆಯನ್ನು ತೀಡಿ ಉಟ್ಟುಕೊಂಡು ಹಸರು ಬಣ್ಣದ ರೇಷ್ಮೆಜರದ ಕುಪ್ಪಸ ತೊಟ್ಟಿದ್ದಳು. ಥಳಿಥಳಿಸುವ ಬಿಲ್ವರದ ಬಳೆಗಳನ್ನಿಟ್ಟುಕೊಂಡು ಬಂಗಾರದ ಮೋರೆ ಮೇಲೆ ಹೊಡೆವಂಥ ಕೊಂಬು ಹಿತ್ತಾಳಿಯ ಪಾಟ್ಲಿಗಳನ್ನಿಟ್ಟಿದ್ದಳು, ಕಮಲೆಯು ರೂಪವತಿ ಎಂದು ಹೇಳಲಿಕ್ಕೆ ಅಭ್ಯಂತರವಿಲ್ಲ.

ರಮಾಕಾಂತನು ಬಾಕಿಲಲ್ಲಿ ಬಂದ ಕೂಡಲೆ ಎದುರಿಗಿಟ್ಟ ಕನ್ನಡಿಯ ಕಡೆಗೆ ಸಹಜವಾಗಿ ಅವನ ದೃಷ್ಟಿ ಹೋಯಿತು. ಕನ್ನಡಿಯಲ್ಲಿ ರಮಾಕಾಂತನದೂ ಕಮಲೆಯದೂ ಏಕದೃಷ್ಟಿಯಾಯಿತು. ಕಮಲೆಯು ಕಾಮುಕಳಾಗಿ ರಮಾಕಾಂತನ ಮನೋಹರವಾದ ಮುಖಕಮಲವನ್ನು ಕನ್ನಡಿಯಲ್ಲಿಯೇ ಬಿಡದೆ ದಿಟ್ಟಿಸಿ ನೋಡಹತ್ತಿದಳು. ರಮಾಕಾಂತನೇ ನಾಚಿಕೊಂಡು ಮೇಜಿನ ಹತ್ತರಿದ್ದ ಕುರ್ಚಿಯ ಮೇಲೆ ಹೋಗಿ ಕುಳಿತನು.

ರಮಾಕಾಂತನು ಬಂದದ್ದು ಕಂಡು ಪಂಡಿತೆಯು ತನ್ನ ಮಲಗುವ ಕೋಣೆಯಿಂದ ಹೊರಗೆ ಬಂದಳು. ರಾಧಾಬಾಯಿಯು ದಿನ ಹೋದವಳಿದ್ದರೂ ವಯ್ಯಾರದಂಶವು ಅವಳಲ್ಲಿ ಉಳಿದಿತ್ತು. ಬಂದ ಕೂಡಲೆ ನಗೆಮುಖದಿಂದ ರಮಾಕಾಂತನ ಕೈಹಿಡಿದು ಅವನು ಬಂದ ಬಗ್ಯೆ ಆನಂದ ತೋರಿಸಿ ತಾನೂ ಕುಳಿತುಕೊಂಡಳು.

"ಕಮಲಾ, ಇಷ್ಟು ಪರಿಯಿಂದ ಕನ್ನಡಿ ನೋಡಿಕೊಂಡರೇ ನಿನಗೆ ಚಲುವೆಯನ್ನುವರು ಇಲ್ಲದಿದ್ದರೆ ಇಲ್ಲೆಂದು ತಿಳಿಯಬೇಡ. ರಮಾಕಾಂತರು ಬಂದಿರುವರು, ಹಾಗೆ ನಿಂತರೇನು ? ಬಾ ಇಲ್ಲಿ." ಎಂದು ಪಂಡಿತೆಯಂದಳು.

"ರಮಾಕಾಂತರು ಬಂದರೇನು ? ನಾನು ನೋಡಲೇ ಇಲ್ಲ ! ರಮಾಕಾಂತರೇ, ಇದುವರಿಗೆ ನಾನಿಲ್ಲಿ ನಿಂತವಳಲ್ಲೇನು, ನನಗೆ ತಿಳಿಯಗೊಡದೆ ಹೇಗೆ ಬಂದಿರಿ ?" ಎಂದು ನುಡಿದು ಮನಸಿನಿಂದ ಅವನ ಹತ್ತರ ಬಂದು ನಿಂತು ಮುಂದ

ಸ್ಮಿತದಿಂದ ಹಸ್ತಸ್ಪರ್ಶ ಮಾಡಿ ಕುಳಿತುಕೊಂಡಳು.

ಇವಳ ಧಾಷ್ಟ್ರ್ಯವನ್ನು ನೋಡಿ ರಮಾಕಾಂತನು ಬೆರಗಾದನು. ಕನ್ನಡಿಯಲ್ಲಿ ಬಿಡದೇ ತನ್ನನ್ನು ನೋಡಿ ನೋಡಿ ಈಗ ತಾನು ಬಂದದ್ದೇ ಗೊತ್ತಿಲ್ಲವೆಂದೆನ್ನುವಳಲ್ಲವೆ! ವಿಧವಾಮಹೋದಧಿಯಲ್ಲಿ ದೊರಕಿದ ಶಿಕ್ಷಣದ ಪರಿಣಾಮವು ಹೀಗೆ ಇರುವದೋ ಎಂದೆಣಿಸಿ,

"ನಾನಾದರೂ ಇದೇ ಬಂದೆನು; ಆದ್ದರಿಂದ ನಿಮಗೆ ತಿಳಿದಿರಲಿಕ್ಕಿಲ್ಲ." ಎಂದು ನಿಮಿತ್ತಕ್ಕಾಗಿ ಉತ್ತರ ಕೊಟ್ಟನು.

"ರಮಾಕಾಂತರೇ, ನಿಮಗೆ ಕಾಫಿ ಉಪಹಾರಗಳನ್ನು ತರಿಸಿಕೊಡುವೆನು ದಯಮಾಡಿ ಸ್ವೀಕರಿಸತಕ್ಕದ್ದು." ಎಂದು ಪಂಡಿತೆಯುಂದಳು.

"ಕ್ಷಮಿಸಿರಿ. ಈಗಲೇ ನಾನು ಕಾಫಿ ಉಪಹಾರಗಳನ್ನು ತಕ್ಕೊಂಡೇ ಬಂವಿರುವೆನು."

"ರಮಾಕಾಂತರೆ, ನನಗೆ ತಿಳಿಯುವದಿಲ್ಲೆಂದು ನೀವು ಹೀಗನ್ನುವಿರೇನು? ನಾನು ಜಾತಿಭೇದಗಳನ್ನು ಪಾಲಿಸುವದಿಲ್ಲೆಂದು ನೀವು ಸಂಕೋಚಪಟ್ಟಿರುವಿರಿ. ಆದರೂ ಹಣ್ಣು ಹಂಪಲಕ್ಕೇನು ಪ್ರತ್ಯವಾಯುವಿರಲಿಕ್ಕಿಲ್ಲವಲ್ಲ! ಅಂಣ ವೆಂಕೋಬ ರಾಯರು, ತಿರುಪಾಲೂರ ನರಸಿಂಹಾಚಾರ್ಯರು, ಶ್ರೀಕಂಠ ಬಹದ್ದೂರರು ನಮ್ಮಲ್ಲಿ ಚಹಕಾಫಿ ಏಕೆ, ಭೋಜನ ಕೂಡಾ ಮಾಡುತ್ತಾರೆ. ಇದೇ ಮನೆಯಲ್ಲಿ ನಿಮಗೆ ಭೋಜನ ಮಾಡಿಸದಿದ್ದರೆ ನಾನು ಪಂಡಿತೆಯೇ ಅಲ್ಲ." ಎಂದು ರಾಧಾಬಾಯಿಯು ನಗುತ್ತ ನುಡಿದಳು.

"ಹಣ್ಣು ಹಂಪಲಕ್ಕೇನು ಚಿಂತಿಲ್ಲ. ಆದರೂ ನನಗೆ ಹಸಿವೆಯೇ ಇಲ್ಲ. ನಿಮ್ಮ ಸಮಾಧಾನಕ್ಕಾಗಿ ಒಂದೆರಡು ಚೂರು ತಕ್ಕೊಳ್ಳುತ್ತೇನೆ. ಇಲ್ಲವಾದರೆ ನೀವು ಭೋಜನ ಮಾಡಿಸುವಿರಿ!" ಎಂದು ರಮಾಕಾಂತನು ನಕ್ಕನು.

ಪಂಡಿತೆಯು ಗಂಟೆ ಬಾರಿಸಿ ಸೇವಕನನ್ನು ಕರೆದು ಹಣ್ಣುಗಳನ್ನು ತರಿಸಿದಳು.

"ಕಮಲಾ, ಚೂರಿಯನ್ನು ತಕ್ಕೊಂಡು ಆ ಪಕ್ವವಾದ ಸೇಬುಗಳನ್ನು ರಮಾಕಾಂತರಿಗೆ ಹೆಚ್ಚಿಕೊಡು. ತರುಣಿಯರು ಕೈಮುಟ್ಟಿ ಕೊಟ್ಟ ಪದಾರ್ಥಗಳು ಪುರುಷರಿಗೆ ಬಹು ರುಚಿಯಾಗಿ ತೋರುವದುಂಟು. ಅಲ್ಲವೆ, ರಮಾಕಾಂತರೆ! ರೂಢಿಯೊಳಗಿನ ಮಾತೇ ಹೇಳುತ್ತೇನೆ." ಎಂದು ವಿನೋದದಿಂದ ಪಂಡಿತೆಯು ನುಡಿದಳು.

ರಮಾಕಾಂತನು ನಿಜವಾಗಿ ನಾಚಿಕೊಂಡರೂ ನಿರ್ವಾಹವಿಲ್ಲದೆ ನಗೆಮೋರೆಯಿಂದ ಪಂಡಿತೆಯುನ್ನು ನೋಡಿದನು.

ಕಮಲೆಯು ಆನಂದದಿಂದ ಪ್ರಫುಲ್ಲಿತ ಮುಖಿಯಾಗಿ ಮಂದಹಾಸದಿಂದ ರಮಾಕಾಂತನ ಕಡೆಗೆ ಓರೆನೋಟದಿಂದ ನೋಡುತ್ತ ಸೇಬುಗಳನ್ನು ಹೆಚ್ಚಿ ಕಾಜಿನ ತಟ್ಟೆಯಲ್ಲಿ ಚೂರುಗಳನ್ನು ಹಾಕಿ ವನಪಿನಿಂದೆದ್ದು ಆ ತಟ್ಟೆಯನ್ನು ಅವನ ಕೈಯಲ್ಲಿ ಕೊಟ್ಟಳು. ರಮಾಕಾಂತನು ಆ ಚೂರುಗಳಲ್ಲಿ ಒಂದೆರಡು ತಕ್ಕೊಂಡು ಬಾಯಿಯಲ್ಲಿ ಹಾಕಿಕೊಂಡನು.

"ರಮಾಕಾಂತರೆ, ನಮ್ಮ ಸಮಾಜದ ದುಃಸ್ಥಿತಿಯನ್ನು ನೋಡಿದಿರಾ ಕಮಲೆಯು ರೂಪವತಿಯೂ ಕಲಿತವಳೂ ಇದ್ದರೂ ಗತಭರ್ತೃಕೆಯಾದ್ದರಿಂದ ಪುಷ್ಪಕಲಿಕೆಯಂತಿರುವ ಇವಳ ತಾರುಣ್ಯವು ವ್ಯರ್ಥವಾಗಿ ಬಾಡಿ ಹೋಗಬೇಕಾಗಿರುವದಲ್ಲ! ದುಃಖಿತರಿಗೇ ದುಃಖಗಳು ತಟ್ಟುವವೆಂಬಂತೆ ಇವಳ ತಂದೆಯು ಮನೆಯಿಂದ ನೆಟ್ಟಗಿದ್ದರೂ ಈ ತಾಯಿಮಕ್ಕಳನ್ನು ತ್ಯಾಗಮಾಡಿ ಹತ್ತೆಂಟು ವರ್ಷಗಳಾದವು. ಕಾರಣವಿಲ್ಲದೆ ಇವಳ ತಾಯಿಯ ಮೇಲೆ ಇಲ್ಲದ ಸಂಶಯ ತಕ್ಕೊಂಡು ಇವರನ್ನು ಬೆಂಗಳೂರಿಗಟ್ಟಿ ಇವರ ತಂದೆಯು ಆನಂದದಿಂದ ಮೈಸೂರಲ್ಲಿರುತ್ತಾನೆ, ಅವನಿಗೆ ವರ್ಷಾ ಎರಡು ಸಹಸ್ರ ರೂಪಾಯಿಗಳ ಉತ್ಪನ್ನವಿದ್ದರೂ ಈ ತಾಯಿಮಕ್ಕಳಿಗೆ ಒಂದೇ ನೂರು ರೂಪಾಯಿ ಅನ್ನವಸ್ತ್ರಕ್ಕಾಗಿ ಕೊಡುವನು. ಹೆಂಡರನ್ನೀಪರಿಯಾಗಿ ನಡಿಸಿಕೊಳ್ಳುವದೊಂದು ಭೂಷಣವೆಂದು ಗಂಡಸರು ತಿಳಕೊಳ್ಳುತ್ತಾರೆ. ಸುಖೋಪಭೋಗಗಳಲ್ಲಿರುವ ಈ ಸುಕುಮಾರಿಯಾದ ಕಮಲೆಯು ಕಸೀದೆ ಕ್ರೋಚಟುಗಳ ಕೆಲಸ ಮಾಡಿ ತನ್ನ ಸೀರೆ ಕುಪ್ಪಸಗಳನ್ನು ಮಾಡಿಕೊಳ್ಳುತ್ತಾಳೆ. ವಿದ್ವಾಂಸರೂ ಉದಾತ್ತ ವಿಚಾರದವರೂ ಆದ ನಾಲ್ಕು ಜನ ನಿಮ್ಮಂಥ ತರುಣರು ಸಾಮಾಜಿಕ ಸುಧಾರಣೆಗೆ ಆಧಾರಸ್ತಂಭರಾಗಿ ನಿಂತರೆ ಸುಧಾರಣೆ ಹಬ್ಬಿ ಲೋಕದಲ್ಲಿ ಸುಖ ಸಮಾಧಾನಗಳು ಹೆಚ್ಚುವವು. ಹಲವು ನಿಬಂಧನಗಳನ್ನೋದುವದಕ್ಕಿಂತಲೂ ಕಮಲೆಯಂಥ ಪ್ರತ್ಯಕ್ಷವಾದ ಉದಾಹರಣೆಗಳನ್ನು ನೋಡುವದರಿಂದ ವಿಷಯವು ಮನಸ್ಸಿನಲ್ಲಿ ದೃಢವಾಗಿ ಬಿಂಬಿಸುವದೆಂದು ನಾನು ಬುದ್ಧ್ಯಾ ನಿಮ್ಮನ್ನಿಲ್ಲಿಗೆ ಕರತಂದಿರುವೆನು. ಬಹಳಿಲ್ಲ ಸ್ವಲ್ಪಾದರೂ ನಿಮ್ಮಂಥವರು ಸುಧಾರಣೆ ನೆರವಾದರೆ ಎಷ್ಟೋ ಆದೀತು." ಎಂದು ಪಂಡಿತೆಯು ಮನಸ್ಸು ಕರಗುವಂಥ ನುಡಿಗಳಿಂದ ಹೇಳಿದಳು.

ಕಮಲೆಯ ಕಣ್ಣುಗಳು ನೀರಿನಿಂದ ತುಂಬಿದವು, ಅವಳು ಕೆಳಗೆ ಮೋರೆ

ಮಾಡಿ ತನ್ನ ಸೆರಗಿನಿಂದ ಕಣ್ಣೊರಿಸಿಕೊಂಡು ದೀನಮುದ್ರೆಯಿಂದ ರಮಾಕಾಂತನನ್ನು ನೋಡಿದಳು. ಹೊಟ್ಟೆಯೊಳಗಿನ ಹರಳು ಕರಗುವಂಥ ಪಂಡಿತೆಯ ನುಡಿಯನ್ನೂ ಕಮಲೆಯ ಅಶ್ರುಪೂರ್ಣವಾದ ಕಣ್ಣುಗಳನ್ನೂ ನೋಡಿ ರಮಾಕಾಂತನಿಗೆ ಕಮಲೆಯ ವಿಷಯವಾಗಿ ಕನಿಕರ ಬಂದಿತು.

"ಪಂಡಿತಾಬಾಯಿಯವರೇ, ನೀವಾಡುವದು ಕೆಲವಂಶದಲ್ಲಿ ಸತ್ಯ. ಆದರೂ ಈ ಕೆಲಸವನ್ನು ನಮ್ಮ ಸಮಾಜದ ಮುಖ್ಯಸ್ಥರು ಕೈಕೊಳ್ಳತಕ್ಕದ್ದು. ನಮ್ಮಂಥ ಅಲ್ಪಮತಿಗಳೂ ಅನುಭವಹೀನರೂ ಆದ ತರುಣರೇ ಈ ಕೆಲಸವನ್ನು ಕೈಕೊಂಡರೆ ಕೆಲಸ ಕೆಟ್ಟದ್ದಲ್ಲದೆ ನಾವು ಉಪವಾಸಕ್ಕೆ ಪಾತ್ರರಾಗುವೆವು. ದೊಡ್ಡವರು ಸಣ್ಣ ಕೆಲಸವನ್ನು ಕೈಕೊಂಡರೂ ಆ ಕೆಲಸಕ್ಕೆ ಗೌರವ ಬರುವದು. ಸಣ್ಣವರು ದೊಡ್ಡ ಕೆಲಸ ಕೈಕೊಂಡರೆ ಆ ಕೆಲಸಕ್ಕೆ ಹೀನತೆ ಬರುವದು. ತಾತಾ ಸೇಟರು ಹೋಟೆಲ್ ಇಟ್ಟರೆ ಟಾಯಿಮ್ಸ್ ಕಾರನು ಕೂಡಾ "ತಾತಾ ಸೇಟರು ದೊಡ್ಡ ಲೋಕೋಪಕಾರ ಮಾಡಿದರು" ಎಂದು ಬಾಯಿತುಂಬ ಹೊಗಳಿದನು. ವಾಸುದೇವ ಬಳವಂತ ಫಡಕೇನು ಇಂಗ್ಲಿಷರೊಡನೆ ಯುದ್ಧ ಮಾಡಹೋದರೆ ಅವನು ಮೂರ್ಖನೆನಿಸಿಕೊಂಡನು.

ಹೀಗೆ ಕೆಲವು ಹೊತ್ತು ಸಂವಾದ ನಡೆದು ಮುಸ್ಸಂಜೆಯಾಗುತ್ತ ಬಂದದರಿಂದ ರಮಾಕಾಂತನು ಪಂಡಿತೆಯ ಅಪ್ಪಣೆ ತೆಕ್ಕೊಂಡು ತನ್ನ ಮನೆಗೆ ಹೊರಟನು. ಕಮಲೆಯು ಲಗಬಗೆಯಿಂದ ಕೆಳಗಿಳಿದು ರಮಾಕಾಂತನನ್ನು ಬೀದಿಯವರೆಗೆ ಕಳಸಲಿಕ್ಕೆ ಬಂದು "ಒಂದು ದಿವಸ ನಮ್ಮ ಮನೆಗೆ ಅಗತ್ಯವಾಗಿ ಬರಬೇಕು. ಒಲ್ಲೆನೆಂದರೆ ಬಿಟ್ಟವಳಲ್ಲ" ಎಂದು ವಯ್ಯಾರದಿಂದ ನುಡಿದು ದೇವದಾರುವಿನ ಟೊಂಗೆಗಳಲ್ಲಿ ಬಳ್ಳಿಯನ್ನು ಹಚ್ಚಿಸುವಂತೆ ಕಮಲೆಯು ತನ್ನ ಕೋಮಲಾಂಗುಲಿಗಳನ್ನು ರಮಾಕಾಂತನ ವಿಸ್ತಾರವಾದ ಹಸ್ತದಲ್ಲಿಟ್ಟು ಅಲ್ಲಾಡಿಸಿದಳು.

ರಮಾಕಾಂತನು ಹಾಗೆ ಆಗಲೆಂದು ಹೇಳಿ ತನ್ನ ಬಡಿಗೆಯನ್ನು ಗರಗರನೆ ತಿರವುತ್ತ ತ್ವರೆಯಿಂದ ತನ್ನ ಮನೆಯ ಹಾದೀ ಹಿಡಿದು ನಡೆದನು.

ಹುಚ್ಚಮ್ಮಾ, ನಿನ್ನ ಗ್ರಹಿಕೆ ತಪ್ಪಾದದ್ದು

ಜಯರಾಯನು ಮಲ್ಲೇಶ್ವರದ ಸಂಪಿಗೇ ಬೀದಿಯಲ್ಲಿ ಬಹು ರಮಣೀಯವಾದ ಬಂಗಲೆ ಕಟ್ಟಿಸಿದ್ದನು. ಸುತ್ತಲೂ ಅಪಾರದಂಥ ಗೋಡೆಯಿದ್ದು ಒಳಮಗ್ಗಲು ರಮ್ಯವಾದ ಉದ್ಯಾನವಿತ್ತು. ಸಂತತವಾಗಿ ಹರಿಯುವ ಹಳ್ಳವು

ನಾಗಮುರಿಗೆಯಂತೆ ಈ ತೋಟದಲ್ಲಿ ಹಾಯ್ದು ಹೋಗಿದ್ದರಿಂದ ಈ ಮಂದಿರವು ಬಹು ರಮಣೀಯವಾಗಿತ್ತು. ಆವಾರದ ಬಾಕಿಲದಿಂದ ಮುಖ್ಯ ಮನೆಯವರೆಗೂ ವಿಸ್ತಾರವಾದ ಮಾರ್ಗವಿದ್ದು ಆದರೆರಡೂ ಮಗ್ಗಲಿಗೂ ಮದನ ಮಂಜರೀ ಗಿಡಗಳ ಸಾಲುಗಳಿದ್ದವು. ಮನೆಯ ಸುತ್ತಲೂ ಇಂಥದೇ ಮಾರ್ಗವು ಸುತ್ತುಗಟ್ಟಿತ್ತು. ಮನೆಯಿಂದ ಉಪವನದಲ್ಲಿ ಸೇರಲಿಕ್ಕೆ ನಾಲ್ಕು ಹಾದಿಗಳಿದ್ದವು. ಅಲ್ಲಲ್ಲಿ ವೃಕ್ಷವಾಟಿಕೆಗಳಿದ್ದು ಅವುಗಳ ಮಧ್ಯದಲ್ಲಿ ವಿಶ್ರಾಂತಿಗಾಗಿ ಕಟ್ಟಿಗೆ ಕಬ್ಬಿಣಗಳ ಆಸನಗಳನ್ನು ಹಾಕಿದ್ದರು. ನಾಲ್ಕು ಜನ ತೋಟಿಗರು ಈ ಉಪವನದ ಆರೈಕೆ ಮಾಡುವದರಲ್ಲಿ ದಕ್ಷರಾಗಿ ನಿಂತಿರುವರು. ಕೂಲಿಕಾರರು ಅಲ್ಲಲ್ಲಿ ಮಾರ್ಗಗಳನ್ನಡಗಿ ತಗ್ಗು ದಿನ್ನೆಗಳನ್ನು ಉಸಬು ಹಾಕಿ ಸಮ ಮಾಡುತ್ತಿದ್ದರು. ಈ ಬಂಗಲೆಗೆ “ಆನಂದಭವನ”ವೆಂಬ ಹೆಸರು. ಆನಂದಭವನದ ದೃಗ್ಭಾಗದಲ್ಲಿ ಬೈಲು ಪಡಸಾಲೆಯಿದ್ದು ಅದರಲ್ಲಿ ತಂಪು ಹೊತ್ತಿನಲ್ಲಿ ಕೂಡ್ರುವದಕ್ಕೆ ಏಳೆಂಟು ಆರಾಮ ಕುರ್ಚಿಗಳನ್ನಿಟ್ಟಿದ್ದರು. ಈ ಪಡಸಾಲೆಯಿಂದ ಒಳಗೆ ಹೋದರೆ ಭವ್ಯವಾದ ನಡುಮನೆ ಕಾಣಿಸುವದು. ಇಲ್ಲಿ ಬಿಳೀಕಲ್ಲಿನ ನೆಲಗಟ್ಟು ಮಾಡಿದ್ದು ಚಿತ್ರಮಯವಾದ ರತ್ನಗಂಬಳಿಯನ್ನು ತುಂಬ ಹಾಸಿದ್ದರು. ಮಧ್ಯಭಾಗದಲ್ಲಿ ಒಳ್ಳೇ ನುಣಪಾದ ಕರೀ ಕಟ್ಟಿಗೆಯ ವಿಸ್ತಾರವಾದ ದುಂಡು ಮೇಜಿದ್ದು ಅದರ ಸುತ್ತಲೂ ನಕ್ಷೆಯ ನಾಲ್ಕೆಂಟು ಕುರ್ಚಿಗಳಿದ್ದವು. ಗೋಡೆಗಳನ್ನು ಚಿತ್ರಪಟಗಳಿಂದಲೂ ಕಾಡುಕೋಣ, ಜಿಂಕೆ, ಹುಲಿಗಳ ಮುಖಗಳಿಂದಲೂ ಅಲಂಕರಿಸಿದ್ದರು. ನಡುಮನೆಯ ಎರಡೂ ಮಗ್ಗಲಿಗೂ ಚೆನ್ನಾಗಿ ಶೃಂಗರಿಸಿದ್ದ ಎರಡು ಕೋಣೆಗಳಿದ್ದವು. ಹಿಂದಿನ ಮಗ್ಗಲಕ್ಕೆ ಮತ್ತೊಂದು ವಿಸ್ತಾರವಾದ ಪಡಸಾಲೆಯಿದ್ದು ಅಲ್ಲಿ ಎದುರುಬದಿರಾಗಿ ಎರಡು ಕೋಣೆಗಳಿದ್ದವು. ಅಡಿಗೇಮನೆ, ನೀರುಮನೆ ಸಾಮಾನುಗಳಿಡುವ ಸ್ಥಳ, ಉಗ್ರಾಣ ಮುಂತಾದವುಗಳು ಮುಖ್ಯ ಮನೆಬಿಟ್ಟು ಕೆಲವು ಅಂತರದ ಮೇಲಿದ್ದವು. ಮುಖ್ಯ ಮನೆಯ ಕೆಳಭಾಗವಿದ್ದಷ್ಟು ಮೇಲಂತಸ್ತಿತ್ತು. ಉಪ್ಪರಿಗೆಯ ಮೇಲ್ಭಾಗದಲ್ಲಿ ಮಂಗಳೂರು ಹಂಚಿನ ಸೂರು ಇದ್ದದರಿಂದ ಮನೆಗೆಲ್ಲ ವಿಲಕ್ಷಣವಾದ ಶೋಭೆ ಬಂದಿತ್ತು.

ಇಂದಿರೆಯು ಬೆಂಗಳೂರಿಗೆ ಬಂದ ಮೇಲೆ ರಮಾಕಾಂತನು ಮೊದಲಿನ ನಾಲ್ಕೆಂಟು ದಿವಸ ಈ ಮನೆಗೆ ಬರಹೋಗುತ್ತಿದ್ದನು. ಮುಂದೆ ಜಯರಾಯನ ಮನಸ್ಸಿನಲ್ಲಿ ಏನೋ ಕಲ್ಪನೆ ಬಂದದರಿಂದ ರಮಾಕಾಂತನಿಗೆ ಸಾಕಷ್ಟು ಆದರ ಕಂಡು ಬರಲಿಲ್ಲಾದ್ದರಿಂದ ಅವನು ಈ ಮನೆಗೆ ಬರುವದೇ ಬಿಟ್ಟುಬಿಟ್ಟಿದ್ದನು.

ಎರಡು ತಿಂಗಳ ಮೇಲೆ ರಮಾಕಾಂತನ ಮನೆಗೆ ಜವಾನರ ಡಬ್ಬಿನವನಾದ ಮನುಷ್ಯನು ಬಂದು ಮುಜುರೆ ಮಾಡಿ ರಮಾಕಾಂತನ ಮೇಜಿನ ಮೇಲೆ ಪತ್ರ ವನ್ನಿಟ್ಟನು. ಈ ಪತ್ರವನ್ನು ಜಯರಾಯನು ಬರೆದಿದ್ದು, ಅದರಲ್ಲಿ ರಮಾಕಾಂತ ನಿಗೆ ಆನಂದಭವನದವರೆಗೆ ಬಂದು ಹೋಗಲಿಕ್ಕೆ ವಿನಂತಿ ಇತ್ತು.

ಈ ಪತ್ರ ಕಂಡ ಕೂಡ್ಲೆ ರಮಾಕಾಂತನ ಎದೆ ಡುಬಡುಬ ಎನ್ನಹತ್ತಿತ್ತು. "ಜಯರಾಯನ ಮನೆಯೆಂದರೆ ಇಂದಿರೆಯ ಮನೆಯೇ! ಅಲ್ಲಿ ತಾನು ಹೋದ ಕೂಡಲೆ ಇಂದಿರೆಯು ಮುಂಚಿನಂತೆ ಸ್ನೇಹದಿಂದ ತನ್ನನ್ನಾದರಿಸುವಳೋ, ಏನು ದೂರ ದೂರಿರುವಳೋ! ಈ ದಿವಸವೇ ಇಂದಿರೆಯು ತನಗೆ ಅನಾದರ ತೋರಿ ಸಿದ್ದಾದರೆ ಈ ದಿವಸವೇ ಬೆಂಗಳೂರಿಂದ ಗುಡಚಾಪೆ ಕಟ್ಟಿಕೊಂಡೇಳುವದೇ ಸರಿ." ಎಂದು ವಿಚಾರ ಮಾಡುತ್ತ ಅಂದವಾದ ಪೋಷಾಕು ಮಾಡಿಕೊಂಡನು. ಪೀರ ಅಹುಮದನಿಗೆ ತನ್ನ ಟಾಂಗಾ ಸಿದ್ಧಪಡಿಸಹೇಳಿ ಹೊರಡುವದಕ್ಕೆ ಸಿದ್ಧನಾದನು.

ರಮಾಕಾಂತನು 'ಆನಂದಭವನಕ್ಕೆ' ಬಂದಾಗ್ಗೆ ಜಯರಾಯನು ಉಪ್ಪರಿಗೆ ಮೇಲೆ ತನ್ನ ಲೆಕ್ಕಪತ್ರಗಳನ್ನು ನೋಡುತ್ತ ಕುಳಿತಿದ್ದನು. ಇವನು ಬಂದ ವನೇ ನಡುಮನೆಯಲಿಟ್ಟ ಕುರ್ಚಿಯ ಮೇಲೆ ಕುಳಿತುಕೊಂಡನು. ಇಂದಿರೆಯು ಅಕಸ್ಮಾತ್ತಾಗಿ ಏನೋ ಕೆಲಸದ ನಿಮಿತ್ತ ನಡುಮನೆಗೆ ಬಂದು ರಮಾಕಾಂತನನ್ನು ನೋಡಿ ಹರ್ಷಭರಿತಳಾಗಿ "ಅವ್ವಯ್ಯಾ" ರಮಾಕಾಂತರಾವ್ ಇಷ್ಟು ದಿವಸ ಅಸ್ತರಾಗಿದ್ದಿರೇನು? ಕಾರಹುಣ್ಣಿಮೀ ದಿವಸ ಬಂದದ್ದೇ ಕಡಿಯು ಬರೋಣ. ಆ ಮಾತಿಗೀಗ ಜ್ಯೇಷ್ಠ, ಆಷಾಢ, ಶ್ರಾವಣ, ಭಾದ್ರಪದ ಅಂದರೆ ಬರುವ ಹುಣ್ಣಿಮಿಗೆ ಮೂರು ತಿಂಗಳ ದಿವಸವಾಯಿತು ನಿಮ್ಮ ದರ್ಶನವಿಲ್ಲ. ಅಂಥದೇನು ತಪ್ಪು ನಾವು ಮಾಡಿರುವದು? ಬೆಂಗಳೂರಿನಲ್ಲಿ ನಿಮಗೆ ಅನೇಕ ಜನ ಸ್ನೇಹಿತರಾಗಿರಬಹುದು. ನಮ್ಮಂಥವರ ಸ್ಮರಣೆ ನಿಮಗೇಕಾದೀತು?" ಎಂದು ಅವಳು ವಿಲಾಸದಿಂದ ನುಡಿದಳು.

ರಮಾಕಾಂತನು ಜ್ಯೇಷ್ಠಮಾಸದಲ್ಲಿ ಇಂದಿರೆಯನ್ನು ನೋಡಿದ್ದಕ್ಕಿಂತಲೂ ಈಗ್ಗೆ ಅವಳು ಬಹಳೇ ಸುಂದರಳಾಗಿ ಕಾಣಿಸಿದಳು. ಶ್ರೀರಂಗಪಟ್ಟಣದಲ್ಲಿ ಕಡ ಕಡ ತಿರಿಗಿ ಮೈಮುರಿ ಕೆಲಸ ಮಾಡುತ್ತಿದ್ದಳು. ಅಂಥ ಕೆಲಸ ಮಾಡಲಿಕ್ಕೆ ಅವಳಿ ಗಿಲ್ಲಿ ಪ್ರತಿಬಂಧವಿತ್ತು. ಆದ್ದರಿಂದ ಅವಳ ಮೈಬಣ್ಣವು ಬಹಳೇ ಕಾಂತಿಯುಳ್ಳ ದ್ದಾಗಿತ್ತು. ಸುಕುಮಾರತೆಯು ಹೆಚ್ಚಾಗಿ ಅವಯವಗಳೆಲ್ಲಾ ತುಂಬಿಕೊಂಡಿದ್ದವು. ರಮಾಕಾಂತನನ್ನು ಕಂಡು ಆನಂದ ಪಟ್ಟಿರುವಳಾದ್ದರಿಂದ ಅವಳ ಮನೋಹರ

ವಾದ ಮುಖವು ಪ್ರಫುಲ್ಲಿತವಾದ ಕಮಲದಂತೊಪ್ಪುತ್ತಿತ್ತು. ರೂಪಗರ್ವಿತರಾದ ಸ್ವರ್ಗಾಂಗನೆಯರನ್ನು ಕೂಡಾ ನಾಚಿಸುವಂಥ ಈ ಅಪ್ರತಿಮ ಸುಂದರಿಯನ್ನು ನೋಡಿ ರಮಾಕಾಂತನು ತನ್ನ ದೈವದಲ್ಲಿ ಇಷ್ಟೇ ಸುಖ ಬರೆದಿದ್ದರೂ ತಾನು ಜನ್ಮಕ್ಕೆ ಬಂದದ್ದು ಸಾರ್ಥಕವಾಯಿತೆಂದು ನಂಬಿದನು. ಇಂದಿರೆಯು ತನ್ನ ಮೇಲಿದ್ದ ಸ್ನೇಹವನ್ನು ಕಾಯಿದಿರುವಳೆಂದು ಕಂಡು ಹರ್ಷಿತನಾಗಿ ;

"ಇಂದಿರಾಬಾಯೀ, ಇಷ್ಟಾಡುವದಕ್ಕಿಂತಲೂ ಆ ಮೂಲೆಯಲ್ಲಿದ್ದ ತುಬಾಕಿಯಿಂದ ನನ್ನನ್ನು ಹೊಡೆದುಬಿಟ್ಟರೆ ಒಳ್ಳೆದಾಗುತ್ತಿದ್ದಿಲ್ಲವೇ ? ಶ್ರೀಮಂತರು ಹೇಗೆ ಮಾತಾಡಿದರೂ ಶೋಭಿಸುವದು." ಎಂದು ನುಡಿದು ಬಾಯಲ್ಲಿಯೇ ನಕ್ಕನು.

"ಆಹಾ ! ತುಬಾಕಿಯಿಂದ ನಾನು ಹೊಡೆಯುವೆನೋ ನೀವು ಹೊಡೆದಿರೊ ಎಂಬುದರ ನಿರ್ಣಯ ಮಾಡಲಿಕ್ಕಿಲ್ಲಿ ಯಾರೂ ಇಲ್ಲವಲ್ಲ ! ಎಲ್ಲವೂ ಕುಶಲವೋ ?"

"ಮತ್ತೇನೂ ಹೇಳಲಿಕ್ಕಾಸ್ಪದವಿಲ್ಲದಿದ್ದಲ್ಲಿ ಕುಶಲವೆಂದೇ ಹೇಳಬೇಕಾಗಿರುವುದು."

"ಅಂದರೆ ! ನೀವು ಸುಖಿಯಾಗಿಲ್ಲವೇನು ?"

"ಎಲ್ಲವೂ ಸರಿಯಾಗಿಯೇ ಇದೆ. ಆದರೆ ನಿಮ್ಮ ದರ್ಶನವಾಗದಿರುವದೊಂದೇ ಚಿಂತೆ."

"ಇದರಲ್ಲಿ ಯಾರ ತಪ್ಪು ? ನೀವಾಗಿ ನಮ್ಮ ಮೇಲೆ ಅವಕೃಪೆ ಮಾಡಿ ಬರುವದು ಬಿಟ್ಟರೆ ನಾನು ತಪ್ಪುಗಾರ್ತಿಯಾಗುವೆನೇನು ?" ಎಂದು ಇಂದಿರೆಯು ಕೇಳಿದಳು.

ಇಂದಿರೆಯು ಹೀಗೆ ಗಂಗಾಜಲದಂತೆ ನಿರ್ಮಲ ಭಾವವನ್ನು ತೋರಿಸುತ್ತಿರಲು ಜಯರಾಯನು ತನಗೇಕೆ ಅನಾದರಭಾವವನ್ನು ತೋರಿಸುತ್ತಿರುವನು ? ಎಂದು ರಮಾಕಾಂತನು ಯೋಚಿಸಿ ವ್ಯಸನಗ್ರಸ್ತನಾದನು.

"ರಮಾಕಾಂತರೇ, ತಂದೆಯವರು ಕೆಲಸದಲ್ಲಿ ತೊಡಗಿದ್ದರಿಂದ ನಿಮ್ಮ ಸಮಾಚಾರ ತೆಗೆದುಕೊಳ್ಳಲಿಕ್ಕೆ ನನಗಾಜ್ಞಾಪಿಸಿರುವರು. ನಂಜಮ್ಮಾ......"

ಈ ಹೆಸರಿನ ಹದಿನೆಂಟು, ಇಪ್ಪತ್ತು ವರ್ಷಗಳ ಪ್ರಾಯದವಳಾದ ಬ್ರಾಹ್ಮಣಿಯು ಬಂದು "ಏನಾಜ್ಞೆ ?" ಎಂದು ಕೇಳಿದಳು.

"ಜಾಗ್ರತೆಯಾಗಿ ಉಪಹಾರ ತಕ್ಕೊಂಡು ಬರಬೇಕು." ಎಂದು

ಇಂದಿರೆಯು ಹೇಳಿದಳು.

"ಇಂದಿರಾಬಾಯಿ, ನನಗೆ ಹಸಿವೆಯಿಲ್ಲ" ಎಂದು ರಮಾಕಾಂತನು ವಿಜ್ಞಾಪನೆ ಮಾಡಿಕೊಂಡನು.

"ನಂಜಮ್ಮನಂತೂ ಉಪಹಾರ ತಕ್ಕೊಂಡು ಬರಲಿ. ಆಮೇಲೆ ನಿಮಗೆ ಹಸಿವೆ ಇದೆಯೋ ಇಲ್ಲವೋ ನೋಡೋಣ" ಎಂದು ಪ್ರೇಮಮಯವಾದ ದೃಷ್ಟಿಯಿಂದ ಇಂದಿರೆಯು ರಮಾಕಾಂತನನ್ನು ನೋಡಿ ಮಾತಾಡಿದಳು.

ಅಷ್ಟರಲ್ಲಿ ನಂಜಮ್ಮನು ಬೆಳ್ಳಿ ತಾಟಿನಲ್ಲಿ ಉಪಹಾರವನ್ನೂ, ಚೀನಿ ಜಂಬುವಿನಲ್ಲಿ ಕಾಫಿಯನ್ನೂ ಬದಿಯಲ್ಲಿದ್ದ ಕೋಣೆಯಲ್ಲಿರಿಸಿ ಸಿದ್ಧವಾಗಿದೆಂದು ಹೇಳಿದಳು. ರಮಾಕಾಂತನನ್ನು ಕರಕೊಂಡು ಇಂದಿರೆಯು ಉಪಹಾರದ ಹತ್ತರೊಯಿದು ಕುಳ್ಳಿರಿಸಿದಳು.

"ಒಲ್ಲೆನೆಂದರೂ ನೀವು ಆಗ್ರಹ ಮಾಡುತ್ತೀರಿ, ಆಗಲಿ." ಎಂದು ರಮಾಕಾಂತನು ಉಪಹಾರಕ್ಕೆ ಮೆಲ್ಲಗೆ ಆರಂಭ ಮಾಡಿದನು.

"ವಿಷವೇ ಇದೆ ಹೇಗೆ ತಿನ್ನುವಿರಿ?" ಎಂದು ಇಂದಿರೆಯು ವಿನೋದ ಮಾಡಿ ನಕ್ಕಳು.

"ನೀವು ಮೈಸೂರ, ಊಟೀ ಮುಂತಾದ ಸ್ಥಳಗಳಿಗೆ ಹೋಗಿಬಂದಿರಲ್ಲೇ? ಅಲ್ಲಿ ಹೋದಾಗ್ಯೆ ಒಡವನ ಸ್ಮರಣೆಯಾಯಿತೇ?" ಎಂದು ರಮಾಕಾಂತನು ಕೇಳಿದನು.

"ಸತ್ಯವಾಗಿ ನಿಮ್ಮ ಸ್ಮರಣೆಯಾಯಿತು. ನೀಲಗಿರಿಯಲ್ಲಿ ನೀವಿದ್ದದ್ದಾದರೆ ನಿಮ್ಮ ಸಹಾಯದಿಂದಲ್ಲಿಯ ಶೋಭಾವರ್ಣನೆಯ ಕವಿತ್ವವನ್ನೇ ರಚಿಸಬಹುದಾಗಿತ್ತು. ಆದರೇನು ಮಾಡುವದು? ನನ್ನ ಜೊತೆಯಲ್ಲಿದ್ದ ಜನರು ಅರಸಿಕರೂ ಸೋಮಶಾರಿಗಳೂ ಆಗಿದ್ದರು. ನಿಮ್ಮ ಸ್ಮರಣೆ ಹೆಜ್ಜೆಜ್ಜೆಗೆ ಆಗುತ್ತಿತ್ತು. ಇರಲಿ. ನೀವಿಷ್ಟು ದಿವಸ ಏನೇನು ಮಾಡುತ್ತಿದ್ದಿರಿ? ಯಾವ ಉದ್ಯೋಗವನ್ನು ಕೈಕೊಂಡಿರುವಿರಿ?"

"ಇಲ್ಲಿ ನಾನು ಸ್ವತಂತ್ರ ಇಂಜಿನಿಯರನ ಉದ್ಯೋಗ ನಡೆಸಿದ್ದೇನೆ. 'ಟೀ' ಕೃಷ್ಣರಾಯರೆಂಬ ಪೆನ್‌ಶನ್ ಎಂಜಿನಿಯರರು ನನಗೆ ಚನ್ನಾಗಿ ಸಹಾಯಮಾಡಿದ್ದರಿಂದ ತಕ್ಕಮಟ್ಟಿಗೆ ಹಣ ದೊರೆಯುತ್ತದೆ. ಬೇರೆ ಉದ್ಯೋಗ ಮಾಡುವ ಆವಶ್ಯಕತೆಯುಳಿದಿಲ್ಲ. ಇಲ್ಲಿಯೇ ಎಂಜಿನಿಯರರ ಸಂಘವಿದೆ. ಅದರಲ್ಲಿ ನಾನು ಸಭಾಸದಸ್ಯನಾಗಿರುವೆನು. ಆ ಸಂಘದವರು ಅನೇಕ ಹೊಸ ಶೋಧಗಳನ್ನು ಮಾಡಿ

ಅನೇಕ ಲೋಕೋಪಯುಕ್ತವಾದ ಕೆಲಸಗಳನ್ನು ಕೂಡಾ ಮಾಡಿಗುವರು.'' ಎಂದು ಹೇಳಿ ತನ್ನ ಸಂಘದವರು ಮಾಡಿದ ಎಲ್ಲ ಮಹತ್ಕಾರ್ಯಗಳ ವರ್ಣನೆಯನ್ನು ಸವಿಸ್ತಾರವಾಗಿ ಹೇಳಿದನು.

" ನೀವು ಶಾಸ್ತ್ರಭಿಜ್ಞರು ಗಾರುಡಿಗರಂತೆ ' ಫೂ ' ಎಂದೂದಿ ಹಣ ತೆಗಿಯುವಿರಿ. ನಾನು ಹಿಂದಕ್ಕೊಮ್ಮೆ ಹೇಳಿರುವೆನು. ಸರಸ್ವತೀಭಕ್ತರು ತಾವಾಗಿ ಲಕ್ಷ್ಮಿಯನ್ನೊಲ್ಲದಿದ್ದರೆ ಉಪಾಯವಿಲ್ಲ. ಇಲ್ಲದಿದ್ದರೆ ದ್ರವ್ಯವೇ ನಿಮ್ಮನ್ನರಿಸಿಕೊಂಡು ಬರುವದೆಂದು ಹೇಳಿದ್ದು ಪ್ರತ್ಯಯಕ್ಕೆ ಬಂದಿತೆ ? '' ಎಂದು ಕೇಳಿ ವಿನೋದದಿಂದ ನಕ್ಕಳು.

ಫಲಾಹಾರ ಮುಗಿದ ನಂತರ ಇವರೀರ್ವರು ಮತ್ತೆ ನಡುಮನೆಯಲ್ಲಿ ಬಂದು ಕುಳಿತರು. ನಂಜಮ್ಮನು ವೀಳ್ಯಗಳನ್ನು ಬೆಳ್ಳೀ ತಬಕದಲ್ಲಿ ತಂದಿಟ್ಟು ಹೋದಳು. ಇಂದಿರೆಯು ಅದರಲ್ಲಿಯ ಎರಡು ವೀಳ್ಯಗಳನ್ನು ರಮಾಕಾಂತನ ಕಯ್ಯಲ್ಲಿ ಕೊಟ್ಟು " ರಾಯರೆ, ನೀವು ಸೊರಗಿರುವಿರಿ. ನಿಜವಾದ ಕಾರಣವನ್ನು ಹೇಳುವಿರೇನು ?'' ಎಂದು ಕೇಳಿದಳು.

" ಸೊರಗಲಿಕ್ಕೆ ನನಗೇನಾಗಿದೆ. ಈಗ ತುಸು ಕೆಲಸದ ಗಡಿಬಿಡಿಯಿದ್ದ ಮೂಲಕ ಅತ್ತಿತ್ತ ತಿರುಗಾಡಿ ಕೊಂಚ ಶ್ರಮವಾದ್ದರಿಂದ ಸೊರಗಿದಂತೆ ಕಾಣುತ್ತಿರವೆನಾದೀತು.''

" ಈ ಪರಿಯಾಗಿ ಶರೀರ ಶೋಷಣವಾಗುವಷ್ಟು ಕೆಲಸ ಮಾಡತಕ್ಕದ್ದಲ್ಲ.''

" ಕೆಲಸ ಹೆಚ್ಚಾದ್ದರಿಂದ ನಾನು ಸೊರಗಿರುವೆನಂತಲ್ಲ. ಕೆಲಸವಿಲ್ಲದಿದ್ದಾಗ್ಗ್ಯೆಯೇ ನನ್ನ ಜೀವಕ್ಕೆ ಸಮಾಧಾನವಿರುವದಿಲ್ಲ.''

" ಹೀಗಿದ್ದ ಪಕ್ಷದಲ್ಲಿ ನೀವು ಸೊರಗಿದ ಕಾರಣವನ್ನು ನನ್ನ ಮುಂದೆ ಹೇಳಲಿಚ್ಛಿಸುವದಿಲ್ಲೆಂದು ಕಂಡುಬರುತ್ತದೆ. ಮುಂಚಿನ ಸ್ನೇಹವೂ ನಂಬಿಗೆಯೂ ಉಳಿದಿರುವದಿಲ್ಲವೆಂದು ತೋರುತ್ತದಲ್ಲ !''

" ಶಪಥಪೂರ್ವಕವಾಗಿ ಹೇಳುತ್ತೇನೆ. ನನ್ನಲ್ಲಿಯ ಸ್ನೇಹಭಾವವೆಳ್ಳಷ್ಟಾದರೂ ಕಡಮೆಯಾಗಿಲ್ಲ.''

" ನಮ್ಮ ತಂದೆಗಳಿಂದೇನಾದರೂ ನಿಮಗೆ ಅನಾದರವಾಗಿರುವದೇನು ? ಅವರ ನಡಾವಳಿ ನಿಮಗೆ ಸರಿಬರುತ್ತವಲ್ಲವೇ ?''

" ಛೆ ! ಛೆ ! ಅವರಿಂದ ನನಗೆ ಅನಾದರವಾಗಿಯೇ ಇಲ್ಲ. ಅವರ ನಡಾವಳಿಯೂ ಉತ್ಕೃಷ್ಟವಾದದ್ದು. ನನ್ನ ಮೇಲೆ ಅವರ ಮಮತೆಯನ್ನ. ಇವರಿಂದಲೇ

ಮೈಸೂರ ಅರಮನೆಯು ಕೆಲವು ಕೆಲಸವು ನನ್ನ ಕಡಿಗೆ ಇರುವದಲ್ಲ!" ಎಂದು ರಮಾಕಾಂತನು ಹೇಳಿದನು.

"ನಮ್ಮ ತಂದೆಗಳೂ ನೀವೂ ಪ್ರೇಮದಿಂದಿರುವುದನ್ನು ಕೇಳಿ ನನಗೆ ಸಂತೋಷವಾಗಿರುವದು."

ನಂಜುಂಡನು ಬಂದು ಶ್ರೀಕಂಠ ಬಹದ್ದರರ ರಥ ಬಂದಿತೆಂದು ಇಂದಿರೆಗೆ ಸೂಚನೆ ಕೊಟ್ಟು ತಾನು ಅವನ ರಥದ ಕಡೆಗೆ ನಡೆದು ಹೋದನು.

"ಶ್ರೀಕಂಠ ಬಹದ್ದರರೂ ನೀವೂ ಸ್ನೇಹಿತರಾಗಿರುವಿರೇನು ?" ಎಂದು ಇಂದಿರೆಯು ರಮಾಕಾಂತನನ್ನು ಕೇಳಿದಳು.

"ನನ್ನ ಮಾರ್ಗ ಬೇರೆ, ಶ್ರೀಕಂಠ ಬಹದ್ದರನ ಮಾರ್ಗ ಬೇರೆ. ಶ್ರೀರಂಗ ಪಟ್ಟಣದಲ್ಲಿ ನಿಮ್ಮ ಮನೆಯಲ್ಲಿಯೇ ಶ್ರೀಕಂಠಬಹದ್ದರನೂ ನಾನೂ ಕೂಡಿ ಒತ್ತಟ್ಟಿಗಿದ್ದದ್ದು. ಆ ಗುರ್ತದ ಮೇಲೆಯೇ ಎಲ್ಲಿಯಾದರೂ ಬೀದಿಯಲ್ಲಿ ಭೆಟ್ಟಿ ಯಾದರೆ 'ನಮಸ್ಕಾರ' 'ನಮಸ್ಕಾರ' ಇಷ್ಟೆಯೇ ಹೊರ್ತಾಗಿ ವಿಶೇಷ ನಮ್ಮಾ ಅವರಾ ಸಂಘಟನವಿಲ್ಲ."

"ಶ್ರೀಕಂಠನು ಬುದ್ಧಿವಂತನಿರುವನು ಅಲ್ಲವೇ ?" ಎಂದು ಇಂದಿರೆಯು ಕೇಳಿದಳು.

"ಇರಬಹುದು. ಶ್ರೀರಂಗಪಟ್ಟಣದಲ್ಲಿದ್ದಾಗ್ಗೆ ಚನ್ನಾಗಿ ಹರಟೆ ಹೊಡಿಯು ತ್ತಿದ್ದನು."

"ನಾಲ್ಕು ಜನರಿಗೆ ಬೇಕಾದವನಾಗಿರುವನು."

"ಯಾರಿಗೆ ಬೇಕಾಗಿರುವನು ?" ಎಂದು ರಮಾಕಾಂತನು ಚಕಿತನಾಗಿ ಕೇಳಿದನು.

"ನಾಲ್ಕು ಜನ ತನ್ನ ಸ್ನೇಹಿತರಿಗೆ. ಮತ್ಯಾರಿಗೆ ?"

"ಹೀಗೋ! ಇರಬಹುದು" ಎಂದು ರಮಾಕಾಂತನು ಉದಾಸೀನತೆಯಿಂದ ನುಡಿದನು.

"ನಿಮ್ಮ ಮಾತಿನಲ್ಲಿ ಸ್ವಲ್ಪ ಸ್ನೇಹದ ಅಭಾವವು ಭಾಸವಾಗುತ್ತದೆ. ಹೆಂಗಸ ರಿಗೆ ಆಗಿ ಬರುವದಿಲ್ಲೆಂದು ನಾನು ಕೇಳಿದ್ದೆನು. ಆದರೆ ಈ ದುರ್ಗುಣವು ಗಂಭೀರರಾದ ಪುರುಷರನ್ನು ಕೂಡಾ ಬಿಟ್ಟಿಲ್ಲವಲ್ಲ!" ಎಂದಿಂದಿರೆಯು ಕೇಳಿದಳು.

"ಸಂಪೂರ್ಣ ಪರಿಚಯುವಾದ ಹೊರ್ತು ನನಗೆ ಯಾರೂ ಸೇರುವದಿಲ್ಲ."

"ಜನರು ಕೆಟ್ಟವರೆಂದು ಕಂಡುಬರುವವರಿಗೂ ನಾನವರಗೂಡ ಚನ್ನಾಗಿ

ವರ್ತಿಸುವೆನು."

ಇಷ್ಟರಲ್ಲಿ ಶ್ರೀಕಂಠನು ಬಂದವನೇ ನಡುಮನೆಗೆ ಬಾರದೆ ಬೇರೆ ಸೋಪಾನದಿಂದ ಉಪ್ಪರಿಗೆಯ ಮೇಲೆ ಹೋಗಿ ಕುಳಿತುಕೊಂಡನೆಂದು ನಂಜುಂಡನು ಬಂದು ಇಂದಿರೆಗೆ ಹೇಳಿದನು. ಅವಳು ರಮಾಕಾಂತನ ಅಪ್ಪಣೆ ತಕ್ಕೊಂಡು ಶ್ರೀಕಂಠನ ಸಮಾಚಾರಕ್ಕೆ ಹೊರಟುಹೋದಳು.

ರಮಾಕಾಂತನು ತಾನೊಬ್ಬನೇ ಆರಾಮ ಕುರ್ಚಿಯಲ್ಲಿ ಕುಳಿತುಕೊಂಡು ಮತ್ತೆ ವಿಚಾರದಲ್ಲಿ ಮುಳುಗಿದನು. ಶ್ರೀಕಂಠನು ತನ್ನ ಅಳಿಯನಾಗಬೇಕೆಂಬ ಇಚ್ಛೆ ಜಯರಾಯನಿಗಿದ್ದ ಮೂಲಕ ಈ ತರುಣನು ತನ್ನ ಮನಸ್ಸಿಗೆ ಬಂದಾಗ್ಯೆ ಈ ಮನೆಗೆ ಬರಲಿಕ್ಕೆ ಸಲಿಗೆ ಇದೆ. ಆದರೆ ಇಂದಿರೆಯ ದರ್ಶನ ಕೂಡಾ ತನಗಾಗ ಬಾರದೆಂದು ಜಯರಾಯನು ಸಂಕಲ್ಪ ತೊಟ್ಟಂತೆ ಕಾಣಬರುತ್ತದೆ. ಈ ಸ್ತ್ರೀ ರತ್ನವನ್ನು ಧರಿಸಲಿಕ್ಕೆ ಶ್ರೀಕಂಠನು ಸರ್ವಥಾ ಯೋಗ್ಯನಿಲ್ಲ. ಇವನು ಘನವಂತರ ಮಗನಂತೆ! ಲಾಟರಿಗಳಲ್ಲಿ ಸೇರುವದು, ವ್ಯಾಪಾರದಲ್ಲಿ ಜೂಜಾಡುವದು, ಕುದುರೆ ಮಂಗಗಳ ಸರ್ಕಸಮಾಡುವದು ಇವು ಘನವಂತರ ಲಕ್ಷಣಗಳೇ? ಇವನು ಬುದ್ಧಿವಂತನೆಂದು ಇಂದಿರೆಯು ಹೇಳುತ್ತಾಳೆ. ಹೂವಶಾಲೆಗಳನ್ನು ಕಟ್ಟುವದು, ಹೆಂಗಸರ ಕಾಲಿಗೆ ಜಾವಡಿ ಹಚ್ಚುವದು, ಇವೆಲ್ಲಾ ಬುದ್ಧಿವಂತಿಕೆಯ ಪ್ರಕಾಶ ಗಳಲ್ಲವೇ? ಆದರೆ ಅದಿ ಫಲವೇನು? ಶ್ರೀಕಂಠನು ಶಿವಸಮುದ್ರದ ಜಾಗೀರ ದಾರರ ಮಗ ಸುಳ್ಳಲ್ಲ. ಇದಕ್ಕಾಗಿಯೇ ಜಯರಾಯನು ತನ್ನ ಅಮೌಲ್ಯವಾದ ರತ್ನದ ಮಾಲೆಯನ್ನು ಈ ಕೋತಿಯ ಕೊರಳಲ್ಲಿ ತೊಡಕಿಸುವನಲ್ಲವೆ!

ಆದರೆ ಇಂದಿರೆಯೇ ಶ್ರೀಕಂಠನನ್ನು ವರಿಸಲಿಕ್ಕೆ ಸಿದ್ಧಳಾದರೆ, ನಾನು ಶ್ರೀಕಂಠನ ಮೇಲೆ ಹರಿದುಬಿದ್ದರೇನಾಗುವದು? ಪ್ರೀತಿಯ ಕಾಲದಲ್ಲಿ ಮನುಷ್ಯನ ಸದ್ಗುಣಗಳೆಲ್ಲ ಹಾಳಾಗಿಹೋಗುತ್ತವೆ. ನನಗೆ ಮತ್ಸರವೆಂಬದು ಗೊತ್ತೇ ಇದ್ದಿಲ್ಲ. ಅದೀಗ ಸರ್ಪದಂಶದಂತೆ ನನ್ನ ಮಯ್ಯಲ್ಲಿ ಭೇದಿಸಿಕೊಂಡಿರುವದು. ನನ್ನಲ್ಲಿ ಆಗಂತುಕವಾಗಿ ಬಂದ ಈ ದುರ್ಗುಣವು ಇಂದಿರೆಗೆ ತಿಳಿಯಬಂದಿತು. ಇದಕ್ಕಾಗಿ ಅವಳು ನನ್ನನ್ನು ನಿಂದಿಸಲಾರಳೇ! ಹೀಗೆ ವಿಚಾರ ಮಾಡುತ್ತ, ಕುಳಿತಿರುವಾಗ ರಮಾಕಾಂತನ ಬಳಿಯಲ್ಲಿ ಬಂದು ಸೇವಕನು ಬಂದು "ಧಣಿಯರು ತಮ್ಮನ್ನು ಕರೆದಿರುವರು" ಎಂದು ಹೇಳಿದನು. ಸಂಗಡಲೇ ರಮಾಕಾಂತನು ಜಯರಾಯನ ಹತ್ತಿರ ಹೋಗಿ ಮೈಸೂರ ಅರಮನೆಯ ಕೆಲಸದ ಬಗ್ಗೆ ಮಾತಾಡುತ್ತ ಕುಳಿತನು.

ಸಮಯವಾದ್ದರಿಂದ ಎಲ್ಲರೂ ಭೋಜನಶಾಲೆಯಲ್ಲಿ ನೆರೆದರು. ಅಲ್ಲಿ

ಸಾಲ್ಕು ಮಣೆಗಳನ್ನಿಟ್ಟು ಅಲ್ಲಲ್ಲಿ ನಾಲ್ಕು ಬೆಳ್ಳಿ ತಾಟಗಳನ್ನು ಮಂಡಿಸಿದ್ದರು. ಮಣೆಗಳ ಮೇಲೆ ರಮಾಕಾಂತ, ಶ್ರೀಕಂಠ, ಜಯರಾಯರಿಗೋಸ್ಕರ ಪೀತಾಂಬರಗಳನ್ನಿಟ್ಟಿದ್ದರು. ಇಂದಿರೆಯು ತನ್ನ ಜರದ ಪೀತಾಂಬರವನ್ನುಟ್ಟು ರೇಶ್ಮೆ ಕುಪ್ಪಸವನ್ನು ತೊಟ್ಟು ಕಯ್ಯಲ್ಲಿ ತುಪ್ಪ ಬಡಿಸುವ ಪಾತ್ರೆಯನ್ನು ಹಿಡಕೊಂಡು ಸುರಾಸುರರಿಗೆ ಅಮೃತವನ್ನು ಹಂಚಲುದ್ಯುಕ್ತಳಾದ ಮೋಹಿನಿಯಂತೆ ಅಡ್ಡಾಡುತ್ತಿದ್ದಳು. ಇಂದಿರೆಯೂ ಜಯರಾಯನೂ ಒಂದು ಮಗ್ಗಲಿಗೆ ಕುಳಿತರು. ಶ್ರೀಕಂಠನೂ, ರಮಾಕಾಂತನೂ ಅವರೆದುರಿಗಿನ ಸಾಲಲ್ಲಿ ಕುಳಿತರು.

ಭೋಜನೋತ್ತರ ರಮಾಕಾಂತನು ಜಯರಾಯನ ಅಪ್ಪಣೆ ತಕ್ಕೊಂಡು ತನ್ನ ಮನೆಗೆ ಹೊರಟನು. ಇವನು ಅಟ್ಟದಿಂದ ಕೆಳಗಿಳಿದು ಬಂದ ಕೂಡಲೆ ನಡುಮನೆಯಲ್ಲಿ ಇಂದಿರೆಯು ಭೆಟ್ಟಿಯಾದಳು.

" ಈಗಾಗಲೇ ಮನೆಗೆ ನಡೆದಿರೇನು " ಎಂದು ಇಂದಿರೆಯು ಕೇಳಿದಳು.

" ಅಗತ್ಯದ ಕೆಲಸವಿದೆ, ಹೋಗಲೇಬೇಕು."

" ಆಗಲಿ. ಮಾತ್ರ ಮಿತಿಮೀರಿ ಕೆಲಸ ಮಾಡಿ ಪ್ರಕೃತಿ ಕೆಡಿಸಿಕೊಳ್ಳಬೇಡಿರಿ. ನಿಮ್ಮ ದರ್ಶನವೇ ದುರ್ಲಭವಾಗಿದೆ. ಯಾವಾಗಾದರೂ ಕೂಡಿದಾಗ್ಯೆ ದಯಮಾಡಿ ಬಂದು ಭೆಟ್ಟೀ ಕೊಟ್ಟು ಹೋಗುತ್ತಿರಬೇಕೆಂದು ಬೇಡಿಕೊಳ್ಳುತ್ತೇನೆ" ಎಂದು ಇಂದಿರೆಯು ಪ್ರೇಮಪುರಸ್ಸರವಾಗಿ ಹೇಳಿದಳು.

" ಇದಕ್ಕೆ ಪ್ರಾರ್ಥನೆಯನ್ನದೆ ಆಜ್ಞೆಯೆಂದು ತಿಳುಕೊಂಡು ಅನುಗ್ರಹಿತನಾಗಿರುವೆನು. ನಿಮ್ಮ ದರ್ಶನದಿಂದಾದಷ್ಟು ಆನಂದವು ನನಗೆ ಮತ್ಯಾತರಿಂದಲೂ ಆಗದು. ಬರುತ್ತೇನೆ ' ಎಂದು ಬಾಣ ಹೊಡೆದ ಹಾಗೆ ತ್ವರೆಯಿಂದ ಬೀದಿಗುಂಟ ನಡೆದನು

" ನಿಮ್ಮ ದರ್ಶನದಿಂದಾದಷ್ಟು ಆನಂದವು ನನಗೆ ಮತ್ಯಾತರಿಂದಲೂ ಆಗದು " ಎಂದು ರಮಾಕಾಂತನ ವಾಕ್ಯವನ್ನು ತಾನು ಪಠಿಸಿ, ನನ್ನ ದರ್ಶನದಿಂದವರಿಗೆ ಇಷ್ಟು ಆನಂದವಾಗುತ್ತಿರುವದೇ ? ಆಗುತ್ತಿದ್ದರೆ ಏನು ಕಾರಣ ? ನನಗಾದರೂ ರಮಾಕಾಂತರ ದರ್ಶನದಿಂದ ಆನಂದವೇ ಆಗುತ್ತದಲ್ಲ ! ಅದಾದರೂ ಏಕೆ ?" ಎಂದು ಇಂದಿರೆಯು ತನಗೆ ತಾನೇ ಪ್ರಶ್ನೆ ಮಾಡಿಕೊಂಡಳು.

ರಮಾಕಾಂತನು ಮನದಲ್ಲಿಯೇ ಯೋಚಿಸುತ್ತ ನಡೆದವನು ತಾನೆಲ್ಲಿಗೆ ಹೋಗುವೆನೆಂಬದರ ಅರಿವು ಇಲ್ಲದೆ ಕಡೆಗವನು ಲಾಲ್‌ಬಾಗದ ಹತ್ತಿರ ಬಂದು ನೋಡಲು ಮೈಯಲ್ಲಿ ಸ್ಮೃತಿಬಂದಂತಾಗಿ ಸಮೀಪದಲ್ಲಿದ್ದ ಆಸನದ ಮೇಲೆ

ವಿಶ್ರಮಿಸಿಕೊಂಡನು. ವಿಚಾರದಲ್ಲಿದ್ದರಿಂದ ಇಷ್ಟು ದೂರ ಬಂದಿದ್ದರ ಶ್ರಮವೆನಿಸಿದ್ದಿಲ್ಲ. ತುಸು ಹೊತ್ತು ಮುಂದ ದೃಷ್ಟಿಯಿಂದ ತನ್ನ ಸುತ್ತಲಿದ್ದ ವೃಕ್ಷಸಮುದಾಯವನ್ನು ನೋಡುತ್ತ ಕುಳಿತ ಮೇಲೆ ಮತ್ತೆ ವಿಚಾರಗಳು ಅವನ ಸುತ್ತಲು ಮುಕ್ಕರಿಸಿದವು.

ರಮಾಕಾಂತನ ಉದ್ಯೋಗದ ಅಭಿವೃದ್ಧಿಯಾದದ್ದರಿಂದಲೂ, ಅವನು ಇಂದಿರೆಯು ಮನೆಗೆ ಹೋಗುವದು ಬಿಟ್ಟುಬಿಟ್ಟಿದ್ದರಿಂದಲೂ, ಅವನ ಮನಸ್ಸು ಪಕ್ಕೆ ಕಿಂಚಿತ್ ಮರೆಬಿದ್ದಹಾಗಾಗಿತ್ತು. ಬೇಸಿಗೆಯು ಭರದಲ್ಲಿ ಮಳೆಯಾದರೆ ಆದರಿಂದ ತಂಪು ಹುಟ್ಟದೆ ಕಾವು ಹೆಚ್ಚಾಗುವದೆಂದು ಹೇಳುತ್ತಾರೆ. ರಮಾಕಾಂತನ ಎದೆಯು ವಿರಹದಿಂದ ಕುದಿಯುತ್ತಿರಲು ಇಂದಿರೆಯು ದರ್ಶನದಿಂದ ಅವನ ವ್ಯಥೆಯು ಹೆಚ್ಚೇ ಆಯಿತು. ರಮಾಕಾಂತನು ಇಂದಿರೆಯನ್ನು ಬಹಳ ದಿವಸ ನೋಡಿದ್ದಿಲ್ಲಾದ್ದರಿಂದ ಅವಳ ದಿವ್ಯರೂಪವು ಇವನ ಧ್ಯಾನದಲ್ಲಿ ಅಸ್ಪಷ್ಟವಾಗಿ ಬರುತ್ತಿತ್ತು. ಆದರೆ ಒಮ್ಮಿಂದೊಮ್ಮೆ ಈ ತರುಣಿಯು ದಿವ್ಯರೂಪವನ್ನು ಕಂಡು ಮನ್ಮಥನ ಶಾಣೋಲ್ಲೀಢಿತವಾದ ಬಾಣಗಳಿಂದ ಒಳಿತಾಗಿ ಗಾಯ ಹೊಂದಿದನು. ಈ ದುಃಖವಲ್ಲದೆ ತನ್ನೆದುರಾಳಿಯಾದ ಶ್ರೀಕಂಠನು ಇಂದಿರೆಯ ಗೂಡ ಏನೂ ಅಭ್ಯಂತರವಿಲ್ಲದೆ ಮಾತಾಡಲಧಿಕಾರ ಹೊಂದಿದ್ದನು. ತನ್ನನ್ನು ಮಾತ್ರ ಜಯರಾಯನು ಇಂದಿರೆಯು ಊರಲಿಲ್ಲದ್ಯಾಗ್ಯೆ ಕರಿಸುವನು. ಈ ಪರಿಯಾಗಿ ಇಂದಿರೆಯ ಪ್ರೇಮಸಂಪಾದನದ ಮಾರ್ಗವು ತನಗೆ ವಿಷಮವಾಗಿತ್ತು. ತನ್ನ ಪ್ರತಿಸ್ಪರ್ಧಿಯನ್ನು ಇಂದಿರೆಯ ತಂದೆಯೇ ಬೆನ್ನು ಮೇಲೆ ಹೊತ್ತುಕೊಂಡೊಯ್ಯುತ್ತಿರುವನು. ಈ ದ್ವಂದ್ವಯುದ್ಧದಲ್ಲಿ ಶ್ರೀಕಂಠನೆದುರಿನಲ್ಲಿ ತಾನು ತಡೆಯುವೆನೋ ಇಲ್ಲವೋ ಹೇಗೆ ಹೇಳಬೇಕು. ರಮಾಕಾಂತನು ಹೀಗೆ ವಿಚಾರ ಮಾಡುತ್ತ ಕುಳಿತವನು ಜಗ್ಗನೆ ಎದ್ದು ನಿಂತು "ಈಗೇನಾಗಿದೆ ಈ ದ್ವಂದ್ವ ಯುದ್ಧದಲ್ಲಿ ನಾನೇ ಯಾಕೆ ಸೋಲಬೇಕು. ಇಂದಿರೆಯು ಆ ಮೂಢನಾದ ಶ್ರೀಕಂಠನನ್ನು ಸರ್ವಥಾ ಸೇರ ಮದಿಲ್ಲ. ಸೌಜನ್ಯಕ್ಕಾಗಿ ಅವನ ಕೂಡ ಮಾತುಕಥೆಮಾಡಿದರೇನಾಯಿತು. ಶ್ರೀಕಂಠನನ್ನು ಜಯರಾಯನು ಮಾತ್ರ ಮೆಚ್ಚಿಕೊಟ್ಟವನು. ಆದರೆ ಮದುವೆ ಮಾಡಿಕೊಳ್ಳುವವಳು ಇಂದಿರೆಯು. ಜಯರಾಯನಲ್ಲ. ರಮಾಕಾಂತನೇ ಹೀನಸತ್ವನಾಗಬೇಡ" ಎಂದು ತನ್ನಷ್ಟಕ್ಕೆ ತಾನೇ ಮಾತಾಡಿಕೊಂಡು 'ಧೀರಾಸ್ಸರಂತಿ ವಿಪದಂ ನ ತು ದೀನಚಿತ್ತಾಃ' ಎಂಬ ಚರಣವನ್ನು ಪಠಿಸುತ್ತ ತನ್ನ ಮನೆಯ ಹಾದೀ ಹಿಡಿದನು.

ಇಂದಿರೆಯು ಹದಿನೆಂಟು ವರ್ಷದ ಪ್ರಾಯದವಳಾಗಿದ್ದರೂ ಪಂಚಶರನು ಇವಳ ಹೃದಯವನ್ನು ಭೇದಿಸಲಿಕ್ಕೆ ತನ್ನ ಬಾಣಗಳನ್ನು ಹೂಡಲು ಮನಸ್ಸು ತೊಟ್ಟಿದ್ದಿಲ್ಲ. ಜಯರಾಯನು ಇಂದಿರೆಗೆ ಶ್ರೀಕಂಠನನ್ನಾದರಿಸಲಿಕ್ಕೂ, ಅವನ ಮನಸ್ಸರಂಜಿಸಲಿಕ್ಕೂ ಅವನ ಮೇಲೆ ಪ್ರೇಮವಿಡಲಿಕ್ಕೂ ಆಗ್ರಹ ಮಾಡುತ್ತಿದ್ದನು. ಮೇಲಾಗಿ ಸ್ಪಷ್ಟೋಕ್ತಿಗಳಿಂದಿಲ್ಲದಿದ್ದರೂ ಪರ್ಯಾಯದಿಂದ ರಮಾಕಾಂತನ ಕೂಡ ವಿಶೇಷ ಸಲಿಗೆ ಮಾಡಕೂಡದೆಂದು ಕೂಡಾ ಸೂಚಿಸುತ್ತಿದ್ದನು. ಇಂದಿರೆಗೆ ದೊಡ್ಡ ಯೋಚನೆಯೇ ಬಿದ್ದಂತಾಯಿತು. ಶ್ರೀಕಂಠನ ಸಾರಹೀನವಾದ ಪುನ ರುಕ್ತಿಗಳನ್ನು ಕೇಳಲಾರಳು ; ಬಿಡುವಳೇ ತಂದೆಗೆ ಸಿಟ್ಟು ಬರುವದು.

ಒಂದು ದಿವಸ ಸಾಯಂಕಾಲದ ಸುಮಾರಕ್ಕೆ ಇಂದಿರೆಯು ತನ್ನ ಕೋಣೆ ಯಲ್ಲಿ ವರ್ತಮಾನಪತ್ರವನ್ನೋದುತ್ತ ಕುಳಿತಿದ್ದಳು. ಜಯರಾಯನು ಅವಳ ಹತ್ತರ ಬಂದು "ಇಂದಿರಾ, ಏನು ಮಾಡುತ್ತಿಯಮ್ಮಾ ?" ಎಂದು ಕೇಳಿದನು.

"ಏನೂ ಇಲ್ಲ. ಇಂದುಪ್ರಕಾಶವನ್ನೋದುತ್ತ ಕುಳಿತಿರುವೆನು. ಏನಾದರೂ ಆಜ್ಞೆಯಿರುವದೇನು !"

"ರಮಾಕಾಂತನು ಈ ದಿವಸ ಬಂದು ಏನಾದರೂ ಕಾಗದ ಕೊಟ್ಟು ಹೋಗಿರುವನೇನು ?"

"ಇಲ್ಲ. ಈ ದಿವಸ ಅವರು ಬಂದಂತೆಯೇ ಇಲ್ಲ. ಮಹತ್ವದ ಕಾಗದಗಳೇನು ?"

"ಮಹತ್ವದ್ದವೇನು, ಮೈಸೂರು ಅರಮನೆಯ ಕೆಲವು ಭಾಗದ ಮೇಲ್ವಿ ಚಾರಣೆ ರಮಾಕಾಂತನ ಕಡೆಗೆ ಕೊಡಿಸಿದ್ದೇನೆ. ಅವನಿಗೆ ಸಲ್ಲತಕ್ಕ ಹಣದ ಲೆಖ್ಖ ಈ ದಿವಸ ಕಳಿಸಿದ್ದರೆ ನಾಳಿಗೇ ಹಣ ಬರುವಂತಿತ್ತು." ಎಂದು ಜಯರಾಯ ನಂದನು.

"ನೀವೀಗ ರಮಾಕಾಂತರಿಗೆ ಸಹಾಯ ಮಾಡುವಂತೆ ತೋರುತ್ತದೆ." ಎಂದು ಇಂದಿರೆಯು ಸಮಾಧಾನಪಟ್ಟವಳಾಗಿ ಕೇಳಿದಳು.

"ಅವನಿಗೆ ಬೇಕಾದರೆ ನಾನು ಸಹಾಯ ಮಾಡಲಿಕ್ಕೆ ಸಿದ್ಧನಿದ್ದೇನೆ. ಆದರೆ ಅವನಿಗೆ ನನ್ನ ಸಹಾಯದ ಅವಶ್ಯಕತೆಯಿದ್ದಂತೆ ಕಾಣಲಿಲ್ಲ. ಅವನು ತನ್ನ ಬುದ್ಧಿವೈಭವದಿಂದಲೇ ಬೆಂಗಳೂರಲ್ಲಿ ಪ್ರತಿಷ್ಠಿತನೆನಿಸಿಕೊಂಡು ತಿಂಗಳೊಂದಕ್ಕೆ ಮುನ್ನೂರು ನಾನೂರು ರೂಪಾಯಿ ಗಳಿಸುತ್ತಾನೆ. ಅರಮನೆಯ ಕೆಲಸವನ್ನು ಕೇವಲ ನನ್ನ ಮೇಲೆ ಉಪಕಾರ ಮಾಡುವದಕ್ಕಾಗಿಯೇ ಕೈಕೊಂಡವನಂತೆ

ಮಾಡಿದನು. ಶ್ರೀಕಂಠಬಹದ್ದರರು ಬಂದವರು ಹೋದರೇನು ? ಎಂದು ಜಯರಾಯನು ಕೇಳಿದನು.

"ಇದೇ ಹೋದರಲ್ಲ ! ಅಪ್ಪಾ, ರಮಾಕಾಂತರು ನಮ್ಮ ಮನೆಗೆ ಬರುವದೇ ಬಿಟ್ಟಂತೆ ಕಾಣುತ್ತದೆ. ಏನಾದರೂ ಕಾರಣವಾಗಿರುವದೇನು ?"

"ಅವನ ಭೆಟ್ಟಿ ನನಗೆ ಯಾವಾಗಾದರೂ ಆಗುತ್ತದೆ. ನಿನಗೆ ಯಾಕಾಗುವದಿಲ್ಲವೋ ಅರಿಯೆನು."

"ರಮಾಕಾಂತರು ಸೊರಗಿದಂತೆ ಕಾಣುವದಿಲ್ಲವೇ ?" ಎಂದು ಇಂದಿರೆಯು ಕೇಳಿದಳು.

"ಉದ್ಯೋಗದ ಗಾಣದಲ್ಲಿ ಸಿಕ್ಕರೆ ಮನುಷ್ಯನ ಹುಡುಗಾಟ ಕಡಿಮೆಯಾಗುತ್ತದೆ. ಅದರಂತೆ ರಮಾಕಾಂತನ ಸ್ಥಿತಿಯು ಆಗಿದ್ದೀತು ; ಸೊರಗಲಿಕ್ಕೇನಾಗಿರುವದು !"

"ಇದರ ಪರಿಣಾಮ ನಿಮ್ಮ ಮೇಲಾಗಲೀ ಶ್ರೀಕಂಠನ ಮೇಲಾಗಲೀ ಏಕಾಗಿಲ್ಲ ! ನೀವು ಸದಾ ಆನಂದವೃತ್ತಿಯಲ್ಲಿರುವಿರಿ. ಶ್ರೀಕಂಠ ಬಹದ್ದರನೂ ಏತರದೂ ಚಿಂತೆಯಿಲ್ಲದೆ ತನ್ನ ಗೊಡ್ಡ ಹರಟೇ ನಡಿಸೇ ಇರುವನು."

"ಉದ್ಯೋಗದಲ್ಲಿ ನನ್ನ ಮಯ್ಯುಂಡದ್ದರಿಂದ ಅದರ ಶ್ರಮಗಳೇ ನನಗೆ ಕಾಣಿಸುವದಿಲ್ಲ. ಶ್ರೀಕಂಠನಿಗೆ ವ್ಯಾಪಾರದಲ್ಲಿ ಹಾನಿಯಾದೀತೆಂಬ ಭಯವಿಲ್ಲ. ಏಕೆಂದರೆ ವ್ಯಾಪಾರದಲ್ಲಿಯ ಗಂಟು ನನ್ನದು, ಮುಳುಗಿದರೆ ನನ್ನ ಗಂಟು ಮುಳುಗುತ್ತದೆ. ಲಾಭ ಬಂದಲ್ಲಿ ಮಾತ್ರ ಶ್ರೀಕಂಠನು ಅರ್ಥವನ್ನೆತ್ತಿಕೊಳ್ಳಲಿಕ್ಕೆ ಬರುವನು. ಆದರೆ ರಮಾಕಾಂತನ ಸ್ಥಿತಿ ಹಾಗಿಲ್ಲ. ಅವನಿಗೆ ಹಣ ಬರುವ ಚಿಂತೆಯಿಲ್ಲದೆ ತನ್ನ ಪಾಂಡಿತ್ಯದ ಕೀರ್ತಿ ಹೋದೀತೆಂಬ ಚಿಂತೆ ಬೇರೊಂದಿದೆ. ಅದಕ್ಕಾಗಿ ರಮಾಕಾಂತನಿಗೆ ಕಣ್ಣಲ್ಲಿ ಕಣ್ಣಿಟ್ಟು ಕೆಲಸ ಮಾಡಬೇಕಾಗುತ್ತದೆ. ಇದಲ್ಲದೆ ಇಂಜಿನಿಯರರ ಸಂಘದವರ ಕೂಡ ಹೊಸ ಶೋಧಗಳಲ್ಲಿ ಸಂಪೂರ್ಣ ಮನಸ್ಸು ಹಾಕಿ ಅಶ್ರಾಂತ ಶ್ರಮ ಮಾಡುತ್ತಾನೆ."

"ಸಾರಾಂಶ ಹಣದಾಶೆಗಾಗಿ ಕವಿತಾಶಕ್ತಿಯುಳ್ಳವನೂ ವಿನೋದಿಯೂ ಆದ ಆ ತರುಣನು ಗಂಟುಮೋರೆ ಹಾಕಿಕೊಂಡು ಹಣದೊರಕಿಸುವ ಹವಣಿಕೆಯಲ್ಲಿ ಸರ್ವಕಾಲಪಿರಬೇಕಾಯಿತಲ್ಲವೇ. ಹಣದಾಶೆಗಾಗಿ ಕವಿತ್ವಕ್ಕೆ ತಿಲಾಂಜಲಿ ಕೊಡಬಹುದೇ " ಎಂದು ಇಂದಿರೆಯು ಚಿಂತಾಕುಲಳಾಗಿ ಮಾತಾಡಿದಳು.

"ಹಣದೊರಕಿಸುವ ಸವ್ಯಾಸ ಒಂದಾವರ್ತಿ ಹತ್ತಿತೆಂದರೆ ಅನ್ಯ ವಿಚಾರ

ಗಳು ಮೂಲೆಗೆ ಬೀಳುತ್ತವೆ. ಹಣವಿಲ್ಲದ ಕವಿತ್ವವನ್ನು ಕಟ್ಟಿಕೊಂಡು ತಂತೀ ಬಾರಿಸಬೇಕೇನು ? "

" ದೇವಯಾನಿಯಮ್ಮನವರ ಹಾಗೆ ಧನಾಶೆಯನ್ನು ಬಿಟ್ಟು ಇದ್ದದ್ದರಲ್ಲಿಯೇ ಸಂತೋಷ ಹಚ್ಚಿಕೊಂಡು ದೇವರು ನಮ್ಮ ಮುಂದೆ ಮನೋಹರವಾಗಿ ಹರಿವಿದ ಕಪಟನಾಟಕವನ್ನು ಆನಂದದಿಂದ ನೋಡುತ್ತ ಕುಳಿತಿರುವದು ವಾಸಿಯಲ್ಲವೇನು ? " ಎಂದು ಇಂದಿರೆಯು ಕೇಳಿದಳು.

" ಇಂದಿರಕ್ಕಾ, ದೇವಯಾನಿಯು ಸಾಕಷ್ಟು ಹಣ ಗಳಿಸಿ ಗಂಟು ತಲೆದಿಂಬಿಗಿಟ್ಟುಕೊಂಡು ನಿರಿಚ್ಛೆಯನ್ನು ತೋರಿಸುವಳು. ನಿನಗಾದರೂ ಹಣದಾಸೆ ಮಾಡುವ ಪ್ರಯೋಜನವಿಲ್ಲ. ರಮಾಕಾಂತನಿಗೆ ಒಂದುದ್ದೇಶದಿಂದ ಹಣಗಳಿಸಬೇಕಾಗಿದೆ."

" ತಿಳಿಯಿತು. ಈ ಉದ್ದೇಶ್ಯವೆಂದರೆ ಮಹತ್ವಾಕಾಂಕ್ಷೆಯೇ. ಗ್ರಹಗಳು ಸೂರ್ಯನ ಸುತ್ತಲು ಎಡೆಬಿಡದೆ ತಿರುಗುವಂತೆ ಮಹತ್ವಾಕಾಂಕ್ಷೆಯ ಬೆನ್ನು ಹತ್ತಿ ಯಾವತ್ತರು ಧಾವಿಸುತ್ತಿರುವರು."

" ಹುಚ್ಚವ್ವಾ, ನಿನ್ನ ಗ್ರಹಿಕೆ ತಪ್ಪಾದದ್ದು. ಇಪ್ಪತ್ತುನಾಲ್ಕು ವರ್ಷದ ಪ್ರಾಯದವನಾದ ತರುಣನು ಮಹತ್ವಾಕಾಂಕ್ಷೆಯನ್ನು ಲೆಕ್ಕಿಸನು. ನೀನು ಕಾವ್ಯ ನಾಟಕಗಳನ್ನೋದಿ ರಸಾಲಂಕಾರಗಳನ್ನು ತಿಳಕೊಂಡದ್ದಿದೇ ಏನು ? " ಎಂದು ನಗುತ್ತ ಜಯರಾಯನು ಮಗಳ ಮುಖ ನೋಡಿ ಮಾತಾಡಿದನು.

ಇಂದಿರೆಯು ಸ್ವಲ್ಪ ನಾಚಿಕೊಂಡು ಮೋರೆ ಕೆಳಗೆ ಮಾಡಿದಳು. ತಂದೇ ಮುಖ ಕಾಣಿಸುವಷ್ಟು ಕಣ್ಣೆತ್ತಿನೋಡಿ " ಅಂದರೆ ರಮಾಕಾಂತನು ಪ್ರೇಮಪಾಶದಲ್ಲಿ ಸಿಕ್ಕಿರುವದೆಂಬುದು ನಿಮ್ಮರ್ಥ ? " ಎಂದು ಕೇಳಿದಳು.

" ನನಗಾದರೂ ವಿಶೇಷ ಗೊತ್ತಿಲ್ಲ. ನನ್ನ ಮುಂದೆ ಯಾರೂ ತಮ್ಮ ಪ್ರೇಮಪ್ರಬಂಧವನ್ನು ಹೇಳುವದಿಲ್ಲ. ಪಂಡಿತಾ ರಾಧಾಬಾಯಿಯು ಏನೋ ಹೇಳುತ್ತಿದ್ದಳು, ಅದರ ಮೇಲಿಂದ ಹೀಗೇನಾದರೂ ಇರಬಹುದೆಂದು ನಾನು ಊಹಿಸಿರುವೆನು. ಪಂಡಿತೆಯನ್ನು ಕೇಳಿದರೆ ನಿನಗಾದರೂ ಹೇಳುವಳು."

" ಅಂದರೆ ! ಈ ಪಂಡಿತೆಯು ತನ್ನ ಬಲಿಯನ್ನು ರಮಾಕಾಂತರಮೇಲೊಗದಿರುವಳೇನು !" ಎಂದು ಇಂದಿರೆಯು ಆಶ್ಚರ್ಯಯುಕ್ತಳಾಗಿ ಕೇಳಿದಳು.

" ಏನು ಮಾತಾಡುವಿ, ಇಂದಿರೆ ! ಅರಮುದುಕೆಯಾದ ಪಂಡಿತೆಯು ಇನ್ನು ಪ್ರೀತಿಯ ಯೋಚನೆ ಮಾಡುವಳೇ ? "

"ನಾನೇನು ಬಲ್ಲೆನು ? ಹಾಗಾದರೆ ರಮಾಕಾಂತರ ಪ್ರೀತಿಪಾತ್ರಳಾರು ?"

"ಯಾರಿದ್ದರೇನು ನಿನಗೆ ? ಮಂಗಳೂರ ಕಮಲಾ ಎಂಬವಳ ಗುರ್ತು ನಿನ ಗುಂಟೇನು"

"ಮಂಗಳೂರ ಕಮಲಾ ! ಸಭೆಗಳಲ್ಲಿ ಪುರುಷರಂತೆ ಉಪನ್ಯಾಸಗಳನ್ನು ಮಾಡುತ್ತಿರುವ ಚಮತ್ಕಾರ ವೃತ್ತಿಯ ಹುಡಿಗೆಯೇನು ? ವಿಧವೆಯಲ್ಲವೇ ಅವಳು ? ರಮಾಕಾಂತರು ವಿಧವೆಯ ಪಾಣಿಗ್ರಹಣ ಮಾಡುವಷ್ಟು ಧರ್ಮಹೀನ ರಾಗಿರುವರೇನು ? ಮೇಲಾಗಿ ಮಂಗಳೂರ ಕಮಲೆಯು ಅವರಿಗಿಂತಲೂ ಹಿರಿಯ ಳಾಗಿ ಕಾಣುತ್ತಾಳೆ." ಎಂದು ವಿಸ್ಮಿತಳಾಗಿ ಇಂದಿರೆಯು ನುಡಿದಳು.

"ಕಮಲೆಯು ಚಲುವೆಯೂ ಚಿಕ್ಕವಳೂ ಇರುವಳೆಂದು ರಾಧಾಬಾಯಿ ಹೇಳುತ್ತಾಳೆ. ಇವಳ ರೂಪಕ್ಕೆ ನಮ್ಮ ಇಂಜಿನಿಯರನು ಮೋಹಿತನಾಗಿರುವನು. ಇವನ ತಂದೆಯು ವಿಧವೆಯಾದ ದೇವಯಾನಿಯ ಪ್ರೀತಿಗೋಸ್ಕರ ಮರಣದ ಪರಿಯಂತರವೂ ದುಃಖಿತನಾಗಲಿಲ್ಲವೇನು ? ತಂದೆಯು ಪುನರ್ವಿವಾಹಕ್ಕೆ ಸಿದ್ಧ ನಾಗಿದ್ದ ಬಳಿಕ ಮಗನಿಗೇನು ಬಂದದೆ ? ನೀನು ಮಾತ್ರ ರಮಾಕಾಂತನ ಮುಂದೆ ಈ ಮಾತು ತೆಗಿಯಬೇಡ." ಎಂದು ಜಯರಾಯನು ಇಂದಿರೆಯ ಮುಖಮುದ್ರೆ ಯನ್ನು ಪರೀಕ್ಷಿಸಿ ನೋಡಿದನು.

ಇಂದಿರೆಯು ಏನೂ ಉತ್ತರ ಕೊಡದೆ ಚಿಂತೆಯಲ್ಲಿ ಮುಳುಗಿದವಳಂತೆ ಸುಮ್ಮನೆ ಕುಳಿತಳು.

"ರಮಾಕಾಂತನು ಮಾಡುವ ಸಂಬಂಧವು ನನಗಾದರೂ ಸರಿಬರುವದಿಲ್ಲ. ಅವನು ಈ ಮಾತು ನನ್ನೆದುರಿಗೆ ತೆಗೆದೇ ಇಲ್ಲ. ತೆಗೆದಾಗ ವಿಚಾರ ಮಾಡೋಣ,"

"ತೆಗೆದರೆ ಏನು ವಿಚಾರ ಮಾಡುವಿರಿ ?"

"ರಮಾಕಾಂತನು ನನ್ನ ಮಗನಾಗಿದ್ದರೆ ಏನು ಹೇಳುತ್ತಿದ್ದೆನೋ ಅದನ್ನೇ ಹೇಳುವೆನು. ಕಮಲೆಯು ಅತ್ಯಾಚಾರದ ನಡತೆಯುಳ್ಳ ವಿಧವೆಯು; ಇಂಥವಳ ಕೂಡ ಸಂಬಂಧ ಮಾಡಿದರೆ ಸತ್‌ಕುಲಜರು ನಿನ್ನನ್ನೆತ್ತಿಡುವರೆಂದು ಹೇಳುವೆನು." ಎಂದು ಜಯರಾಯನಂದನು.

"ಕಮಲೆಯಲ್ಲಿ ರಮಾಕಾಂತರು ನಿಜವಾಗಿ ಆಸಕ್ತಿಯುಳ್ಳವರಾಗಿದ್ದರೆ ಅವರು ನಿಮ್ಮ ಸತ್‌ಕುಲಜರನ್ನು ಲೆಕ್ಕಿಸುವರೇನು ?"

"ನಾವು ನಮ್ಮ ಹೇಳುವಷ್ಟು ಹೇಳಬೇಕಲ್ಲವೇ ?"

"ಇಷ್ಟೆಲ್ಲ ಮೀರಿ ರಮಾಕಾಂತರು ಕಮಲೆಯನ್ನು ಲಗ್ನ ಮಾಡಿಕೊಂಡರೆ

ನೀವು ಅವರ ಸ್ನೇಹವನ್ನು ಬಿಡುವದಿಲ್ಲವಷ್ಟೇ ? ನಾನಂತೂ ಬಿಡುವದಿಲ್ಲ '' ಎಂದು ಇಂದಿರೆಯು ಸ್ಪಷ್ಟವಾಗಿ ಹೇಳಿದಳು.

" ಸ್ನೇಹಕ್ಕೇನು ಬಂದದೆ ? ಆದರೂ ನಮ್ಮಲ್ಲಿ ಬಂದ ದೊಡ್ಡ ಗೃಹಸ್ಥರು ಇವನ ಕೂಡ ಬಳಿಕೆ ಮಾಡಲಿಚ್ಛಿಸುವರೋ ಇಲ್ಲವೋ ಇದೊಂದೇ ಸಂಶಯು."

" ಈ ಕಮಲೆಯನ್ನೊಂದಾವರ್ತಿ ನೋಡಿ ಮಾತಾಡಿಸಿ ಬರಬೇಕೆಂದು ಮಾಡಿದ್ದೇನೆ." ಎಂದು ಇಂದಿರೆಯು ಅಂಜುತ್ತ ಕೇಳಿದಳು.

ಜಯರಾಯನು ದೊಡ್ಡ ಮನಸ್ಸಿನ ಅವಿರ್ಭಾವ ತಂದುಕೊಂಡು " ಏಕಾಗ ಲೊಲ್ಲದು. ಪಂಡಿತಾಬಾಯಿಗೆ ನಾನು ನಿನ್ನಿಚ್ಛೆಯನ್ನು ತಿಳಿಸುವೆನು. ಅವಳು ನಿನಗೆ ಕಮಲೆಯ ಭೆಟ್ಟೀ ಮಾಡಿಸುವಳು."

" ಪಂಡಿತೆಯ ಮಾತೇ ನನಗೆ ಸರಿಬರುವದಿಲ್ಲ. ಎಷ್ಟು ಡಂಭಾಚಾರ ಮಾಡುವಳವಳು ? ನಮ್ಮ ಪೂರ್ವಿಕರನ್ನು ನಿಂದಿಸುವಳೇನು ! ಅವರ ವಿದ್ಯೆಯ ಅಪಹಾಸ್ಯ ಮಾಡುವಳೇನು ! ಇವಳಿಗೆ ಪಂಡಿತೆಯೆಂದು ಹೆಸರು ಕೊಟ್ಟವನು ಮೂರ್ಖನೇ ಸರಿ. ಇವಳ ತಮ್ಮನು ಮೂರ್ಖನಿದ್ದರೂ ವಿನೋದಿಯೂ ಸರಳ ಮನಸ್ಸಿನವನೂ ಇರುವನು. ಶ್ರೀಕಂಠ ಬಹದ್ದರನಕ್ಕಿಂತಲೂ ಒಂದು ಪಾಲಿಗೆ ಇವನೇ ಬೇಕು."

" ಹೀಗಂದರೇನು ಇಂದಿರಾ ! " ಎಂದು ಚಕಿತನಾಗಿ ಜಯರಾಯನು ಕೇಳಿದನು,

" ಅಂದರೆ, ಯಾವಳಾದರೂ ಸ್ತ್ರೀಯು ಬಂದು ನನ್ನಭಿಪ್ರಾಯ ಕೇಳಿದರೆ ಶ್ರೀಕಂಠನಕ್ಕಿಂತಲೂ ಬಾಷ್ಕಳಪಂತನನ್ನೇ ವರಿಸೆಂದು ನಾನು ಹೇಳುವೆನು."

" ಇಂದಿರೇ, ಹೀಗನ್ನುವದು ನಿನ್ನಂಥವಳಿಗೆ ಸ್ವಲ್ಪಾದರೂ ಶೋಭಿಸುವದಿಲ್ಲ ಕಂಡಿಯಾ ! "

" ಅಭಿಪ್ರಾಯಕ್ಕೇನು ಮಾಡುವದು ? ಶ್ರೀಕಂಠನೂ, ಡಾಕ್ಟರನೂ ಇಬ್ಬರೂ ನಟರೇ. ಈರ್ವರಲ್ಲಿಯೂ ವಿದ್ಯೆಯೆಂದರೆ ಶುಂಠಿಯೇ. ಆದರೂ ಡಾಕ್ಟರನಲ್ಲಿ ಸ್ವಾಭಾವಿಕ ಚಾತುರ್ಯವಿದೆ. ಆದರೆಂದೂ ಶ್ರೀಕಂಠ ಬಹದ್ದರನಲ್ಲಿ ಅಭಾವವೇ."

ತಾನೆಲ್ಲಿಯ ವಿಕ ತಂದು ಗಂಟು ಹಾಕಿಕೊಂಡೆನೋ ಎಂದು ಜಯರಾಯನು ತನ್ನ ಮನಸ್ಸಿನಲ್ಲಿಯೇ ಶ್ರೀಕಂಠನನ್ನು ನಿಂದಿಸಿ ಇಂದಿರೆಗಂದದ್ದು—" ಶ್ರೀಕಂಠ ಬಹದ್ದರನು ನಿಮ್ಮಂಥವರ ರಂಜನಾರ್ಥವಾಗಿ ಮಾಡುವ ಪ್ರಯತ್ನಕ್ಕೆ ಅವನಿಗೆ ನಟ

ನೆಂದು ನೀನು ಕರೆಯುತ್ತೀ. ಆದರೆ ಅವನ ಇಂಥ ಆಚರಣೆಗಳು ನಿನ್ನ ಮನಸ್ಸಿಗೆ ಬಾರದಿದ್ದರೆ ಹಾಗೆ ಹೇಳಬಾರದೇ! ಅಂದರೆ ಅವನು ಜಾಣತನದಿಂದ ವರ್ತಿಸುವನು."

"ನನಗೆ ಇಂಥ ಮಾತುಗಳು ಸೇರುತ್ತವೆ, ನೀನು ನಿನ್ನ ಹರಟೆಗಳನ್ನು ಇಂಥ ರೀತಿಯಿಂದಲೇ ನಡಿಸೆಂದು ಶ್ರೀಕಂಠನಿಗೆ ಆಜ್ಞಾಪಿಸಬಹುದೇನು?"

"ನಾನು ಅವನಿಗೆ ತಿಳಿಸಿ ಹೇಳುವೆನು. ಬುದ್ಧಿವಂತರಾದ ತರುಣಿಯರ ಮುಂದೆ ಬಾಷ್ಕಳ ಮಾತಾಡತಕ್ಕದ್ದಲ್ಲವೆಂದು ಅವನಿಗೆ ಗೊತ್ತೇ ಇದೆ. ಆದರೂ ಸಾರಾಸಾರ ವಿಚಾರದೊಂದಿಗೆ ಮಾತಾಡಲಿಕ್ಕೆ ಅವನಿಗೆ ಹೇಳುತ್ತೇನೆ."

"ಶ್ರೀಕಂಠನಿಗೆ ವಾಚಾಲತೆ ಕಳಕೊಂಡೇನು ಮಾಡನ್ನುವಿರಿ?"

ಜಯರಾಯನಿಗೆ ಮಿತಿಮೀರಿದ ಸಿಟ್ಟು ಬಂದಿತು. ಆದರೂ ಹೊಟ್ಟೆಯೊಳಗಿನ ಸಿಟ್ಟು ರಟ್ಟೆಯಲ್ಲಿ ತರಕೂಡದಾಗಿತ್ತು. "ಇಂದಿರಾ, ಶ್ರೀಕಂಠನ ಗುಣಗಳು ಚನ್ನಾಗಿ ನಿನಗೆ ತಿಳಿದಿಲ್ಲ. ಅವನ ನಿಜವಾದ ಗುಣಗಳನ್ನು ನಮ್ಮಂಥ ಅನುಭವಿಕರೇ ತಿಳುಕೊಳ್ಳುವರು. ನೀನೂ ಚಾಣಾಕ್ಷಳೇ ಇರುವಿ. ಸ್ವಲ್ಪ ಮನಗೊಟ್ಟು ಪರೀಕ್ಷಿಸಿ ನೋಡು ಅಂದರೆ ತಿಳಿಯುವದು."

ಈ ಸಮಯದಲ್ಲಿ ತಾನು ಹೆಚ್ಚಿಗೆ ಮಾತಾಡಿದ್ದರಿಂದ ತನ್ನ ತಂದೆಗೆ ಸಿಟ್ಟು ಬಂತೆಂದು ಕಂಡು ಇಂದಿರೆಯು ಸುಮ್ಮನಾದಳು. ತನ್ನ ತಂದೆಯು ಈ ಪರಿಯಾಗಿ ಮೇಲು ಕಟ್ಟುತ್ತಿದ್ದ ಶ್ರೀಕಂಠನು, ಅದೇ ತಂದೆಯು ಹೊರಗಿಂದ ಬರಲು ಕಾಲು ಚಾಚಿದ್ದನ್ನು ತೆಗಿಯದೆ ಶಾತ್ಯದಿಂದ ತನ್ನಕ್ಕಿಂತಲೂ ಹೀನಸ್ಥಿತಿಯಲ್ಲಿರುವವರನ್ನು ಮಾತಾಡಿಸಿದಂತೆ ಮಾತಾಡಿಸುವನು. ಇಂಥ ಉದ್ದಾಮವೃತ್ತಿಯವನಿಗೆ ನನ್ನನ್ನು ಕೊಡುವ ವಿಚಾರವನ್ನು ತಂದೆಗಳು ದೊಡ್ಡವರ ಸಂಬಂಧ ಮಾಡುವ ಹವ್ಯಾಸಕ್ಕಾಗಿಯೇ ಮಾಡುತ್ತಿರುವರಾದೀತು. ಇಷ್ಟು ಕಷ್ಟಪಟ್ಟು ಇವರು ಮಿತಿಮೀರಿ ಹಣಗಳಿಸಿದ್ದು ತಾವು ಕೇವಲ ಮನೆತನಸ್ಥರ ಇಚ್ಛಾನುವರ್ತಿಯಾಗಲಿಕ್ಕೆಯೇ ಇರುವದೇನು? 'ಯಸ್ಯಾಸ್ತಿ ವಿತ್ತಂ ಸ ನರಃ ಕುಲೀನಃ' ಎಂದು ಕವಿಯು ನಿಂದಾಪರವಾಗಿ ನುಡಿದಿದ್ದರೂ ಅರ್ಥದಲ್ಲಿ ವ್ಯತ್ಯಾಸವಿಲ್ಲ. ಲೋಕೋಪಕಾರಕ್ಕಾಗಿಯೂ ಬಡಜನರಿಗೆ ಸಹಾಯ ಮಾಡುವದರಲ್ಲಿಯೂ ಧನವಂತರು ತಮ್ಮ ಧನರಾಶಿಗಳನ್ನು ವೆಚ್ಚ ಮಾಡಿದಲ್ಲಿ ಲೋಕವೇ ಇವರನ್ನು ಹೊಗಳುವದು. ಈ ಗರ್ವಿಷ್ಠರಾದ ಜಹಾಗೀರದಾರರಿಗಂಜಿ ನಡೆದರೆ ಮಾತ್ರ ಇವರಿಗೆ ಹೀನತೆ ಬರುವದು ಕಟ್ಟಿದ್ದ ಮಾತೇ. ಈ ಮಾತು ತನ್ನ ತಂದೆಗೆ ತಿಳಿಯಲೊಲ್ಲದೆಂದು ಇಂದಿರೆಯು

ತನ್ನ ಮನದಲ್ಲಿ ವ್ಯಸನಪಟ್ಟಳು.

"ರಮಾಕಾಂತರು ಕೂಡಾ ಹಣಗಳಿಸುವ ಹವಣಿಕೆಗೆ ಬಿದ್ದು ಸೊರಗಿ ಕಡ್ಡಿಯಾಗಿರುವರು. ನಮ್ಮ ತಂದೆಗಳಂತೆಯೇ ಇವರೂ ಹೀನವಿಚಾರಗಳಲ್ಲಿ ಬೀಳಬಾರದೆಂದು ಇಂದಿರೆಯು ಬೇಡಿಕೊಂಡಳು. ಸ್ತ್ರೀಸ್ವಾತಂತ್ರ್ಯಕ್ಕಾಗಿ ಲಜ್ಜೆ ತೆರೆದು ಸೊಕ್ಕಿನ ಪಾತಾಡುತ್ತ ತಿರುಗುವ ಆ ವಿಧವೆಯು ಪ್ರಾಪ್ತಿ ಮಾಡಿಕೊಳ್ಳುವದಕ್ಕೆ ಹೀಗೆ ಅಶ್ರಾಂತ ಶ್ರಮಪಟ್ಟು ರಮಾಕಾಂತರು ಹಣಗಳಿಸುತ್ತಿರುವರಾದೀತೆ ?" ಎಂದು ಯೋಚಿಸಿ ಇಂದಿರೆಯು ನಿಟ್ಟುಸುರುಗೈದು ಮೇಜಿನ ಮೇಲಿದ್ದ ವರ್ತಮಾನ ಪತ್ರವನ್ನು ತಕ್ಕೊಂಡು ಓದುತ್ತ ಕುಳಿತ ಹಾಗೆ ಮಾಡಿದಳು. ಜಯರಾಯನೂ ತನ್ನ ಕೆಲಸಕ್ಕೆ ಹೊರಟುಹೋದಳು.

ಇಂದಿರೆಯು ಉಲ್ಲಾಸವೃತ್ತಿಯುವಳಾದರೂ ಮಹತ್ವಾಕಾಂಕ್ಷೆಯುಳ್ಳವಳೆಂದು ಜಯರಾಯನು ತಿಳಿದಿದ್ದನು. ಆದರೆ ಈಗಲೇ ನಡೆದ ಸಂವಾದದಿಂದ ತನ್ನ ತಿಳುವಳಿಕೆ ತಪ್ಪಾದದ್ದೆಂದು ಜಯರಾಯನಿಗೆ ಸಂಶಯ ಬಂದಿತು. ಅದಕ್ಕಾಗಿ ಅವನು ಸಮಯದೊರೆತಾಗ್ಯೆ ಹಣದ ಮಹತ್ವವನ್ನು, ದೊಡ್ಡಮನೆತನದವರಿಗೆ ಜಗತ್ತಿನಲ್ಲಿ ಸಿಕ್ಕುವ ಮರ್ಯಾದೆಯನ್ನೂ, ಮಹತ್ವಾಕಾಂಕ್ಷೆಗಳ ಯೋಗ್ಯತೆಯನ್ನು ಅತಿಶಯೋಕ್ತ ಮಾಡಿ ಇಂದಿರೆಯ ಮುಂದೆ ಹೇಳಲಾರಂಭಿಸಿದನು. 'ಇದನ್ನು ಕೇಳಿಯೂ ತನ್ನ ತಂದೆಯು ದೊಡ್ಡವರ ದುರ್ಗುಣಗಳನ್ನು ಒಪ್ಪಿಟ್ಟುಕೊಂಬುವದನ್ನು ನೋಡಿಯೂ ಅವನ ಮಾತಿನಲ್ಲಿ ವಿಶ್ವಾಸ ಇಡಕೂಡದೆಂದು ಇಂದಿರೆಯ ಅಭಿಪ್ರಾಯವಾಯಿತು. ಜಯರಾಯನು 'ಭಾವೀ ತೋಡ ಹೋಗಲು ಬೇತಾಳ ಹೊರಟತು.' ಸರದಾರರರಂದರೆ ರಾಜಕೀಯ ದೃಷ್ಟಿಯಿಂದ ಸಂಸ್ಥಾನದ ಆಧಾರ ಸ್ತಂಭಗಳಹುದು. ಆದರೆ ಅವರಲ್ಲಿ ದುರ್ಗುಣಗಳಿದ್ದರೆ ಅವರನ್ನಾಶ್ರಯಿಸದೆ, ಹುಳತ ಕಂಬವನ್ನು ಕಿತ್ತಿಹಾಕುವದೇ ಜಾಣತನವೆಂದು ಇಂದಿರೆಯ ಮತವಿರುವದು. ಅದಕ್ಕಾಗಿಯೇ ಅವಳ ಅಭಿಪ್ರಾಯವು ಶ್ರೀಕಂಠನ ವಿರುದ್ಧವಿತ್ತು.

"ತನ್ನ ತಂದೆಯು ಇಂಥ ಹೀನಗುಣದವರಾದ ಜಹಾಗೀರದಾರರ ನೆರಳಿಗೆ ಹೋಗುವದು ಬಿಟ್ಟು, ಶೇಷಾದ್ರಿ ಅಯ್ಯರ್, ಕೃಷ್ಣಮೂರ್ತಿರಾವ, ತಂಬೂ ಚೆಟ್ಟಿ, ಪಂಡಿತ ಗೋಪಾಲಾಚಾರ್ಯ ಮುಂತಾದವರೊಡನೆ ರಾಜಕೀಯ, ಧಾರ್ಮಿಕ, ಸಾಮಾಜಿಕ, ನೈತಿಕ ವಿಷಯಗಳನ್ನು ಪ್ರತಿಪಾದಿಸುತ್ತ ತನ್ನ ಅಪಾರ ಸಂಪತ್ತಿನಿಂದ ಪಾಠಶಾಲಾ ಛತ್ರವನ್ನು ಕಟ್ಟಿಸುತ್ತ ನಾಲ್ಕು ಜನರಲ್ಲಿ ಧನ್ಯವಾದವನ್ನು ಹೊಂದಿದ್ದರೆ ತನಗೆಷ್ಟು ಆನಂದವೂ ಅಭಿಮಾನವೂ ಉಂಟಾಗು

ತ್ತಿತ್ತು!" ಎಂದು ಯೋಚಿಸುವಳು. ಆದರೆ ನಿಜವಾದ ಸ್ಥಿತಿಯು ಬೇರೆ ಇತ್ತು. ಅವಳ ತಂದೇ ಸ್ನೇಹಿತರು ಮಿಲಿತರಾದರೆ ಅವಳೇ ಧಾರಣೆ ಹೇಗಿರುವದು? ಸರಕಾರಿ ನೋಟುಗಳ ಬೆಲೆ ತೊಂಬತ್ತೆಂಟಾಯಿತು, ಜುಲಾಯಿ ತಿಂಗಳಲ್ಲಿ ಮಾದಕ ಪದಾರ್ಥಗಳ ಮುಕ್ತಿಯಾಗುವದು. ಅರಣೀ ಕೃಷ್ಣರಾಯ ಬಹದ್ದುರರಲ್ಲಿ ನಿನ್ನೆ ದಿನ ಗೌಹರಜಹಾನಳ ಗಾಯನವಾಯಿತು. ಇವೇ ಹೊರತಾಗಿ ದೊಡ್ಡ ದೊಡ್ಡ ವಿಚಾರಗಳ ವಾರ್ತೆಯೇ ಇದ್ದಿಲ್ಲ. ದೇವಯಾನಿಯು ಚಿಕ್ಕಮನೆಯಲ್ಲಿ ಆಗುವಷ್ಟು ಆನಂದವು ಇಂದಿರೆಗೆ ಧನದಿಂದ ತುಂಬಿ ತುಳುಕುವ ತನ್ನ ತಂದೆಯ ಮನೆಯಲ್ಲಿ ಆಗುತ್ತಿದ್ದಿಲ್ಲ. ಇಂದಿರೆಯ ಪರಿಚಿತರಲ್ಲಿ ಬುದ್ಧಿವಂತನೂ, ವಿನೋದಿಯೂ, ಸದ್ಗುಣಿಯೂ ಆಗಿರುವವನೆಂದರೆ ರಮಾಕಾಂತನೊಬ್ಬನೇ. ಅವನ ಸಹವಾಸದಲ್ಲಿದ್ದಾಗ್ಯೆ ಒಂದೆರಡುಗಳಿಗೆ ಇವಳು ಸಂತೋಷದಿಂದ ಕಳೆಯುತ್ತಿದ್ದಳು. ಆದರೆ ಅವನು ಕೂಡಾ ಇತ್ತಿತ್ತ ಮನೆಗೆ ಬರದಂತಾದನು. "ತನ್ನ ತಂದೆಯು ಹೇಳಿದಂತೆ ಕಮಲೆಯ ಪ್ರೇಮಪಾಶದಲ್ಲಿ ಸಿಕ್ಕು ರಮಾಕಾಂತನು ಬರುವದನ್ನು ಕಡಿಮೆ ಮಾಡಿರುವನೇನು? ಆ ಸದ್ಗುಣಭಾಂಡಾರವನ್ನು ಅಯೋಗ್ಯಳಾದೊಬ್ಬ ವಿಧವೆಯು ಸುಲುಕೊಂಡು ಹೋಗುವಳೇ?" ಎಂದು ಇಂದಿರೆಯು ವ್ಯಸನ ಪಟ್ಟಳು. ರಮಾಕಾಂತನು ತನ್ನ ಮನಸ್ಸಿಗೆ ಬಂದ ಸ್ತ್ರೀಯಳ ಪ್ರಾಣಿಗ್ರಹಣ ಮಾಡಲೊಲ್ಲನೇಕೆ; ಕೇವಲ ಸ್ನೇಹಿತನಂತಾವರೂ ನಮ್ಮ ಕೂಡ ಮನೋರಂಜಕವಾದ ನಾಲ್ಕು ಮಾತುಗಳನ್ನಾಡಿ ಯಾರಾದರೂ ಹೋದರೆ ಸಾಕು. ಇಷ್ಟಾದರೂ ಘಟಿಸುವದೋ ಇಲ್ಲವೋ ಎಂದು ಇಂದಿರೆಯು ಆಗಾಗ್ಯೆ ಯೋಚಿಸುತ್ತಿದ್ದಳು. ಪದಾರ್ಥಗಳ ನಿಜವಾದ ಬೆಲೆಯು ಅವುಗಳನ್ನು ನಾವು ಕಳಕೊಂಡ ಮೇಲೆಯೇ ತಿಳಿಯುತ್ತದೆ. ರಮಾಕಾಂತನು ಕಮಲೆಯ ವಶನಾಗಿರುವದರಿಂದ ಅವನು ತನ್ನ ಮನೆಗೆ ಬರುವದು ಬಿಟ್ಟರೆ ತಾನಾರ ಸ್ನೇಹದಿಂದ ವಿನೋದವನ್ನೂ ಜ್ಞಾನವನ್ನೂ ಹೊಂದಬೇಕೆಂದು ದೊಡ್ಡ ಯೋಚನೆಯಲ್ಲಿ ಬಿದ್ದವಳಂತೆ ಇಂದಿರೆಯ ಸ್ಥಿತಿಯಾಗಿತ್ತು. ಕಮಲೆಯು ನಿಜವಾಗಿ ಎಂಥ ಸ್ವಭಾವದವಳಿರುವಳು; ರಮಾಕಾಂತನ ಹೆಂಡತಿಯಾದ ಮೇಲೆ ಅವಳು ಸುಧಾರಿಸುವಳೇನು? ಇವಳ ಸ್ನೇಹವನ್ನು ತಾನು ಮಾಡಬಹುದೋ ಮುಂತಾದ ವಿಚಾರಗಳೂ ಅವಳ ಮನಸ್ಸಿನಲ್ಲಿ ಬರುತ್ತಿದ್ದವು.

ಆ ದಿವಸ ಸಾಯಂಕಾಲದಲ್ಲಿ ವಸಂತವಿಹಾರವೆಂಬ ತೋಟದಲ್ಲಿ ಜಯರಾಯನ ಸ್ನೇಹಿತನೊಬ್ಬನು ಮೇಜವಾನೀ ಮಾಡಿಸಿದ್ದನು. ಅಲ್ಲಿ ಜಯರಾವ, ಶ್ರೀಕಂಠ ಬಹದ್ದುರ, ಬಾಷ್ಕಳಪಂತ ಡಾಕ್ಟರ, ಇಂದಿರಾ ಮುಂತಾದ ಪರಿಚಿತಸ್ಥ

ರೆಲ್ಲ ಒಟ್ಟುಗೂಡಿದ್ದರು.

ಭೋಜನಕ್ಕೆ ಇನ್ನೂ ಸಮಯವಿತ್ತು, ಬೇರೆ ಬೇರೆ ಜನರು ಬೇರೆ ಬೇರೆ ರೀತಿಯಿಂದ ವಿನೋಧಗೈಯುತ್ತಿದ್ದರು. ಕೆಲವರು ಚತುರಂಗ, ಕೆಲವರು ಗಂಜೀತುವು, ಕೆಲವರು ಬೆಝಿಕ್ ಮುಂತಾದ ಆಟಗಳಲ್ಲಿ ತೊಡಗಿದರು. ವೃದ್ಧರು ಮುಂದೆ ಕೂಡುವ ಪ್ರತಿನಿಧಿಗಳ ಸಭೆಯಲ್ಲಿ ಯಾವ ಯಾವ ವಿಷಯಗಳನ್ನು ತೆಗೆಯಬೇಕೆಂದು ಅಲೆದಾಡುತ್ತಿದ್ದರು. ಇಂದಿರೆಯು ತಾನೊಬ್ಬಳೇ ಒಂದು ಲತಾ ಮಂಡಪದಲ್ಲಿದ್ದ ಆಸನದಲ್ಲಿ ಕುಳಿತು ಏನೋ ವಿಚಾರ ನಡಿಸಿದ್ದಳು. ಶ್ರೀಕಂತಬಹದ್ದರನು ಇಂದಿರೆಯೊಬ್ಬಳೇ ಕುಳಿತದ್ದು ಕಂಡು ತಾನೂ ಆವಳ ಸಮೀಪದಲ್ಲಿ ಹೋಗಿ,

"ಇಂದಿರಾಬಾಯಿ ನೀವೊಬ್ಬರೇ ಕುಳಿತಿರುವಿರಿ ? ಏನೋ ವಿಚಾರ ನಡೆದಂತೆ ಕಾಣುತ್ತದೆ" ಎಂದು ಕೇಳಿದನು.

"ಶ್ರೀಕಂತ ಬಹದ್ದರರೇ, ನಿಮಗೆಲ್ಲರ ಪರಿಚಯವಿದೆಯೆಂದು ಹೇಳುತ್ತೀರಲ್ಲ ! ಮಂಗಳೂರ ಕಮಲಾಬಾಯಿಯ ಗುರುತು ನಿಮಗುಂಟೇನು ?"

"ಗುರುತು ಇದೆ. ಅವಳ ಕೂಡ ಎಷ್ಟೋ ಬಾರಿ ವಾದ ವಿವಾದ ಮಾಡಿದ್ದೇನೆ." ಎಂದು ಶ್ರೀಕಂತನಂದನು.

"ಅವಳು ಎಂಥವಳಿರುವಳು ಬಲ್ಲಿರೇನು ?"

"ಒಂದು ತಮಾಸೆಯ ಹೆಣ್ಣು ಮಗಳಿದ್ದಾಳೆ. ಮೊಸಳೆಯ ಆಟ ನೀರಲ್ಲೆಂಬಂತೆ ಅವಳ ಗುಣಗಳನ್ನು ಕಂಡುಕೊಳ್ಳಬೇಕಾದರೆ ನಿಮ್ಮ ಪಂಡಿತೆಯ. ಉಪಾಸನಾ ಸಮಾಜಕ್ಕೆ ಹೋಗಿ ನೋಡಿಕೊಳ್ಳಬೇಕು." ಎಂದು ಶ್ರೀಕಂತನೆಂದ

"ರೂಪದಿಂದ ಹೇಗಿರುವಳು ? ಅವಳ ವಯಸ್ಸು ಎಷ್ಟಾದೀತು ? ಅವಳು ಕುಶಲಬುದ್ಧಿಯುವಳಿರುವಳೋ ಹೇಗೆ ? ಅವಳ ಸಮಾಚಾರ ಸ್ವಲ್ಪ ಹೇಳಿರಿ."

"ಕಣ್ಣು ಮೂಗಿಲೆ ನೆಟ್ಟಗಿರುವಳು. ಚಿಕ್ಕವಳೂ ಇರುವಳು. ಆದರೆ 'ಭಲರೇ ಜೆಟ್ಟೀ ಎಂದರೆ ಕೆಮ್ಮಣ್ಣು ಮುಕ್ಕಿದನೆ'ಂಬಂತೆ ಕಮಲಾಬಾಯಿಯು ಮಾತಾಡುವದರಲ್ಲಿ ದಿಟ್ಟಳೆಂದರೆ ಸಾಕು ಬಾಯಿಗೆ ಬಂದ ಹಾಗೆ ಒದರಲಿಕ್ಕಾರಂಭಿಸುವಳು."

"ವಿಷಯಕ್ಕನುಸರಿಸಿ ಮಾತಾಡುವಳೇನು ?"

"ವಿಷಯಕ್ಕನುಸರಿಸಿ ಮಾತಾಡುವವರು ರಗಳೇ ಹಚ್ಚುವದುಂಟೇ ? ಪಾದ್ರಿಗಳ ಕೈಕೆಳಗೆ ಏತದ್ದೇಶಿಯರಾದ ಕಿರಸ್ತಾನ ಬೋಧಕರು ಹುಚ್ಚುವ

ರಗಳೆಯು ಈ ಕಮಲಾಬಾಯಿಯ ರಗಳೆಯ ಪಾಸಂಗಕ್ಕೆ ಬಾರದು. ಇದಲ್ಲದೆ ಮಾತಾಡುವಾಗ್ಗೆ ಎದೆಯುಬ್ಬಿಸುವದೇನು ? ವ್ಯಕ್ತಿಗಳನ್ನು ಬಯ್ಯೊಳ್ಳುವದೇನು ! ಆಗಾಗ್ಯೆ ಮೇಜಿನ ಮೇಲೆ ಕಯ್ಯಪ್ಪಳಿಸುವದೇನು ! ಕೇಳುವವರ ಮನಸ್ಸಿನಲ್ಲಿ ತಿರಸ್ಕಾರ ಬರುತ್ತದೆ."

" ಅವಳು ಮಾತಾಡುವ ಪದ್ಧತಿಯಲ್ಲಿದ್ದ ದೋಷಗಳನ್ನು ಅವಳಿಗೆಂದಾದರೂ ನೀವು ತೋರಿಸಿ ಕೊಟ್ಟಿರುವಿರೇನು ? ಎಂದು ಇಂದಿರೆಯು ಕೇಳಿದಳು.

" ಎಂದೂ ಇಲ್ಲ. ಹಾಗೆ ದೋಷಗಳನ್ನೆಣಿಸುವದರಿಂದ ಅವಳಿಗೆ ಕೋಪ ಬರಲಿಕ್ಕಿಲ್ಲವೇ ? "

" ಹಾಗಾದರೆ ನೀವು ಅವಳ ಭಾಷಣವು ಸರಸಾಯಿತೆಂದು ಕಮಲೆಗೆ ಹೇಳಿ ಅಭಿನಂದನ ಮಾಡಿ ಬರುತ್ತೀರಿ ?" ಎಂದು ಇಂದಿರೆಯು ವಕೀಲರು ಸಾಕ್ಷಿಗಳನ್ನು ಕೇಳುವಂತೆ ಕೇಳಿದಳು.

" ಮತ್ತೇನು ಮಾಡತಕ್ಕದ್ದು ?" ಎಂದು ಶ್ರೀಕಂಠನು ತೊಂದರೆಯಲ್ಲಿ ಬಿದ್ದವನಂತೆ ಕೇಳಿದನು.

" ನಾನು ಅವಳನ್ನೊಮ್ಮೆ ನೋಡಬೇಕಾಗಿದೆ."

" ಅದಕ್ಕೇನು ತಗಲಬೇಕಾಗಿದೆ ? ಆದರೆ ಜಯರಾಯರು ನಿಮಗೆ ಹೀಗೇ ಮಾಡಲಪ್ಪಣೆ ಕೊಡುವರೇನು ?"

" ಉಪನ್ಯಾಸ ಮಾಡುವ ಸ್ತ್ರೀಯರೆಂದರೆ ಅಂಟುಬೇನೆಯಿಂದ ಪೀಡಿತರಾದವರಂತೆ ಇರುವರೇನು ? ಅವರನ್ನು ನೋಡಲಿಕ್ಕೆ ನಮ್ಮ ತಂದೆಗಳೊಪ್ಪಿಗೆ ಯಾಕೆ ಬೇಕು ?" ಎಂದು ಇಂದಿರೆಯು ಗಂಭೀರಮುದ್ರೆಯನ್ನು ತಾಳಿ ಕೇಳಿದಳು.

" ನೀವು ಕೋಪಿಸಿಕೊಂಡಂತೆ ಕಾಣುತ್ತದೆ. ಈ ದಿವಸ ಕಮಲೆಯ ಮೇಲೆ ನಿಮಗೆ ಒಳ್ಳೇ ಲಕ್ಷ್ಯ ತಕ್ಕೊಂಡಿದೆ."

ಇಂದಿರೆಯು ಏನೂ ಮಾತಾಡದೆ ಸುಮ್ಮನೆ ಕುಳಿತುಕೊಂಡಳು, ಶ್ರೀಕಂಠನೂ ಹೊರಟುಹೋದನು. ಇಂದಿರೆಯು ಮತ್ತೆ ವಿಚಾರದಲ್ಲಿ ಕುಳಿತಳು.

" ಈ ವಿಧವೆಯು ನಿಜವಾಗಿ ಬುದ್ಧಿವಂತೆಯಾಗಿರಬಹುದು. ಯೋಗ್ಯರಾದ ಮಾರ್ಗದರ್ಶಕರಿಲ್ಲದ ಮೂಲಕ ಅವಳು ಉಪಹಾಸಾಸ್ಪದಳಾಗಿದ್ದಾಳು. ಹೇಗೆ ಇರಲಿ ; ಅವಳು ಮನಃಪೂರ್ವಕವಾಗಿ ಏನೋ ಯತ್ನ ಮಾಡುತ್ತಾಳೆ. ನಾನೇನು ಮಾಡುತ್ತೇನೆ ? ಉಂಡು ತಿಂದು ಯಥೇಷ್ಟವಾದ ವಸ್ತ್ರಾಭರಣಗಳ ನ್ನಿಟ್ಟುಕೊಂಡು ಸುಮ್ಮನೆ ಕಾಲ ಕಳೆಯುತ್ತೇನಲ್ಲ ! ರಮಾಕಾಂತರು ಕಮಲೆಯ

ಪತಿಯಾದರೆ ಅವಶ್ಯವಾಗಿ ಅವಳು ಸನ್ಮಾರ್ಗಕ್ಕೆ ಹತ್ತುವಳು. ಆದೇ ರಮಾಕಾಂತರು ನನ್ನ ಪತಿಯಾದರೇನಾಗುವದು? ಬೇಡ; ಈ ವಿಚಾರವೇ ಬೇಡ" ಎಂದು ತಾನಿದ್ದ ಸ್ಥಳವನ್ನು ಬಿಟ್ಟು ಬಂಗಲೆಯಲ್ಲಿ ಹೋದಳು.

ಅನ್ಯಸ್ತ್ರೀಯರೊಡನೆ ಮಾತಾಡುವಾಗ ಶ್ರೀಕಂಠನು ಪರನಿಂದೆಯಲ್ಲಿ ತನ್ಮಯನಾಗಿರುವನು. ವಿಂಧ್ಯಾದ್ರಿ ಅಯ್ಯನ ಹೆಂಡತಿ ಹೀಗೆ. ಸುಭದ್ರಮ್ಮನು ಇಂಥವಳು. ತಹಸೀಲದಾರ ನಂಜುಂಡಯ್ಯನು ಲಂಚ ತಕ್ಕೊಳ್ಳುವನು. ಇಂಥವೇ ಶ್ರೀಕಂಠನ ಪ್ರೀತಿಯ ವಿಷಯಗಳು. ಆದರೆ ಜಯರಾಯನು ಇಂಥ ಮಾತುಗಳನ್ನು ಇಂದಿರೆಯ ಮುಂದೆ ತೆಗಿಯಬೇಡೆಂದು ಹೇಳಿದ್ದರಿಂದ ಅವಳ ಬಳಿಯಲ್ಲಿದ್ದಾಗ್ಯೆ ಅವನ ವಾಚಾಲತನಕ್ಕೆ ಹಾದೀ ಕಟ್ಟಿದಂತಾಗತ್ತು. ಇದಕ್ಕಾಗಿಯೇ ಇವನು ಇಂದಿರೆಯ ಬಳಿಯಿಂದ ಬೇಗನೆ ಎದ್ದು ಹೋದನು.

ಭೋಜನೋತ್ತರ ಶ್ರೀಕಂಠನು ಮತ್ತೆ ಇಂದಿರೆಯ ಹತ್ತರ ಬಂದು "ನಿಮಗೊಂದು ಮಾತು ಹೇಳುವದದೆ. ನಾನು ನಾಳಿನಿಂದ ಸಾರ್ವಜನಿಕ ಕೃತ್ಯಗಳಲ್ಲಿಯೇ ಮನಸ್ಸು ಹಾಕಿ ಆದಷ್ಟು ಮಟ್ಟಿಗೆ ದೇಶಸೇವೆ ಮಾಡುವದು ನಿಶ್ಚಯ ಮಾಡಿಕೊಂಡಿದ್ದೇನೆ."

"ಅಂದರೇನು ಮಾಡುವಿರಿ?"

"ಮೊದಲನೆಯ ಕೆಲಸವೆಂದರೆ ಮುನಿಸಿಪಾಲಿಟಿಯಲ್ಲಿ ಸೇರಿ ಅಧ್ಯಕ್ಷನಾಗುವೆನು; ಅರುಣಾಚಲಯ್ಯಂಗಾರರಿಗೆ ಈ ಸಾರೆ ಅಧ್ಯಕ್ಷತೆ ದೊರೆಯಲಾರದು. ನಾನೇ ಆ ಸ್ಥಾನವನ್ನಾಕ್ರಮಿಸುವೆನು."

"ಈ ಕೆಲಸಕ್ಕಾಗಿ ನಿಮಗೆ ಬಹಳ ಪ್ರಯತ್ನ ಮಾಡಬೇಕಾಗುವದಲ್ಲವೆ?" ಎಂದು ಇಂದಿರೆಯು ತುಸು ಮನಸ್ಸು ಕೊಟ್ಟು ವಿಚಾರಿಸಿದಳು.

"ಪ್ರಯತ್ನವೇಕೆ! ಹಣವೂ ಖರ್ಚಾಗುವದು. ಬರುವ ಸಭೆಯಲ್ಲಿ ಭಯಂಕರವಾದ ವಾಗ್ವಾದವಾಗುವದು. ಖುದ್ದ ದಿವಾನರು ಆ ಅಯ್ಯಂಗಾರನ ಬೆನ್ನು ಕಟ್ಟಿರುವರು. ನಮ್ಮ ಕಡೆಗೂ ಕೇಶಿರಾಜ ಅರಸರು, ಶಿವರಾಜ ಬಹದ್ದರರು ಮುಂತಾದ ದೊಡ್ಡ ದೊಡ್ಡವರ ಬಲವಿರುವದು."

ಇಂದಿರೆಯು ಈ ಮಾತು ಮನಸ್ಸುಗೊಟ್ಟು ಕೇಳಿದ್ದರಿಂದ ಶ್ರೀಕಂಠ ಬಹದ್ದರನು ತನ್ನ ಪರಾಕ್ರಮವನ್ನು ಚನ್ನಾಗಿ ಬೆಳಿಸಿ ಹೇಳಲಾರಂಭಿಸಿದನು. ಕಡೆಗೆ ಅವನು "ಇಂದಿರಾಬಾಯಿ, ಈ ಮಾತು ನಿಮ್ಮ ಮನಸ್ಸಿಗೆ ಬರುವದಷ್ಟೇ?" ಎಂದು ಕೇಳಿ ಇಂದಿರೆಯ ದಿವ್ಯವಾದ ಮುಖ ನೋಡಹತ್ತಿದನು.

" ನಿಮ್ಮ ಪ್ರಯತ್ನವಲ್ಲಿ ನಿಮಗೆ ಜಯ ಸಿಕ್ಕಲೆಂದು ಆಶಿಸುತ್ತೇನೆ."

" ನೀವು ನನಗೊಮ್ಮೆ ರಾಜಕೀಯ ವಿಷಯಗಳಲ್ಲಿ ಮನಸ್ಸು ಹಾಕ ಹೇಳಿದ್ದಿರಿ. ಅದೇ ಮೇರೆಗೆ ನಾನೀಗ ಕೆಲಸ ನಡಿಸಿರುವೆನು."

" ಹೀಗೆ ನಾನೆಂದು ಹೇಳಿದೆನು ? ರಾಜಕೀಯ ವಿಷಯುಗಳಲ್ಲಿ ನನಗೇನು ತಿಳಿಯುತ್ತದೆ ?" ಎಂದು ಇಂದಿರೆಯು ನುಡಿದಳು.

" ಹೇಗೇ ಇರಲಿ. ನಿಮ್ಮ ಬಾಯಿಂದ ' ಶ್ರೀಕಂಠ ಬಹದ್ದರನಲ್ಲಿ ಸತ್ವವಿದೆ ' ಎಂದೆನಿಸಿಕೊಂಡರೆ ನಾನು ಧನ್ಯನಾದೆನೆಂದು ತಿಳಿಯುತ್ತೇನೆ."

" ಶ್ರೀಕಂಠ ಬಹದ್ದರರೆ, ಹೀಗೆ ನನ್ನಂಥ ಅಪ್ರಬುದ್ಧೆಯ ಬಾಯಿಂದೆನಿಸಿಕೊಳ್ಳುವದಕ್ಕಿಂತಲೂ ನಿಮ್ಮ ಮನಸ್ಸಿಗೇ ನೀವು ಯೋಗ್ಯತೆಯುವರೆಂದು ಕಂಡರೆ ಸಾಕು."

" ಹೀಗಾಗಿ ಎಷ್ಟೋ ದಿವಸಗಳಾಗುತ್ತಿದ್ದವು. ಆದರೆ ನಿಮ್ಮ ತಂದೆಯೇ ನನ್ನನ್ನು ಹಾದೀ ತಪ್ಪಿಸಿ ಕೆಡಸಿದನು " ಎಂದು ಶ್ರೀಕಂಠನು ಒಳ್ಳೇ ಗರ್ವದಿಂದ ಹೇಳಿದನು.

" ನನ್ನ ತಂದೆಯುವರು ನಿಮ್ಮನ್ನು ಅಡ್ಡ ಹಾದಿಗೆ ಕೆಡವಿದರೇನು ?" ಇದನ್ನು ಕೇಳಿ ನನಗೆ ನಿಜವಾಗಿ ವಿಷಾದವಾಗಿದೆ " ಎಂದು ಇಂದಿರೆಯು ಕೋಪಿಸಿಕೊಂಡು ನುಡಿದಳು.

" ಅವರದೇನೂ ತಪ್ಪಿಲ್ಲ. ವ್ಯಾಪಾರದಲ್ಲಿ ನಾನು ಜಾಣನೆಂದು ಅವರು ನನಗೆ ಸುಳ್ಳು ಬೋಧಿಸಿದ್ದರಿಂದ ನಾನು ವ್ಯರ್ಥವಾಗಿ ವ್ಯಾಪಾರದಲ್ಲಿ ಬಿದ್ದುಕೊಂಡೆನು."

ಅಷ್ಟರಲ್ಲಿ ಜಯರಾಯನು ಇಂದಿರೆಯನ್ನು ಕರೆದದ್ದರಿಂದ ಇವರೀರ್ವರ ಸಂಭಾಷಣೆಯು ಅಲ್ಲಿಗೇ ನಿಂತಿತು.

" ಅವಳು ಅತಿ ಶ್ರೀಮಂತಳು, ನಾನು ಅತಿ ದರಿದ್ರಳು !"

ರಮಾಕಾಂತನು ಸಮಯ ದೊರೆತಾಗ್ಗೆ ಚಾಮರಾಜೇಂದ್ರ ಪುಸ್ತಕಾಲಯದಲ್ಲಿ ಹೋಗಿ ಓದುತ್ತ ಕೂಡ್ರುವನು. ಕಮಲೆಯಾದರೂ ಆ ವಾಚನಮಂದಿರಕ್ಕೆ ಬರುವ ಪರಿಪಾಠವಿಟ್ಟಿದ್ದಳು. ಇವಳು ಆಗಾಗ್ಗೆ ರಮಾಕಾಂತನನ್ನು ಮಾತಾಡಿಸುತ್ತಿದ್ದಳು, ಒಂದು ದಿವಸ ಕಮಲೆಯು ಈ ಮಂದಿರದಲ್ಲಿ ರಮಾಕಾಂತನನ್ನು ಕಂಡು ತನ್ನ ಮನೆಗೆ ಬರಬೇಕೆಂದು ಅವನಿಗೆ ಬಹಳೇ ಆಗ್ರಹಮಾಡಿದಳು. ಆದೇ

ದಿವಸ ರಮಾಕಾಂತನು ಸಂಜೆಗೆ ಕಮಲೆಯ ಮನೆಗೆ ಹೋಗಲೊಪ್ಪಿಕೊಂಡನು.

ಕಮಲೆಯ ಮನೆಯು ಬಳೇಪೇಟೆಯಲ್ಲಿ ಶ್ರೀನಿವಾಸಮಂದಿರದ ಸಮೀಪದಲ್ಲಿತ್ತು. ಚಾಮರಾಜಪೇಟೆ, ಬಸವನಗುಡಿ, ಶೇಷಾದ್ರಿಪುರ ಮುಂತಾದ ಬೆಂಗಳೂರಿನ ಪ್ರಶಸ್ತವಾದ ಶಾಖೆಗಳು ಶ್ರೀಮಂತರು ಮನೆ ಕಟ್ಟಿಕೊಂಡು ಇರಹತ್ತಿದ್ದರಿಂದ ಬಳೇಪೇಟೆಯಲ್ಲಿಯ ದೊಡ್ಡ ದೊಡ್ಡ ಮನೆಗಳು ಕೂಡಾ ಅಗ್ಗದ ಬಾಡಿಗೆಗೆ ಸಿಗಲಾರಂಭಿಸಿದವು. ಕಮಲೆಯಿದ್ದ ಮನೆ ಮಧ್ಯಮ ತರದ್ದಿದ್ದು, ಅದರಲ್ಲಿ ಅವಳೂ, ಅವಳ ತಾಯಿ ರಂಗಮ್ಮನೂ, ಒಬ್ಬ ಕೆಲಸ ಮಾಡುವ ಹುಡಿಗೆಯೂ ಇರುತ್ತಿದ್ದರು. ಮುಂದಿನ ಮಗ್ಗಲಿಗಿದ್ದ ದೊಡ್ಡ ಕೋಣೆಯಲ್ಲಿ ಕಮಲೆಯು ತನ್ನ ಕಚೇರಿ ಮಾಡಿಕೊಂಡಿದ್ದಳು. ಅಲ್ಲಿ ಒಂದು ಮೇಜು, ಎರಡು ಕುರ್ಚಿಗಳು. ಗೋಡೆಗೊಂದು ಟಾಯಿಮುಪೀಸ, ಕೆಲವು ಚಿತ್ರಗಳು ಹೀಗೆ ಸಾಮಾನುಗಳಿದ್ದವು.

ರಮಾಕಾಂತನು ಬಂದಾಗ್ಯೆ ಹೊರಮಗ್ಗಲಿಗೆ ಒಕ್ಕಲಗಿತ್ತಿ ಮಾತ್ರ ನಿಂತಿದ್ದಳು. ಅವಳು ರಮಾಕಾಂತನಿಗೆ ಕಮಲೆಯ ಕಚೇರಿಯಲ್ಲಿ ಕೂಡ್ರ ಹೇಳಿ ತಾನು ಯಜಮಾನತಿಗೆ ವರ್ತಮಾನ ತಿಳಿಸ ಹೋದಳು. ರಮಾಕಾಂತನು ಮೇಜಿನಮೇಲಿಟ್ಟ ಪುಷ್ಪಪತ್ರದ ಮೇಲೆ ‘ ಟಿಪ್ಪಣಿಗಳು ’ ಎಂಬಕ್ಷರಗಳನ್ನು ಕಂಡು ಆ ಪುಷ್ಪಪತ್ರವನ್ನು ಕಯ್ಯಲ್ಲಿ ತಕ್ಕೊಂಡು ತೆರೆದು ನೋಡಲು, ಬೆಂಗಳೂರ ಸಮಾಚಾರ, ಮೈಸೂರ ಸ್ಟಾರ್, ಪ್ರಕಾಶಕ, ಮುಂತಾದ ಪತ್ರಗಳಲ್ಲಿಯ ತನ್ನ ಭಾಷಣ ನಿಬಂಧಗಳ ಮೇಲೆ ಪ್ರಶಂಸಾತ್ಮಕವಾದ ಅಭಿಪ್ರಾಯಗಳುಳ್ಳ ಭಾಗಗಳನ್ನು ಕತ್ತರಿಸಿ ಕಮಲೆಯು ಇಟ್ಟಿದ್ದಳು. ಇವುಗಳನ್ನು ಓದುತ್ತ ರಮಾಕಾಂತನು ತುಸು ಹೊತ್ತು ಕುಳಿತ ಮೇಲೆ ಕಮಲೆಯು ವಯ್ಯಾರದಿಂದ ಇವನ ಹತ್ತಿರ ಬಂದು, “ ಅವ್ವಯ್ಯಾ ! ರಮಾಕಾಂತರಾಯರು ಬಂದಿರುವರಲ್ಲ ! ರಾಯರೇ, ಬಡವರ ಮನೆಗೆ ದಯಮಾಡಿ ಬಂದಿರಿ, ಇದೊಂದು ನಮ್ಮ ಭಾಗ್ಯವೇ ಸರಿ. ನಮ್ಮ ನಾಗಮ್ಮನೇನೋ ಹೇಳಿದಳು. ನೀವು ಬಂದಿರೆಂಬುದು ನಮಗೆ ತಿಳಿಯಲಿಲ್ಲ. ಅದೇನು ಓದುತ್ತಿರುವಿರಿ ? ನಮ್ಮ ಹುರುಳು ಹೊರಬಿತ್ತಲ್ಲ ! ನೀವು ಬರುವದು ತಿಳಿದಿದ್ದರೆ ನಾನು ಆ ಪುಷ್ಪಪತ್ರವನ್ನಲ್ಲಿಡುತ್ತೇ ಇದ್ದಿಲ್ಲ.”

“ ನಾನು ಬರುವೆನೆಂದು ನಿಮಗೆ ವಾಚನಾಲಯದಲ್ಲಿ ಹೇಳಿದೆನಲ್ಲ !”

“ ನಮ್ಮ ದೈವ ತೆರೆಯಿತೆಂದು ನೀವು ಬಂದಿರಿ. ಒಳ್ಳೇ ಸಮಯಕ್ಕೆ ಬಂದಿರಿ. ಇದೇ ನಾವು ಚಹ ತಕ್ಕೊಳ್ಳುವವರಿದ್ದೆವು. ಅವ್ವನು ನಿಮ್ಮನ್ನು ಒಳಗೆ ಕರೆಯುತ್ತಾಳೆ ಬನ್ನಿರಿ.” ಎಂದು ಕಮಲೆಯು ನಗೆಮುಖ ಕೊಟ್ಟು

ರಮಾಕಾಂತನ ಕೈಹಿಡಿದುಕೊಂಡು ಒಳಕ್ಕೆ ಕರದೊಯ್ದಳು. ಮಾರ್ಗದಲ್ಲಿ ಕಮಲೆಯು "ನೀವು ಆ ವರ್ತಮಾನಪತ್ರಗಳ ಭಾಗಗಳನ್ನೆಲ್ಲ ಓದಿದಿರೇನು?" ಎಂದು ಕೇಳಿದಳು.

"ಅವುಗಳನ್ನೋದಬಾರದಾಗಿತ್ತೇನು ? ನಾನು ಶಿರೋಲ್ಲೇಖನಗಳನ್ನು ಮಾತ್ರ ನೋಡಿದೆನು."

"ಆದರಲ್ಲೇನಿಲ್ಲ. ವರ್ತಮಾನಪತ್ರಗಳಲ್ಲಿ ಮುದ್ರಿಸಿದ ಲೇಖನಗಳನ್ನು ಓದಬಾರದೆಂದರೆ ಹೇಗೆ ನಡೆದೀತು? ನಾನವುಗಳನ್ನು ಬೇಕಾಗಿ ಮೋಜಿನ ಮೇಲಿಟ್ಟು ಪ್ರಶಂಸೆ ಪಡೆಯಬೇಕೆಂದು ಮಾಡಿರುವೆನೆಂಬ ಆಕ್ಷೇಪ ಬಂದೀತೆಂದು ಶಂಕೆ ಪಡುತ್ತೇನೆ." ಎಂದು ರಮಾಕಾಂತನ ಸುಂದರವಾದ ಮುಖವನ್ನು ಕಣ್ಣು ತುಂಬ ನೋಡುತ್ತ ಕಮಲೆಯು ನುಡಿದಳು.

"ಶ್ರಮದ ಸಾರ್ಥಕ್ಯವಾದರೆ ಸಂತೋಷವು ಎಲ್ಲರಿಗೂ ಆಗುವದುಂಟು" ಎಂದು ರಮಾಕಾಂತನಂದನು.

"ಪ್ರಕಾಶಕದಲ್ಲಿಯ ಅಭಿಪ್ರಾಯ ಓದುವಂತಿದೆ. ಓದಿರೆಂದು ನಾನು ನಿಮಗೆ ಹೇಳಿದರೆ ನೀವು ನನ್ನನ್ನು ಸ್ತುತಿಪ್ರಿಯಳೆಂದು ಭಾವಿಸಲಿಕ್ಕಿಲ್ಲವಷ್ಟೇ ? ಆ ಅಭಿಪ್ರಾಯವನ್ನೋದಿ ನನ್ನ ಕಣ್ಣುಗಳು ಆನಂದಾಶ್ರುಗಳಿಂದ ತುಂಬಿದವು. ಕಟ್ಟ ಕಡೆಗೆ ಪುರುಷರು ನಮ್ಮ ಲೇಖಗಳಿಗೆ ಮಾನಕೊಡಬೇಕಾಯಿತಲ್ಲ! ಇದೇನು ಸಾಮಾನ್ಯವಾದ ಮಾತೇ ?" ಎಂದು ಕಮಲೆಯು ಅಭಿಮಾನದಿಂದ ನುಡಿದಳು.

"ನಿಮ್ಮ ನಿಬಂಧವನ್ನೂ ನಾನು ನೋಡಿಲ್ಲ. ಅದರ ಮೇಲಿನ ಅಭಿಪ್ರಾಯವನ್ನೂ ನಾನು ನೋಡಿಲ್ಲ. ಇದರಲ್ಲಿ ನಾನೇನು ಹೇಳಬೇಕು ?"

"ಕಾಂಗ್ರೆಸದ ವಿರುದ್ಧ ಸರ್ ಸಯ್ಯದರೂ ಕೆಲವು ಜನ ಮುಸಲ್ಮಾನರೂ ಇದ್ದಂತೆ, ಸ್ತ್ರೀಸ್ವಾತಂತ್ರ್ಯದ ವಿಘಾತಕರಾದವರು ಕೆಲವು ಜನ ಸ್ತ್ರೀಯರೇ ಇರುವರು. ಸ್ತ್ರೀಯರ ಸ್ವಾತಂತ್ರ್ಯದ ವಿಚಾರವು ಪುರುಷರ ಮನಸ್ಸಿಗೆ ಬರಲಿಲ್ಲವೆಂದರೆ ಅವರು ಈ ಹೆಣ್ಣು ಸರ್ ಸಯ್ಯದರನ್ನು ತಮ್ಮ ಪಕ್ಷದಲ್ಲಿ ಕಟ್ಟಿಕೊಳ್ಳುವರು. ಆ ಆತ್ಮಘಾತಿನಿಯರು ತಮ್ಮ ಹಿತದ ನಾಶವಾದರೂ ಚಿಂತಿಲ್ಲ. ನಮ್ಮಂಥ ಅಧ್ವರ್ಯುಗಳ ಸಂಘವನ್ನು ಮುರಿದು ಹಾಕಬೇಕೆಂದೇ ಪುರುಷರಿಗೆ ಬೇಕಾಗಿದ್ದ ಅಭಿಪ್ರಾಯಗಳನ್ನು ಕೊಟ್ಟು ತಮ್ಮ ಮೆರವಣಿಗೆ ಮಾಡಿಕೊಳ್ಳುವರು. ಅಂಥ ಸ್ತ್ರೀಯರು ಬೋಧಿಸಿಟ್ಟ ಮೇರೆಗೆ ನೀವು ಹೀಗೆ ಮಾತಾಡುವದಿಲ್ಲವಲ್ಲ!"

ಇವರು ಹೀಗೆ ಮಾತಾಡುತ್ತ ಕಮಲೆಯ ತಾಯಿಯು ಕುಳಿತಿದ್ದ ಸ್ಥಳಕ್ಕೆ

ಬಂದರು.

"ಇಕೋ ನೋಡಿರಿ ಇವರೇ ನನ್ನ ಮಾತೃಶ್ರೀಯುವರು" ಎಂದು ಕಮಲೆಯು ತನ್ನ ತಾಯಿಯನ್ನು ತೋರಿಸಿದಳು.

ಕಮಲೆಯ ತಾಯಿಯು ಕುಳಿತ ಸ್ಥಳದಲ್ಲಿ ಹಳೆದಾದ ರತ್ನಗಂಬಳಿ ಹಾಸಿತ್ತು. ಹೊಸದಿದ್ದಾಗ್ಯೆ ಇದಕ್ಕೆ ಬೆಲೆ ಬಿದ್ದಿರಲಿಕ್ಕೆ ಸಾಕು. ಗೋಡೆಗೆ ಎರಡು ರೇಶ್ಮೆಯ ಹರಕು ದಿಂಬಗಳಿದ್ದವು. ಗೋಡೇ ಮೇಲೆ ಸದ್ಭಾವಾಳಿಕೆಯ ನಿಲವುಗನ್ನಡಿಯಿತ್ತು. ಅದರ ಮಗ್ಗಲಲ್ಲಿ ಹಿರೇ ಕೃಷ್ಣರಾಜ ಒಡೆಯರ ಚಿತ್ರವೂ ಕಮಲೆಯ ಮುತ್ತಾತನ ಚಿತ್ರವೂ ಇದ್ದವು. ಗೂಟದ ಮೇಲೊಂದು ಕಲಾಬತ್ತಿನ ಕಿಗ್ಗಳಾದ ಶಾಲು ಇಟ್ಟಿತ್ತು. ಇದರ ಮೇಲಿಂದ ಕಮಲೆಯ ತಂದೆಯಜ್ಜರು ಶ್ರೀಮಂತರಿದ್ದರೆಂದು ಊಹಿಸಬಹುದಾಗಿತ್ತು. ರಂಗಮ್ಮನು (ಕಮಲೆಯ ತಾಯಿ) ಚಿಕ್ಕವಳಿದ್ದಾಗ್ಯೆ ರೂಪವತಿಯೂ, ವಿಲಾಸಿನಿಯೂ ಇದ್ದಳೆಂದು ಅವಳನ್ನು ಕಂಡ ಕೂಡ್ಲೆ ಹೇಳಬಹುದು. ರಂಗಮ್ಮನೀಗ ಜನರಲ್ಲಿ ಬರುವದು ಕಡಿಮೆ ಮಾಡಿದ್ದರಿಂದಲೂ ಚಿಂತೆಯಿಂದಲೂ ಕೃಶಳಾಗಿದ್ದು ಅವಳ ಮೋರೆಯ ಮೇಲಿನ ಲಕ್ಷಣವೇ ಹೋಗಿತ್ತು.

"ಬನ್ನಿರಿ ರಾಯರೇ, ಪಂಡಿತಾ ರಾಧಾಬಾಯವರು ತಮ್ಮ ಸ್ತುತಿ ಬಹಳವಾಗಿ ಮಾಡುತ್ತಾರೆ. ಬಡವಿಯ ಮನೆಗೆ ಬಂದಿರಿ ; ದೊಡ್ಡ ಉಪಕಾರವಾಯಿತು. ಕಮಲಾ, ರಾಯರು ಚಹ ತಕ್ಕೊಂಡಿರಲಿಕ್ಕಿಲ್ಲ. ನೋಡಮ್ಮಾ ಬೇಗನೆ ಚಹ ಸಿದ್ಧ ಮಾಡು" ಎಂದು ರಂಗಮ್ಮನು ಮೆಲ್ಲಗೆ ಮಾತಾಡಿದಳು.

ಕಮಲೆಯು, ಒಳ್ಳೇ ಉತ್ಸಾಹದಿಂದಲೂ ಸೊಬಗಿನಿಂದಲೂ ಚಹದ ಸಿದ್ಧತೆಯನ್ನು ನಡೆಸಿದಳು, ಎಸರಿನಲ್ಲಿ ಚಹದ ಪುಡಿ ಹಾಕುವಾಗ ತನ್ನ ಸೆರಗು ಜೋತು ಬೀಳಲು ಗಾಬರಿಯಾದಂತೆ ರಮಾಕಾಂತನನ್ನು ಓರೆಗಂಣಿನಿಂದ ನೋಡಿ ತನ್ನ ಮನೋಹರವಾದ ವಕ್ಷಃಸ್ಥಳವನ್ನು ಸೆರಗಿನಿಂದ ಚೆನ್ನಾಗಿ ಮುಚ್ಚಿಕೊಂಡಳು. ರಮಾಕಾಂತನು ರಂಗಮ್ಮನ ಕೂಡ ಮಾತಾಡುತ್ತಿದ್ದರೂ ಈ ತರುಣಿಯ ಚೇಷ್ಟಿತಗಳನ್ನು ನಿರೀಕ್ಷಿಸುತ್ತಿದ್ದನು. ಆದರವನು ಮರ್ಯಾದಶೀಲನೂ, ಸದ್ವರ್ತನದವನೂ ಇದ್ದದರಿಂದ ಈ ಚೇಷ್ಟೆಗಳಿಗೆ ಅವನಿಂದ ಉತ್ತೇಜನ ದೊರೆಯಲಿಲ್ಲ. ಸಭೆಗಳಲ್ಲಿಯೂ ಉಪಾಸನಾ ಸಮಾಜ ಮಂದಿರದಲ್ಲಿಯೂ ಕಂಡುಬರುವ ಕಮಲೆಯ ಔದ್ಧತ್ಯದ ಲೇಶವಾದರೂ ಮನೆಯಲ್ಲಿ ಕಾಣಿಸಲಿಲ್ಲ. ಇವಳು ತನ್ನ ತಾಯಿಯ ಆಜ್ಞೆಯಂತೆಯೇ ವರ್ತಿಸುವಳಂತೆ ಕಂಡಳು. ವ್ಯಾಖ್ಯಾನಗಳಲ್ಲಿ ಪುರುಷರನ್ನು ಧಿಕ್ಕರಿಸುವ ಈ ಚಂಡಿಯು ರಮಾಕಾಂತನನ್ನು ಹೇಗೆ ಸಂತೋಷಪಡಿಸಬೇಕೆಂಬ ಯೋಚನೆ

ಯಲ್ಲಿ ಮುಳುಗಿಹೋಗಿದ್ದಳು. ಆವೇಶದಿಂದ ಮೇಜು ಅಪ್ಪಳಿಸಿ ಸ್ತ್ರೀಸ್ವಾತಂತ್ರ್ಯ ವನ್ನು ಪ್ರತಿಪಾದಿಸುವ ಅದೇ ಕಮಲೆಯು ವಯ್ಯಾರದೊಂದಿಗೆ ನಲಿದಾಡುತ್ತ ಪ್ರೇಮಕಟಾಕ್ಷದಿಂದ ರಮಾಕಾಂತನನ್ನು ನೋಡುತ್ತ ಮಂದಹಾಸದಿಂದ ನಗುತ್ತಿದ್ದಳು.

ಕಮಲೆಯು ಏನೋ ತರುವ ನೆವದಿಂದ ಹೊರಗೆ ಹೋದಳು. ಆಗ ರಂಗಮ್ಮನು ರಮಾಕಾಂತನನ್ನು ನೋಡಿ,

"ಕಮಲೆಯು ವಿಲಕ್ಷಣ ಸ್ವಭಾವದ ಹುಡಿಗೆಯು. ಜನರು ಅವಳನ್ನು ಧಿಟ್ಟಳೂ ಮರ್ಯಾದೆಹೀನಳೂ ಎಂದು ಕರೆಯುವರು. ಆದರೆ ಅವಳಂಥ ಆಜ್ಞಾಧಾರಕಳಾದ ಮಗಳನ್ನು ನಾನು ನೋಡೇ ಇಲ್ಲ. ಅವಳು ಸಭೆಗಳಲ್ಲಿ ಮಾತಾಡುವಳೆಂದು ಜನರು ಅವಳನ್ನು ಹೀಯಾಳಿಸುವರು. ನೀವೇ ನೋಡಿರಿ! ನನ್ನ ಕಂದಮ್ಮನೇನು ಮಾಡಬೇಕು! ಅವಳ ಹಣೇಬರಹವೇ ಖೊಟ್ಟಿಯಾದದ್ದರಿಂದ ಬಂಗಾರದಂಥ ಪತಿಯನ್ನು ಕಳಕೊಂಡಳು. ಮನೆಯಲ್ಲಿ ಕೂತರೆ ಹೊತ್ತು ಹೋಗುವದಿಲ್ಲ. ಹಿಂದಿನ ದುಃಖಗಳು ನೆನಪಾಗಿ ಮನಸ್ಸಿಗೆ ಸಂತಾಪವೂ ಆಗುವದು " ಎಂದು ರಂಗಮ್ಮನು ನಿಜವಾದ ದುಃಖದಿಂದ ಕಣ್ಣಿಗೆ ನೀರುತಂದು ಹೇಳಿದಳು.

"ನಿಮ್ಮ ತಿಳುವಳಿಕೆ ಪ್ರಕಾರ ಕಮಲಾಬಾಯಿಯು ಒಳ್ಳೇ ನಡತೆಯವಳಿದ್ದರಾಯಿತು. ಜನರ ಮಾತು ತಕ್ಕೊಂಡೇನು ಪ್ರಯೋಜನ ?"

"ಪುರುಷರ ಮೇಲೆ ಅವಳು ಹೆಚ್ಚು ತೀಕ್ಷ್ಣವಾದ ಟೀಕೆ ಮಾಡುತ್ತಾಳೆಂದು ಗಂಡೂ ಹೆಣ್ಣೂ ಕೂಡೇ ಅವಳನ್ನು ಹುಚ್ಚೀ ಮಾಡುತ್ತಾರೆ. ಕಮಲೆಯು ಹೀಗೆ ಟೀಕೆ ಮಾಡುವದಕ್ಕೆ ನಮ್ಮ ಹೊಟ್ಟೆಯಲ್ಲಿ ಬಿದ್ದ ಬೆಂಕಿಯೇ ಕಾರಣವು. ನನ್ನವಸ್ಥೆ ನೋಡಿರಿ! ಯಜಮಾನರು ತಪ್ಪಿಲ್ಲದೆ ನನ್ನನ್ನು ಬಿಟ್ಟುಕೊಟ್ಟರು. ಕಮಲೆಗಂತೂ ಆಕಾಶವೇ ಹರಿದು ಬಿದ್ದಂತಾಗಿದೆ. ದೇವರು ನನ್ನನ್ನು ಇರುವಂತೆ ಇಟ್ಟಿದ್ದರೆ ಮನೆಯಲ್ಲಿ ಸಂಪತ್ತಿಗೇನು ಕಡಿಮೆಯೇ! ಅಂಥವರ ಮಗಳಾಗಿ ಸೀರೆ ಕುಪ್ಪಸಕ್ಕಾಗಿ ಕಮಲಕ್ಕಗೆ ಕೂಲಿ, ಕಸೀದೆ, ಹೊಲಿಗೇ ಕೆಲಸ ಮಾಡಬೇಕಾಯಿತಲ್ಲ! ಗಂಡಸರನ್ನು ಅವಳು ಏನಂತ ಕೊಂಡಾಡಬೇಕು ?"

ಕಮಲೆಯು ಬಂದು ಚಹದ ಬಟ್ಟಲಗಳನ್ನು ತಟ್ಟೆಗಳಲ್ಲಿಟ್ಟು ಚಹ ತುಂಬಿದ ಪಾತ್ರೆಯನ್ನು ಹತ್ತರವೇ ತಂದಿಟ್ಟಳು. ರಮಾಕಾಂತನು ಮುಂದರಿದು ಪಾತ್ರೆಯಲ್ಲಿಯ ಚಹವನ್ನು ಬಟ್ಟಲುಗಳಿಗೆ ಹಾಕಿ ಹಾಲು ಸಕ್ಕರೆಗಳನ್ನು

ಪ್ರಮಾಣಕ್ಕೆ ಸರಿಯಾಗಿ ಕೂಡಿಸಿದನು. ಕಮಲೆಯೂ ರಂಗಮ್ಮನೂ ರಮಾಕಾಂತನ ಜಾಣತನವನ್ನು ಕೊಂಡಾಡುತ್ತ ಚಹ ಕುಡಿಯಹತ್ತಿದರು. ಬಡವರಲ್ಲಿಯ ಆದರಾತಿಥ್ಯವು ಮನೋವೇಧಕವಾಗಿರುವದೆಂಣಿಸಿ ರಮಾಕಾಂತನೂ ಆನಂದದಿಂದ ವಿಲಾಯತಿಯಿಂದ ಬಂದ ಈ ಹೊಸ ತರದ ಪೇಯವನ್ನು ಕುಡಿದನು.

ಚಹ ಕುಡಿಯುವದಾದ ಬಳಿಕ ಕಮಲೆಯು ತನ್ನ ಪಿಯಾನೋದ ಪೆಟ್ಟಿಗೆ ತೆಗೆದು ತಾನೇ ಬಾರಿಸುತ್ತ ತನ್ನ ತಾಯಿಯು ಸೂಚಿಸಿಕೊಟ್ಟ "ನೀತಿಯಿಂದಲೋ ಪೌರವರಾಯ ನೀ ಕರುಣಿಪುದೋ" ಎಂಬ ಚುರಮುರಿ ಶೇಷಗಿರಿರಾಯರ ಶಾಕುಂತಲದಲ್ಲಿಯ ಪದವನ್ನು ಚನ್ನಾಗಿ ಹಾಡಿದಳು.

ಇದಾದ ಬಳಿಕ ಕಮಲೆಯು ಕೆಲವು ಪತ್ರಗಳನ್ನು ಬರೆದು ರಮಾಕಾಂತನ ಕಯ್ಯಲ್ಲಿ ತಂದುಕೊಟ್ಟು ಅಂಚೆಯಲ್ಲಿ ಹಾಕಹೇಳಿದಳು. ಕಮಲೆಯ ಬರಹವು ಮುಕ್ತಾಫಲದಂತೆ ಅಂದವಾಗಿತ್ತು. ರಮಾಕಾಂತನು ಈ ಅಕ್ಷರಗಳನ್ನು ನೋಡಿ ಕಮಲೆಯ ಸ್ತುತಿಮಾಡಿದನು.

"ರಾಯರೇ, ನನ್ನ ಸ್ತುತಿ ಮಾಡುವದಕ್ಕಿಂತಲೂ ನಿಮ್ಮ ಪರಿಚಯದ ಸ್ತ್ರೀಯರಿಗೆ ಸ್ತ್ರೀಸ್ವಾತಂತ್ರ್ಯದ ತತ್ವಗಳನ್ನು ತಿಳಿಸಿ ಹೇಳಿದರೆ ನನ್ನ ಮೇಲೆ ದೊಡ್ಡ ಉಪಕಾರ ಮಾಡಿದಂತಾಗುವದು" ಎಂದು ಕಮಲೆಯಂದಳು.

"ನನ್ನ ಪರಿಚಯದ ಸ್ತ್ರೀಯರೇ ಇಲ್ಲ. ಇರುವಳೊಬ್ಬ ಪಂಡಿತೆಯು ನಿಮ್ಮ ಮತಪ್ರವರ್ತಕಳು.

"ಪಂಡಿತೆಯು ನನ್ನ ಮತದವಳಾದರೆ ಇಂದಿರಾಬಾಯಿಯು ನಮ್ಮ ಪ್ರತಿಪಕ್ಷಿಯಲ್ಲ!" ಎಂದು ಓರೆಗಣ್ಣಿನಿಂದ ನೋಡಿ ಕಮಲೆಯಂದಳು.

ಇಂದಿರೆಯ ಹೆಸರು ಕೇಳಿದ ಕೂಡಲೆ ರಮಾಕಾಂತನ ಮುಖವು ಪ್ರಫುಲ್ಲಿತವಾಗಿ ಉತ್ಸಾಹವುಳ್ಳದ್ದಾಯಿತು. ಅವನು ತನ್ನ ಆವೇಶವನ್ನು ದಬ್ಬಿಕೊಂಡು "ಇಂದಿರಾಬಾಯಿಯ ಅಭಿಪ್ರಾಯಗಳೇನಿರುವವೋ ನಾನರಿಯೆ. ಆದರೂ ನಿಮ್ಮ ಪತ್ರಗಳನ್ನು ಅಂಚೆಯಲ್ಲಿ ಹಾಕುತ್ತೇನೆ. ಈ ಪತ್ರಗಳ ಸ್ಪರ್ಶದಿಂದ ನನ್ನಲ್ಲಿ ಮತಾಂತರ ಹುಟ್ಟಲಿಕ್ಕಿಲ್ಲವಲ್ಲ!" ಎಂದು ನಗುತ್ತ ಹೋಗೋದಕ್ಕಿದ್ದನು.

ಕಮಲೆಯು ಆತನನ್ನು ಕಳಿಸಲಿಕ್ಕೆ ಬಾಕಿಲದವರೆಗೆ ಬಂದು ಮುಗುಳನಗೆಯಿಂದ "ಮೇಲಿಂದ ಮೇಲೆ ಹೀಗೇ ದಯಮಾಡಿ ಬಡವರ ಮೇಲೆ ಅನುಗ್ರಹ ಮಾಡುತ್ತಿರಬೇಕು." ಎಂದು ಹೇಳಿ ರಮಾಕಾಂತನ ಕೈಯನ್ನು ಅಭಿಲಾಷೆಯಿಂದ

ಹಿಡಿದು ಅಲ್ಲಾಡಿಸಿದಳು.

ಕಮಲೆಯು ತನ್ನ ತಾಯಿಯ ಹತ್ತರ ಬಂದು ಕುಳಿತ ಬಳಿಕ " ಕಮಲಾ, ರಮಾಕಾಂತನು ಸುಂದರನೂ ಸುಶೀಲನೂ ಆಗಿರುವನು. ಇವನ ಕೊರಳಲ್ಲಿ ಹಾಕುವದಕ್ಕೆ ಯಾವ ಪುಣ್ಯವಂತಿಯು ಮಾಲೆಯನ್ನು ಹಿಡುಕೊಂಡು ಕುಳಿತಿರುವಳೋ ಅವಳೇ ಧನ್ಯಳು " ಎಂದು ರಂಗಮ್ಮನಂದಳು.

" ನಮ್ಮ ದೈವವು ಖೊಟ್ಟಿಯೇ ಇರುವದಲ್ಲ ! ಇಂದಿರಾಬಾಯಿಯ ಹೆಸರು ತೆಗೆದಕೂಡಲೆ ಮೋರೆಯನ್ನು ಎಷ್ಟು ಅಗಲು ಮಾಡಿದನು, ನೀನು ನೋಡಿದಿಯಾ !" ಎಂದು ಕಮಲೆಯಂದಳು.

" ಇಂದಿರಾಬಾಯಿಯು ಯಾರು ?"

" ಸಾವಕಾರ ಜಯರಾಯರ ಮಗಳು. ಅವಳು ಬಹಳೇ ಚಲುವೆಯಾಗಿದ್ದು ರಮಾಕಾಂತನು ಅವಳಿಗೆ ಮೋಹಿತನಾಗಿರುವಂತೆ ಕಾಣುತ್ತದೆ." ಹೀಗೆಂದು ಕಮಲೆಯು ಕೆಲವು ಹೊತ್ತು ಚಿಂತಾಕ್ರಾಂತಳಾಗಿ ಕುಳಿತು, " ನಾನು ಇಂದಿರೆಯ ಹೆಸರು ತೆಗಿಯಬಾರದಾಗಿತ್ತು." ಹೀಗೆಂದು ಕೆಲಹೊತ್ತು ಸುಮ್ಮನಿದ್ದು ಮತ್ತೆ " ಅವಳು ಅತಿ ಶ್ರೀಮಂತಳು ; ನಾನು ಅತಿ ದರಿದ್ರಳು " ಎಂದು ನಿಟ್ಟುಸಿರು ಬಿಟ್ಟು ಕುಳಿತುಕೊಂಡಳು.

ನಗರವಾಸಿಗಳಾದ ತರುಣರು ಎಷ್ಟೋ ರೂಪವತಿಯರಾದ ತರುಣಿಯರನ್ನು ನಿತ್ಯ ನೋಡುತ್ತಿರುವದರಿಂದಲೂ 'ಭಿನ್ನರುಚಿರ್ಹಿ ಲೋಕಃ' ಎಂಬ ನ್ಯಾಯವಿರುವದರಿಂದಲೂ, ಅವರಿಗೆ ಹಾದೀಲಿ ಹೋಗುವ ತರುಣಿಯರ ರೂಪ ಕಂಡು ಹುಚ್ಚು ಹಿಡಿಯುವದಿಲ್ಲ. ಗ್ರಾಹಕರು ನಾಲ್ಕಂಗಡಿ ತಿರುಗಿ ಮನಗಂಡು ಜೀನಸು ಕೊಳ್ಳುವಂತೆ ನಾಗರಿಕ ತರುಣರು ನಾಲ್ಕು ಜನ ತರುಣಿಯರನ್ನು ಪರೀಕ್ಷಿಸಿ ಅವರಲ್ಲಿ ಶ್ರೇಷ್ಠಳಾದವಳೊಡನೆ ಪ್ರೀತಿ ಬೆಳಿಸುವರು. ಆದರೆ ರಮಾಕಾಂತನ ಸ್ಥಿತಿ ಹಾಗಿದ್ದಿಲ್ಲ. ತನಗನುರೂಪಳಾದ ಸ್ತ್ರೀಯಳನ್ನು 'ಬಡವ ನಡೆ ನಡೆಯುತ್ತ ಭಾಗ್ಯವನೆಡಹಿ ತಾ ಕಂಡಂತೆ' ಸಕೃತ್‌ದರ್ಶನದಲ್ಲಿ ಕಂಡನು. ಅರೇಬಿಯನ್ ನಾಯಿಟದಲ್ಲಿಯ ಲೋಹಚುಂಬಕದ ಗುಡ್ಡವನ್ನು ಸಮೀಪಿಸಿದ ಹಡಗಗಳ ಮಳೆಗಳಂತೆ ಇಂದಿರೆಯನ್ನು ಕಂಡ ಕೂಡ್ಲೆ ರಮಾಕಾಂತನ ಪ್ರಾಣಗಳೆಲ್ಲ ಇಂದಿರೆಯಲ್ಲಿ ದೃಢವಾಗಿ ನಟ್ಟವು. ಇಂದಿರೆಯು ಮಾತ್ರ ಇವನನ್ನು ಸ್ನೇಹಿತನೆಂದು ಸದ್ಯಕ್ಕೆ ತಿಳುಕೊಂಡು ವರ್ತಿಸುವಳು. ಆದರೆ ರಮಾಕಾಂತನು ಕಮಲೆಯ ಮೇಲೆ ಪ್ರೀತಿ ಮಾಡುತ್ತಾನೆಂದೂ ಅವಳನ್ನೇ ಲಗ್ನ ಮಾಡಿಕೊಳ್ಳುವನೆಂದೂ ಜಯರಾಯನು ಹೇಳಿದ್ದು

ಕೇಳಿ ಇಂದಿರೆಯು ಮನಸ್ಸಿನಲ್ಲಿ ಒಂದು ತಮಾಸೆಯು ಉದ್ವೇಗ ಹುಟ್ಟಿತು. ರಮಾಕಾಂತನ ಕೂಡ ಮಾತಾಡಬೇಕಾದರೆ ಸಂಕೋಚಗೊಳ್ಳಹತ್ತಿದಳು.

ಕಮಲೆಯು ಗುರ್ತು ಮಾಡಿಕೊಂಡು ಅವಳೊಡನೆ ಸ್ನೇಹಭಾವದಿಂದಿರಬೇಕೆಂದೆಣಿಸಿ ಇಂದಿರೆಯು ತನ್ನ ತಂದೆಯ ಮುಂದೆ ಮಾತು ತೆಗೆದಳು.

" ಆಗಲಿ, ಪಂಡಿತೆಯು ಮನೆಗೆ ಹೋಗುವ. ಶ್ರೀಕಂಠನಿಗೂ ಅಲ್ಲಿಗೆ ಬರ ಹೇಳಿ ಕಳಿಸುವೆನು. ಅನಾಯಾಸವಾಗಿ ಪಂಡಿತೆಯು ಇದೇ ದಿವಸ ಕಮಲೆಯನ್ನು ತನ್ನ ಮನೆಗೆ ಕರಕೊಂಡು ಬಂದಿರುವಳು." ಎಂದು ಜಯರಾಯನು ಸಂತುಷ್ಟನಾಗಿ ಹೇಳಿದನು. ಏಕೆಂದರೆ ಆ ಮುಗ್ಗಲು ಜಯರಾಯನು ಬೇರೊಂದು ಬಲೆಯೊಡ್ಡಿದ್ದನು.

ಮಗಳೂ ತಂದೆಯೂ ಪಂಡಿತೆಯು ಮನೆಗೆ ಬಂದರು. ಇವರನ್ನು ಕಂಡು ಪಂಡಿತೆಯು ಆನಂದದೊಡನೆ ' ಬನ್ನಿರಿ, ಜಯರಾಯರೇ, ಇಂದಿರೆಯಂತೂ ಹಾದಿ ತಪ್ಪಿಯೇ ಬಂದಿರುವಳು." ಎಂದು ಮಾತಾಡಿದಳು.

" ಈ ದಿವಸ ವಿಶೇಷ ಕೆಲಸವಿದ್ದಿಲ್ಲ. ಇಂದಿರೆಗೂ ನಿಮ್ಮ ಭೆಟ್ಟಿಯಾಗ ಬೇಕೆಂಬ ಮನಸಾಗಿರುವದು. ಹೀಗೇ ಸಹಜವಾಗಿ ಬಂದೆವು." ಎಂದು ಜಯರಾಯನು ಹೇಳಿದನು.

" ಒಳಗಿನ ಕೋಣೆಯಲ್ಲಿ ನನ್ನ ಸ್ನೇಹಿತರು ಮಾತಾಡುತ್ತ ಕುಳಿತಿರುವರು. ಈ ದಿವಸ ವಿಲಾಯತಿಯ ಅಂಚೆ ಹೋಗುತ್ತಿರುವದಾದರಿಂದ ಕೆಲವು ಅವಶ್ಯಕವಾದ ಪತ್ರಗಳನ್ನು ಬರೆಯುತ್ತ ಕುಳಿತಿದ್ದೇನೆ." ಎಂದು ಪಂಡಿತೆಯಂದಳು.

" ಯಾರು ಯಾರು ಬಂದಿರುವರು ?" ಎಂದು ಇಂದಿರೆಯು ಕೇಳಿದಳು,

ಜಾತಿಭೇದಗಳಿಗೆ ಅರದಾಳ ಹಚ್ಚಲಿಕ್ಕೆ ಹಂಗುದೊರೆದು ನಿಂತ ಪ್ರತಾಪಶಾಲಿಯಾದ ವಿಠ್ಠಲರಾವ ಮೋಡಕ, ಮಿಶನರಿ ಜನರಿಗೆ ಪ್ರಿಯರಾದ ಕೃಷ್ಣಸ್ವಾಮಿ ಅಯ್ಯರ, ಪುನರ್ವಿವಾಹಕ್ಕೆ ಸಿದ್ಧರಾಗಿರುವ ನಮ್ಮ ಮಹಾತ್ಮರಾದ ರಮಾಕಾಂತ ದೇಸಾಯಿ, ಸ್ತ್ರೀಸ್ವಾತಂತ್ರ್ಯವನ್ನು ಸ್ಥಾಪಿಸಲಿಕ್ಕೆ ಅವತಾರ ತಕ್ಕೊಂಡವಳಾದ ನನ್ನ ಶಿಷ್ಯಳಾದ ಕಮಲಾಬಾಯೀ ಮೇಗಳೂರ, ಮುಂತಾದ ಪ್ರಭೃತಿಗಳು ನೆರೆದಿರುವರು " ಎಂದು ಅಭಿಮಾನದೊಂದಿಗೆ ಪಂಡಿತೆಯು ಜಯರಾಯನ ಕಡೆಗೆ ನೋಡಿ ಕಣ್ಣು ಚಿಮಟಿ ಹೇಳಿದಳು.

ಅಷ್ಟರಲ್ಲಿ ಕಮಲೆಯೇ ಪಂಡಿತೆಯಿದ್ದಲ್ಲಿಗೆ ಬಂದಳು. ಅವಳನ್ನು ಕಂಡು ಪಂಡಿತೆಯು ಕಮಲಾ, ಪ್ರಿಯ ಕಮಲಾ, ಇಕೋ ಇವರು ನಮ್ಮ ಸ್ನೇಹಿತರಾದ

ಜಯರಾವ ಸಾವುಕಾರರು. ಇವರು ಈ ಮಹಾರಾಯರ ಚಿರಂಜೀವಿಯರಾದ ಶ್ರೀಮತಿ ಇಂದಿರಾಬಾಯಿಯವರು. ಇಂದಿರಕ್ಕಾ, ಇವಳೇ ನನ್ನ ಪಟ್ಟ ಶಿಷ್ಯಳಾದ ಕಮಲಾಬಾಯಿ ಮಗಳೂರ." ಎಂದು ಹೇಳಿ ಮೂವರಿಗೂ ಆಸನಾರೂಢರಾಗಲಿಕ್ಕೆ ವಿಜ್ಞಾಪನೆ ಮಾಡಿಕೊಂಡಳು.

"ಕಮಲಾಬಾಯಿ, ನಿಮ್ಮನ್ನು ಕಾಣಬೇಕೆಂದು ಏಳೆಂಟು ದಿನದಾರಭ್ಯ ಹವಣಿಸುತ್ತಿದ್ದೆನು. ಆ ಸಂಯೋಗ ಕೂಡಿ ಬಂದದ್ದು ನೋಡಿ ನನಗೆ ಆನಂದ ವಾಗಿರುವದು." ಎಂದು ಇಂದಿರೆಯು ಸದ್ಭಾವದಿಂದ ನುಡಿದಳು.

ಕಮಲೆಯು ಒಳ್ಳೇ ಗರ್ವದಿಂದ "ನಿಮ್ಮ ದರ್ಶನದಿಂದ ನಾನೂ ಧನ್ಯ ಳಾಗಿರುವೆನು. ಆದರೆ ನಾನೂ ನೀವೂ ಭಿನ್ನ ಭಿನ್ನ ಪಂಥದವರಾದ್ದರಿಂದ ನಾವು ಸ್ನೇಹಿತರಾಗಲರಿಯೆವು" ಎಂದು ಆಡಿದಳು.

"ನನ್ನ ಪಂಥವಾವದಿರುವದೋ ನನಗೇ ಗೊತ್ತಿಲ್ಲ. ನಾನು ಕೇವಲ ನಿಮ್ಮ ದರ್ಶನಾಪೇಕ್ಷೆಯಿಂದ ಬಂದಿರುವೆನು. ಮತಗಳ ಬಗ್ಗೆ ಪ್ರತಿಪಾದಿಸುವದು ನನ್ನ ಮನಸ್ಸಿನಲ್ಲಿಲ್ಲ." ಎಂದು ಸ್ಮಿತವದನೆಯಾಗಿ ಇಂದಿರೆಯಂದಳು.

"ಇಬ್ಬರಲ್ಲಿ ಮತೈಕ್ಯವುಂಟಾಗಿ ಸಮಾಜದ ಹಿತಕ್ಕಾಗಿ ಆನಂದದಿಂದ ವಾದ ವಿವಾದ ಮಾಡುವವರಲ್ಲಿಯೇ ಸ್ನೇಹವುಂಟಾಗುವದು. ನಿಮಗಂತೂ ಯಾವ ವಿಷಯವೂ ತಿಳಿದಿಲ್ಲೆಂದು ಹೇಳುವಿರಿ. ನನ್ನ ದರ್ಶನದಿಂದ ನಿಮಗಾಗುವ ಫಲ ವೇನು ?" ಎಂದು ಕಮಲೆಯು ಆಢ್ಯತೆಯಿಂದ ನುಡಿದಳು.

ಇಂಥ ಸುಕುಮಾರಿಯಂತೆ ಕಾಣುವ ತರುಣಿಯು ಸಹಜವಾದ ಸಂಭಾಷಣೆ ಯಲ್ಲಿ ಕೂಡಾ ಉಪನ್ಯಾಸ ಮಾಡುವದನ್ನು ಕಂಡು ಇಂದಿರೆಯು ವಿಸ್ಮಿತಳಾಗಿ "ಸಮಾಜದ ಹಿತವೆಂದರೇನು ?" ಎಂದು ಕಮಲೆಯನ್ನು ಕೇಳಿದಳು.

ಇಂಥ ಸುಲಭ ಪ್ರಶ್ನೆಗೂ ಉತ್ತರ ಕೊಡಲು ತೊಂದರೆ ಹೊಂದಿ "ಇದಿನ್ನೂ ನಿಮಗೆ ತಿಳಿದಿಲ್ಲವೇನು ?" ಎಂದು ಕಮಲೆಯು ಕೇಳಿದಳು.

"ಹೆಚ್ಚಿಗೆ ತಿಳಕೊಳ್ಳುವ ಇಚ್ಛೆ ನನಗಿಲ್ಲ. ಸಾಮಾಜಿಕ ಸುಧಾರಣೆಯು ನಮಕಿಂತಲೂ ಬುದ್ಧಿವಂತರೂ ಬಲಾಢ್ಯರೂ ಆದ ಗಂಡುಮಕ್ಕಳಿಗೊಪ್ಪಿರುತ್ತದೆ. ವಿದ್ಯಾಪ್ರಸಾರಣೆಗೂ ತೊಂದರೆಯಲ್ಲಿರುವವರಿಗೂ ಸಹಾಯ ಮಾಡುವದೊಂದೇ ನನಗೆ ಗೊತ್ತು. ಇದು ನಿಮ್ಮ ವ್ಯಾಖ್ಯೆಗೆ ಹೊಂದುವದೋ ?"

"ನೀವನ್ನುವದರಲ್ಲೇನೂ ಅರ್ಥವಿಲ್ಲ."

"ಹಾಗಾದರೆ ರಮಾಬಾಯಿಯವರೆ, ಅಶಿಕ್ಷಿತಳಾದ ನನ್ನನ್ನು ಶಿಷ್ಯಳನ್ನು ಮಾಡಿ

ಕೊಳ್ಳುವಿರಾ ?'' ಎಂದು ಪರಿಹಾಸೋಕ್ತಿಯಿಂದ ಇಂದಿರೆಯು ಕೇಳಿದಳು.

"ನಿಮ್ಮಂಥವರನ್ನು ಕಟ್ಟಿಕೊಂಡರೆ ನಾವು ಮುಳುಗಿ ಹೋಗುವದೇ ಸೈ. ಇದು ನಿಮ್ಮ ಕೆಲಸವೇ ಅಲ್ಲ. ನೀವು ಶ್ರೀಮಂತರ ಮಕ್ಕಳು. ಉಂಡು ತಿಂದು ಸುಖದಿಂದಿರುವ ಮಾರ್ಗ ನೋಡಿಕೊಳ್ಳಿರಿ. ಕೇವಲ ಜೀವನೋಪಾಯಕ್ಕಾಗಿ ಹೋರಾಡುತ್ತಿರುವಂಥ ನಮ್ಮಗಳ ಕೆಲಸವದು."

"ನಿಮ್ಮಂಥರಿಗೆ ನಾವು ಸಹಾಯ ಮಾಡಿದರೂ ಆಗದೇನು ?"

"ನಿಮ್ಮಷ್ಟಕ್ಕೆ ನೀವಿದ್ದು ನಮ್ಮ ಗೊಡವೆಗೆ ನೀವು ಬಾರದಿದ್ದರೆ ನಮ್ಮ ಮೇಲೆ ಉಪಕಾರ ಮಾಡಿದಿರೆಂದು ನಂಬುತ್ತೇವೆ." ಎಂದು ಶಾಂತ್ಯದಿಂದ ಕಮಲೆಯು ಮಾತಾಡಿದಳು.

"ನನ್ನ ಪರಿಚಯಸ್ತರೊಬ್ಬರು ನಿಮಗೂ ಬೇಕಾಗಿರುವರು. ಅದಕ್ಕಾಗಿಯೇ ನಾನು ನಿಮ್ಮ ಕೂಡ ಒಂದೆರಡು ಮಾತಾಡಬೇಕೆಂದು ಬಂದಿರುವೆನು. ನಿಮಗೆ ಬೇಡಾಗಿದ್ದರೆ ಹಾಗೇ ಆಗಲಿ.'' ಎಂದು ಇಂದಿರೆಯಂದಳು.

ಇದನ್ನು ಕೇಳಿ ಕಮಲೆಯು ಮಾತನಾಡದೆ ತನ್ನ ಕುರ್ಚಿಯಲ್ಲಿ ಸೆಟಕೊಂಡು ಕುಳಿತಳು. ಇಂದಿರೆಯೂ ಹೆಚ್ಚಿಗೆ ಮಾತು ತೆಗೆಯಲಾರದೆ ಸುಮ್ಮನಿದ್ದಳು. ಅಷ್ಟರಲ್ಲಿ ಇವರೀರ್ವರಿಗೂ ಬೇಕಾದ ಮನುಷ್ಯನೇ ಅಲ್ಲಿಗೆ ಬಂದನು. ಇವನನ್ನು ಕಂಡು ಕೂಡಲೆ ಈ ಕಾಮಿನಿಯರೀರ್ವರ ಎದೆಗಳೂ ಹಾರಲಾರಂಭಿಸಿದವು. ಇವರನ್ನು ಕಂಡು ರಮಾಕಾಂತನೂ ಚಕಿತನಾಗಿ ಟಕಮಕ ನೋಡುತ್ತ ನಿಂತನು.

"ನೋಡಿದಿಯಾ, ಇವನೆರಡೂ ಕಣ್ಣುಗಳು ಕಮಲೆಯ ಮುಖದ ಕಡೆಗೇ ಇರುತ್ತವೆ'' ಎಂದು ಇಂದಿರೆಯು ತನ್ನಷ್ಟಕ್ಕೆ ತಾನೇ ಅಂದುಕೊಂಡು ವಿಷಾದ ಹೊಂದಿದಳು.

"ಇಂದಿರೆಯನ್ನೇ ಕಣ್ಣಿಟ್ಟು ನೋಡುತ್ತಾನಲ್ಲ! ಏನು ಮಾಡಲಿ! ಎಂದು ಕಮಲೆಯು ಮತ್ಸರದಿಂದ ಕುದಿಯಹತ್ತಿದಳು.

ಎಲ್ಲರ ಸಂಗಡಲೂ ಸ್ನೇಹದಿಂದಲೂ ಆನಂದವೃತ್ತಿಯಿಂದಲೂ ಇರುವ ಈ ಲಾವಣ್ಯಖಣಿಯನ್ನೂ ನೋಡಿರಿ! ಮರ್ಯಾದೆಯನ್ನು ತಲೆಗೆ ಸುತ್ತಿ ಗಂಡಸರಂದರೇನೆಂದು ಧಿಕ್ಕರಿಸಿ ನಾಲ್ಕು ಜನ ನೆರೆದಲ್ಲಿ ಎದೆಯುಬ್ಬಿಸಿಕೊಂಡು ಕುಳಿತ ಆ ಗುಡುರಾಮಿಯನ್ನು ನೋಡಿರಿ! ಎಷ್ಟು ಮಹದಂತರವಿರುವದೆಂದು ಈ ತರುಣಿಯರೀರ್ವರ ಗುಣದೋಷಗಳನ್ನು ರಮಾಕಾಂತನು ತನ್ನ ಮನಸ್ಸಿನಲ್ಲಿ ತೂಗುತ್ತ ನಿಂತುಕೊಂಡಿದ್ದನು. ಕಮಲೆಯು ರಮಾಕಾಂತನನ್ನು ವರಿಸಲಿಕ್ಕೆ

ಒಂಟಗಾಲಿಲೆ ನಿಂತಿದ್ದಳು. ಯಾವ ಭಾವವನ್ನೂ ತೋರಗೊಡದಲೇ ಸಮ ವೃತ್ತಿಯಾಗಿರುವ ಸರ್ವಾಂಗಸುಂದರಿಯಾದ ಇಂದಿರೆಯನ್ನು ನೋಡಿ ರಮಾಕಾಂತನು ಈ ಮನೋಹಾರಿಯು ತನ್ನ ಮೇಲೆಂದಾದರೂ ಪ್ರೀತಿಯನ್ನಿಡುವಳೇನು ಎಂದು ಆಶಾಬದ್ಧನಾಗಿ ತನ್ನ ಮನಸ್ಸಿಗೆ ಅಂದುಕೊಂಡದ್ದು: "ಶಾಬಾಸ ಮನವೇ, ನಿನ್ನ ರಸಿಕತೆಯನ್ನು ಕೊಂಡಾತಕ್ಕದ್ದು. ನೀನು ಆರಿಸಿದ ಸ್ತ್ರೀರತ್ನವು ದುರ್ಲಭವಾಗಿದ್ದರೂ ಚಿಂತಿಲ್ಲ. 'ಯಾಂಛಾಮೋಘಾ ವರಮಧಿಗುಣೇ ನಾಧಮೇ ಲಬ್ಧಕಾಮಾ' ಕವಿಕುಲಗುರೋ, ಎಂತೆಂಥ ಬಾಣ ಹೊಡೆದಂಥ ಮಾತುಗಳನ್ನು ಬರೆದಿಟ್ಟುಬಿಟ್ಟಿರುವಿ!"

ಹೀಗೆ ವಿಚಾರದ ರೆಕ್ಕೆಗಳನ್ನು ಧರಿಸಿ ಗರುಡನಂತೆ ಮೇಘಮಂಡಲವನ್ನು ದಾಟಿ ನಿರ್ಮಲವಾದ ಮನೋರಾಜ್ಯದಲ್ಲಿ ಇನ್ನುಮೇಲೆ ರಮಾಕಾಂತನು ಪ್ರವೇಶಿಸುವನು, ಅಷ್ಟರಲ್ಲಿಯೇ ಶ್ರೀಕಂಠನೆಂಬ ದಾನವನು, ಇವನೆದುರಿಗೆ ಎಡರಾಗಿ ಬಂದು ನಿಂತನು.

ಶ್ರೀಕಂಠನನ್ನು ಇಂದಿರೆಯು ವಸ್ತುತಃ ಪ್ರೀತಿಸುತ್ತಿದ್ದಿಲ್ಲ. ಇದನ್ನರಿತವನಾಗಿಯೇ ಅವನು ಮುನಸಿಪಾಲಿಟಿ ಗಡಿಬಿಡಿಯಲ್ಲಿ ಮನಸ್ಸು ಹಾಕಿರುವನೆಂದು ರಮಾಕಾಂತನ ತರ್ಕವಿತ್ತು. ಒಂದೆರಡು ದಿವಸ ಶ್ರೀಕಂಠನು ಜಯರಾಯನ ಮನೆಗೆ ಬಾರದಿದ್ದ ಕಾರಣವಾದರೂ ಇದೇ ಇತ್ತು.

ಶ್ರೀಕಂಠನು ಬಂದ ಕೂಡಲೆ ಪಂಡಿತೆಯು ಅವನ ಕೈಹಿಡಿದು "ಶಾಬಾಸ್ ಶ್ರೀಕಂಠ ಬಹದ್ದೂರ, ಕಡೆಗೆ ನೀವು ಅರುಣಾಚಲಯ್ಯಂಗಾರರನ್ನು ನೆಲಕ್ಕೆ ಕೆಡವಿ ಅವರ ಅಧ್ಯಕ್ಷತೆಯನ್ನು ಸೆಳಕೊಂಡಿರಲ್ಲವೇ? ಇದನ್ನು ಕೇಳಿ ನನಗೆ ಬಹಳೇ ಆನಂದವಾಗಿರುವದು. ಈ ಪ್ರಾಂತದಲ್ಲೆಲ್ಲ ನಿಮ್ಮ ಬೆಳಕಾಯಿತು!"

ರಮಾಕಾಂತನು ಅಲ್ಲಿಯೇ ಕುಳಿತಿದ್ದನು. ಪಂಡಿತೆಯು ಅವನನ್ನು ನೋಡಿ "ರಮಾಕಾಂತರೆ! ಶ್ರೀಕಂಠ ಬಹದ್ದರರು ಅಧ್ಯಕ್ಷರಾದದ್ದು ನೀವು ಕೇಳಿರುವಿರೋ ಇಲ್ಲೋ? ಅವರ ವ್ಯಾಖ್ಯಾನಗಳಾದರೂ ಎಷ್ಟು ಗಂಭೀರವಾಗಿಯೂ ಶ್ರವಣ ಮನೋಹರವಾಗಿಯೂ ಇರುವವೆಂದು ಹೇಳಲಿ!" ಎಂದು ವರ್ಣಿಸಿದಳು.

ರಮಾಕಾಂತನಿಗೆ ಈ ಬಹದ್ದರರು ವ್ಯಾಖ್ಯಾನಕೊಟ್ಟದ್ದು ಗೊತ್ತಿಲ್ಲದಿದ್ದರೂ ಅವರು "ಅಹುದು ಬಹು ಚನ್ನಾಗಿರುವವು" ಎಂದು ತಾನೇನು ಹೇಳುವೆನೆಂಬ ಧ್ಯಾಸವಿಲ್ಲದೆ ಉತ್ತರಕೊಟ್ಟನು.

"ರಮಾಕಾಂತರೆ, ಜಯರಾಯರ ಮನೆ ವರ್ತಮಾನ ಕೇಳುತ್ತೇನ್ನೆ ಆ

ವರ್ತಮಾನವು ನಿಜವಾದದ್ದೇನು? ನೀವೆಂದಿಗಾದರೂ ಹೇಳುವಿರಾ! ವಿಚಾರ ಶೀಲರು ನೀವು!"

"ಪಂಡಿತಾಬಾಯರೇ, ನೀವೇನು ಕೇಳುತ್ತೀರೋ ತಿಳಿಯದು. ನಾನು ತಿಳಿದು ಸುಮ್ಮನಿದ್ದರೆ ಜಾಣ್ಮೆಯಿಂದ ಸುಮ್ಮನಿದ್ದೆನೆಂದು ಹೇಳಬಹುದಾಗಿತ್ತು."

"ಮತ್ಯಾವ ಮಾತಿನ ಬಗ್ಗೆ ಕೇಳುವದು? ಇಂದಿರಾ ಶ್ರೀಕಂಠರ ಪ್ರೀತಿಯ ವಿಷಯವಾಗಿ ಕೇಳಿದೆನಲ್ಲವೇ? ಅವರ ಲಗ್ನವು ನಿಶ್ಚಯವಾದಂತೇ ಇದೆಂದು ತಿಳಿಯುತ್ತದೆ. ಜೋಡು ಮಾತ್ರ ಹೇಳಿ ಮಾಡಿಸಿದಂತಾಯಿತು. ಸಾಕ್ಷಾತ್ ರಾಧಾಕೃಷ್ಣರೇ. ಶ್ರೀಕಂಠನು ತನ್ನ ಕೆಲವು ವಿಕ್ಷಿಪ್ತವಿಚಾರಗಳನ್ನು ಬಿಟ್ಟುಕೊಟ್ಟು ರಾಜಕೀಯ ವಿಷಯಗಳಲ್ಲಿ ಮನಸ್ಸು ಹಾಕಿದ್ದಾದರೆ ಇಂದಿರೆಯು ಇವನ ಪಾಣಿ ಗ್ರಹಣಕ್ಕೆ ಸಿದ್ಧಳಾಗುವಳೆಂದು ಹೇಳಿರುವಳಂತೆ. ಈಗ ಶ್ರೀಕಂಠನು ಮುನಸಿ ಪಾಲಿಟಿಯ ಅಧ್ಯಕ್ಷನಾದನು. ಒಳ್ಳೇದು, ಕಮಲೆಯದೂ ನಿಮ್ಮದೂ ಪ್ರೇಮ ಸಂಬಂಧವೆಲ್ಲೀವರೆಗೆ ಬಂದಿರುವದು?"

ಪಂಡಿತೆಯಾಡಿದ ಕಡೆಯ ವಾಕ್ಯವನ್ನು ರಮಾಕಾಂತನು ಕೇಳಲೇ ಇಲ್ಲ. ಅವನ ಧ್ಯಾನವೆಲ್ಲಿಯೋ ಇತ್ತು. ಇಂದಿರೆಯ ಹತ್ತರ ಶ್ರೀಕಂಠನು ಹೋಗಿ ಕುಳಿತ ದ್ದನ್ನು ಕಂಡನು, ಅಧ್ಯಕ್ಷನಾದಂದಿನಿಂದ ಶ್ರೀಕಂಠನ ಪ್ರಸ್ಥ ಬೆಳೆದಿತ್ತು. ಜಹಗೀರ ದಾರನ ಮಗನು, ಕುರೂಪಿಯಲ್ಲ, ಅಂದ ಮೇಲೆ ಇಂದಿರೆಯು ಶ್ರೀಕಂಠನನ್ನೊಲ್ಲೆ ನೆಂದು ಹೇಳುವ ಕಾರಣವೇನು? ತನ್ನ ಆಶಾವೃಕ್ಷವನ್ನು ಬೇರುಸಹಿತ ಕಿತ್ತಿ ಹಾಕುವ ಸಾಮರ್ಥ್ಯವು ಶ್ರೀಕಂಠನಲ್ಲಿ ಬಂದಿತೆಂದು ಅಂಜಿ ರಮಾಕಾಂತನು ಉದ್ವಿಗ್ನವಾಗಿ ಕುಳಿತನು. ಶ್ರೀಕಂಠನು ಇಂದಿರೆಯ ಕಿವಿಯಲ್ಲಿ ಏನೋ ಹೇಳಿದನು. ಅದನ್ನು ಕೇಳಿ ಆ ತರುಣಿಯು ಅವನತಮುಖಿಯಾಗಿ ತಾನೇನೋ ಉತ್ತರ ಕೊಟ್ಟಳು. ಆ ಮೇಲೆ ಶ್ರೀಕಂಠನು ಒಳ್ಳೇ ಆತ್ಮತೆಯಿಂದೆದ್ದು ಜಯರಾಯನ ಹತ್ತರ ಹೋದನು. ಇದನ್ನೆಲ್ಲ ಕಂಡು ಶ್ರೀಕಂಠನೂ ಇಂದಿರೆಯೂ ರಹಸ್ಯದಲ್ಲಿರುವ ರೆಂದು ರಮಾಕಾಂತನಿಗೆ ಭಾಸವಾಗಿ ಬಿರುಗಾಳಿಯಿಂದ ಬೇರೊರಿಸಿ ಉರುಳಿಬಿದ್ದ ದೇವದಾರುವಿನಂತೆ ತನ್ನ ಕುರ್ಚಿಯ ಬೆನ್ನು ಗಟ್ಟಿಯಾಗಿ ಹಿಡುಕೊಂಡು ಅಲ್ಲಿಯೇ ಒರಗಿಕೊಂಡನು.

ಪಾಪ! ರಮಾಕಾಂತನು ವ್ಯರ್ಥವಾಗಿ ವ್ಯಥೆಗೊಂಡನು. ಇವನ ತಿಳುವಳಿ ಕೆಯು ಭ್ರಾಮಕವಾದದ್ದಾಗಿತ್ತು. ಇಂದಿರೆಯೂ ಶ್ರೀಕಂಠನೂ ಏನೇನು ಮಾತಾಡಿದ ರೆಂಬದನ್ನು ನಾವು ವಾಚಕರಿಗೆ ತಿಳಿಸುತ್ತೇವೆ.

ಶ್ರೀಕಂಠ :—ಇಂದಿರಾಬಾಯಿ, ಕೆಲವೊಂದು ಕಾರ್ಯದ ನಿಮಿತ್ತ ಇದೇ ಹಾದಿಯಿಂದ ಹೋಗುವಾಗ್ಗೆ ನೀವಿಲ್ಲಿರುವದನ್ನು ಕೇಳಿಕೊಂಡು ನಿಮ್ಮನ್ನು ಕಂಡು ಹೋಗಬೇಕೆಂದು ಬಂದೆನು. ನಿಮಗೆ ಕೆಲವು ಮಾತು ಕೇಳತಕ್ಕದ್ದದೆ. ನಾಳೆ ಸಾಯಂಕಾಲಕ್ಕೆ ಐದು ಘಂಟೆಗೆ ನೀವು ನಿಮ್ಮ ಮನೆಯಲ್ಲಿರುವಿರೇನು ?

ಇಂದಿರಾ :—(ಅದೇನು ಮಾತು ಕೇಳುತಕ್ಕದ್ದಿರುವದೆಂದು ಯೋಚನೆಯಲ್ಲಿ ಬಿದ್ದು ಕೆಳಗೆ ಮೋರೆ ಮಾಡಿ) ಆಗಲಿ, ಐದು ಘಂಟೆಗೆ ಮನೆಯಲ್ಲಿರುವೆನು.

ಇಷ್ಟೇ ಹೊರ್ತಾಗಿ ಅದರಲ್ಲೇನೂ ಹುರುಳಿದ್ದಿಲ್ಲ. ಈ ಸಂವಾದವಾದನಂತರ ಶ್ರೀಕಂಠನು ಜಯರಾಯನ ಹತ್ತರ ಹೋಗಿ "ನಾಳೆ ಸಾಯಂಕಾಲಕ್ಕೆ ಮಾತು ತೆಗೆಯುತ್ತೇನೆ" ಎಂದು ಹೇಳಿ ತನ್ನ ಕೆಲಸವಿದ್ದಲ್ಲಿಗೆ ಹೊರಟುಹೋದನು.

ಜಯರಾಯನು ರಮಾಕಾಂತನಿದ್ದೆಡೆಗೆ ಬಂದು ಕ್ಷೇಮಸಮಾಚಾರ ಕೇಳುತ್ತ ನಿಂತನು. ಇಂದಿರೆಯೂ ಇವರ ಹತ್ತರ ಬಂದು ನಿಂತಳು. ಪಂಡಿತೆಯೂ ಜಯರಾಯನೂ ಮತ್ತೇನೋ ಮಸಲತಿಗಾಗಿ ಕೋಣೆಯಲ್ಲಿ ಹೋಗಿ ಕುಳಿತು ಗುಜುಗುಜು ಮಾತಾಡಹತ್ತಿದರು. ಇಂದಿರೆಯೂ, ರಮಾಕಾಂತನೂ ಸದರಿನಲ್ಲಿ ಇಬ್ಬರೇ ಉಳಿದರು.

"ಏನು ರಾಯರೆ, ಮತ್ತೆ ಕಂಚಿಕೋಮಿಂಚಾಗಿರುವಿರಿ. ಇಷ್ಟೇಕೆ ನಮ್ಮ ಮೇಲೆ ನಿರ್ದಯ !" ಎಂದು ಇಂದಿರೆಯು ಮಂದಹಾಸದಿಂದ ಕೇಳಿದಳು.

"ಇಂದಿರಾಬಾಯೀ, ನನ್ನ ಮನಸ್ಸು ಏಕೋ ಉದ್ವಿಗ್ನವಾಗಿದೆ. ಯಥೇಷ್ಟ ವಾಗಿ ನಿಮ್ಮ ಕೂಡ ಮಾತಾಡುವದು ನನ್ನ ದೈವದಲ್ಲಿಯೇ ಇಲ್ಲ. ಈ ದಿವಸ ತಮ್ಮ ಕೂಡ ಮಾತಡಬೇಕೆಂದರೆ ನನ್ನಕ್ಕಿಂತಲೂ ಹೆಚ್ಚಿಗೆ ಬೇಕಾದವರು ನಿಮ್ಮ ಬಳಿಯಲ್ಲಿದ್ದಮೇಲೆ ನಮ್ಮನ್ನಾರು ಕೇಳುವರು ?"

"ನೀವಾಡಿದ್ದು ನನಗೆ ತಿಳಿಯಲೇ ಇಲ್ಲ. ನಿಮ್ಮಕಿಂತಲೂ ಹೆಚ್ಚಿನ ಸ್ನೇಹಿತರು ನನಗಿಲ್ಲೇ ಇಲ್ಲ."

ಆ ಮೇಲೆ ಆ ಮಾತು ಈ ಮಾತು ಆಡುತ್ತ ಅವರೀರ್ವರು ಕುಳಿತರು. ಇಂದಿರೆಯು ಒಳ್ಳೇ ಮನೋಹರವಾಗಿ ಮಾತಾಡಿದಳು. ರಮಾಕಾಂತನು ಮೋಹಿನೀ ಮಂತ್ರದಲ್ಲಿ ಸಿಕ್ಕುವನಂತೆ ಏಕಾಗ್ರಚಿತ್ತನಾಗಿ ಆ ಶಶಿಮುಖಿಯನ್ನು ನೋಡುತ್ತ ಆವಳ ಮಧುರಾಲಾಪಗಳನ್ನು ಕೇಳುತ್ತ ಕುಳಿತನು. ಕಡೆಗೆ ಇಂದಿರೆಯು ತಾನು ಕಮಲೆಯ ಕೂಡ ಮಾತಾಡಿದ ಸಂಗತಿಯನ್ನು ತಿಳಿಸಿ "ಕಮಲೆಯನ್ನು ಕಂಡು ನನಗೆ ಬಹಳ ಸೇರಿಕೆ ಬಂತೆಂದು ದಯಮಾಡಿ ಅವಳಿಗೆ ತಿಳಿಸುವಿರಾ ?"

ಎಂದು ಕೇಳಿದಳು.

"ಆಗತ್ಯ ತಿಳಿಸವೆನು" ಎಂದು ತಾನು ಇಂದಿರೆಯ ಬಲೆಯಲ್ಲಿ ಸಿಕ್ಕೆನೆಂದರಿಯದೆ ಹೇಳಿದನು.

ರಮಾಕಾಂತನು ಕಮಲೆಯ ಕೂಡ ವಿವಾಹ ಮಾಡಿಕೊಳ್ಳುವನೆಂದು ಪಂಡಿತೆಯ ಮೋಸದ ಮಾತಿನಲ್ಲಿ ನಂಬಿ, ಇಂದಿರೆಯು ತನ್ನ ಸಂದೇಶವನ್ನು ಕಮಲೆಗೆ ತಿಳಿಸಲಿಕ್ಕೆ ಬೇಕಾಗಿ ರಮಾಕಾಂತನಿಗೆ ಹೇಳಿದಳು. ರಮಾಕಾಂತನು ಇವಳ ಭಾವ ತಿಳಿಯದೆ ಒಪ್ಪಿಕೊಂಡದ್ದರಿಂದ ಇಂದಿರೆಯ ಸಂಶಯವು ದೃಢವಾಗಿ ಮನಸ್ಸಿನಲ್ಲಿಯೇ ವ್ಯಥೆಪಟ್ಟು ತನ್ನ ತಂದೆಯ ಕೂಡ ಮನೆಗೆ ನಡೆದಳು.

"ರಮಾಕಾಂತ, ನಮ್ಮ ಕೂಡ ಬರುವಿರೇನು ? ಎಂದು ಜಯರಾಯನು ಕೇಳಿದನು.

"ಇಲ್ಲ, ತಾವು ದಯಮಾಡಬೇಕು."

"ನಿಮಗಿಲ್ಲಿ ಇನ್ನೂ ಪುಷ್ಕಳ ಕೆಲಸವಿರುವದಲ್ಲವೇ ?" ಎಂದು ಜಯರಾಯನು ಕಣ್ಣುಸನ್ನೆಯಿಂದ ಇಂದಿರೆಯನ್ನು ನೋಡಿ ನುಡಿದನು. ಹೀಗಾಡುವದರಲ್ಲಿ ಜಯರಾಯನ ಉದ್ದೇಶವು ಇಂದಿರೆಯ ಮನಸ್ಸಿನಲ್ಲಿ ರಮಾಕಾಂತನ ವಿರುದ್ಧ ಸಂಶಯ ತುಂಬುವದಿತ್ತು.

ಇವರು ಹೋದ ಮೇಲೆ ಪಂಡಿತೆಯು ಕಮಲೆಗಂದದ್ದು. "ಇಂದಿರೆಯು ಮನೋರಮಳಾದ ತರುಣಿಯಲ್ಲವೇ ?"

"ಇರಬಹುದು. ಇಂಥವರೇ ನಮ್ಮನ್ನು ಮೂಲೆಗುಂಪು ಮಾಡುವವರು."

"ಅದು ಹೇಗೆ ?" ಎಂದು ಪಂಡಿತೆಯು ಪ್ರಶ್ನೆಮಾಡಿದಳು.

"ಇವರಿಗೆ ಬೇಕಾದ್ದನ್ನು ದೈವವು ಕಯ್ಯಲ್ಲಿ ಹಿಡುಕೊಂಡು ನಿಂತಿರುವದು. ಅದಕ್ಕಾಗಿ ಸ್ತ್ರೀಯರಿಗೆ ದುಃಖಗಳೇ ಇಲ್ಲೆಂದು ಇವರ ಮತವು. ಇವರು ಹೀಗಂದ ಕೂಡಲೆ ಪುರುಷರು ಸಂತುಷ್ಟರಾಗಿ ಇವರನ್ನು ಉಭಯಕುಲಭೂಷಣೆಯರೂ, ಪತಿವ್ರತೆಯರೂ, ಗೃಹಲಕ್ಷ್ಮಿಗಳೂ ಎಂದು ಪರಿಪರಿಯಾಗಿ ಹೊಗಳುವರು. ಹೀಗಾದ ಮೇಲೆ ನಮ್ಮಂಥವರನ್ನು ಜನರು 'ಹುಚ್ಚೋ' ಮಾಡಿಬಿಡುತ್ತಾರೆ."

ಈ ಮನೆಗೆ ಬಂದಾಗಿನಿಂದ ರಮಾಕಾಂತನು ಕಮಲೆಯ ಕೂಡ ಮಾತೇ ಆಡಿದ್ದಿಲ್ಲ. ಕಮಲೆಯು ಚಂಡಿಯಾದ್ದರಿಂದ ರಮಾಕಾಂತನು ಇಂದಿರೆಯಲ್ಲಿ ಪಕ್ಷಪಾತವಿಟ್ಟಿರುವನೆಂದು ಗ್ರಹಿಸಿ ಅವನ ಕೂಡ ಮಾತಾಡಲಿಚ್ಛಿಸಿದ್ದಿಲ್ಲ, ತಾನೇ ಕಮಲೆಯನ್ನು ಮಾತಾಡಿಸಲಿಲ್ಲೆಂದು ಕಮಲೆಯೂ ತನ್ನ ಕೂಡ ಮಾತಾಡುವದು

ಮಾನಸಿಕ ಮಾಡಿರುವಳೆಂದು ನಂಬಿ ಅವಳೊಡನೆ ಮಾತಾಡಲು ಮನಸ್ಸು ಮಾಡಿದನು.

"ಇಂದಿರಾಬಾಯಿಯ ವಿಷಯ ನಡೆದದೇನು ?" ಎಂದು ಕೇಳಿದನು.

"ಅವಳ ಮೇಲೆ ರಮಾಕಾಂತರ ಪ್ರೇಮ ಬಹಳ. ಯಾರು ಮಾಡಲಿಕ್ಕಿಲ್ಲ ?" ಎಂದು ಕಮಲೆಯು ಮರ್ಮದ ಮಾತಾಡಿದಳು.

"ಇಂದಿರೆಯು ಲಾವಣ್ಯವತಿಯೂ, ಸದಾಚಾರಸಂಪನ್ನೆಯೂ, ಚತುರೆಯೂ ದಯಾಪರಳೂ, ಇರುವಳು. ಅವಳನ್ನು ಕಂಡು ಯಾರಿಗೆ ಆದರ ಬರಲಿಕ್ಕಿಲ್ಲ!" ಎಂದು ಗಂಭೀರಮುದ್ರೆಯನ್ನು ತಾಳಿ ರಮಾಕಾಂತನು ಮಾತಾಡಿದನು.

"ಇವಳು ಈಗಲೇ ಬಂದುಹೋದ ಆ ಜಹಗೀರದಾರರ ಮಗನ ಹೆಂಡತಿಯಾಗುವಳಲ್ಲವೇ ?" ಎಂದು ಕಮಲೆಯು ರಮಾಕಾಂತನ ಹೃದಯವನ್ನೇ ಭೇದಿಸುವಂಥ ಬಾಣವನ್ನು ಹೊಡೆದಳು.

"ಇದ್ದೀತು. ಏನು ತಪ್ಪಾಯಿತು ?" ಎಂದು ರಮಾಕಾಂತನು ಆದಷ್ಟು ಶಾಂತತೆಯನ್ನು ತಾಳಿ ನುಡಿದನು.

"ಶ್ರೀಕಂಠನ ಮೇಲೆ ಅವಳ ಪ್ರೀತಿಯಿರುವದೇನು ?"

ರಮಾಕಾಂತನು ತನ್ನ ಮನಸ್ತಾಪವನ್ನು ಸ್ವಲ್ಪಾದರೂ ವ್ಯಕ್ತಪಡಿಸಬಾರದೆಂದು ನಿಶ್ಚಯ ಮಾಡಿಕೊಂಡು "ನನಗೆ ಹೇಗೆ ತಿಳಿಯಬೇಕು ? ಸ್ತ್ರೀಯರು ಕೂಡಾ ಪ್ರೀತಿಗೊಳಗಾಗುವರೇನು ?" ಎಂದು ಕೇಳಿದನು.

"ಇಂಥವರಿಗೆಲ್ಲಿಯ ಪ್ರೀತಿ, ಏನು ಕಥೆ! ರೊಕ್ಕಸ್ತರನ್ನೂ ಜಹಗೀರದಾರರನ್ನೂ ಬಯಸುವದಕ್ಕೆ ಪ್ರೀತಿಯೆಂದರೆ ನನ್ನ ಮಾತಿಲ್ಲ. ರಮಾಕಾಂತರೆ, ನೀವು ಜಹಗೀರದಾರರ ಮಕ್ಕಳಾಗಿದ್ದರೆ ಈಗೆಷ್ಟು ಗುಣ ಕೊಡುತ್ತಿತ್ತು ನೋಡಿಕೊಳ್ಳಿರಿ!"

"ಜಹಗೀರದಾರರ ಮಗನಾಗಿ ಹುಟ್ಟಲಿಲ್ಲವೆಂದು ನನಗೆಷ್ಟು ಮಾತ್ರವೂ ಚಿಂತೆಯಾಗಿಲ್ಲ. ಹಾಗೇಕೆ ಬಯಸಬೇಕು ಹೇಳಿರಿ."

"ಹಾಗಾಗಿದ್ದರೆ ಶ್ರೀಕಂಠನ ಕೊರಳಲ್ಲಿ ಹಾಕಬೇಕೆಂಬ ಮಾಲೆಯನ್ನು ಇಂದಿರೆಯು ನಿಮ್ಮ ಕೊರಳಲ್ಲಿ ಹಾಕಿ ಹಳೆಮಾತಾಗುತ್ತಿತ್ತು. ಇದಕ್ಕೂ ನಿಮಗೆ ಮತ್ತೇನು ಬೇಕು ?"

ರಮಾಕಾಂತನು ತಿರಸ್ಕಾರಮುದ್ರೆಯಿಂದ ಕಮಲೆಯನ್ನು ನೋಡಿ ಸುಮ್ಮನಿದ್ದನು.

“ರಾಯರೇ, ನೀವು ಕೋಪಿಸಿಕೊಂಡಂತೆ ಕಾಣುತ್ತದೆ. ಪುರಷರನ್ನು ಸಿಟ್ಟಿ ಗೆಬ್ಬಿಸಿ ಅವರ ಫಜೀತಿ ಮಾಡುವವರಲ್ಲಿಯೇ ನನಗೆ ಪರಮಾನಂದವಾಗುತ್ತದೆ”

“ನಿಮ್ಮ ಮುಂದೆ ಮಾತಾಡಿ ಗೆಲಿಯುವ ಅಭಿಲಾಷೆ ನನಗಿಲ್ಲ. ಈ ಮಾತು ಹೋಗಲಿ ಬಿಡರಿ. ನಿಮ್ಮನ್ನು ಕಂಡು ಇಂದಿರಾಬಾಯಿಗೆ ಬಹಳ ಸಂತೋಷವಾಗಿದೆ ಎಂದು ಅವರು ಹಾಗೆ ನಿಮಗೆ ತಿಳಿಸಲಿಕ್ಕೆ ನನ್ನ ಮುಂದೆ ಹೇಳಿರುವರು.”

“ಹೀಗೋ! ನನ್ನ ಕೂಡ ಮಾತಾಡಿ ಹೋದದ್ದಲ್ಲದೆ ಈ ಸಂದೇಶವನ್ನು ಬೆನ್ನು ಹಚ್ಚಿದರೇನು ?”

“ಏಕೆ ಇದರಲ್ಲೇನಾಯಿತು ?” ಎಂದು ರಮಾಕಾಂತನು ಕೇಳಿದನು,

“ಏನೇನೂ ಇಲ್ಲ. ಅವಳಿಂದ ನಾನು ಉಪಕೃತಳೇ ಆಗಿರುವೆನು. ನೀವು ದಯಮಾಡಿ ನನ್ನದೊಂದು ಸಂದೇಶವನ್ನು ಪಂಚಕನ್ಯೆಯರ ಮಾಲಿಕೆಯಲ್ಲಿ ಪೋಣಿಸಲಿಕ್ಕೆ ಯೋಗ್ಯಳಾದ ನಿಮ್ಮಾ ಸ್ತ್ರೀರತ್ನಕ್ಕೆ ಮುಟ್ಟಿಸುವಿರಾ ?”

“ನಾನು ತೀವ್ರವೇ ಅವಳ ದರ್ಶನಕ್ಕೆ ಹೋಗುವೆನೋ ಇಲ್ಲವೋ ಹೇಳ ಲಾರೆನು.” ಎಂದು ರಮಾಕಾಂತನಂದನು.

“ಪಾಪ! ಭೆಟ್ಟಿಯಾದಾಗ್ಯೆ ತಿಳಿಸಿರಿ.”

“ಸಂದೇಶವಾದರೂ ಏನಿರುವದು ?”

“ಕಮಲೆಗೆ ನಿನ್ನ ಉದಾರ ಆಶ್ರಯ ಬೇಕಾಗಿಲ್ಲ. ನಿಮ್ಮದೂ ಅವಳದೂ ಮಾರ್ಗವೇ ಭಿನ್ನವಾದದ್ದು ; ಅದಕ್ಕಾಗಿ ಕಮಲೆಗೆ ನಿನ್ನ ಸಂಬಂಧ ಬೇಕಾಗಿಲ್ಲ.” ಎಂದು ಕಮಲೆಯು ಅಸಹ್ಯವಾದ ಮತ್ಸರದ ಆವೇಶದಲ್ಲಿ ನುಡಿದಳು.

ಈ ಮಾತು ಕೇಳಿ ರಮಾಕಾಂತನಿಗೆ ಸಖೇದಾಶ್ಚರ್ಯವಾಯಿತು.

“ಕಮಲಾಬಾಯಿ, ಇಂಥ ಸಂದೇಶವನ್ನು ಕಳಿಸುವದು ನಿಜವಾಗಿ ನಿಮ್ಮ ಮನಸ್ಸಿನಲ್ಲಿಲ್ಲ. ನಾನಾದರೂ ಇಂಥ ಸಂದೇಶವನ್ನು ಸರ್ವಥಾ ಹೇಳಲಾರೆನು.”

ಇಷ್ಟಾದ ಬಳಿಕ ಅವರೀರ್ವರೂ ಸುಮ್ಮನೆ ಕುಳಿತರು. ರಮಾಕಾಂತನು ಯೋಚನೆಯಲ್ಲಿ ಕುಳಿತನು. ಕಮಲೆಯು ಇರುಕಳ ಆಕಳಿನಂತೆ ಅವನನ್ನು ನೋಡುತ್ತಿದ್ದಳು. ಆದರೆ ಕಮಲೆಯ ಹೊಟ್ಟೆಯೊಳಗಿನ ಮಾತೇ ಬೇರೆ. ರಮಾ ಕಾಂತನನ್ನು ತನ್ನ ಪಾಶದಲ್ಲಿ ಹಿಡಿಯಬೇಕೆಂದು ಅವಳ ಹವಣಿಕೆ. ಇಂದಿರೆಯ ನಿಂದೆ ಮಾಡಿದರೆ ರಮಾಕಾಂತನ ಮನಸ್ಸು ಅವಳ ಮೇಲಿಂದ ಹಾರುವದೆಂದು ಅವಳ ತರ್ಕವಿತ್ತು. ತನ್ನ ಸ್ವಾತಂತ್ರ್ಯಪ್ರಿಯತೆಯನ್ನು ಪ್ರಕಟಮಾಡಿ ತೋರಿಸಿ ದರೆ ಜನರು ತನ್ನನ್ನು ಮೆಚ್ಚುವರೆಂದು ನಂಬಿ ಅವಳು ಸೆಟೆಯಿಂದ ಮಾತಾಡು

ತ್ತಿದ್ದಳು. ರೋಗಿಯು ಅಪಥ್ಯಗಳನ್ನೇ ಬಯಸಿ ತಿನ್ನುವಂತೆ ಈ ದೈವಹತಳಾದ ಅಬಲೆಯು ತನ್ನ ಅಭೀಷ್ಟಗೆ ವಿಘಾತಗಳಾದ ಮಾತುಗಳನ್ನೇ ಸರ್ವದಾ ಆಡು ತ್ತಿದ್ದಳು. ತನ್ನ ಪ್ರಯತ್ನಗಳೆಲ್ಲಾ ವ್ಯರ್ಥವಾದವೆಂದು ತಿಳಿದು ಕಮಲೆಯು ದುಃಖಿತಳಾದಳು. ಪಂಡಿತೆಯು ಮನೆ ಬಿಟ್ಟು ತನ್ನ ಮನೆಗೆ ಬಂದವಳೇ ಏನೂ ಮಾತಾಡದೆ ಮಲಗಿಕೊಂಡು ರಮಾಕಾಂತನ ಮೋಹಕ ಸ್ವರೂಪವನ್ನು ನೆನಿಸಿ ಅವನು ದುರ್ಲಭನಿರುವನೆಂದು ತಿಳಿದು ಸ್ವರ ತೆಗೆದು ಅಳಲಾರದೆ ಕಂಣೀರ ಧಾರೆ ಯನ್ನು ಕರೆಯುತ್ತಿದ್ದಳು.

ಕಮಲೆಯ ವಿಷಯಕ್ಕೆ ರಮಾಕಾಂತನಿಗೆ ತಿರಸ್ಕಾರ ಹುಟ್ಟಿದ್ದರೂ ಅವಳ ದುಃಸ್ಥಿತಿಯನ್ನು ಪರ್ಯಾಲೋಚಿಸಿ ಇವಳ ವಿಚಾರಗಳನ್ನು ತಿದ್ದುವವರು ಯಾರಾದರೂ ಇದ್ದರೆ ಅವಳು ಸನ್ಮಾರ್ಗಕ್ಕೆ ಹತ್ತುವ ಸಂಭವವಿತ್ತು. ತಾನು ಬಡವೆ ಯಾಕೆ, ಅನ್ಯರು ಶ್ರೀಮಂತರೇಕೆಂಬ ಮತ್ಸರದಿಂದಲೇ ಅವಳ ವಿಚಾರಗಳು ಕೆಟ್ಟುಹೋಗಿರಬೇಕು. ಈ ಮತ್ಸರದಿಂದ ಗ್ರಸ್ತರಾಗದವರಾರು ? ಸಂಸ್ಥಾನಿಕರು ಸಾರ್ವಭೌಮರ ಅಧಿಕಾರವನ್ನು ಕಂಡು ಮತ್ಸರಪಡುವರು, ಪರಾಜಿತರು ವಿಜಯಿ ಗಳ ಉಬ್ಬು ಕಂಡು ಮತ್ಸರಪಡುವರು. ಶ್ರೀಕಂಠನಿಗೆ ದೈವವು ಅನುಕೂಲವಿರುವ ದನ್ನು ಕಂಡು ಪ್ರತ್ಯಕ್ಷ ನಾನೇ ಮತ್ಸರ ಪಡುತ್ತೇನೆ. ಕಮಲೆಯ ಮನಸ್ಸು ಅಸಂಸ್ಕೃತವಾದದ್ದು, ಮೇಲಾಗಿ ಅವಳು ಅಬಲೆಯು. ಅವಳು ತನ್ನ ಬಾಯಿಂದ ಆಡಿ ತನ್ನ ಮತ್ಸರಭಾವವನ್ನು ವ್ಯಕ್ತಪಡಿಸುವಳು. ನಮ್ಮಂಥವರು ಈ ಆರನೇ ವೈರಿಯನ್ನು ಹೊಟ್ಟೆಯಲ್ಲಿ ಬಚ್ಚಿಟ್ಟುಕೊಂಡಿರುತ್ತೇವೆ. ಇಷ್ಟೇ ಹೆಚ್ಚು ಕಡಿಮೆ ಯೆಂದು ವಿಚಾರಮಾಡುತ್ತ ತನ್ನ ಮನೆಗೆ ಬಂದನು.

ರಮಾಕಾಂತನು ಮನೆಗೆ ಬಂದ ಮೇಲೆ ಹಸಿವೆ ನೀರಡಿಕೆಗಳ ಪರಿವೆ ಇಲ್ಲದೆ ತನ್ನ ಪಲ್ಲಂಗದ ಮೇಲೆ ಹೋಗಿ ಬಿದ್ದುಕೊಂಡನು. ಆದರೆ ಕಾಮಪೀಡಿತರಿಗೆ ನಿದ್ರೆ ಯಲ್ಲಿಯದು ! ಕತ್ತಲೆಯಲ್ಲಿ ತನ್ನ ಮೈ ತನಗೆ ಕಾಣಿಸದಿದ್ದರೂ ಇಂದಿರೆಯ ದಿವ್ಯ ಸ್ವರೂಪವು ರಮಾಕಾಂತನ ಮಾನಸಿಕ ದೃಷ್ಟಿಗೆ ನಿಚ್ಚಳವಾಗಿ ಕಾಣಿಸುತ್ತಿತ್ತು. ಅವಳ ನಿಲ್ಪಿಕೆಯೂ. ಕಾಂತಿಮಯವಾದ ಮೈಬಣ್ಣವೂ, ಮಧುರ ಸ್ಮಿತದಿಂದೊಪ್ಪುವ ಅವಳ ಮುದ್ದು ಮುಖವೂ. ಮದನಬಾಣದಂತೊಪ್ಪುವ ಆವಳ ಕಟಾಕ್ಷವೂ, ನೀಲಚ್ಛವಿಯ ಕೇಶಕಲಾಪವೂ, ಅವಳು ಕೋಮಲಾಂಗುಲಿಯಲ್ಲಿಟ್ಟ ಮಿನುಗುವ ಪಚ್ಚದ ಉಂಗುರವೂ, ಸೂಕ್ಷ್ಮವಾದ ದುಕೂಲದೊಳಗಿಂದ ಕಾಣುವ ಮುಗಿಲಂ ಬಣ್ಣದ ಜರತಾರಿ ಕುಪ್ಪಸವೂ, ಆ ಕಗ್ಗತ್ತಲೆಯಲ್ಲಿ ಕಣ್ಣಿಗೆ ಕಟ್ಟಿದಂತೆ ಕಾಣಿಸು

ತ್ತಿದ್ದವು. "ಇಂದಿರಾ, ಪ್ರಿಯ ಇಂದಿರಾ, ಅಜ್ಞನಾದ ಶಸ್ತ್ರವೈದ್ಯನಂತೆ ನನ್ನ ಹೃದಯವನ್ನು ಸೀಳಿ ಕಡೆಗೆ ಕೈಬಿಟ್ಟು ನಡೆದಿಯಲ್ಲವೆ! ಶ್ರೀಕಂಠಾ! ಹುಲ್ಲು ಶ್ರೀಕಂಠಾ! ನನ್ನ ಪಂಚಪ್ರಾಣಗಳಾದ ಮೋಹನಾಂಗಿಯನ್ನು ನೀನು ಸೆಳೆಕೊಂಡು ಹೋಗಿ ಯಥೇಚ್ಛವಾಗಿ ಮೆರೆಯುವಿಯಲ್ಲವೆ! ರಂಗರಾಯನಿಗೆ 'ಇನ್ನೂ ಆಶಾಂತಂತುವಿದೆ' ಎಂದು ಮೊನ್ನೆಯೇ ಹೇಳಿದೆನು. ಅದೀಗ ಸಮೂಲ ಕಡಿದು ಹೋಯಿತು. ಸಾಕು! ಸಾಕು! ಇನ್ನೀ ಪ್ರತಿಷ್ಠೆ ಏಕೆ, ಹಣವೇಕೆ, ಸ್ನೇಹಿತರೇಕೆ? ನಾಳಿಗೇ ನಮ್ಮ ಪ್ರಸ್ಥಾನ ಕಟ್ಟತಕ್ಕದ್ದು. ಇನ್ನೇನು! ಇಂದಿರಾ ಶ್ರೀಕಂಠರ ತಲೆ ಮೇಲೆ ಅಕ್ಷತೆಗಳನ್ನು ಹಾಕಲಿಕ್ಕೆ ಬೆಂಗಳೂರಲ್ಲಿ ನಿಲ್ಲಬೇಕೇನು! ಹೀಗೆ ಅನೇಕ ವಿಧವಾಗಿ ಪ್ರಲಾಪಿಸುತ್ತ ಮಲಗಿಕೊಂಡ ರಮಾಕಾಂತನ ಕಣ್ಣಿಗೆ ಕಣ್ಣು ಯಾವಾಗ ಹತ್ತಿತೋ ತಿಳಿಯದು.

ಇಂದಿರೆಯನ್ನು ಪ್ರೀತಿಸದಿರುವುದು ನನ್ನ ವಶದ ಮಾತಲ್ಲ

ನಿನ್ನಿನ ದಿವಸ ಪಂಡಿತೆಯ ಮನೆಯಲ್ಲಿ ತಾನಿಚ್ಛಿಸಿದಂತೆ ಸರ್ವವೂ ಸುಸೂತ್ರ ವಾಗಿ ಸಾಗಿತೆಂದು ಜಯರಾಯನು ಹಿಗ್ಗಿದ್ದನು. ಶ್ರೀಕಂಠನ ಮಹತ್ ಕುಲದಲ್ಲಿಯ ಜನ್ಮವೂ, ಅವನ ತಾರುಣ್ಯವೂ, ಅವನಿಗೆ ಮೊನ್ನೆ ದೊರೆತ ಅಧ್ಯಕ್ಷತೆಯೂ ಇಂದಿರೆಯ ಮನಸ್ಸಿನಲ್ಲಿ ಬಿಂಬಿಸಿರಬಹುದು. ಈ ದಿವಸ ಶ್ರೀಕಂಠನು ಸಾಯಂಕಾಲ ದಲ್ಲಿ ಬಂದನಂದರೆ ಅವನ ಮಾತುಗಳಿಗೆ ಅವಳು ಒಪ್ಪಿಕೊಳ್ಳುವಳೆಂದು ಜಯ ರಾಯನು ನಿಶ್ಚಯವಾಗಿ ತಿಳುಕೊಂಡಿದ್ದನು. ತಾನು ಜಹಗೀರದಾರರ ಸಂಬಂಧಿ ಕನು ಈಗಲೇ ಆಗಿರುವೆನೆಂದು ಗ್ರಹಿಸಿಕೊಂಡು ತನ್ನ ಕುರ್ಚಿಯಲ್ಲಿ ಸೆಟಕೊಂಡು ಕುಳಿತಿದ್ದನು. ಅಷ್ಟರಲ್ಲಿ ರಮಾಕಾಂತನು ಬಂದಿರುವನೆಂದು ಸೇವಕನು ಸೂಚನೆ ಕೊಟ್ಟನು. ನಿತ್ಯದಲ್ಲಿಯೂ ಅಪ್ಪಣೆಯ ಆವಶ್ಯಕತೆಯಿಲ್ಲದೆ ಬಂದು ಹೋಗುವ ಈ ತರುಣನಿಗೆ ಈ ದಿವಸ ಅಪ್ಪಣೆ ಏಕೆ ಬೇಕಾಯಿತೆಂದು ಯೋಚಿಸುತ್ತ ರಮಾ ಕಾಂತನನ್ನು ತನ್ನ ಕೋಣೆಗೆ ಕರಿಸಿಕೊಂಡನು.

"ಬನ್ನಿರಿ ರಮಾಕಾಂತರಾವ್, ಮೊದಲಿನಂತೆ ನಮ್ಮ ಮೇಲೆ ನಿಮ್ಮ ದಯವಿದ್ದಂತೆ ಕಾಣುವದಿಲ್ಲ. ಇಲ್ಲಿ ಬರುವದಕ್ಕೆ ನಿಮಗೆ ಅಪ್ಪಣೆಯು ಅವಶ್ಯಕತೆ ಯಿರುವದೋ!"

ರಮಾಕಾಂತನು ಚಿಂತಾಕ್ರಾಂತನಂತೆ ಕಾಣುತ್ತಿದ್ದನು. ಜಯರಾಯನು ತನ್ನ ಮನೋರಾಜ್ಯದಲ್ಲಿದ್ದುದರಿಂದ ಅವನು ರಮಾಕಾಂತನ ಮುಖವನ್ನು ನಿರೀಕ್ಷಿಸಿ

ನೋಡಲಿಲ್ಲ.

“ಅಪ್ಪಣೆಯ ಅಗತ್ಯವಿಲ್ಲ ಸತ್ಯ. ಆದರೆ ನನಗೆ ವಿಶೇಷ ಅವಕಾಶವಿಲ್ಲ. ನೀವು ಕೆಲಸದಲ್ಲಿದ್ದರೆ ಮರಳಿ ಹೋಗಬೇಕೆಂದು ಮಾಡಿದ್ದೆನು.”

“ಏನಾದರೂ ಆಗತ್ಯವಾದ ಕೆಲಸವಿರುವದೇನು ?”

“ಕೆಲವೊಂದು ಮಾತು ತಮಗೆ ನಿವೇದಿಸಬೇಕೆಂದು ಯೋಚಿಸುತ್ತಿದ್ದೆನು.” ಎಂದು ರಮಾಕಾಂತನಂದನು.

“ಏನು ಹೇಳಿರಿ. ಸಂಕೋಚ ಮಾಡಿಕೊಳ್ಳಬೇಡಿರಿ.”

“ಸ್ವಲ್ಪ ಮಹತ್ವದ ಮಾತಿದೆ ; ಅದಕ್ಕಾಗಿ ಹೇಳಲಿಕ್ಕೆ ಹೆದರಿಕೆ ಬರುತ್ತದೆ.”

“ನನ್ನ ಮುಂದೆ ಹೇಳಲಿಕ್ಕೆ ಹೆದರಿಕೆಯೇ ?” ಎಂದು ಆಶ್ವಾಸನದೊಂದಿಗೆ ಜಯರಾಯನು ನುಡಿದನು,

“ನೀವು ನನ್ನ ಮೇಲೆ ಬಹಳ ಮಮತೆ ಮಾಡುತ್ತೀರಿ. ಆದರೂ ಹೇಳಲಿಕ್ಕೆ ಸ್ವಲ್ಪ ಸಂಕೋಚ ಬರುತ್ತದೆ. ಅಭಯವಿದ್ದರೆ ಹೇಳುತ್ತೇನೆ.”

ಕಮಲೆಯ ಕೂಡ ಲಗ್ನ ನಿಶ್ಚಯ ಮಾಡಿರುವನೇನೆಂದು ಜಯರಾಯನು ಯೋಚಿಸಿ “ರಮಾಕಾಂತ, ನನ್ನ ಮುಂದೆ ಹೇಳಲಿಕ್ಕೆ ತಿಲಮಾತ್ರವೂ ಸಂಕೋಚ ಮಾಡಿಕೊಳ್ಳಬೇಡಿರಿ.” ಎಂದು ಹೇಳಿದನು.

“ಸಂಕೋಚವೇನೂ ಇಲ್ಲ. ನಾನಿಲ್ಲಿಗೆ ಬಂದದ್ದೇ ಆ ಮಾತು ಹೇಳಲಿಕ್ಕೆ. ಆದರೂ ಧೈರ್ಯ ಸಾಲಲೊಲ್ಲದು” ಎಂದು ರಮಾಕಾಂತನಂದನು.

“ನಾನಿನ್ನೇನು ಹೇಳಲಿ ! ನಿಮ್ಮ ತಂದೆಯವರ ಮುಂದೆ ಹೇಳಬಹುದಾದ ಮಾತು ನನ್ನ ಮುಂದೆ ಹೇಳಲಭ್ಯಂತರವಿಲ್ಲ.”

“ನಾನು ಈ ಪ್ರಾಂತವನ್ನು ಬಿಟ್ಟು ಹೋಗತಕ್ಕ ವಿಚಾರ ಮಾಡಿದ್ದೇನೆ.”

ಜಯರಾಯನು ವಿಸ್ಮಿತನಾಗಿ “ಏನು ! ಈ ಪ್ರಾಂತವನ್ನು ಬಿಟ್ಟೇಕೆ ಹೋಗುವಿರಿ ?” ಎಂದು ಕೇಳಿದನು.

“ಇಲ್ಲಿರುವದು ನನಗೆ ದುಃಸಹವಾಗಿದೆ. ಇದರ ಕಾರಣವು ನಿಮಗೆ ತಿಳಿದಿಲ್ಲಾದರೆ ನಾನು ಹೇಳಿಯೇ ತೀರಬೇಕಲ್ಲ !”

“ರಮಾಕಾಂತರೆ, ನಿಮಗಿಲ್ಲಿರುವದು ದುಃಸಹವಾಗಿರುವುದನ್ನು ಕೇಳಿ ನನಗೆ ವಿಷಾದವಾಯಿತು. ಇನ್ನು ನೀವು ನಿಮ್ಮ ಪ್ರಸ್ತಾವನೆಯನ್ನು ಸಾಕುಮಾಡಿ ಬೇಗನೆ ನಿಮ್ಮ ಕಥೆ ಪ್ರಾರಂಭ ಮಾಡಿರಿ.”

“ರಾಯರೆ, ಇದರಲ್ಲೇನಾದರೂ ನನ್ನ ತಪ್ಪಿದ್ದರೆ ಕ್ಷಮೆ ಮಾಡಿರಿ.

ಪ್ರಥಮದರ್ಶನಾರಭ್ಯ ನಿಮ್ಮ ಇಂದಿರಾಬಾಯಿಯ ಗುಣರೂಪಗಳನ್ನು ಕಂಡು ನಾನು ಪ್ರೇಮಪಾಶದಲ್ಲಿ ಸಿಕ್ಕಿರುವೆನು. ಇಂದಿರಾಬಾಯಿಯ ಪರಿಚಯು ಹೆಚ್ಚೆಚ್ಚು ಆದ ಹಾಗೆ ನನ್ನ ಪ್ರೇಮವಾದರೂ ಬೆಳೆಯುತ್ತ ನಡೆಯಿತು. ನಾನೀಗ ಕೇವಲ ಪ್ರೀತಿಪರವಶನಾಗಿರುವೆನು. ಇಂದಿರಾಬಾಯಿಯು ಕೂಡ ನನ್ನ ವಿವಾಹವಾಗದಿದ್ದ ಪಕ್ಷದಲ್ಲಿ ದೇಶತ್ಯಾಗದ ಹೊರ್ತು ನನಗೆ ಅನ್ಯಗತಿಯೇ ಇಲ್ಲ."

ಈ ಮಾತು ಕೇಳಿ ಜಯರಾಯನಿಗೆ ಬಹಳ ಕೋಪ ಬಂದಿತು. ಅವನು ತನ್ನ ಕಯ್ಯಲಿದ್ದ ಪುಸ್ತಕವನ್ನು ಮೇಜಿನಮೇಲಪ್ಪಳಿಸಿ ರಮಾಕಾಂತನನ್ನು ದಿಟ್ಟಿಸಿ ನೋಡಹತ್ತಿದನು. ರಮಾಕಾಂತನು ತನ್ನ ವೃತ್ತಾಂತ್ತವನ್ನು ಮುಂದೆ ಸಾಗಿಸಿದನು.

"ಮಹನೀಯರೆ, ನಾನು ಬಡಬಡಿಸುವದು ಕೇಳಿ ನಿಮಗೆ ಕೋಪ ಬಂದೇ ಬರುವದೆಂದು ನಾನು ಕಟ್ಟಿಕೊಂಡೇ ಇದ್ದೆನು. ಇಂದಿರಾಬಾಯಿಯ ಪ್ರಾಪ್ತಿಯಾದರೂ ದುರ್ಲಭವಾದದ್ದೆಂದು ನನಗೆ ಗೊತ್ತೇ ಇತ್ತು. ಅದಕ್ಕಾಗಿಯೇ ನಾನು ನನ್ನ ಪ್ರೇಮವನ್ನು ನುಂಗಿಕೊಂಡು, ಇಂದಿರಾಬಾಯಿಯ ಪ್ರಾಪ್ತಿಯ ಹಂಬಲ ಬಿಟ್ಟುಕೊಡುವದಕ್ಕೆ ನನ್ನಾತ್ಮಕ್ಕೆಷ್ಟು ಪರಿಯಾಗಿ ಬೋಧಿಸಿದರೂ ಪ್ರಯೋಜನವಾಗಲಿಲ್ಲ. ಇಂದಿರಾಬಾಯಿಯ ಮುಂದೆ ನನ್ನ ದುಃಖವನ್ನು ತೋಡಿಕೊಂಡರೂ ಬರುವಂತಿತ್ತು. ಆದರೆ ಹಾಗೆ ಮಾಡಿದರೆ ಆ ಕೋಮಲ ಹೃದಯಳಿಗೆ ದುಃಖವಾದೀತೆಂದು ನನ್ನ ಪ್ರೇಮದ ವಾರ್ತೆಯು ಕರ್ಣೋಪಕರ್ಣ ದಿಂದಾದರೂ ಆ ಲಲನೆಗೆ ತಿಳಿಯಬಾರದಷ್ಟು ವ್ಯವಸ್ಥೆ ಮಾಡಿದ್ದೇನೆ, ನಿಮ್ಮ ಮುಂದಾದರೂ ಹೇಳುವದರಲ್ಲಿ ಅರ್ಥವಿಲ್ಲ. ಆದರೂ ನೀವು ನನ್ನ ಪಾಲಕರೆಂದು ಮನ್ನಿಸಿ ದೇಶತ್ಯಾಗ ಮಾಡುವ ಪೂರ್ವದಲ್ಲಿ ನಾನು ಹಾಗೆಯೇಕೆ ಮಾಡುವನೆಂಬು ದನ್ನು ನಿಮಗರಿಕೆ ಮಾಡಿಕೊಂಡು ನನ್ನ ಮಾರ್ಗವನ್ನು ನಾನು ಕಂಡುಕೊಳ್ಳುವದು ವಿಹಿತವೆಂದೆಣಿಸಿ ಇದನೆಲ್ಲಾ ಹೇಳಿದೆನು. ನನ್ನ ವರ್ತನದಲ್ಲೇನಾದರೂ ಅನುಚಿತ ವಾದದ್ದಿದ್ದರೆ ನನ್ನ ಪದರಿಗೆ ಹಾಕಿ ನನ್ನ ಕಿವಿಗೆ ನೀವು ಹರಳು ಹಚ್ಚಲಿಕ್ಕಭ್ಯಂತರ ವಿಲ್ಲ."

ರಮಾಕಾಂತನು ಹೀಗೆ ಸ್ಪಷ್ಟೀಕರಿಸಿ ಮಾತಾಡಿದ್ದು ಕೇಳಿ ಜಯರಾಯನಿಗೆ ಸಮಾಧಾನವಾಯಿತು. ಇಂದಿರೆಯ ಮೇಲೆ ಈ ತರುಣನು ಪ್ರೀತಿಯಿಟ್ಟದ್ದು ಅವಳಿಗೆ ತಿಳಿಯದಿದ್ದದ್ದು ಕೇಳಿ ಜಯರಾಯನಿಗೆ ದೊಡ್ಡದೊಂದು ಭಾರ ಇಳಿ ದಂತಾಯಿತು.

"ರಮಾಕಾಂತರೇ, ನಿಮ್ಮ ಮೇಲೆ ಕೋಪಿಸಿಕೊಳ್ಳುವದಕ್ಕೆ ಏನೂ ಕಾರಣ

ವಿಲ್ಲ. ನಾನೇ ನಿಮ್ಮ ಸ್ಥಿತಿಯಲ್ಲಿದ್ದರೆ ನಿಮ್ಮಷ್ಟು ಮನೋನಿಗ್ರಹ ಮಾಡುವದು ನನ್ನಿಂದಾಗುತ್ತಿತ್ತೋ, ಇಲ್ಲವೋ ಹೇಳಲಾರೆನು. ಆದರೂ ಇಂದಿರೆಯನ್ನು ನಿಮಗೆ ಕೊಡುವದು ಕೆಲವು ಕಾರಣಗಳಮೂಲಕ ನನಗೆ ಸರಿಯಾಗಿ ತೋರುವದಿಲ್ಲ. ನೀವು ಇಂದಿರೆಯ ಪಾಣಿಗ್ರಹಣ ಮಾಡಲಿಕ್ಕೆ ಅಯೋಗ್ಯರೆಂದು ನಾನನ್ನುವದಿಲ್ಲ. ಆದರೆ ಶ್ರೀಕಂಠಬಹದ್ದರನಿಗೆ ಅವಳನ್ನು ಕೊಡುವದು ಗೊತ್ತಾದಂತಿದೆ."

"ಇಷ್ಟು ನನಗೆ ಮೊದಲೇ ತಿಳಿದಿತ್ತು. ಇಂದಿರೆಯನ್ನು ನನಗೆ ಕೊಡುವಿರೇನೆಂದು ನಾನು ನಿಮ್ಮನ್ನು ಕೇಳಲಿಕ್ಕೆ ಬಂದಿಲ್ಲ. ನಾನು ದೇಶತ್ಯಾಗ ಮಾಡುವ ಕಾರಣ ಹೇಳಲಿಕ್ಕೆ ಮಾತ್ರ ಬಂದಿದ್ದೆನು ಇನ್ನು ನನ್ನ ಕೆಲಸವಾಯಿತು. ಅಪ್ಪಣೆ ಕೊಡಿರಿ. ಬರುತ್ತೇನೆ." ಎಂದು ಹೇಳಿ ರಮಾಕಾಂತನು ರಭಸದಿಂದೆದ್ದನು.

"ಸ್ವಲ್ಪ ತಡೆಯಿರಿ. ನಾನು ನಿಮಗೊಂದು ಉಪದೇಶ ಮಾತು ಹೇಳುತ್ತೇನೆ. ಪ್ರೀತಿಪರವಶರಾದವರಿಗೆ ಈಗಲೇ ನನ್ನ ಮಾತಿನ ಮೇಲೆ ನಂಬಿಗೆಯಾಗದು. ನೀವು ತರುಣರು. ಇಂದಿರೆಯಿಲ್ಲ ಇನ್ನೊಬ್ಬ ಸುಂದರ ಸ್ತ್ರೀಯಳು ನಿಮ್ಮ ಪತ್ನಿಯಾಗಲಿಕ್ಕೆ ತಪಸ್ಸು ಮಾಡುತ್ತಿರುಬಹುದೀತು. ಕೆಲವು ದಿವಸಗಳಾದ ಮೇಲೆ ಈ ಪ್ರೇಮವನ್ನೇಕೆ, ಇಂದಿರೆಯನ್ನೇ ಮರೆತುಬಿಡುವಿರಿ, ನೀವು ದೇಶತ್ಯಾಗದ ಹವ್ಯಾಸ ಬಿಟ್ಟುಗೊಟ್ಟು ಧೈರ್ಯದಿಂದ ನಿಮ್ಮ ಉದ್ಯೋಗ ನಡಿಸಿದರೆ ನಿಮಗೆ ಸಂಸಾರದಲ್ಲಿ ನಿಜವಾದ ಸುಖವು ದೊರಕುವದು." ಎಂದು ಜಯರಾಯನು ರಮಾಕಾಂತನ ಮೇಲೆ ಮಮತೆಯಿದ್ದವನಂತೆ ಮಾತಾಡಿದನು.

ರಮಾಕಾಂತನು ಇಂದಿರೆಯ ಮೇಲೆ ಮನಸಿಟ್ಟದ್ದು ಜಯರಾಯನಿಗೆ ತಿಳಿದಿದ್ದಿಲ್ಲ. ಆದರೆ ಇಂದಿರೆಯು ಮಾತ್ರ ರಮಾಕಾಂತನಲ್ಲಿ ಸಂಪೂರ್ಣವಾಗಿ ಪ್ರೇಮವಿಡದಿದ್ದರೂ ಅವನ ಗುಣಗಳಿಗೆ ಲುಬ್ಧಳಾಗಿರುವಳೆಂಬ ಸಂಗತಿಯು ನಿಃಸಂಶಯವಾಗಿ ತಿಳಿದಿತ್ತು. ಇಂದಿರೆಯು ಈಗಿಲ್ಲ ನಾಳೆಯಾದರೂ ರಮಾಕಾಂತನ ಮೇಲೆ ಅನುರಕ್ತಳಾಗುವದು ಫಲಿತಾರ್ಥವೇ ಎಂದು ಜಯರಾಯನು ಕಂಡುಕೊಂಡಿದ್ದನು. ರಮಾಕಾಂತನ ಮನೋಗತದ ಗಾಳಿಯು ಸ್ವಲ್ಪಾದರೂ ಇಂದಿರೆಗೆ ಸೋಕಿದ್ದರೆ ಸಾಕು. ತನ್ನ ಸಂಕಲ್ಪಗಳೆಲ್ಲಾ ಈ ಮೊದಲೇ ಬಿರುಗಾಳಿಯಿಂದ ರವದೆಯ ರಾಶಿಯು ಹಾರಿಹೋದಂತಾಗುತ್ತಿದ್ದವು. ಆದುದರಿಂದ ರಮಾಕಾಂತನ ಮಾತಿನಲ್ಲಿ ಜಯರಾಯನಿಗೆ ಪೂರ್ಣ ವಿಶ್ವಾಸ ಹುಟ್ಟಿ ಅವನು ಪ್ರಸನ್ನಮನಸ್ಸಿನಿಂದ ಉಪದೇಶ ಹೇಳತೊಡಗಿದನು.

ಆದರೆ ಇಂಥ ಉಪದೇಶಗಳು ಕಾಮಾರ್ತರಿಗೆ ರುಚಿಸುವದುಂಟೇ ! ರಮಾ

ಕಾಂತನು ಜಯರಾಯನ ಉಪದೇಶ ಕೇಳಿ ತಿರಸ್ಕಾರ ಹೊಂದಿ "ಜಯರಾಯರೇ, ನೀವು ಕೇವಲ ಕಾಮುಕರ ಮಾತು ಹೇಳುತ್ತೀರಿ, ಅಂಥ ಜನರಿಗೆ ಈ ಸ್ತ್ರೀಯಳಿಲ್ಲ ದಿದ್ದರೆ ಅನ್ಯಳಾದರೂ ಸಾಗುವಳು. ನಿಜವಾದ ಪ್ರೇಮದ ಮಾತು ಹಾಗಿರುವದಿಲ್ಲ. ಈ ಪ್ರೇಮಾಂಕುರವನ್ನು ಕಿತ್ತಿ ತೆಗೆದರೆ ಅದು ಅನ್ಯ ಸ್ಥಳದಲ್ಲಿ ನಾಟದು." ಎಂದು ನುಡಿದನು.

"ರಮಾಕಾಂತರೇ, ಇನ್ನೊಂದು ಮಾತು ನಿಮ್ಮ ಧ್ಯಾನದಲ್ಲಿ ಬರಲಿಲ್ಲ. ಇಂದಿರೆಗೆ ಪ್ರೀತಿಯೆಂಬುವದೇನು ಗೊತ್ತೇ ಇಲ್ಲ. ಶ್ರೀಮಂತರ ಸತಿಯಾಗಿ ದೊಡ್ಡಸ್ತಿಕೆ ಪಡೆಯಬೇಕೆಂಬುದೇ ಅವಳ ಸಂಕಲ್ಪವಿದ್ದಂತೆ ನನಗಂತೂ ಕಾಣು ತ್ತದೆ. ಕಾದಂಬರಿಗಳಲ್ಲಿ ಕಂಡುಬರುವಂಥ ಪ್ರೀತಿ ನಿಮ್ಮದು. ಕೇವಲ ಪ್ರತಿಷ್ಠಾ ಪ್ರಿಯಳು ಇಂದಿರೆಯು. ಇಂಥವಳನ್ನು ಲಗ್ನಮಾಡಿಕೊಂಡರೆ ನಿಮಗೆ ಸರ್ವಥಾ ಸುಖವಾಗಲರಿಯದು. ನನ್ನ ಮಗಳ ದುರ್ಗುಣಗಳನ್ನು ನಾನೇ ಬೈಲಿಗೆ ತರತಕ್ಕ ದ್ದಲ್ಲ. ಆದರೆ ಮನೇದೀಪವೆಂದು ಮುದ್ದು ಕೊಡಕೂಡದಲ್ಲಷ್ಟೇ ? ನೀವು ನನ್ನ ಸ್ನೇಹಿತನ ಮಕ್ಕಳೆಂದಂದು ಇದನ್ನೆಲ್ಲಾ ಬಿಚ್ಚಿ ಹೇಳಬೇಕಾಯಿತು. ಮುಂದಾದರೂ ನೀವು ವಿಚಾರ ಮಾಡತಕ್ಕದ್ದೇನಂದರೆ, ನೀವು ಹೇಳುವಂಥ ಪ್ರೀತಿಯು ಕೇವಲ ಕಾಲ್ಪನಿಕವಾದದ್ದು. ಕೇವಲ ಪ್ರೇಮಕ್ಕಾಗಿ ಧನೈಶ್ವರ್ಯಗಳನ್ನೊದ್ದು ಪ್ರಾಣ ನಾಥನೊಡನೆ ಕಾಂತಾರದಲ್ಲಿಯೇ ಸುಖ ಹೊಂದುವೆನೆಂಬ ಮಾನಿನಿಯರ ಹೆಸರು ಗಳನ್ನು ಕಥೆಕಾದಂಬರಿಗಳಲ್ಲಿಯೇ ಕೇಳುತ್ತೇವೆ, ಹೊರ್ತು ಅಂಥವರನ್ನು ಈ ಜೀವ ಲೋಕದಲ್ಲಿ ಯಾರೂ ಕಂಡಿಲ್ಲ,

ಜಯರಾಯನ ಕೃತ್ರಿಮ ನಿರೂಪಣವನ್ನು ಕೇಳಿ ರಮಾಕಾಂತನಿಗೆ ಸಂತಾಪ ವಾಯಿತು. ಆದರೂ ಸಮಾಧಾನವನ್ನು ತಾಳಿ ಆ ತರುಣನಂದದ್ದು :

"ಇಂದಿರೆಯನ್ನು ಪ್ರೀತಿಸದಿರುವದು ನನ್ನ ವಶದ ಮಾತಲ್ಲ. ನಿಮ್ಮ ಪ್ರೀತಿಯ ಮೀಮಾಂಸೆಯು ನನಗೆ ಬೇಕಾಗಿಲ್ಲ. ಇಂದಿರೆಯ ಗುಣಗಳನ್ನು ನಾನು ಸಂಪೂರ್ಣವಾಗಿ ಬಲ್ಲೆನು, ನೀವು ಅವಳನ್ನು ಕಾಳುಗೆಡೆದರೇನಾಗುವದು ? ಹೆಚ್ಚಿಗೆ ಮಾತಾಡಿ ಫಲವಿಲ್ಲ. ಅಪ್ಪಣೆ ಕೊಡಿರಿ."

ಜಯರಾಯನು ಎದ್ದು ನಿಂತು ರಮಾಕಾಂತನ ಭುಜದ ಮೇಲೆ ಕಯ್ಯಿಟ್ಟು "ರಮಾಕಾಂತರಾವ, ನಾಳೆ ನಾಡದ ನನಗೆ ನೀವು ಭೆಟ್ಟಿಯಾಗಿರಿ. ಇನ್ನೂ ಕೆಲವು ಮಾತು ಹೇಳಬೇಕಾಗಿದೆ. ಈಗ ನೀವು ಆವೇಶದಲ್ಲಿರುವಿರಿ. 'ಸಹಸಾ ವಿದಧೀತ ನ ಕ್ರಿಯಾಂ' ಎಂಬ ಅಮೂಲ್ಯವಾದ ಶ್ಲೋಕದ ಕಥೆಯನ್ನು ನೀವೇ ಹೇಳುತ್ತಿದ್ದಿ

ರಲ್ಲಾ! ಅದೇ ಶ್ಲೋಕವನ್ನು ನೀವು ಮತ್ತೆ ಪಠಿಸಿರಿ. ನಿಮ್ಮಂಥ ಸಜ್ಜನರಿಗೆ ನಾನು ಹೇಳುವದವಶ್ಯವದೆಂತಲ್ಲ."

"ನನ್ನ ಗುಣಾನುವರ್ಣನೆ ಮಾಡಬೇಡಿರಿ. ನೀವು ಹೇಳಿದ ಮೇರೆಗೆ ಮತ್ತೆ ನಿಮ್ಮ ದರ್ಶನಕ್ಕೆ ಬರುವೆನು. ನಾನು ಇನ್ನೊಂದು ಮಾತು ಹೇಳಲಿಕ್ಕೆ ಮರೆತೆನು. ಈಗ ನಾನು ವ್ಯಕ್ತಪಡಿಸಿದ್ದನ್ನು ನೀವು ಇಂದಿರಾಬಾಯಿಯವರಿಗೆ ತಿಳಿಸತಕ್ಕದ್ದಲ್ಲ. ಕಂಡಿರೋ ?"

"ಅದರ ಚಿಂತೆಯನ್ನೇ ಬಿಡಿರಿ" ಎಂದು ಹೇಳಿ ಜಯರಾಯನು ರಮಾಕಾಂತನ ನಮಸ್ಕಾರ ಸ್ವೀಕರಿಸಿದನು.

ಶ್ರೀಕಂಠನು ಹೇಳಿದ್ದು, ನಿಜವೋ ?

ಇಂದಿರೆಯು ಶ್ರೀಕಂಠನನ್ನು ವರಿಸುವಳೋ ಇಲ್ಲವೋ ಎಂಬದನ್ನು ಅದೇ ದಿವಸ ಸಾಯಂಕಾಲದಲ್ಲಿ ಜಯರಾಯನಿಗೆ ತಿಳಕೊಳ್ಳಬೇಕಾಗಿತ್ತು. ಇಂಥ ಸಂಧಿಯಲ್ಲಿ ರಮಾಕಾಂತನು ಆಕಸ್ಮಾತ್ತಾಗಿ ಊರುಬಿಟ್ಟು ನಡೆದನೆಂದರೆ, ತನಗೋಸ್ಕರವಾಗಿಯೇ ಅವನು ದೇಶತ್ಯಾಗ ಮಾಡಿದನೆಂದು ಇಂದಿರೆಗೆ ತಿಳಿದು ಈ ಪರಿಯಾಗಿ ತನ್ನನ್ನು ಪ್ರೀತಿಸುವ ಸುಂದರನಾದ ತರುಣನ ಮೇಲೆ ಅವಳ ಪ್ರೇಮವು ಉದ್ಭವಿಸಿ ತನ್ನ ಸಂಕಲ್ಪಕ್ಕೆ ವಿಘ್ನ ತಟ್ಟುವದೆಂದೆಣಿಸಿ ಜಯರಾಯನು ರಮಾಕಾಂತನಿಗೆ ಒಂದೆರಡು ದಿವಸ ಇರಹೇಳಿದನು. ಅವನು ತನ್ನ ಗಡಿಯಾರ ತೆಗೆದು ನಾಲ್ಕಾವರೆ ಗಂಟೆಯಾದದ್ದು ನೋಡಿ "ಐದು ಗಂಟೆಗೆ ಶ್ರೀಕಂಠನು ಬರುವನು. ಅಷ್ಟರಲ್ಲಿಯೇ ತನ್ನ ಮಗಳನ್ನು ವಿಚಾರಿಸಬೇಕು" ಎಂದು ಜಯರಾಯನು ಇಂದಿರೆಯ ಕೋಣೆಗೆ ಹೋದನು.

ಇಂದಿರೆಯು ಏನೋ ಬರೆಯುತ್ತಿದ್ದಳು. ತನ್ನ ತಂದೆಯು ಬಂದದ್ದು ಕಂಡು ಅವಳು ಸರಿದು ತನ್ನ ಕೋಚಿನಲ್ಲಿ ಜಯರಾಯನಿಗೆ ಸ್ಥಳ ಮಾಡಿದಳು.

"ಇಂದಿರಾ, ಏನು ಮಾಡುತ್ತಿರುವಿ ? ಕವಿತ್ವರಚನೆ ನಡೆದಂತೆ ಕಾಣುತ್ತದಲ್ಲ !"

"ಹೌದಪ್ಪಾ, ಒಂದಕ್ಕೆ ಶಾಲೆಯಲ್ಲಿದ್ದಾಗ್ಗೆ ಬರೆದದ್ದು ; ಅದನ್ನು ಪುನಃ ಪುಸ್ತಕದಲ್ಲಿ ಬರೆಯುತ್ತೇನೆ. ಅಪ್ಪಾ, ಕವಿಗಳು ಜಹಗೀರದಾರ ಸರದಾರರ ಗೊಡವೆಗೆ ಹೋಗುವದಿಲ್ಲವಲ್ಲ ! ಈ ಜನರಾದರೂ ಕವಿಗಳನ್ನು ತಮ್ಮಲ್ಲಿ ಕರಕೊಳ್ಳುವದಿಲ್ಲ ?"

" ಇದೇಕೆ ಬೇಕಾಗಿರುವದೀಗ ?"

" ಶ್ರೀಮಂತರು ಕವಿಗಳ ಸ್ತುತಿ ಮಾತ್ರ ಮಾಡುವದುಂಟು. ಆದರೆ ಅವರನ್ನು ತಮ್ಮ ಜೊತೆಯಲ್ಲಿ ಸೇರಿಸಿಕೊಳ್ಳುವದಿಲ್ಲೆಂದು ಶ್ರೀಕಂಠ ಬಹದ್ದರನು ಹೇಳುತ್ತಿದ್ದನು." ಎಂದು ಇಂದಿರೆಯುಂದಳು.

" ನೀನು ಶ್ರೀಕಂಠ ಬಹದ್ದರನ ನೆನಪು ಒಳ್ಳೇ ತೆಗೆದಿ. ಅವನು ಇನ್ನೊಂದು ಕ್ಷಣದಲ್ಲಿ ಇಲ್ಲಿಗೇ ಬರುವನು."

ಇಂದಿರೆಯು ಸ್ವಲ್ಪ ತೊಂದರೆಯಲ್ಲಿ ಬಿದ್ದು " ಅಹುದು, ಐದು ಗಂಟೆಗೆ ಸರಿಯಾಗಿ ಬರುವೆನೆಂದು ಶ್ರೀಕಂಠನು ನಿನ್ನೇ ದಿನ ಹೇಳಿರುವನು."

" ಇನ್ನೊಂದು ಮನೋರಂಜಕವಾದ ವಾರ್ತೆಯನ್ನು ನನಗೆ ಹೇಳುವದುಳಿದಿದೆ. ಇದೇ ದಿವಸವೇ ಇನ್ನೊಬ್ಬ ವಿವಾಹೋತ್ಸುಕನು ನನ್ನನ್ನು ತಟ್ಟಿ ಹೋದನು. ರಮಾಕಾಂತನು ತನ್ನ ಪ್ರೀತಿಯ ರಗಳೆಯನ್ನು ನನ್ನ ಮುಂದೆ ಹೇಳುವದಕ್ಕಾಗಿ ಬಂದಿದ್ದನು."

" ರಮಾಕಾಂತರೇನೇನು ಹೇಳಿದರು ?"

" ಎಲ್ಲವನ್ನು ಹೇಳಿಬಿಟ್ಟನು " ಎಂದು ಜಯರಾಯನು ಸಂದಿಗ್ಧವಾಗಿ ನುಡಿದನು.

" ಹೀಗಾಯಿತೇನು ? ಆ ಹುಡುಗಿಯು ಉದ್ಧಾಮಳು. ರಮಾಕಾಂತರಂತೂ ಕೇವಲ ಗುಣನಿಧಿಗಳೇ, ಅವರ ದೈವದಲ್ಲಿದ್ದಂತಾಗುವದು. ಅವರು ಸುಖಿಗಳಾಗಿರಲೆಂದು ಹಾರೈಸುವದಕ್ಕಿಂತಲೂ ಹೆಚ್ಚಿಗೇನು ಮಾಡುವದು ?"

" ಅವರ ವಿವಾಹಕ್ಕಿನ್ನೂ ಅವಧಿಯಿದೆ. ಒಳಗಿನ ಮಾತುಗಳು ಬಹಳಿವೆ. ಅವುಗಳನ್ನು ನಾನು ನಿನ್ನ ಮುಂದೆ ಹೇಳುವದು ಸರಿಯಲ್ಲ."

" ಅವುಗಳನ್ನು ಕೇಳುವದರಲ್ಲಿ ನನಗಾದರೂ ಏನು ಪ್ರಯೋಜನ ?"

ಪಾಪ ! ಇಂದಿರೆಯು ತನ್ನ ತಂದೆಯು ರಚಿಸಿದ ವ್ಯೂಹವನ್ನರಿತವಳಲ್ಲ. ರಮಾಕಾಂತನು ಕಮಲೆಯೊಡನೆ ಸುಖಹೊಂದುವನೋ ಇಲ್ಲವೋ ಎಂಬ ಯೋಚನೆಯಲ್ಲಿ ಬಿದ್ದವಳಾದಳು.

" ಅಪ್ಪಾ, ಇಷ್ಟಾದ ಬಳಿಕ ಇವರ ವಿವಾಹಕ್ಕೆ ಅವಧಿ ಯಾಕೆ ?"

" ಏನೋ ತಿಳಿಯದು, ಅವಧಿಯಾದರೂ ಚಿಂತಿಲ್ಲ. ಲಗ್ನವಾದರೆ ಸಾಕು, ಆ ಲಗ್ನವು ಕೂಡಾ ಆಗುವದೋ ಇಲ್ಲೋ ಇದೇ ನನಗೆ ಸಂಶಯ ಬಿದ್ದದೆ." ಎಂದು ಜಯರಾಯನು ತಾನಾಡಿದ ಅತಿನಿಂದ್ಯವಾದ ಸುಳ್ಳಿಗೆ ಇದೊಂದು ಹಾದೀ

ಬಿಟ್ಟು ಮಾತಾಡಿದನು.

"ಇಷ್ಟಲ್ಪಕಾಲದಲ್ಲಿಯೇ ರಮಾಕಾಂತರು ಕಮಲೆಯು ಮೇಲೆ ಹೇಗೆ ಆಸಕ್ತರಾದರೊ ತಿಳಿಯದು. ನೀವು ಹೇಳುತ್ತೀರೆಂದ ಪಕ್ಷದಲ್ಲಿ ನಂಬಬೇಕಾಗಿದೆ."

ಇಷ್ಟರಲ್ಲಿ ಶ್ರೀಕಂಠ ಬಹದ್ದರನು ಬಂದನೆಂಬ ವಾರ್ತೆ ಕೇಳಿ ಜಯರಾಯನು ಲಗುಬಗೆಯಿಂದ ಅವನ ಹತ್ತರ ಹೋದನು.

ತನ್ನ ತಂದೆಯು ಶ್ರೀಕಂಠನನ್ನು ಕೂಡಿಕೊಂಡು ತನ್ನನ್ನು ಶ್ರೀಕಂಠನ ಮನೆಯಲ್ಲಿ ನೂಕಬೇಕೆಂಬ ಕಾರಸ್ಥಾನ ನಡಿಸಿದ್ದು ಇಂದಿರೆಗೆ ತಿಳಿದಿತ್ತು, ಇವರು ತನ್ನ ಮನವಲಿಸಲಿಕ್ಕೆ ಯತ್ನ ನಡಿಸಿರುವರೆಂದು ಅವಳು ತಿಳುಕೊಂಡಿದ್ದಳು. ಆದರೆ ಮೂವರು ಧೂರ್ತರು ಕೂಡಿ ತಾಮ್ರಪರ್ಣೀ ತೀರದ ಸೋಮಯಾಜಿಯ ಪಶುವನ್ನು ಅಪಹರಿಸಿದಂತೆ ತನ್ನ ತಂದೆಯೂ ಪಂಡಿತೆಯೂ ಕೂಡಿ ಸುಳ್ಳಾಡಿ ತನ್ನನ್ನು ಮೋಸಗೊಳಿಸಲೆತ್ನಿಸುವರೆಂದು ಇಂದಿರೆಯು ಸ್ವಲ್ಪಾದರೂ ಸಂಶಯಪಟ್ಟದ್ದಿಲ್ಲ.

ಇಂದಿರೆಗೆ ಶ್ರೀಕಂಠನನ್ನು ಕಂಡು ಎಳ್ಳಷ್ಟಾದರೂ ಪ್ರೇಮ ಬರಲೊಲ್ಲದು. ತನ್ನ ತಂದೆಯು ಈ ವರಕ್ಕೆ ತನ್ನನ್ನು ಕೊಡುವದು ನಿಶ್ಚಯ ಮಾಡಿ ಈ ಮಾತಿಗೊಪ್ಪಲಿಕ್ಕೆ ಹೇಳಿದರೆ ತಾನೇನು ಹೇಳಬೇಕೆಂಬ ಚಿಂತೆಯು ಇಂದಿರೆಗೆ ಹತ್ತಿತ್ತು. ಈ ದಿವಸ ಅವಳ ಮೇಲೆ ಗುಡ್ಡವೇ ಕಡುಕೊಂಡು ಬಿದ್ದಂತಾಗಿತ್ತು. ಇನ್ನೊಂದು ಗಳಿಗೆಯಲ್ಲಿಯೇ ತನ್ನ ತಂದೆಯು ಈ ಮಾತಿನ ನಿಷ್ಕರ್ಷ ಮಾಡಲಿಕ್ಕೆ ಬಂದೊದಗುವನು. ಇದಕ್ಕೇನು ಮಾಡಬೇಕೆಂಬುದು ತೋಚದೆ ಈ ಸುಕುಮಾರಿಯು ಶೂನ್ಯ ಹೃದಯಳಾಗಿ ಕುಳಿತಳು. ಭೀಮಕರಾಜನು ರುಕ್ಮಿಣೀದೇವಿಯ ಮೇಲೆ ಇಂಥದೇ ಪ್ರಸಂಗ ತಂದಿದ್ದನು. ಆದರೆ ಆ ಜಗನ್ಮಾತೆಯು ಭಗವಂತನಾದ ಶ್ರೀಕೃಷ್ಣನ ಸಹಚಾರಿಯಾಗುವದಕ್ಕೇ ಜನ್ಮ ತಕ್ಕೊಂಡಿದ್ದಳು. ಅವಳ ದುಃಖವಿಮೋಚನೆ ಮಾಡಲಿಕ್ಕೆ ಶ್ರೀಕೃಷ್ಣನು ಸಮರ್ಥನಿದ್ದನು. ಅವರ ಸಂಗತಿಯು ಅನ್ಯರಿಗೇನು ಪ್ರಯೋಜನ ? ಆದರೂ ಕನ್ಯೆಯರು ಸರ್ವಪ್ರಯತ್ನಗಳಿಂದಲೂ ತಮಗನುರೂಪರಾದ ಪತಿಗಳನ್ನು ಕೂಡಬೇಕೆಂಬದೇ ರುಕ್ಮಿಣೀಸ್ವಯಂವರದ ಫಲಿತಾರ್ಥವಿರುವದೇ ಹೊರತು ಮತ್ತೇನಿರುವದು ? ಆಗಲಿ, ಪ್ರಸಂಗ ಬಂದ ಹಾಗೆ ಯೋಚನೆ ಮಾಡಲಿಕ್ಕೆ ಬಂದೀತೆಂದು ವಿಚಾರ ಮಾಡುತ್ತ ಇಂದಿರೆಯು ಕುಳಿತಿರುವಾಗಲೇ ಶ್ರೀಕಂಠನು ಅವಳೆದುರಿನಲ್ಲಿ ಬಂದು ನಿಂತುಕೊಂಡನು; ಅವಳು ಚಕಿತಳಾಗಿ "ಶ್ರೀಕಂಠಬಹದ್ದರ್ !" ಎಂದು ಉದ್ಗಾರ ತೆಗೆದಳು.

"ಇಂದಿರಾಬಾಯಿ, ನೀವು ಏಕಾಂತವಾಸದಲ್ಲಿ ಕುಳಿತಾಗ್ಯೆ ಬಂದದ್ದಕ್ಕಾಗಿ

ನನ್ನನ್ನು ಕ್ಷಮಿಸಿರಿ. ನಾನೊಂದು ಮಾತು ಅರಿಕೆ ಮಾಡಿಕೊಳ್ಳುವದಕ್ಕೆ ಬಂದಿರುವೆನು. ಆ ಮಾತು ಅನ್ಯರ ಕಿವಿ ಕೇಳುವಂತಿಲ್ಲೆಂದು ನಾನಿಲ್ಲಿಗೆ ಬಂದೆನು." ಎಂದು ಶ್ರೀಕಂಠನು ಕುರ್ಚಿಯ ಮೇಲೆ ಕುಳಿತನು.

"ನನಗೆ ಅರಿಕೆ ಮಾಡಿಕೊಳ್ಳುವಂಥದೇನು? ಅನ್ಯರ ಕಿವಿ ಕೇಳದಂಥ ಮಾತಾದರೂ ಏನಿರುವದು?" ಎಂದು ರೋಮಾಂಚಿತಳಾಗಿ ಇಂದಿರೆಯು ಕೇಳಿದಳು.

"ಇಂದಿರಾ, ನಿನ್ನ ಮೇಲೆ ನನ್ನ ಪ್ರೇಮವೆಷ್ಟಾಗಿರುವದೆಂದು ಹೇಳಲಿ! ಅದನ್ನು ನಾನೆಷ್ಟು ಬಿಗಿ ಹಿಡಿದರೂ ತಡೆಯಲೊಲ್ಲದು. ಮನೋಹಾರಿಣೀ, ನಿನ್ನ ಸೌಂದರ್ಯಕ್ಕೆ ನಾನು ಮೋಹಿತನಾಗಿರುವೆನು. ಪ್ರಾಣೇಶ್ವರೀ, ನನ್ನ ಪ್ರಾಣಗಳನ್ನುಳಿಸುವದೂ ಬಿಡುವದೂ ಸರ್ವಥಾ ನಿನ್ನಾಧೀನವಾಗಿರುವದು. ಈ ಮನ್ಮಥನ ಬಾಧೆಯನ್ನು ನಾನು ಸೈರಿಸಲಾರೆನು." ಎಂದು ನುಡಿದು ಇಂದಿರೆಯ ಮುಖವನ್ನು ಎಡೆಬಿಡದೇ ನೋಡುತ್ತ ಕುಳಿತನು.

ಈ ಮಾತು ಕೇಳಿ ಇಂದಿರೆಯು ದಂಗುಬಡಿದವಳಾಗಿ "ಶ್ರೀಕಂಠಬಹದ್ದರ, ನೀವಿದೇನಾರಂಭಿಸಿರುವಿರಿ! ನಿಮ್ಮನ್ನು ವಿಚಾರವಂತರೆಂದೆಣಿಸಿದ್ದೆನು. ನಿಮ್ಮೀ ನಾಟಕದ ಮಾತುಗಳು ನನಗೆ ಕಿಂಚಿತ್ತಾದರೂ ಸರಿಬರುವದಿಲ್ಲ. ನೀವು ಹೇಳುವಂತೆ ನಿಮ್ಮ ಮನಸ್ಸಿನ ಸ್ಥಿತಿಯಾಗಿದ್ದರೂ ಇರಬಹುದು. ಇದರಲ್ಲಿ ನನ್ನದೇನೂ ತಪ್ಪಿಲ್ಲಷ್ಟೇ?" ಎಂದು ಕೋಪಿಸಿಕೊಂಡು ಕೇಳಿದಳು.

"ಇಂದಿರಾ, ನೀನೇನಂದರೂ ನಾನು ಸಹಿಸುವೆನು. ಪ್ರಿಯೇ, ನಾನು ನಿನ್ನ ಚರಣಗಳಲ್ಲಿ ಪ್ರಣಿಪಾತನಾಗಲಿಕ್ಕೆ ಕೂಡಾ ಸಿದ್ಧನಿರುವೆನು. ಪಂಚಶರನ ಬಾಧೆಗಳಿಂದ ನನ್ನನ್ನು ಬಿಡಿಸಲಿಕ್ಕೆ ನೀನೊಬ್ಬಳೇ ಸಮರ್ಥಳಿರುವಿ."

"ಶ್ರೀಕಂಠ ಬಹದ್ದರರೇ, ದಯಮಾಡಿ ನಿಮ್ಮ ಪಾಠಮಾಡಿದ ಮಾತುಗಳನ್ನು ಸಾಕುಮಾಡಿರಿ. ನನಗೆ ಲಗ್ನವು ಅವಶ್ಯವೆಂದೆನಿಸಿದ ಹೊರತು ಈ ವಿಷಯದಲ್ಲಿ ನಾನು ಮಾತಾಡಲಿಚ್ಛಿಸುವದಿಲ್ಲ. ನೀವು ನನ್ನನ್ನು ಕೇಳಿಯೂ ಫಲವಿಲ್ಲ. ನನ್ನ ತಂದೆಗಳು ನನ್ನನ್ನು ಯಾರಿಗೆ ಧಾರೆಯೆರಿದು ಕೊಡುವರೋ ಅವರ ಪತ್ನೀತ್ವವನ್ನು ನಾನು ಸ್ವೀಕರಿಸತಕ್ಕವಳು. ನನಗೆ ಸಮ್ಮತಿ ಕೊಡಲು ಅಧಿಕಾರವಿಲ್ಲ." ಎಂದು ಇಂದಿರೆಯು ಹೇಳಿದಳು.

"ಜಯರಾಯರು ನನ್ನ ಮನೋಗತಕ್ಕೆ ಅನುಕೂಲರಿದ್ದಾರೆ. ಅವರೇ ನಿನ್ನ ಸಮ್ಮತಿ ಕೇಳಲಿಕ್ಕೆ ಬರುವವರಿದ್ದರು. ಆದರೆ ಇದಕ್ಕೆ ಪೂರ್ವದಲ್ಲಿಯೇ ನನ್ನಾತ್ಮ ನಿವೇದನ ಮಾಡಿಕೊಳ್ಳುವದೊಳ್ಳೇದೆಂದು ತಿಳಿದು ಇಲ್ಲಿಗೆ ಬಂದೆನು."

"ಹಾಗಾದರೆ ನೀವಿಬ್ಬರೂ ಕೂಡಿ ಈ ವ್ಯಾಪಾರವನ್ನು ಮುಗಿಸಿಕೊಂಡೇ ಬಿಟ್ಟಿರುವಿರಿ! ನಿಮ್ಮಿಬ್ಬರಿಗೂ ನನ್ನ ಸಮ್ಮತಿಯು ಅವಶ್ಯವೆಂದು ಕಂಡದ್ದಾದ ಪಕ್ಷದಲ್ಲಿ ನಾನು ನನ್ನ ಸಮ್ಮತಿ ಕೊಡಲಿಕ್ಕೆ ಸದ್ಯಕ್ಕೆ ಅಸಮರ್ಥಳಿದ್ದ ಮೂಲಕ ಇನ್ನೂ ನಾಲ್ಕಾರು ದಿವಸಗಳ ಅವಧಿಯನ್ನು ನನಗೆ ಕೊಡಿರಿ. ಆ ಮೇಲೆ ನಾನೇನನ್ನುವದು ಹೇಳುವೆನು" ಎಂದು ಇಂದಿರೆಯು ಖಂಡಿತವಾಗಿ ಹೇಳಿದಳು.

"ಈ ಅವಧಿಯು ನಿಮಗೇಕೆ ಬೇಕೆಂಬುದನ್ನು ನಾನು ತಿಳಿದಿರುವೆನು. ರಮಾಕಾಂತನು ನಿಮ್ಮ ಮೇಲೆ ಅಭಿಲಾಷೆಯನ್ನಿಟ್ಟಿರುವನು. ನಿಮಗಾದರೂ ಅವನಲ್ಲಿ ಅನುರಾಗವಿದ್ದಂತೆ ತೋರುತ್ತದೆ. ನೀವು ಅವನ ಕೂಡ ಯೋಚನೆ ಮಾಡಲಿಕ್ಕೆ ಅವಧಿಯನ್ನು ಬೇಡುತ್ತೀರಿ. ರಮಾಕಾಂತನ ಮೇಲೆ ನೀವು ಪ್ರೇಮ ಭಾವವಿಡುವದು ಸರಿಯಲ್ಲ. ಇದಲ್ಲದೇ ನೀವೂ, ರಮಾಕಾಂತನೂ ಗುಟ್ಟು ಮಾಡಿಕೊಂಡರೂ ಜಯರಾಯರೆಂದಿಗೂ ನಿಮ್ಮ ಮಾತಿಗೊಪ್ಪಿಕೊಳ್ಳುವದಿಲ್ಲ."

ರಮಾಕಾಂತನು ತನ್ನ ಮೇಲೆ ಅಭಿಲಾಷೆಯನ್ನಿಟ್ಟಿರುವರೆಂಬ ಹೊಸ ಸುದ್ದಿಯನ್ನು ಕೇಳಿ ಇಂದಿರೆಯ ತನು ಜೋಂಪಿಸಿದಂತಾಗಿ ಅವಳು ತನ್ನೆರಡು ಕೈಗಳಿಂದ ತನ್ನ ಮುಖಚಂದ್ರವನ್ನು ಮುಚ್ಚಿಕೊಂಡು ರಮಾಕಾಂತನ ದಿವ್ಯಮೂರ್ತಿಯನ್ನು ಧ್ಯಾನಕ್ಕೆ ತಂದುಕೊಂಡು ನಿಶ್ಚಲಳಂತೆ ಕುಳಿತಳು.

ಇಂದಿರೆಯು ತನ್ನ ಮಾತಿಗೆ ಉತ್ತರ ಕೊಡುವಳೆಂದು ಶ್ರೀಕಂಠನು ಹಾದೀ ನೋಡುತ್ತ ಅರ್ಧಘಳಿಗೇ ಪರ್ಯಂತರ ಸುಮ್ಮನಿದ್ದನು. ಆದರೂ ಅವಳ ಬಾಯಿಂದ ಏನೂ ಹೊರಡಲಿಲ್ಲ. ಕಡೆಗೆ ಶ್ರೀಕಂಠನು ಉತ್ಕಂಠಿತನಾಗಿ,

"ಏನು ಇಂದಿರಾ, ನನಗೇನು ಹೇಳಿದಿ ?" ಎಂದು ಆಶಾಬದ್ಧನಾಗಿ ಕೇಳಿದನು."

"ಈ ಮೊದಲೇ ಹೇಳಿಬಿಟ್ಟಿರುವೆನು. ವಿಚಾರ ಮಾಡಲಿಕ್ಕೆ ನಾಲ್ಕಾರು ದಿವಸಗಳ ಅವಧಿ ಬೇಕು."

ಇದನ್ನು ಕೇಳಿಕೊಂಡು ಶ್ರೀಕಂಠನು ಚಟ್ಟನೆ ಎದ್ದವನೆ ಜಯರಾಯನ ಬಳಿಗೆ ಹೊರಟುಹೋದನು. ಇವನು ಹೋದದ್ದರಿಂದ ಇಂದಿರೆಗೆ ಸ್ವಲ್ಪ ಸಮಾಧಾನವಾಯಿತು. ರಮಾಕಾಂತನು ತನ್ನನ್ನು ಪ್ರೀತಿಸುವನೆಂದು ಶ್ರೀಕಂಠನಾಡಿದ್ದು ಕೇಳಿ ಇಂದಿರೆಗೆ ರಮಾಕಾಂತನ ಧ್ಯಾನ ಹತ್ತಿದಂತಾಯಿತು.

"ಶ್ರೀಕಂಠನು ಹೇಳಿದ್ದು ನಿಜವೋ ? ಇದ್ದರೆ ರಮಾಕಾಂತನು ಕಮಲೆಯ ಸಂಗಡ ಮಾತುಕಥೆ ನಡಿಸಿರುವದೇಕೆ! ಕಮಲೆಯ ವೃತ್ತಾಂತವನ್ನು ತನ್ನ

ತಂದೆಯೂ ಪಂಡಿತೆಯೂ ಹೀಗೀರ್ವರೇ ಹೇಳುವರು. ಅನ್ಯರಿಗೆ ಇದೇಕೆ ತಿಳಿದಿಲ್ಲ ? ಈ ವೃತ್ತಾಂತವು ಸುಳ್ಳೆನ್ನಬೇಕೆ ? ರಮಾಕಾಂತನೇ ತನ್ನ ತಂದೆಯ ಮುಂದೆ ಏನಿದ್ದದ್ದು ಹೇಳಿದನಲ್ಲ ! ಇದೆಲ್ಲ ತನ್ನಪ್ಪಾಜಿಗಳ ಕೈಗಂಟಿರಬಹುದೇನು ? ಯಾರು ಬಲ್ಲರು ? ಏನಾದರೂ ಚಿಂತಿಲ್ಲ ; ತನ್ನನ್ನು ಶ್ರೀಕಂಠನ ಕೊರಳಲ್ಲಿ ಕಟ್ಟಿ ಬಿಡುವದನ್ನು ತನ್ನ ತಂದೆಯು ಸಂಕಲ್ಪಮಾಡಿಕೊಂಡಿರುವನು. ಸಾವಿರ ಸುಳ್ಳು ಹೇಳಿ ಒಂದು ಕಲ್ಯಾಣ ಕಟ್ಟಬೇಕೆಂಬ ನಾಣ್ನುಡಿಯ ಅರ್ಥವನ್ನು ತನ್ನ ತಂದೆಯು ಈ ಪರಿಯಾಗಿ ಉಪಯೋಗಿಸಿರುವನೇನು ? ತಾನು ದುರ್ಲಭಳೆಂದು ರಮಾ ಕಾಂತನು ದೂರ ದೂರ ಇರುವನೇನು ? ತನ್ನ ಮನೋಗತವನ್ನು ತಿಳಿಸಬಾರ ದಾಗಿತ್ತೇ ? ಶ್ರೀಕಂಠನು ರಮಾಕಾಂತನನ್ನು ತನ್ನ ಪ್ರತಿಪಕ್ಷದವನೆಂದೆಣಿಸುತ್ತಾನೆ. ಪ್ರತಿಪಕ್ಷಿಗಳು ಒಬ್ಬರ ಮರ್ಮವನ್ನೊಬ್ಬರು ಚನ್ನಾಗಿ ಅರಿತುಕೊಳ್ಳುವರು. ರಮಾಕಾಂತನು ನನ್ನನ್ನು ಪ್ರೀತಿಸುವನೆಂಬದು ಶ್ರೀಕಂಠನಿಗೆ ತಿಳಿದಿದೆ. ಮಾತ್ರ ಅವನಿಗೆ ಕಮಲೆಯ ವೃತ್ತಾಂತವು ತಿಳಿದಿಲ್ಲ. ಅಂದಮೇಲೆ ರಮಾಕಾಂತನು ಕಮಲೆಯ ಮೇಲೆ ಆಸಕ್ತನಾಗಿರುವನೆಂಬದು ನಿರಾಧಾರವಾದ ಮಾತಿರಬಹುದು. ಆದರೆ ನನ್ನ ತಂದೆಯು ಇಂಥ ಬುರುಡೇ ಕುಟ್ಟಿದನಾದರೂ ಹೇಗೆ ? ಒಂದಕ್ಕೊಂದು ವಿರುದ್ಧವಾದ ಮಾತುಗಳು ಎಷ್ಟಾದರೂ ಇರುವವಲ್ಲ ! ನಾನೇನು ಮಾಡಲಿ ! ಈ ಗೂಢವನ್ನು ಯಾರು ಬೈಲಿಗೆ ತರುವರು ? ಶ್ರೀಕಂಠನು ಉದ್ದಾಮತನದಿಂದ ನನ್ನ ಬಳಿಯಲ್ಲಿ ಬಂದು ಮಾತಾಡಿದ್ದು ಒಂದು ಪರಿಯಿಂದ ಹಿತಕರವಾದ ಸಂಗತಿಯೇ ಆಯಿತು. ರಮಾಕಾಂತನು ನನ್ನನ್ನು ಪ್ರೀತಿಸುವನೆಂದು ಈ ಮೂಢನು ಹೇಳಿದ್ದು ಕೇಳಿದಾಕ್ಷಣದಿಂದ ರಮಾಕಾಂತನಲ್ಲಿ ನನ್ನ ಪ್ರೀತಿಯು ಬದ್ಧವಾದಂತೆ ಭಾಸವಾಗ ಹತ್ತಿರುವದು. ಆಗಲಿ ; ಇನ್ನೂ ನಾಲ್ಕು ದಿವಸಗಳ ಅವಧಿಯಂತೂ ಇರುವದಲ್ಲ. ಅಷ್ಟರಲ್ಲಿ ಎಲ್ಲ ಮಾತುಗಳ ನಿಷ್ಕರ್ಷೆ ಮಾಡಿಕೊಳ್ಳಬೇಕು." ಹೀಗೆ ಇಂದಿರೆಯು ಕಲ್ಪನಾತರಂಗದಲ್ಲಿ ಹೊಯ್ದಾಡುತ್ತಿರುವಾಗ ಬೇರೆ ಸ್ಥಳದಲ್ಲಿ ಜಯರಾಯನೂ, ಶ್ರೀಕಂಠನೂ ಚಮತ್ಕಾರವಾದ ಸಂವಾದ ನಡೆಸಿದ್ದರು.

"ಶ್ರೀಕಂಠ ಬಹದ್ದರ, ಏನು ಸಮಾಚಾರ ? " ಎಂದು ಜಯರಾಯನು ಉತ್ಸುಕತೆಯಿಂದ ಕೇಳಿದನು.

"ಸರ್ವಸಾಧಾರಣವಾಗಿ ಸಮಾಧಾನಕರವಾಗಿದೆ ಎಂದು ಹೇಳಬಹುದು." ಎಂದು ಶ್ರೀಕಂಠನುತ್ತರಕೊಟ್ಟನು.

"ಅಂದರೇನು ! ಇಂದಿರೆಯನ್ನು ಮಾತಾಡಿಸಿಯಾದರೂ ನೋಡಿದಿರೋ ?

ಏನು! ಹಾಗೇ ಬಂದಿರೋ ? "

"ಮಾತಾಡಿಸದೆ ಹಾಗೇ ಹೇಗೆ ಬರುವೆನು ?" ಎಂದು ಶ್ರೀಕಂಠನು ಸಪ್ಪಗೆ ನುಡಿದನು.

"ನಿಷ್ಪನ್ನವಾದದ್ದಾದರೂ ಏನು ? ಇಂದಿರೆಯು ತನ್ನ ಸಮ್ಮತಿ ಕೊಟ್ಟ ಳೇನು ?" ಎಂದು ಅಧೈರ್ಯದಿಂದ ಜಯರಾಯನು ಕೇಳಿದನು.

"ಇಂದಿರೆಯು ಇಲ್ಲಗಳೆಯಲಿಲ್ಲ."

"ಶ್ರೀಕಂಠ ಬಹದ್ದರ, ಏನಿದ್ದದ್ದು ಸ್ಪಷ್ಟವಾಗಿ ಹೇಳಬಾರದೆ !" ಎಂದು ಜಯರಾಯನು ವ್ಯಗ್ರನಾಗಿ ಕೇಳಿದನು.

"ಪರ್ಯಾಯದಿಂದ ಸಮ್ಮತಿ ಕೊಟ್ಟಳೆಂದು ಊಹಿಸಬಹುದು. ಇಂದಿರೆಯು ತನ್ನಭಿಪ್ರಾಯವನ್ನು ನಿಶ್ಚಿತವಾಗಿ ಕೊಡುವದಕ್ಕೆ ನಾಲ್ಕು ದಿವಸದ ಅವಧಿಯನ್ನು ಕೇಳಿಕೊಂಡಿರುವಳು." ಎಂದು ಶ್ರೀಕಂಠನು ಶಾಂತವೃತ್ತಿಯಿಂದ ಹೇಳಿದನು.

"ಈ ಮೂರ್ಖನಿಗೆ ನಾನು ಈ ಕೆಲಸವನ್ನು ಒಪ್ಪಿಸತಕ್ಕದ್ದಿದ್ದಿಲ್ಲ. ಹಿಡಿ ತಂದ ನಾಯಿಯು ಮೊಲ ಹಿಡಿಯಬಲ್ಲದೇ !" ಎಂದು ಜಯರಾಯನು ತನ್ನ ಮನಸ್ಸಿನಲ್ಲಿ ಖಿನ್ನನಾಗಿ :

"ನೀವು ಅವಳ ಮುಂದೆ ಹೇಳಿದ್ದಾದರೂ ಏನು ?"

"ಅದನ್ನೆಲ್ಲಾ ಈಗ್ಯೆ ನನಗೆ ಹೇಳಲಿಕ್ಕೆ ಬರಲಿಕ್ಕಿಲ್ಲ. ಅಂಥ ಪ್ರಸಂಗದಲ್ಲಿ ಏನೇನು ಮಾತಾಡಬೇಕೆಂಬದರ ಬಗ್ಯೆ ನಾನು ವಿಚಾರ ಮಾಡಿಯೇ ಇಟ್ಟಿದ್ದೆನು. ನಾನೆಲ್ಲ ಹೇಳಿದ ಬಳಿಕ ಅವಳು ನಾಲ್ಕು ದಿವಸಗಳ ಅವಧಿ ಕೇಳಿಕೊಂಡಳು"

ಶ್ರೀಕಂಠನೆಳ್ಳಷ್ಟಾದರೂ ವ್ಯಾಕುಲನಾದಂತೆ ಕಾಣಲಿಲ್ಲ. ಸಂತೋಷದ ಸುದ್ದಿಯನ್ನು ತರಲಿಲ್ಲ. ಅಂದಮೇಲೆ ಇವನ ಮನಸ್ಸಿನಲ್ಲಿ ಇಂದಿರೆಯ ಹವ್ಯಾಸವೇ ಇಲ್ಲದ್ದಾಗಿ ಕಂಡುಬಂದದ್ದರಿಂದ ಜಯರಾಯನು ಇವನ ಮನಸ್ಸಿನಲ್ಲಿ ಉತ್ಸಾಹ ವನ್ನು ತುಂಬಬೇಕೆಂದು :

"ಶ್ರೀಕಂಠ ಬಹದ್ದರರೇ, ಮಾನಿನಿಯರೆಂದಾದರೂ ತಮ್ಮ ಮನೋಗತವನ್ನು ಸ್ಪಷ್ಟವಾಗಿ ತಿಳಿಸುವರೇ ? ನೀವು ನಿರಾಶೆ ಪಡಬೇಡಿರಿ" ಎಂದು ಜಯರಾಯನು ಇಲ್ಲದ ನಗೆ ತಂದುಕೊಂಡು ನಕ್ಕನು.

"ಜಯರಾಯರೇ, ನೀವು ಹೇಳುವದರಲ್ಲಿ ಅರ್ಥವಿಲ್ಲ. ಇಂದಿರೆಯ ಪ್ರೇಮವು ಎಳ್ಳಷ್ಟಾದರೂ ನನ್ನ ಮೇಲಿಲ್ಲ. ವ್ಯರ್ಥವಾಗಿ ನನ್ನನ್ನು ಈ ಪೇಚಾಟ

ದಲ್ಲಿ ಹಾಕಬೇಡಿರಿ."

"ನಿಮ್ಮ ತಿಳುವಳಿಕೆ ತಪ್ಪಾಗಿದೆ. ನಿಮ್ಮನ್ನು ನಿರಾಕರಿಸುವದೇ ಇಂದಿರೆಯು ಮನಸ್ಸಿನಲ್ಲಿದ್ದರೆ ಈಗಲೇ ನಿರಾಕರಿಸುತ್ತಿದ್ದಳು! ನಾಲ್ಕು ದಿವಸಗಳ ಅವಧಿಯನ್ನು ಏಕೆ ತಕ್ಕೊಳ್ಳುವಳು?"

"ಅದೇನೋ ನನಗೆ ತಿಳಿಯದು. ನೀವು ನಿಮ್ಮ ಮನಸ್ಸಿಗೆ ತೋಚಿದ್ದು ಮಾಡಿರಿ. ಒತ್ತಾಯ ಮಾಡಿ ಸಮ್ಮತಿ ತಕ್ಕೊಳ್ಳುವದು ನನಗೆ ಸರಿಯಾಗಿ ತೋರುವದಿಲ್ಲ. ಇನ್ನೀ ಕಪಟನಾಟಕವನ್ನು ಮುಗಿಸಿಬಿಡುವದು ಒಳ್ಳೇದು."

"ಕಪಟವಿದ್ದರೂ ಇಂದಿರೆಯ ಹಿತಕ್ಕಾಗಿಯೇ ನಾವು ಯತ್ನ ನಡಿಸಿರುವೆವಲ್ಲ! ಈಗಲೇ ನಾನು ಹೋಗಿ ಇಂದಿರೆಯನ್ನು ಮಾತಾಡಿಸಿ ನೋಡುತ್ತೇನೆ." ಎಂದು ಜಯರಾಯನು ಶ್ರೀಕಂಠನಿಗೆ ಅಪ್ಪಣೆ ಕೊಟ್ಟು ಇಂದಿರೆಯಿದ್ದಲ್ಲಿಗೆ ಬಂದನು.

ಶ್ರೀಕಂಠನಣ್ಣನಾದ ನಾಗೇಂದ್ರ ಬಹದ್ದರನು ಮುಂದೆ ಜಹಗೀರಿಯ ಮಾಲಕನು. ಶ್ರೀಕಂಠನು ಅನ್ನ ವಸ್ತ್ರದ ಮಟ್ಟಿಗೆ ತನ್ನ ತಂದೆಯ ಕಡೆಯಿಂದಲೂ ಅವನ ನಂತರ ತನ್ನ ಅಣ್ಣನ ಕಡೆಯಿಂದಲೂ ಹಣ ಕೇಳಿಕೊಳ್ಳತಕ್ಕವನು. ಇದಕ್ಕಾಗಿ ಅವನು ಧನಿಕನಾದ ವ್ಯಾಪಾರಸ್ಥನ ಅಳಿಯನಾಗಿ ಹಣ ದೊರಕಿಸುವ ಹಂಚಿಕೆಯಲ್ಲಿದ್ದನು. ಅನಾಯಾಸದಿಂದ ಜಯರಾಯನೇ ತನ್ನನ್ನು ಹುಡುಕುತ್ತ ಬಂದದ್ದರಿಂದ ಜಯರಾಯನು ಹೇಳಿದಂತೆ ಕುಣಿದು ನೋಡಿದನು. ಕಡೆಗೆ ಇಂದಿರೆಯು ಅನುಕೂಲೆಯಾಗದ್ದರಿಂದ ನಿರಾಶೆಯೊಂದಿಗೆ ಶ್ರೀಕಂಠನು ಮನೆಗೆ ಹೋದನು.

ಜಯರಾಯನು ಇಂದಿರೆಯ ಹತ್ತರ ಬಂದು ಮುಗುಳು ನಗೆ ನಕ್ಕು "ನಾನಿನ್ನು ಲಗ್ನದ ಸಿದ್ಧತೆ ಮಾಡುವದರಲ್ಲಿ ತೊಡಗಬೇಕಾಗಿರುವದು. ಇನ್ನು ತಿಂಗಳಾನುತಿಂಗಳು ವಿಶ್ರಾಂತಿಯು ತಿಲಮಾತ್ರವೂ ದೊರಕಲಿಕ್ಕಿಲ್ಲ."

"ಯಾರ ಲಗ್ನದ ಸಿದ್ಧತೆ ಮಾಡುವಿರಿ ಅಪ್ಪಾಜಿಗಳೇ?"

"ಹೀಗೆ ಹಾರಿಸಿಕೊಂಡು ಮಾತಾಡಿದರೆ ನನಗೇನೂ ತಿಳಿಯುವದಿಲ್ಲೆಂದು ನೀನು ಗ್ರಹಿಸುವಿಯಾ. ಈಗಲೇ ನಾನು ಶ್ರೀಕಂಠನಕ್ಕಿಂತಲೂ ನಿನಗೆ ದೂರಾದೆನೇನು? ನೀವು ನಿಮ್ಮ ಪತಿರಾಜರ ಮುಂದೆ ಲಗ್ನದ ಸಿದ್ಧತೆ ಮಾಡಹೇಳಿ ನನ್ನಗೂಡ ನಗೆಯಾಡುತ್ತೀರಿ!"

"ಈಗಲೇ ಶ್ರೀಕಂಠನು ಮೂರ್ಖನಂತೆ ಬಡಬಡಿಸಿ ಹೋದದ್ದಕ್ಕೂ ನೀವು

ಆತುವದಕ್ಕೂ ಏನಾದರೂ ಸಂದರ್ಭವಿರುವದೇನು ?" ಎಂದು ಇಂದಿರೆಯು ಕೇಳಿದಳು.

"ಅಹುದು. ನೀನು ಸಮ್ಮತಿ ಪಟ್ಟಿರುವಿಯೆಂದು ಶ್ರೀಕಂಠನು ಹೇಳಿದನು. ನಾನು ಇದಕ್ಕಾಗಿಯೇ ನಿಮ್ಮ ಮಂಗಲೋತ್ಸವದ ಸಿದ್ಧತೆ ಮಾಡಲೆತ್ನಿಸುತ್ತೇನೆ."

"ನಾನು ಸಮ್ಮತಿಪಟ್ಟೆನೇ ! ಶ್ರೀಕಂಠನಿಗೆ ಬುದ್ಧಿಯಿಲ್ಲವೆಂದರೆ, ಕಿವಿಗಳೂ ಇಲ್ಲವೇನು ?"

"ಅದಕ್ಕಾಗಿಯೇ ಪಾಪ ! ಆ ತರುಣನು ಸಣ್ಣ ಮೋರೆ ಮಾಡಿಕೊಂಡು ಹೋದನೇನು ?"

"ಸಣ್ಣ ಮೋರೆ ಮಾಡಿಕೊಂಡು ಹೋದನೇ ! ಪಾಪ ! ನಾಟಕದಲ್ಲಿ ಪರಿಶ್ರಮಪ್ರಸಾದ ನಟನಿಗೆ ಸಹಸ್ರಾಂತರನ್ನು ಕಳಕೊಂಡಷ್ಟು ದುಃಖವು ಇವನಿಗೂ ಆಗಿರಬಹುದು ?"

"ಚೇಷ್ಟೆಯ ಮಾತುಗಳಾಡುವ ಸಮಯವೇ ಇಂದಿರೆ ! ನಿನ್ನ ಮನಸ್ಸಿನಂತಾಗುವದೆಂದು ಶ್ರೀಕಂಠನಿಗೆ ತಾನು ಹೇಳಿಬರಲಿಲ್ಲವೇ !"

"ಇವರಲ್ಲಿ ಶ್ರೀಕಂಠನ ಮನಸ್ಸಿನಂತಾಗುವದಕ್ಕಿಂತ ನಿಮ್ಮ ಮನಸ್ಸಿನಂತಾಗುವದೆಂದು ನನಗೆ ತೋರುತ್ತದೆ." ಎಂದು ಜಯರಾಯನ ಮರ್ಮಕ್ಕೆ ತಗಲುವಂತೆ ಮಾತಾಡಿ ಇಂದಿರೆಯು ನಕ್ಕಳು.

ಜಯರಾಯನು ತಿಳಿಯೂ ತಿಳಿಯದವನಂತೆ "ಹೇಗೆ ! ಹೇಗೆ ! ಇಂದಿರಕ್ಕಾ," ಎಂದು ಕೇಳಿದನು.

"ಶ್ರೀಕಂಠನ ಹೆಂಡತಿಯಾದೆನಾದರೆ ಜಹಗೀರದಾರರ ಸೊಸೆಯಾಗುವೆನು. ಅಕ್ಷತೆಗೆ ಮಹಾರಾಜರವರು ಕೂಡ ಬರುವರು ! ದೊಡ್ಡದೊಡ್ಡವರ ಸಂದಲ್ಲಿ ನನ್ನ ಗಣನೆಯಾಗುವದು. ಸೀಮಂತ ಪೂಜೆಯ ಕಾಲಕ್ಕೆ ಶಿವಸಮುದ್ರದ ಜಹಗೀರದಾರರು ನಿಮ್ಮನ್ನು ಅಪ್ಪಿಕೊಂಡು ಪವಿತ್ರದೇಹರನ್ನು ಮಾಡುವರು. ಇಷ್ಟಾದ್ದರಿಂದ ನಮಗೇ ಮಹತ್ವ ಬರುವದು. ಇದರಲ್ಲಿ ಶ್ರೀಕಂಠನಿಗೇನು ಲಾಭ ಹೇಳಿರಿ ?"

"ನಿನ್ನಂಥ ಸ್ತ್ರೀರತ್ನದ ಲಾಭಕ್ಕಿಂತಲೂ ಹೆಚ್ಚಿನ ಲಾಭವು ಎಂಥಾದಿರುವದು ?" ಎಂದು ಕೇಳಿ ಜಯರಾಯನು ಇಂದಿರೆಯ ಕಣ್ಣು ಮೇಲೆ ಕಣ್ಣಾಡಿಸಿದನು.

" ಅಬ್ಬಾ ! ಇಪ್ಪತ್ತೈದು ಸಹಸ್ರ ರೂಪಾಯಿಗಳಲ್ಲಿ ಒಂದು ಕಾಸು ಕಡಿಮೆ ಮಾಡಿ ನೋಡಿರಿ ! ಆ ಮೇಲೆ ನನ್ನ ಪ್ರಾಣಗ್ರಹಣದ ಮಾತು ಒತ್ತಟ್ಟಿಗಿರಲಿ ; ಶ್ರೀಕಂಠನು ನಮ್ಮ ಬೀದಿಯಲ್ಲಿ ಹಾಯ್ದರೆ ಕೇಳಿರಿ !"

" ಇಂದಿರಕ್ಕಾ, ವೃಥಾರೋಪ ಮಾಡಬೇಡ. ಶ್ರೀಕಂಠನು ನಿನ್ನ ಮೇಲೆ ಅಷ್ಟಿಷ್ಟು ಪ್ರೀತಿ ಮಾಡುವನೆಂಬುದು ಹೇಳಿಲಿಕ್ಕೆ ಕೂಡಾ ಆಗದು. ನೀನು ಸುಳ್ಳೇ ಹಟತೊಡಬೇಡ."

" ಇಷ್ಟು ಪ್ರೇಮವಿದೇನು ? ಇದೊಂದು ವಿಷಾದಕ್ಕೆ ಕಾರಣವಾದ ಸಂಗತಿಯಾಗಿರುವದು ! ಅಷ್ಟು ಪ್ರೀತಿಗೆ ನಾನು ಪಾತ್ರಳೇ ಅಲ್ಲ. ಏಕೆಂದರೆ ಶ್ರೀಕಂಠ ನನ್ನು ಕಂಡರೆ ನನಗೆ ತಿಲಮಾತ್ರವೂ ಸೇರಿಕೆ ಬರುವದಿಲ್ಲ."

" ಅವನು ಒಳ್ಳೇ ಮನುಷ್ಯನಾದರೂ ಇರುವನಷ್ಟೇ ?"

" ಇರುವನು. ಈ ಮಾತು ಒಪ್ಪಿಕೊಳ್ಳದೇನು ಮಾಡಲಿ !" ಎಂದು ಇಂದಿರೆಯು ನುಡಿದಳು.

" ಶ್ರೀಕಂಠನಿಗೆ ನಿನ್ನ ಸ್ವಭಾವ ತಿಳಿದಿದೆ. ನಿನ್ನ ಕೂಡಾ ಹೇಗಾದರೂ ಸುಖದಿಂದಿರುವೆನೆಂದರೆ ನೀನೊಪ್ಪಿಕೊಳ್ಳುವಿಯಲ್ಲವೇ ?" ಎಂದು ಜಯರಾಯನು ಕೇಳಿದನು.

ಈ ಸಂವಾದಕ್ಕೆ ಬೇಸತ್ತು, ಬ್ರಹ್ಮಾಸ್ತ್ರಕ್ಕೆ ಬ್ರಹ್ಮಾಸ್ತ್ರಕ್ಕೆ ಗಂಟು ಎಂಬಂತೆ ಕುಟಿಲತೆಗೆ ಕುಟಿಲತೆಯನ್ನೇ ಪ್ರಯೋಗಿಸಬೇಕೆಂದು ಯೋಚಿಸಿ :

" ಅಪ್ಪಾ, ನೀವಾಗಿ ನನ್ನನ್ನು ಶ್ರೀಕಂಠನಿಗೆ ಕೊಟ್ಟರೆ ಒಲ್ಲೆನೆನ್ನಲಿಕ್ಕೆ ನನಗೆ ಅಧಿಕಾರವಿಲ್ಲ. ಈ ಮದುವೆಯಿಂದ ಶ್ರೀಕಂಠನಿಗೂ ನಿಮಗೂ ಸಂತೋಷವಾಗುತ್ತಿರಲು ನಾನು ಹಟತೊಟ್ಟು ಅವಿನೀತೆಯೆಂಬ ಹರಲೇ ಹೊರಲಾರೆನು."

" ನೋಡು ಇದರಿಂದ ನಿನಗೆ ಅಸಮಾಧಾನವೆನಿಸುವದಿಲ್ಲವಲ್ಲ ? ಕೇವಲ ನನ್ನಾಗ್ರಹಕ್ಕೋಸ್ಕರವಾಗಿ ನೀನು ಸಮ್ಮತಿ ಪಡಬೇಕೆಂದು ನನ್ನಿಚ್ಛೆಯಿಲ್ಲ," ಹೀಗಂದು ಜಯರಾಯನು ತನ್ನ ಕೌಟಿಲ್ಯದ ಬತ್ತಳಿಕೆಯೊಳಗಿನ ರಾಮಬಾಣ ತೆಗೆದು ಹೊಡೆದೆನೆಂದು ತಿಳಿದುಕೊಂಡನು.

" ಅಪ್ಪಾ ! ಎಂದಾದರೊಮ್ಮೆ ಲಗ್ನ ಮಾಡಿಕೊಳ್ಳಲೇಬೇಕಲ್ಲ. ಬ್ರಾಹ್ಮಣರ ಮಗಳಾದ ಮೇಲೆ ಅವಿವಾಹಿತೆಯಾಗಿ ಸಾಯುವ ಹಾಗಿಲ್ಲವಲ್ಲ. ಶ್ರೀಕಂಠನೇನು ಮತ್ಯಾರೇನು ಒಬ್ಬ ಪತಿಯಾದರಾಯಿತು."

" ಮುದ್ದುಮಗಳೇ, ಶ್ರೀಕಂಠನ ಪತ್ನಿಯಾದರೆ ನಿನಗೆ ಸುಖವೇ ಉಂಟಾ

ಗುವದು."

"ಹೀಗೆ ಕಾಣುತ್ತದೆ." ಎಂದು ಇಂದಿರೆಯು ಪರಿಹಾಸದೊಂದಿಗೆ ನುಡಿದಳು.

ಇಂದಿರೆಯು ಶ್ರೀಕಂಠನನ್ನು ಈಗಲೇ ಧಿಕ್ಕರಿಸಿ ಅದೇ ಉಸುರಿನಲ್ಲಿ ಲಗ್ನ ಮಾಡಿಕೊಳ್ಳಲಿಕ್ಕೆ ಸಮ್ಮತಿ ಕೊಟ್ಟಳು. ಇದರಲ್ಲೇನಾದರೂ ಗೂಢವಿರುವುದೇನೆಂದು ಸಂಶಯ ಹುಟ್ಟಿ ಜಯರಾಯನು ಪೇಚಲಾಟದಲ್ಲಿ ಬಿದ್ದನು.

"ಇಂದಿರಾ, ಏನು ಕಾರಣದಿಂದಲೋ ನಿರಾಶೆ ಹೊಂದಿದವಳಾಗಿ ಹೀಗೆ ನೀನು ಮಾತಾಡುತ್ತಿರುವಿಯೆಂದು ನಾನು ತರ್ಕಿಸುತ್ತೇನೆ. ನಿನ್ನ ಮನಸ್ಸು ನೆಟ್ಟಗಿಲ್ಲೇನು ?"

"ಅದೇನಿಲ್ಲ. ನನ್ನ ಮನಸ್ಸು ನನ್ನ ಸ್ವಾಧೀನದಲ್ಲಿದೆ. ಮನೋರಾಜ್ಯಕ್ಕಿಂತಲೂ ವಸ್ತುಸ್ಥಿತಿಯು ಭಿನ್ನವಾಗಿರುವುದು. ನಾನು ಪರಮ ರಸಿಕಳು, ನಾನೊಳ್ಳೇ ಚತುರೆಯು, ನಾನು ರೂಪವತಿಯು, ನನ್ನನ್ನು ಕಂಡು ಎಲ್ಲರೂ ಕೌತುಕ ಪಡುವರು. ಈ ಭೂಮಂಡಲದಲ್ಲಿಯ ಸಾರ್ವಭೌಮ ರಾಜನು ಕೂಡಾ ನನ್ನ ಪ್ರಾಪ್ತಿಗಾಗಿ ಹಂಬಲಿಸುವನೆಂದು ನನ್ನ ಕಲ್ಪನೆ ಇತ್ತು. ಈ ಕಲ್ಪನೆಯು ಭ್ರಾಮಕವಾದದ್ದೆಂದು ಕೆಲವೊಂದು ಸಂಗತಿಯಿಂದ ತಿಳಿದುಹೋಯಿತು. ಪರಮ ರುಚಿಕರವಾದ ಮನೋರಾಜ್ಯದಲ್ಲಿಯ ವಸ್ತುಗಳಿಗಿಂತಲೂ ಸಪ್ಪಗಿರುವ ನಿಜವಾದ ವಸ್ತುಗಳೇ ಲೇಸೆಂದು ನನ್ನ ಅಭಿಪ್ರಾಯವಾಗಿರುತ್ತದೆ."

"ಶಾಬಾಸ್ ಇಂದಿರಾ! ನೀನು ಚನ್ನಾಗಿ ವಿಚಾರ ಮಾಡಿರುವಿ. ಅದಕ್ಕಾಗಿಯೇ ನಿನಗೆ ಜನರು ಜಾಣೆಯೆಂದೆನ್ನುವರು." ಎಂದು ಆನಂದದಿಂದ ಜಯರಾಯನೆಂದನು. ಇಂದಿರೆಯು ಈಗಲೇ ಒಡ್ಡಿದ ಸೂಕ್ಷ್ಮವಾದ ಬಲೆಯು ಈ ವ್ಯಾಪಾರಸ್ಥನಿಗೆ ಕಾಣಿಸಲಿಲ್ಲ.

"ನನ್ನದಿನ್ನೊಂದು ಪ್ರಾರ್ಥನೆಯದೆ. ದಯಮಾಡಿ ಕೇಳಬೇಕು" ಎಂದು ಇಂದಿರೆಯು ತನ್ನ ಕಪಟಜಾಲವನ್ನು ಮೆಲ್ಲನೆ ಎಳೆಯಹತ್ತಿದಳು.

"ಅದೇನಮ್ಮಾ ಹೇಳು."

"ಈಗಲೇ ಈ ಕೆಲಸ ಬೇಡ."

"ಯಾವ ಕೆಲಸ ?" ಎಂದು ಜಯರಾಯನು ಗಾಬರಿಯಾಗಿ ಕೇಳಿದನು.

"ನನ್ನ ಮದುವೆಯ ಕೆಲಸ."

"ನಿನ್ನಿಚ್ಛೆಗೆ ಬಂದಾಗ್ಯೆ ಈ ಮಹೋತ್ಸವವನ್ನು ನೆರವೇರಿಸೋಣ

ಆದರಲ್ಲೇನಿದೆ! ಎಷ್ಟು ದಿವಸಗಳ ಪರ್ಯಂತರ ಮುಂದಕ್ಕೆ ಹಾಕಬೇಕು ಹೇಳು."

"ಐದಾರು ತಿಂಗಳು ಹೋಗಲಿ. ಅಷ್ಟರಲ್ಲಿ ಪ್ರಸ್ತುತ ವಿಚಾರಗಳನ್ನು ಹೋಗಲಾಡಿಸಿಕೊಂಡು ಜಗತ್ತಿನ ಅನುಭವ ಹೆಚ್ಚು ಪಡೆಕೊಂಡೆನೆಂದರೆ ಲಗ್ನದ ಕಾಲದಲ್ಲಿ ವಿಷಾದದ ಭಾಗಗಳೆಲ್ಲಾ ಉಳಿಯದಂತಾಗುವವು."

ಜಯರಾಯನಾದರೂ 'ಸರ್ವನಾಶೇ ಸಮುತ್ಪನ್ನೇ ಅರ್ಧಂ ತ್ಯಜತಿ ಪಂಡಿತಃ' ಎಂಬ ಸಂಸ್ಕೃತ ಗಾದೆಯನ್ನರಿತು ಇಂದಿರೆಯ ಮಾತಿಗೆ ಒಪ್ಪಿಕೊಂಡನು. ಆಮೇಲೆ ತಂದೆ ಮಕ್ಕಳು ತಮ್ಮ ತಮ್ಮ ಕೋಣೆಗಳಿಗೆ ಹೊರಟುಹೋದರು.

ಇಂದಿರೆ ಮಾಡಿದ್ದೆಲ್ಲ ನಿಜವೆಂದು ತಿಳಿದು ಜಯರಾಯನಿಗೆ ಆನಂದ ವಾಯಿತು. ಆದರೂ ಇಂದಿರೆಯಲ್ಲಿ ನಿಜವಾದ ಪ್ರೀತಿಯಿಲ್ಲದೆ ಶ್ರೀಕಂಠನು ಕೇವಲ ಹಣದಾಸೆಗೆ ಲಗ್ನಕ್ಕೆ ಸಿದ್ಧನಾಗಿದ್ದನು. ಶ್ರೀಕಂಠನ ಮೇಲಂತೂ ಇಂದಿರೆಯ ಪ್ರೀತಿ ಇದ್ದೇ ಇಲ್ಲ. ಈ ದಂಪತಿಗಳು ಹೇಗೆ ಸುಖಿಗಳಾಗಿರುವರೋ ತಿಳಿಯದು. ಜಗನ್ನಿಯಾಮಕನೇ, ನೀನು ಇವರನ್ನು ಸುಖಿಗಳಾಗಿರುವಂತೆ ಮಾಡೆಂದು ಜಯ ರಾಜನು ಬೇಡಿಕೊಂಡನು.

ಇನ್ನುಮೇಲೆ ನಾನು ಜಹಗೀರದಾರರ ಬೀಗನಾಗಲಿಕ್ಕೇನೂ ಸಂದೇಹ ಉಳಿಯಲಿಲ್ಲ. ಇದೇ ದಸರೆಯ ದಿವಸ ನಾನು ರಾವಬಹದ್ದೂರ ಎಂಬ ಬಿರುದನ್ನು ಸರಕಾರದಿಂದ ಹೊಂದುವೆನು. ಗವ್ಹರ್ನರ ಜನರಲ್‌ರು ಮೈಸೂರಿಗೆ ಬಂದರೆ ರಾವಬಹದ್ದೂರ ಜಯರಾಯರಿಗೆ ದರ್ಬಾರದ ನಿಯಂತ್ರಣ ಬಂದೇ ಬರುವದು. ಇಂಥ ಮರ್ಯಾದೆಯು ಪೇಟೆಯಲ್ಲಿಯ ಕೀಳರಾದ ವ್ಯಾಪಾರಸ್ಥರಿಗೆ ದೊರೆಯುವ ದುಂಟೇ? ಹೀಗೇನೇನೋ ಯೋಚಿಸುತ್ತ ಜಯರಾಯನು ತನ್ನ ಮಲಗುವ ಕೋಣೆಗೆ ಹೋದನು.

ಅಲ್ಲಿಯಾದರೂ ಹೊಸ ವಿಚಾರಗಳು ಅವನ ಮನಸ್ಸಿನಲ್ಲಿ ಸೇರಿದ್ದರಿಂದ ಅವನ ಚಿತ್ತಕ್ಕೆ ಸ್ವಾಸ್ಥ್ಯವುಂಟಾಗಲಿಲ್ಲ. ನಾನಂತೂ ಹಾಗೂ ಹೀಗೂ ಮಾಡಿ ಇಂದಿರೆಯ ಸಮ್ಮತಿ ತಕ್ಕೊಂಡೆನು. ಈ ಮಾತು ಶ್ರೀಕಂಠನಿಗೆ ತಿಳಿಸಲಿಕ್ಕೇ ಬೇಕು. ಇಲ್ಲದಿದ್ದರೆ ಕೈಯಿಗೆ ಬಂದ ತುತ್ತು ಬಾಯಿಗೆ ಬರಲಿಲ್ಲೆಂಬಂತೆ ಶ್ರೀಕಂಠನು ಎರಡನೇ ಸ್ಥಳದಲ್ಲಿ ಕನ್ಯಾ ನೋಡುವನು. ಆರು ತಿಂಗಳ ಅವಧಿ ಯಾಕೆಂದು ಶ್ರೀಕಂಠನು ಕೇಳಿದರೇನು ಹೇಳಬೇಕು? 'ಮಗಳು ಹುಟ್ಟಿದರ ಏಳೂರ ಕೆರೇ ನೀರು ಕುಡಿಸುವ ಳೆಂ'ಬುದು ಸುಳ್ಳಲ್ಲ. ಇಂದಿರೆಗೋಸ್ಕರ ನಾನು ಇನ್ನೂ ಏನೇನು ಅನುಭೋಗಿಸು ವೇನೋ ಏನೋ. ಆದರೆ ಪ್ರಸ್ತುತಕ್ಕೇನು ಮಾಡಬೇಕು? ಹೀಗೆ ಯೋಚಿಸುತ್ತ

ಕಾಶೀಯಾತ್ರೆ ನೆವ ಮಾಡಿಕೊಂಡು ಉತ್ತರ ಹಿಂದುಸ್ಥಾನದಲ್ಲಿ ಮೂರು ನಾಲ್ಕು ತಿಂಗಳು ತಿರುಗಾಡಿ ಬಂದು ಬಿಟ್ಟರಾಯಿತೆಂದು ನಿಶ್ಚಯ ಮಾಡಿಕೊಂಡು ಮಲಗಿದನು.

ಇತ್ತ ಇಂದಿರೆಗೆ ರಮಾಕಾಂತನ ಚಿಂತೆ ಹತ್ತಿತ್ತು. ಕ್ರಮಕ್ರಮಗಳಿಂದ ರಮಾಕಾಂತನು ಇಂದಿರೆಯ ಹೃದಯವನ್ನು ಆಕ್ರಮಿಸುತ್ತಿದ್ದನು. "ರಮಾಕಾಂತನು ನನ್ನನ್ನು ಪ್ರೀತಿಸುತ್ತಿರುವುದು ನಿಜವೋ? ನಿಜವಿದ್ದರೆ ಈ ಪ್ರೀತಿಯು ಅವನ ಹೃದಯದಲ್ಲಿ ಸ್ಥಿರವಾಗಿ ನಿಲ್ಲುವುದೋ? ನಿನ್ನಿನವರೆಗೆ ರಮಾಕಾಂತನು ವಿದ್ವಾಂಸನು ಚತುರನು ಸದ್ಗುಣಿಯು ಎಂದು ತಿಳಿದಿದ್ದೆನು. ಆದರೆ ಅವನು ನನ್ನ ಹೃದಯಚೋರನೆಂಬುದನ್ನು ನನ್ನ ತಂದೆಯ ಪ್ರೀತ್ಯಾಸ್ಪದನಾದ ಶ್ರೀಕಂಠನೇ ಹಿಡಿದುಕೊಟ್ಟನು. ನಾನು ಆಗ್ರಹದಿಂದ ಕರೆದರೂ ನನ್ನ ಮನೆಗೆ ಬಾರದವನು ನಿನ್ನಿನಿಂದ ನನ್ನ ಹೃದಯದಲ್ಲಿಯೇ ಪ್ರಸ್ಥಾನವನ್ನಿಟ್ಟಿರುವನು" ಹೀಗೆ ಯೋಚಿಸುತ್ತ ರಮಾಕಾಂತನ ದಿವ್ಯಮೂರ್ತಿಯನ್ನು ಧ್ಯಾನಕ್ಕೆ ತಂದು "ವಿಶಾಲವಕ್ಷರೇ, ಈ ದೀನೆಯಾದ ಇಂದಿರೆಗೆ ನಿಮ್ಮ ಹೃದಯದಲ್ಲಿ ಸ್ಥಳ ಕೊಟ್ಟಿರುವಿರೇನು? ಆಗಂತುಕೆಯಾದ ಕಮಲೆಗೆ ಮಾತ್ರ ಅಲ್ಲಿ ಆಸ್ಪದ ಕೊಡಬೇಡಿರಿ ಇಂದಿರಾ! ಪುನರ್ವಿವಾಹದ ಪ್ರೋತ್ಸಾಹಕಳಾದ ಆ ದುಷ್ಟ ಪಂಡಿತೆಯು ನಿಮ್ಮನ್ನು ವಂಚಿಸಿ ಔರಂಗಜೇಬನು ವಿಶ್ವೇಶ್ವರನ ದೇವಾಲಯವನ್ನು ಭ್ರಷ್ಟಮಾಡಿ ಅಲ್ಲಿ ಮಸೀದೆಯನ್ನು ಕಟ್ಟಿದಂತೆ ನಿಮ್ಮ ಪವಿತ್ರವಾದ ಹೃದಯದೊಳಗಿಂದ ನನ್ನನ್ನು ದೂಡಿ ಹಾಕಿ ಕುಲಟೆಯಾದ ಕಮಲೆಯನ್ನು ತಂದು ಸೇರಿಸಿಲ್ಲವಲ್ಲ? ನಿಮ್ಮ ವಚನವೇ ಪ್ರಮಾಣವೆಂದು ತಿಳಿಯುವೆನು. [illegible]ವನ್ನು ಮನಮಾಡಿ ಹೇಳಿರಿ." ಹೀಗೆ ತನ್ನ ಮನೋರಮಣನ ಮನೋಗತವಾದ ಮೂರ್ತಿಯ ಮುಂದೆ ತನ್ನ ದುಃಖಗಳನ್ನು ನಿವೇದಿಸುತ್ತಿರುವಳು.

ಮರುದಿವಸ ಮುಂಜಾನೆ ಜಯರಾಯನು ತಾನು ಕಾಶಿಗೆ ಹೋಗುವ ವಿಚಾರವನ್ನು ಇಂದಿರೆಯ ಮುಂದೆ ತೆಗೆದನು. ಮೊದಲೇ ಇಂದಿರೆಯು ಸ್ವಾಭಾವಿಕ ಶೋಭೆಗಳನ್ನು ನೋಡುವದರಲ್ಲಿ ಕುತೂಹಲವುಳ್ಳವಳು, ಮೇಲಾಗಿ ಶ್ರೀಕಂಠನ ಕಾಟ ತಪ್ಪುವದು. ತನ್ನ ತಂದೆಯ ವಿಚಾರಕ್ಕೆ ಪೂರ್ಣ ಅನುಮೋದನ ಕೊಟ್ಟು ಯಾತ್ರೆಗೆ ಹೊರಡುವದನ್ನು ಗಟ್ಟಿಮಾಡಿಕೊಂಡಳು. ಜಯರಾಯನು ತನ್ನ ವಿಚಾರವನ್ನು ಶ್ರೀಕಂಠನಿಗೆ ತಿಳಿಸಿ ತನ್ನ ಕೂಡ ಯಾತ್ರೆಗೆ ಬರಬೇಕೆಂದು ಆಗ್ರಹಪೂರ್ವಕವಾಗಿ ಹೇಳಿದನು. ಆದರೆ ಶ್ರೀಕಂಠನಿಗೆ ಬೆಂಗಳೂರು ಬಿಟ್ಟು ಬೇರೆ

ಕಡೆಗೆ ಹೋಗುವ ಮನಸ್ಸೇ ಇದ್ದಿಲ್ಲಾದ ಕಾರಣ ಇಲ್ಲದ ನೆವ ಹೇಳಿ ಶ್ರೀಕಂಠನು ಜಾರಿಕೊಂಡನು.

ಕಾಶೀಯಾತ್ರೆಗೆ ದಸರೆಯಾದ ಮೇಲೆ ಎರಡು ದಿವಸಕ್ಕೆ ಹೊರಡುವದು ನಿಶ್ಚಯವಾಯಿತು. ಇಂದಿರೆಗೆ ಈ ಯಾತ್ರೆಯು ಔತ್ಸುಕ್ಯ ಬಹಳವಾಗಿತ್ತು. ಆವಳು ತನಗೆ ಬೇಕಾದ ಬಟ್ಟೆ ವಸ್ತು ಪುಸ್ತಕಾದಿಗಳನ್ನು ಆರಿಸಿಟ್ಟುಕೊಂಡು ಕಟ್ಟಿಕೊಳ್ಳುವ ಸಿದ್ಧತೆಗೆ ಬಿದ್ದಳು.

ದಸರೆಯ ದಿವಸ ಮುಂಜಾನೆ ಇಂದಿರೆಯು ತನ್ನ ತಂದೆಯ ಹತ್ತರ ಹೋದಳು. ಜಯರಾಯನು ಉತ್ತರ ದೇಶಕ್ಕೆ ಹೊರಡುವ ವ್ಯವಸ್ಥೆಯಲ್ಲಿ ನಿರತನಾಗಿದ್ದನು.

"ಇಂದಿರಾ, ಈ ದಿವಸ ಶ್ರೀಕಂಠಬಹದ್ದರನನ್ನು ಭೋಜನಕ್ಕೆ ಕರೆದಿದ್ದೇನೆ. ಇನ್ನು ಮೂರು ನಾಲ್ಕು ತಿಂಗಳು ಶ್ರೀಕಂಠನ ದರ್ಶನ ನಮಗಿಲ್ಲ. ಕಾರಣ ನೀನು ಶ್ರೀಕಂಠನಿಗೆ ವಿಶೇಷ ಆದರ ತೋರಿಸತಕ್ಕದ್ದು." ಎಂದು ಜಯರಾಯನು ತನ್ನ ಮಗಳಿಗೆ ಹೇಳಿದನು.

"ನಿಮ್ಮಿಷ್ಟದಂತೆ ಆಗಲಿ. ಶ್ರೀಕಂಠನ ಕೂಡ ಆದರದೊಂದಿಗೆ ವರ್ತಿಸು ವೆನು ಆಯಿತೋ ಇಲ್ಲೋ ?"

"ಭೋಜನದ ವ್ಯವಸ್ಥೆ ಚನ್ನಾಗಿರತಕ್ಕದ್ದು."

"ಶ್ರೀಕಂಠನ ಹೊರತು ಮತ್ತ್ಯಾರಾದರೂ ಭೋಜನಕ್ಕೆ ಬರುವವರಿದ್ದಾ ರೇನು ?" ಎಂದು ಇಂದಿರೆಯು ಕೇಳಿದಳು. ರಮಾಕಾಂತನಿಗೆ ಆಮಂತ್ರಣವಿರು ವದೋ ಇಲ್ಲೋ ತಿಳಿಕೊಳ್ಳುವ ಇಚ್ಛೆ ಅವಳಿಗಿತ್ತು.

"ಹೋಗುವ ಗಡಿಬಿಡಿಯಲ್ಲಿ ಪ್ರಸ್ತವನ್ನು ಮಂಡಿಸುತ್ತ ಕೂಡ್ರುವಂತಿಲ್ಲ. ಆದ ಕಾರಣ ಮತ್ತ್ಯಾರಿಗೂ ಹೇಳಿಲ್ಲ."

"ನೀವು ಹೇಳುವುದು ಯಥಾರ್ಥವದೆ" ಎಂದು ಇಂದಿರೆಯು ಹೇಳಿ :

"ರಮಾಕಾಂತರೊಬ್ಬರಿಗೆ ಭೋಜನಕ್ಕೆ ಬರಹೇಳಿದ್ದರೆ ದೊಡ್ಡ ಪ್ರಸ್ತ ವಾಗುತ್ತಿತ್ತೇನು ? ತಂದೆಯೂ ಮಗಳೂ ಒಂದೇ ಮನೆಯಲ್ಲಿದ್ದು ಒಬ್ಬರನ್ನೊ ಬ್ಬರು ಸೋಲಿಸುವ ಹಂಚಿಕೆಯಲ್ಲಿಯೇ ಇರಬೇಕಾಯಿತು. ಆಗಲಿ ಅಪ್ಪಾಜಿಗಳೇ, ಜನರ ಕಣ್ಣಿಗೆ ಇಂಗು ಹಚ್ಚುವುದರಲ್ಲಿ ನೀವೇ ಕುಶಲರೆಂದು ತಿಳಿದುಕೊಂಡಿರುವಿ ರಾದೀತು, ಈ ಇಂದಿರೆಯು ನಿಮ್ಮ ಕಣ್ಣಿಗೆ ಇಂಗು ಹಚ್ಚಿದಾಗ್ಯೇ ನಿಮ್ಮ ಮಗಳೆಂದೆನ್ನಿಸಿಕೊಳ್ಳುವದಕ್ಕೆ ಯೋಗ್ಯಳಾಗುವಳು." ಎಂದು ಆತ್ಮಗತವಾಗಿ

ಮಾತಾಡುತ್ತ ತನ್ನ ಕೋಣೆಗೆ ಹೋದಳು.

ಈ ದಿವಸ ಬನ್ನೀ ಕೊಡುವ ನಿಮಿತ್ತಕ್ಕಾಗಿ ಆದರೂ ತನ್ನ ಮನೆಗೆ ರಮಾಕಾಂತನು ಬರುವನೆಂದು ಅವಳು ತಿಳುಕೊಂಡಿದ್ದಳು. ಮೂರು ಸಂಜೆಯಾದರೂ ಅವನು ಬರಲಿಲ್ಲ. ತಾಸು ಎರಡು ತಾಸು, ಮೂರು ತಾಸು, ರಾತ್ರೀ ಪರ್ಯಂತ ಮಳೆಯ ಹಾದೀ ನೋಡಿದಂತೆ ಇಂದಿರೆಯು ರಮಾಕಾಂತನ ಮಾರ್ಗಪ್ರತೀಕ್ಷೆ ಮಾಡಿದಳು. ಆದರೂ ಅವಳ ಹೃದಯಚೋರನು ಬರಲೇ ಇಲ್ಲ. ಕಡೆಗವಳು ತನ್ನ ದೈವವನ್ನು ಶಪಿಸುತ್ತಲೂ, ತನ್ನ ತಂದೆಯ ಮೇಲೆ ಸಿಟ್ಟಾಗಿಯೂ ಸಂಜೇ ಊಟ ಮಾಡದಲೆ ಹಾಗೇ ಹೋಗಿ ಮಲಗಿಕೊಂಡಳು. ಜಂಬುರಾಯನು ತನಗೆ ಆ ದಿವಸ ರಾವಬಹದ್ದೂರ ಎಂಬ ಬಿರುದು ಸಿಕ್ಕದ್ದರಿಂದ ಆನಂದದಲ್ಲಿ ಗುಮಾಸ್ತ ಕಾರಕೂನ ಜವಾನರಿಗೆ ಉಡುಗರೆ ಇನಾಮುಗಳನ್ನು ಕೊಡುವದರಲ್ಲಿ ತೊಡಗಿ ಹೋಗಿದ್ದನು.

"ನಾವು ಒಮ್ಮಿಂದೊಮ್ಮೇ ಉತ್ತರ ದೇಶದಲ್ಲಿ ಸಂಚಾರ ಮಾಡಲಿಕ್ಕೆ ಹೊರಟೆವು. ಇನ್ನು ಮೂರು ನಾಲ್ಕು ತಿಂಗಳು ಪರದೇಶದಲ್ಲಿಯೇ ಅಡ್ಡಾಡುತ್ತಿರುವೆವು. ರಮಾಕಾಂತನ ದರ್ಶನವು ಏನಿಲ್ಲಂದರೂ ನಾಲ್ಕು ತಿಂಗಳೊಳಗಂತೂ ಆಗುವಂತಿಲ್ಲ. ಹೋಗುವ ಪೂರ್ವದಲ್ಲಿ ಒಂದಾವರ್ತಿ ಆ ಮನೋಹರನ ಮೂರ್ತಿಯನ್ನು ಕಣ್ಣು ತುಂಬಾ ನೋಡಿ ಹೋದರೆ ಸಮಾಧಾನವಾದೀತು. ಆದರೆ ಅವನನ್ನು ಕಾಣುವದು ಹೇಗೆ ? ಅವರು ನಮ್ಮ ಮನೆಗೆ ಬರುವುದೇ ಬಿಟ್ಟಿರುವರು. ನಾನಂತೂ ಅವರ ಮನೆಗೆ ಹೋಗುವಂತಿಲ್ಲ, ಏನು ಮಾಡಲಿ ! ಹೇಗಾದರವರ ಮುಖವನ್ನು ಕಂಡೇನು ?" ಎಂದು ಪರೋಪರಿಯಿಂದ ಚಿಂತೆ ಮಾಡುತ್ತಿದ್ದಳು.

ಪತ್ರವ ಬರಿಯುಲಾ । ನಾಥಗೆ ॥ ಮಿತ್ರಿಯು ಕಳುಹಲಾ ॥

ಎಂಬ ಮನಸ್ತಾಪದಿಂದ ಹಾಡುತ್ತ, ತನ್ನ ಕೋಚದಲ್ಲಿ ಕುಳಿತಿದ್ದಳು. ಅವಳನ್ನು ಈ ಸ್ಥಿತಿಯಲ್ಲಿ ಕುಳಿತದ್ದು ಕಣ್ಣಾರೆ ನೋಡಿಯೇ ರವಿವರ್ಮನು "ರಾಧೆಯೂ ದೂತಿಯೂ" ಎಂಬ ಮನೋಹರವಾದ ಚಿತ್ರವನ್ನು ಲೇಖಿಸಿರಬಹುದೆಂದು ನಾವು ಊಹಿಸುತ್ತೇವೆ.

ದೇಶತ್ಯಾಗದ ವಿಚಾರ

ರಮಾಕಾಂತನು ತನ್ನ ಮನೋಭಾವವನ್ನು ಜಂಬುರಾಯನಿಗೆ ತಿಳಿಸಿ ಬಂದವನೇ ತನ್ನ ಕಯ್ಯಲ್ಲಿದ್ದ ಪಕ್ಷಕಾರರ ಕೆಲಸಗಳನ್ನೆಲ್ಲಾ ತೀರಿಸಿಕೊಡುವ

ಉದ್ಯೋಗದಲ್ಲಿ ಬಿದ್ದನು. ಇದಿಷ್ಟಾದ ಬಳಿಕ ಬೆಂಗಳೂರು ಬಿಟ್ಟು ಹೋಗುವ ವಿಚಾರವಿತ್ತು. ಇಂದಿರೆಯು ಶ್ರೀಕಂಠನನ್ನು ಲಗ್ನ ಮಾಡಿಕೊಳ್ಳುತ್ತೇನೆಂದು ಹೇಳಿದ ಬಳಿಕ ಅವಳನ್ನೂ ರಮಾಕಾಂತನನ್ನೂ ಭೆಟ್ಟಿ ಮಾಡಿದರೆ ಮತ್ತೆ ಭೆಟ್ಟಿ ಕೆಟ್ಟೀತೆಂದು ಜಯರಾಯನು ರಮಾಕಾಂತನನ್ನು ತನ್ನ ಮನೆಗೆ ಕರೆಯಲೇ ಇಲ್ಲ. ಇವನಿಗಾದರೂ ಕಯ್ಯಲ್ಲಿದ್ದ ಕೆಲಸ ತೀರಿಸಿಕೊಳ್ಳಬೇಕಾದದ್ದರಿಂದ ಜಯರಾಯನ ಮನೆಗೆ ಹೋಗುವದೂ ಇದ್ದಿಲ್ಲ. ಜಯರಾಯನೂ ಇಂದಿರೆಯೂ ಕಾಶೀಯಾತ್ರೆಯ ನಿಮಿತ್ತ ಉತ್ತರದೇಶದಲ್ಲಿ ಸಂಚಾರ ಮಾಡಲಿಕ್ಕೆ ಹೋದರೆಂದು ತಿಳಿದದ್ದರಿಂದ ರಮಾಕಾಂತನ ಚಿತ್ತಕ್ಕೆ ಅಲ್ಪವೈರಾಗ್ಯದ ಸಮಾಧಾನವಾಯಿತು. ಆದುದರಿಂದ ಅವನ ಕೆಲಸವು ಗಡಗಡ ಸಾಗಿತು ಸರಿ.

ಇಂದಿರೆಯು ಬೆಂಗಳೂರು ಬಿಟ್ಟು ಹೋದ ನಂತರ ನಾಲ್ಕಾರು ದಿವಸಗಳ ಮೇಲೆ ರಮಾಕಾಂತನು ಶ್ರೀರಂಗಪಟ್ಟಣದ ಸ್ಟೇಷನದಲ್ಲಿ ಬಂದಿಳಿದನು. ಅಲ್ಲಿ ಇಂದಿರೆಯು ತನ್ನನ್ನು ಮಾತಾಡಿಸಿದ ಸ್ಥಳ ನೋಡಿ ಹಿಂದಿನ ಸಂಗತಿಗಳೆಲ್ಲಾ ನೆನಪಾಗಿ ರಮಾಕಾಂತನ ಎದೆಗೆ ಕಲ್ಲು ಬಿದ್ದಂತಾಯಿತು. "ಆ ಮನೋಹಾರಿಯಳ ಪರಿಚಯವು ನನಗೆ ಇದೇ ಸ್ಥಳದಲ್ಲಿ ಆಯಿತು. ಸತ್ಕಾರವನ್ನರಿತವಳಾದ ಆ ತರುಣಿಯು ಆ ಸಾರಿ ನನ್ನನ್ನು ರಥದಲ್ಲಿ ಕುಳ್ಳಿರಿಸಿಕೊಂಡು ಹೋಗಿದ್ದಳು. ಆಹ್ಲಾದಜನಕಗಳಾದ ವಿಚಾರಗಳೊಂದಿಗೆ ಆ ಬಾರಿ ನಾನು ಶ್ರೀರಂಗಪಟ್ಟಣವನ್ನು ಪ್ರವೇಶಿಸಿದೆನು. ಆದರೆ ಈಗ ಅದೇ ಶ್ರೀರಂಗಪಟ್ಟಣಕ್ಕೆ ದುಃಖನಿರ್ಭರನಾಗಿ ಹೊರಟಿರುವೆನು." ಎಂದು ಚಿಂತಿಸುತ್ತ ರಮಾಕಾಂತನು ದೇವಯಾನಿಯ ಬಾಗಿಲಲ್ಲಿ ಝಟಕಾದಿಂದಿಳಿದನು. ಪರಿವಾರಸಿಂಗನೆದ್ದು ಬಂದು "ರಾಮ್‌ರಾಮ್, ರಾವ್ ರಾವಸಾಬ್ ನೀವ್ ಮುಂತ್‌ಕಾ ಅಗ್ಯಾವ" "ಉಂಕಾ ಅಗ್ಯಾವ" ಎಂದು ರಮಾಕಾಂತನು ಉತ್ತರವಾಗಿ ದೊಡ್ಡ ಗಂಡಸು ಆಗಿರುವನೆಂದು ಹೇಳಿದನು. ರಮಾಕಾಂತನು ಉಪ್ಪರಿಗೆ ಮೇಲೆ ಹೋಗಿ ಚಂದ್ರಶಾಲೆಯಲ್ಲಿದ್ದ ಕುರ್ಚಿಯ ಮೇಲೆ ಕುಳಿತುಕೊಂಡನು. ದೇವಯಾನಿಯು ಮಂದಿಗೆ ಹೇಳಿಕೊಳ್ಳುವದಕ್ಕಾಗಿ ಕೆಳಗೆ ಹೋಗಿದ್ದಳು.

ಚಂದ್ರಶಾಲೆಯಲ್ಲಿ ಕುಳಿತಾಗ್ಯೆ ತಾನು ಪೂರ್ವದಲ್ಲಿ ಕಳೆದ ಎಷ್ಟೋ ಆಹ್ಲಾದಕರವಾದ ಸಂಗತಿಗಳು ರಮಾಕಾಂತನಿಗೆ ನೆನಪಾದವು. ಇಂದಿರೆಯು ಈ ಸ್ಥಳವನ್ನು ತನ್ನ ಮಂಜುಲವಾದ ವಾಣಿಯಿಂದ ವರ್ಣಿಸಿದ್ದಳು. ನಾರದನ ವೀಣೆಗಿಂತಲೂ ಶ್ರುತಿಮನೋಹರವಾದ ಕಂಕಣಗಳ ಝಣತ್ಕಾರದೊಂದಿಗೆ ತನ್ನ

ಕೋಮಲವಾದ ಹಸ್ತದಿಂದ ಮಂಜರಿಗಳಿಂದ ಸುಶೋಭಿತವಾದ ಆ ಆಮ್ರತರುವಿನ ಸೌಂದರ್ಯವನ್ನು ನೋಡಿರೆಂದು ತೋರಿಸಿದ್ದಳು. ಕಲಹಂಸರವದಿಂದಿಂಪಾದ ನೂಪುರರವದೊಡನೆ ಇದೇ ಉಪ್ಪರಿಗೆಯ ಪಾವಟಿಗೆಗಳನ್ನೇರಿ ಆ ಚಪಲೆಯು ಬರುತ್ತಿರಲು ತನಗೆ ರೋಮಹರ್ಷವಾಗಿತ್ತು. ಆ ಕೋಕಿಲವಾಣಿಯ ಮಧುರಾಲಾಪಗಳೂ, ಅವಳು ದೇವಯಾನಿಯ ಕೂಡ ನಡಿಸುವ ಪರಿಹಾಸಯುಕ್ತವಾದ ಭಾಷಣಗಳೂ ಅವಳ ಸದಯಾಂತಃಕರಣಯುಕ್ತವಾದ ಉದ್ಗಾರಗಳೂ ಅವಳ ವ್ಯುತ್ಪತ್ತಿಮಯವಾದ ವಾದಗಳೂ ಹೇಗೆ ಅನೇಕ ಹೃದಯಂಗಮಗಳಾದ ಸಂಗತಿಗಳು ಸಪ್ತಸ್ವರಗಳ ಸಂಯೋಗದಂತೆ ನನ್ನ ಕಿವಿಯಲ್ಲಿ ತುಂಬಿಹೋದಂತೆ ಭಾಸವಾಗುತ್ತದೆ. ನಾನು ಪರದೇಶಕ್ಕೆ ಹೋದರೂ ಈ ಸ್ಮರಣೆಯು ನನ್ನ ಬೆನ್ನು ಬಿಡುವದೇನು? ಇಲ್ಲಿದ್ದರಂತೂ ಈ ಅಚೇತನಗಳಾದ ವಸ್ತುಗಳೆಲ್ಲ ನನ್ನನ್ನು ಬಡಿದು ಇಂದಿರೆಯ ನೆನಪು ಕೊಟ್ಟಂತೆ ಮಾತಾಡುತ್ತವಲ್ಲ! ಆಗಲಿ, ಈ ಸಂಗತಿಗಳು ಮನಸ್ತಾಪ ಕೊಡುತ್ತಿದ್ದರೂ ಇವುಗಳ ಸ್ಮರಣೆಯೇ ನನ್ನ ಪ್ರಾಣಧಾರಣಕ್ಕೆ ಆಧಾರವು. ಅಫೀಮು ತಿನ್ನುವವನು ಆ ಶರೀರಶೋಷಕವಾದ ವಿಷ ತಿಂದೇ ಜೀವ ಹಿಡಿಯುವನಲ್ಲವೇ!

ದೇವಯಾನಿಯು ಬಂದ ಕೂಡ್ಲೆ ರಮಾಕಾಂತನೆದ್ದು ಕಾಲ್ಗೆರಗಲು ಆ ಸದಯಳಾದ ವೃದ್ಧೆಯು ಅವನ ಮೈದಡವಿ "ಕಾಂತೂ, ಏನು ಕಾರಣ ಹೀಗೆ ಒಮ್ಮಿಂದೊಮ್ಮೆಲೆ ಬಂದಿಯಪ್ಪಾ? ಇಷ್ಟೇಕೆ ಸೊರಗಿರುವಿ? ಮೋರೆಯ ಮೇಲೆ ದ್ರವವೇ ಇಲ್ಲ!" ಎಂದು ನುಡಿದಳು.

"ಸೊರಗಲಿಕ್ಕೆ ನನಗೇನಾಗಿದೆ! ಕೆಲವು ಮಾತುಗಳಲ್ಲಿ ನಿಮ್ಮಭಿಪ್ರಾಯ ಪಡಕೊಳ್ಳಬೇಕೆಂದು ಬಂದಿರುವೆನು."

"ಅಂಥದ್ದೇನು ಮಹತ್ವದ ಕೆಲಸವಿರುವುದು?"

"ನಾನು ಈ ಪ್ರಾಂತವನ್ನು ಬಿಟ್ಟುಕೊಟ್ಟು ಪರದೇಶಕ್ಕೆ ಹೋಗಬೇಕೆಂದು ಮನಸಾ ಸಂಕಲ್ಪ ಮಾಡಿಕೊಂಡಿದ್ದೇನೆ." ಎಂದು ಹೆದರುತ್ತ ರಮಾಕಾಂತನು ಹೇಳಿದನು.

"ಇಷ್ಟೆಯೋ ಮತ್ತೇನಾದರೂ ಇರುವದೋ?" ಎಂದು ದೇವಯಾನಿಯು ಏನೂ ಉದ್ವೇಗ ಹೊಂದದೆ ಕೇಳಿದಳು.

"ಮತ್ತೇನೂ ಇಲ್ಲ."

"ಕಾಂತೂ, ನಿನ್ನ ತಂದೆಗಳು ಸ್ಥಿರಸ್ವಭಾವದವರಿದ್ದರು. ಈ ಚಂಚಲತೆ

ಯನ್ನು ನೀನೆಲ್ಲಿಂದ ಕಲಿತುಕೊಂಡಿ ? ತಂದೆಯಕಿಂತಲೂ ಮಗ ಹೀನ. ಹೀಗೆ ಜಗತ್ತಿನಲ್ಲಿ ಸದ್ಗುಣಗಳ ಹ್ರಾಸವೇ ನಡೆದಿರುತ್ತದೆ." ಎಂದು ದೇವಯಾನಿಯು ಕಮಲಾಕಾಂತನ ಸ್ಥಿತಿಯು ಹಿಂದಕ್ಕೆ ಹೀಗೇ ಆಗಿತ್ತೆಂಬುದನ್ನು ಮರೆತವಳಂತೆ ಕೇಳಿದಳು.

"ಅಮ್ಮಾ, ತಂದೆಯವರ ಯೋಗ್ಯತೆ ನನಗೆ ಹೇಗೆ ಬಂದೀತು ?"

"ನಿನಗೆ ದೇಶತ್ಯಾಗ ಮಾಡುವಂಥದೇನು ಬಂದಿರುವುದು ? ಏನಾದರೂ ದೊಡ್ಡ ಸಂಕಟ ಬಂದೊದಗಿರುವದೇನು ?"

"ಪ್ರಾಣಕ್ಕೂ ಮರ್ಯಾದೆಗೂ ಏನೂ ಹಾನಿ ಬಂದಿಲ್ಲ. ಹೀಗೆ ಕೆಲವು ಕಾರಣಗಳಿಗೋಸ್ಕರ ನನಗೆ ದೇಶ ಬಿಡಬೇಕಾಗಿದೆ."

"ರಮಾಕಾಂತ, ನನ್ನಲ್ಲಿ ನಿನಗೆ ವಿಶ್ವಾಸವಿಲ್ಲ ! ಇಂಥದಕ್ಕೇ ಸಿಟ್ಟು ಬರುವದುಂಟು. ನಿನ್ನನ್ನು ಮಗನೆಂದು ಭಾವಿಸಿಕೊಂಡು ಏಕೋಭಾವದಿಂದ ಪ್ರೀತಿಸುತ್ತಿರುವ ಮುದುಕ ಮನುಷ್ಯಳಲ್ಲಿ ನಿನ್ನ ವಿಶ್ವಾಸವಿಲ್ಲವಲ್ಲ ?" ಎಂದು ತುಸು ಕೋಪಿಸುಕೊಂಡು ಆ ಹಿತವಾದಿನಿಯು ನುಡಿದಳು.

"ನಿಮ್ಮ ಮೇಲೆ ನನ್ನ ವಿಶ್ವಾಸವಿಲ್ಲೆಂದರೆ ನನ್ನ ನಾಲಿಗೆಯೇ ಕಡಿದು ಬಿದ್ದೀತು. ಕಾರಣಗಳನ್ನು ಹೇಳಲಿಕ್ಕೆ ಹಿಂಜರಿಯುತ್ತೇನೇ ಹೊರತು ಅವಿಶ್ವಾಸದ ಮಾತೇ ಆಡಬೇಡಿರಿ. ಜಯರಾಯರ ಮುಂದೆ ಎಲ್ಲಾ ಹೇಳಿಬಿಟ್ಟಿದ್ದೇನೆ. ಅವರು ತಮ್ಮಭಿಪ್ರಾಯವನ್ನು ಒಂದೆರಡು ದಿವಸಗಳಲ್ಲಿ ಹೇಳುತ್ತೇವೆಂದು ಹೇಳಿ ತಪ್ಪಿಸಿಬಿಟ್ಟರು."

"ಜಯರಾಯನ ಅಭಿಪ್ರಾಯ ಕೇಳಿಕೊಂಡಿಯಾ ? ನಿನಗೆ ಮತ್ಯಾರೂ ಸಿಕ್ಕಲಿಲ್ಲವೇನು ? ನಿನ್ನ ಕಾರಣಗಳೆಲ್ಲ ನನಗೆ ತಿಳಿದುಹೋಗಿವೆ."

ಈ ಮಾತು ಕೇಳಿ ರಮಾಕಾಂತನು ಜಯರಾಯನ ಮೇಲೆ ಸಿಟ್ಟು ಬೆಂಕಿಯಾದನು. ಯಾರ ಮುಂದೂ ಹೇಳಕೂಡದೆಂದು ಜಯರಾಯನಿಗೆ ಸಾರಿ ಹೇಳಿರಲು ಅವನು ನನ್ನ ಗುಟ್ಟಿನ ಡಂಗುರವನ್ನೇ ಹೊಡೆದುಬಿಟ್ಟನೇ !" ಎಂದು ವ್ಯಸನಪಡುತ್ತ ರಮಾಕಾಂತನು ಕುಳಿತನು.

"ನನ್ನ ಮುಂದೆ ಹೇಳಲಿಕ್ಕೆ ನಿನಗೆ ನಾಚಿಕೆ ಬಂದಿತಲ್ಲವೆ ? ನಿನಗೆ ನಾಚಿಕೆಯಾದರೂ ಇನ್ನೂ ಬರುತ್ತದೆ ಇದೇ ದೊಡ್ಡ ಸಂಗತಿಯು" ಎಂದು ದೇವಯಾನಿಯು ರಮಾಕಾಂತನನ್ನು ಹಳಿದು ಮಾತಾಡಿದಳು.

"ಅಮ್ಮಾ, ನಾನು ನಿಮ್ಮ ಬಾಲಕನ ಸಮಾನನಿದ್ದೇನೆ. ನೀವೇನಾಡಿದರೂ

ನನಗೆ ಕೋಪವಿಲ್ಲ. ಜಯರಾಯನು ತನ್ನ ಬಾಯಿಂದಲೇ ಈ ಮಾತು ಹೇಳಿದ ನಲ್ಲವೇ ? ನಿಮಗೆಲ್ಲವೂ ವಿದಿತವಾಗಿದೆ ಎಂದು ಹೇಳುತ್ತೀರಲ್ಲ ! ನೀವೇ ಹೇಳಿರಿ ; ಈ ಮಾತು ನಾನು ಜಯರಾಯನೊಬ್ಬನಿಗೆ ಮಾತ್ರ ಹೇಳಬೇಕಾಗಿತ್ತೋ ಇಲ್ಲವೊ ?"

"ಪ್ರತ್ಯಕ್ಷವಾಗಿ ಜಯರಾಯನೇನು ಹೇಳಲಿಲ್ಲ. ಅವನ ಉಪಾಧ್ಯಾಯರು ಹೇಳಿದರಾಗಲಿಲ್ಲವೇನು ? ಜಯರಾಯನಂಥವರ ಹೊಟ್ಟೆಯಲ್ಲಿ ಮಾತುಗಳೆಂದಿಗೆ ನಿಲ್ಲುವವು ? ಅವನು ತನ್ನ ಉಪಾಧ್ಯಾಯರ ಮುಂದೆ ಹೇಳಿಬಿಟ್ಟನು. ಉಪಾಧ್ಯಾಯರ ಮುಂದೆ ಹೇಳುವದೂ ಅಗಸೇ ಬಾಗಿಲಿಗೆ ಕಟ್ಟುವದೂ ಒಂದೇ."

"ಉಪಾಧ್ಯಾಯರಾಗಲೀ ಜಯರಾಯರಾಗಲೀ ಹೇಳಿದ್ದಾದರೂ ಏನು ?" ಎಂದು ಅಂಜಂಜುತ್ತ ರಮಾಕಾಂತನು ಕೇಳಿದನು.

"ನೀನೊಬ್ಬ ತರುಣಿಯ ಮೇಲೆ ಮನಸ್ಸಿಟ್ಟು ಅವಳ ಪಾಣಿಗ್ರಹಣ ಮಾಡಲಿಕ್ಕೆ ಸಿದ್ಧನಾಗಿರುವಿ ಎಂದು !"

ರಮಾಕಾಂತನು ಎಲ್ಲಿಯೋ ತಪ್ಪು ತಿಳುವಳಿಕೆಯಾಗಿರಬಹುದೆಂದು ನೆನಸಿ "ಅಮ್ಮಾ ನಾನು ವಿವಾಹದ ಸುದ್ದಿಯನ್ನೇ ಜಯರಾಯನ ಮುಂದೆ ತೆಗಿಯಲಿಲ್ಲ ವಲ್ಲ !" ಎಂದು ಕೇಳಿದನು.

"ಇದು ನೋಡು ಕಾಂತೂ ! ನಮ್ಮಂಥವರ ಮುಂದೆ ಇಂಥ ಮಾತುಗಳನ್ನು ಬಿಚ್ಚಿ ಹೇಳುವದಕ್ಕೆ ಮಡ್ಡರಾದ ತರುಣರು ಸಂಕೋಚಗೊಳ್ಳುವದು ಸಹಜವೇ. ಆದರೂ ನಿನ್ನ ಗೌಪ್ಯವನ್ನು ಜಯರಾಯನ ಮುಂದೆ ಹೇಳಿದೇಕೆ ? ಇದೇ ಜಯರಾಯನ ಮುಂದೆ ನಿಮ್ಮ ತಂದೆಗಳು ಇಂಥ ಮಾತು ಹೇಳಿಟ್ಟಿದ್ದರಿಂದ ಅವರಿಗೆ ಆಮರಣಾಂತ ದುಃಖವಾಯಿತು. ಅದೇ ಹಾಡು ನಿನ್ನದಾದೀತಲ್ಲ !"

"ಜಯರಾಯನ ಮುಂದೆ ನನ್ನ ಗುಟ್ಟು ಹೇಳಿ ನನ್ನ ಕಾರ್ಯಸಿದ್ಧಿಯಾಗು ವಂತೆ ಯತ್ನ ಮಾಡಿರೆಂದು ನಾನು ಹೇಳಿಕೊಂಡಿಲ್ಲ. ನನಗೆ ಮದುವೆಯ ಆಸೆ ಇಲ್ಲವೇ ಇಲ್ಲ. ಅಂದ ಮೇಲೆ ಜಯರಾಯನ ಮುಂದೆ ನಾನೇನಾದರೂ ಹೇಳಿದ್ದ ರಿಂದಲೇ ನಾನು ದುಃಖಿಯಾಗುವದು ಹೇಗೆ? "

"ನಿನಗೆ ಮದುವೆಯ ಆಸೆಯೇ ಇಲ್ಲ ! ನೀನು ಮದುವೆಗೆ ಸಿದ್ಧನಾಗಿಲ್ಲ !" ಎಂದು ದೇವಯಾನಿಯು ಆಶ್ಚರ್ಯಚಕಿತಳಾಗಿ ಕೇಳಿದಳು.

"ಗಣೇಶನ ಮದುವೆಯಾದ ಮೇಲೆಯೇ ನನ್ನ ಮದುವೆ" ಎಂದು ರಮಾಕಾಂತನು ನಿರಾಸೆಯಿಂದ ನಕ್ಕನು.

"ಆ ಹುಡಿಗೆಗೂ ನಿನಗೂ ಬಡದಾಟ ಬಂತೇನು ?"

"ಯಾವ ಹುಡಿಗೆ!" ಎಂದು ರಮಾಕಾಂತನು ವಿಸ್ಮಯಾಕುಲನಾಗಿ ಕೇಳಿದನು.

"ಯಾವ ಹುಡಿಗೆಯೆಂದರೆ! ಮುಗಳೂರ ಕಮಲೆಯು."

"ಮುಗಳೂರ ಕಮಲೆ' ಎಂಬ ಶಬ್ದಗಳನ್ನು ಕೇಳಿದಾಕ್ಷಣವೇ ರಮಾಕಾಂತನಿಗೆ ಎದೆ ಮೇಲಿನ ಕಲ್ಲು ಇಳಿದಂತಾಗಿ ಚಿಂತಾಕುಲನಾಗಿದ್ದಾಗ್ಯೂ ಗಹಗಹಿಸಿ ನಕ್ಕನು.

"ಇದೇ ಗೂಢವಹುದೇನು, ದೇವಯಾನಿಯಮ್ಮ ?" ಎಂದು ಕೇಳಿದನು.

"ಈ ಮಾತು ಸುಳ್ಳೇನು ? ಇಲ್ಲವೇ ನೀನೇ ನನ್ನನ್ನು ವಂಚಿಸಬೇಕೆನ್ನುವಿಯೋ ! ಏನು ಇದ್ದದ್ದು ಹೇಳು " ಎಂದು ಗಂಭೀರತೆಯಿಂದ ದೇವಯಾನಿಯು ಕೇಳಿದನು.

"ಅಮ್ಮಾ, ಈ ಮಾತಿನಲ್ಲಿ ರವಷ್ಟಾದರೂ ಸತ್ಯಾಂಶವಿಲ್ಲ. ಈ ಕಮಲೆಯ ಪರಿಚಯು ಮಾತ್ರ ಸ್ವಲ್ಪ ನನಗುಂಟು. ಅವಳನ್ನು ನಾನು ಸೇರುವದಿಲ್ಲಷ್ಟೇ ಅಲ್ಲ ; ಅವಳ ವಿಷಯಕ್ಕೆ ನನಗೆ ತಿರಸ್ಕಾರವಿದೆ. ಅವಳಾದರೂ ನನ್ನನ್ನು ಪ್ರೀತಿಸುವಳೆಂದು ಎಂದಿಗೂ ಹೇಳಕೂಡದು. ಈ ಕಥೆಯನ್ನೇನು ಜಯರಾಯರ ಉಪಾಧ್ಯಾಯರು ಹೇಳಿದರೋ ? ಉಪಾಧ್ಯಾಯರ ಕೈಗಂಟೋ ? ಏನು ತಮಗಿಂಥವರು ಹೇಳಿದರೆಂದು ಹೇಳಿದರೊ ?"

"ಉಪಾಧ್ಯಾಯರು ಈ ಕಥೆ ಹೇಳಿದ ಕೂಡಲೆ ಜಯರಾಯನು ಅವರಿಗೆ ಸಿಟ್ಟು ಮಾಡಿ 'ಯಾರ ಮುಂದೂ ಹೇಳತಕ್ಕದ್ದಲ್ಲವೆಂದು ನಾನು ಹೇಳಿರಲಿಕ್ಕೂ ನೀವು ಈ ಮಾತು ಒಡೆದುಬಿಟ್ಟಿರಲ್ಲ' ಎಂದಂದನು. ಇದರ ಮೇಲಿಂದ ಜಯರಾಯರೇ ಉಪಾಧ್ಯಾಯರ ಮುಂದೆ ಹೀಗೆ ಹೇಳಿದ್ದನೆಂಬುದು ನಿಶ್ಚಯವೇ."

"ಜಯರಾಯನು ಇಷ್ಟು ಸುಳ್ಳಾಡುವನೆಂದು ನನಗೆ ತಿಳಿದಿದ್ದಿಲ್ಲ!" ಎಂದು ರಮಾಕಾಂತನಂದು ಬಗ್ಗಿ ಮೇಜಿನ ಮೇಲೆ ತಲೆ ಇಟ್ಟುಕೊಂಡು ಕುಳಿತನು.

"ರಮಾಕಾಂತ, ಹಾಗಾದರೆ ನೀನು ಜಯರಾಯನ ಮುಂದೆ ಏನು ಹೇಳಿದ್ದಿ ? ಯುವತಿಯರ ಮೇಲಿನ ಪ್ರೇಮದ ಸಂಬಂಧವಾದ ಮಾತೇ ಇರಲಿಕ್ಕೆ ಸಾಕು."

"ಅಹುದು " ಎಂದು ಮೋರೆಯೆತ್ತದೆ ರಮಾಕಾಂತನು ಅಂದನು,

"ಇಂದಿರೆಯು ನಿನ್ನ ಪ್ರೀತಿಪಾತ್ರಳಾಗಿರುವಳೇನು ?"

"ನಿಮಗೆ ತಿಳಿದಂತಾಯಿತಲ್ಲ. ನನ್ನ ಬಾಯಿಂದೇಕೆ ಆಡಿಸುತ್ತೀರಿ ?"

ದೇವಯಾನಿಯು ಕಡುಕೋಪಗೊಂಡು "ಮೂರ್ಖಾ ! ಇಂದಿರೆಯನ್ನು ಶ್ರೀಕಂಠನಿಗೆ ಕೊಡುವದು ಗೊತ್ತಾಗಿರಲಿಕ್ಕೂ ಅವಳ ಮೇಲೆ ಅಪೇಕ್ಷೆಯನ್ನಿಡುವದು ಉಚಿತವೇ ?" ಎಂದು ಗದ್ದರಿಸಿ ನುಡಿದಳು.

"ಅಮ್ಮನವರೇ, ಇದರಲ್ಲಿ ನನ್ನದೇನೂ ತಪ್ಪಿಲ್ಲ. ಇಂದಿರೆಯನ್ನು ಶ್ರೀಕಂಠನಿಗೆ ಕೊಡುವುದು ಮೊನ್ನೆ ನಿಶ್ಚಯವಾಗಿರುವದು. ಶ್ರೀರಂಗಪಟ್ಟಣಕ್ಕೆ ನಾನು ಹಿಂದಿನಸಾರೆ ಬಂದಾಗ್ಯೇನೇ ಅವಳ ಗುಣರೂಪಗಳನ್ನು ಕಂಡು ಪ್ರೀತಿವಶನಾಗಿರುವೆನು."

"ನಿಶ್ಚಯವಾದ ಮೇಲೆ ನೀನು ಇಂದಿರೆಯ ಕೂಡ ಮಾತಾಡಿಲ್ಲ !"

"ಅದಕ್ಕೂ ಪೂರ್ವದಲ್ಲಿಯೇ ನಾನು ಜಯರಾಯನ ಮುಂದೆ ನನ್ನ ಮನೋಗತವನ್ನು ಹೇಳಲು ಅವನು ನನ್ನನ್ನು ಧಿಕ್ಕರಿಸಿದ್ದರಿಂದ ಆಗಿನಿಂದ ಈ ವರೆಗೂ ನಾನು ಇಂದಿರೆಯ ಮೋರೆಯನ್ನು ಕೂಡಾ ನೋಡಲಿಲ್ಲ."

"ಶಾಬಾಸ್ ! ಕಾಂತೂ, ನಾನು ಅನ್ಯಾಯವಾಗಿ ಕಠೋರ ವಚನಗಳನ್ನಾಡಿದೆನು. ಅದನ್ನೇನೂ ನೀನು ಮನಸ್ಸಿಗೆ ಹಚ್ಚಿಕೊಳ್ಳಬೇಡ."

"ನೀವು ಒಳ್ಳೇ ಭಾವದಿಂದಾಡಿದಿರಿ. ಏನೂ ಚಿಂತೆಯಿಲ್ಲ."

"ನಿನ್ನ ಮನೋಗತವನ್ನು ಜಯರಾಯನಿಗೆ ಹೇಳಿ ಏನು ಪಡಕೊಳ್ಳುವದಿತ್ತು ? ತನ್ನ ಮಗಳಿಗೆ ನೀನು ತಕ್ಕವನಾದ ವರನೆಂದು ತಿಳಿದು ಅವಳನ್ನು ನಿನಗೆ ಕೊಟ್ಟು, ಮಕ್ಕಳಿರಾ, ಸುಖಿಯರಾಗಿ ಇರಹೋಗಿರೆಂದು ಹರಸುವಂಥ ಉದಾತ್ತ ಮನಸ್ಸಿನವನು ಜಯರಾಯನಲ್ಲೇ ಅಲ್ಲ. ತನ್ನ ಮಗಳ ಸುಖವನ್ನು ಈಡಾಡಿ ಈ ಮೂರ್ಖನು ತನ್ನ ಪ್ರತಿಷ್ಠೆ ಬೆಳಸಿಕೊಳ್ಳಲಿಕ್ಕೆ ಹಿಂದೆ ಮುಂದೆ ನೋಡುವವನಲ್ಲ."

"ಜಯರಾಯನ ಬಳಿಯಲ್ಲಿ ನಾನು ಏನೂ ಕೇಳಿಕೊಳ್ಳಲಿಕ್ಕೆ ಹೋಗಲಿಲ್ಲ. ಹೇಳದೆ ಕೇಳದೆ ನಾನು ದೇಶಬಿಟ್ಟು ಹೋಗುವುದುಚಿತವಲ್ಲೆಂದು ನಾನು ಹೇಳಲಿಕ್ಕೆ ಹೋದೆನು. ಯಾಕೆ ಹೋಗುವಿಯೆಂದು ಕೇಳಿದ್ದಕ್ಕೆ ಇದ್ದ ಕಾರಣವನ್ನೇ ಹೇಳಿದೆನು." ಎಂದು ರಮಾಕಾಂತನು ಹೇಳಿದನು.

"ಇಂದಿರೆಯ ಮೇಲೆ ನಿನ್ನ ಪ್ರೀತಿಯು ದೃಢವಾಗಿರುವುದೇನು ? ನಿನ್ನ ಮನವನ್ನು ನೀನು ಚನ್ನಾಗಿ ಅರಿತುಕೊಂಡಿರುವಿಯಾ ?"

"ಈ ಪ್ರೀತಿಯು ನನ್ನ ಸಂಗಡ ಚಿತೆಯಲ್ಲಿಯೇ ಹೋಗತಕ್ಕದ್ದು."

“ ಛೀ ಹುಚ್ಚಾ ! ಹೀಗೆ ಮಾತಾಡುವರೇನೋ ಕಾಂತೂ, ಒಳಿತನ್ನು. ಇಂದಿರೆಯು ಶ್ರೀಕಂಠನನ್ನು ಪ್ರೀತಿಸುವಳೇನು ?”

“ ಇಲ್ಲ. ಆದರೂ ಪ್ರಯೋಜನವೇನು ? ಅವಳು ಶ್ರೀಕಂಠನನ್ನು ಮದುವೆ ಮಾಡಿಕೊಳ್ಳಲಿಕ್ಕೆ ಒಪ್ಪಿರುವಳೆಂದು ಕೇಳಿದ್ದೇನೆ.” ಎಂದು ರಮಾಕಾಂತನಂದನು.

“ ಕಮಲಾಕಾಂತರ ಮಗನೂ ಕೂಡ ನನ್ನ ನೆರಳಲ್ಲಿದ್ದಾಗ್ಯೂ ವಿರಹದುಃಖಿ ಯಾದದ್ದನ್ನು ನೋಡುವದು ನನ್ನ ಹಣೆಯಲ್ಲಿ ಬರೆದಿದ್ದಿಯಾ ಭಗವಂತಾ !” ಎಂದು ಆಕಾಶದ ಕಡೆಗೆ ನೋಡಿ ದೇವಯಾನಿಯು ನಿಟ್ಟುಸುರುಗರೆದಳು.

“ ದೇವಯಾನಿಯಮ್ಮಾ, ನೀವು ಚಿಂತಿಸಬೇಡಿರಿ. ನಾನು ವಿರಹಿಯಾದರೂ ಹೇಡಿಗಳಂತೆ ಹೃದ್ರೋಗ ಹಚ್ಚಿಕೊಂಡು ನವಿಯುವದಿಲ್ಲ. ಗೌತಮರು ರಾಜ್ಯ ಬಿಟ್ಟು ವಿರಕ್ತರಾದರು, ಜಯತೀರ್ಥರು ರೂಪವತಿಯಾದ ಹೆಂಡತಿಯನ್ನೂ ಐಶ್ವರ್ಯವನ್ನೂ ಬಿಟ್ಟು ಸನ್ಯಾಸಿಗಳಾದರು. ಆ ಮಹಾತ್ಮರೇನು ತಾವು ಮಾಡಿದ ತ್ಯಾಗಕ್ಕೆ ಪಶ್ಚಾತ್ತಾಪಪಟ್ಟು ಹೊಟ್ಟೆ ಬೇನೆ ಹಚ್ಚಿಕೊಂಡರೇ ? ನಾನಂತೂ ಕೇವಲ ಒಣ ಹಂಬಲವನ್ನೇ ತ್ಯಾಗಮಾಡುತ್ತೇನಲ್ಲ !”

ದೇವಯಾನಿಯು ರಮಾಕಾಂತನ ಬೆನ್ನು ಚಪ್ಪರಿಸಿ “ ಶಾಬಾಸ್ ಮಗನೇ, ನೀನು ಧೀರನೇ ಇರುವಿ. ಕಾಂತೂ, ಇಂದಿರೆಯು ಶೃಂಗಾರ ಚೇಷ್ಟೆಗಳಿಂದ ನಿನ್ನನ್ನು ಮೋಹಗೊಳಿಸಿದಳೇನು ?”

“ ಛೇ ! ಇಂದಿರೆಯು ಪಂಪಾಸರಸ್ಸಿನ ಜಲದಂತೆ ನಿರ್ಮಲವಾದ ಭಾವ ದವಳು. ಅವಳ ನಡತೆಗೆ ಹೆಸರಿಡುವಂತಿಲ್ಲ. ಅವಳ ಸೌಂದರ್ಯಕ್ಕೂ ಗುಣಕ್ಕೂ ಮೆಚ್ಚಿ ಜನರು ತಾವಾಗಿ ಮೋಹದಲ್ಲಿ ಸಿಕ್ಕಿಕೊಂಡರೆ ಅವಳೇನು ಮಾಡುವಳು ?”

“ ಇಂದಿರೆಯು ಕೂಡ ನಿನ್ನ ವಿವಾಹವಾಗುವುದು ಅಸಂಭವವಾದ ಸಂಗತಿ ಯಾಗಿರುವದೇನು ? ಆಸೆಗೆ ಏನೂ ಮಾರ್ಗ ಉಳಿದಿಲ್ಲವೇ ?”

“ ನನ್ನ ಕಣ್ಣಿಗಂತೂ ಆಸೆಗೆ ಏನೂ ಆಸ್ಪದವಿದ್ದಂತೆ ಕಾಣುವದಿಲ್ಲ.” ಎಂದು ವಿಷಾದದೊಂದಿಗೆ ರಮಾಕಾಂತನಂದನು.

“ ಇದೊಂದು ಇದ್ದದ್ದರಲ್ಲಿ ಗುಣವೇ. ಸುಳ್ಳು ಆಸೆಯೋ ಮನೆ ಮುರಿ ಯುವದು.”

“ ಈ ಹಾಳು ಹರಟೆ ಸಾಕು. ನಾನು ನಾಳಿನ ದಿವಸವೇ ಜಪಾನ ದೇಶಕ್ಕೆ ಹೊರಟುಹೋಗಬೇಕೆಂದು ಮಾಡಿದ್ದೇನೆ. ಈ ಮಾತಿನಗೋಸ್ಕರವೇ ನಾನು ನಿಮ್ಮಭಿಪ್ರಾಯ ಕೇಳಬಂದಿರುವೆನು.”

“ಆದೇಕೆ ? ಇಲ್ಲಿಯೇ ನಿಂತು ನಿನ್ನ ಉದ್ಯೋಗವನ್ನು ನಡಿಸಲಿಕ್ಕೆ ಏನು ಬಾಧಕವದೆ ? ನಿನ್ನ ಕೆಲಸ ಚೆನ್ನಾಗಿ ಸಾಗಿರುವದೆಂದು ಪತ್ರ ಬರೆಯುತ್ತಿದ್ದಿಯಲ್ಲ? ವಿರಹಿಯಾಗಿ ತದೇಕಧ್ಯಾನದಲ್ಲಿದ್ದು ನಾಲ್ಕು ಜನರ ಕಡಿಂದ ‘ಪಾಪ ರಮಾಕಾಂತನ ಅವಸ್ಥೆ ವಿರಹದಿಂದ ಹೀಗಾಯಿತು’ ಎಂದು ಸಂಭಾವನೆ ಮಾಡಿಸಿಕೊಂಡರೆ ಜನ್ಮಕ್ಕೆ ಬಂದದ್ದರ ಸಾರ್ಥಕ್ಯವಾಯಿತೆಂದು ತಿಳುಕೊಳ್ಳುವಿಯೇನು ?”

“ಅಮ್ಮಾ, ನಾನು ತದೇಕಧ್ಯಾನದಲ್ಲಿ ಇದ್ದು ಕೊಳೆಯುವದಿಲ್ಲ. ಜಪಾನ ದಂಥ ದೇಶಕ್ಕೆ ಹೋಗಿ ಅಲ್ಲಿಯ ಸುಧಾರಣೆ, ಶೋಧ, ವ್ಯವಸ್ಥೆ ಮುಂತಾದವು ಗಳನ್ನು ಕಂಡುಕೊಂಡು ಬಂದು ದೇಶದ ಉದ್ಧಾರದ ಕೆಲಸದಲ್ಲಿ ತನು ಮನ ಧನಗಳನ್ನು ವೆಚ್ಚಮಾಡಿ ಜನ್ಮಕ್ಕೆ ಬಂದದ್ದರ ಸಾರ್ಥಕ್ಯ ಮಾಡಿಕೊಳ್ಳುತ್ತೇನೆ.” ಎಂದು ಕೃತನಿಶ್ಚಯನಾದ ಮಹಾಪುರುಷನ ಆವಿರ್ಭಾವವನ್ನು ತಂದುಕೊಂಡು ನುಡಿದನು.

“ಇಲ್ಲಿಯೇ ಇದ್ದು ದೇಶಸೇವೆ ಮಾಡಿದರಲ್ಲೇನು ?” ಎಂದು ದೇವ ಯಾನಿಯು ಕೇಳಿದಳು.

“ಇಲ್ಲಿದ್ದು ಇಂದಿರೆಯು ಅನ್ಯರ ವಶದಲ್ಲಿರುವದನ್ನು ನೋಡುವದಕ್ಕಿಂತಲೂ ತುಂಬಿ ಹರಿಯುವ ಕಾವೇರಿಯಲ್ಲಿ ಹಾರಿಕೊಂಡು ಪ್ರಾಣತ್ಯಾಗ ಮಾಡುವದೇನು ಕೆಟ್ಟ ?”

“ಆತ್ಮಘಾತದಂಥ ಹೇಸಿ ಕೆಲಸವು ನಿನ್ನಿಂದಾಗದು. ಮುದ್ದೂರ ನಟೇಶ ನಂಥವರ ಕೆಲಸವದು. ರಮಾಕಾಂತ, ನೀನು ಸ್ನಾನಕ್ಕೆ ನಡೆ” ಎಂದು ಹೇಳಿ ರಮಾಕಾಂತನನ್ನು ಕಳುಹಿಸಿ ಈ ಹುಡುಗನಿಗಾದ ವ್ಯಸನವನ್ನು ಧ್ಯಾನಕ್ಕೆ ತಂದು ಕೋಮಲಾಂತಕರಣೆಯಾದ ಆ ಮುದುಕಿಯು ಕಣ್ಣಿಗೆ ನೀರು ತಂದು ಯೋಚಿಸುತ್ತ ಕುಳಿತಳು.

ತಾನು ಇಂದಿರೆಯ ಮೋಹದಿಂದ ವ್ಯಥಿತನಾಗಿರುವೆನೆಂದು ರಮಾಕಾಂತನು ಜಯರಾಯನ ಮುಂದೆ ಹೇಳಿದನು. ರಮಾಕಾಂತನು ಕಮಲೆಯಲ್ಲಿ ಆಸಕ್ತ ಮನಸ್ಕನವನಾಗಿ ಅವಳನ್ನು ಮದುವೆಯಾಗಲಿಚ್ಛಿಸುವನೆಂದು ಜಯರಾಯನು ಇಂದಿರೆಯ ಮುಂದೆ ಹೇಳಿದನು. ಇಂದಿರೆಯು ಶ್ರೀಕಂಠನ ಪತ್ನಿಯಾಗಲೊಪ್ಪಿ ದರೂ ಆರುತಿಂಗಳ ಅವಧಿ ಬೇಡಿರುವಳು. ಇವೆಲ್ಲವುಗಳ ಮಥಿತಾರ್ಥವೇನಾಗು ವದು ? ಇಂದಿರೆಯ ಪ್ರೇಮವು ಶ್ರೀಕಂಠನ ಮೇಲಿಲ್ಲವೆಂದು ರಮಾಕಾಂತನು ಹೇಳುವದು ಸತ್ಯವಾಗಿ ತೋರುತ್ತದೆ. ಪ್ರೇಮವಿದ್ದ ಪಕ್ಷದಲ್ಲಿ ಲಗ್ನಕ್ಕೆ ಅವಧಿ

ಯಾಗುವ ಪ್ರಯೋಜನವೇನು? ರಮಾಕಾಂತನು ಜಯರಾಯನ ಮುಂದೆ ಹೇಳಿದ್ದೊಂದು; ಜಯರಾಯ ಹುಟ್ಟಿಸಿ ಹೇಳುವದು ಬೇರೊಂದು. ಇದಕ್ಕಾದರೂ ಕಾರಣವೇನಿರಬಹುದು? ಇಂದಿರೆಯು ರಮಾಕಾಂತನ ಮೇಲೆ ಆಸಕ್ತಿಯುಳ್ಳವಳಾದ್ದರಿಂದ ರಮಾಕಾಂತನಲ್ಲಿಟ್ಟಿರುವ ಅವಳ ಪ್ರೇಮವನ್ನು ತಪ್ಪಿಸಬೇಕೆಂದು ಜಯರಾಯನ ಯತ್ನವಿದ್ದಿರಲಿಕ್ಕೆ ಸಾಕು.

ದೇವಯಾನಿಯ ಅಭಿಪ್ರಾಯವು ತಾನು ಬೆಂಗಳೂರು ಬಿಟ್ಟು ಹೋಗಬಾರದೆಂದು ಬಿದ್ದಿದ್ದರಿಂದ ರಮಾಕಾಂತನು ಈ ಮಾತಿನ ಬಗ್ಗೆ ಬೆಂಗಳೂರಲ್ಲಿ ಹೆಚ್ಚಿಗೆ ವಿಚಾರ ಮಾಡತಕ್ಕದ್ದೆಂದು ಯೋಚಿಸಿ ಅದೇ ದಿವಸ ಸಾಯಂಕಾಲಕ್ಕೆ ಬೆಂಗಳೂರಿಗೆ ಬಂದನು. ದೇವಯಾನಿಯ ಮನೆಗೆ ಬಂದದ್ದರಿಂದ ತನಗೆ ಎಷ್ಟೋ ಹೊಸ ಸಂಗತಿಗಳು ತಿಳಿಯಬಂದವು. ಜಯರಾಯನು ಅರ್ಥಕ್ಕೆ ಅನರ್ಥ ಹೇಗೆ ಮಾಡಿರುವನೆಂಬ ಮುಖ್ಯವಾದ ಸಂಗತಿಯೊಂದೇ ತಿಂಗಳಾನುತಿಂಗಳ ವರೆಗೆ ವಿಚಾರಮಾಡಲಿಕ್ಕೆ ಅನ್ನವಾಯಿತು.

ಬೆಂಗಳೂರಿಗೆ ಬಂದವನೇ ರಮಾಕಾಂತನು ತನ್ನ ಪರಮಸ್ನೇಹಿತನಾದ ರಂಗರಾಯನನ್ನು ಕರೆಸಿಕೊಂಡು ಅವನ ಮುಂದೆ ತಾನು ಜಪಾನಕ್ಕೆ ಹೊರಡುವ ವಿಚಾರವನ್ನು ತೆಗೆದನು.

"ರಮಾಕಾಂತರಾವ, ನಿಮ್ಮ ಕೆಲಸ ಛಂದಾಗಿ ನಡೆದಿರುವದು. ಜಪಾನದಲ್ಲೇನು ನಿಮ್ಮ ಸ್ವಾಸ್ತಿ ಇದೆ? ನಮ್ಮ ಕರ್ನಾಟಕರಿಗೆ ಅನ್ಯದೇಶದಲ್ಲಿರುವದು ಮನಸ್ಸಿಗೆ ಬರುವದಿಲ್ಲ. ಅಲ್ಲಿ ಹೋಗಿ ಪೇಚಾಟ ಪಡಬೇಡರಿ."

"ನಿರ್ವಾಹವಿಲ್ಲದಿದ್ದರೆ ಮನಸ್ಸಿಗೆ ಬಂದರೇನು ಬಾರದಿದ್ದರೇನು? ಹೋಗೇತೀರತಕ್ಕದ್ದು. ಇಲ್ಲಿರುವುದು ನನ್ನ ಜೀವದ ಸುತ್ತು ಬಂದಂತಾಗಿದೆ. ಇನ್ನು ಇಲ್ಲಿಯ ರಾಜ್ಯ ಕೊಟ್ಟರೂ ನನ್ನಿಂದಿರೋಣಾಗದು. ಪ್ರಸಂಗ ಬಂದಾಗ್ಯೆ ನಿಮ್ಮ ಕಡಿಂದ ಕೌಪೀನ ದಂಡಕಾಷ್ಟಗಳನ್ನು ಬೇಡಿಕೊಳ್ಳುವೆನೆಂದು ಒಂದಾವರ್ತಿ ಹೇಳಿದ್ದೆನಲ್ಲ! ಆ ಪ್ರಸಂಗವೀಗ ಬಂದೊದಗಿರುವದು." ಎಂದು ರಮಾಕಾಂತನಂದನು.

"ನಿಮ್ಮ ಅಶಾತಂತುವು ಕಡೆಗೆ ಹರಿದುಹೋಯಿತೇ? ಪಾಪ! ಹಾಗಾದರೆ ಇನ್ನು ಹೇಳಿಬಿಡಿರಿ ನೋಡುವ, ನಿಮ್ಮ ಪ್ರೀತ್ಯಾಸ್ಪದಳಾರು, ನಿಮ್ಮ ಆಶಾಂತತುವು ಹೇಗೆ ಹರಿಯಿತೆಂಬದು?"

"ಇನ್ನು ಹೇಳಲಡ್ಡಿ ಇಲ್ಲ. ಸಾವುಕಾರ ಜಯರಾಯನನ್ನು ನೀವು

ಬಲ್ಲಿರಲ್ಲ. ಆವನ ರೂಪವತಿಯಾದ ನಂದಿನಿಯೇ ನನ್ನ ವಿಷಬೆರೆತ ಅಮೃತವು."

"ಶಾಸಾಬ್ 'ಲುಠೇತೋ ಭಂಡಾರ!' ನಿಮ್ಮ ಮನಸ್ಸು ಕೇವಲ ನಿಮ ಗನುರೂಪಳಾದ ಕುಲಾಂಗನೆಯಲ್ಲಿ ಆಸಕ್ತವಾಗಿರುವದು. ನಿಮ್ಮ ಆಶಾತಂತುವು ಹೇಗೆ ಹರಿದುಹೋಯಿತು ?"

"ಇಂದಿರೆಯು ನನ್ನ ಕೂಡಾ ನಿರಂತರವಾದ ಸ್ನೇಹದಿಂದಿರುವೆನೆಂದು ಹೇಳಿದ್ದಳು. ಎಷ್ಟೋ ವಿಷಯುಗಳಲ್ಲಿ ನಮ್ಮಿಬ್ಬರ ವಿಚಾರಗಳೊಂದೇ ಆದವು. ಇಂದಿರೆಯು ನನ್ನನ್ನು ಪ್ರೀತಿಸುವಳೆಂದು ನಿಶ್ಚಯವಾಗಿ ಹೇಳಲಿಕ್ಕೆ ಬರದಿದ್ದರೂ ಕಾಲಾಂತರದ ಮೇಲಾದರೂ ನನ್ನ ಮೇಲೆ ಪ್ರೇಮವಿಡುವ ಸಂಭವವಿತ್ತು. ಅವಳ ಪ್ರೇಮವು ಇನ್ನೂ ಅನ್ಯರ ಮೇಲೆ ತಿಲಮಾತ್ರವೂ ಇಲ್ಲ. ಜಯರಾಯನು ನನ್ನ ವಿರುದ್ಧವಾಗಿ ಇದ್ದದ್ದು ಇಲ್ಲದ್ದು ತನ್ನ ಮಗಳಿಗೆ ಬೋಧಿಸಿದ್ದರಿಂದ ಅವಳು ನಿರ್ವಾಹವಿಲ್ಲದೆ ಶ್ರೀಕಂಠನನ್ನು ಲಗ್ನ ಮಾಡಿಕೊಳ್ಳುವದಕ್ಕೊಪ್ಪಿರುವಳು."

"ಜಯರಾಯನಿಗೆ ತನ್ನ ಮಗಳ ಲಗ್ನ ಮಾಡಿಬಿಡುವ ಆತುರತೆಯುದೆ. ಶ್ರೀಕಂಠನಂತೂ ಜಯರಾಯನ ಅಳಿಯನಾಗಿ ಆತನ ಧನಕ್ಕೆಲ್ಲ ಎಂದು ಒಡೆಯ ನಾಗುವೆನೋಯೆಂದು ಹಾತೊರೆಯುತ್ತಿರಬಹುದು. ಹೀಗಿದ್ದು ಈ ಲಗ್ನ ಮುಂದಕ್ಕೇಕೆ ಬಿದ್ದಿರುವದು ? ಇದರಲ್ಲೇನೋ ಗೂಢವಿದೆ, ಸಂಶಯವಿಲ್ಲ. ಜಯರಾಯನು ಮರಳಿ ಬರಲಿ. ಅಲ್ಲಿಂದೇನೇನು ಸಂಗತಿಗಳು ಸಂಭವಿಸುವವೋ ನೋಡೋಣ. ಸದ್ಯಕ್ಕೆ ನೀವು ಬೆಂಗಳೂರು ಬಿಟ್ಟು ಹೋಗುವ ವಿಚಾರ ಮಾಡ ಬೇಡಿರಿ. ಮುಂದಿನ ವಿಚಾರ ಮುಂದೆ." ಎಂದು ರಂಗರಾಯನು ರಮಾಕಾಂತ ನಲ್ಲಿ ಆಸೆ ಹುಟ್ಟಿಸುವಂಥ ಮಾತಾಡಿದನು.

"ರಂಗರಾವ, ನಿಮ್ಮ ವಿಚಾರಗಳು ಸೊಗಸಾಗಿವೆ. ನಾನು ವಿಚಾರ ತಿಳ ಕೊಂಡು ಏನನ್ನುವದು ನಿಮಗೆ ನಾಲ್ಕು ದಿವಸಗಳ ಮೇಲೆ ತಿಳಿಸುವೆನು."

ಆ ಮೇಲೆ ಈ ಮಿತ್ರರೀರ್ವರೂ ಬಹಳೊತ್ತು ಭಿನ್ನ ಭಿನ್ನ ವಿಷಯಗಳ ಮೇಲೆ ಮಾತಾಡುತ್ತ ಕುಳಿತು ಕಡೆಗೆ ರಂಗರಾಯನು ಮನೆಗೆ ಹೋಗುವದಕ್ಕೆ ಅಪ್ಪಣೆ ಪಡಕೊಂಡು ಹೊರಟುಹೋದನು.

ಕಾಶೀಯಾತ್ರೆ

ಕಾಶೀಯಾತ್ರೆಗೆ ಹೊರಡುವದಕ್ಕೆ ಮುಂಚಿತವಾಗಿ ಜಯರಾಯನೂ ಇಂದಿರೆಯೂ ಶ್ರೀರಂಗಪಟ್ಟಣಕ್ಕೆ ಹೋಗಿ ಆ ಊರಲ್ಲಿದ್ದ ತಮ್ಮ ಮನೆಯ

ಸಂಬಂಧವಾಗಿ ಮಾಡತಕ್ಕ ವ್ಯವಸ್ಥೆಯನ್ನು ಮಾಡಿ ಉತ್ತರ ದೇಶದ ಸಂಚಾರಾರ್ಥ ವಾಗಿ ಹೊರಟುಹೋದರು.

ಇವರು ಮಹಾರಾಷ್ಟ್ರ, ಗುಜರಾಥ, ಮುಂತಾದ ದೇಶಗಳನ್ನು ನೋಡುತ್ತ, ಕೃಷ್ಣಾ, ಗೋದಾವರೀ, ನರ್ಮದಾ ಮುಂತಾದ ಮಹಾನದಿಗಳಲ್ಲಿ ಸ್ನಾನ ಮಾಡಿ ಕೊಂಡು ತ್ರಿವೇಣೀ ಸಂಗಮಕ್ಕೆ ಬಂದರು. ಈ ಸಂಗಮದ ಮೇಲೆಯೇ ಪುರು ವಂಶದ ಪುಣ್ಯಶ್ಲೋಕರಾದ ಚಕ್ರವರ್ತಿಗಳ ರಾಜಧಾನಿಯು ಪ್ರಾಚೀನ ಕಾಲ ದಲ್ಲಿತ್ತು. ಆ ಪ್ರತಿಷ್ಠಾ ನಗರಿಯು ಕುಲಗೆಟ್ಟು ಅಲ್ಲಾಬಾದೆಂಬ ಮಹಮದೀ ಹೆಸರು ಧರಿಸಿಕೊಂಡು ನಿಃಶಂಕೆಯಿಂದ ಪ್ರಮುಖವಾದ ಪಟ್ಟಣವೆಂದು ಮೆರೆಯು ವದನ್ನು ಕಂಡು ಧರ್ಮಾಂತರ ಹೊಂದಿದ ಪಂಡಿತಾ ರಾಧಾಬಾಯಿಯು ನೆನಪಾಗಿ ಇಂದಿರೆಗೆ ವಿಲಕ್ಷಣವಾದ ವಿಸ್ಮಯವಾಯಿತು. ಸ್ನಾನಮಾಡುವದಕ್ಕಾಗಿಯೂ ಅಲ್ಲಿದ್ದ ಅದ್ಭುತವಾದ ಶೋಭೆಯನ್ನು ನೋಡುವದಕ್ಕಾಗಿಯೂ ತಂದೆ ಮಕ್ಕಳೂ ಸಂಗಮಕ್ಕೆ ಹೋದರು.

ಸಮಸ್ತಲೋಕದ ಪಾಪ ಪರಿಹಾರ ಮಾಡಬೇಕೆಂಬ ಸದುದ್ಯೋಗಕ್ಕಾಗಿ ಹೊರಟ ಸುರನದಿಗೆ ಸಹಾಯ ಮಾಡುವದಕ್ಕಾಗಿ, ಪಾಪಿಗಳನ್ನು ಕಂಡು ಬೇಸತ್ತ ಯಮರಾಜನು, ತನ್ನ ತಂಗಿಯಾದ ಯಮುನೆಯನ್ನು ಕಳುಹಿಸಲು ಅವಳು ತಡ ವಾಗಿ ಬಂದಿರುವೆನೋ ಎಂಬ ಅಂಜಿಕೆಯಿಂದ ಒಳ್ಳೇ ರಭಸದೊಡನೆ ಬಂದು ಭಾಗೀರಥಿಗೆ ಕೂಡಿದಂತೆ ಕಾಣುತ್ತಿತ್ತು. ಈ ಎರಡೂ ಮಹಾನದಿಗಳ ಪ್ರಚಂಡ ವಾದ ಪ್ರವಾಹಗಳೇಕಾಕಾರವಾದಲ್ಲಿ ಕಂಡು ಬರುವ ಅಪರಂಪಾರವಾದ ಜಲ ಸಮುಚ್ಚಯವನ್ನು ನೋಡುವವರ ಕಣ್ಣು ತಿರುಗುವಂತಿತ್ತು. ನಸುಗೆಂಪಾದ ನೀರಿನ ತರಂಗಗಳು ಇಂದ್ರನ ವಜ್ರಾಯುಧದ ಘಾತ ತಪ್ಪಿಸಿಕೊಂಡ ಹೇಮಗಿರಿಯ ಮರಿಗಳು ಓಡಾಡುತ್ತವೇನೋ ಎಂಬಂತೆ ರಮಣೀಯವಾಗಿ ಕಾಣಿಸುತ್ತಿದ್ದವು. ದಾಕ್ಷಿಣಾತ್ಯಳಾದ ಶ್ಯಾಮವರ್ಣದ ಯಮುನೆಯು, ತನಗೆ ನೂತನ ಪರಿಚಿತಸ್ತಳಾದ ಕಾರಣ ಅವಳೊಡನೆ ವಿಶೇಷ ಸಂಘಟನೆ ಮಾಡಲಿಚ್ಛಿಸದೆ ಸುಧಾಸೌಂದರ್ಯ ವುಳ್ಳವಳಾದ ಗಂಗಾದೇವಿಯು ಭಿನ್ನಪ್ರವಾಹವುಳ್ಳವಳಾಗಿ ನಡೆದಿರುವಳು.

"ಇಂದಿರಾ, ಯುರೋಪೀಯರು ಏತದ್ದೇಶೀಯರೊಡನೆ ಸಂಪರ್ಕ ಮಾಡಿ ದರೆ ತಮ್ಮ ಗೌರವ ಕೆಟ್ಟೀತೆಂಬ ಅಭಿಮಾನದಿಂದ ಅಲಿಪ್ತರಾಗಿರುವಂತೆ ಶುಭ್ರ ವರ್ಣಳಾದ ಮಂದಾಕಿನಿಯು ಕಲಿಂದಕನ್ಯೆಯೊಡನೆ ಕೂಡಿ ಹೋಗಲು ಮನಸ್ಸಿ ಲ್ಲದೆ ಹೇಗೆ ತನ್ನ ಜಂಭದಲ್ಲಿಯೇ ಹೋಗುತ್ತಿರುವಳು ನೋಡಿದಿಯಾ ?"

"ಭಗವಂತನ ಕೇವಲ ಪಾದಾಂಬುಜದ ಸ್ಪರ್ಶಮಾತ್ರದಿಂದಲೇ ಪ್ರತಿಷ್ಠೆ ಪಡಕೊಂಡ ಈ ಮೂರಾಬಟ್ಟೆಯ ಗತಿಯುಳ್ಳವಳಾದ ತ್ರಿಪಥಗಾಮಿನಿಯ ಜಂಭವೆಷ್ಟು ? ಭಗವಂತನಾದ ಶ್ರೀಕೃಷ್ಣನು ನನ್ನ ನಿರ್ಮಲೋದಕದಲ್ಲಿ ನಿತ್ಯದಲ್ಲಿಯೂ ಸಂತೋಷದಿಂದ ಮೀಯುತ್ತಿದ್ದನಾದದರಿಂದ ನನ್ನ ಮಹಾತ್ಮೆಯು ಈ ಗಂಗೆಗೆ ಹೇಗೆ ಬಂದೀತೆಂಬ ಗರ್ವದಿಂದ ಯಮುನೆಯು ತನಗಾದರೂ ಇವಳ ಸಂಬಂಧವೇಕೆಂದು ಸ್ವತಂತ್ರಳಾಗಿ ಹೋಗುತ್ತಿರುವದನ್ನು ನೋಡಿರಿ!" ಎಂದು ಇಂದಿರೆಯು ನುಡಿದಳು.

ಈ ಪ್ರಕಾರ ಗಂಗಾ ಯಮುನೆಯರ ಸಂಯೋಗದ ಶೋಭೆಯನ್ನು ನೋಡುತ್ತ "ಗಂಗೇ ಮಂಗಲತರಂಗೇ" ಎಂದು ಗರ್ಜಿಸಿ ಸ್ನಾನ ಮಾಡುವ ಸ್ತ್ರೀಪುರುಷರ ಅಸಂಖ್ಯ ಸಮುದಾಯವನ್ನು ಭಾವಿಕರು ಪಾಪಹಾರಿಣಿಯ ದುಸ್ತರವಾದ ಜಲಾಶಯದಲ್ಲಿ ದುಡ್ಡು ಕಾಸುಗಳನ್ನು ಚಲ್ಲಲು ಅಂಬಿಗರ ಚಿಕ್ಕ ಮಕ್ಕಳು ಟುಮುಕ್ಕನೆ ಮುಳುಗಿ ಕೌಶಲದಿಂದ ತಪ್ಪದೆ ಅವುಗಳನ್ನೆತ್ತಿಕೊಂಡು ಬರುವದನ್ನೂ ನೋಡಿ ಕೌತುಕಪಡುತ್ತ ಕೆಲಹೊತ್ತು ನಿಂತು ತಮ್ಮ ಸ್ಥಳಕ್ಕೆ ಹೊರಟುಹೋದರು.

ಅಲ್ಲಿಂದಿವರು ಪ್ರಾಣಿಗಳ ಪುನರ್ಜನ್ಮ ತಪ್ಪಿಸುವಂಥ ಮಹಾಪವಿತ್ರ ಕ್ಷೇತ್ರವಾದ ಕಾಶೀ ಪಟ್ಟಣಕ್ಕೆ ಬಂದು ಕಾರ್ತಿಕ ಸ್ನಾನಕ್ಕಾಗಿ ಅಲ್ಲಿ ಕೆಲವು ದಿವಸ ನಿಂತುಕೊಂಡರು. ಈ ನಗರಿಯ ಮುಂದೆ ಭಾಗೀರಥಿಯ ಪಾತ್ರವು ಅತೀವ ವಿಶಾಲವಾದದ್ದಾಗಿರುವದು. ಭಗೀರಥ ರಾಜನ ಕಾರ್ಯಕ್ಕೆ ವ್ಯತ್ಯಾಸ ಬಂದೀತೆಂಬ ಚಿಂತೆಯಿಂದ ಭಾಗೀರಥೀ ದೇವಿಯು ಅನ್ಯಕಾರ್ಯಗಳನ್ನೆಲ್ಲ ಮರೆತವಳಾಗಿ ಕೇವಲ ಸಗರ ರಾಜನ ಮಕ್ಕಳನ್ನುದ್ಧಾರ ಮಾಡುವ ವಿಷಯದಲ್ಲಿಯೇ ತದೇಕಧ್ಯಾನಳಾಗಿ ಒಳ್ಳೇ ರಭಸದಿಂದ ನಡೆದಿರುವಳೋ ಎಂಬಂತೆ ಗಂಗಾನದಿಯ ಗಂಭೀರವಾದ ಜಲಪ್ರವಾಹವು ಅತೋನಾತವೇಗದೊಂದಿಗೆ ಹರಿಯುತ್ತಿತ್ತು. ನೂರಾರು ಹಡಗುಗಳು ಪ್ರಾಣಿಗಳ ಸುಖಸಾಧನಗಳನ್ನು ಹೇರಿಕೊಂಡು ರಾಜಮಾರ್ಗದಲ್ಲಿ ಬಂಡಿಗಳಡ್ಡಾಡುವಂತೆ ಈ ಜಲಮಯವಾದ ವಿಶಾಲವಾದ ಬೀದಿಯಲ್ಲಿ ಹೋಗಿಬರುತ್ತಿದ್ದವು, ನಾನಾದಿಗ್ದೇಶಗಳಿಂದ ಬಂದ ವಿಚಿತ್ರ ವೇಷಭಾಷೆಯವರಾದ ನರನಾರಿಯರ ಸಮುದಾಯವು ನದಿಯ ಘಾಟುಗಳಲ್ಲಿ ಎತ್ತನೋಡಿದತ್ತಲೂ ಗಜಿಬಿಜಿಯಾಗಿ ತುಂಬಿರುವದನ್ನು ನೋಡಿದರೆ ಇವರು ಭಾಗೀರಥಿಯ ಸುಧಾಮಯವಾದ ರಸಕ್ಕೆ ಮುತ್ತಿದ ಇರುವೆಗಳ ಸಂತತಿಯಂತೆ ಕಾಣುತ್ತಿದ್ದರು.

ಜಾನ್ಹವಿಯು ಪ್ರೀತಿಯಿಂದಿಟ್ಟುಕೊಂಡ ಒಡ್ಯಾಣದಂತೊಪ್ಪುವ ಪ್ರಚಂಡವಾದ ಸೇತುವೆಯನ್ನು ವಿಶ್ವಕರ್ಮನು ಕಂಡಿದ್ದನಾದರೆ ಆಶ್ಚರ್ಯದಿಂದ ಬೊಟ್ಟು ಕಚ್ಚಿಕೊಳ್ಳುತ್ತಿದ್ದನೆನ್ನುವದಕ್ಕೆ ಸಂದೇಹವಿಲ್ಲ. ಪ್ರತ್ಯಕ್ಷ ಕಾಶೀ ಪಟ್ಟಣವು ನೋಡಲಿಕ್ಕೆ ಬಹು ರಮಣೀಯವಾದುದ್ದು.

ಜಯರಾಯನೂ ಇಂದಿರೆಯೂ ಪಟ್ಟಣದಲ್ಲಿ ಅಡ್ಡಾಡುತ್ತ ಹೋಗುವಾಗ್ಗೆ ಆರ್ಯಸಮಾಜದವರ ಆಜ್ಞೆಗನುಸರಿಸಿ ಒಬ್ಬ ತರುಣನು ನಾಲ್ಕು ಬೀದಿಗಳ ಕೂಟದಲ್ಲಿ ನಿಂತುಕೊಂಡು ಮೂರ್ತಿಪೂಜಾ ನಿಷೇಧಕವಾದ ಬೋಧನೆಯನ್ನು ಮಾಡುತ್ತಿದ್ದನು. ಇವನ ಉಡಿಗೆ ತೊಡಿಗೆಗಳು ಕೇವಲ ಫಿರಂಗಿಯರಂತೆ ಇದ್ದು ಅವರ ಮಾದರಿಯಂತೆ ತಲೆ ತುಂಬ ನಾಲ್ಕು ನಾಲ್ಕು ಬಟ್ಟುದ್ದ ಕೂದಲು ಬಿಟ್ಟಿದ್ದನು. ತಲೆಗೆ ರುಮಾಲು ಮುಂತಾದದ್ದೇನೂ ಹಾಕಿಕೊಳ್ಳದೆ ಬೊಕ್ಕತಲೆಯಿಂದ ನಿಂತಿದ್ದನು.

"ನೋಡಿರಿ ! ದೇವರು ನಿರಾಕಾರಿಯು. ನಿರಾಕಾರಿಯಾದ ಕರ್ತನ ಮೂರ್ತಿಯನ್ನು ನೀವು ಹೇಗೆ ಕಲ್ಪಿಸುವಿರಿ ? ಅಲ್ಲಿ ನೋಡಿರಿ, ಆ ವಿಶ್ವೇಶ್ವರನಿಗೆ ಮೂಢರು ದಿನಾಲು ಸಾವಿರಾರು ಕೊಡ ನೀರು ಹೊಯ್ಯುತ್ತಾರೆ. ಈ ನೀರಿನಿಂದ ಆ ಕಲ್ಲುಬೊಂಬೆಯಾದ ವಿಶ್ವೇಶ್ವರನಿಗೆ ಸುಖವೂ ಇಲ್ಲ, ದುಃಖವೂ ಇಲ್ಲ, ಶ್ರಮಪಟ್ಟು ನೀರು ಹೊತ್ತು ತಂದವರು ಮಾತ್ರ ವ್ಯರ್ಥ ದಣಕೊಂಡರಷ್ಟೆ ! ಇದರಿಂದೇನೂ ಪ್ರಯೋಜನವಾಗಲಿಲ್ಲ. ಅದೇ ನೀರನ್ನು ಒಂದು ಚಿಕ್ಕದಾದ ತೋಟಕ್ಕೆ ಹೊತ್ತು ಹಾಕಿದ್ದರೆ ಕಾಯಿ ಪಲ್ಯ, ಹಣ್ಣು ಹಂಪಲ ನಿಮಗೆ ಸಿಕ್ಕುತ್ತಿತ್ತಲ್ಲ ! ಎಂಥ ಮೂಢರು ನೋಡಿರಿ ?" ಹೀಗೆ ಪಾದ್ರಿಗಳ ಮಾದರಿಯ ಸ್ವರ ತೆಗೆದು ಬೋಧನೆಯನ್ನು ಮಾಡುವವನ ಹತ್ತರದಲ್ಲಿ ಜಯರಾಯನೂ ಇಂದಿರೆಯೂ ಹೋಗಿ ನಿಂತರು. ಈ ಬೋಧಕನು ವೇಷಾಂತರವನ್ನು ಹೊಂದಿದ ನಮ್ಮ ಪರಿಚಿತಸ್ತನಾದ ನಟೇಶನೇ. ಜಯರಾಯನನ್ನೂ ಇಂದಿರೆಯನ್ನೂ ಕಂಡು ನಟೇಶನು ನಾಚಿಕೊಂಡು ಸ್ವಲ್ಪದರಲ್ಲಿಯೇ ತನ್ನ ಉಪನ್ಯಾಸವನ್ನು ಮುಗಿಸುವದರೊಳಗಾಗಿಯೇ ಇವರು ಮುಂದಕ್ಕೆ ಸಾಗಿದ್ದರು. ನಟೇಶನೂ ಇವರ ಹಿಂದಿಂದೇ ಓಡುತ್ತ ಬರಹತ್ತಿದನು. ಅವರು ಮೈಸೂರ ಮಹಾರಾಜರು ಕಟ್ಟಿಸಿದ ಛತ್ರವನ್ನು ಪ್ರವೇಶಿಸಿ ನೋಡುತ್ತ ನಿಂತಿದ್ದರು. ನಟೇಶನು ಬಾಕಿಲಲ್ಲಿದ್ದ ಛತ್ರದ ಪಾರಪತ್ಯಗಾರನ ಮುಖದಿಂದ ಜಯರಾಯನೆಲ್ಲಿಳಿದಿರುವನೆಂಬದನ್ನು ಅರಿತುಕೊಂಡು ತನ್ನ ಮನೆಗೆ ಹೊರಟುಹೋದನು.

ನಟೇಶನು ಕಾಶಿಗೆ ಬಂದು ಆ್ಯನಿ ಬೆಸೆಂಟಳ ಸಂದರ್ಶನ ಮಾಡಿಕೊಂಡು ಅವಳ ಶಿಷ್ಯತ್ವವನ್ನು ವಹಿಸಿಕೊಂಡು ಕೆಲವು ದಿವಸ ಇದ್ದನು. ಗಂಗಾ ಪ್ರವಾಹ ದಲ್ಲಿ ಪೂರ್ವದ ಮಹಾತ್ಮರೂ ಋಷಿಗಳೂ ತಮ್ಮ ಮನೆ ಮಾಡಿಕೊಂಡಿರುವ ರೆಂದೂ ನಿಸ್ಸೀಮ ಭಕ್ತರಿಗೆ ಈಗ್ಯಾದರೂ ಅವರು ತಮ್ಮ ದರ್ಶನಲಾಭ ಕೊಟ್ಟು ನಿಜವಾದ ಧರ್ಮದ ತತ್ವಗಳನ್ನು ಉಪದೇಶ ಮಾಡುವರೆಂದೂ ಆ್ಯನಿ ಬೆಸೆಂಟಳು ಹೇಳುತ್ತಿದ್ದಳು. ಬ್ರಹ್ಮಸೂತ್ರ, ಭಗವದ್ಗೀತೆ ಮುಂತಾದ ಗ್ರಂಥಗಳ ತತ್ವದ ಮುಖ್ಯ ಬೀಗದಕಯ್ಗಳನ್ನು ಈ ಗಂಗಾಂತರ್ಗತರಾದ ಸಾಧುಗಳು ತನ್ನ ಸ್ವಾಧೀನ ಮಾಡಿರುವರೆಂದೂ, ಮಹಾನ್ ಮಹಾನ್ ಶಾಸ್ತ್ರೀ ಪಂಡಿತರು ವೇದಾಂತವನ್ನು ಕಲಿತುಕೊಳ್ಳಬೇಕೆಂದೂ ಆ್ಯನಿ ಬೆಸೆಂಟಳು ಬಹಿರಂಗವಾಗಿ ಹೇಳುತ್ತಿದ್ದಳು. ಈ ಸಮಾಚಾರವು ನಟೇಶನಂಥ ಶ್ರದ್ಧಾಹೀನನಿಗೆ ರುಚಿಸುವದೇ ? ಅವನು ಅದೇ ಪಟ್ಟಣದಲ್ಲಿ ದಯಾನಂದ ಸರಸ್ವತೀ ಎಂಬ ಸನ್ಯಾಸಿಯು ಸ್ಥಾಪಿಸಿದ ಆರ್ಯ ಸಮಾಜವೆಂಬ ಸಂಘದಲ್ಲಿ ಸೇರಿಕೊಂಡಿದ್ದನು. ಈ ಸಂಘದವರು ಹಿಂದುಸ್ತಾನದಲ್ಲಿ ಪ್ರಚಲಿತವಾದ ಯಾವ ಮತವನ್ನೂ ಒಪ್ಪಿಕೊಳ್ಳದೆ ತಮ್ಮ ಮನಬಂದಂತೆ ನಿಯಮ ಗಳನ್ನು ಕಟ್ಟಿಕೊಂಡಿದ್ದರು. ಮೂರ್ತಿಪೂಜೆಯು ಅಸಮ್ಮತವಾದದ್ದು ; ಜಾತಿ ಭೇದಗಳು ಪರಮಾತ್ಮನಿಗೆ ಅಸಹ್ಯವಾದವುಗಳು, ಮುಂತಾದ ವಿಚಾರಗಳುಳ್ಳ ಈ ಸಂಘಕ್ಕೆ ನಟೇಶನು ಸೇರಿದನು. ಈ ಸಮಾಜದವರ ಸೇವಕನಾಗಿ ನಟೇಶನು ಬೀದಿ ಬೀದಿಗಳಲ್ಲಿ ಬೋಧಿಸುತ್ತ ತಿರುಗಾಡುತ್ತಿದ್ದನು. ಇವನು ಅಮೇರಿಕೆಗೆ ಹೋಗುವ ವಿಚಾರವನ್ನು ಬಿಟ್ಟುಕೊಟ್ಟಿದ್ದನು. ಅಮೇರಿಕೆಗೆ ಹೋದಲ್ಲಿ ತನ್ನೊಬ್ಬನಿಗೆ ಮಾತ್ರ ಶರೀರಸ್ವಾತಂತ್ರ್ಯವು ಸಿಕ್ಕಬಹುದು. ಆರ್ಯಸಮಾಜದ ಸಭಾಸದನಾದದ್ದರಿಂದ ತನ್ನಾತ್ಮಕ್ಕೆ ಕೂಡಾ ಸ್ವಾತಂತ್ರ್ಯ ಸಿಕ್ಕದ್ದಲ್ಲದೆ ತನ್ನ ಸುತ್ತಲಿದ್ದವರ ಆತ್ಮಗಳನ್ನೂ ಉದ್ಧಾರ ಮಾಡುವ ಅಧಿಕಾರವು ತನಗೆ ಪ್ರಾಪ್ತವಾಗಿರುವದೆಂಬ ಸಂತೋಷದಲ್ಲಿ ನಟೇಶನಿರುತ್ತಿದ್ದನು.

ಇಂದಿರೆಯನ್ನು ಕಂಡಾಕ್ಷಣಕ್ಕೆ ಈ ಬೋಧಕನ ಪಾರತ್ರಿಕ ವಿಚಾರಗಳೆಲ್ಲಾ ಹಾರಿಹೋಗಿ ತನ್ನ ಉಪನ್ಯಾಸವನ್ನು ಕಟ್ಟಿಟ್ಟು ಇಂದಿರೆಯು ಹೋದ ಮಾರ್ಗದ ಗುಂಟ ನಡೆದನು.

ಇಂದಿರೆಯೂ ಜಯರಾಯನೂ ತಮ್ಮ ಮಹಾರಾಜರು ಕಟ್ಟಿಸಿದ ಛತ್ರ ವನ್ನು ನೋಡಿಕೊಂಡು ಅಲ್ಲಿಂದ “ ಕಾಶೀವಿದ್ಯಾಸುಧಾನಿಧಿಃ ” ಎಂಬ ಪ್ರಾಚೀನ ಪುಸ್ತಕಾಲಯವನ್ನು ಹೊಕ್ಕು ಅಲ್ಲಿಯ ಅದ್ಭುತವಾದ ಗ್ರಂಥಸಂಗ್ರಹವನ್ನು ನೋಡಿ

ವರು. ಇದೇ ಮಂದಿರದಲ್ಲಿದ್ದ ಅನೇಕ ವಾಚನಾಲಯಗಳಲ್ಲಿ ವಿಚಾರಪ್ರೌಢರಾದ ಪಂಡಿತರು ಗುಂಪುಗುಂಪಾಗಿ ಕುಳಿತು ಗಂಭೀರ ಮುದ್ರೆಯನ್ನು ತೊಟ್ಟು ದೊಡ್ಡ ದೊಡ್ಡ ಗ್ರಂಥಗಳನ್ನು ಓದುತ್ತಿದ್ದರು. ಅರ್ವಾಚೀನ ಪಂಡಿತರಿಗೋಸ್ಕರ ವಾಗಿಯೂ, ಅಸ್ಪೃಶ್ಯರಿಗಾಗಿಯೂ ಸ್ವತಂತ್ರವಾದ ಕೋಣೆಗಳು ಇದ್ದವು.

ಇಂದಿರೆಯು ಅರ್ವಾಚೀನ ಪಂಡಿತರ ಕೋಣೆಯಲ್ಲಿ ಗದ್ದಲವಿಲ್ಲದ್ದರಿಂದ ತನ್ನ ತಂದೆಯ ಸಮೀಪದಲ್ಲಿ ಕುಳಿತುಕೊಂಡು ವಿಶ್ವಗುಣಾದರ್ಶವೆಂಬ ಗ್ರಂಥವನ್ನು ಓದುತ್ತಿದ್ದಳು. ಅಷ್ಟರಲ್ಲಿಯೇ ಸುಂದರಾನಂದಸ್ವಾಮಿಗಳಿಗೆ ಪ್ರಬೋಧಚಂದ್ರೋದಯವೆಂಬ ಗ್ರಂಥ ಬೇಕಾಗಿದೆಯೆಂದು ಹೇಳಿ ನಟೇಶನು ವ್ಯವಸ್ಥಾಪಕರ ಕಡೆಯಿಂದ ಅದನ್ನು ತೆಗೆದುಕೊಂಡು ಹೋಗುವಾಗ ಇಂದಿರೆಯನ್ನು ಕಂಡು " ಜಯರಾವ ಬಹದದ್ದೂರ. ನಮಸ್ಕಾರ, ತಮ್ಮ ದೇಹವೆಂದು ಬಂದಿರುವದು " ಎಂದು ಕೇಳಿದನು.

" ಯಾರು ! ನಟೇಶ್ ! ನೀನಿಲ್ಲೇ ನಿಂತುಕೊಂಡಿಯೇನು ? ಅಮೇರಿಕೆಗೆ ಹೋಗುವದನ್ನು ರಹಿತ ಮಾಡಿದಿಯಾ ?" ಎಂದು ಜಯರಾಯನು ಕೇಳಿದನು.

"ಅಮೇರಿಕೆಗೆ ಹೋಗುವದಕ್ಕಿಂತಲೂ ಇಲ್ಲಿರುವದೇ ಸೊಗಸಾಗಿ ತೋರಿತು." ಎಂದು ನುಡಿದು ನಟೇಶನು ತಾನೊಂದು ಕುರ್ಚಿಯ ಮೇಲೆ ಕುಳಿತುಕೊಂಡು ಬೆಂಗಳೂರು ಬಿಟ್ಟಂದಿನಿಂದ ಈ ದಿವಸ ಪರ್ಯಂತರ ನಡೆದ ತನ್ನ ವೃತ್ತಾಂತವನ್ನು ಸಂಕ್ಷೇಪದಲ್ಲಿ ಹೇಳಿದನು.

" ನಟೇಶರಾಯಾ, ನೀನು ಸ್ತುತ್ಯವಾದ ಉದ್ಯೋಗವನ್ನು ಕೈಕೊಂಡಿರುವಿ" ಎಂದು ಇಂದಿರೆಯಂದಳು.

" ಈ ದೇಹದಲ್ಲಿ ಜೀವವಿರುವ ಮಟ್ಟಿಗೂ ಏನಾದರೂ ಮಾಡಲೇಬೇಕು " ಎಂದು ನಟೇಶನಂದನು.

" ಯಾಕೋ, ನಟೇಶಾ ನಿರಾಶೆಯಿಂದ ಮಾತಾಡುವಿ ?" ಎಂದು ಜಯರಾಯನು ಕೇಳಿದನು.

" ನಿರಾಶೆಯು ಮೈಸೂರ ಪ್ರಾಂತದಲ್ಲಿಯೇ ನನ್ನನ್ನು ಹಿಡುಕೊಂಡಿತು. ಲೋಕದಲ್ಲಿ ನಾವು ಬಯಸಿದಂತೆ ಎಲ್ಲ ಸಂಗತಿಗಳು ಕೂಡಿ ಬರುತ್ತಿದ್ದರೆ ನಾನು ಬೋಧಕನಾಗಿ ಬೀದಿಗುಂಟ ಅಡ್ಡಾಡುತ್ತಿದ್ದೆನೇ ?"

ಈ ಮಾತಿಗೆ ಉತ್ತೇಜನ ಕೊಡಬಾರದೆಂದು ಇಂದಿರೆಯು ತನ್ನ ಪುಸ್ತಕವನ್ನು ಮತ್ತೆ ಓದಹತ್ತಿದಳು.

"ಬರುತ್ತೇನೆ ರಾಯರೇ, ತಮ್ಮ ಬಿಡಾರಕ್ಕೆ ಬಂದು ಭೆಟ್ಟಿಯಾಗುತ್ತೇನೆ. ಇಂದಿರಾಬಾಯವರೆ, ಅಪ್ಪಣೆ ಕೊಡಿರಿ" ಎಂದು ಹೇಳಿ ನಟೇಶನು ತನ್ನ ಮನೆಗೆ ಹೋದನು.

ಆ ದಿವಸ ಭೋಜನೋತ್ತರ ಜಯರಾಯನು ತನ್ನ ಆರಾಮ ಕುರ್ಚಿಯಲ್ಲಿ ಕುಳಿತು ತಿಳಿನಿದ್ದೆ ನಡಿಸಿದ್ದನು. ಇಂದಿರೆಯು ಮೇಜಿನ ಮೇಲಿದ್ದ ವರ್ತಮಾನ ಪತ್ರ ತಕ್ಕೊಂಡು ಓದಬೇಕೆಂದು ಅದನ್ನೆತ್ತಲಾಗಿ ಅದರ ಕೆಳಗಿದ್ದ ಒಂದು ಪತ್ರವು ಇವಳ ದೃಷ್ಟಿಗೆ ಬಿದ್ದಿತು. ಇಂದಿರೆಯು ಅದನ್ನು ತಕ್ಕೊಂಡು ಓದಿದಳು.

ಬೆಂಗಳೂರ್ ತಾ॥ ...

ಮ॥ ರಾ॥ ಜಯರಾವ್ ಬಹದ್ದೂರ, ಮುಕ್ಕಾಮ ಶ್ರೀಕ್ಷೇತ್ರ ಕಾಶೀ ಇವರ ಸೇವೆಗೆ :—

"ಪೋಷ್ಯನಾದ ರಮಾಕಾಂತ ದೇಸಾಯಿ ಮುಕ್ಕಾಮ ಬೆಂಗಳೂರ ಮಾಡುವ ನಮಸ್ಕಾರ.

"ಇಲ್ಲಿಂದ ತಾವು ಯಾತ್ರೆಗೆ ಹೊರಡುವದಕ್ಕೆ ಮುಂಚಿತವಾಗಿ ನಾನು ಈ ದೇಶಬಿಟ್ಟು ಹೋಗುವದನ್ನು ಕುರಿತು ಅಭಿಪ್ರಾಯವನ್ನು ಕೊಡುತ್ತೇವೆಂದು ಹೇಳಿದವರು ತಿರಿಗಿ ಆ ಮಾತಿನ ಬಗ್ಗೆ ಏನೂ ಹೇಳದೆ ಹೊರಟು ಹೋದಿರಿ. ತಮಗೆ ಅನೇಕ ಕೆಲಸಗಳಿರುವದರಿಂದ ಈ ಮಾತು ತಮಗೆ ಜ್ಞಾಪಕವಾಗಿರಲಿಲ್ಲವೆಂದು ತೋರುತ್ತದೆ.

"ನನ್ನ ಮನಸ್ತಾಪದ ಕಾರಣಗಳನ್ನು ತಮಗೆ ನಾನು ನಿವೇದಿಸಿರುವೆನಷ್ಟೇ! ಮೊನ್ನೆ ನಾನು ಶ್ರೀರಂಗಪಟ್ಟಣಕ್ಕೆ ಹೋದಾಗ್ಗೆ ದೇವಯಾನಿಯಮ್ಮನವರು ಒಂದು ಚಮತ್ಕಾರವಾದ ಮಾತು ಹೇಳಿದ್ದರಿಂದ ನನ್ನ ಮನಸ್ಸು ಬಹಳೇ ವ್ಯಗ್ರವಾಗಿರುತ್ತದೆ. ನಾನು ಕಮಲೆಯ ಮೇಲೆ ಪ್ರೀತಿಯನ್ನಿಟ್ಟಿರುವೆನೆಂತಲೂ, ಅವಳ ಪಾಣಿಗ್ರಹಣವನ್ನು ಮಾಡಲಿಕ್ಕೂ ನಾನು ಸಿದ್ಧನಾಗಿರುವೆನೆಂದೂ ನೀವು ದೇವಯಾನಿಯಮ್ಮನವರ ಮುಂದೆ ಹೇಳಿರುವಿರಂತೆ. ಕಮಲೆಯ ಮೇಲೆ ಎಳ್ಳಷ್ಟಾದರೂ ನನ್ನ ಪ್ರೀತಿ ಇರಲರಿಯದೆಂದು ನಾನು ಹೇಳಿದ ಮಾತಿನಿಂದ ತಮಗೆ ನಿಶ್ಚಯವಾಗಿ ತಿಳಿದಿರಲು ಇಂಥ ಪ್ರಮಾದವು ತಮ್ಮಿಂದ ಹೇಗೆ ಆಯಿತೋ ತಿಳಿಯದು. ಕಮಲೆಯ ಮೇಲೆ ಕಿಂಚಿತ್ತಾದರೂ ನನ್ನ ಪ್ರೀತಿ ಇಲ್ಲ; ಯಾವನಾದರೊಬ್ಬ ರಾಜನು ತನ್ನ ಅರ್ಧ ರಾಜ್ಯವನ್ನು ವರದಕ್ಷಿಣೆಯಾಗಿ ಕೊಡಬೊಚ್ಚಿದರೂ ನಾನು ಆ

ಮೂರ್ಖಳಾದ ವಿಧವೆಯನ್ನು ಅಂಗೀಕರಿಸೆನು. ಈ ಪತ್ರ ಕಂಡಾಕ್ಷಣವೇ ದೇವಯಾನಿಯಮ್ಮನವರ ಮುಂದೆ ನೀವು ತಿಳಿಸಿದ ಮಾತು ಸರ್ವಸ್ವಿ ಸುಳ್ಳಾದದ್ದೆಂದು ಅವರಿಗೆ ತಿಳಿಸುವಿರೆಂದು ನಾನು ಆಶಿಸುತ್ತೇನೆ. ಇದೇ ಸುದ್ದಿಯನ್ನು ನೀವು ಮತ್ಯಾರಿಗಾದರೂ ತಿಳಿಸಿದ್ದಾದರೆ ಅವರಿಗಾದರೂ ಕಮಲೆಯ ಸಂಬಂಧವಾಗಿ ನೀವು ಹೇಳಿದ ಮಾತು ಸುಳ್ಳಾದದ್ದೆಂದು ಪ್ರಾಂಜಲವಾಗಿ ಹೇಳುವಿರೆಂದು ಬೇಡಿಕೊಳ್ಳುತ್ತೇನೆ.

"ನೀವು ನಿಮ್ಮ ಸಂಚಾರವನ್ನು ಮುಗಿಸಿಕೊಂಡು ಬೆಂಗಳೂರಿಗೆ ಬಂದ ಕೂಡಲೆ ನಮ್ಮ ನಿಮ್ಮ ಕೊಡಕೊಳ್ಳುವ ಲೆಕ್ಕವನ್ನು ಮಾಡಿಕೊಂಡು ಜಪಾನ ದೇಶಕ್ಕೆ ಹೊರಟುಹೋಗತಕ್ಕವನಿರುತ್ತೇನೆ.

"ನಾನು ಮೊದಲೇ ದುಃಖಿತನು ; ಅಂಥದರಲ್ಲಿ ನೀವು ಕುಳಿತು ಇಂಥ ಅಸಂಬದ್ಧವಾದ ವಾರ್ತೆಯನ್ನು ಹುಟ್ಟಿಸಿದ್ದು ಕೇಳಿ ನನಗೆ ಬಹಳ ತಾಪ ವಾಗಿರುವದು. ಆದ್ದರಿಂದ ಹೆಚ್ಚಿಗೆ ಬರಿಯಲಿಕ್ಕೆ ಅಸಮರ್ಥನಿರುತ್ತೇನೆ.

ತಮ್ಮ ವಿಧೇಯನಾದ,
ರಮಾಕಾಂತ ದೇಸಾಯಿ

ಈ ಪತ್ರವನ್ನೋದಿ ಇಂದಿರೆಯು ಆಶ್ಚರ್ಯಚಕಿತಳಾದಳು. "ರಮಾ ಕಾಂತನು ನಿಜವಾಗಿ ಕಮಲೆಯನ್ನು ಪ್ರೀತಿಸುವದಿಲ್ಲ! ಅವರು ಅವಳ ಪಾಣಿ ಗ್ರಹಣ ಮಾಡುವದಿಲ್ಲ! ಎಂಥ ಸುವಾರ್ತೆಯಿದು! ಹೀಗಿರಲು ನನ್ನ ತಂದೆಗಳು ತಿಳಿದೂ ತಿಳಿದೂ ಸುಳ್ಳು ಸುದ್ದಿ ಹುಟ್ಟಿಸಬಹುದೇ ?" ಎಂದು ಯೋಚಿಸಿ ದೊಡ್ಡ ಕುತ್ತು ದಾಟಿದವಳಂತೆ ಸಮಾಧಾನದ ಉಸುರ್ಗರೆದು ವಿಚಾರದಲ್ಲಿ ನಿಮಗ್ನ ಳಾದಳು.

"ರಮಾಕಾಂತ ಮಹಾರಾಯರೇ, ನಿಮ್ಮ ಸದ್ಗುಣಗಳ ಬಗ್ಗೆ ತಿಳಿಯದೆ ಶಂಕೆ ತೋಟ್ಟಿದ್ದೆನು. ನನ್ನ ತಂದೆಗಳು ಹೇಳಿದ್ದರೂ ನಾನು ನಂಬತಕ್ಕದ್ದಲ್ಲ. ಶರಧಿಯು ಒತ್ತಿ ಹರಿಯುತ್ತಿರುವದೆಂದು ಹೇಳುವವರಕಿಂತಲೂ ಕೇಳುವವಳೇ ಮೂರ್ಖಳು. ನಡೆದುಹೋದ ಮಾತಿಗೆ ನುಡಿದು ಫಲವಿಲ್ಲ. ಅವರ ಮಾತಿನಲ್ಲಿ ನಂಬಿಗೆಯನ್ನಿಟ್ಟೇ ಪಾಪಿಣಿಯಾದ ನಾನು ಶ್ರೀಕಂಠನನ್ನು ಲಗ್ನಮಾಡಿಕೊಳ್ಳುವೆ ನೆಂದು ವಚನ ಕೊಟ್ಟೆನು. ವಿಚಾರಮೂಢೆಯಾದ ನನ್ನಿಂದ ಅನುಚಿತವಾಯಿತು. ಇಂದಿರೆ! ಸ್ವತಂತ್ರ ವಿಚಾರದವಳೆಂದು ನಿನ್ನ ಖ್ಯಾತಿಯಿತ್ತಲ್ಲ! ಸ್ವಲ್ಪ ಧೈರ್ಯ

ತಾಳಿಕೊಂಡಿದ್ದರೆ. 'ಕುಲೀನ ಕಾಂತ್ಯಾ ವಯಸಾ ನವೇನ ಗುಣೈಶ್ಚ ತೈಸ್ತೈರ್ವಿನಯ-ಪ್ರಧಾನೈ :' ಎಂದು ವರ್ಣಿಸಿದಂಥ ಮನೋರಮಣನು ನಿನ್ನ ಪತಿಯಾಗುತ್ತಿದ್ದನಲ್ಲ!" ಎಂದು ತನ್ನೊಳಗೆ ತಾನೇ ಆಡಿಕೊಂಡಳು.

ಆಯಿತು. ಇದೇ ನಿಶ್ಚಯವು! ನನ್ನ ಪೂರ್ವ ಪುಣ್ಯದ ಬಲದಿಂದ ರಮಾಕಾಂತರು ನನ್ನ ಮೇಲೆ ಅನುರಕ್ತರಾಗಿದ್ದದ್ದೇ ಸತ್ಯವಾಗಿದ್ದರೆ ಅವರನ್ನೇ ನಾನು ವರಿಸುವೆನು. ನಮ್ಮ ವಿವಾಹಕ್ಕೆ ಬ್ರಹ್ಮಾನುಕೂಲವಿರದಿದ್ದರೆ ಯಾವಜ್ಜೀವ ಕುಮಾರಿಯಾಗಿಯೇ ಇರುವೆನು. ನನ್ನ ತಂದೆಗಳೂ ಶ್ರೀಕಂಠನೂ ನನ್ನ ಭೀಷ್ಟೆಗೆ ಅಡ್ಡಾಗುವರು. ಏನೂ ಚಿಂತೆಯಿಲ್ಲ. ರತ್ನಾಕರನನ್ನು ಕೂಡಲಿಚ್ಛಿಸುವ ಸರಿತ್ ಶ್ರೇಷ್ಠಳಿಗೆ ಅಡ್ಡ ಬರುವ ಪಾಷಾಣಹೃದಯರಾದ ಪರ್ವತಗಳನ್ನು ಅದಂರ್ಥರಳು ಇಬ್ಬಗೆಯಾಗಿ ಭೇದಿಸಿ ತನ್ನ ಪವಿತ್ರವಾದ ಮಾರ್ಗವನ್ನು ಅನುಸರಿಸುವಂತೆ ನಾನಾದರೂ ನನ್ನ ಮಾರ್ಗವನ್ನು ಕಂಡುಕೊಳ್ಳುವೆನು." ಹೀಗೆ ಅವಳು ವಿಚಾರದಲ್ಲಿದ್ದದ್ದನ್ನು ನೋಡಿ ಜಯರಾಯನು :

" ಇಂದಿರಾ, ನೀನಾವದೋ ಗಹನವಾದ ವಿಚಾರದಲ್ಲಿರುವಂತೆ ಕಾಣುತ್ತೀ. ರಾಜ್ಯ ತೆಗೆದುಕೊಳ್ಳುವದದೇನು ?" ಎಂದು ಕೇಳಿ ಮುಗುಳು ನಗೆ ನಕ್ಕನು.

" ಮತ್ತೆ ! ಒಬ್ಬಿಬ್ಬರ ಮನೋರಾಜ್ಯಗಳನ್ನು ಹಾಳುಗೆಡವಬೇಕಾಗಿದೆ."

ಇಂದಿರೆಯ ಭಾವ ತಿಳಿಯದೆ ಜಯರಾಯನಂದದ್ದು—" ಇಷ್ಟೇಯೋ ? ಪ್ರತಿ ದಿವಸಗಳಲ್ಲಿಯೂ ಹಾಳಾಗುತ್ತಿರುವ ಮನೋರಾಜ್ಯಗಳ ಎಣಿಕೆ ಮಾಡುವದು ಚಿತ್ರಗುಪ್ತರಿಗೂ ಕಷ್ಟವಾದೀತು."

" ದರಿದ್ರರ ಮನೋರಾಜ್ಯಗಳು ಅರಾಜಕವಾದ ರಾಜ್ಯಗಳಂತೆ ತಮ್ಮಿಂದ ತಾವೇ ಹಾಳಾಗುವವು. ಆದರೆ ಧೂರ್ತರ ಮನೋರಾಜ್ಯಗಳನ್ನು ಕೆಡಿಸಬೇಕಾದರೆ ರೂಸೋ ಜಪಾನೀ ಯುದ್ಧದಂಥ ಘನಘೋರವಾದ ಸಂಗ್ರಾಮವನ್ನು ಮಾಡಬೇಕಾಗುತ್ತದೆ."

" ಇಂದಿರಾ, ನಾವು ನಿಮ್ಮಂಥವರಿಗೆ ಉಚ್ಚಪ್ರತಿಯ ಶಿಕ್ಷಣ ಕೊಟ್ಟದ್ದರಿಂದ ನಮ್ಮ ಜಾಣತನವು ಹಿಂದುಳಿಯುತ್ತ ನಡೆದಿರುವದು. ನಿನ್ನ ಭಾವವೇ ನನಗೆ ಅವಗತವಾಗಲಿಲ್ಲ. ಅದಿರಲಿ ; ನಾಳಿಗೆ ನಾವು ಇಲ್ಲಿಂದ ಹೊರಟು ಕಲಕತ್ತೆಗೆ ಹೋಗಬೇಕು : ಅಲ್ಲಿ ಕೆಲವು ಅವಶ್ಯವಾದ ಕೆಲಸ ನೋಡಿಕೊಂಡು ತೀವ್ರವೇ ಬೆಂಗಳೂರಿಗೆ ಹೋಗತಕ್ಕದ್ದು."

" ಹೀಗೇಕೆ ? ನಾವು ಇಲ್ಲಿಂದ ಅಯೋಧ್ಯಾ ಮಥುರಾ ದ್ವಾರಕೆಗಳ

ಮೇಲಿಂದ ಮುಂಬಯಿಗೆ ಬಂದು ಅಲ್ಲಿಂದ ಬೆಂಗಳೂರಿಗೆ ಹೋಗತಕ್ಕ ವಿಚಾರ ವಿತ್ತಲ್ಲ!"

"ಕೆಲವೊಂದು ಸಂಗತಿಯ ಮೂಲಕ ನಾನು ತೀವ್ರವೇ ಬೆಂಗಳೂರಿಗೆ ಹೋಗಬೇಕಾಗಿರುವದು."

"ಅಪ್ಪಾ, ಈ ರಮಾಕಾಂತರ ಪತ್ರವು ಯಾವಾಗ ಬಂದಿತು?" ಎಂದು ರಮಾಕಾಂತನ ಪತ್ರವನ್ನೆತ್ತಿ ಹಿಡಿದು ಇಂದಿರೆಯು ತೋರಿಸಿದಳು.

"ಆಃಹಾ! ಆ ಪತ್ರವನ್ನೋದಿದಿಯೇನು?" ಎಂದು ಗಾಬರಿಯಾಗಿ ಜಯರಾಯನು ಕೇಳಿದನು.

"ಇದನ್ನು ನಾನು ನೋಡಿದೆನು. ನೋಡಬಾರದಾಗಿತ್ತೇನು? ಇದರಲ್ಲಿ ರಮಾಕಾಂತರು ತಾವು ಕಮಲೆಯನ್ನು ಲಗ್ನ ಮಾಡಿಕೊಳ್ಳುವದು ಸುಳ್ಳೆಂದು ಬರೆಯುತ್ತಾರಲ್ಲ!"

"ಈಗಿನ ತರುಣರ ಕೃತಿಗಳೇ ಚಮತ್ಕಾರವಾದವುಗಳು. ರಮಾಕಾಂತನು ಏಕನಿಷ್ಠನೆಂದು ನಾನು ತಿಳಿದಿದ್ದೆನು."

"ಅವರ ಏಕನಿಷ್ಠತೆಗೆ ಯಾತರಿಂದ ಕುಂದು ಬಂದಿರುವದೆಂದು ಈಗ ನೀವು ತಿಳಿಯುವಿರಿ?"

"ಮೊದಲು ತಾನು ಬೆಂಗಳೂರಲ್ಲಿ ನಿಂತು ಉದ್ಯೋಗ ನಡಿಸುವೆನೆಂದು ಹೇಳಿದನು. ಈಗ ಜಪಾನಕ್ಕೆ ಹೊರಟುಹೋಗುವನಂತೆ. ಪ್ರತ್ಯಕ್ಷ ನನ್ನ ಮುಂದೆ ತಾನು ಕಮಲೆಯ ಪಾಣಿಗ್ರಹಣಕ್ಕಾಗಿ ಉತ್ಸುಕನಾಗಿರುವೆನೆಂದು ಹೇಳಿದನು. ಅವನು ನನ್ನ ಮುಂದಾದರೂ ಸುಳ್ಳು ಹೇಳಿರಲಿಕ್ಕೆ ಸಾಕು, ಇಲ್ಲವಾದರೆ ಈ ಪತ್ರ ದಲ್ಲಿ ಅನೃತ ತುಂಬಿದೆ. ಇವು ಪದವೀಧರರ ಕೃತಿಗಳು!! ಅವನು ಸದ್ಗುಣಗಳ ಆಶ್ರಯಸ್ಥಾನವೇ ಎಂದು ಬಂದಿಗಳು ಹೊಗಳುವಂತೆ ನೀನು ಬಣ್ಣಿಸುತ್ತಿದ್ದಿಯಲ್ಲ! ಈಗ್ಯ ರಮಾಕಾಂತನು ಜಪಾನಕ್ಕೆ ಹೋಗಲಿಚ್ಛಿಸುತ್ತಾನೆ. ಹೋಗವಲ್ಲನೇಕೆ. ಈ ತರುಣನು ಬೆಂಗಳೂರು ಬಿಟ್ಟು ಹೋದರೆ ಒಂದು ಪೀಡೆಯೇ ಕಡಿವಂತಾಗುವದು. ಇದಕ್ಕಾಗಿಯೇ ನಾನು ಇಷ್ಟವಸರದಿಂದ ಬೆಂಗಳೂರಿಗೆ ಹೊರಡುವವನಿದ್ದೇನೆ."

ಇದನ್ನು ಕೇಳಿ ಇಂದಿರೆಯು ದಂಗು ಬಡಿದವಳಂತೆ ಕುಳಿತುಕೊಂಡಳು. ಇಷ್ಟು ಅಭದ್ರವಾದ ಸುಳ್ಳು ಮಾತುಗಳನ್ನು ತನ್ನ ತೀರ್ಥರೂಪರ ಬಾಯಿ ಯಿಂದಲೇ ಹೊರಟವೋ, ತನ್ನ ಕಿವಿಗಳೇ ಕೆಟ್ಟಿರುವವೋ, ಏನು, ತಾನು ಸ್ವಪ್ನ ದಲ್ಲಿರುವನೋ, ಎಂಬ ವಿಚಾರದಲ್ಲಿ ಅವಳು ಬಿದ್ದಳು. ಜಯರಾಯನ ಮೋರೆ

ಯನ್ನು ಒಂದು ನಿಮಿಷ ಪರ್ಯಂತರ ಬಿಡದೇ ನೋಡಿದಳು. ರಾಂಜನ್ ಕಿರಣಗಳಿಂದ ಇವಳು ತನ್ನ ಹೃದಯದಲ್ಲಿದ್ದ ಕಪಟವನ್ನೆಲ್ಲಾ ಕಂಡುಕೊಳ್ಳುವಳೆಂಬ ಭಯದಿಂದಲೇನೋ ಎಂಬಂತೆ ಇಂದಿರೆಯ ನಿರೀಕ್ಷಣವನ್ನು ಸಹಿಸಲಾರದೆ ಜಯರಾಯನು ಏನೋ ನಿಮಿತ್ತ ತೆಗೆದು ಕಿಟಿಕೆಯ ಬಳಿಯಲ್ಲಿ ಹೋಗಿ ಇವಳ ಕಡೆಗೆ ಬೆನ್ನು ಮಾಡಿಕೊಂಡು ನಿಂತನು.

ಈ ಸಮಯದಲ್ಲಿ ಏನೂ ಮಾತಾಡತಕ್ಕದ್ದು ಕ್ಷೇಮಕರವಾದದ್ದಲ್ಲೆಂದು ತಿಳಿದು ಇಂದಿರೆಯಾದರೂ ಗಪ್ಪಗಡದ್ದ ಕುಳಿತಳು.

ಕೆಲಹೊತ್ತು ಇವರಿಬ್ಬರೂ ಪಿಟ್ಟೆಂದು ಬಾಯಿಬಿಚ್ಚದೆ ಸುಮ್ಮಗಿದ್ದರು. ಬಹಳ ಹೊತ್ತು ಕಾದು ಬಿದ್ದ ದನಗಳಿಗೆ ಯಾರಾದರೂ ಬಿಡಿಸಿದರೆ ಎರಡಕ್ಕೂ ಸಾಕಾಗಿರುವದುಂಟು. ಅದರಂತೆ ನಟೇಶನು ಸಮಯಕ್ಕೆ ಬಂದದ್ದರಿಂದ ತಂದೆಗೂ ಮಗಳಿಗೂ ಕೂಡಿಯೇ ಸಮಾಧಾನವಾಯಿತು. ಕೂಡಲೆ ಮೂವರು ಕ್ಷೇಮ ಸಮಾಚಾರದ ಮಾತುಗಳನ್ನಾಡುತ್ತ ಕುಳಿತರು. ನಟೇಶನು ಮನೆಗೆ ಹೋಗುವ ಹೊತ್ತಾದ್ದರಿಂದ ಎದ್ದು ನಿಂತು ತನ್ನ ಮನೆಗೆ ಬಂದು ಚಹ ತಕ್ಕೊಂಡು ಹೋಗಬೇಕೆಂದು ಜಯರಾಯನಿಗೂ ಇಂದಿರೆಗೂ ವಿನಂತಿ ಮಾಡಿಕೊಂಡನು. ಜಯರಾಯನಿಗೆ ವ್ಯಾಪಾರದ ಸಂಬಂಧವಾದ ಪುಷ್ಕಳ ಪತ್ರಗಳನ್ನು ಬರೆಯಬೇಕಾಗಿದ್ದದರಿಂದ ಇಂದಿರೆಯು ಮಾತ್ರ ನಂಜನಗೂಡ ಬರುವಳೆಂದು ಹೇಳಿದನು.

ನಂಜುಂಡನು ಫೈಟನ್ ತಕ್ಕೊಂಡು ಬಂದು ನಟೇಶನನ್ನೂ ಇಂದಿರೆಯನ್ನೂ ಕುಳ್ಳಿರಿಸಿಕೊಂಡು ನಟೇಶನಿರುವ ಸ್ಥಳಕ್ಕೆ ಹೋದನು. ನಟೇಶನ ಸ್ಥಳವು ಸಿಪಾಯರ ಬರಾಕದಂಥ ಸಾಲು ಕೋಣೆಗಳಲ್ಲಿ ಒಂದು ಕೋಣೆಯಿತ್ತು. ವಿಸ್ತಾರವಾದ ಬೈಲಿನ ಮುಂಬದಿಗು ಎಡಕ್ಕೂ ಬಲಕ್ಕೂ ಇಂಥ ಎರಡು ಸಾಲುಗಳಿದ್ದವು. ಮಧ್ಯದಲ್ಲಿ ಭವ್ಯವಾದ ಮಂದಿರವಿದ್ದು ಅದರಲ್ಲಿ ಪುಸ್ತಕಾಲಯ, ಪ್ರಾರ್ಥನಾಸ್ಥಳ, ದಯಾನಂದರ ಗದ್ದಿಗೆಯ ಕೋಣೆ ಮುಂತಾದ ಸ್ಥಳಗಳಿದ್ದವು. ಈ ಮಂದಿರದ ಸುತ್ತಲು ಹೂದೋಟವಿತ್ತು. ಇಂದಿರೆಯು ನಟೇಶನ ಕೋಣೆಯಲ್ಲಿ ಕುರ್ಚಿಯ ಮೇಲೆ ಕುಳಿತುಕೊಂಡು ಅವನ ಪುಸ್ತಕಗಳನ್ನು ತಿರಿವಿ ನೋಡಿ " ನಟೇಶ, ಬೋಧಕನ ಕೆಲಸವು ಚನ್ನಾಗಿರುವದೇನು ?" ಎಂದು ಕೇಳಿದಳು.

" ಚನ್ನಾಗಿದೆ. ಸದ್ಯಕ್ಕೆ ನಾನು ಬೋಧಕನಾಗಿರುವೆನು. ಮುಂದೆ ನಾನು ಶಾಖಾಧಿಪತಿಯಾಗುವೆನು. ಈಗ್ಗೆ ನನಗೆ ತಿಂಗಳೊಂದಕ್ಕೆ ಮೂವತ್ತೈದು ರೂಪಾಯಿ ಸಿಕ್ಕುತ್ತವೆ. ಹೊರ್ತಾಗಿ ಮನೆಗೆ ಬಾಡಿಗೆಯಿಲ್ಲ, ಒಟ್ಟಿಗಳನ್ನು

ಸಂಘದವರೇ ಕೊಡುವರು. ಶಾಖಾಧಿಪತಿಯಾದೆನೆಂದರೆ, ತಿಂಗಳಿಗೆ ಎಪ್ಪತ್ತೈದು ರೂಪಾಯಿ ಸಿಕ್ಕುವವು."

"ಚನ್ನಾಗಿದೆ ಎನ್ನಲಿಕ್ಕೆ ಸಾಕು. ನೀನಿನ್ನು ಉತ್ತರ ಹಿಂದುಸ್ಥಾನದ ನಿವಾಸಿಯಾಗುವಿ."

"ಅದರದೇನು ನಿಯಮ ? ಆರ್ಯಸಮಾಜದ ಪಂಥದವರು ಅಮೇರಿಕೆಯಲ್ಲಿ ಕೂಡಾ ಇರುವರು. ಅಲ್ಲಿಯ ಶಾಖಾಧಿಪತಿತ್ವ ಸಿಕ್ಕರೆ ಹೋಗಲೇಬೇಕು. ಪ್ರಬೋಧಾನಂದ ಪ್ರಭುಗಳು ಅಮೇರಿಕೆಯಲ್ಲಿ ವ್ಯಾಖ್ಯಾನ ಕೊಟ್ಟು ಜಗದ್ವಿಖ್ಯಾತರಾಗಿ ಹೋದರು. ಸರಕಾರದಲ್ಲಿ ನಮ್ಮ ಸಮಾಜದವರ ವರ್ಚಸ್ವವಿರುವದು. ಕಲಕತ್ತೆಯ ಕಾಯಿದೆ ಕೌನಸಿಲ್‍ದ ಸಭಾಸದನು ಕೂಡಾ ನಾನಾಗಬಹುದು."

ಹೀಗೆ ಹೇಳಿ ನಟೇಶನೆದ್ದು ತನ್ನ ಸ್ನೇಹಿತನಾದ ಆಬಾಜಿ ಕೃಷ್ಣನೆಂಬ ಬೋಧಕನ ಹೆಂಡತಿಯ ಕಡಿಂದ ಚಹ ಮಾಡಿಸಿ ತಂದು ಇಂದಿರೆಯ ಮುಂದಿಟ್ಟನು. ಚಹ ತಕ್ಕೊಂಡ ನಂತರ, ದಯಾನಂದ ಮಹಾಸ್ವಾಮಿಯವರ ಮಂದಿರವನ್ನೂ ಅದರ ಸುತ್ತಲಿದ್ದ ತೋಟವನ್ನೂ ತೋರಿಸುವದಕ್ಕೆ ಅವನು ಇಂದಿರೆಯನ್ನು ಕರೆದೊಯ್ದನು. ಉದ್ಯಾನದಲ್ಲಿ ತಿರುಗಾಡುವಾಗ ನಟೇಶನಂದದ್ದು: "ಇಂದಿರಾಬಾಯವರೇ, ನಾವೀರ್ವರು ತಿರುಗಾಡುವದೊಂದು ಆನಂದಕರವಾದ ಸ್ವಪ್ನದಂತೆ ನನಗೆ ಭಾಸವಾಗುತ್ತದೆ."

ಇಂದಿರೆಯು ಏನೂ ಮಾತಾಡದೆ ಪ್ರೌಢತೆಯಿಂದ ಸುಮ್ಮನಿದ್ದಳು. ನಟೇಶನು ಕಾಮವಾಸನೆಯುಳ್ಳವನಾದ್ದರಿಂದ—

"ನಿಮಗೇನಿಸುವದೋ ನಾನು ಹೇಳಲಾರೆನು. ನನಗಂತೂ ನಂದನವನದಲ್ಲಿರುವೆನೆಂಬಂತೆ ಭಾಸವಾಗುತ್ತದೆ."

"ಹೀಗಂದರೇನೋ ನಟೇಶಾ !" ಎಂದು ಇಂದಿರೆಯು ತಿರಸ್ಕಾರದೊಂದಿಗೆ ನುಡಿದಳು.

"ಇಂದಿರಾಬಾಯಿ, ನಿಮಗೆ ನನ್ನ ಮಾತು ರುಚಿಸಲಿಲ್ಲವೆಂದು ಕಾಣುತ್ತದೆ. ನಿಮಗೆ ದೊಡ್ಡವರೂ, ಕೀಳರೂ, ಶ್ರೀಮಂತರೂ ಬಡವರೂ, ಕುಲೀನರೂ, ಕುಲಹೀನರೂ ಎಲ್ಲರೂ ಸರಿಯಷ್ಟೆ ? ಅನ್ಯರಂತೆ ಧನದ ಮದವು ನಿಮ್ಮಲ್ಲಿಲ್ಲ."

"ಸರಿ. ಆದರೆ ನನ್ನೀಮತವು ಇಂದಿನದಲ್ಲ. ಇದು ನಿನಗೆ ಗೊತ್ತಿದ್ದು ಅದರ ಪಾರಾಯಣವೀಗೇಕೆ ?"

"ಇಂದಿರಾ, ನೀನು ರಂಭೆಗಿಂತಲೂ ಮೋಹಕ ಸ್ವರೂಪದವಳಿದ್ದ ಮೇಲೆ

ನಿನ್ನ ಗುಣಾನುವಾದ ಮಾಡದಿರುವರಾರು ? ನಾನಂತೂ ನಿನ್ನನ್ನು ಕಂಡು ಮೋಹಿತನೇ ಆಗಿರುವೆನು."

"ಮೂರ್ಖಾ ! ನೀನು ಸಾವಿತ್ರೆಮ್ಮನ ಮಗನೆಂದು ನಿನ್ನೊಡನೆ ಮಾತಾಡಿದ ಫಲವನ್ನು ನನಗೆ ಉಣಿಸುವಿಯಾ ?" ಎಂದು ಕಣ್ಣು ಕೆಂಪಗೆ ಮಾಡಿ ಇಂದಿರೆಯು ಸಿಟ್ಟಿನಿಂದ ಅಂದಳು.

"ನಿನ್ನ ರೂಪಕ್ಕೆ ಮರುಳಾಗದವರಾರು ? ನನ್ನ ಮನಸ್ಸು ನನ್ನ ಸ್ವತಂತ್ರ ದಲ್ಲಿಲ್ಲ. ನಾನು ಕೇವಲ ಸಾವಿತ್ರೆಮ್ಮನ ಮಗನೆಂದು ತಿಳಿದು ಜರಿಯಬೇಡ."

"ನಟೇಶಾ, ನೀನು ಈ ಹುಚ್ಚುಚ್ಚಾರ ಒಳ್ಳೇ ಮಾತಿಲೆ ಬಿಡುವಿಯೋ, ಏನು ಈಗಲೇ ನಂಜುಂಡನನ್ನು ಕರಿಸಿ ಪಾದಪೂಜೆ ಮಾಡಿಸಲೋ ? ಲಗ್ನ ನಿಶ್ಚಯ ವಾದ ಕುಮಾರಿಗೆ ಹೀಗಾಡುವದುಂಟೆ ? ಬುದ್ಧಿಯನ್ನೆಲ್ಲಿಟ್ಟಿರುವಿ ?"

"ಹಾಗಾದರೆ ಕಡೆಗವನಿಗೇ ನಿನ್ನನ್ನು ಕೊಡುವದು ಗೊತ್ತಾಯಿತಲ್ಲವೆ !" ಎಂದು ನಟೇಶನು ಕರಕರ ಹಲ್ಲು ತಿಂದು ಒಳ್ಳೇ ಆವೇಶದಿಂದ ಮತ್ತೆ ಮಾತಾಡಿದ್ದು :

"ಅವನಂದರೇನು ! ನನ್ನಕಿಂತಲೂ ದೊಡ್ಡ ಯೋಗ್ಯತೆಯುವನೇನು ? ರಮಾಕಾಂತನೆಂದರೊಬ್ಬ ಶಾಲೆಯ ಮಾಸ್ತರನ ಮಗನು. ಅವನದೇನು ಜಂಭ ! ಅವನೂ ನಿನ್ನ ಮೇಲೆ ಅತಿಶಯವಾದ ಪ್ರೇಮವಿಟ್ಟಿರುವನೆಂದು ಜನರು ಊಹಿ ಸುತ್ತಾರೆ. ಅವನನ್ನು ವರಿಸಬೇಕೇಕೆ, ನನ್ನನ್ನು ಧಿಕ್ಕರಿಸುವಿಯೇಕೆ ?"

"ಮೂರ್ಖಾ, ನೀನು ಹಾದಿಗೆ ಬರುವಂತೆ ಕಾಣಿಸುವದಿಲ್ಲ. ನನ್ನ ಮೇಲೆ ಅಭಿಲಾಷೆ ಇಡುವ ಯೋಗ್ಯತೆ ನಿನ್ನಲ್ಲಿಲ್ಲ. ನೀನು ಎಷ್ಟು ಮಾತಾಡಿದರೂ ಉಪ ಯೋಗವಾಗದು. ಇನ್ನಾದರೂ ತಿಳಿಯಿತೇ ?"

"ನಿಮ್ಮೀ ನಿಶ್ಚಯವು ಖಂಡಿತವಾದದ್ದಾದರೆ ನಾನಾಡಿದ್ದು ತಪ್ಪೇ ಸರಿ. ದಯಮಾಡಿ ನೀವು ನಾನಾಡಿದ್ದಕ್ಕೆ ಕ್ಷಮೆ ಮಾಡಿರಿ." ಎಂದು ನಟೇಶನು ಮುದವಿಳಿ ದವನಾಗಿ ಮಾತಾಡಿದನು.

"ಇರಲಿ ಹೋಗು ; ಅಕೋ ಆ ಸೇವಂತಿಕೆಯ ಹೂ ತಂದುಕೊಡು ನೋಡುವ." ಎಂದು ಹೇಳಿ ನಟೇಶನನ್ನತ್ತ ಕಳಿಸಿ ತಾನು ತ್ವರದಿಂದ ನಂಜುಂಡ ನಿದ್ದ ಸ್ಥಳಕ್ಕೆ ಬಂದುಬಿಟ್ಟಳು. ನಂಜುಂಡನು ರಥ ಸಿದ್ಧಪಡಿಸಿದನು. ನಟೇಶನು ಬಂದ ಕೂಡಲೆ ಇಂದಿರೆಯು ಅವನ ಕಯ್ಯಲ್ಲಿಯ ಹೂವನ್ನು ನಂಜುಂಡನ ಕಯ್ಯಲ್ಲಿ ಕೊಡಹೇಳಿ ತಾನು ರಥದಲ್ಲಿ ಕುಳಿತು ಮನೆಗೆ ಬಂದಳು.

ಮರುದಿವಸ ಜಯರಾಯನು ಕಾಶಿಯಿಂದ ಕಲಕತ್ತೆಗೆ ಹೋಗಿ ಅಲ್ಲಿಂದ ಹುಗಳಿಯಲ್ಲಿ ಉಗೆಯ ಹಡಗದಲ್ಲಿ ಕುಳಿತು ಮದ್ರಾಸಿಗೆ ಬಂದು ಅಲ್ಲಿಂದ ಬೆಂಗಳೂರಿಗೆ ಹೊರಟನು.

ತಾಯಿಮಕ್ಕಳ ಹವಣಿಕೆ

ರಮಾಕಾಂತನೊಂದು ದಿನ ಪ್ರಾತಃಕಾಲದಲ್ಲಿ ಉಪಾಹಾರ ತೀರಿಸಿಕೊಂಡು ಓದುತ್ತ ಕುಳಿತಿರಲು ಅಂಚೆಯವನೊಂದು ಪತ್ರ ತಂದುಕೊಟ್ಟನು. ಪತ್ರದ ಮೇಲೆ ಕಾಶಿಯ ಅಂಚೇಕಟ್ಟೆಯ ಮುದ್ರೆಯಿತ್ತು. ಜಯರಾಯನ ಪತ್ರವಿರಬಹುದೆಂದು ಅದನ್ನು ಒಡೆದು ಓದಿದನು.

ಶ್ರೀ ಕ್ಷೇತ್ರ ಕಾಶೀ

ರಾಜಶ್ರೀ ರಮಾಕಾಂತರಾವ್ ದೇಸಾಯಿ ಮುಕ್ಕಾಮ ಬೆಂಗಳೂರ ಇವರಿಗೆ.

ಕಾಶಿಯಿಂದ ಜಯರಾಯನು ಮಾಡುವ ನಮಸ್ಕಾರಗಳು. ನಿಮ್ಮ ಪತ್ರ ಬಂದುಮುಟ್ಟಿತು. ನೀವು ಜಪಾನಕ್ಕೆ ಹೋಗುವ ವಿಚಾರ ಮಾಡಿದ್ದು ನನ್ನ ಮನಸ್ಸಿಗೆ ಬಂದಿರುತ್ತದೆ. ನಮ್ಮ ದೇಶಕ್ಕೆ ಊರ್ಜಿತದಶೆ ಬರಬೇಕಾದರೆ ನಿಮ್ಮಂಥ ತರುಣರು ದಿಗಂತರಕ್ಕೆ ಹೋಗಿ ಉದ್ಯೋಗ ವ್ಯಾಪಾರಗಳನ್ನು ಕಲಿತು ಬಂದು ಅವುಗಳನ್ನು ನಮ್ಮ ದೇಶದಲ್ಲಿ ಪ್ರಚಾರಣೆಯಲ್ಲಿ ತರುವುದು ಒಂದೇ ಮಾರ್ಗವಿರುತ್ತದೆ.

ನಮ್ಮ ನಿಮ್ಮ ಕೊಡಕೊಳ್ಳುವದರ ನಿರ್ಣಯವನ್ನು ನಿಮ್ಮ ಇಚ್ಛೆಯನುಸಾರವಾಗಿ ನನ್ನ ಗುಮಾಸ್ತನು ಮಾಡುವನು. ನಿಮಗೆ ಅವಸರವಿದ್ದ ಪಕ್ಷದಲ್ಲಿ ನನ್ನ ಮಾರ್ಗಪ್ರತೀಕ್ಷೆ ಮಾಡದಲೆ ಹೊರಟುಹೋಗಲಿಕ್ಕೆ ನನ್ನಿಂದ ನಿಮಗೆ ಪ್ರತಿಬಂಧವಿಲ್ಲ.

ಜಪಾನಕ್ಕೆ ಹೋದನಂತರ ನೀವು ಮೇಲಿಂದ ಮೇಲೆ ಪತ್ರ ಹಾಕಿ ನಮ್ಮ ಸಮಾಚಾರ ತಕ್ಕೊಳ್ಳುತ್ತಿರಬೇಕು.

ಜಪಾನದಲ್ಲಾದರೂ ನಿಮಗೆ ಸುಖ ಉಂಟಾಗಲೆಂದು ಇಂದಿರೆಯು ಬಯಸುತ್ತಾಳೆ.

ಜಯರಾವ್

ಈ ಪತ್ರವನ್ನೋದಿ ರಮಾಕಾಂತನಿಗೆ ವಿಸ್ಮಯವಾಯಿತು, ಜಪಾನಕ್ಕೆ ಹೋಗಲಿಕ್ಕೆ ಈ ಹೊಸ ರಾವಬಹದ್ದೂರರವರು ನನಗಪ್ಪಣೆ ಕೊಟ್ಟರಲ್ಲೆ !

ಮನುಷ್ಯನು ಆಶಾಬದ್ಧನಾದರೆ ಏತರ ಮೇಲಾದರೂ ಆಧಾರವಿಡಲಿಕ್ಕೆ ಸಿದ್ಧ ನಾಗುತ್ತಾನೆ 'ಮುಳುಗುವ ಮನುಷ್ಯನು ಹುಲ್ಲುಕಡ್ಡಿಯನ್ನಾದರೂ ಹಿಡಿಯು ಹೋಗುತ್ತಾನೆ.' ಎಂದು ಇಂಗ್ಲಿಷ್ ಗಾದೆಯುಂಟು. ತಾನು ಜಯರಾಯನಿಗೆ ಬರೆದ ಪತ್ರದಿಂದಾದರೂ ಅವನ ಹೃದಯಕ್ಕೆ ದ್ರವಹುಟ್ಟಿ ಇಂದಿರೆಯನ್ನು ತನಗೆ ಕೊಡಲು ಏಕೆ ಯೋಚಿಸಬಾರದೆಂದು ರಮಾಕಾಂತನು ಚಿಂತಿಸಿದ್ದನು. ಆದರೆ ಆ ಪಾಷಾಣಹೃದಯನು ಸುಖೇನೈವ ಜಪಾನಕ್ಕೇಕೆ, ದಿಗಂತರಕ್ಕೂ ಕೂಡಾ ಹೋಗ ಬಹುದೆಂದು ಶಾಸನಪತ್ರವನ್ನು ಕಳುಹಿಸಿದನು. "ಜಪಾನದಲ್ಲಾದರೂ ನಿಮಗೆ ಸುಖವಾಗಲೆಂದು ಇಂದಿರೆಯು ಬಯಸುತ್ತಾಳೆ." ಎಂದು ಈ ರಾವಬಹದ್ದೂರರು ಬರೆದು ಇಂದಿರೆಯ ಮನಸ್ಸಿನಲ್ಲಿಯಾದರೂ ನಾನು ಜಪಾನಕ್ಕೆ ಹೋಗಲೆಂದಿರುವ ದಾಗಿ ನನಗೆ ತಿಳಿಸಲಿಚ್ಛಿಸುವರೇನು ? ಆದರೆ ಇಂದಿರೆಯ ಭಾವಾರ್ಥ ಹಾಗಿಲ್ಲ. ಇಲ್ಲಿ ನನಗೆ ಸುಖವಾಗಲಿಲ್ಲ ; ಜಪಾನದಲ್ಲಾದರೂ ಸುಖವಾಗಲೆಂದು ಆ ಕೋಮಲ ಹೃದಯಳು ಬಯಸಿದ್ದು ಸತ್ಯವಿದೆ ಎಂದು ರಮಾಕಾಂತನು ತರ್ಕಿಸಿ ಒಳ್ಳೆ ರಭಸ ದಿಂದ ಮೀಸೆ ಮೇಲೆ ಕೈಹಾಕಿ "ಒಳ್ಳೇದು ಜಯರಾವಬಹದ್ದೂರ, ನಾನು ಜಪಾನಕ್ಕೆ ಹೋಗುವದು ನಿಮಗೆ ಇಷ್ಟವಿರುವದಲ್ಲವೇ ? ಕೇವಲ ನಿಮ್ಮ ಇಷ್ಟಾರ್ಥ ಕೆಡಿಸಬೇಕೆಂದೇ ನಾನು ಹೋಗುವದನ್ನು ಬಿಟ್ಟುಬಿಡುತ್ತೇನೆ. ನೀವು ನಿಮ್ಮ ಮಗಳನ್ನು ಶ್ರೀಕಂಠನಿಗೆ ಕೊಡತಕ್ಕವರಿದ್ದರೆ ನಾನ್ಯಾಕೆ ದೇಶಭ್ರಷ್ಟನಾಗಬೇಕೆಂದು ಬಯಸುವಿರಿ ! ಇದರಲ್ಲೇನಾದರೂ ಗೌಡಬಂಗಾಲವಿರುವದು. ನಾನಿಲ್ಲಿದ್ದರೆ ಇಂದಿರಾ ಶ್ರೀಕಂಠರ ವಿವಾಹಕ್ಕೆ ಪ್ರತಿಬಂಧವಿರುವದೆಂದು ಜಯರಾಯನಿಗೆ ಭೀತಿ ಯಿರುವದಾಗಿ ತೋರುತ್ತದೆ. ಯಾರು ಕಂಡಿರುವರು ? ನನ್ನ ದೈವದಲ್ಲೇನಿದೆ ಎಂಬುದು ! ಇಂದಿರೆಯು ಬಂದಳೆಂದರೆ ಅವಳನ್ನು ಕಾಣುವೆನು. ಅವಳಿಗೆ ನನ್ನ ಮನೋಗತವನ್ನು ನಿವೇದಿಸುವೆನು. ಇಂದಿರೆಗೆ ನನ್ನನುನಯವು ರುಚಿಸಿದರೆ ಬಂಗಾರದಂತಾಯಿತು. ಇಲ್ಲದಿದ್ದರೆ ನಗೆಗೇಡಾದರೂ ಚಿಂತಿಲ್ಲ. ನಗೆಗೇಡು ಇಲ್ಲಿಯೇ ಉಳಿಯುವದು ; ನಾನು ಜಪಾನದಲ್ಲಿರುವೆನು."

ರಮಾಕಾಂತನ ಮೈಯಲ್ಲಿ ಹೇವ ತುಂಬಿ ಅವನಿಗಾದ ವಿಷಾದವೂ ವಿರಹ ದುಃಖವೂ ಕಡಿಮೆಯಾದಂತೆ ಭಾಸವಾಗಿ ಉತ್ಸಾಹ ಬಂದಿತು. ಜಯರಾಯನ ಪತ್ರ ಕೆಳಗಿಟ್ಟು ಮತ್ತೊಂದು ಪತ್ರವನ್ನು ತಕ್ಕೊಂಡು ನೋಡಲಾಗಿ ಅದರ ಮೇಲಿನ ವಿಳಾಸವು ಕಮಲೆಯ ಉತ್ತಮವಾದ ಅಕ್ಷರಗಳಲ್ಲಿ ಬರೆದಿತ್ತು. ಅದ ನ್ನೊಡೆದು ಓದಿದನು :—

ತಾ॥............

ಪ್ರಿಯ ರಮಾಕಾಂತರಾಯರೆ ;

ಅವ್ವನ ಮಯ್ಯಲ್ಲಿ ಸ್ವಸ್ಥವಿಲ್ಲ. ನಿನ್ನಿನಕಿಂತಲೂ ಈ ದಿವಸ ಸ್ವಲ್ಪ ಗುಣವದೆ. ನೀವು ಭೆಟ್ಟಿಗೆ ಬರಲಿಲ್ಲೆಂದು ಬಹಳಾವರ್ತಿ ಕೇಳುತ್ತಾಳೆ. ಕೆಲವು ಮಹತ್ವವಾದ ಮಾತಿನಲ್ಲಿ ನಿಮ್ಮ ಅಭಿಪ್ರಾಯ ಕೇಳತಕ್ಕದ್ದಿದೆ, ದಯಮಾಡಿ ಸಾವಿರ ಕೆಲಸಗಳಿದ್ದರೂ ಬಿಟ್ಟು ಒಂದಾವರ್ತಿ ಬಂದು ದರ್ಶನ ಕೊಟ್ಟು ಹೋಗಬೇಕೆಂದು ಪ್ರಾರ್ಥನೆ.

ತಮ್ಮ ಗುಣಲುಬ್ಧಳಾದ,
ಕಮಲಾ ಮಗಳೂರ

ಅನ್ಯರು ಅಸಂಬದ್ಧವಾದ ವಾರ್ತೆಯನ್ನು ಹುಟ್ಟಿಸಿದರೆ, ಪಾಪ, ಕಮಲೆಯದೇನು ದೋಷ? ಅವರ ಮನೆಗೆ ನಾನಂಜಿ ಹೋಗಲಿಲ್ಲ. ಇದು ದೊಡ್ಡಸ್ತನದ ಮಾತಾಗಲಿಲ್ಲ. ಈ ದಿವಸ ದುಃಸ್ಥಿತರಾದ ಈ ತಾಯಿಮಕ್ಕಳ ಸಮಾಚಾರ ತೆಗೆದುಕೊಂಡು ಬರತಕ್ಕದ್ದು ಎಂದು ಯೋಚಿಸಿದನು.

ಧಡಧಡಧಡ ಯಾರೋ ಬಾಕಿಲ ಸಪ್ಪಳ ಮಾಡಿದರು. ಇಷ್ಟು ತರಾತುರಿಯಾದ ಪುರುಷನ್ಯಾರಿರಬಹುದೆಂದು ರಮಾಕಾಂತನೆದ್ದು ಬಾಕಿಲ ತೆರೆಯಲು ಬಾಷ್ಕಳಪಂತ ಡಾಕ್ತರನು ನಟಿಸುತ್ತ ಬಂದನು. ನಿತ್ಯದಂತೆ ಅವನು ಉಲ್ಲಾಸ ವೃತ್ತಿಯಲ್ಲಿದ್ದನು.

" ಓಹೋ! ರಮಾಕಾಂತರಾವ, ದರ್ಶನವನ್ನು ದುರ್ಲಭ ಮಾಡಿಬಿಟ್ಟಿರಿ! ಏನು ಫಳಾರದ ಉದ್ಯೋಗ ನಡೆದಿದೇನು? ಮೈಯಲ್ಲಿ ಪ್ರಾಯವದೆ. ಎಷ್ಟು ತಿಂದರೂ ಭಸ್ಮವೇ ಆಗುತ್ತಿರುವಲ್ಲಿ ತಿನ್ನುವದಕ್ಕೆ ಕಡಿಮೆ ಯಾಕೆ ಮಾಡುವಿರಿ? ಮೇಜರ ಹೋಟೇಲ್ ದೊರೆಗಳು ಹೀಗೇ ಅನ್ನುತ್ತಿದ್ದರು. ನಾನು ಸುಳ್ಳು ಹೇಳುವದಿಲ್ಲ."

" ವಃ ಡಾಕ್ತರ, ವ್ಯಾಳ್ಯಕ್ಕೆ ದೇವರು ಬಂದಂತೆ ಬಂದಿರಿ. ಪಂಚಾಯ್ತಿಗೆ ಯಾರೂ ಇಲ್ಲೆಂದು ಹಳಹಳಿಸುತ್ತಿದ್ದೆನು. ಸೂರಪ್ಪಾ, ಇನ್ನೊಂದು ತಾಟು ಬಡಿಸಿ ತಾ.

" ರಮಾಕಾಂತರಾವ್, ನಿಮಗೇನಾಗಿದೆ? ಸೊರಗಿರುವಿರೆಷ್ಟು! ಮೋರೆ ಮೇಲೆ ಕಳೆ ಏನೂ ಇಲ್ಲ.'

"ನನಗೇನಾಗಿದೆ ಡಾಕ್ತರ, ನಿಮ್ಮ ಕಾರಸ್ಥಾನವೆಲ್ಲಿಗೆ ಬಂದಿರುವದು ? ಎಂದು ರಮಾಕಾಂತನು ಕೇಳಿದನು.

"ಮೊಗಲಾಯಿಯಲ್ಲಿ ನೂರು ರೂಪಾಯಿಯ ಚಾಕರಿ ಸಿಕ್ಕುವಂತಿದೆ. ಆದರೆ ಅಲ್ಲಿಯಕಿಂತಲೂ ಮಹಾರಾಷ್ಟ್ರದಲ್ಲಿ ದೊರೆತರೆ ಒಳ್ಳೇದಾಗುವದು. ಡಾಕ್ಟರ ಮ್ಯಾನಸನ್ ಇವರ ಪತ್ರವನ್ನು ವರ್‍ಹಾಡದ ಕಮಿಶನರರಿಗೆ ಒಯ್ದು ಹಚ್ಚಿರುವೆನು. ನನ್ನಂಥ ನಿಷ್ಣಾತನಿಗೆ ಸ್ಥಳಕೊಡದಿದ್ದರೆ ಕಮಿಶನರನದೇ ದುರ್ದೈವವೆನ್ನಬೇಕು. ಏನೋ ಶ್ಲೋಕವದಲ್ಲ! ಕುತ್ಸ್ಯಸ್ಯು......ಚನ್ನಾಗಿ ನೆನಪಾಗಲೊಲ್ಲದು. ನಿಮಗೆ ಜ್ಞಾಪಕವುಂಟೇನು ?"

"ಕುತ್ಸ್ಯಸ್ಯುಃ ಕುಪರೀಕ್ಷಕಾ ನ ಮಣಯೋ ಯೈರರ್ಘತಃ ಪಾತಿತಾಃ ಅಹುದಲ್ಲೋ ?"

ಆಃ ಹಾ! ಅದೇ. ಎಂದು ಹೇಳಿ ಬಾಷ್ಕಳಪಂತನು ಈ ವಾಕ್ಯವನ್ನು ತನ್ನ ಸ್ಮರಣಪುಸ್ತಕದಲ್ಲಿ ಬರೆದಿಟ್ಟುಕೊಂಡನು.

"ಡಾಕ್ತರ, ನಿಮಗೆ ಮೈಸೂರ ಪ್ರಾಂತದಲ್ಲಿಯೇ ನೌಕರಿ ಸಿಕ್ಕರೆ ಆಗ ದೇನು ?"

"ರಮಾಕಾಂತರೆ, ಪ್ರಾಂತವೇ ನನಗೆ ಬೇಡಾಗಿದೆ. ನಾನುಭವಿಸುತ್ತಿರುವ ವಿಷಾದವನ್ನು ನೀವೇನು ಬಲ್ಲಿರಿ! ಜಗತ್ತಿನ ಅನುಭವ ನಿಮಗಿಲ್ಲ. ನಿರಾಸೆ, ಅಕೃತಜ್ಞತೆ, ವಿಶ್ವಾಸಘಾತಗಳು ನಿಮಗಿನ್ನೂ ತಪ್ಪಿಲ್ಲ. ಯುವತಿಯರ ಮೃದು ಹಾಸವು ನಿಮ್ಮಂಥವರಿಗೆ ಅಮೃತೋಪಮವೆನಿಸುವದು. ಜನರಿಗೆ ಉಪಕಾರ ಮಾಡುವದಕ್ಕಾಗಿ ನೀವು ಸಾಹಸ ಮಾಡಿರಿ, ನಿಮ್ಮ ಹಣ ಹಾಳು ಮಾಡಿಕೊಳ್ಳಿರಿ. ಆಮೇಲೆ ಮೆಲ್ಲಮೆಲ್ಲಗೆ ನಿರಾಶೆ, ಅಕೃತಜ್ಞತೆ, ವಿಶ್ವಾಸಘಾತಗಳು ತಮ್ಮ ನಿಜರೂಪ ವನ್ನು ತೋರಿಸುವವು. ವಸ್ತುಸ್ಥಿತಿ ಹೀಗಿರುವದು. ನಾನು ಸುಳ್ಳು ಹೇಳು ವದಿಲ್ಲ."

"ಒಂದೆರಡು ಮಾತುಗಳಲ್ಲಿ ನನಗೂ ಚನ್ನಾಗಿ ಅನುಭವ ಬಂದಿದೆ."

"ಹಾಃ ಹಾಃ ಹಾಃ ಹಾಃ, ರಮಾಕಾಂತರಾವ, ನೀವು ಸೊರಗಿರುವ ಕಾರಣ ತಿಳಿಯಬಂದಿತು. ಕಾಮಿನಿಯ ಕಟಾಕ್ಷವು ಒಳಿತಾಗಿ ನಿಮ್ಮ ಹೃದಯದಲ್ಲಿ ನಟ್ಟಿರು ವದಲ್ಲೇ ? ವಸ್ತುಸ್ಥಿತಿ ಹೀಗಿರುವದು. ನಾನು ಸುಳ್ಳು ಹೇಳುವದಿಲ್ಲ" ಎಂದು ಡಾಕ್ತರನು ವಿನೋದಮಾಡಿ ನಕ್ಕನು.

"ಬಾಷ್ಕಳಪಂತರೇ, ಪಂಡಿತಾಬಾಯಿಯವರು ಕ್ಷೇಮದಲ್ಲಿರುವರೋ ?"

ಎಂದು ರಮಾಕಾಂತನು ವಿಷಯಾಂತರ ಮಾಡುವದಕ್ಕೆ ಕೇಳಿದನು.

"ಅವರಿಗೇನು ಬೇನೆ! ಚನ್ನಾಗಿಯೇ ಇರುವರು. ರಮಾಕಾಂತರಾವ, ಜಯರಾಯನ ಕಡಿಂದ ಪತ್ರ ಬಂದಿರುವದೇನು ?

"ಈವತ್ತೇ ಅವರ ಕಡಿಂದ ಪತ್ರ ಬಂದದೆ."

"ಅವನು ತೀವ್ರವೇ ಮರಳಿ ಬರುವನೆಂದು ಶ್ರೀಕಂಠನು ಹೇಳುತ್ತಿದ್ದನು. ಶ್ರೀಕಂಠನಿಗೆ ಇಂದಿರೆಯನ್ನು ಕೊಡುವದು ನಿಶ್ಚಯವಾಗಿದೆ. ನೀವು ಕೇಳಿರುವಿರಷ್ಟೇ?"

"ಗೊತ್ತದೆ" ಎಂದು ಒಂದೇ ಮಾತಿನಲ್ಲಿ ರಮಾಕಾಂತನುತ್ತರಕೊಟ್ಟನು.

"ಜಯರಾಯನಲ್ಲಿ ಯಥೇಚ್ಛ ಹಣವಿದೆ. ಶ್ರೀಕಂಠನು ಜಹಗೀರದಾರರ ಮಗನು. ಆದರೆ ಈ ಸಂಬಂಧಕ್ಕೆ ನನ್ನೊಪ್ಪಿಗೆ ಇಲ್ಲ. ನನ್ನ ಮಗಳಾಗಿದ್ದರೆ ನಾನು ಇಂದಿರೆಯನ್ನು ಶ್ರೀಕಂಠನಂಥವನಿಗೆ ಕೊಡುತ್ತಿದ್ದಿಲ್ಲ."

"ಅದೇಕೆ ಡಾಕ್ತರರೇ ?"

"ನಾಟಕೀ ಸ್ತ್ರೀಯರು, ಸರಕಸುಗಳು, ಜೂಜುಗಳು ಇವೇ ಶ್ರೀಕಂಠಬಹದ್ದರರ ಪ್ರೀತಿಯ ವಿಷಯಗಳು. ಅವರವರ ಮನಸ್ಸಿಗೆ ಬಂದ ಮೇಲೆ ನಮ್ಮಂಥವರ ಅಭಿಪ್ರಾಯಗಳು ಪ್ರತಿಕೂಲವಾಗಿದ್ದರೇನು ? ಅನುಕೂಲವಾಗಿದ್ದರೇನು ? ಆದರೂ ಇಂದಿರೆಯು ಈ ಮಾತಿಗೆ ಹೇಗೆ ಸಮ್ಮತಿಪಟ್ಟಳೋ ತಿಳಿಯದು" ಎಂದು ಡಾಕ್ತರನಂದನು.

"ಏಕೆ, ಡಾಕ್ತರರೆ, ಶ್ರೀಕಂಠನಿಗೇನಾಗಿದೆ! ಕಣ್ಣು ಮೂಗಿನಿಂದ ನೆಟ್ಟಗಿರುವನು. ಬುದ್ಧಿವಂತನೂ ಇರಬಹುದಾಗಿ ತೋರುತ್ತದೆ."

"ಗೋಪಾಲ ಸೋಗಿನಂತೆ ಅವನ ಡಬ್ಬೇನು ? ಸೆಟಕೊಂಡು ನಡೆಯುವದೇನು ! ಇವುಗಳಿಂದ ಮನುಷ್ಯನು ಸುಂದರನಾಗಬಲ್ಲನೇ ? ನಾನು ಯಥಾರ್ಥ ಹೇಳುತ್ತೇನೆ. ಸುಳ್ಳಾಡುವದಿಲ್ಲ."

ಫಲಾಹಾರ ಮುಗಿದ ಬಳಿಕ ಡಾಕ್ತರನು ಪೋಲೀಸ ಇನಸ್ಪೇಕ್ಟರರ ಮನೆಗೂ ಮುನಸೀಫರ ಮನೆಗೂ ಹೋಗುವದೆಂದು ಹೇಳಿ ಹೊರಟುಹೋದನು.

ಕಮಲೆಯು "ಸೋಪು" ಹಚ್ಚಿ ಮುಖ ತೊಳೆದುಕೊಂಡು ಹಿಕ್ಕಿ ಹೆರಳು ಹಾಕಿಕೊಂಡಿದ್ದಳು. ಕೋಲು ಮೇಲಿನ ಕೊರ್ನಾಡ ಸೀರೆಯನ್ನು ತಿದ್ದಿ ತೀಡಿ ಉಟ್ಟುಕೊಂಡು ಹಸರು ಬಣ್ಣದ ಕುಪ್ಪಸವನ್ನು ತೊಟ್ಟುಕೊಂಡು ತಾಂಬೂಲ ಸವಿದು ನಾಲಿಗೆ ಚಾಚಿ ಬಾಯಿ ಕೆಂಪಾಗಿದೆಯೋ ಇಲ್ಲವೋ ಎಂದು ನೋಡಿ

ಕೊಂಡು ತನ್ನ ಮನೆಯ ಕಿಟಕಿಯಲ್ಲಿ ಬಂದು ನಿಂತಳು. ನಿಂತು ನಿಂತು ಕಾಲು ಸೋತವು. ರಮಾಕಾಂತನ ಹಾದಿಯೇ ಇಲ್ಲ! ಪುರುಷರ ಸ್ವಾರ್ಥಪರತೆಯ ಮೇಲೆ ಅವಳು ಕಾರುವ ಬೆಂಕಿಯೂ, ಸ್ತ್ರೀಯರ ಸ್ವಾತಂತ್ರ್ಯದ ರಕ್ಷಣೆಗಾಗಿ ಕಾದುವ ಅವಳ ಧೈರ್ಯವೂ ಎಲ್ಲಿ ಹೋಗಿದ್ದವೋ ಏನೋ! ಪಾಪ! ಕಮಲೆಯು ಮಳೆಯ ಹಾದೀ ನೋಡಿದಾತೆ ರಮಾಕಾಂತನ ಮಾರ್ಗ ಪ್ರತೀಕ್ಷೆ ಮಾಡುತ್ತ ನಿಂತೇ ನಿಂತಿದ್ದಳು. ಏಕೋ ಅಧೀರಳಾದಂತೆ ಮೌನಭಾವವನ್ನು ಧರಿಸಿದ್ದಳು, ಅವಳ ಉಗ್ರ ಮುದ್ರೆಯು ಇಲ್ಲದಾತಾಗಿ ಕಾಮಪೀಡೆಯಿಂದ ಲಜ್ಜಾವನತಮುಖಿಯಾಗಿದ್ದಳು.

"ಇಂದಿರೆಯು ಶ್ರೀಕಂಠನನ್ನು ಲಗ್ನ ಮಾಡಿಕೊಳ್ಳುವಳು, ಅರ್ಥಾತ್ ರಮಾಕಾಂತನು ನನ್ನ ಪಾಲಿಗೆ ಬಂದಂತಾಯಿತು. ಪರಂತು ಈಗೀಗ ನನ್ನ ಮನ ಮೋಹನನು ಅಡಗಿದಂತಾಗಿರುವನೇಕೆ? ಪಂಡಿತೆಯ ಉಪಾಸನಾ ಸಮಾಜಕ್ಕೆ ಬರುವದಿಲ್ಲ. ಊರಲ್ಲೆಲ್ಲಿಯಾದರೂ ಅವನ ಮುಖಚಂದ್ರಮವು ದೃಷ್ಟಿಗೆ ಬೀಳ ಲೊಲ್ಲದು. ನನ್ನ ಮನೆಗಂತೂ ಅವನು ಬರುವದೇ ಬಿಟ್ಟಿರುವನು. ಇಂಥವನು ನನ್ನ ಪಾಲಿಗೆ ಬಂದಿರುವನೇ!" ಎಂದು ಆಸೆ ನಿರಾಸೆಗಳ ಮಧ್ಯದಲ್ಲಿ ಸಿಕ್ಕು ಕಮಲೆಯು ಪೇಚಾಡುತ್ತಿರುವಳು.

ಕಮಲೆಗೆ ರಮಾಕಾಂತನ ನಿದಿಧ್ಯಾಸ ಹತ್ತಿ ಅವಳು ಒಳಗಿಂದೊಳಗೇ ಸಣ್ಣಾಗುವದನ್ನು ಕಂಡು ಅವಳ ತಾಯಿಯು ಕಳವಳಗೊಂಡವಳಾಗಿ ಏನಾದ ರೊಂದುಪಾಯದಿಂದ ರಮಾಕಾಂತನನ್ನು ಮನೆಗೆ ಕರಿಸಬೇಕೆಂದು ಯೋಚಿಸಿ ಕಮಲೆಯ ಕಯ್ಯಿಂದ ಪತ್ರ ಬರಿಸಿದಳು. ಈ ಪತ್ರಕ್ಕನುಸಾರವಾಗಿ ರಮಾಕಾಂತನು ಬರುವನೆಂದು ಕಮಲೆಯು ಕಿಟಕಿಯಲ್ಲಿ ಕೆಲಹೊತ್ತು ನಿಲ್ಲುವಳು, ಬೇಸತ್ತು ಮತ್ತೆ ಒಳಗೆ ಹೋಗಿ ಕನ್ನಡಿಯಲ್ಲಿ ತನ್ನ ಮುಖ ನೋಡಿಕೊಂಡು ಮತ್ತೆ ಬಂದು ನಿಲ್ಲುವಳು. ಹೀಗೆ ತಾಸೆರಡು ತಾಸಾದ ಬಳಿಕ ರಮಾಕಾಂತನ ಕಬ್ಬಿನಂಥ ದೇಹವು ದೂರದಲ್ಲಿ ಕಂಡಿತು. ಕಮಲೆಯ ಎದೆ ಡವ ಡವ ಹಾರಹತ್ತಿತು. ಕಣ್ಣವೆಯನ್ನು ಕೂಡ ಬಡಿಯದೆ ಈ ಮದಲೋಚನೆಯು ರಮಾಕಾಂತನ ದಿವ್ಯ ರೂಪವನ್ನು ಬಿಡದೆ ನೋಡುತ್ತ ಸಜೀವಳೋ ನಿರ್ಜೀವಳೊ ಎಂಬಂತೆ ನಿಶ್ಚಲಳಾಗಿ ನಿಂತು ಕೊಂಡಳು. ಅವನು ಕೇವಲ ಸಮೀಪಕ್ಕೆ ಬಂದ ಮೇಲೆ ಕಮಲೆಯು ನಾಚಿಕೊಂಡು ಒಳಗೆ ಹೋದಳು.

ರಮಾಕಾಂತನು ಬಂದ ಕೂಡಲೆ ಕಮಲೆಯು ಅವನನ್ನು ತನ್ನ ತಾಯಿಯ ಹತ್ತರ ಕರೆದೊಯ್ದಳು. ಅವನ ಮುಖವನ್ನು ಚನ್ನಾಗಿ ನಿರೀಕ್ಷಿಸಿದರೂ ಅವನಲ್ಲಿ

ಕಮಲೆಯ ವಿಷಯವಾಗಿ ಪ್ರೇಮಭಾವವೇನೂ ಕಂಡು ಬರಲಿಲ್ಲ. ದಯಾಪರನಾದ ಸಜ್ಜನನು ದೀನರ ಮೇಲೆ ಕನಿಕರಪಟ್ಟು ಅವರ ವ್ಯಸನಗಳನ್ನು ದೂರ ಮಾಡುವದಕ್ಕೆ ಬಂದಂತೆ ಕಾಣುತ್ತಿದ್ದನು.

ರಮಾಕಾಂತನನ್ನು ತಾನೇಕೆ ಕರಿಸಿದೆನೆಂಬ ಬಗ್ಗೆ ನೆವ ಹುಡುಕಿ ತೆಗೆದಿಟ್ಟು ಕೊಂಡು ರಂಗಮ್ಮನು ಕುಳಿತಿದ್ದಳು. ತನ್ನಲ್ಲಿ ಅಲ್ಪ ಸ್ವಲ್ಪ ಗಂಟಿದೆ ಅದನ್ನು ಅರ್ಭಥನಾಟ ಕಂಪನಿಯಲ್ಲಿಡಬಹುದೋ, ಮಧ್ವಸಿದ್ಧಾಂತೋನ್ನಾಹಿನಿಯ ನಿಧಿಯಲ್ಲಿಡಬಹುದೋ, ಯಾವದು ಸುರಕ್ಷಿತವಾದದ್ದೆಂದು ರಂಗಮ್ಮನು ನಮ್ಮ ಚರಿತ್ರನಾಯಕನನ್ನು ಕೇಳಿದಳು. ಅರ್ಭಥನಾಟ ಕಂಪನಿಯವರು ಹಿಂದುಸ್ಥಾನದ ದುಡ್ಡಿನಿಂದ ವಿಲಾಯತಿಯಲ್ಲಿ ವ್ಯಾಪಾರದ ಜೂಜು ಆಡುತ್ತಾರೆ. ಅವರು ತಮ್ಮ ಅಂಗಡಿಯಲ್ಲಿ ಮಿತಿಮೀರಿ ದುಡ್ಡು ವೆಚ್ಚ ಮಾಡುತ್ತಾರೆ. ವ್ಯವಹಾರಸ್ಥರ ಚಾಪಲ್ಯವು ಇವರ ಮುಖ್ಯಸ್ಥನಲ್ಲಿಯಾಗಲೀ, ಗುಮಾಸ್ತರಲ್ಲಿಯಾಗಲೀ ಕಾಣುವದಿಲ್ಲ. ಒಳಗಿಂದೊಳಗೇ ಹುಳಿತ ಮರದಂತೆ ಈ ಕಂಪನಿಯ ಸ್ಥಿತಿಯಾಗಿರುವಂತೆ ತೋರುತ್ತದೆ. ಆದ್ದರಿಂದ ಆ ಕಂಪನಿಯಲ್ಲಿ ಹಣವಿಡಲಿಕ್ಕಾದ್ದಲ್ಲವೆಂದು ರಮಾಕಾಂತನು ಹೇಳಿದನು. ಅವನು ಈ ಮಾತು ಹೇಳುವಾಗ್ಯೆ ಕಮಲೆಗೆ ತಾನು ಹೇಳುವದೆಲ್ಲ ತಿಳಿಯಿತೋ ಇಲ್ಲೋ ಎಂದು ಅವಳ ಮೋರೆ ಕಡೆಗೆ ನೋಡಿ,

"ಕಮಲಾಬಾಯಿಗೆ ಈ ಮಾತಿನಲ್ಲಿ ಮನಸ್ಸು ಹಾಕುವ ಇಚ್ಛೆಯಿದ್ದಂತೆ ಕಾಣುವದಿಲ್ಲ." ಎಂದು ಹೇಳಿದನು.

ಕಮಲೆಯ ಚಿತ್ತವು ಈ ಮಾತಿನಲ್ಲಿದ್ದಿಲ್ಲ, ಅವಳು ರಮಾಕಾಂತನ ರೂಪವನ್ನು ಅರೆದುಕೊಂಡು ಕುಡಿಯುವಳೋ ಎಂಬಂತೆ ಇಂದೀವರದಲದಂತೊಪ್ಪುವ ಕಣ್ಣು ಅನವರತವಾಗಿ ಹೊಡೆಯುತ್ತಿದ್ದಳು.

"ರಾಯರೇ, ಈ ವಿಷಯವನ್ನು ಸರಸವಾಗಿಯೂ ಸಂಬೋಧವಾಗಿಯೂ ನೀವು ಹೇಳಿದ್ದು ಕೇಳಿ, ಹೆಂಗಸರಿಗೆ ವ್ಯವಹಾರಜ್ಞಾನ ಕಡಿಮೆಯೆಂದು ತಿಳಿದು ನಾಚಿಕೊಂಡು ಸುಮ್ಮನಿದ್ದೆನು." ಎಂದು ಒನಪಿನಿಂದ ನುಡಿದಳು. ಪುರುಷರಿಗೆ ಕಮಲೆಯು ಸೋತು ಮಾತಾಡಿದ್ದು ಇದು ಮೊದಲನೇ ಸಾರಿ.

"ರಮಾಕಾಂತರೆ, ನೀವು ಜಪಾನದೇಶಕ್ಕೆ ಹೋಗುವಿರೆಂದು ಕೇಳುತ್ತೇನೆ. ನಮ್ಮ ಸಂಗತಿಯು ನಿಮಗೆ ಬೇಸರಾಯಿತೇನು ? ಏಕೆ ಹೋಗುತ್ತೀರಿ ; ನಿಮಗಿಲ್ಲೇನು ಕಡಿಮೆಯಾಗಿದೆ ?" ಎಂದು ರಂಗಮ್ಮನು ಕೇಳದಳು.

"ಏಕೋ ಹೇಳಲಾಗದು. ಕುತ್ತಿಗೆ ಹಿಡಿದು ನೂಕಿದಂತಾಗುತ್ತದೆ."

ಒಕ್ಕಲಗಿತ್ತಿಯು ಬಂದು ರಂಗಮ್ಮನನ್ನು ಏನೋ ನಿಮಿತ್ತವಾಗಿ ಹೊರಗೆ ಕರೆದೊಯ್ದಳು. ಕಮಲೆಯು ಬಾಗಿಲಮಾಡದ ಹತ್ತರ ಹೋಗಿ ಅದನ್ನು ತೆರೆದು ಏನೋ ಮಾಡುತ್ತಿರುವಳಂತೆ ತೊಡಗಿರುವಾಗಲೇ ಅಂದದ್ದು:

"ರಮಾಕಾಂತರೇ, ನೀವು ನಿಜವಾಗಿ ನಮ್ಮನ್ನು ಬಿಟ್ಟೇ ಹೋಗುವಿರೇನು ?"

"ಹೋಗಬೇಕಾಗಿದೆ. ಇಲ್ಲಿರುವದು ಸುಖವಾಗದಿದ್ದರೆ ಮತ್ತೇನು ಮಾಡತಕ್ಕದ್ದು ?"

ಕಮಲೆಯು ರಮಾಕಾಂತನ ಕಡೆಗೆ ಮುಖ ತಿರಿವಿ ಲಾಲಸದಿಂದ ಅವನ ದಿವ್ಯಾಂಗವನ್ನು ನೋಡುತ್ತ "ನಿಮ್ಮ ಸುಖಕ್ಕೇನು ಕೊರತೆಯಾಗಿದೆ ? ನಮ್ಮಿಂದೇನಾದರೂ ಮಾಡುವಂತಿದ್ದರೆ ಹೇಳಿರಿ" ಎಂದು ನುಡಿದು ಮುಂದಹಾಸ ಮಾಡಿದಳು.

"ನಿಮ್ಮ ಕಯ್ಯಲ್ಲಿ ಏನಿದೆ ? ಆದರೂ ನಿಮ್ಮಂಥ ಸ್ನೇಹಿತರನ್ನು ಬಿಟ್ಟು ಹೋಗಬೇಕಾದರೆ ವಿಷಾದವೆನಿಸುತ್ತದೆ" ಎಂದು ರಮಾಕಾಂತನು ಆಡಿದನು.

"ಮಿತ್ರರ ವಿಯೋಗವನ್ನು ಸುಲಭವಾಗಿ ಮರೆತುಬಿಡುವಿರಿ. ಒಬ್ಬರ ವಿಯೋಗವು ಮಾತ್ರ ನಿಮಗೆ ದುಃಸಹವಾದೀತು." ಎಂದು ಕಮಲೆಯು ಧೂರ್ತಲಕ್ಷಣದಿಂದ ನುಡಿದು ನಕ್ಕಳು.

"ಯಾರ ವಿಯೋಗವು ನನಗೆ ದುಃಸಹವಾಗಿರುವದು ?"

"ಯಾರದೆಂದರೆ ನಿಮ್ಮ ಪ್ರಾಪ್ತಿಗಾಗಿ ಸವಿಯುತ್ತಿರುವಳೊಬ್ಬ ಸುಂದರಾಂಗಿಯು ಇರಬಹುದು." ಎಂದು ರಮಾಕಾಂತನ ಮನಸ್ಸಿಗೆ ನಡುವಂತೆ ಕಮಲೆಯು ನುಡಿದಳು.

"ನನ್ನ ಪ್ರಾಪ್ತಿಗಾಗಿ ಯಾವ ಸ್ತ್ರೀಯುಳೂ ಜೋತುಕೊಂಡಿಲ್ಲ: ಇಷ್ಟೇ ಅಲ್ಲ, ನನ್ನನ್ನು ಪ್ರೀತಿಸುವ ಸ್ತ್ರೀಯುಳೇ ಇಲ್ಲ."

"ಅರಿಯದವಳ ಮುಂದೆ ಇದನ್ನೆಲ್ಲ ಹೇಳುತ್ತಿರುವಿರೇನು ? ನೀವು ಏನು ನಿಮಿತ್ತ ಇಲ್ಲಿಂದೆದ್ದು ಹೋಗುವಿರೆಂಬುದನ್ನು ನಾನು ಬಲ್ಲೆನು.

"ಏನು ನಿಮಿತ್ತ ?" ಎಂದು ರಮಾಕಾಂತನು ಕೇಳಿದನು.

"ಇಂದಿರೆಯು ನಿಮ್ಮ ಮೇಲೆ ಪ್ರೇಮವಿಟ್ಟಿರುವಳು. ನೀವಂತೂ ಅವಳನ್ನು ಪಂಚಪ್ರಾಣಗಳಿಂದು ತಿಳುಕೊಂಡಿರುವಿರಿ. ಆದರೆ ಜಮುರಾಯನಿಗೆ ಜಹಗೀರದಾರನ ಮಗನು ಅಳಿಯನಾಗಬೇಕಾಗಿದೆ. ನೀವು ವಿರಹವ್ಯಥೆ ತಾಳದೆ ದೇಶ

ಬಿಟ್ಟೋಡಿ ಹೋಗುವಿರಿ. ನಿಮ್ಮ ಮನಸ್ಸಿನೊಳಗಿಂದೇ ಆಡಿದೆನಲ್ಲವೇ ?"

ಈ ಮಾತು ಕೇಳಿ ರಮಾಕಾಂತನ ಎದೆ ಝಲ್ಲೆಂದು ಮೋರೆಯು ಸರಕ್ಕನೆ ಇಳಿಯಿತು. ಆದರೂ ಅವನು ಧೈರ್ಯ ತಂದುಕೊಂಡು ಅಂದದ್ದು—

"ಇಂದಿರೆಯು ನನ್ನ ಮೇಲೆ ಪ್ರೇಮವನ್ನಿಟ್ಟಿರುವಳೊ ಇಲ್ಲವೊ ನಾನು ಹೇಳಲಾರೆನು. ಆದರೆ ನಾನು ಈ ದುಃಖಕ್ಕಾಗಿ ಪರದೇಶಕ್ಕೆ ಹೊರಟುನಿಂತಿಲ್ಲ."

"ಹೇಗೇ ಇರಲಿ ನೀವು ವಿಶೇಷ ದುಃಖ ಹಚ್ಚಿಕೊಳ್ಳತಕ್ಕದ್ದಲ್ಲ. ನನ್ನಲ್ಲಿಯೂ ಹೇರಳ ಹಣವಿದ್ದರೆ ನಾನು ರಾಜನ ಹೆಂಡತಿಯಾಗುತ್ತಿದ್ದೆನು. ನೀವೂ ಜಹಗೀರದಾರರ ಮಕ್ಕಳಾಗಿದ್ದರೆ ಬಾದಶಹನ ಮಗಳು ಕೂಡಾ ದೊರೆಯುತ್ತಿದ್ದಳು. ಇಂಥ ಮಾತುಗಳ ವ್ಯಥೆ ಯಾಕೆ ? ದೇಶ ಬಿಟ್ಟೋಡಿ ಹೋಗಲಿಕ್ಕೇನಾಗಿದೆ ?" ಎಂದು ಕಮಲೆಯು ಚುಚ್ಚಿ ಮಾತಾಡಿದಳು.

"ಇದಕ್ಕಾಗಿ ನಾನು ಜಪಾನಕ್ಕೆ ಹೊರಟಿರುವೆನೇನು ?"

"ನಿಮ್ಮ ಪ್ರೀತಿಪಾತ್ರಳು ನಿಮ್ಮನ್ನು ದೂಡಿಹಾಕಿ ಶ್ರೀಮಂತರ ಮಗನನ್ನು ಮದುವೆಯಾಗುವಳೆಂದು ತಿಳಿದು ನಾಚಿಕೊಂಡು ನೀವು ದೇಶಾಂತರ ಹೋಗುತ್ತೀರಿ." ಎಂದು ರಮಾಕಾಂತನ ಮನಸ್ಸು ಇಂದಿರೆಯ ಮೇಲಿಂದ ತೆಗಿಸಬೇಕೆಂದು ಯೋಚಿಸಿ ಕಮಲೆಯು ನುಡಿದಳು.

ಕಮಲೆಯು ಮತ್ಸರಭಾವದಿಂದ ತನ್ನನ್ನು ಸಿಟ್ಟಿಗೆಬ್ಬಿಸುವಳೆಂದು ತಿಳಿದು ರಮಾಕಾಂತನು :

"ಒಳ್ಳೇದು ನಾನು ಅವಳ ಮೇಲೆ ಪ್ರೀತಿಯನ್ನಿಟ್ಟದ್ದು ನಿಜ. ಇಂದಿರೆಯು ನನ್ನನ್ನು ಧಿಕ್ಕರಿಸಿ ಅನ್ಯನನ್ನು ವರಿಸಲಿಲ್ಲ. ನನ್ನ ಪ್ರೀತಿಯ ಕಥೆಯನ್ನು ಅವಳ ಮುಂದೆ ಹೇಳಿ ಅವಳ ಮನವಲಿಸಲಿಕ್ಕೆ ನಾನು ಯತ್ನ ಮಾಡಿಲ್ಲ. ಅಂದ ಬಳಿಕ ನನಗೆ ಅಪಮಾನವೆಲ್ಲಿಯದು ? ನಾನು ನಾಚಿಕೊಳ್ಳುವದೇತಕ್ಕೆ? ನೀವು ಅಷ್ಟು ಚುಚ್ಚಿ ಮಾತಾಡುವ ಪ್ರಯೋಜನವಾದರೂ ಏನು ?"

ರಮಾಕಾಂತನ ಕ್ರೋಧಯುಕ್ತವಾದ ಮುದ್ರೆಯನ್ನು ನೋಡಿ ಕಮಲೆಯು ಗಾಬರಿಯಾಗಿ "ರಾಯರೇ, ತಮಗೆ ಕೋಪ ಬರಬೇಕೆಂದು ನಾನು ಮಾತಾಡಲಿಲ್ಲ. ಸ್ತ್ರೀಯರ ಚಂಚಲವಾದ ಮನಸ್ಸಿನ ಮೇಲೆ ಅವಲಂಬಿಸಿರುವದು ಸರಿಯಲ್ಲ. ಇಂದಿರೆಯು ನಿಮಗೆ ಅಪ್ರಾಪ್ಯಳಾದರೆ ಇನ್ನೊಬ್ಬ ಸ್ತ್ರೀಯಳನ್ನು ಪರಿಗ್ರಹಿಸಿ ಸುಖದಿಂದಿರಬಹುದೆಂದು ನಾನು ಹೇಳುವ ಅಭಿಪ್ರಾಯವು."

"ಕಮಲಾಬಾಯಿ, ಹೊಟ್ಟೆ ಹಸಿದರೆ ಕಯ್ಗೆ ಸಿಕ್ಕದ್ದು ತಿಂದು ಬದುಕುವದು

ಉತ್ತಮರ ನಡತೆಯಲ್ಲ. ಇಂದಿರೆಯು ದುಷ್ಪ್ರಾಪ್ಯಳಾಗಿದ್ದರೆ ನಾನು ಬ್ರಹ್ಮಚಾರಿಯಾಗಿರುವೆನು." ಎಂದು ಸಮವೃತ್ತಿಯಾಗಿ ರಮಾಕಾಂತನು ನುಡಿದನು.

"ಸ್ತ್ರೀಯಳಿಗೆ ತನ್ನಿಚ್ಛೆಗೆ ಬಂದ ಪುರುಷನು ದೊರಕುವದೂ, ಆ ಪುರುಷನಿಗೆ ಅದೇ ಸ್ತ್ರೀಯಳ ಮೇಲೆ ಆಸಕ್ತಿಯಾಗುವದೂ, ಕಪಿಲಾಷಷ್ಠಿಯ ಯೋಗವೆ ಸರಿ. ಈ ಪರಿಯಿಂದ ದಂಪತಿಗಳಾದವರು ಭೂಮಿಯಲ್ಲಿರುವರೋ ಇಲ್ಲವೋ ನಾನು ಹೇಳಲಾರೆನು.

"ಅದೇನೋ ನಾನು ಹೇಳಲಾರೆನು. ಆದರೆ ನಾನು ಇಂದಿರೆಯನ್ನು ಬಿಟ್ಟು ಅನ್ಯಳ ಪಾಣಿಗ್ರಹಣವನ್ನು ಸರ್ವಥಾ ಮಾಡಲಿಕ್ಕಿಲ್ಲ. ಇದು ನನ್ನ ನಿಶ್ಚಯವು.

ಇದನ್ನು ಕೇಳಿ ಕಮಲೆಯು "ಬಿರುಗಾಳಿ ಪೊಡೆಯಲ್ಕೆ ಕಂಪಿಸಿ ಫಲಿತ ಕದಳಿ ಮುರಿದಿಳೆಗೊರಗುವಂತೆ" ತನ್ನ ಕುರ್ಚಿಯಲ್ಲಿ ನಿಶ್ಚೇತನಳಾದಂತೆ ಬಿದ್ದುಕೊಂಡಳು. ರಮಾಕಾಂತನು ಗಾಬರಿಯಾಗಿ "ಕಮಲಾಬಾಯಿ, ನಿಮಗೇನಾಯಿತು. ಮಯ್ಯಲ್ಲಿ ಸ್ವಸ್ಥವಿಲ್ಲೇನು ?" ಎಂದು ಕೇಳಿದನು.

ಕಮಲೆಯು ಪ್ರಸಂಗವನ್ನರಿತು ಧೈರ್ಯವನ್ನು ತಾಳಿ ದೀನಮುಖದಿಂದ ರಮಾಕಾಂತನನ್ನು ನೋಡಿ—

"ಏನೂ ಇಲ್ಲ. ಈ ದಿವಸ ಸ್ವಲ್ಪ ಪಿತ್ತವಿಕಾರವಾಗಿರುತ್ತದೆ. ರಮಾಕಾಂತರೆ, ನಾನು ಸಭೆಗಳಲ್ಲಿ ಮಾತಾಡುತ್ತೇನೆಂದೂ ಸ್ತ್ರೀಸ್ವಾತಂತ್ರ್ಯಕ್ಕಾಗಿ ಬಡಿದಾಡುವೆನೆಂದೂ ಜನರು ನನ್ನನ್ನು ನಿಂದಿಸುತ್ತಾರೆ. ಆದರೆ ಇದರಲ್ಲಿ ನನ್ನದೇನಾದರೂ ತಪ್ಪಿರುವದೇನು ?"

"ಅದರಲ್ಲೇತರ ತಪ್ಪಿರುವದು ! ಜನರ ಮನಸ್ಸುಗಳಿನ್ನೂ ಚೆನ್ನಾಗಿ ಸುಸ್ಕೃತವಾಗಿಲ್ಲ. ಅವರ ನಿಂದೆಗಳನ್ನು ನೀವು ಲೆಕ್ಕಿಸಲೇ ಬೇಡಿರಿ. "ಜನನೋ ದನನೋ" ಎಂಬ ನಾಣ್ನುಡಿ ಇರುವದಿಲ್ಲವೇ ?" ಎಂದು ರಮಾಕಾಂತನು ಸಮಾಧಾನ ಹೇಳಿದನು.

ರಂಗಮ್ಮನು ಬಂದ ಕೂಡಲೆ ರಮಾಕಾಂತನು ಈ ತಾಯಿಮಕ್ಕಳ ಅಪ್ಪಣೆ ತಕ್ಕೊಂಡು ಹೊರಟು ಹೋದನು. ಅವನು ಹೋದ ಬಳಿಕ ಕಮಲೆಯು ತನ್ನ ತಾಯಿಯನ್ನು ತಪ್ಪಿಕೊಂಡು ದೊಡ್ಡ ದನಿ ತೆಗೆದು ಅಳಹತ್ತಿದಳು. ನಡೆದ ಸಂಗತಿಯನ್ನು ಕೇಳಿ ರಂಗಮ್ಮನಾದವರೂ ಪರಮದುಃಖಿತಳಾದಳು.

ಜಲಸಮಾಧಿ

ಜಯರಾಯನ ಪತ್ರ ಬಂದಂದಿನಿಂದ ರಮಾಕಾಂತನಿಗೆ ದ್ವೇಷ ಬಂದಂತಾಗಿ ಅವನ ಕಾರಸ್ಥಾನವನ್ನು ಹೇಗೆ ಮುರಿಯಬೇಕೆಂಬ ಯೋಚನೆಯಲ್ಲಿಯೇ ಇದ್ದನು. ಆವನ ಮನಸ್ಸಿಗೆ ಬೇರೆ ಯಾವದೂ ಯೋಚನೆ ಬರಲೊಲ್ಲದು. ಇಂದಿರೆಯು ಯಾವಾಗ ಬರುವಳೋ ಆವಳ ಮುಂದೆ ತನ್ನ ಅಂತರ್ಗತವನ್ನು ಯಾವಾಗ ಹೇಳಿ ಎರಡರಲ್ಲೊಂದು ನಿರ್ಣಯ ಮಾಡಿಕೊಳ್ಳುವೆನೋ ಎಂಬ ವಿಚಾರವು ರಮಾ ಕಾಂತನನ್ನಾಕ್ರಮಿಸಿಕೊಂಡಿತ್ತು.

ಒಂದು ದಿವಸ ಅವನು ಚಾಮರಾಜೇಂದ್ರ ಪುಸ್ತಕಾಲಯದಿಂದ ಹೊರ ಬೀಳುವಷ್ಟರಲ್ಲಿಯೇ ಬಾಕಿಲಲ್ಲಿ ಶ್ರೀಕಂಠಬಹದ್ದರನೆದುರಾದನು. ರಮಾಕಾಂತನಿಗೆ ನಿಷ್ಕಾರಣವಾಗಿ ಶ್ರೀಕಂಠನ ಕೂಡ ಮಾತಾಡಬಾರದೆಂಬ ಬುದ್ಧಿ ಹುಟ್ಟಿತ್ತು. ಶ್ರೀಕಂಠನೂ ತಾನೂ ಶತ್ರುಗಳಾಗಿರುವೆವೆಂದು ರಮಾಕಾಂತನು ಭಾವಿಸಿಕೊಂಡಿ ದ್ದನು. ಆದರೆ ಇವರು ನಿಜವಾಗಿ ಶತ್ರುಗಳಾಗಿರಲಿಲ್ಲ. ರಮಾಕಾಂತನನ್ನು ಕಂಡು ಶ್ರೀಕಂಠನು ಅಂದದ್ದು:

"ನಮಸ್ಕಾರ ರಮಾಕಾಂತರಾವ, ಎಲ್ಲಿಯೂ ದರ್ಶನವೇ ಇಲ್ಲ! ಜಯ ರಾಯರು ಬಂದಿರುವರು. ಭೆಟ್ಟಿಯಾಯಿತೇನು ?"

" ಇಷ್ಟರಲ್ಲಿಯೇ ಬಂದುಬಿಟ್ಟರೇನು ? ಮೂರು ನಾಲ್ಕು ತಿಂಗಳು ಪ್ರವಾಸ ಮಾಡತಕ್ಕವರಿದ್ದರು. ಅವರು ಬಂದದ್ದು ನನಗೆ ಗೊತ್ತೇ ಇಲ್ಲ. ನಿಮ್ಮ ಬಾಯಿ ಯಿಂದಲೇ ಕೇಳಿದ್ದು."

"ಏನೋ ವಿಶೇಷ ಕೆಲಸ ಬಿದ್ದದರಿಂದ ಜಯರಾಯರು ಗಡಿಬಿಡಿ ಮಾಡಿ ಕೊಂಡು ಹೊರಟುಬಂದರು."

"ಈಗೈ ಬೆಂಗಳೂರಲ್ಲಿರುವರೇನು ?" ಎಂದು ರಮಾಕಾಂತನು ಕೇಳಿದನು.

"ಅವರೀಗ ಶ್ರೀರಂಗಪಟ್ಟಣದಲ್ಲಿರುವರು ಮತ್ತೆ ನಾಡದ್ದು ಬರುವರು. ಇಂದಿರೆಯು ಮಾತ್ರ ಅಲ್ಲಿಯೇ ಕೆಲವು ದಿವಸ ಇರತಕ್ಕವಳಾಗಿದ್ದಾಳೆ."

ಇಂದಿರೆಯ ದರ್ಶನ ತನಗಾಗಬಾರದೆಂಬ ದುರಾಲೋಚನೆಯಿಂದ ಜಯ ರಾವ ಬಹದ್ದೂರರು ಅವಳನ್ನು ಶ್ರೀರಂಗಪಟ್ಟಣದಲ್ಲಿಟ್ಟಿರಲಿಕ್ಕೆ ಸಾಕು. ವಂಚಕ ತನದಲ್ಲಿ ಚಾಣಕ್ಯನನ್ನು ಮರಿಸುವನು. ಹೀಗೆ ರಮಾಕಾಂತನು ಯೋಚಿಸುತ್ತ ನಿಂತನು.

"ರಮಾಕಾಂತರಾವ್, ನೀವು ಜಪಾನಕ್ಕೆ ಹೋಗುವವರಿರುವಿರೆಂದು

ಕೇಳುತ್ತೇನೆ. ಹೋಗುವದರೊಳಗಾಗಿ ಮತ್ತೆ ಸಂದರ್ಶನವಾಗಬಹುದಷ್ಟೇ?" ಎಂದು ನುಡಿದು ಶ್ರೀಕಂಠನು ರಮಾಕಾಂತನಿಗೆ ಕೈಮುಗಿದು ಪುಸ್ತಕಾಲಯವನ್ನು ಹೊಕ್ಕನು. ರಮಾಕಾಂತನಿಗೆ ಹೊರ ಆಲೋಚನೆಗಳಿಗೆ ಮತ್ತೆ ಅನ್ಯವಾದದ್ದರಿಂದ ಅನ್ಯವಿಚಾರಗಳ ಎಚ್ಚರಿಕೆಯಿಲ್ಲದೆ ನಡೆದನು.

ಇನ್ನು ಇಂದಿರೆಯು ತೀವ್ರವೇ ಶ್ರೀಕಂಠನ ಪತ್ನಿಯಾಗುವಳೆಂದು ನೆನಿಸಿ ರಮಾಕಾಂತನು ತನ್ನ ಮನಸ್ಸಿನಲ್ಲಿ ಕುದಿಯಹತ್ತಿದನು. ವಿಷತಿಂದವನಿಗೆ ಏನುಪಾಯ ಮಾಡಬೇಕೆಂಬುದೂ ತೋಚುವದಿಲ್ಲ. ಚೆನ್ನಾಗಿ ವಿಚಾರ ಮಾಡ ಲಿಕ್ಕೂ ಅವಧಿಯಿರುವದಿಲ್ಲ. ಈ ವಿಷತುಲ್ಯವಾದ ವಿಚಾರವು ರಮಾಕಾಂತನ ಮನಸ್ಸಿನಲ್ಲಿ ಬಂದಾಕ್ಷಣವೇ ಅವನ ಅವಸ್ಥೆಯು ವಿಷತಿಂದವನಂತಾಯಿತು. ಈ ಪ್ರಸಂಗದಲ್ಲಿ ಯಾರೇನಂದರೂ ಚಿಂತಿಲ್ಲ, ಬಿಟ್ಟರೂ ಚಿಂತಿಲ್ಲ. ಉಪಹಾಸ, ನಿಂದೆ, ಅಪವಾದ, ಏನು ಬೇಕಾದದ್ದು ಬರಲಿ, ನಾನು ಶ್ರೀರಂಗಪಟ್ಟಣಕ್ಕೆ ಈಗಲೇ ಹೋಗಿ ಇಂದಿರೆಯನ್ನು ಕಂಡು, ಅವಳ ಮೇಲಿನ ಪ್ರೀತಿಗಾಗಿ ನನ್ನ ಸ್ಥಿತಿಯೇನಾ ಗಿರುವದೆಂಬುದನ್ನು ನಿವೇದಿಸುವೆನು. ನೀನು ಶ್ರೀಕಂಠನನ್ನಾಗಲೀ ಮತ್ತ್ಯಾವ ಕಂಠ ನನ್ನಾಗಲೀ ಮದುವೆ ಮಾಡಿಕೊಂಡರೂ ಚಿಂತಿಲ್ಲ. ನಾನು ಮಾತ್ರ ಅನ್ಯ ಸ್ತ್ರೀಯಳ ಪಾಣಿಗ್ರಹಣವನ್ನು ಯಾವಜ್ಜೀವ ಮಾಡಲಿಕ್ಕಿಲ್ಲವೆಂಬ ನಿಶ್ಚಯವನ್ನು ಕೂಡ ಅವಳಿಗೆ ತಿಳಿಸಿ ಬರುವೆನು. ಮುಂದೆ ನನ್ನ ದೈವದಲ್ಲಿದ್ದಂತಾದೀತು ಎಂದು ರಮಾಕಾಂತನು ನಿರ್ಧಾರ ಮಾಡಿಕೊಂಡು ತನ್ನ ಪೆಟ್ಟಿಗೆಯಲ್ಲಿ ತಕ್ಕಮಟ್ಟಿಗೆ ಸಾಮಾನುಗಳನ್ನು ತುಂಬಿಟ್ಟು ಶ್ರೀರಂಗಪಟ್ಟಣಕ್ಕೆ ಹೊರಡುವ ಸಿದ್ಧತೆ ಮಾಡಿ ಕೊಂಡು ಕುಳಿತನು.

ಅಷ್ಟರಲ್ಲಿ ಮೈಸೂರು ರಾಜಮಂದಿರದ ವ್ಯವಸ್ಥಾಪಕನಾದ ಮುಖ್ಯ ಎಂಜಿನಿಯರನ ಕಡಿಂದ ಮೈಸೂರಿಗೆ ಅಗತ್ಯವಾಗಿ ಬರುವದಕ್ಕೆ ತಂತಿಯು ಬಂದಿತು. ಅದನ್ನೋದಿಕೊಂಡು ರಮಾಕಾಂತನು ಮೈಸೂರಿಗೆ ಹೊರಟು ಹೋದನು. ಮರುದಿವಸವೇ ಅಲ್ಲಿಯ ಕೆಲಸಗಳನ್ನು ತೀರಿಸಿಕೊಂಡು ಮತ್ತೆ ಶ್ರೀರಂಗಪಟ್ಟಣಕ್ಕೆ ಹೊರಡುವದಕ್ಕೆ ಉದ್ಯುಕ್ತನಾದನು.

ಶ್ರೀರಂಗಪಟ್ಟಣಕ್ಕೆ ಗಾಡಿಯು ಬೆಳಗಿನ ಏಳು ಗಂಟೆಗೆ ಹೊರಡುವದಿತ್ತು. ರಮಾಕಾಂತನು ಸಿದ್ಧನಾದಾಗ್ಯೆ ಇನ್ನೂ ರಾತ್ರಿ ಮಿಸಷ್ಟಿ ಇತ್ತು. ನಿದ್ರೆಯಂತೂ ಬರುವಹಾಗೆಯೇ ಇದ್ದಿಲ್ಲ. ಅವನು ಎಷ್ಟೋ ಸಿಗರೇಟುಗಳನ್ನು ಸೇದಿ ಹಾಕಿದನು; ಎದ್ದು ಅಡ್ಡಾಡಿದನು. ಅಂದರೂ ಬೆಳಗಾಗಪಲ್ಲದು. ಕಡೆಗೆ ಬೇಸತ್ತು

ಹಾಸಿಗೆಯ ಮೇಲೆ ಹೋಗಿ ಬಿದ್ದುಕೊಂಡನು. ನಾಲ್ಕು ಹೊಡಿಯುವ ಸುಮಾರಕ್ಕೆ ರಮಾಕಾಂತನಿಗೆ ಜಂಪು ಹತ್ತಿತು. ಬೆಳಿಗ್ಗೆ ಆರು ಗಂಟೆಗೆ ಸೂರಪ್ಪನು ಬಂದು ಚಹ ಸಿದ್ಧವಾಗಿದೆ ಎಂದು ರಮಾಕಾಂತನನ್ನು ಎಬ್ಬಿಸಿದನು. ರಮಾಕಾಂತನು ತವಕದಿಂದೆದ್ದು ಹೊರಡುವ ಸಿದ್ಧತೆ ಪೂರ್ಣವಾಗಿ ಮಾಡಿಕೊಂಡು, ಇಂದಿರೆಗೆ ತಾನು ಬಂದಿರುವೆನೆಂಬ ಸಂಜ್ಞಾರ್ಥ ಪತ್ರವನ್ನು ಬರೆದು ತನ್ನ ದೊಡ್ಡಂಗಿಯ ಬಕ್ಕಣದಲ್ಲಿಟ್ಟನು. ಅಸಾಧ್ಯವಾದ ಮೋಡ ಕವಿದು ಮಳೆಗರಿಯಲಾರಂಭಿಸಿತು. ಆದರೂ ಎದೆಗುಂದದೆ ಸ್ಟೇಷನಕ್ಕೆ ತನ್ನ ರಥದಲ್ಲಿ ಕುಳಿತು ಬಂದನು. ಗಾಡಿ ಬರುವದಕ್ಕೆ ಇನ್ನೂ ಹತ್ತು ನಿಮಿಷಗಳ ಅವಧಿಯಿತ್ತು. ಪಶ್ಚಿಮವಾಹಿನಿ ಸ್ಟೇಷನಕ್ಕೆ ಬಂದಮೇಲೆ ಪೂಲು ಕೆಟ್ಟಿದ್ದರಿಂದ ಶ್ರೀರಂಗಪಟ್ಟಣದವರೆಗೆ ಗಾಡಿ ಹೋಗುವದಿಲ್ಲೆಂದು ಜನರೆನ್ನೆಲ್ಲ ಇಳಿಸಿಬಿಟ್ಟರು.

ಇನ್ನೇನು ಮಾಡಬೇಕು ? ಮಳೆಯಂತೂ ಒಳಿತಾಗಿ ಸೆಳೆಯುತ್ತಿತ್ತು. ನದಿಯು ತುಂಬಿ ಸೂಸಿ ಹರಿಯುತ್ತಿತ್ತು. ಇನ್ನು ಶ್ರೀರಂಗಪಟ್ಟಣಕ್ಕೆ ಹೋಗುವ ಬಗೆ ಯಾವುದು ? ಇದೇನೋ ಅಪಶಕುನವಾದಂತಾಯಿತೆಂದು ರಮಾಕಾಂತನು ಚಿಂತಾಕುಲನಾದನು, ತನ್ನ ಫಲಾಹಾರದ ಗಂಟು ತೆಗೆದು ಫಲಾಹಾರ ಮಾಡಿ ಅತ್ತಿತ್ತ ತಿರುಗಾಡಿದನು. ರೈಲಿನವರು ಮರುದಿವಸ ನಾವೆಗಳನ್ನು ತರಿಸಿ ಈ ಪ್ರಯಾಣಸ್ಥರನ್ನೆಲ್ಲ ಹೊಳೆ ದಾಟಿಸಿ ಶ್ರೀರಂಗಪಟ್ಟಣದಲ್ಲಿ ಸಿದ್ಧವಾಗಿದ್ದ ಮತ್ತೊಂದು ಗಾಡಿಯಲ್ಲಿ ತೆಗೆದುಕೊಂಡು ಹೋಗುವ ವ್ಯವಸ್ಥೆ ಮಾಡಿದ್ದರು. ರಮಾಕಾಂತನಿಗೆ ಈ ದಿವಸವೇ ಶ್ರೀರಂಗಪಟ್ಟಣವಲ್ಲಿ ಸೇರಬೇಕಾಗಿತ್ತು. ಆದರೆ ಮಾಡುವನೇನು ? ನೆರೆದವರಲ್ಲಿ ಇವನಷ್ಟು ತರಾತುರಿಯುಂದ ಶ್ರೀರಂಗಪಟ್ಟಣಕ್ಕೆ ಹೋಗುವರಾರೂ ಇದ್ದಿಲ್ಲ. ಸಂಜೆಗೆ ಮತ್ತೊಂದು ಗಾಡಿ ಬಂದು ನಿಂತಿತು. ನಟೇಶನೆಲ್ಲಿಂದ ಬಂದನೋ ಏನೋ, ಈ ಗಾಡಿಯೊಳಗಿಂದಿಳಿದು ರಮಾಕಾಂತ ನೆದುರಿಗೆ ಬಂದು ಥಕ್ಕನೆ ನಿಂತನು.

" ನಟೇಶ್, ನೀನೆಲ್ಲಿಂದ ಬಂದಿ ? ಈ ಹೊತ್ತಿನಲ್ಲಿ ನೀನು ಕಾಶೀಪಟ್ಟಣದ ಬೀದಿಗಳಲ್ಲಿ ನಿಂತು ಅಜ್ಞಜನರಿಗೆ ಬೋಧಿಸುತ್ತಿರುವಿಯೆಂದು ನಾನು ನಂಬಿದ್ದೆನು." ಎಂದು ರಮಾಕಾಂತನು ಕೇಳಿದನು

" ಈಗಂತೂ ಇಲ್ಲಿ ನಿಂತಿರುವೆನಷ್ಟೇ ? ರಮಾಕಾಂತರಾವ್ ನೀವೇಕಿಲ್ಲಿ ? ಈ ಕಾಲಕ್ಕೆ ನೀವು ಜಪಾನದಲ್ಲಿ ಕೌಂಟ ಓನಾಮಾ ಇವರ ಗೂಡ ರಸಾಯನ ಶಾಸ್ತ್ರದಲ್ಲಿಯ ಕೃತಿಗಳ ವಿಷಯವಾಗಿ ವಾಗ್ವಾದ ನಡಿಸಿರುವಿರೆಂದು ನಾನು ತಿಳು

ಕೊಂಡಿದ್ದೆನು.'' ಎಂದು ನಟೇಶನು ಪ್ರತ್ಯುತ್ತರಕೊಟ್ಟನು.

ರಮಾಕಾಂತನಿಗೆ ನಟೇಶನ ವ್ಯಾಧಿ ಶ್ರೀರಂಗಪಟ್ಟಣದಲ್ಲಿ ಬೇಕಾಗಿದ್ದಿಲ್ಲ. ಆದಕ್ಕಾಗಿ ಅವನು "ನೀನು ಶ್ರೀರಂಗಪಟ್ಟಣಕ್ಕೆ ಹೊರಟಿರುವಿಯೇನು ?'' ಎಂದು ನಟೇಶನನ್ನು ಕೇಳಿದನು.

"ನೀವೂ ಅಲ್ಲಿಗೆ ಹೋಗುವಿರಷ್ಟೇ ?''

"ನಟೇಶಾ, ಶ್ರೀರಂಗಪಟ್ಟಣದಲ್ಲಿ ನಿನಗೇನಾದರೂ ವಿಶೇಷ ಕೆಲಸವಿರುವದೇನು ?''

"ನನ್ನ ತಾಯಿಯು ತೀರಿಕೊಂಡಳು. ಅಂತಃಕರಣದವಳೆಂದರೆ ಅವಳೊಬ್ಬಳು ಉಳಿದಿದ್ದಳು. ದೇವರ ಮನಸ್ಸಿಗೆ ಅದೂ ಬರಲಿಲ್ಲ. 'ಕುದುರೆ ಸತ್ತ ಹಾನಿಯಲ್ಲದೆ ಜೀನು ಹೊರುವ ಪೇಚಾಟ ಬೇರೆ' ಎಂಬಂತೆ ತಾಯಿಯ ಉತ್ತರ ಕ್ರಿಯೆಗಳ ವೆಚ್ಚವನ್ನು ಸೋಸಬೇಕಾಗಿರುವದು.

"ಏನು ಮಾಡುವದದೆ ನಟೇಶಾ ! ಆದದ್ದು ಆಗಿಹೋಯಿತು. ಭಗವದಿಚ್ಛೆಗೆ ಬಂದದ್ದು ತಪ್ಪಲಾರದು. ನಾವಿಬ್ಬರೂ ಅನೇಕ ಮಾತಂಗಳಲ್ಲಿ ಸಮದುಃಖಿಗಳಾಗಿರುವೆವು.''

"ಅಹುದು'' ಎಂದು ನಟೇಶನು ಗಟ್ಟಿಯಾಗಿ ನುಡಿದನು.

"ಗಾಡಿಯು ಶ್ರೀರಂಗಪಟ್ಟಣದವರೆಗೆ ಹೋಗಿದ್ದರೆ ನೆಟ್ಟಗಾಗುತ್ತಿತ್ತು. ಇನ್ನು ಶ್ರೀರಂಗಪಟ್ಟಣಕ್ಕೆ ಹೋಗುವ ಯೋಚನೆ ಏನು ? ನಟೇಶ,'' ಎಂದು ರಮಾಕಾಂತನು ಕೇಳಿದನು.

"ನಾವು ಶ್ರೀರಂಗಪಟ್ಟಣವನ್ನು ಇನ್ನೆಂದೂ ಕಾಣಲಿಕ್ಕಿಲ್ಲೆಂಬುದಾಗಿ ನನಗೇಕೋ ಭಾಸವಾಗುತ್ತದೆ'' ಎಂದು ನಟೇಶನು ಗೂಬೆಯಂತೆ ನುಡಿದನು.

"ಹೀಗೇಕನ್ನುವಿ ನಟೇಶಾ ? ಈ ದಿವಸವಿಲ್ಲದಿದ್ದರೆ ನಾಳೆಗಾದರೂ ನಾವು ಹೋಗಬಹುದಲ್ಲವೆ ?''

"ಆಕಾಶದಲ್ಲಿ ತುಂಬಿ ಹರಿಯುವ ಕಾವೇರಿಯು ನಮ್ಮನ್ನು ನುಂಗದೆ ಬಿಡುವಳೇ ?''

"ನಟೇಶಾ, ನೀನು ಅನೇಕ ನದಿಗಳನ್ನು ದಾಟಿದವನು. ಸಮುದ್ರಪರ್ಯಟನವು ಕೂಡಾ ನಿನಗಾಗಿದೆ. ಇಂಥವನು ಈ ಕಾವೇರಿಗೆ ಅಂಜುವನೇ ?'' ಎಂದು ರಮಾಕಾಂತನು ನಟೇಶನನ್ನು ಜರಿದು ನುಡಿದನು, ಸ್ವಲ್ಪ ಹೊತ್ತಿನಮೇಲೆ, "ನಟೇಶ್, ನಾವು ಈ ಪೂಲಿನ ಮೇಲೆ ಹಾಯ್ದು ಶ್ರೀರಂಗಪಟ್ಟಣಕ್ಕೆ

ಹೋಗೋಣ ಬರುವಿಯಾ ?" ಎಂದು ಮಾತ್ರ ಕೇಳಿದನು.

"ನಾನೊಲ್ಲೆ ರಾಯರೆ, ನೋಡಿದಿರಾ, ಚಳಿಯಿಂದ ಮೈಯಲ್ಲಿ ನಡಗು ಹುಟ್ಟಿರುವದು."

"ನನ್ನ ದೊಡ್ಡಂಗಿಯನ್ನು ನಿನಗೆ ಹಾಕಿಕೊಳ್ಳಲಿಕ್ಕೆ ಕೊಡುತ್ತೇನೆ ನಡೆ. ನನಗೆ ಶ್ರೀರಂಗಪಟ್ಟಣಕ್ಕೆ ಇದೇ ದಿವಸ ಮುಟ್ಟತಕ್ಕದ್ದದೆ." ಎಂದು ರಮಾಕಾಂತನು ಹೇಳಿದನು.

"ಓಹೋ ! ಇಷ್ಟವಸರವಿರುವದೇನು. ನಡೆಯಿರಿ ; ಹಾಗಾದರೆ ನನಗೂ ಇದೇ ದಿವಸವೇ ಬರತಕ್ಕದ್ದಿದೆ." ಎಂದು ನಟೇಶನು ವಿಲಕ್ಷಣ ನಗೆ ನಕ್ಕು ರಮಾಕಾಂತನನ್ನು ಕೆಟ್ಟಗಣ್ಣಿಲೆ ನೋಡಿದನು.

ಇವರಿಬ್ಬರೂ ಪೂಲಿನ ಮೇಲೆ ಹಾಯ್ದು ಶ್ರೀರಂಗಪಟ್ಟಣಕ್ಕೆ ಹೋಗ ಬೇಕೆಂದು ಹೊರಟರು. ಸೇತುವೆಯ ಮಧ್ಯದಲ್ಲಿ ಬಂದ ಕೂಡಲೆ ನಟೇಶನು ಉನ್ಮತ್ತನಂತೆ ಕುಣಿದಾಡಹತ್ತಿ " ಮೃತ್ಯು ಹೆಡತಲೆಯಲ್ಲಿ ನಗುತಿರ್ಪಳಯ್ಯಾ " ಎಂದು ಹಾಡಲಾರಂಭಿಸಿದನು.

"ಹೀಗೇಕೋ ನಟೇಶ್ " ಎಂದು ರಮಾಕಾಂತನು ಚಕಿತನಾಗಿ ಕೇಳಿದನು.

"ಇಲ್ಲಿ ನೋಡಿರಿ, ರಮಾಕಾಂತರಾಯರೇ, ನೀರು ಎಷ್ಟು ಸೆಳವಿನಿಂದ ಹರಿಯುತ್ತದೆ ?" ಎಂದು ನಟೇಶನು ಪೂಲಿನ ಮೇಲಿಂದ ಬಗ್ಗಿ ತೋರಿಸಿದನು, ರಮಾಕಾಂತನು ಬಗ್ಗಿ ನೋಡ ಹೋಗಲು ನಟೇಶನವನನ್ನು ಗಟ್ಟಿಯಾಗಿ ಹಿಡಿದು ಕೊಂಡು ಕೆಳಕ್ಕೆ ಜೋಲೀ ಹೊಡೆದನು. "ರಮಾಕಾಂತರಾಯರೇ, ನೀವಿನ್ನು ಇಂದಿರೆಯನ್ನು ಸ್ವರ್ಗದಲ್ಲಿಯೇ ಕಾಣುವಿರಿ " ಎಂದು ನಟೇಶನು ನುಡಿದವನೇ ರಮಾಕಾಂತನನ್ನು ಕೆಡವಿಕೊಂಡು ನೀರಲ್ಲಿ ಬಿದ್ದನು. ಇಬ್ಬರೂ ಸ್ವಲ್ಪಕಾಲ ದಲ್ಲಿಯೇ ಮುಳುಗಿಹೋದರು.

ಆದರೂ ಆ ಮಾನಸಿಕರಾಯನು ಬರಲೇ ಇಲ್ಲ

ಇಂದಿರೆಯೂ ಜಯರಾಯನೂ ಬರುವರೆಂದು ಶ್ರೀಕಂಠನು ಅವನ ಸ್ವಾಗತ ಕ್ಕಾಗಿ ಸ್ಟೇಷನಕ್ಕೆ ಹೋಗಿದ್ದನು. ಗಾಡಿ ಬಂದ ಕೂಡಲೆ ಶ್ರೀಕಂಠನು ಲುಟುಪುಟನೆ ಓಡಾಡಿ ಜಯರಾಯನಿದ್ದ ಡಬ್ಬಿಯಲ್ಲಿ ಒಳ್ಳೇ ಹಿಗ್ಗಿನಿಂದ ಬಂದು ಕುಳಿತನು.

ಇಂದಿರೆಯು ಕಿಟಿಕಿಯಲ್ಲಿ ಮೋರೆ ಹಾಕಿ ರಮಾಕಾಂತನು ಬಂದಿರುವನೇನೋ ಎಂದು ನಿರೀಕ್ಷಿಸಿದಳು. ರಮಾಕಾಂತನು ಬಂದಿದ್ದಿಲ್ಲ. ಅವನು ಬೆಂಗಳೂರಲ್ಲಿದ್ದರೆ

ನಿಶ್ಚಯವಾಗಿ ಸ್ಟೇಷನಕ್ಕೆ ಬರುತ್ತಿದ್ದನು. ಜಪಾನಕ್ಕೆ ಹೊರಟುಹೋದನೋ ಎಂಬ ಭೀತಿಯಿಂದ ಅವಳ ಎದೆಯಲ್ಲಿ ಚೂರಿಹಾಕಿದಂತಾಯಿತು. ಆದರೂ ಈ ಸ್ಥಳದಲ್ಲಿ ತನಗಾದ ಮನಸ್ತಾಪವನ್ನು ಯಾರಿಗೂ ತಿಳಿಯಗೊಡಬಾರದೆಂದು ಸಮಾಧಾನವೃತ್ತಿಯನ್ನು ಧರಿಸಿ "ಎಲ್ಲವೂ ಕ್ಷೇಮವಿದೆಯೋ" ಎಂದು ಶ್ರೀಕಂಠನನ್ನು ಕೇಳಿದಳು.

ಜಯರಾಯನಿಗೆ ಶ್ರೀಕಂಠನನ್ನು ಕಂಡು ಆನಂದವಾಯಿತು. ಶ್ರೀಕಂಠನ ಕೈಹಿಡುಕೊಂಡು ಗಾಡಿಯಿಂದಿಳಿದನು. ಜಯರಾಯನ ಪ್ರೀತಿಯನ್ನು ಸಂಪಾದಿಸುವದರಲ್ಲಿ ತತ್ಪರನಾದ ಶ್ರೀಕಂಠನು ಜಯರಾಯನ ಸಾಮಾನುಗಳ ವ್ಯವಸ್ಥೆಗಾಗಿ ಸ್ಟೇಷನಮಾಸ್ತರರ ಕಡೆಗೆ ಹೋದನು.

"ಇಂದಿರಾ, ಶ್ರೀಕಂಠನನ್ನು ಕಂಡು ವಿಶೇಷ ಆದರ ತೋರಿಸಬೇಕೋ ಇಲ್ಲವೆ 'ಕ್ಷೇಮವೋ' ಎಂದು ಮಾತ್ರ ಕೇಳಿ ಸುಮ್ಮನಿರಬೇಕೋ ? ಸ್ವಲ್ಪ ದಿವಸಗಳಲ್ಲಿ ನೀನು ಅವನ ಹೆಂಡತಿಯಾಗುವವಳು. ಹೀಗೆ ಪರಕೀಯರಂತೆ ಆಚರಿಸಿದರೇನು ?" ಎಂದು ಜಯರಾಯನು ಸಿಟ್ಟು ಮಾಡಿದನು.

"ಅಪ್ಪಾ, ಸತ್ಯವಾಗಿ ಈ ಮಾತು ನನ್ನ ಲಕ್ಷ್ಯದಲ್ಲಿಯೇ ಬರಲಿಲ್ಲ. ಇದೊಂದು ಅಚಾತುರ್ಯವಾಯಿತು. ಇನ್ನು ಮೇಲೆ ಚನ್ನಾಗಿ ವರ್ತಿಸುವೆನು." ಎಂದು ಇಂದಿರೆಯು ಹೇಳಿದಳು.

ಸಾಮಾನುಗಳ ಸಿದ್ಧತೆಯಾದ ಬಳಿಕ ಎಲ್ಲರೂ ಶ್ರೀಕಂಠನ ಫೈಟನದಲ್ಲಿ ಕುಳಿತುಕೊಂಡು ಜಯರಾಯನ ಮನೆಯ ಹಾದಿ ಹಿಡಿದರು. ಮಾರ್ಗದಲ್ಲಿ ಶ್ರೀಕಂಠನು ಇಂದಿರೆಯ ಮುಖವನ್ನು ಚನ್ನಾಗಿ ಅವಲೋಕಿಸಿ "ಇಂದಿರಾ, ನೀನು ಸೊರಗಿರುವಿ, ಪ್ರವಾಸದಲ್ಲಿ 'ತ್ರಾಸ' ಬಹಳಾಯಿತೇನು ?" ಎಂದು ಕೇಳಿದನು.

"ಕಂಡಕಂಡವರು ಇದೇ ಮಾತೇ ಆಡುತ್ತಾರೆ. ನನಗೇನಾಗಿದೆ ? ಜಿಟಿಜಿಟಿ ಹನಿಯಾಗಿ ತಿಂಡಿ ಬಿಟ್ಟದ್ದರಿಂದ ಮನಸ್ಸಿಗೆ ಉಲ್ಲಾಸವಿಲ್ಲ. ಇಲ್ಲಿಯೂ ಮಳೆ ಹತ್ತಿರುವದೇನು ?" ಎಂದು ಇಂದಿರೆಯು ಕೇಳಿದಳು.

"ಮಳೆ ಬಹಳಾಗಿದೆ. ಕಾರ್ತಿಕಮಾಸದಲ್ಲಿ ಇಷ್ಟು ಮಳೆಯಾದ್ದು ತಾವು ನೋಡಲಿಲ್ಲವೆಂದು ಮುದುಕರು ಕೂಡಾ ಹೇಳುತ್ತಾರೆ." ಎಂದು ಶ್ರೀಕಂಠನು ಅಂದನು.

"ಶ್ರೀಕಂಠಬಹದ್ದೂರ, ನೀವು ಚಾಮರಾಜೇಂದ್ರ ವಾಚನಾಲಯದಲ್ಲಿ ಪ್ರೌಢ ವಿವಾಹದ ಮೇಲೆ ಪ್ರಮಾಣವಾದ ವ್ಯಾಖ್ಯಾನ ಕೊಟ್ಟಿರೆಂದು ವರ್ತಮಾನ

ಪತ್ರಗಳ ಮೇಲಿಂದ ತಿಳಿದುಬಂದಿತು. 'ಬೆಂಗಳೂರ ಸಮಾಚಾರವು' ನಿಮ್ಮ ವ್ಯಾಖ್ಯಾನದಲ್ಲಿ ತಥ್ಯಾಂಶವಿಲ್ಲೆಂದೂ ಅನ್ಯರ ಅಭಿಪ್ರಾಯಗಳನ್ನು ಪ್ರತಿಧ್ವನಿಸಿ ದಿರೆಂತಲೂ ಯದ್ವಾತದ್ವಾ ಟೀಕೆ ಮಾಡಿರುವದು. ಆದರೆ 'ಮೈಸೂರ ಸ್ಟಾರಿನಲ್ಲಿ,' ನಿಮ್ಮ ವ್ಯಾಖ್ಯಾನವು ಉತ್ತಮವಾದದ್ದೆಂದು ಬರೆದದೆ. ನನಗಂತೂ 'ಮೈಸೂರು ಸ್ಟಾರಿನ' ಅಭಿಪ್ರಾಯವು ಸರಿಯಾದದ್ದೆಂದು ತೋರಿತು" ಎಂದು ಇಂದಿರೆಯು ತನ್ನ ತಂದೆಯನ್ನೂ ಶ್ರೀಕಂಠನನ್ನೂ ಚಾಟೂಕ್ತಿಯಿಂದ ಉಬ್ಬಿಸಿದಳು.

ಇದನ್ನು ಕೇಳಿ ಶ್ರೀಕಂಠನಿಗೆ ಪರಮಾನಂದವಾಯಿತು. ತಾನು ಕೀಳುನಡತೆ ಬಿಟ್ಟು ಅಂಥ ಉದ್ಯೋಗದಲ್ಲಿ ಬಿದ್ದದ್ದು ಚನ್ನಾಯಿತೆಂದು ತನ್ನ ತಂದೆಗಳು ಹೇಳಿದ ರೆಂತಲೂ, ತಿರುಮಲಯ್ಯಂಗಾರ್ಯರು ಇದುವರಿಗೆ ತನ್ನನ್ನು ಧಿಕ್ಕರಿಸುವವರು ಈಗ್ಗೆ ಹಾದಿಗೆ ಬಂದಿರುವರೆಂದೂ, ಹೀಗೆ ಅನೇಕ ಪ್ರಶಂಸಾಮಯವಾದ ಸಂಗತಿಗಳನ್ನು ಒಳ್ಳೇ ಉತ್ಸಾಹದಿಂದ ಅವನು ಬೆಳಿಸಿ ಹೇಳಲಾರಂಭಿಸಿದನು.

"ಶ್ರೀಕಂಠ ಬಹದ್ದರ, ನಿಮ್ಮ ಅಭ್ಯುದಯವನ್ನು ಕೇಳಿ ನನಗೆ ಆನಂದ ವಾಗಿರುವದು." ಎಂದು ಇಂದಿರೆಯು ಉಪಚಾರಕ್ಕಾಗಿ ನುಡಿದಳು.

"ಇದಕ್ಕೆಲ್ಲ ನೀನೇ ಕಾರಣಳಲ್ಲವೇ ? ನಿನ್ನಿಂದ ಸನ್ಮಾನ ಹೊಂದಲಿಕ್ಕೇ ನಾನಿಷ್ಟು ಶ್ರಮಪಟ್ಟದ್ದು" ಎಂದು ಶ್ರೀಕಂಠನು ಇಂದಿರೆಯ ಮುಖ ನೋಡಿ ನಕ್ಕನು.

ಶ್ರೀಕಂಠನು ಕಾಮೀಜನರಿಗುಚಿತವಾದ ಮಾತನಾಡಿದ್ದು ಕೇಳಿ ಜಯ ರಾಯನಿಗೆ ಅತ್ಯಾನಂದವಾಯಿತು. ವ್ಯಾಪಾರದಲ್ಲಿ ಒಂದಕ್ಕೆರಡು ಗಂಟಾಗಿದ್ದರೂ ಇಷ್ಟು ಸಂತೋಷವು ಅವನಿಗಾಗುತ್ತಿತ್ತೋ ಇಲ್ಲೋ ಅವನಿಗೇ ಗೊತ್ತು. ಈ ಕನ್ಯಾವರಗಳು ಪರಸ್ಪರರನ್ನು ಸೇರಹತ್ತಿದರೆಂದು ಕಂಡು ಇವರ ವಿವಾಹಕ್ಕೆ ಇನ್ನೇನೂ ಪ್ರತಿಬಂಧ ಕಾಣುವದಿಲ್ಲವೆಂದು ತಿಳುಕೊಂಡನು. ಮನೆಗೆ ಬಂದ ಕೂಡಲೆ ಉಪಾಹಾರ ಕಾಫಿ ತಕ್ಕೊಂಡ ಜಯರಾಯನು ಮತ್ತೆ ಶ್ರೀಕಂಠನನ್ನು ಹರಟೆಗೆ ಹಚ್ಚಿದನು. 'ಶ್ವಾನನ ಬಾಲದ ಡೊಂಕಂ .....ಭೂನಾಥಂ ತಿದ್ದ ಲರಿಯ' ಎಂಬಂತೆ ಶ್ರೀಕಂಠನು ತನ್ನ ಗುಣಕ್ಕೆ ಬಂದು, ರಂಗಯ್ಯಾಚೆಟ್ಟಿಯ ನಾಟಕಗೃಹದಲ್ಲಿ ಬಳ್ಳಾರಿಯ ಬಸಪ್ಪನ ಆಟಗಳು ನಡೆದಿರುವವು ; ಮುಂಡಿಯ ಪತ್ತಾರ ಗಾಣದಂತೆ ತಿರುಗುವ ಕಟ್ಟಿಗೆ ಕುದುರೆಗಳ ಆಟ ಬಂದದೆ. ವೆಂಕಟರತ್ನಂ ಇವರ ಮನೆಯಲ್ಲಿ ಕಮಲಾಸಾನಿಯ ನೃತ್ಯಗಾಯನವಾಯಿತು ; ಮುಂತಾದ ಸಂಗತಿಗಳನ್ನು ಹೇಳಲಾರಂಭಿಸಿದನು. ಜಯರಾಯನು ಈ ಮಾತು ಕೇಳಿ

ಅಸಮಾಧಾನ ಹೊಂದಿ ಇಂದಿರೆಯ ಮುಖವನ್ನು ನೋಡಿ, ಅವಳೂ ಮೂಗು ಮಬರಿದಳೆಂದು ಕಂಡು ಈ ಮಾತು ಸಾಕುಮಾಡಬೇಕೆಂದು ಅವನು ಹವಣಿಸಿದನು. ಅಷ್ಟರಲ್ಲಿ ಇಂದಿರೆಯು ಶ್ರೀಕಂಠನ ಪುಟ್ಟಪೂರಾ ಫಜೀತಿ ಮಾಡಬೇಕೆಂದೆಣಿಸಿ ಕೇಳಿದ್ದು—

"ಶ್ರೀಕಂಠಬಹದ್ದರ, ಈ ದಿವಸ ಸ್ಟೇಷನದಲ್ಲಿ ಒಬ್ಬ ರೂಪವತಿಯಾದ ಸ್ತ್ರೀಯಳ ಕೂಡ ನೀವು ಮಾತಾಡಿದಿರಲ್ಲ. ಆಕೆ ಯಾರು ?"

"ಅವಳೇ ! ಇಲ್ಲಿಯ ಪ್ರಖ್ಯಾತಳಾದ ಕಲಾವಂತಿನಿಯು. ಜಯರಾಯರೇ, ನೀವು ತಾರಾಸಾನಿಯ ಹೆಸರು ಕೇಳಿಲ್ಲೇನು ? ಕಳೆದ ವಸಂತೋತ್ಸವದಲ್ಲಿ (ಹೋಳೀ ಹುಣಿವೆ ?) ನಾವೆಲ್ಲರೂ ಸ್ನೇಹಿತರು ಕೂಡಿ ಅವಳ ಗಾಯನ ಮಾಡಿಸಿದ್ದೆವು. ಅವಳ ಬಿದಾಗಿ ಕೊಡುವದು ಉಳಿದಿತ್ತೆಂದು ಕೇಳಿದಳು. ಅವಳ ಮೈಬಣ್ಣ ಇಷ್ಟು ಕೆಂಪು ಕಾಣುತ್ತದಲ್ಲ ! ಅವಳು ಮೈಗೆ ಬಣ್ಣ ಹಚ್ಚಿಕೊಳ್ಳುತ್ತಾಳೆ !"

ಜಯರಾಯನು ಮಧ್ಯದಲ್ಲಿ ಬಾಯಿ ಹಾಕಿ "ಶ್ರೀಕಂಠಬಹದ್ದರ" ಇಂಥ ಸ್ತ್ರೀಯರ ಮಾತು ಕುಲಾಂಗನೆಯರಿದ್ದಲ್ಲಿ ನೀವು ತೆಗಿಯತಕ್ಕದ್ದಲ್ಲ. ಇಲ್ಲಿ ಹೊರಗಿನವರು ಯಾರೂ ಇಲ್ಲ ಸರಿ ; ಆದರೂ ಹೇಳುತ್ತೇನೆ." ಎಂದು ಕಿಂಚಿತ್ ನಿಷ್ಠುರತೆಯಿಂದ ನುಡಿದನು.

ಶ್ರೀಕಂಠನು ಲಜ್ಜಿತನಾಗಿ ತಲೆ ಕೆಳಗೆ ಹಾಕಿಕೊಂಡು ಪಶ್ಚಾತ್ತಾಪಪಡುತ್ತ ಕುಳಿತನು. ಇವನಲ್ಲಿ ಇಷ್ಟು ಹುಳುಕು ಇರುವದೆಂದು ಇಂದಿರೆಗೆ ತಿಳಿದಿದ್ದಿಲ್ಲ. ಅವಳಿಗೂ ಇಂಥ ಮಾತು ಯಾಕೆ ಕೇಳಿದೆನೆಂದು ಪಶ್ಚಾತ್ತಾಪವಾಯಿತು. ಮುಂದೆ ತುಸು ಹೊತ್ತಿನಲ್ಲಿಯೇ ಶ್ರೀಕಂಠನೆದ್ದು ತನ್ನ ಮನೆಗೆ ಹೊರಟುಹೋದನು.

ಇಂದಿರೆಗೆ ರಮಾಕಾಂತನ ವರ್ತಮಾನವೇ ತಿಳಿಯಲೊಲ್ಲದು. ವಿಚಾರಿಸಬೇಕೆಂದರೆ ಮನಸ್ಸಿಗೆ ಪ್ರಶಸ್ತವಾಗಿ ತೋರಲಿಲ್ಲ. ತಾವು ಬಂದ ವರ್ತಮಾನ ಕೇಳಿ ರಮಾಕಾಂತನು ತನ್ನ ತಂದೆಯ ಕೂಡ ಕೊಡತಕೊಳ್ಳುವದರ ನಿರ್ಣಯ ಮಾಡಿಕೊಳ್ಳಲಿಕ್ಕಾದರೂ ಬರುವನೆಂದು ಎಷ್ಟು ಯೋಚಿಸಿಕೊಂಡಿದ್ದಳು ! ಆದರೂ ಆ ಮಾನಸಿಕರಾಯನು ಬರಲೇ ಇಲ್ಲ. ಅವಳ ಮನಸ್ತಾಪವು ಹೆಚ್ಚಾಯಿತು. ಭೂಗರ್ಭದಲ್ಲಿ ಎಷ್ಟೋ ರಸಾಯನ ಕ್ರಿಯೆಗಳು ನಮ್ಮ ಕಾಲುಗಳ ಕೆಳಗೇ ನಡೆದಿದ್ದರೂ ನಮಗೆ ತಿಳಿದಿರುವದಿಲ್ಲ. ಆದರೆ ಜ್ವಾಲಾಮುಖಿಯು ಹುಟ್ಟಿತಂದರೆ ಆ ರಸಾಯನ ಕ್ರಿಯೆಗಳ ಭಯಂಕರವಾದ ಪರಿಣಾಮವು ಸುತ್ತುಮುತ್ತಲಿನ ಪ್ರದೇಶಗಳನ್ನೆಲ್ಲ ಗದಗಂಪಿಸಿ ಕೊಡುವದು. ಇಂದಿರೆಯಲ್ಲಿ ಪ್ರೀತಿಯ

ಉಪಚಯವು ತಿಳಿಯದಂತೆ ಮೆಲ್ಲಮೆಲ್ಲಗೆ ಆಗಹತ್ತಿ ಅನೇಕ ದಿವಸಗಳಾಗಿದ್ದವು. ಶ್ರೀಕಂಠನು ತನ್ನ ಸುಳ್ಳುಪ್ರೀತಿಯ ಆಭಾಸ ಮಾಡಹೋಗಿ ಇಂದಿರೆಯ ಮೇಲೆ ರಮಾಕಾಂತನ ಪ್ರೀತಿ ಇರುವದೆಂದು ಹೇಳಿ ಅವಳ ಮಾನಸಿಕ ಜ್ವಾಲಾಮುಖಿಗೆ ಪ್ರೋತ್ಸಾಹನೆ ಕೊಟ್ಟನು. ಅಂದಿನಿಂದ ಕಾಮಾಗ್ನಿಯು ಇಂದಿರೆಯಲ್ಲಿ ದುರ್ಧರ ವಾಯಿತು. ಈ ಜ್ವಾಲಾಮುಖಿಯ ಪ್ರಭಾವದಿಂದ ಜಯರಾಯರೂ, ಶ್ರೀಕಂಠ, ಪಂಡಿತಾ, ಕಮಲಾ ಮುಂತಾದವರ ಅಭಿಲಾಷೆಯ ಮಂದಿರಗಳು ಬುಡಮೇಲಾಗಿ ಬಿದ್ದುಹೋದವು. ಇಂದಿರೆಯು ಪ್ರೀತಿಪರವಶಳಾಗಿ ರಮಾಕಾಂತನ ಮೇಲೂ ಅತಿಶಯವಾಗಿ ಸಿಟ್ಟಾದಳು. ಆದರೆ ಮಾಡುವಳೇನು ?

ಅದೇ ದಿವಸ ಸಂಜೆಗೆ ಜಯರಾಯನು ಇಂದಿರೆಯನ್ನು ಕರಕೊಂಡು ಶ್ರೀರಂಗಪಟ್ಟಣಕ್ಕೆ ನಡೆದನು. ಬಂದ ದಿವಸವೇ ಜಯರಾಯನೂ ಇಂದಿರೆಯೂ ಕೂಡಿ ದೇವಯಾನಿಯ ಭೆಟ್ಟಿಗೆ ಬಂದರು.

ತನ್ನ ಕಪಟ ಪ್ರಯೋಗದಿಂದಲೇ ದೇವಯಾನಿಯು ಸುಖದಲ್ಲಿ ಮಣ್ಣು ಕಲೆತಿತ್ತೆಂಬ ಸಂಗತಿಯು ಜಯರಾಯನ ಮನಸ್ಸಿನಲ್ಲಿ ಕಟಿಯುತ್ತಿತ್ತು. ಇದಕ್ಕಾಗಿಯೇ ದೇವಯಾನಿಯ ಮನಸ್ಸು ತನ್ನ ವಿಷಯದಲ್ಲಿ ಶುದ್ಧವಾಗಿರಲಿಕ್ಕಿಲ್ಲೆಂದು ಜಯರಾಯನು ಅಂಜಿಕೊಂಡಿದ್ದನು. ರಮಾಕಾಂತನ ಮೇಲೆ ದೇವಯಾನಿಯ ಮಮತೆ ಬಹಳ. ಅವನಂತೂ ಇಂದಿರೆಯ ಪ್ರೀತಿಗಾಗಿ ತನ್ನ ಪ್ರಾಣವನ್ನಾದರೂ ಕೊಡಲಿಕ್ಕೆ ಸಿದ್ಧನಿರುವನು. ಈ ಪ್ರಸಂಗದಲ್ಲಿ ತಾನು ದೇವಯಾನಿಗೆ 'ನಮೋ ನಮೋ' ಎಂದಿರುವದೇ ಲೇಸಾದದ್ದೆಂದು ತಿಳಕೊಂಡು ಇವಳ ಭೆಟ್ಟಿಗೆ ಬಂದಿದ್ದನು. ಇಂದಿರೆಯ ಮೇಲೆ ದೇವಯಾನಿಯ ಪ್ರೇಮ ವಿರುವದು. ಇಂದಿರೆಯಾದರೂ ದೇವಯಾನಿಯಲ್ಲಿ ಭಕ್ತಿಯುಳ್ಳವಳಾಗಿದ್ದಳು. ದೇವಯಾನಿಯು ಮನಸ್ಸಿಗೆ ಬಂದರೆ ಸಾಕು, ಅವಳು ಇಂದಿರೆಯನ್ನು ತನ್ನಾಧೀನ ದಲ್ಲಿ ತಕ್ಕೊಂಡು ತಾನು (ಜಯರಾಯನು) ಒಡ್ಡಿದ ಬಲಿಯನ್ನು ನುಗ್ಗುನುಸಿ ಯಾಗಿ ಮಾಡುವಳೆಂಬ ಭಯವು ಜಯರಾಯನಿಗಿತ್ತು. ಆದ್ದರಿಂದ ಅವಳ ಅಂತಸ್ಥ ಹೇತುವನ್ನು ಪಾತಾಳಗರಡೀ ಹಾಕಿ ಕಂಡುಕೊಳ್ಳಬೇಕೆಂಬ ವಿಚಾರದಿಂದ ಜಯರಾಯನು ಎಲ್ಲ ಕೆಲಸಬಿಟ್ಟು ಮೊದಲು ದೇವಯಾನಿಯ ಮನೆಗೆ ಬಂದನು. ಈ ಕೆಲಸವು ಬಡ್ಡೀ ಲೆಖ್ಖ ಮಾಡುವಷ್ಟು ಸುಲಭವಾದದ್ದೆಂದು ತಿಳಕೊಂಡವ ನಾದ್ದರಿಂದ ಜನರ ಮನಸ್ಸಿನಲ್ಲಿ ನಡೆದಿರುವ ಗೂಢ ವಿಚಾರಗಳನ್ನು ತಿಳಕೊಳ್ಳು ವದು ದೊಡ್ಡ ಪಾಂಡಿತ್ಯದ ಮಾತೆಂದು ಬಲ್ಲವರು ಏತನ್ನುವರೆಂಬುದು ಜಯ

ರಾಯನಿಗೆ ತಿಳಿಯಲೊಲ್ಲದು.

ಬಂದ ಕೂಡಲೆ ಇವರನ್ನು ದೇವಯಾನಿಯು ಸ್ವಾಗತ ಮಾಡಿ ತನ್ನ ದಿವಾನ ಖಾನೆಯಲ್ಲಿ ಕುಳ್ಳಿರಿಸಿಕೊಂಡಳು. ಇಂದಿರೆಯು ಆ ಉದಾರಭಾವದ ಸ್ತ್ರೀಯಳನ್ನು ತಬ್ಬಿಕೊಂಡು—

"ದೇವಯಾನಿಯಮ್ಮಾ, ಚಂದ್ರಶಾಲೆಯನ್ನು ಬಿಟ್ಟು ನೀವು ಅನ್ಯ ಸ್ಥಳದಲ್ಲಿರುವವರೇ ಅಲ್ಲ. ಈ ದಿವಸ ಹೀಗೇಕೆ? ಚಂದ್ರಶಾಲೆಯಲ್ಲಿ ಕುಳಿತರೇ ನೀವು ಒಪ್ಪುತ್ತೀರಿ." ಎಂದು ಹೇಳಿದಳು.

"ಇಂದಿರಾ, ಮಳೆಯಾದ್ದರಿಂದ ಚಂದ್ರಶಾಲೆಯೆಲ್ಲಾ ತೇವಾಗಿದೆ. ಅಲ್ಲಿ ಕೂಡ್ರುವಂತಿಲ್ಲ. ಅಮ್ಮಣ್ಣೀ, ನೀನು ಸೊರಗಿರುವೆ. ಆ ದೇಶದ ಹವೆ ನಿನಗೆ ತಡಿಯಲಿಲ್ಲೇನು? ಜಯರಾವ್, ನಿಮಗೆ ಉತ್ತರ ದೇಶದ ಹವೆ ಚಂದಾಗಿ ಮಾನಿಸಿದಂತೆ ಕಾಣುತ್ತದೆ!" ಎಂದು ದೇವಯಾನಿಯು ಕೇಳಿದಳು.

ಜಯರಾಯನು ಮುಗುಳುನಗೆ ನಕ್ಕು ಸುಮ್ಮನಿದ್ದನು. ಇಂದಿರೆಯು ಚಂದ್ರಶಾಲೆಯಲ್ಲಿ ಹೋಗಿ ಸುತ್ತಲಿನ ಪ್ರದೇಶವನ್ನು ನೋಡುತ್ತ ನಿಂತಳು. ಅಲ್ಲಿ ಅವಳಿಗೆ ನಾನಾತರದ ಸಂಗತಿಗಳು ನೆನಪಿಗೆ ಬಂದು ವಿಚಾರದೊಂದಿಗೆ ಸ್ತಬ್ಧಳಾಗಿ ನಿಂತವಳು ರವಿವರ್ಮನು ಬರೆದ ದಮಯಂತಿಯ ಚಿತ್ರದಂತೆ ಕಂಡಳು.

"ಇಲ್ಲಿಯೇ ನಿಂತು ರಮಾಕಾಂತರು ನಿನ್ನ ರೂಪಲಾವಣ್ಯಗಳೂ ಆಚರಣೆಯೂ ಮನೋರಮವಾಗಿವೆ, ಎಂದು ಹೇಳಿದರು. ಅವರು ಕೇವಲ ಉಪಚಾರಕ್ಕಾಗಿ ಹೀಗಂದಿರಬಹುದೋ, ಅವರ ನಿಜವಾದ ಅಭಿಪ್ರಾಯವೇ ಹಾಗಿತ್ತೊ? ಮನೋರಮಣಾ, ನಿನ್ನನ್ನು ಎಲ್ಲಿ ಕಾಣಬಹುದು? ನನ್ನ ಮೇಲೆ ನಿನ್ನ ಪ್ರೀತಿಯು ನಿಜವಾಗಿದ್ದರೆ ನಾನಿದ್ದ ಸ್ಥಳವನ್ನು ಬಿಟ್ಟು ಹೋಗಲಿಕ್ಕೆ ನಿನಗೆ ಮನಸ್ಸಾದರೂ ಹೇಗಾಯಿತು? ಇಲ್ಲವೆ ಪ್ರಾಚೀನ ಮಹಾತ್ಮರಂತೆ ಅದೃಶ್ಯನಾಗಿ ನೀನು ನನ್ನ ನಡೆನುಡಿಗಳನ್ನು ನಿರೀಕ್ಷಿಸುತ್ತಿರುವಿಯೋ? ನನ್ನ ಹೃದ್ಗತವನ್ನು ನಿನ್ನ ಚರಣಾರವಿಂದಕ್ಕೆ ನಿವೇದಿಸುವೆನೆಂದು ಎಷ್ಟು ಮನಸ್ಸಿನಲ್ಲಿ ಮಾಡಿಕೊಂಡಿದ್ದೆನು! ನನ್ನ ದುಃಖವನ್ನು ಹೇಳಿಕೊಳ್ಳುವೆನೆಂದರೆ ಈ ಮಹನೀಯಳಾದ ಮುದುಕಿಯೊಬ್ಬಳಿರುವಳು. ಆದರೆ ಹೇಳುವ ಬಗೆ ಹೇಗೆ? ಆಚಾರವನ್ನು ಬಿಟ್ಟು ನಾನೊಂದೇ ಹೆಜ್ಜೆ ಮುಂದಿಟ್ಟೆನಾದರೆ ಇವಳು ನನ್ನ ಎಲವೇ ಮುರಿದು ಕೊಡುವಳು. ರುಕ್ಮಿಣೀದೇವಿ, ಆದಿಶಕ್ತಿಯಾದುದರಿಂದ ಅಂಥ ಬಿಕ್ಕಟ್ಟಿನ ಪ್ರಸಂಗದೊಳಗಿಂದ ಪಾರಾಗಿ ನಿಜನಾಥನನ್ನು ಕೂಡಿಕೊಂಡೆ! ಈ ಪ್ರಸಂಗದಲ್ಲಿ ನೀನೇ

ನನ್ನನ್ನು ಪಾರುಮಾಡು ಕಂಡಿಯಾ ? ಎಂದು ಆ ಲೋಕಮಾತೆಗೆ ಇಂದಿರೆಯು ಮನಸಾ ನಮಸ್ಕಾರ ಮಾಡಿದಳು.

ಇಂದಿರೆಯು ಚಂದ್ರಶಾಲೆಯಲ್ಲಿ ಹೋದ ಬಳಿಕ ದೇವಯಾನಿಯು ಜಯರಾಯನನ್ನು ಕುರಿತು :

" ಜಯರಾವ್, ರಮಾಕಾಂತನ ವರ್ತಮಾನವೇನಾದರೂ ನಿಮಗೆ ತಿಳಿದದೆ ಏನು ?" ಎಂದು ಕೇಳಿದಳು.

" ನನಗೆ ಗೊತ್ತಿಲ್ಲ. ವಿಚಾರಿಸಲಿಕ್ಕೂ ಹೊತ್ತು ಸಾಲಲಿಲ್ಲ. ಏಕೆ ? ಅವನು ಜಪಾನಕ್ಕೆ ಹೋಗಿಬಿಟ್ಟನೇನು ?"

"ನನಗೂ ಪತ್ರ ಪಳಿಕೆ ಏನೂ ಹಾಕಿಲ್ಲ. ಜಪಾನಕ್ಕೆ ಹೋಗಿದ್ದರೂ ಹೋಗಿರಬಹುದು. ರಮಾಕಾಂತನು ನನ್ನ ಕೂಡ ಹೀಗೆ ದುರ್ಲಕ್ಷ್ಯದಿಂದ ವರ್ತಿಸುವ ನೆಂದು ನಾನು ತಿಳಿದಿದ್ದಿಲ್ಲ. ಆದರೂ ಪಾಪ ! ಅವನು ಚಿಕ್ಕ ಹುಡುಗನೇ. ಏನಾದರೂ ಮನಸ್ತಾಪವಾಗಿ ಹೀಗೆ ಮಾಡಿದನೆಂದು ನಂಬುತ್ತೇನೆ." ಎಂದು ದೇವಯಾನಿಯಂದಳು. ಅಷ್ಟರಲ್ಲಿ ಇಂದಿರೆಯು ಇವರಿದ್ದಲ್ಲಿ ಬಂದ ಕೂಡಲೆ ದೇವಯಾನಿಯು "ಇಂದಿರಾ, ಬಂದಿಯಾ ? ಚಂದ್ರಶಾಲೆಯಲ್ಲಿ ನಿಂತು ನೋಡಿದರೆ ಎಲ್ಲವೂ ಮುಂಚಿನಂತೆಯೇ ಕಂಡಿತೇನು ?" ಎಂದು ಕೇಳಿದಳು.

ಇಂದಿಯು ಏನೂ ಉತ್ತರ ಕೊಡಲಾರದೆ ಸುಮ್ಮನೆ ನಕ್ಕಳು.

ರಮಾಕಾಂತನು ನಿಜವಾಗಿ ಜಪಾನಕ್ಕೆ ಹೋಗಿರಬಹುದು. ದೇವ ಯಾನಿಯು ಇಂದಿರೆಯು ಮುಂದೆ ರಮಾಕಾಂತನ ಮಾತೇ ತೆಗಿಯಲಿಲ್ಲ, ಅಂದ ಮೇಲವಳು ರಮಾಕಾಂತನನ್ನು ಕಟ್ಟಿಕೊಂಡು ಒಳಸಂಚು ನಡೆಸಿರಲಿಕ್ಕಿಲ್ಲೆಂದು ತರ್ಕಿಸಿ ಜಯರಾಯನು ನಿರ್ಭೀತನಾದನು. ಅವನು ಸಂತೋಷದೊಡನೆ ತನ್ನ ಮಗಳನ್ನು ಕರಕೊಂಡು ಮನೆಗೆ ಹೊರಟುಹೋದನು.

ಇಂದಿರೆಗೆ ಮನೆಯಲ್ಲಿ ಸಾವಿರ ಕೆಲಸ ತುಂಬಿತ್ತು. ಮನೆಯಲ್ಲಿ ಜೀನಸು ಗಳನ್ನು ವ್ಯವಸ್ಥೆಯಿಂದ ಹಚ್ಚಿಡಬೇಕಾಗಿತ್ತು. ಪೇಟೆಯಿಂದ ಪದಾರ್ಥಗಳನ್ನು ತರಿಸಬೇಕಾಗಿತ್ತು. ಗಿಡಬಳ್ಳಿಗಳು ಹೇಗಿವೆಯೋ ಎಂಬುದನ್ನು ನೋಡುವದಿತ್ತು. ಹೀಗೆ ಅವಳು ಅನೇಕ ಕೆಲಸಗಳಲ್ಲಿ ನಿಮಗ್ನಳಾಗಿದ್ದಳು. ಆ ದಿವಸ ಅವಳಿಗೆ ಕುಳಿತಿರುವೆನೆಂದರೆ ಸಮಯ ದೊರಕಲಿಲ್ಲ.

ಮರುದಿವಸ ಮಳೆ ಚೆನ್ನಾಗಿ ಬಿದ್ದು ಶ್ರೀರಂಗಪಟ್ಟಣದ ಬೀದಿಗಳಲ್ಲೆಲ್ಲ ನೀರು ಹಳ್ಳಿಟ್ಟು ಹರಿಯುತ್ತಿತ್ತು. ಪಕ್ಷಿಗಳ ಕಿಲಕಿಲಾಟವೆಲ್ಲ ಅಡಗಿತ್ತು.

ಮಧ್ಯಾಹ್ನವಿದ್ದರೂ ಮನುಷ್ಯರ ಸಂಚಾರವಿದ್ದಿಲ್ಲ. ಮೋಡಗಳು ದಟ್ಟಾಗಿ ಕವಿದದ್ದರಿಂದ ಗಿಡಗಂಟಿಗಳೂ ಮನೆಗಳೂ ಕೂಡಾ ಕಾಣುತ್ತಿದ್ದಿಲ್ಲ. ಮಳೆಯ ಸೆಳೆತದ ಧ್ವನಿಯೂ ಪ್ರನಾಳಿಕೆಗಳಿಂದ ಧಬಧಬ ಎಂದು ಬೀಳುವ ನೀರಿನ ಸಪ್ಪಳವೂ ಹೊರ್ತಾಗಿ ಮತ್ತೇನೂ ಕೇಳಿಸುತ್ತಿದ್ದಿಲ್ಲ. ಒಬ್ಬರ ಮಾತು ಒಬ್ಬರಿಗೆ ಕೇಳಿಬರುವಂತಿದ್ದಿಲ್ಲ. ಇಂಥ ಹೊತ್ತಿನಲ್ಲಿ ದೇವಯಾನಿಯು ತನ್ನ ಬಿಳೀಶಾಲು ಹೊದ್ದುಕೊಂಡು ಯಾತರಲ್ಲಿಯೂ ಮನಸಿಲ್ಲದವಳಾಗಿ ಆರಾಮಕುರ್ಚಿಯಲ್ಲಿ ಕುಳಿತಿದ್ದಳು. ಕಲ್ಲು ಹೊತ್ತುಕೊಂಡು ನಿಂತಂತೆ ಆವಳಿಗೆ ಹೊತ್ತೇ ಹೋಗಲೊಲ್ಲದು. ಒಂಬತ್ತು ತಾಸಿನ ಸುಮಾರಕ್ಕೆ ಮಳೆ ಕಡಿಮೆಯಾಯಿತು. ಆದುದರಿಂದ ಸ್ವಲ್ಪ ಉಸಿರಾಡಿಸುವಷ್ಟು ಸಮಾಧಾನವಾಗಿ ದೇವಯಾನಿಯು ಭಾಗವತದ ಭಾಷಾಂತರ ತಕ್ಕೊಂಡು ಓದುತ್ತ ಕುಳಿತಳು.

ಪಾವಟಿಗೆಯ ಮೇಲೆ ನೂಪುರದ ಸಪ್ಪಳದೊಂದಿಗೆ ಯಾರೋ ಬಂದಂತಾದದ್ದರಿಂದ ದೇವಯಾನಿಯು ಬಾಕಿಲದ ಕಡೆಗೆ ನೋಡಲು, ಇಂದಿರೆಯು ಒಳಗೆ ಬಂದು ತಾನು ಹೊದ್ದುಕೊಂಡು ಬಂದ ಶಾಲು ತೆಗೆದು ಮಳೆ ಹನಿಗಳನ್ನು ಜಾಡಿಸಿ ಕುರ್ಚಿಯ ಮೇಲೆ ಕುಳಿತುಕೊಂಡಳು. ಇಂದಿರೆಯನ್ನು ಕಂಡು ಏಕಾಕಿಯಾಗಿ ಕುಳಿತಿದ್ದ ದೇವಯಾನಿಗೆ ಆನಂದವಾಯಿತು.

"ಬಂದೆಯಾ, ವಸಂತಸೇನೆ! ಇಲ್ಲಿ ಚಾರುದತ್ತನು ಮಾತ್ರ ಇಲ್ಲ." ಎಂದು ನಗುತ್ತ ಇಂದಿರೆಯು ಮಳೆಯಲ್ಲಿ ಬಂದದ್ದು ನೋಡಿ ದೇವಯಾನಿಯು ನುಡಿದಳು.

"ಚಾರುದತ್ತನೇಕೆ ? ನೀವು ಮೈತ್ರೇಯರಿದ್ದೀರಲ್ಲ! ಮುಂದಿಗೆ ಚುಚ್ಚಿ ಮಾತಾಡುವದನ್ನು ಪ್ರಯತ್ನಪೂರ್ವಕವಾಗಿ ನೀವು ವ್ಯಾಸಂಗಮಾಡಿ ಕಲಿತಿರುವಂತೆ ಕಾಣುತ್ತದೆ! ಇಲ್ಲೇ, ದೇವಯಾನಿಯಮ್ಮಾ ?"

"ವ್ಯಾಸಂಗ ಮಾಡದಿದ್ದವಳು ನೀನೇನು ಕಡಿಮೆ ಇರುವಿ ? ಇಂದಿರಾ, ಇನ್ನೊಂದು ಸ್ವಲ್ಪ ತಡೆದು ಬಂದಿದ್ದರಾಗುತ್ತಿದ್ದಿಲ್ಲವೇನು ? ಮಳೆಯಲ್ಲಿ ಬರುವಂಥ ಅವಸರವೇನಿತ್ತು ? ತೋಯಿಸಿಕೊಂಡಿಯಲ್ಲ!" ಎಂದು ಬಹು ಮಮತೆಯಿಂದ ದೇವಯಾನಿಯು ಕೇಳಿದಳು.

"ಎಲ್ಲಿ ಬಂದೀತು! ಮಳೆ ತೀರ ನಿಂತ ಮೇಲೆ ಬಂದಿರುವೆನು."

"ಗಂಗೆಗೆ ಚಹ ತರಿಸಲಿಕ್ಕೆ ಹೇಳು. ನೀನು ಚಹ ತಕ್ಕೊಳ್ಳುವಿಯಲ್ಲೇ ?"

"ಮತ್ತೆ! ಮಳೆಯಲ್ಲಿ ಬಹಳ ಬೇಸರ ಬಂದದ್ದರಿಂದ ನಿಮ್ಮಲ್ಲಿ ಚಹ

ತಕ್ಕೊಂಡು ನಿಮ್ಮ ವಿನೋದದ ಮಾತುಗಳನ್ನು ಕೇಳಬೇಕೆಂದು ಬಂದೆನು." ಎಂದು ಹೇಳಿ ಇಂದಿರೆಯು ಗಂಗೆಯನ್ನು ಕರೆದು ಶೇಷಮ್ಮಗೆ ಚಹ ತರಹೇಳೆಂದಾಜ್ಞಾಪಿಸಿದಳು.

"ದೇವಯಾನಿಯಮ್ಮಾ. ನೀವು ಹೇಗೆ ಇದ್ದ ಹಾಗೆಯೇ ಇರುವಿರಿ. ಇದಕ್ಕೂ ಹೆಚ್ಚಿನ ಮುಪ್ಪು ನಿಮಗೆ ಬರುವಂತೆ ಕಾಣುವದಿಲ್ಲ. ನಿಮಗೇನಾದರೂ ಹೆಚ್ಚು ಕಡಿಮೆಯಾದರೆ ನಿಮ್ಮನ್ನೊಂದು ಕನ್ನಡಿಯ ಪೆಟ್ಟಿಗೆಯಲ್ಲಿ ಹಾಕಿಟ್ಟರಾಯಿತು. ಮಹಾರಾಣಿಯವರ ಪುತ್ಥಳಿಯಂತೆ ಇರುವಿರಿ." ಎಂದು ಇಂದಿರೆಯು ದೇವಯಾನಿಯ ದಿವ್ಯವಾದ ಪ್ರಕೃತಿಯ ಮೇಲೆ ಟೀಕೆ ಮಾಡಿದಳು.

ಇಂದಿರೆಯ ಚಮತ್ಕಾರವಾದ ಕಲ್ಪನೆಗೆ ದೇವಯಾನಿಯು ಹೊಟ್ಟೆ ಹಿಡಿಸಲಾರದಷ್ಟು ನಕ್ಕು—

"ಇಂದಿರಾ, ನೀನು ಬರುವವರೆಗೆ ಹೊತ್ತು ಕಲ್ಲು ಕಡೆದಂತಾಗುತ್ತಿತ್ತು. ನೀನು ಬಂದಿ, ಚಲೋದಾಯಿತು. ಇತ್ತ ಬಾ. ಈಗ ನೀನು ಹೇಗೆ ಕಾಣುವಿಯೋ ಚನ್ನಾಗಿ ನೋಡೋಣ." ಎಂದು ದೇವಯಾನಿಯಂದಳು.

"ನಾನೊಲ್ಲೆ. ಅಷ್ಟೇಕೆ ಪರೀಕ್ಷೆ ಮಾಡಿ ನೋಡಬೇಕಂತೆ!" ಎಂದು ಇಂದಿರೆಯು ನಿರ್ವಾಹವಿಲ್ಲದಕ್ಕಾಗಿ ದೇವಯಾನಿಯ ಸಮೀಪದಲ್ಲಿ ಹೋಗಿ ಕುಳಿತಳು.

"ಮಗಳೇ. ನಿನ್ನ ಸುಂದರವಾದ ಮುಖವು ನಿಸ್ತೇಜವಾಗಿರುವದು. ನಾಲ್ಕಾರು ತಿಂಗಳು ತಿರಿಗಿ ಬಂದದ್ದರಿಂದ ಹೀಗಾಗಿರುವಿಯೋ ಮತ್ತೇನಾದರೂ ಕಾರಣವಿರುವದೋ?"

"ನನಗೇನಾಗಿದೆ! ಸುಳ್ಳೇ ಏಕನ್ನುವಿರಿ? ನಾಲ್ಕು ದಿವಸ ಮಳೆಮಾರುಗಳಿಗೋಸ್ಕರ ಮನಸ್ಸಿಗೆ ಆನಂದವೇ ಇದ್ದಿಲ್ಲ."

"ಇಂದಿರಾ, ನೀನು ಬೇಕಾದ್ದು ಹೇಳು, ನಿನ್ನ ಜೀವಕ್ಕೆ ಸಮಾಧಾನವಿಲ್ಲ. ಈ ಊರು ನಿನ್ನ ಮನಸ್ಸಿಗೆ ಬರಲೊಲ್ಲದೇನು?"

"ನೀವು ಹೇಳಿದಂತೆ ಶ್ರೀರಂಗಪಟ್ಟಣವು ಮೊದಲಿನಂತೆ ಕಾಣುವದಿಲ್ಲ." ಎಂದು ಇಂದಿರೆಯಂದಳು.

"ಬೇಸಿಗೆಯಲ್ಲಿಯೂ ರಮಣೀಯತೆಯು ಈ ಕಾಲದಲ್ಲಿ ಹೇಗೆ ಬಂದೀತು? ಕಲಕತ್ತಾ, ಕಾಶೀ, ಪ್ರಯಾಗ ಮುಂತಾದ ದೊಡ್ಡ ದೊಡ್ಡ ಪಟ್ಟಣಗಳನ್ನು ನೋಡಿ ಬಂದವಳಿಗೆ ನಮ್ಮ ಹಾಳೂರು ಮನಸ್ಸಿಗೆ ಬಂದೀತೇ?"

"ಏಕೋ ಮನಸ್ಸು ಉದಾಸವಾಗಿರುವುದು. ದೇವಯಾನಿಯಮ್ಮಾ, ಅಶುಭಸೂಚಕವಾಗಿರುವದೇನು ನನ್ನ ಚಿತ್ತವೃತ್ತಿ ?"

ಕತ್ತಲಾಗುತ್ತ ಬಂದಿದೆ. ದೀಪ ಹಚ್ಚಿದ ಬಳಿಕ ನಿನ್ನ ಉದಾಸವೃತ್ತಿಯು ಹೊರಟುಹೋಗುವದು." ಎಂದು ದೇವಯಾನಿಯು ಗಂಟೆಯನ್ನು ಬಾರಿಸಿದಳು.

"ಈಗಲೇ ದೀಪ ಬೇಡಿರಿ. ಚಹ ತಕ್ಕೊಂಡ ಮೇಲೆ ನನಗೆ ಸ್ವಲ್ಪ ಉತ್ಸಾಹ ಬಂದೀತು. ಮೊದಲೇ ನೀವು ನನ್ನ ಮೋರೆ ನೋಡಿದರೆ 'ಇಂದಿರಾ, ನೀನು ಸೊರಗಿರುವಿ, ನೀನು ಹಾಗಾಗಿರುವಿ, ಹೀಗಾಗಿರುವಿ,' ಎಂದೆನ್ನುವಿರಿ. ಇದು ಬೇಕಾಗಿಲ್ಲ. ಮೊದಲು ಚಹ ತಕ್ಕೊಳ್ಳೋಣ. ಆಮೇಲೆ ಬಾಲದೀಪ ಹಚ್ಚಿ ನನ್ನ ಮೋರೆ ನೋಡಿದರೂ ಚಿಂತಿಲ್ಲ."

"ಚಹ ತಕ್ಕೊಂಡರೆ ನಿನ್ನ ಮುಖ ಕುಂದಿದ್ದು ಹೋಗುವದೇನು ? ನಾಳೆ ಬೆಳಗಾದರೆ ಮದುವೆಯಾಗುವವಳು ನೀನು, ಹೀಗೆ ಹೀನಮುಖಿಳಾದರೆ ಚಂದ ಕಾಣುವದೇ ? ನಿನಗೇನಾಗಿದೆ ಹೇಳು."

"ನನಗೇನಾಗಿದೆ ? ಮದುವೆಯಾದ್ದರಿಂದ ನಾನು ಜಹಗೀರದಾರರ ಸೊಸೆಯಾಗಿ ಜನರಲ್ಲಿ ಧನ್ಯಳೆಂದೆನಿಸಿಕೊಳ್ಳಬೇಕಾಗಿದೆ ! !"

"ಇದೇನು ದೀಡೀ ಮಾತೋ, ನಿಜವಾಗಿಯೇ ಧನ್ಯಳಾಗುವಿಯೋ ನೀನನ್ನುವದಾದರೂ ಏನು ?"

"ದೇವಯಾನಿಯಮ್ಮಾ , ನಿಮ್ಮ ಮುಂದಂತೆ ಹೇಳುತ್ತೇನೆ. ಈ ಲಗ್ನದಿಂದ ನನಗೆ ಸುಖವಾಗಲಿಕ್ಕಿಲ್ಲ ; ಆದರೆ ಮಾಡುವದೇನು ?

"ಮಾಡುವದೇನೆಂದರೆ ! ಯೋಗ್ಯವಾದ ಉಪಾಯ ಮಾಡತಕ್ಕದ್ದು." ಎಂದು ದೇವಯಾನಿಯು ಹೇಳಿದಳು.

"ಅಸುಖಿಯಾದ ಮೇಲೆ ದುಃಖ ನುಂಗಿಕೊಂಡಿರುವದೇ ಉಪಾಯವಹುದಲ್ಲೊ !"

"ಹಾಗಲ್ಲ. ಯಾವ ಕಾರ್ಯದಿಂದ ನಿನಗೆ ಸುಖವಾಗಲಾರದೋ ಅಂಥ ಕೆಲಸವನ್ನೇ ಮಾಡಬಾರದು."

"ದೇವಯಾನಿಯಮ್ಮಾ , ಉಂಡುಡಲಿಕ್ಕಿದ್ದರೆ ಮನುಷ್ಯನಿಗೆ ಸುಖವೆಂಬುದು ದೊರೆಯುವದೇನು ? ಹಾಗಿದ್ದ ಪಕ್ಷದಲ್ಲಿ ಅಗ್ಗ ನೌಕರಿ ಮಾಡಿದವನಲ್ಲಿ ಏನು ಕೊರತೆಯಿರುತ್ತಿತ್ತು ? ಉಂಡುಡಲಿಕ್ಕೆ ಇದೆ. ನಾಟಕಗಳಿಗೆ ಹೋಗಬೇಕಾದರ ಮಾಲಗಳು ಸಿಕ್ಕುವವು. ನನ್ನ ಹೆಸರಿಗೆ "ಶ್ರೀಮಂತ" ಎಂಬ ಪಟ್ಟ ಹಾಕಲ್ಪಡು

ವದು. ಇದಕ್ಕೂ ಮತ್ತೇನು ಬೇಕು ?" ಎಂದು ಇಂದಿರೆಯು ಆಡಿದಳು.

"ಇಂದಿರಾ, ನಿನ್ನ ಉದ್ಗಾರಗಳನ್ನು ಕೇಳಿ ನನಗೆ ವಿಷಾದವಾಯಿತು. ಈ ಲಗ್ನದಿಂದ ನಿನಗೆ ಸುಖವಾಗದೆಂದು ನಿಶ್ಚಯವಾಗಿ ನೀನು ತಿಳುಕೊಂಡಿರುವಿ. ಕೇವಲ ಧನೈಶ್ವರ್ಯಕ್ಕೆ ನೀನು ಮೆಚ್ಚುವವಳಲ್ಲ. ಗ್ರಾಹ್ಯಾಗ್ರಾಹ್ಯಗಳ ವಿವೇಕವೂ, ನಿರ್ಮಲವಾದ ಪ್ರೀತಿಯೂ ನಿನ್ನಲ್ಲಿದ್ದಷ್ಟು ಅನ್ಯಸ್ತ್ರೀಯರಲ್ಲಿಲ್ಲ. ಇಂಥ ಸ್ತ್ರೀರತ್ನ ವನ್ನು ಅಯೋಗ್ಯನ ವಶದಲ್ಲಿ ಕೊಡುವದು ಸರ್ವಥಾ ನನ್ನ ಮನಸ್ಸಿಗೆ ಬರುವದಿಲ್ಲ." ಎಂದು ದೇವಯಾನಿಯೆಂದಳು.

"ಹೆಣ್ಣುಮಕ್ಕಳು ಕಡೇವರೆಗೆ ಅವಿವಾಹಿತರಾಗಿ ಇರಕೂಡದಲ್ಲ" ಎಂದು ಇಂದಿರೆಯು ಅಕ್ಕಸದಿಂದ ನುಡಿದಳು.

ದೇವಯಾನಿಯು ಇಂದಿರೆಯ ಗದ್ದ ಹಿಡಿದು "ಮುದ್ದುಮಗಳೇ, ನೀನು ಅಸಮಾಧಾನೆಯಾಗಿರುವದನ್ನು ನಾನು ನೋಡಲಾರೆನು. ನಿನ್ನ ಭಾವವಂತೂ ತಿಳಿದಂತಾಯಿತು. ಸುಳ್ಳೇ ಹುಚ್ಚುಚ್ಚು ಮಾತಾಡಬೇಡ. ಕೋಮಲಹೃದಯಳೂ ವಿನೋದಿನಿಯೂ ಚತುರೆಯೂ ಆದ ನಿನಗೆ ಶ್ರೀಕಂಠನು ಯೋಗ್ಯನಾದ ವರನಲ್ಲ ; ಇರುವನೇನು ? ಪ್ರಮಾಣಪೂರ್ವಕವಾಗಿ ಹೇಳು" ಎಂದು ದೇವಯಾನಿಯು ಆಗ್ರಹದಿಂದ ಕೇಳಿದಳು.

"ವ್ಯಾಪಾರದಲ್ಲಿ ಕುಶಲರಾದ ನಮ್ಮ ತಂದೆಗಳು ಈ ಘಟನಾ ಮಾಡಿರು ವರು. ನಮ್ಮ ಮದುವೆಯೆಂದರೆ ಇದೊಂದು ಪಾಲಿನ ವ್ಯಾಪಾರದಂತಿರುವದು. ನಾನು ಧನತರತಕ್ಕದ್ದು. ಶ್ರೀಕಂಠನು ತನ್ನ ಬಿರುದಾವಳಿಗಳನ್ನು ಕಟ್ಟಿಕೊಂಡು ಬರುವನು. ಧನವೂ ಬಿರುದಾವಳಿಗಳೂ ಒಟ್ಟುಗೂಡಿದ ಮೇಲೆ ನಮ್ಮನ್ನು ಹಿಡಿಯುವರಾರು ?"

"ತಂದೆ ಕೂತು ಹೀಗೆ ಮಾಡಬಹುದೇ !" ಎಂದು ದೇವಯಾನಿಯು ಚಿಂತೆಯಲ್ಲಿ ತೊಳಲಾಡುತ್ತ ನುಡಿದಳು.

"ದೇವಯಾನಿಯಮ್ಮಾ, ನನಗೊಬ್ಬ ಅಣ್ಣನಾಗಲೀ ತಮ್ಮನಾಗಲೀ ಇದ್ದರೆ ಅವನು ನನ್ನ ತಂದೆಯ ಧನರಾಶಿಯ ಧನಿಯಾಗುತ್ತಿದ್ದನು, ಹಣದಾಸೆಗೆ ಬಿದ್ದವರು ನನ್ನ ಉಸಾಬರಿಯನ್ನೇ ತೆಗೆಯುತ್ತಿದ್ದಿಲ್ಲ. ಅಂದಮೇಲೆ ನಾನು ನನ್ನ ಮನಸ್ಸಿಗೆ ಒಂದು ವರನನ್ನು ಆರಿಸಿಕೊಳ್ಳಲಿಕ್ಕೆ ಯಾರದೂ ಪ್ರತಿಬಂಧವಿರುತ್ತಿದ್ದಿಲ್ಲ. ಈಗ್ಯೆ ಉಪಾಯವಿಲ್ಲದ ಮಾತಾಗಿರುತ್ತದೆ." ಎಂದು ಇಂದಿರೆಯು ನುಡಿದು ಕಣ್ಣುತುಂಬಾ ನೀರುತಂದಳು.

"ಇಂದಿರಕ್ಕಾ, ಯೋಚಿಸಬೇಡ. ಏನಾದರೂ ಉಪಾಯ ಮಾಡೋಣ. ಶ್ರೀಕಂಠನಿಗೆ ನಿನ್ನನ್ನು ಕೊಡಗೊಡುವದಿಲ್ಲ."

"ಅಮ್ಮಾ, ಶ್ರೀಕಂಠನಿಗೇನಾಗಿದೆ? ಪಾಲಿಗೆ ಬಂದದ್ದು ಪಂಚಾಮೃತ ವಲ್ಲವೇ?"

"ಶಿಶುಪಾಲನಿಗೇನಾಗಿತ್ತು? ರುಕ್ಮಿಣೀದೇವಿಯು ಅಂಬಿಕೆಯ ಮುಂದೆ ಪ್ರಾಣಕೊಡಲಿಕ್ಕೆ ನಿಂತಿದ್ದಳಲ್ಲ!"

"ರುಕ್ಮಿಣೀದೇವಿಗೆ ತನ್ನನ್ನು ಪ್ರೀತಿಸುವ ಬೇರೊಬ್ಬ ವರನಿದ್ದಾನು" ಎಂದು ಇಂದಿರೆಯು ನುಡಿದು ದೇವಯಾನಿಯ ಮುಖವನ್ನು ನೋಡಿದಳು.

ಶ್ರೀಕಂಠನನ್ನು ಬಿಟ್ಟು ಇನ್ನೊಬ್ಬ ವರನು ಭೂಮಿಯಲ್ಲಿ ದೊರಕುವದೇ ಇಲ್ಲೇನು?"

"ಇಲ್ಲೇ ಇಲ್ಲ. ಸುಮ್ಮನೆ ಅಂದರೇನಾಯಿತು?"

"ಇದ್ದವನೋ ಇಲ್ಲೋ ನಿನಗೇ ಗೊತ್ತು. ನಾನು ಹೇಳುವದೇನಂದರೆ, ವಿವಾಹವು ಜನ್ಮದ ಗಂಟು. ಇಂಥ ಪ್ರಸಂಗದಲ್ಲಿ ಗಾಳಿಬೀಸಿದತ್ತ ಹೋಗುವದು ಸರಿಯಲ್ಲ. ನೀನೇನು ಚಿಕ್ಕವಳಲ್ಲ. ತಿಳಿದವಳೇ ಇರುತ್ತೀ. ನಿನ್ನ ಮನಸ್ಸಿನಲ್ಲಿ ದ್ದದ್ದನ್ನು ನಾಚದೇ ಏನೂ ಬಿಡದಲೇ ಹೇಳು. ಮಾತು ಕಯ್ಮೀರಿ ಹೋದ ಮೇಲೆ ಮಿಡುಕಿದರೆ ಬಾರದು."

"ದೇವಯಾನಿಯಮ್ಮಾ, ಈ ಮಾತಿನ ಬಗ್ಗೆ ನಾನು ವಿಚಾರ ಮಾಡಹತ್ತಿ ಎರಡು ತಿಂಗಳಾದವು. ಅಂದರೇನು ದಾಡಲಿ! ತಂದೆ ಮನಸ್ಸಿಗೆ ಬರಬೇಕಲ್ಲ!"

"ನಿನ್ನ ತಂದೆಗೆ ನಾನು ಹೇಳುತ್ತೇನೆ. ಅವನು ನಿನ್ನಭೀಷ್ಟವಿದ್ದಂತೆ ಮಾಡದಿದ್ದರೆ ಅವನ ಧನೈಶ್ವರ್ಯಗಳನ್ನು ಎಡಗಾಲಿಲೊದ್ದು ನಿನ್ನ ಮನೋಜ್ಞ ನಾದ ವರನನ್ನು ಲಗ್ನಮಾಡಿಕೊಂಡು ಸುಖಿಯಾಗಿರು. ಚಿನ್ನದ ಚೂರಿಯಿಂದು ಮೂಗು ಕೊಯಿಸಿಕೊಳ್ಳಕೂಡದಲ್ಲ!" ಎಂದು ದೇವಯಾನಿಯು ತನ್ನ ಸ್ಪಷ್ಟ ವಾದ ಮತವನ್ನು ಹೇಳಿದಳು.

"ಅಮ್ಮಾ. ನೀವು ಹೇಳುವದೆಲ್ಲ ಸರಿ. ಆದರೆ ದೈವದಲ್ಲಿದ್ದದ್ದು ತಪ್ಪು ವದು ಹೇಗೆ? ಎಂದು ಇಂದಿರೆಯು ನಿರಾಶೆಯಿಂದ ನುಡಿದಳು.

"ಇಂದಿರಾ, ಹೀಗೆ ಕಡೇವರೆಗೆ ನೀನು ನಿನ್ನ ಮನೋಗತವನ್ನು ಹೊರಗೆಡ ದದಿದ್ದರೆ ನಾವು ಏನು ಮಾಡಬೇಕು? ನಿನ್ನಿಚ್ಛೆಯ ವರನು ಯಾವನು? ಅವನು ಯೋಗ್ಯನೋ ಅಯೋಗ್ಯನೋ ಎಂಬುವದನ್ನು ನಾವು ನೋಡಬೇಕಲ್ಲವೇ?"

"ಅವರು ಬುದ್ಧ್ಯಾ ನನ್ನನ್ನು ತ್ಯಾಗಮಾಡಿ ಹೋಗಿಬಿಟ್ಟಿರುವರಲ್ಲ! ಅವರಾರೆಂಬುದನ್ನು ಹೇಳಿಯಾದರೂ ಫಲವೇನು ?"

"ಅವರುದರಾರು ?" ಎಂದು ದೇವಯಾನಿಯು ಗಟ್ಟಿಯಾಗಿ ಕೂಗಿ ಕೇಳಿದಳು.

"ಎಲ್ಲವನ್ನು ನನ್ನ ಬಾಯಿಯಿಂದ ಒಡನುಡಿಸಿ ಬಿಡಬೇಕೆಂದು ನಿಶ್ಚಯ ಮಾಡಿರುವಿರೇನು ?" ಎಂದು ಕೇಳಿ ಇಂದಿರೆಯು ನಾಚಿಕೊಂಡು ತನ್ನ ಸೀರೆಯ ಅಂಚನ್ನು ಬೆರಳುಗಳಿಂದ ತೀಡುತ್ತ ಕೆಳಗೆ ಮೋರೆಮಾಡಿಕೊಂಡು ಕುಳಿತಳು.

"ಸ್ವಲ್ಪ ತಿಳಿದಂತಾಯಿತು. ನಿನ್ನ ಹೃದಯಾಭಿರಾಮನನ್ನು ನಾನು ನೋಡಿರುವೆನಷ್ಟೇ ?"

"ಅಹುದು"

ಇಷ್ಟರಲ್ಲಿ ಗಂಗೆಯು 'ಚಹ ಸಿದ್ಧವದೆ' ಎಂದು ಹೇಳಿದಳು. ಇಂದಿರೆಯೂ ದೇವಯಾನಿಯೂ ಚಹ ತಕ್ಕೊಂಡು ತಾಂಬೂಲ ಹಾಕಿಕೊಂಡರು.

"ದೇವಯಾನಿಯಮ್ಮಾ, ನೋಡಿದಿರಾ, ಎಷ್ಟು ಹೊತ್ತಾಯಿತು! ನಾನು ಈಗಲೇ ಮನೆಗೆ ಹೋಗಬೇಕು."

"ಹೋಗು. ನಾಳೆ ಬೆಳಿಗ್ಗೆ ಉಪಾಹಾರಕ್ಕೆ ಇಲ್ಲಿಗೇ ಬಾ. ಮುಂದಿನ ಆಲೋಚನೆ ಮಾಡೋಣಂತೆ." ಎಂದು ನುಡಿದು ದೇವಯಾನಿಯು ಸರದಾರ ಸಿಂಗನಿಗೆ ರಥ ಸಿದ್ಧಪಡಿಸಿ ಇಂದಿರೆಯನ್ನು ಅವಳ ಮನೆಗೆ ಮುಟ್ಟಿಸಿ ಬರಹೇಳಿದಳು.

"ದೇವಯಾನಿಯಮ್ಮಾ, ನಿಮ್ಮ ರಮಾಕಾಂತರೆಲ್ಲಿರುವರೆಂಬುದು ತಿಳಿದಿರು ವದೇನು ?" ಎಂದು ಇಂದಿರೆಯು ಕುತೂಹಲಳಾಗಿ ಕೇಳಿದಳು.

"ಯಾರ ರಮಾಕಾಂತನೇ ಆಗಲಿ, ಅವನು ಎಲ್ಲಿರುವನೋ ನನಗೆ ತಿಳಿ ದಿಲ್ಲ."

ಈ ಮಾತು ಕೇಳಿ ಇಂದಿರೆಯು ಕಣ್ಣಿಗೆ ನೀರು ತಂದಳು. ಮುಂದೆ ಹೆಚ್ಚಿಗೆ ಮಾತಾಡಲಾರದೆ ಹಾಗೇ ಹೋಗಿ ರಥದಲ್ಲಿ ಕುಳಿತುಕೊಂಡು ತನ್ನ ಮನೆಯ ಹಾದೀ ಹಿಡಿದಳು.

ಹಣದಾಸೆಯಿಂದ ಮನುಷ್ಯನ ಸದ್ಗುಣಗಳೆಲ್ಲ ಕೆಟ್ಟು ಹೋಗುವವು. ಔದಾರ್ಯವು ಈ ಆಸೆಗೆ ಮೊದಲನೇ ಆಹುತಿಯು. ಶರೀರಕ್ಕೆ ರಕ್ತವು ಪೋಷಕ ವಾಗಿರುವಂತೆ ಔದಾರ್ಯವು ಎಲ್ಲ ಸದ್ಗುಣಗಳ ಜೀವನವಾಗಿರುವದು. ಇದು ಇಲ್ಲದಂತಾದರೆ ಉಳಿದ ಗುಣಗಳು ತಮ್ಮಿಂದ ತಾವೇ ಹೊರಟುಹೋಗುವವು.

ನಿಮ್ಮ ಜಯರಾಯನನ್ನೇ ನೋಡಿರಿ! ಹಣಗಳಿಸುವ ಹವಣಿಕೆ ಅವನಿಗಿದ್ದದರಿಂದ ಅವನ ಔದಾರ್ಯವು ನಷ್ಟವಾಗಿತ್ತು. ಇದಕ್ಕಾಗಿ ಅವನು ಹೀನಗುಣದವನಾಗಿದ್ದನು. ಇವನಿಗೆ ತನ್ನ ಹೊಟ್ಟೆ ಮಗಳ ಸುಖಕ್ಕಿಂತಲೂ ಜಹಗೀರದಾರರ ಸಂಬಂಧವು ಅಧಿಕ ಪ್ರಿಯವಾಯಿತು. ಇಂದಿರೆಯು ರಮಾಕಾಂತನನ್ನು ವರಿಸಬಾರದೆಂದು ಇವನು ಸುಳ್ಳು ಹೇಳಲಿಕ್ಕೆ ಹಿಂದುಮುಂದು ನೋಡಲಿಲ್ಲ. ಶ್ರೀಕಂಠನಾಗಲೀ ಅವನ ಆಪ್ತರಾಗಲೀ ಇವನಿಗೆ ಕಿಂಚಿತ್ತಾದರೂ ಮರ್ಯಾದೆ ಕೊಡುತ್ತಿದ್ದಿಲ್ಲ. ಇದನ್ನು ತಿಳಿದೂ ತಿಳಿದೂ ಜಯರಾಯನು ಸಹನ ಮಾಡಿಕೊಂಡು ಅವರ ಆರ್ಜವವನ್ನೇ ಮಾಡುತ್ತಿದ್ದನು. ಕಾರಣವಿಲ್ಲದೆ ದೇವಯಾನಿಯ ಮೇಲೆ ಅವಳು ಒಳಸಂಚು ಮಾಡುತ್ತಾಳೆಂದು ಕೋಪಿಸಿಕೊಳ್ಳುತ್ತಿದ್ದನು. ಇಂಥ ಗುಣಗೇಡಿತನಕ್ಕಾಗಿಯೇ ಇಂದಿರೆಯು ತನ್ನ ಹಡೆದ ತಂದೆಯನ್ನು ಜರಿಯ ಹತ್ತಿದಳು. ಅನ್ಯರಂತೂ ಇವನಿಗೆಷ್ಟು ಮಾನ ಕೊಡುತ್ತಿರಬಹುದೆಂಬುದನ್ನು ವಾಚಕರೇ ಊಹಿಸಲಿ. ನಾಲ್ಕು ಜನರಲ್ಲಿ ಪ್ರತಿಷ್ಠೆಯನ್ನು ಹೊಂದಬೇಕಾಗಿಯೇ ನಾವು ಹಣವನ್ನು ಗಳಿಸುತ್ತೇವೆ. ಆದರೆ ಹಣಗಳಿಸುವ ಮೂಲ ಉದ್ದೇಶವನ್ನು ಕಳಕೊಂಡು ಮಣ್ಣಿನ ರೂಪಾಂತರಗಳಾಗಿದ್ದ ಬೆಳ್ಳಿ ಬಂಗಾರಗಳನ್ನು ಇಟ್ಟುಕೊಂಡು ಜನರಲ್ಲಿ ಅಪಹಾಸ್ಯಕ್ಕೆ ಪಾತ್ರನಾಗಿರುವ ಮೂರ್ಖನ ದುರ್ದೈವದಕ್ಕಿಂತಲೂ ಹೆಚ್ಚಿನ ದುರ್ದೈವವು ಹೇಗಿರುವದು ?

ಆ ರಾತ್ರೆ ಇಂದಿರೆಯ ಮನಸ್ಸಿಗೆ ಸಮಾಧಾನವಿರಲಿಲ್ಲ. ರಮಾಕಾಂತನ ಚಿಂತೆಯೊಂದು; ತನ್ನ ತಂದೆಯ ನಿಂದಿತವಾದ ಕಾರಸ್ಥಾನವು ಮತ್ತೊಂದು. ಇಷ್ಟು ದಿನ ಇಂದಿರೆಗೆ ಜಯರಾಯನು ಪೂಜ್ಯನಂತೆ ಕಾಣುತ್ತಿದ್ದನು. ಅವನೊಡನೆ ಮಾತಾಡುವದು, ಅವನಾಜ್ಞೆಯಂತೆ ನಡೆಯುವದು. ಅವನಿಗೆ ಸುಖವಾಗುವಂತೆ ಯತ್ನ ಮಾಡುವದು ಮುಂತಾದವುಗಳಿಂದಲೇ ಇಂದಿರೆಗೆ ಯಾವಾಗಲೂ ಆನಂದವಾಗುತ್ತಿತ್ತು; ಅದೆಲ್ಲ ಹೊರಟು ಹೋಗಿತ್ತು. ಭೋಜನೋತ್ತರ ಜಯರಾಯನು ಇಂದಿರೆಯ ಬಳಿಗೆ ಬಂದು, ಇವಳೂ ಶ್ರೀಕಂಠನೂ ಕೂಡಿ ಯಾವ ಮನೆಯಲ್ಲಿರಬೇಕು ? ಅರಿವೆ ಅಂಚಡಿ ಏನೇನು ಬೇಕು ? ಮೇಜು, ಕುರ್ಚಿ, ಪಲಂಗ ಮುಂತಾದ ಸಾಮಾನುಗಳೆಂಥವು ಬೇಕು ? ಮುಂತಾದ ವಿಷಯಗಳ ಬಗ್ಗೆ ಯೋಚನೆ ಮಾಡಹತ್ತಿದನು.

"ಅಪ್ಪಾ, ಇದನ್ನೆಲ್ಲಾ ನಾನೇನು ಬಲ್ಲೆನು! ನೀವೂ ನಮ್ಮ ಭಾವೀ ಪತಿಗಳೂ ಕೂಡಿ ನಿಮ್ಮ ಮನಸ್ಸಿಗೆ ಬಂದಂತೆ ಮಾಡಿದರಾಯಿತು." ಎಂದು ಇಂದಿರೆ

ಯೆಂದಳು.

"ಆದರೂ ಸಂಸಾರದ ಮಾತಿನಲ್ಲಿ ಹೆಣ್ಣು ಮಕ್ಕಳ ಆಲೋಚನೆಯೇ ಮಹತ್ವವಾದದ್ದು." ಎಂದು ಜಯರಾಯನು ಹೇಳಿ ನಕ್ಕನು.

"ನನಗೆ ಯಾವದೂ ತಿಳಿಯುವದಿಲ್ಲ"

"ಸದ್ಯಕ್ಕೆ ನಿಮಗೊಂದು ಚಿಕ್ಕ ಮನೆಯಾದರೆ ಸಾಕಲ್ಲವೇ ?" ಎಂದು ಜಯರಾಯನು ಮತ್ತೆ ಕೇಳಿದನು.

"ಏನೋ !"

"ಒಮ್ಮೆಲೇ ಆಡಂಬರದ ಸಂಸಾರ ಹೂಡಕೂಡದು. ನಿಮ್ಮ ಪ್ರಾಪ್ತಿಯು ಹೆಚ್ಚಾದಂತೆ ಮನೆಯಲ್ಲಿ ಹೆಚ್ಚು ವೆಚ್ಚವಿಡಬಹುದು. ಸದ್ಯಕ್ಕೆ ನಿಮಗೆ ತಿಂಗಳಾ ನೂರು ರೂಪಾಯಿ ದೊರೆಯುವವು. ಅದರಲ್ಲಿ ಎಲ್ಲವೂ ಆಗಬೇಕು."

"ಹೀಗಿದ್ದ ಪಕ್ಷದಲ್ಲಿ ಇಷ್ಟವಸರದಿಂದ ಲಗ್ನವಾದರೂ ಮಾಡಿಕೊಂಡೇನು ಪ್ರಯೋಜನ ? ನೂರು ರೂಪಾಯಿ ಸಾಲದಿದ್ದ ಪಕ್ಷದಲ್ಲೇನು ಮಾಡಬಹುದು ? ಶ್ರೀಕಂಠನು ಶ್ರೀಮಂತನಾದ ಮೇಲೆ ಲಗ್ನದ ವಿಚಾರ ಮಾಡುವದು ಸಯುಕ್ತಿಕವಾಗಲಿಕ್ಕಿಲ್ಲೇನು ? ಅವನಿಗೆ ತನ್ನ ಸ್ಥಿತಿಯು ಹೀಗಿರುವದೆಂದು ತಿಳಿದದಷ್ಟೇ ?"

"ಏನು ಹುಚ್ಚಿ ನೀನು ! ತಿಂಗಳೊಂದಕ್ಕೆ ನೂರು ರೂಪಾಯಿಗಳು ಇಬ್ಬರಿಗೆ ಸಾಕಾಗದೇ ? ನೀವಿಬ್ಬರೂ ಮಿತವ್ಯಯಿಗಳಾಗಿರುವಿರಿ."

"ನಾನೇ ಶ್ರೀಕಂಠನಾಗಿದ್ದರೆ ನಿಮ್ಮಂಥ ಚಿನಿವಾರರ ಮಗಳನ್ನು ಸಿಳ್ಳೆಮಿಳ್ಳೇ ನೂರು ರೂಪಾಯಿ ಬಡ್ಡಿ ಬರುವಷ್ಟು ಹಣಕ್ಕಾಗಿ ಎಂದಿಗೂ ಮದುವೆ ಮಾಡಿಕೊಳ್ಳುತ್ತಿದ್ದಿಲ್ಲ." ಎಂದು ಇಂದಿರೆಯು ವ್ಯಂಗ್ಯೋಕ್ತಿಯಿಂದ ಮಾತಾಡಿದಳು.

"ಶ್ರೀಕಂಠನು ಹಣದಾಸೆಗೆ ನಿನ್ನನ್ನು ಲಗ್ನ ಮಾಡಿಕೊಳ್ಳುತ್ತಿರುವನೆಂದು ನೀನು ನಂಬುತ್ತೀಯೇನು ? ಹಾಗಿದ್ದರೆ ಅವನು ನಮ್ಮ ಕಡೆಯಿಂದ ಹೆಚ್ಚು ಹಣ ಸೆಳಕೊಳ್ಳುತ್ತಿದ್ದಿಲ್ಲವೇ ?"

"ನೀವು ಕೊಡಲೊಪ್ಪಿದ ಹಣಕ್ಕಿಂತಲೂ ಹೆಚ್ಚಿನ ಹಣವು ಅನ್ಯಸ್ಥಳಗಳಲ್ಲಿ ಸಿಕ್ಕದಿದ್ದರೆ ಪಾಪ ! ಅವನೇನು ಮಾಡುವನು ? ಜಹಗೀರದಾರರ ಮಗನಾದರೇನಾಯಿತು ? ವಿಚಾಪುರವಾಯಿತು, ಗೋಳಗುಮ್ಮಟವಾಯಿತು, ಮುಂದೇನು ?"

"ಇಂದಿರಾ, ನೀನು ಹೀಗೆ ನುಡಿಯುವದು ನನಗೆಷ್ಟುಮಾತ್ರಕ್ಕೂ ಸರಿ ಬರುವದಿಲ್ಲ. ದೊಡ್ಡವರ ಮಗನನ್ನು ಹೀಗೆ ಉಪಮರ್ದಿಸುವದು ನಿನ್ನಂಥವಳಿಗೆ ಯೋಗ್ಯವಲ್ಲ. ಶ್ರೀಕಂಠನು ನಿನ್ನ ಮೇಲಣ ಪ್ರೀತಿಗಾಗಿಯೇ ಈ ಸಂಬಂಧ

ಮಾಡಲುದ್ಯುಕ್ತನಾಗಿರುತ್ತಾನೆ."

"ಎಷ್ಟು ಗೂಢಹೃದಯದವನು ? ಇಂಥ ಸ್ವಭಾವದವರು ಯಾವಾಗಲೂ ಹೆಂಡರ ಮೇಲೆ ಸಂಶಯ ತಕ್ಕೊಳ್ಳುವದುಂಟಲ್ಲವೇನು ?" ಎಂದು ಇಂದಿರೆಯು ವಿನೋದದಿಂದ ನುಡಿದಳು.

"ಇಂದಿರೇ, ಹೀಗೆ ಮನಸ್ಸು ತೆಗೆದು ಮಾತಾಡಹತ್ತಿದರೆ ಮುಂದೆ ನೀನು ಸಂಸಾರಮಾಡುವದಾದರೂ ಹೇಗೆ ? ನಿನ್ನ ವರ್ತನವು ಶ್ರೀಕಂಠನಿಗೆ ರುಚಿಸೀತೆ?"

"ಅವನು ಮಾಡಿದ್ದೇ ಪೂರ್ವದಿಶೆಯೆಂದರಾಯಿತು. ರುಚಿಸದೇನಾದೀತು ?"

ಜಯರಾಯನು ಸ್ವಾರ್ಥಪರಾಯಣನೂ, ಕಠಿಣಹೃದಯನೂ, ಆಗಿದ್ದರೂ ತನ್ನ ಮಗಳು ಮಾತಾಡಿದ್ದು ಕೇಳಿ ಅವಳಿಗೆ ಈ ವಿವಾಹವು ರುಚಿಸುವದಿಲ್ಲೆಂದು ತಿಳಿದು ಮನಸ್ಸಿನಲ್ಲಿ ನೊಂದುಕೊಂಡು ನಿಟ್ಟುಸುರಿಟ್ಟನು. ಕೆಲವು ಹೊತ್ತಿನವರೆಗೆ ತಂದೆ ಮಕ್ಕಳೀರ್ವರೂ ಏನೂ ಮಾತಾಡದೆ ಸುಮ್ಮನೇ ಕುಳಿತರು. ಇಂದಿರೆಯೇ ಮತ್ತೊಂದು ಮಾತು ತೆಗೆದು, "ಅಪ್ಪಾ, ರಮಾಕಾಂತರೆಲ್ಲಿರುವರೆಂಬದು ನಿಮಗೆ ತಿಳಿದಿರುವದೇನು ?" ಎಂದು ಕೇಳಿದಳು.

"ಗೊತ್ತಿಲ್ಲಮ್ಮಾ, ಇಲ್ಲಿಗೆ ಬಂದ ಮೇಲೆ ನಾನು ಅವನನ್ನು ಕಂಡೇ ಇಲ್ಲ. ಬೆಂಗಳೂರಿಗೆ ಹೋದ ಬಳಿಕ ಶೋಧಮಾಡೋಣ."

"ಅವರು ಈ ಸೀಮೆಯಲ್ಲಾದರೂ ಇರುವರೇನು ? ಏನು ಜಪಾನಕ್ಕೆ ಹೊರಟು ಹೋಗಿಬಿಟ್ಟರೊ ?"

"ಜಪಾನಕ್ಕೆ ಹೋದಂತೆ ತೋರುವದಿಲ್ಲ." ಎಂದು ಜಯರಾಯನು ಹೇಳಿದನು.

"ಇಲ್ಲಿಯೇ ಇದ್ದರೆ ಅವರ ವರ್ತಮಾನ ದೇವಯಾನಿಯಮ್ಮನವರಿಗೆ ಹೇಗೆ ಹತ್ತಿಲ್ಲ ?"

ದೇವಯಾನಿಗೆ ಕೂಡಾ ರಮಾಕಾಂತನ ವರ್ತಮಾನ ತಿಳಿದಿಲ್ಲೆಂದು ಕೇಳಿ ಜಯರಾಯನಿಗೆ ಸಮಾಧಾನವಾಯಿತು. ಅವನು ಇಂದಿರೆಗೆ ಮಲಗಲು ಹೇಳಿ ತಾನು ತನ್ನ ಕೋಣೆಗೆ ಹೋದನು.

ನೀವು ಸಾವಿರ ಹೇಳಿದರೂ, ನಾನು ಶ್ರೀಕಂಠನನ್ನು ವರಿಸುವದಿಲ್ಲ

ಸಂಕೇತವಾದಂತೆ ಇಂದಿರೆಯು ಮಾರನೆ ದಿವಸ ಬೆಳಗ್ಗೆ ದೇವಯಾನಿಯ

ಮನೆಗೆ ಬಂದಳು. ನಿನ್ನೆ ಮಧ್ಯಾಹ್ನದಿಂದ ಮಳೆಯಿಲ್ಲದ ಮೂಲಕ ಹವೆಯು ಸ್ವಚ್ಛವಾಗಿತ್ತು. ಈ ದಿವಸ ಸ್ವಚ್ಛ ಬಿಸಿಲು ಬಿದ್ದಿದ್ದು, ವನೋಪವನಗಳಲ್ಲಿಯ ಗಿಡಗಳಿಗೆ ವಿಲಕ್ಷಣವಾದ ಶೋಭೆ ಬಂದಿತ್ತು. ಮಳೆಗೋಸ್ಕರವಾಗಿ ಎರಡು ದಿವಸ ಹಿಡಿದು ಹಾಕಿದಂತಾಗಿದ್ದು ಈ ದಿವಸ ಎಳೆ ಬಿಸಲಿನಲ್ಲಿ ಆನಂದದಿಂದ ಹಾರಾಡುವ ಪಕ್ಷಿಗಳ ಕಿಲಕಿಲಾಟವು ಬಹು ಸೊಂಪಾಗಿತ್ತು. ಸ್ವರದೊಂದಿಗೆ 'ಹಾಲು, ಮೊಸರು, ಕೊಳ್ಳಿರೆಂ'ದು ಹೇಳುವ ಗೋಪಾಲಕಿಯರ ಸಮುದಾಯವೂ, ಭೈರವೀರಾಗದಲ್ಲಿ ಭಗವಂತನ ಸ್ಮರಣೆಯನ್ನು ಮಾಡುತ್ತ ಶ್ರೀರಂಗನಾಥನ ದರ್ಶನಕ್ಕೆ ನಡೆದ ಭಾವಿಕ ಜನರ ಗುಂಪುಗಳೂ, "ಎನೆ ನಸುನಕ್ಕು ಮಾರರಿಪುವಾತನ ಧೈರ್ಯಮನಾತನೇಳ್ಗೆವೆತ್ತ" ಎಂದು ಕವಿತೆಯನ್ನು ಬೀದಿಯಲ್ಲಿಯೇ ಗಟ್ಟಿಮಾಡುತ್ತ ಶಾಲೆಗೆ ನಡೆದಿರುವ ಚಿಕ್ಕ ಬಾಲಕರ ಮೇಳೆಯೂ, ಆನಂದವೃತ್ತಿಯಿಂದ ನಡೆದಿದ್ದವು. ಇದನ್ನೆಲ್ಲ ನೋಡುತ್ತ ದೇವಯಾನಿಯು ಚಂದ್ರಶಾಲೆಯಲ್ಲಿ ಕುಳಿತಿದ್ದಳು.

"ಇಂದಿರಾ, ಈ ದಿವಸ ಈ ಝಗಝಗಿಸುವ ಬಿಸಿಲಿನಿಂದಲೂ, ಪ್ರಫುಲ್ಲಿತವಾದ ಮನಸ್ಸಿನಿಂದ ಬೀದಿಯಲ್ಲಿ ನಡೆದಿರುವ ಜನರನ್ನು ನೋಡಿಯೊ ನನಗೊಂದು ಪ್ರಕಾರದ ಉತ್ಸಾಹ ಬಂದಂತಾಗಿರುತ್ತದೆ."

"ದೇವಯಾನಿಯಮ್ಮಾ, ನನ್ನ ಮನಸ್ಸಿನಲ್ಲಿ ದುಗುದುಗಿಯೇ ತುಂಬಿರುತ್ತದಲ್ಲ!"

"ನಿನ್ನ ಮನದ ದುಗಿದುಗಿಯಾದರೂ ಹೊರಟುಹೋದೀತು, ಚಿಂತಿಸಬೇಡ. ನೀನು ಪೂರ್ಣ ವಿಚಾರ ಮಾಡದಲೇ ಜಯರಾಯನ ಕಪಟಕೃತ್ಯಗಳಿಗೆ ಒಳಗಾಗುತ್ತ ಬಂದಿ. ಶ್ರೀಕಂತನು ನನಗೆ ತಕ್ಕ ವರನಲ್ಲವೆಂದು ನೀನು ಸ್ಪಷ್ಟವಾಗಿ ಜಯರಾಯನಿಗೆ ಹೇಳಿದ್ದಿಯಾದರೆ ಸಂಗತಿಗಳು ಈ ಪಥಕ್ಕೆ ಬರುತ್ತೇ ಇದ್ದಿಲ್ಲ. ರೋಗ, ಶೋಕ, ಪರಿತಾಪಾದಿಗಳು ನಮ್ಮಪರಾಧಗಳ ಫಲಗಳೇ ಎಂದು ಒಬ್ಬ ಕವಿಯು ಹೇಳುತ್ತಾನೆ. ನೀನು ಇನ್ನೂ ಸಮಯದಲ್ಲಿಯೇ ವಿಚಾರವನ್ನರಿತುಕೊಂಡಿರುವಿ, ಆದ್ದರಿಂದ ವಿಶೇಷವಾಗಿ ಅಂಜುವ ಕಾರಣವಿಲ್ಲ." ಎಂದು ದೇವಯಾನಿಯು ಹೇಳಿದಳು.

"ಅವಮ್ಮಾ, ರಮಾಕಾಂತರು ಕಮಲೆಯ ಪಾಣಿಗ್ರಹಣ ಮಾಡುವವರೆಂದು ಕೇಳಿದ್ದೇನೆ, ಇದು ನಿಜವಿರಬಹುದೇನು?"

"ರಮಾಕಾಂತನು ತಾನಾಗಿ ಇಲ್ಲೀವರೆಗೆ ಬಂದು ಈ ಮಾತು ಸುಳ್ಳಾದದ್ದೆಂದು ಹೇಳಿ ಹೋಗಿರುವನು."

"ಕಮಲೆಯನ್ನು ಬಿಟ್ಟು ಬೇರೊಬ್ಬಳ ಮೇಲೆ ಅವರು ಆಸಕ್ತರಾಗಿರಲಿಕ್ಕಿಲ್ಲವಲ್ಲ !" ಎಂದು ಇಂದಿರೆಯು ಕುತೂಹಲದಿಂದ ಕೇಳಿದಳು.

"ಈ ಮಾತು ಸತ್ಯ. ಇನ್ನೊಬ್ಬಳ ಮೇಲೆ ಅವನು ಆಸಕ್ತನಾಗಿರುವನು." ಎಂದು ದೇವಯಾನಿಯು ಪರಿಹಾಸದಿಂದ ನುಡಿದಳು.

ಇಂದಿರೆಯು ಚಕಿತಳಾಗಿ "ಏನಂದಿರಿ !! ಇನ್ನೊಬ್ಬಳಾರು ? ರಮಾಕಾಂತರು ನಿತ್ಯದಲ್ಲಿಯೂ ಒಬ್ಬ ಹೊಸ ತರುಣಿಯ ಮೇಲೆ ಮನಸ್ಸಿಡುತ್ತ ನಡೆದಿರುವರೇನು ?" ಎಂದು ಕೇಳಿದಳು.

"ರಮಾಕಾಂತನು ಅಂದಿಗಿಂದಿಗೂ ಒಬ್ಬ ಸ್ತ್ರೀಯಳನ್ನೇ ಪ್ರೀತಿಸುತ್ತಿರುವನು. ಅವನ ಪ್ರೀತಿಯು ಧ್ರುವನಕ್ಷತ್ರದಂತೆ ನಿಶ್ಚಲವಾಗಿರುವದು. ಅವನು ಪ್ರೀತಿಸುತ್ತಿರುವ ಮೋಹನಾಂಗಿ ಯಾರೆಂಬುದು ನನಗೆ ಗೊತ್ತುಂಟು. ಹೇಳಿದರೆ ನೀನು ಕಾತುರಗೊಳ್ಳುವಿ."

"ಆ ಹೆಸರು ಕೇಳಲಿಕ್ಕೆ ನಾನು ಉತ್ಸುಕಳಾಗಿರುವೆನೆಂದು ಹೇಳಿದರೆ ನೀವು ಮತ್ತಿಷ್ಟು ಬಿಗಿ ಹಿಡಿದು ನನಗೆ ಚಳ್ಳಣ್ಣೆ ತಿನ್ನಿಸುವಿರಿ ! ಅದಕ್ಕಾಗಿ ನಾನು ಆಗ್ರಹ ಮಾಡುವದೇ ಇಲ್ಲ." ಎಂದು ಇಂದಿರೆಯಂದಳು.

"ನೀನು ಕೋಪಿಸಿಕೊಳ್ಳುವದ್ಯಾರಮೇಲೆ ?" ಎಂದಂದು ದೇವಯಾನಿಯು ಗಹಗಹಿಸಿ ನಕ್ಕಳು.

"ಹೇಳಬೇಡಿರಿ, ಆಯಿತೋ ಇಲ್ಲೋ ?"

ದೇವಯಾನಿಯು ಇಂದಿರೆಯನ್ನು ತನ್ನ ಹತ್ತರಕ್ಕೆ ಎಳಕೊಂಡು ಅವಳ ಮುದ್ದಾಡಿ "ಅಕ್ಕಾ, ರಮಾಕಾಂತನ ಪ್ರೀತ್ಯಾಸ್ಪದಳಾದ ಮಾನಿನಿಯು ನೀನೇ ಇರುವಿ. ತನ್ನ ಪ್ರೀತಿಯ ಕಥೆಯನ್ನು ನಿನ್ನ ಮುಂದೆ ಹೇಳಿದರೆ ನಿನಗೂ ವ್ಯಸನವಾದೀತೆಂದು ತಿಳಿದು, ಆ ಗಂಭೀರನು ತನ್ನ ಹೊಟ್ಟೆಯೊಳಗಿನ ಕಿಚ್ಚನ್ನು ಸಮುದ್ರನಾಥನಂತೆ ತಾಳಿಕೊಂಡು ಇದರ ವಾರ್ತೆಯನ್ನು ಯಾರಿಗೂ ಹೇಳದೇ ದಿಗಂತರಕ್ಕೆ ಹೊರಟುಹೋಗಬೇಕೆಂದು ಯೋಚಿಸಿರುವನು" ಎಂದು ಹೇಳಿದಳು.

ಅಮೃತೋಪಮವಾದ ದೇವಯಾನಿಯ ಮಾತು ಕೇಳಿ ಇಂದಿರೆಯ ಮುಖವು ಪ್ರಾತಃಕಾಲದಲ್ಲಿ ಅರಳಿದ ಕಮಲದಂತೆ ಪ್ರಫುಲ್ಲಿತವಾದರೂ ಅವಳು ಲಜ್ಜೆಯಿಂದ ತಲೆಬಾಗಿಸಿಕೊಂಡು ಕಾಗದದ ಮೇಲೆ ಗೆರೆ ಹಾಕುತ್ತ ಕುಳಿತಳು. ಆನಂದಾತಿಶಯದಿಂದ ಅವಳ ಕುತ್ತಿಗೆಸಿರ ಬಿಗಿದು ಆಯಾಸದೊಂದಿಗೆ ಅವಳು ಉಸುರಾಡಿಸಹತ್ತಿದಳು. "ದೇವಯಾನಿಯಮ್ಮಾ, ಇದು ನಿಜವಿರುವದೇನು ?"

ಇಷ್ಟು ಶಬ್ದಗಳು ಅವಳ ಕಂಠದಿಂದ ಹೊರಡಬೇಕಾದರೆ ಪ್ರಯಾಸವಾಗಿ ಕಂಬನಿಗಳು ಅವಳು ಗೆರೆ ಹಾಕುತ್ತಿದ್ದ ಕಾಗದದ ಮೇಲೆ ಪಟಪಟ ಬಿದ್ದವು.

"ಇಂದಿರಾ, ನೀವು ಕಾಶಿಗೆ ಹೊರಟುಹೋದ ಬಳಿಕ ಒಂದೆರಡು ದಿವಸಗಳಲ್ಲಿಯೇ ರಮಾಕಾಂತನು ಇಲ್ಲಿಗೆ ಬಂದು ಜಪಾನಕ್ಕೆ ಹೋಗುವದಕ್ಕೆ ನನ್ನಪ್ಪಣೆ ಕೇಳಿಕೊಂಡನು. ಆ ಪ್ರಸಂಗದಲ್ಲಿ ಮಾತಿಗೆ ಮಾತು ಹೊರಡಲಾಗಿ ಅನಿರ್ವಾಹಕ್ಕಾಗಿ ಅವನು ತನ್ನ ಹೃದ್ಗತವನ್ನು ನನ್ನ ಮುಂದೆ ಹೇಳಿದನು."

ಇಂದಿರೆಯು ವಿಕಾರಪರವಶಳಾಗಿ ಝಗ್ಗನೆ ಎದ್ದು ಆ ಹಿತವಂತೆಯಾದ ದೇವಯಾನಿಯನ್ನು ಗಟ್ಟಿಯಾಗಿ ಅಪ್ಪಿಕೊಂಡು ಗದ್ಗದಕಂಠೆಯಾಗಿ "ದೇವಯಾನಿಯಮ್ಮಾ, ನಾನು ನಾಚಿಕೆ ಬಿಟ್ಟು ಮಾತಾಡಿದ್ದಕ್ಕೆ ಕ್ಷಮಿಸಿರಿ. ನನ್ನ ಮೇಲೆ ಮಮತೆಯನ್ನು ಮಾಡುವವರು ಯಾರೂ ಇಲ್ಲ. ಶ್ರೀಕಂಠನ ಪಿಡುಗು ತಪ್ಪಿಸಿ ನನ್ನನ್ನು ಸುಖಿಯಾಗಿ ಮಾಡುವದು ನಿಮ್ಮನ್ನೊಪ್ಪಿರುವದು. ಹಾಗಾಗದಿದ್ದ ಪಕ್ಷದಲ್ಲಿ ನೀವೆಲ್ಲರು ನನಗೆ ತಿಲಾಂಜಲಿ ಕೊಡಬೇಕಾಗುವದು" ಎಂದು ನುಡಿದು ತನ್ನ ಕಣ್ಣೀರಿನಿಂದ ಆ ಸಾಧ್ವಿಯು ಸೆರಗನ್ನು ತೊಯಿಸಿಬಿಟ್ಟಳು.

ದೇವಯಾನಿಯಾದರೂ ಮಮತಾಪರವಶಳಾಗಿ ಇಂದಿರೆಯನ್ನು ತೆಕ್ಕೆಯಲ್ಲಿ ಹಿಡಿದು ಅವಳ ಮುಂಗುರಳು ತೀಡುತ್ತ "ಇಂದಿರಕ್ಕಾ, ಬಾಲ್ಯದಾರಭ್ಯ ನೀನು ನನ್ನ ತೊಡೆಯಮೇಲಾಡಿ ಬೆಳೆದವಳು. ನಿನ್ನ ದುಃಖವನ್ನು ಕಂಡು ನನಗೆ ದುಃಖವೂ, ನಿನ್ನ ಸಂತೋಷವನ್ನು ಕಂಡು ನನಗೆ ಅತ್ಯಾನಂದವೂ ಆಗುವದು ಸಹಜವೇ. ನಾನು ಸರ್ವ ಪ್ರಯತ್ನಗಳಿಂದ ನಿನ್ನ ಮನೋರಥವು ಪೂರ್ಣವಾಗುವಂತೆ ಮಾಡುವೆನು. ಯೋಚಿಸಬೇಡ." ಎಂದು ಸಮಾಧಾನಗೊಳಿಸಿದಳು.

"ದೇವಯಾನಿಯಮ್ಮಾ, ರಮಾಕಾಂತರು ತಮ್ಮ ಮನೋಗತವನ್ನು ಹೇಳಲಿಕ್ಕೆ ಏನು ಕಾರಣವಾಯಿತು ?" ಎಂದು ಇಂದಿರೆಯು ಕೇಳಿದಳು.

"ರಮಾಕಾಂತನು ಕಮಲೆಯ ಕೂಡ ವಿವಾಹ ಮಾಡಿಕೊಳ್ಳುವವನಿರುವನೆಂದು ಜಯರಾಯನು ಇದೇ ಮನೆಯಲ್ಲಿ ಕುಳಿತು ಹೇಳಿದನಲ್ಲದೇ ? ಈ ಮಾತು ನನ್ನ ಮುಂದೆ ಹೇಳದೆ ಜಯರಾಯನ ಮುಂದೆ ಯಾಕೆ ಹೇಳಿದಿ ಎಂದು ನಾನು ರಮಾಕಾಂತನನ್ನು ಕೇಳಿದೆನು. ಅದಕ್ಕವನು ಕಮಲೆಯ ವಿವಾಹದ ಮಾತು ಸುಳ್ಳು, ತಾನು ಜಯರಾಯನ ಮುಂದೆ ಬೇರೊಂದು ಮಾತು ಹೇಳಿದೆನೆಂದು ಹೇಳಿದನು."

"ಆ ಬೇರೊಂದು ಮಾತು ಯಾವದು ? ದಯಮಾಡಿ ಹೇಳಿರಿ" ಎಂದು

ಇಂದಿರೆಯು ಕೇಳಿದಳು.

"ಇಂದಿರಾ, ಈ ಮಾತು ಹೇಳಿದರೆ ನಿನ್ನ ತಂದೆಗೆ ದೂಷಣ ಕೊಟ್ಟಂತಾಗುವದು. ಅದಕ್ಕಾಗಿ ಹೇಳಲಿಕ್ಕೆ ಮನಸ್ಸಾಗಲೊಲ್ಲದು."

"ನನ್ನ ತಂದೆಯಲ್ಲಿಯೇ ದೋಷವಿದ್ದ ಹೊರ್ತು ನೀವಾಗಲೀ ರಮಾಕಾಂತನಾಗಲೀ ವೃಥಾರೋಪ ಮಾಡುವವರಲ್ಲ. ಈ ಮಾತಿನಲ್ಲಿ ನನ್ನ ಸಂಬಂಧ ವಿದ್ದದ್ದಾದರೆ ಅವಶ್ಯವಾಗಿ ಹೇಳಿರಿ."

"ನಿನ್ನಿಷ್ಟದಂತಾಗಲಿ. ರಮಾಕಾಂತನು ಜಪಾನಕ್ಕೆ ಹೋಗುತ್ತೇನೆಂದು ನಿನ್ನ ತಂದೆಯ ಮುಂದೆ ಹೇಳಿದನು. ಏಕೆಂದು ಜಯರಾಯನು ಕೇಳಿದ್ದಕ್ಕೆ ತಾನು ನಿನ್ನ ಮೇಲೆ ಪ್ರೇಮವಿಟ್ಟದ್ದು ನಿನ್ನನ್ನು ಅನ್ಯರ ಹೆಂಡತಿಯಾಗುವದನ್ನು ನೋಡಲಾರದೆ ಜಪಾನಕ್ಕೆ ಹೊರಡುವೆನೆಂದು ಹೇಳಿದನಂತೆ."

ಇದನ್ನು ಕೇಳಿ ಇಂದಿರೆಯು ವ್ಯಸನಪೀಡಿತಳಾದಳು. ತಲೆನೋವಿನ ನೆವ ಮಾಡಿಕೊಂಡು ಅವಳು ಒಳಗಿನ ಕೋಣೆಯಲ್ಲಿ ಹೋಗಿ ಮಲಗಿಕೊಂಡಳು. ದೇವಯಾನಿಯು ಇಂದಿರೆಯ ಹತ್ತರ ಹೋಗಿ "ಇಂದಿರಾ, ತಲೆನೋವು ಹೆಚ್ಚಾಗಿದೆಯೇನಮ್ಮಾ ?" ಎಂದು ಅವಳ ತಲೆ ಹಿಡಿದು ನೋಡಿದಳು.

"ದೇವಯಾನಿಯಮ್ಮಾ, ನನ್ನ ಸಲುವಾಗಿ ಎಷ್ಟು ಜನರಿಗೆ ಕಷ್ಟವಾಯಿತು, ನೋಡಿರಿ! ರಾಜಸ್ಥಾನದ ಕೃಷ್ಣಾಕುಮಾರಿಯಂತೆ ನನಗೆ ಯಾರಾದರೂ ಕುಸುಂಬೀ ಕಾಡೇ ತಂದುಕೊಟ್ಟರೆ ಈಗಲೇ ಕುಡಿದು ನಿಶ್ಚಿಂತಳಾಗುವೆನು. ಈಗ್ಯೆ ನಾನು ಹೆಚ್ಚಿಗೆ ಮಾತಾಡುವಂತಿಲ್ಲ. ಚಿತ್ತಕ್ಕೆ ಸ್ವಲ್ಪ ಶಾಂತಿಯುಂಟಾದ ಮೇಲೆ ಮನೆಗೆ ಹೋಗುವೆನು. ನಾಳೆ ದಿನ ಮತ್ತೆ ಈ ವಿಷಯದ ಮೇಲೆ ಮಾತಾಡೋಣಂತೆ" ಎಂದು ಹೇಳಿ ಇಂದಿರೆಯು ಶಾಲು ಮುಸುಕಿಟ್ಟುಕೊಂಡು ಮಲಗಿದಳು.

ಇಂದಿರೆಯು ತನ್ನ ಮನೆಗೆ ಹೋದ ಬಳಿಕ ಭೋಜನ ತೀರಿಸಿಕೊಂಡು ರಮಾಕಾಂತನು ತನಗೆ ಕೊಟ್ಟ ಪುಸ್ತಕಗಳನ್ನೂ ಅವನು ತನಗೆ ಬರೆದ ಪತ್ರಗಳನ್ನೂ ಹುಡಿಕಿಟ್ಟುಕೊಳ್ಳುವ ಉದ್ಯೋಗದಲ್ಲಿ ತೊಡಗಿದಳು. ಇದಕ್ಕಾಗಿ ಅವಳು ತನ್ನ ಪೆಟ್ಟಿಗೆಗಳನ್ನೂ ಕಪಾಟಗಳನ್ನೂ ಕಿತ್ತಿಹಾಕಲಾರಂಭಿಸಿದಳು. ಶಾಲೆಯಲ್ಲಿದ್ದಾಗ್ಯೆ ತಾನು ಬರೆದ ನಿಬಂಧಗಳೂ, ತನ್ನ ಮಿತ್ರೆಯರು ಬರೆದ ಪತ್ರಗಳೂ ಪುಸ್ತಕಗಳಲ್ಲಿಯ ಅವತರಣಿಕೆಗಳೂ ಇವೇ ಹೊರಟವು. ರಮಾಕಾಂತನ ಪತ್ರ ಒಂದೂ ದೊರಕಲೊಲ್ಲದು. ಕಟ್ಟಕಡೆಗೆ 'ರಮಾಕಾಂತ'ನೆಂಬ ಹೆಸರಾಕ್ಷರಗಳನ್ನು ಕಂಡ

ಕೂಡಲೆ ಇಂದಿರೆಯ ಮಯ್ಯಲ್ಲಿ ರೋಮಾಂಚಗಳೆದ್ದವು. ಈ ಪತ್ರದ ಗಳಿಗೆ ಬಿಚ್ಚಬೇಕಾದರೆ ಅವಳ ಕೋಮಲಾಂಗುಲಿಗಳು ಥರಥರನೆ ನಡುಗಹತ್ತಿದವು. ಮುಕ್ತಾಫಲದಂತಿರುವ ಅಕ್ಷರಗಳೂ ಸಮಾನಾಂತರದಿಂದ ಬರೆದ ಸರಳವಾದ ವಳಿಗಳೂ ಲೇಖಕನ ಗುಣಾನುವಾದಗಳನ್ನು ಮಾಡುತ್ತವೆಯೋ ಏನೋ ಎಂಬಂತೆ ಕಾಣುತ್ತಿದ್ದವು, ಈ ಪತ್ರದಲ್ಲಿ ವಿಶೇಷ ತಾತ್ಪರ್ಯವಿದ್ದಿದ್ದಿಲ್ಲ. ಇಂದಿರೆಯ ಕೋರಿಕೆಯ ಮೇರೆಗೆ ಉತ್ತರರಾಮಚರಿತೆಯನ್ನು ಕಳುಹಿಸಿ ಕೊಟ್ಟಿರುವೆನೆಂದು ಅದರಲ್ಲಿ ಬರೆದಿತ್ತು. ಆದರೂ ಇಂದಿರೆಯು ಅದನ್ನು ಚುಂಬಿಸಿ ತನ್ನ ಕಯ್ಯಲ್ಲಿ ಹಿಡುಕೊಂಡು ಮತ್ತೆ ಶೋಧ ನಡಿಸಿದಳು. ಅಷ್ಟರಲ್ಲಿ ಕಡಕ್ಕನೆ ಬಾಕಿಲ ತೆರೆದು ಜಯರಾಯನು ಒಳಗೆ ಬಂದು ಇಂದಿರೆಯ ಉದ್ಯೋಗವನ್ನು ಕಂಡು, "ಇಂದಿರಾ, ಏನು ನಡಿಸಿರುವಿಯಮ್ಮಾ," ಎಂದು ಕೇಳಿದನು.

"ಏನೂ ಇಲ್ಲ. ಹಳೇ ಪತ್ರಗಳನ್ನೂ ಲೇಖಗಳನ್ನೂ ಆರಿಸಿಡಬೇಕೆಂದು ಮಾಡಿದ್ದೇನೆ."

"ನಿನ್ನ ಕೂಡ ತುಸು ಮಾತಾಡುವದಿತ್ತು. ನಿನ್ನ ಕೆಲಸ ಮುಗಿಯಲಿ ಹಿಂದಿನಿಂದ ಬರುವೆನು."

"ಅಂಥದೇನು ಮಹತ್ವದ ಕೆಲಸವಿಲ್ಲ. ಕೂತುಕೊಳ್ಳಿರಿ. ನನಗೂ ಒಂದು ಮಾತು ಹೇಳುವದದೆ, ಒಳ್ಳೇ ಸಮಯಕ್ಕೆ ಬಂದಿರುವಿರಿ."

"ಏನು ಹೇಳುವದದೆ ನಿನಗೆ?" ಎಂದು ಜಯರಾಯನು ಆಶ್ಚರ್ಯಭರಿತನಾಗಿ ಕೇಳಿದನು.

ಇಂದಿರೆಯು ಎದ್ದು ನಿಂತು ಮೇಜಿನ ಮೇಲೆ ತನ್ನ ಎಡಗಯ್ಯೂರಿ ಬಲಗಯ್ಯಿಂದ ಅಲ್ಲಿದ್ದ ಕಾಜಿನ ಗುಂಡು ತಿರಿಗಿಸುತ್ತ ಹೇಳಲಿಕ್ಕೆ ಧೈರ್ಯಸಾಲದೆ ಸುಮ್ಮನೆ ನಿಂತುಕೊಂಡಳು.

"ಇಂದಿರಾ, ಸುಮ್ಮಗೆ ಯಾಕೆ ನಿಂತುಬಿಟ್ಟೆ? ನಿನಗೇನು ಹೇಳುವದದೆ ಹೇಳಮ್ಮಾ."

"ಕೋಪಿಸಿಕೊಳ್ಳದಿದ್ದರೆ ಹೇಳುತ್ತೇನೆ." ಎಂದು ಮೋರೆ ಎತ್ತದೆ ಇಂದಿರೆಯು ಹೇಳಿದಳು.

"ನಾನು ನಿನ್ನ ಮೇಲೆ ಎಂದಾದರೂ ಕೋಪಿಸಿಕೊಂಡಿದ್ದರೆ ನೀನು ಹೀಗೆ ಅಂಜುತ್ತ ಮಾತಾಡಬೇಕು. ಏನಿರುವದನ್ನು ಅಂಜಿಕೆಯಿಲ್ಲದೆ ಹೇಳು."

"ನಾನು ಶ್ರೀಕಂಠನನ್ನು ಲಗ್ನಮಾಡಿಕೊಳ್ಳುವದಿಲ್ಲ."

ಈ ಮಾತು ಕೇಳಿ ಜಯರಾಯನು ಆಶ್ಚರ್ಯದಿಂದ ಮುಂದಕ್ಕೆ ಸರಿದು ಕುಳಿತು "ಇಂದಿರಾ ನೀನೇನು ನಗೆಯಾಡುವಿಯೋ ಇಲ್ಲವೆ ನೀನು ಹೇಳುವದು ನಿಜವೊ ?" ಎಂದು ಕೇಳಿದನು.

"ಇಂಥ ಮಾತುಗಳಲ್ಲಿ ನಗೆಯಾಡಬಹುದೇ ? ನಾನು ಹೇಳುವದು ನಿಜವೇ ಇರುವದು."

"ಶ್ರೀಕಂಠನಿಗೊಪ್ಪಿಗೆ ಕೊಟ್ಟು ಈಗ ಹೀಗೆ ಮಾತಾಡುವದು ಸಭ್ಯರಿಗುಚಿತವಾದದ್ದೇನು ?" ಎಂದು ಜಯರಾಯನು ಸಿಟ್ಟಿನಿಂದ ಕೇಳಿದನು.

"ಶ್ರೀಕಂಠನ ಮೇಲೆ ನನ್ನ ಪ್ರೀತಿಯೇ ಇರುವದಿಲ್ಲ. ಕೆಲವರು ಬುದ್ಧ್ಯಾ ನನಗೆ ತಪ್ಪು ತಿಳುವಳಿಕೆ ಕೊಟ್ಟದ್ದರಿಂದ ನಾನು ಶ್ರೀಕಂಠನನ್ನು ಲಗ್ನಮಾಡಿಕೊಳ್ಳಲಿಕ್ಕೆ ಒಪ್ಪಿಕೊಂಡೆನು. ಮೋಸಕ್ಕೊಳಗಾಗಿ ಕೊಟ್ಟಂಥ ಒಪ್ಪಿಗೆಯನ್ನು ಮುರಿದರೆ ದೋಷವಿಲ್ಲೆಂದು ನಂಬುತ್ತೇನೆ."

"ಶ್ರೀಕಂಠನ ಮೇಲೆ ನಿನ್ನ ಪ್ರೀತಿಯಿರುವದಿಲ್ಲೆಂಬುದನ್ನು ನಾನೂ ಶ್ರೀಕಂಠನೂ ಕಂಡುಕೊಂಡಿರುವೆವು. ನಮ್ಮ ಹಿಂದೂ ಸಮಾಜದಲ್ಲಿ ಪ್ರೀತಿವಿವಾಹಗಳಾದದ್ದನ್ನು ಯಾರು ಕಂಡಿರುವರು ? ನಿಕಟಸಂಬಂಧದಿಂದ ಗಂಡಹೆಂಡರು ಒಬ್ಬರನ್ನೊಬ್ಬರು ಪ್ರೀತಿಸುವದುಂಟು. ಮುಂದೆ ನೀವಾದರೂ ಪರಸ್ಪರರನ್ನು ಚನ್ನಾಗಿ ಪ್ರೀತಿಸಲೆಳಸುವಿರಿ."

"ಅನ್ಯರಲ್ಲಿ ಮನಸ್ಸು ಆಸಕ್ತವಾಗದಿದ್ದ ವಧುವಿಗೆ ಗಂಡನ ಮೇಲೆ ಪ್ರೀತಿ ಹುಟ್ಟುವ ಸಂಭವವಿದೆ. ಆದರೆ ನನ್ನ ಮನಸ್ಸು ಇನ್ನೊಬ್ಬರಲ್ಲಿ ತೊಡಕಿರುವ ಕಾರಣ ನಾನು ಅವರನ್ನು ಬಿಟ್ಟು ಅನ್ಯರನ್ನು ವರಿಸುವದಿಲ್ಲ. ಶ್ರೀಕಂಠನನ್ನಂತೂ ನಾನು ಸೇರುವದೇ ಇಲ್ಲ."

ಶ್ರೀಕಂಠನು ನಿನ್ನಿಚ್ಛೆಯಂತೇ ವರ್ತಿಸುವನು. ನಿನ್ನನ್ನು ಆದರದಿಂದ ಸತ್ಕರಿಸುವನು. ನೀನು ಅವನನ್ನು ಪ್ರೀತಿಸದಿದ್ದರೂ ಚಿಂತೆಯಿಲ್ಲ. ನಿನ್ನಂಥ ಹೆಂಡತಿಯ ಕೂಡ ಹೇಗಾದರೂ ಸೌಖ್ಯದಿಂದಿರುವೆನೆಂದು ಅವನು ನಂಬುತ್ತಾನೆ." ಎಂದು ಜಯರಾಯನು ಹೇಳಿಕೊಂಡನು.

"ಅಪ್ಪಾ, ಇಂಥ ವಿಚಾರಗಳಲ್ಲೇನೂ ಅರ್ಥವಿಲ್ಲ. ಕೇವಲ ಶ್ರೀಕಂಠನ ಸುಖಕ್ಕಾಗಿ ನನ್ನ ತಾಯಿಯು ನನ್ನನ್ನು ಹಡೆದಿಟ್ಟಿಲ್ಲ. ನನ್ನ ಸುಖವನ್ನು ನಾನು ಕಂಡುಕೊಳ್ಳತಕ್ಕದ್ದಲ್ಲೇನು ? ನಾನು ಶ್ರೀಕಂಠನನ್ನು ಎಂದಿಗೂ ಲಗ್ನಮಾಡಿಕೊಳ್ಳುವದಿಲ್ಲ."

"ಇಂದಿರೇ, ಚನ್ನಾಗಿ ವಿಚಾರ ಮಾಡು. ಶ್ರೀಕಂಠನು ದೊಡ್ಡ ಮನೆತನದವನು. ನಾಲ್ಕು ಜನ ಸಂಭಾವಿತರ ಸಮಕ್ಷ ಲಗ್ನನಿಶ್ಚಯ ಮಾಡಿರುತ್ತೇವೆ. ಈಗ ನಾವು ಮಾತು ಮುರಿಯುಹೋದರೆ ಜನರು ನನ್ನ ಹಣೆಗೆ ಗೋಮಯ ತಿಕ್ಕುವರು. ನೀನು ಶ್ರೀಕಂಠನನ್ನು ಒಲ್ಲದಿದ್ದರೆ ಮುಂಚಿತವಾಗಿಯೇ ಹೇಳಬೇಕಾಗಿತ್ತು. ಅಂದರೆ ನಾನು ಈ ಉಸಾಬರಿಗೇ ಬೀಳುತ್ತಿದ್ದಿಲ್ಲ." ಎಂದು ಜಯರಾಯನಂದನು.

"ನೀವು ಸಾವಿರ ಹೇಳಿದರೂ ನಾನು ಶ್ರೀಕಂಠನನ್ನು ವರಿಸುವದಿಲ್ಲ."

"ಒಮ್ಮಿಂದೊಮ್ಮೆಲೆ ಹೀಗೇಕೆ ಅನ್ನಲಾರಂಭಿಸಿದಿ ಇಂದಿರಾ!" ಎಂದು ಜಯರಾಯನು ವಿನಯೋಕ್ತಿಯಿಂದ ಕೇಳಿದನು.

"ಏಕೆಂದರೆ! ನನ್ನ ಪ್ರೀತಿಯು ನನಗನುರೂಪನಾದ ಪುರುಷನಲ್ಲಿ ಆಸಕ್ತವಾಗಿರುವದು. ಲೋಹಚುಂಬಕವು ಸೂಜಿಯನ್ನು ಬಲಾತ್ಕಾರದಿಂದೆಳಕೊಳ್ಳುವಂತೆ ರಮಾಕಾಂತರು ನನ್ನ ಮನಸ್ಸು ಸೆಳಕೊಂಡುಬಿಟ್ಟಿರುವರು.

"ರಮಾಕಾಂತನಲ್ಲಿ ನಿನ್ನ ಪ್ರೀತಿಯು ನಟ್ಟಿರುವದೇನು? ನಿನ್ನನ್ನು ನಾನು ರಮಾಕಾಂತನಿಗೆ ಕೊಡುವದೇ ಇಲ್ಲ." ಎಂದು ಜಯರಾಯನು ನಿಷ್ಠುರ ಉತ್ತರ ಕೊಟ್ಟನು.

"ಚಿಂತಿಲ್ಲ. ಶ್ರೀಕಂಠನ ಕೂಡ ನನ್ನ ಲಗ್ನವಾಗದಿದ್ದರಾಯಿತು. ನಾನೂ ದೇವಯಾನಿಯಂತೆ ಇರುವೆನಂತೆ!"

ದೇವಯಾನಿಯ ಹೆಸರು ಕಿವಿಗೆ ಬಿದ್ದ ಕೂಡಲೆ ಜಯರಾಯನು ನಿಃಸತ್ತ್ವನಾದಂತೆ ತನ್ನ ಕೋಚದಲ್ಲಿ ಆನಿಸಿಕೊಂಡು ಕುಳಿತು, ಏನೂ ಮಾತಾಡಲಾರದೆ ಸುಮ್ಮನಿದ್ದನು. "ಸರ್ವಸಾಕ್ಷಿಮಾನ್ ಪ್ರಭೋ, ಇಪ್ಪತ್ತೈದು ವರ್ಷಗಳಿಗಿಂತ ಮುಂಚೆ ನಾನು ಮಾಡಿದ ಅಪರಾಧದ ಫಲವನ್ನು ನನಗೀಗ ನೀನು ಉಣಿಸುವಿಯಾ? ದೇವಯಾನೀ, ನೀನು ಸಾಧಿಸಿಕೊಂಡಿಯಾ! ಈ ಕಯ್ಯಿಂದ ಮಾಡಿದ್ದು ಈ ಕಯ್ಯಿಂದ ಉಣಬೇಕಲ್ಲ! ಉಪಾಯವೇನಿದೆ?" ಎಂದು ಜಯರಾಯನು ತನ್ನ ಮನಸ್ಸಿನಲ್ಲಿಯೇ ಮಾತಾಡಿ ಕಣ್ಣು ಮುಚ್ಚಿಕೊಂಡು ಧೇನಿಸಹತ್ತಿದನು. ತುಸು ಹೊತ್ತಿನ ಮೇಲೆ—

"ಇಂದಿರಾ, ನಿನ್ನ ಕಯ್ಯಲ್ಲಿಯ ಕಾಗದವೇನದು? ಎಂದು ಜಯರಾಯನು ಕೇಳಲು, ಇಂದಿರೆಯು ಏನೂ ಉತ್ತರ ಕೊಡದೆ ತನ್ನ ಕಯ್ಯಲ್ಲಿದ್ದ ರಮಾಕಾಂತನ ಪತ್ರವನ್ನು ಜಯರಾಯನ ಸ್ವಾಧೀನ ಮಾಡಿದಳು.

"ರಮಾಕಾಂತ ದೇಸಾಯಿ !" ಈ ಅಡ್ಡ ಹೆಸರಿನ ದೇಸಾಯರೇನು ಬರೆದಿರುವರು ?" ಎಂದು ಜಯರಾಯನು ಆ ಪತ್ರವನ್ನು ಓದಿ "ಇದರಲ್ಲಿ ವಿಶೇಷವೇನೂ ಇಲ್ಲ, ಇಷ್ಟು ಆದರದಿಂದ ಅದನ್ನು ಏಕೆ ಹಿಡಿದುಕೊಂಡಿದ್ದಿ ?" ಎಂದು ಕೇಳಿದನು.

"ಅವರಲ್ಲಿ ಬರೆದ ಪುಸ್ತಕವನ್ನು ತಿರಿಗಿ ಕೊಡಬೇಕಾಗಿದೆ." ಎಂದು ಇಂದಿರೆಯು ಹೇಳಿದಳು.

"ನೀನೂ ಅವನೂ ಪತ್ರವ್ಯವಹಾರವನ್ನು ಯಾವಾಗಲೂ ನಡಿಸಿರುವಿರೆಂದು ಕಾಣುತ್ತದೆ."

"ನಾನಂತೂ ಅವರಿಗೆ ಬರೆದೇ ಇಲ್ಲ. ಅವರು ಬರೆದಿದ್ದಾದರೂ ಇಂಥವೇ ಒಂದೆರಡು ಪತ್ರಗಳಿರಬಹುದು."

"ಇಂದಿರಾ, ಹೀಗಿದ್ದು ನೀನು ರಮಾಕಾಂತನಲ್ಲಿ ಆಸಕ್ತ ಮನಸ್ಸಿನವಳಾದದ್ದು ಹೇಗೆ ?"

"ಹೇಗೆಂದು ಹೇಳಲಿ ? ವ್ಯತಿಷಜತಿ ಪದಾರ್ಥಾನ್ ಆಂತರಃ ಕೋಽಪಿ ಹೇತುಃ ! ನ ಖಲು ಬಹಿರುಪಾಧೀನ್ ಪ್ರೀತಯಃ ಸಂಶ್ರಯಂತೇ."

"ಇಂದಿರೇ, ನಿನ್ನ ಪಾಂಡಿತ್ಯ ನನಗೆ ಬೇಕಾಗಿಲ್ಲ. ನನಗೆ ಸಂಸ್ಕೃತವೂ ಚನ್ನಾಗಿ ಬರುವದಿಲ್ಲ. ಸೂಸೂತ್ರವಾಗಿ ಕನ್ನಡ ಮಾತಾಡಬಾರದೆ !" ಎಂದು ಜಯರಾಯನು ತಿರಸ್ಕಾರದಿಂದ ನುಡಿದನು.

ಇಂದಿರೆಯು ಬಾಯಿಯಲ್ಲಿಯೇ ನಕ್ಕು "ಪ್ರೀತಿಗೆ ಹೊರಗಿನ ಉಪಚಾರಗಳು ಬೇಕಾಗುವದಿಲ್ಲ. ಸೂಜಿಗಲ್ಲು ಹಗ್ಗ ಹಾಕಿ ಸೂಜಿಯನ್ನು ಜಗ್ಗುವದೇನು ?" ಎಂದು ಹೇಳಿದಳು.

"ಅವ್ವಾ, ಕಯ್ಗೆ ಬಂದಂತೆ ದುಡ್ಡು ಸೂರೆ ಮಾಡಿ ನಿನಗಿದನ್ನೆಲ್ಲ ನಾನೇ ಕಲಿಸಿದೆನು. ನಿನ್ನ ಕಡೆಗೇನಿದ ?" ಎಂದು ಜಯರಾಯನು ಅಕ್ಕಸದಿಂದ ನುಡಿದನು.

ತುಸು ಹೊತ್ತು ಈರ್ವರೂ ಏನೂ ಮಾತಾಡದೆ ಸುಮ್ಮನೆ ಕುಳಿತುಕೊಂಡರು. ಕಡೆಗೆ ಜಯರಾಯನು ಮತ್ತೆ ಮಾತಾಡಿದ್ದೇನಂದರೆ :

"ಇಂದಿರಾ, ಇಷ್ಟಾಗಿ ನೀನು ಅಸ್ಥಾನದಲ್ಲಿ ಪ್ರೀತಿಯನ್ನಿಟ್ಟೆಯಲ್ಲ! ಇದರಿಂದ ನಿನಗೆ ಸುಖವಾಗುವದೆಂದು ನೀನು ತಿಳಿಯುತ್ತೀ ಏನು ? ರಮಾಕಾಂತನು ನಿನ್ನಲ್ಲಿ ಆಸಕ್ತನಾಗಿದ್ದರೆ ಅದೊಂದು ಪಥವು. ಆ ತರುಣನು ಕಮಲೆಯ ಪಾಣಿಗ್ರಹಣಕ್ಕಾಗಿ ಹಾತೊರೆಯುತ್ತಿರುವನು. ಇದಕ್ಕೇನನ್ನುವಿ ?"

"ನಾವು ಕಾಶಿಯಲ್ಲಿದ್ದಾಗ್ಗೆ ರಮಾಕಾಂತರು ನಿಮಗೊಂದು ಪತ್ರ ಬರೆದಿದ್ದರು, ಅದರಲ್ಲಿ ತಾವು ಕಮಲೆಯನ್ನು ಲಗ್ನ ಮಾಡಿಕೊಳ್ಳುವದು ಸುಳ್ಳೆಂದು ತಿಳಿಸಿರುವರಲ್ಲ!"

ಜಯರಾಯನು ಕ್ಷಣ ಹೊತ್ತು ಯೋಚಿಸಿ "ಇಂದಿರಾ, ಈ ಮೂರ್ಖತನದ ವಿಚಾರವನ್ನು ಬಿಟ್ಟುಬಿಡು. ರಮಾಕಾಂತನ ಪ್ರೀತಿಯು ಕಮಲೆಯ ಮೇಲಿಲ್ಲದಿದ್ದರೆ ನಿನ್ನ ಮೇಲಿರುವದೆಂದು ಸಿದ್ಧಾಂತವಲ್ಲ. ವ್ಯರ್ಥವಾಗಿ ಮನಸ್ತಾಪ ಮಾಡಿಕೊಳ್ಳಬೇಡ. ಇದೇ ಮಾರ್ಗಶೀರ್ಷದಲ್ಲಿಯೇ ನಿನ್ನ ಕಲ್ಯಾಣೋತ್ಸವವನ್ನು ಬೆಳೆಸಿಬಿಡುವೆನು."

"ಅಪ್ಪಾ, ಈ ಮಾತು ತೆಗಿಯಲೇ ಬೇಡರಿ. ರಮಾಕಾಂತರನ್ನು ನಾನು ಮನಸಾ ಪತಿಗಳೆಂದು ಭಾವಿಸಿಕೊಂಡಿರುವೆನು. ಅವರು ನನ್ನ ಪಾಣಿಗ್ರಹಣ ಮಾಡಲೊಪ್ಪದಿದ್ದರೆ ನಾನು ಆಮರಣಾಂತ ವ್ರತಸ್ಥಳಾಗಿರುವೆನು." ಎಂದು ಇಂದಿರೆಯು ತನ್ನ ನಿಶ್ಚಯವನ್ನು ಸ್ಪಷ್ಟೋಕ್ತಿಗಳಿಂದ ತಿಳಿಸಿಬಿಟ್ಟಳು,

ಇಷ್ಟರಲ್ಲಿ ನಂಜುಂಡನು ಬಂದು "ಹೊರಗೆ ಪೋಲೀಸ ಜಮಾದಾರರು ಬಂದಿರುವರು. ಅವರಿಗೆ ಇಂದಿರಾಬಾಯಿವರನ್ನೇನೋ ಕೇಳುವದದೆಯಂತೆ." ಎಂದು ಹೇಳಿದನು.

"ನನ್ನನ್ನೇನು ಕೇಳುವನು? ಕರೆ ಅವನ್ನಲ್ಲಿ" ಎಂದು ಇಂದಿರೆಯು ಗಾಬರಿಯಾಗಿ ಹೇಳಿದಳು.

ಜಮಾದಾರನು ಬಂದು 'ರಾಮ ರಾಮ' ಮಾಡಿದನು. "ಯಾರಪ್ಪಾ ನೀನು; ಏನು ನಿಮಿತ್ತ ಬಂದಿರುವಿ?" ಎಂದು ಜಯರಾಯನು ಕೇಳಿದನು.

"ನಾನು ಇಲ್ಲಿಯ ಠಾಣ್ಯದ ಜಮಾದಾರನು, ನನ್ನ ಹೆಸರು ರಘೂಜಿ ಪವಾರ. ಇಂದಿರಾಬಾಯಿವರು ತಮ್ಮ ಚಿರಂಜೀವಿಯರಲ್ಲವೇ? ನದಿಯಲ್ಲಿ ಒಂದು ಹೆಣ ಸಿಕ್ಕದೆ ಅದರ ಗುರುತು ಅವರು ಹಿಡಿಯಬಲ್ಲರೋ ಹೇಗೆಂದು ಕೇಳುವದಕ್ಕಾಗಿ ಬಂದಿರುವೆನು."

"ಹೆಣ ಸಿಕ್ಕದೆ!! ಯಾರ ಹೆಣ? ಗುರುತು ಹಿಡಿಯಲಿಕ್ಕೆ ಇಂದಿರಾಬಾಯಿವರೇ ಏಕೆ ಬೇಕು; ಮತ್ಯಾರಾದರೂ ಹಿಡಿದರೆ ಆಗದೇನು?" ಎಂದು ಜಯರಾಯನು ಕೇಳಿದನು.

"ಆದೀತು. ಆದರೂ ಇನ್ನೊಂದು ವಿಶೇಷವಾದ ಸಂಗತಿಗಾಗಿ ಅವರನ್ನು ವಿಚಾರಿಸತಕ್ಕದ್ದಿದೆ." ಎಂದು ಹೇಳಿ ರಘೂಜಿಯು ತನ್ನ ಬಕ್ಕಣದೊಳಗಿಂದೊಂದು

ಪತ್ರ ತೆಗೆದು ಇಂದಿರೆಯ ಕಯ್ಯಲ್ಲಿ ಕೊಟ್ಟನು.

ಈ ಪತ್ರಕ್ಕೆ ನೀರು ಹತ್ತಿ ಅಕ್ಷರಗಳ ಮಸಿಯೊಡಿದಿತ್ತು. ಇಂದಿರೆಯು ಇದೇನಿರುವದೆಂದು ಗಾಬರಿಯಾಗಿ ಮೆಲ್ಲನೆ ಆ ಪತ್ರ ತೆರೆದು ನೋಡಲು ಹಸ್ತಾಕ್ಷರಗಳು ಅವಳ ಪರಿಚಯದ್ದವೇ ಇದ್ದವು.

"ಈ ಪತ್ರವು ನಿಮಗೆಲ್ಲಿ ಸಿಕ್ಕಿತು ?" ಎಂದು ಗದ್ಗದಕಂಠೆಯಾಗಿ ಕೇಳಿದಳು.

"ಪತ್ರವು ನಿಮಗೆ ಬರೆದದ್ದು ಅಹುದೋ ?" ಎಂದು ಜಮಾದಾರನು ಕೇಳಿದನು.

"ಪತ್ರ ಯಾರದು ಇಂದಿರಾ ?" ಎಂದು ಜಯರಾಯನು ಕುತೂಹಲದಿಂದ ಕೇಳಿದನು.

"ಇದು ರಮಾಕಾಂತರು ನನಗೆ ಬರೆದ ಪತ್ರವು ; ಜಮಾದಾರ ನಿಮಗಿದೆಲ್ಲಿ ಸಿಕ್ಕಿತು ಬೇಗ ಹೇಳಿರಿ" ಎಂದು ಇಂದಿರೆಯು ಕೇಳಿದಳು.

ಜಯರಾಯನು ಇಂದಿರೆಯ ಕಯ್ಯಹಿಡಿದು "ಇಂದಿರಾ, ಇದರಲ್ಲಿ ಏನಾದರೂ ಹೆಚ್ಚುಕಡಿಮೆಯಿದ್ದರೆ ನೀನು ಈ ಪೋಲೀಸನೆದುರಿಗೆ ನಿನ್ನ ಮನಸ್ತಾಪವನ್ನು ಹೊರಗೆಡವಕೂಡದು" ಎಂದು ಅವಳ ಕಿವಿಯಲ್ಲಿ ಹೇಳಿದನು,

"ಅಮ್ಮನವರೇ, ಈ ಪತ್ರ ಬೆರೆದವರು ತಮಗೆ ಆಪ್ತರಿದ್ದಂತೆ ತೋರುತ್ತದೆ. ಪ್ರಸಂಗವು ಕಠಿಣವಿರುವದು ಸತ್ಯ ಆದರೂ ಕೆಟ್ಟದ್ದೇ ಆಗಿದೆ ಎಂದು ಈಗಲೇ ಹೇಳಲಾಗದು. ಕಾವೇರಿಯಲ್ಲಿ ಒಂದು ಹೆಣ ಸಿಕ್ಕದೆ. ಅದರ ಮಯ್ಮೇಲಿನ ಕೋಟಿನ ಬಕ್ಕಣದಲ್ಲಿ ಈ ಪತ್ರವಿತ್ತು." ಎಂದು ಜಮಾದಾರನು ಹೇಳಿದನು.

ಇದನ್ನು ಕೇಳಿ ಇಂದಿರೆಯು "ಅಯ್ಯೋ !!" ಎಂದು ಚೀರಿದಳು.

"ಅಮ್ಮಾ, ಶೋಕ ಮಾಡಬೇಡಿರಿ ಮೃತಮನುಷ್ಯನು ನಿಮ್ಮ ಸ್ನೇಹಿತನೇ ಎಂದು ನಿಶ್ಚಯವಾಗಿ ಹೇಳಕೂಡದು. ನೀವು ದಯಮಾಡಿ ಚಾವಡಿಯವರೆಗೆ ಬಂದು ನೋಡಿಕೊಂಡರೆ ಸಂಶಯ ದೂರಾಗಬಹುದು."

"ಈ ಪತ್ರ ಬರೆದವನು ನಮ್ಮ ಸ್ನೇಹಿತನಹುದು. ಅದ್ದರಿಂದ ಇಂದಿರಾಬಾಯಿಯವರೇ ಬಂದು ಗುರುತು ಹಿಡಿಯಬೇಕೆಂದು ಅವಶ್ಯವಿಲ್ಲ, ನಾನು ಹಿಡಿಯುತ್ತೇನೆ ನಡೆಯಿರಿ."

"ಹಾಗೇ ಆಗಲಿ. ಇಂದಿರಾಬಾಯಿಯವರೇ, ನಾನು ತಮಗೆ ತೊಂದರೆ ಕೊಡುವದಿಲ್ಲ. ಜಯರಾಯರೇ ನೀವು ಈಗಲೇ ಬರುವಿರಷ್ಟೇ ?" ಎಂದು

ಕೇಳಿ ಜವಾದಾರನು ಹೊರಟುಹೋದನು.

"ಇಂದಿರಾ, ಆ ಪತ್ರ ತಾ. ಏನು ಬರೆದದೆ ನೋಡೋಣ?" ಎಂದು ಜಯರಾಯನು ಕೇಳಿದನು.

"ಇಂದಿರೆಯು ಶೋಕಪರವಶಳಾಗಿ ಕಣ್ಣಲ್ಲಿ ನೀರು ಸುರಿಸುತ್ತ ಆ ಪತ್ರವನ್ನು ತನ್ನ ತಂದೆಯ ಮುಂದೆ ಚೆಲ್ಲಿದಳು. ಇಲ್ಲಿ ನಾವು ಅದರ ಅವತರಣಿಕೆಯನ್ನು ಕೊಡುತ್ತೇವೆ :

ಇಂದಿರಾಬಾಯಿ,

ನಾನು ಜಪಾನಕ್ಕೆ ಹೊರಟು ಹೋಗುವದು ನಿಶ್ಚಯ ಮಾಡಿದ್ದೇನೆ. ಆದರೆ ಹೋಗುವದಕ್ಕೆ ಮುಂಚಿತವಾಗಿ ನಿಮ್ಮನ್ನು ಕಂಡು ಕೆಲವು ಮಾತುಗಳನ್ನು ನಿಮಗೆ ನಿವೇದಿಸಬೇಕೆಂದು ನನ್ನ ಇಚ್ಛೆಯಿರುವದು. ಬಹಳ ಹೇಳುವದೂ ಇಲ್ಲ. ಪತ್ತೇ ನಿಮಿಷ ಸಾಕು. ನಾನು ಹೇಳುವದು ನಿಮ್ಮೊಬ್ಬರ ಕಿವಿ ಮಾತ್ರ ಕೇಳತಕ್ಕದ್ದಿರುವದರಿಂದ ಈ ಪತ್ರ ಬರೆದಿರುವೆನು. ಈ ಪ್ರಾರ್ಥನೆಯನ್ನು ನೀವು ಧಿಕ್ಕರಿಸಲಿಕ್ಕಿಲ್ಲೆಂದು ನಾನು ಪೂರಾ ನಂಬಿರುವೆನು.

ರಮಾಕಾಂತ ದೇಸಾಯಿ

"ಇಂದಿರಾ, ಈ ಪತ್ರ ಬರುವದೆಂದು ನಿನಗೆ ತಿಳಿದಿತ್ತೇನು?"

"ನನಗೇನು ಮಣ್ಣು ಗೊತ್ತು. ಅಪ್ಪಾ, ಘಾತವಾಯಿತು. ವಿವಾಹವಾಗುವದಕ್ಕಿಂತ ಪೂರ್ವದಲ್ಲಿಯೇ ನಾನು ವಿಧವೆಯಾದೆನಲ್ಲ!" ಎಂದು ಇಂದಿರೆಯು ದೊಡ್ಡ ದನಿ ತೆಗೆದು ಅಳಹತ್ತಿದಳು.

"ಅಮ್ಮಣ್ಣೀ, ಏನು ಮಾಡುವದದೆ! ದೇವರ ಮನಸ್ಸಿಗೆ ಹೀಗೇ ಬಂದಿತು." ಎಂದು ಜಯರಾಯನಂದನು.

"ಅಪ್ಪಾ, ರಮಾಕಾಂತರು ನನ್ನ ಭೆಟ್ಟಿಗಾಗಿ ಜೀವ ಕೊಟ್ಟರು. ನಾನು ಅವರ ಮುಖವನ್ನಾದರೂ ನೋಡಿ ಬರುವೆನು. ನನ್ನನ್ನೂ ಚಾವಡಿಗೆ ಕರಕೊಂಡು ಹೋಗಿರಿ. ಈ ಮಂದಭಾಗಿನಿಯ ಕಡೆಯ ಪ್ರಾರ್ಥನೆಯನ್ನು ದಯಮಾಡಿ ಮನ್ನಿಸಿರಿ." ಎಂದು ಕಪೋಲಗಳಿಂದ ಕಂಣೀರು ಬಸಿಯುವ ಮುಖವನ್ನೆತ್ತಿ ಕೇಳಿಕೊಂಡಳು.

ಜಯರಾಯನು ಎಷ್ಟಾದರೂ ಮನುಷ್ಯನೇ, ಇಂದಿರೆಯ ಅವಸ್ಥೆಯನ್ನು ನೋಡಿ ಅವನಿಗೆ ಅತಿಶಯವಾದ ದುಃಖವಾಯಿತು. ಅವಳನ್ನು ತಬ್ಬಿಕೊಂಡು "ಅಕ್ಕಾ, ಅಳಬೇಡ ಕಂಡಿಯಾ, ನಿನ್ನನ್ನು ಚಾವಡಿಗೆ ಕರೆದೊಯ್ಯುವೆನು. ನೀನು ಮುಖವನ್ನೊರಿಸಿಕೊ. ಮೃತ ಮನುಷ್ಯನು ರಮಾಕಾಂತನೇ ಎಂದು ಕಾಣದೆ, ಹಾಗೆ ಊಹಿಸಕೂಡದು." ಎಂದು ಹೇಳಿ ಜಯರಾಯನು ತನ್ನ ರುಮಾಲು ಸುತ್ತಿಕೊಂಡು ಚಾವಡಿಗೆ ಹೋಗಲಿಕ್ಕೆ ಸಿದ್ಧನಾದನು.

ಜಯರಾಯನೂ ಇಂದಿರೆಯೂ ಪೋಲೀಸ ಚಾವಡಿಗೆ ಬಂದ ಬಳಿಕ ಜಮಾದಾರನು ಇವರನ್ನು ಶವವಿದ್ದ ಸ್ಥಳಕ್ಕೆ ಕರಕೊಂಡು ಹೋದನು. ಒಂದು ಹೊರಸಿನ ಮೇಲೆ ಕಂಬಳಿ ಮುಚ್ಚಿ ಶವವನ್ನಿಟ್ಟಿದ್ದರು. ಇಂದಿರೆಯ ಎದೆಯು ಧಕ್ಕಧಕ್ಕ ಎಂದು ಹಾರಹತ್ತಿತು. ತನ್ನ ಪ್ರಾಣಕಾಂತನ ಮುಖವನ್ನು ಒಂದಾವರ್ತಿಯಾದರೂ ಕಾಣಬೇಕೆಂಬ ನಿಶ್ಚಯದಲ್ಲಿದ್ದ ಕಾರಣ ಹೆಣ ಕಂಡು ಅವಳಿಗೆ ಹೆದರಿಕೆ ಬರಲಿಲ್ಲ. ಒಬ್ಬ ಜವಾನನು ಬಂದು ಕಂಬಳಿ ತೆಗೆದು ಶವದ ಮುಖ ಕಾಣುವಂತೆ ಮಾಡಿದನು. "ಅಕೋ! ಆ ಶವವು ರಮಾಕಾಂತನದಲ್ಲ!!" ಹಿಂಡಿ ಹಿಪ್ಪಿಯಾದಂತಿದ್ದ ಇಂದಿರೆಯ ಮುಖವು ಆನಂದದಿಂದ ಕಾಂತಿಮಯವಾಯಿತು. "ಅಪ್ಪಾ, ಇವರು ರಮಾಕಾಂತರಲ್ಲ. ಈ ಹೆಣವು ನಟೇಶನದಂತೆ ಕಾಣುತ್ತದೆ, ಚನ್ನಾಗಿ ನೋಡಿರಿ. ನಾನಿನ್ನು ಅದರ ಸಮೀಪಕ್ಕೆ ಹೋಗುವದಿಲ್ಲ."

ಜಯರಾಯನು ಹೆಣದ ಮುಖವನ್ನು ಚನ್ನಾಗಿ ನೋಡಿ ಸತ್ತವನು ನಟೇಶನೇ ಎಂದು ಹೇಳಿದನು.

"ನಟೇಶನಹುದೇ! ಪಾಪ ಸಾವಿತ್ರಮ್ಮನ ವಂಶವೇ ನಿಂತುಹೋಯಿತು," ಎಂದು ಇಂದಿರೆಯೆಂದಳು.

ತಂದೆ ಮಕ್ಕಳಿಬ್ಬರೂ ರಥದಲ್ಲಿ ಕುಳಿತುಕೊಂಡು ಮನೆಗೆ ಬಂದರು. ಇಂದಿರೆಗೆ ಪರಮಾನಂದವಾಗಿತ್ತು. ಜಯರಾಯನ ಮಾತ್ರ ರಮಾಕಾಂತನು ಏಕೆ ಬರಲಿಲ್ಲೆಂದು ಅವನ ಮೇಲೂ, ಆನಂದದಿದ್ದುದಕ್ಕೆ ಇಂದಿರೆಯ ಮೇಲೂ ಕೋಪಿಸಿಕೊಂಡು ಸಿಡಿಸಿಡಿ ಮಾಡುತ್ತ ಕುಳಿತುಕೊಂಡನು.

"ಅಪ್ಪಾ, ರಮಾಕಾಂತರ ಪತ್ರವು ನಟೇಶನ ಬಕ್ಕಣದಲ್ಲಿ ಹೇಗೆ ಬಂದಿರಬಹುದು?"

"ಪೋಲೀಸರ ಶೋಧ ನೋಡುವಾಗ ರಮಾಕಾಂತನೂ ನಟೇಶನೂ ಜೊತೆಯಾಗಿ ಪೂಲಿನ ಮೇಲಿಂದ ಶ್ರೀರಂಗಪಟ್ಟಣಕ್ಕೆ ಬರುತ್ತಿದ್ದರೆಂದೂ ಅವರಿಬ್ಬರೂ

ತೆಕ್ಕೆಬಿದ್ದು ಪ್ರವಾಹದಲ್ಲಿ ಬಿದ್ದರೆಂದೂ ತಿಳಿಯುತ್ತದೆ. ನಟೇಶನ ಹೆಣ ಸಿಕ್ಕಿತು, ರಮಾಕಾಂತನ ಶವದ ಶೋಧವಿನ್ನೂ ಹತ್ತಿಲ್ಲ." ಎಂದು ಜಯರಾಯನು ಮತ್ತೆ ತನ್ನ ಕಾರಸ್ಥಾನದ ಮಾತಿಗೆ ಹತ್ತಿದನು.

"ರಮಾಕಾಂತನು ಈಸಲಿಕ್ಕೆ ಗಟ್ಟಿಗರೆಂದು ನಟೇಶನೇ ಹೇಳುತ್ತಿದ್ದನು. ಅವರು ಈಸಿ ಪಾರಾಗಿರುವರೆಂದು ನಾನು ನಂಬುತ್ತೇನೆ."

"ಅವನ ಆಯುಷ್ಯ ಗಟ್ಟಿ ಇದ್ದರೆ ಯಾರು ಬಲ್ಲರು? ಹತ್ತುಪಾಲಿಗೆ ಅವನು ನದೀಪಾಲಾಗಿರಬೇಕೆಂದು ನಾನು ನಂಬುತ್ತೇನೆ. ಪಾರಾಗಿದ್ದರೆ ಅವನು ಈ ಹೊತ್ತಿಗೆ ಇಲ್ಲಿಗೆ ಬಂದೇ ಬರುತ್ತಿದ್ದನಲ್ಲ." ಎಂದು ಜಯರಾಯನು ಕುತ್ಸಿತ ವಾದ ಭಾವದಿಂದ ನುಡಿದನು.

"ನಿಮ್ಮಿಚ್ಛೆಯಂತೇ ಏಕಾಗುವಲ್ಲದು! ರಮಾಕಾಂತರ ಶವ ಸಿಕ್ಕ ಕೂಡಲೆ ಊರೆಲ್ಲ ಸಕ್ಕರೆ ಹಂಚಿರಿ!"

ಈ ಮಾತು ಕೇಳಿ ಜಯರಾಯನು ನಾಚಿಕೊಂಡು ಒಂದು ವರ್ತಮಾನ ಪತ್ರ ತಕ್ಕೊಂಡು ಓದುವ ನೆವದಿಂದ ತನ್ನ ಮೋರೆಯನ್ನು ಇಂದಿರೆಯ ದೃಷ್ಟಿ ಯಿಂದ ಮರೆಮಾಡಿಕೊಂಡನು. ನಂಜುಂಡನು ಬಂದು ಭೋಜನ ಸಿದ್ಧವಾಗಿದೆ ಯೆಂದು ಹೇಳಿದ್ದರಿಂದ ಮಗಳೂ ತಂದೆಯೂ ಕೆಳಗಿಳಿದುಹೋದರು.

ರಮಾಕಾಂತನಿಗೇ ನಿನ್ನನ್ನು ಕೊಡುವೆನು

ಭೋಜನೋತ್ತರ ಇಂದಿರೆಯು ತನ್ನ ಕೋಣೆಯಲ್ಲಿ ಕುಳಿತು ಲೇಖನ ಸಾಮಗ್ರಿಗಳನ್ನು ತಕ್ಕೊಂಡು ಕೆಳಗೆ ಬರದಂತೆ ಪತ್ರ ಬರೆದಳು:

ಶ್ರೀರಂಗಪಟ್ಟಣ

ತಾ॥...............

ಶ್ರೀಮಂತ ಮಹಾರಾಜ ರಾ॥ ಶ್ರೀಕಂಠಬಹದ್ದರ ಶಿವಸಮುದ್ರ ಇವರಿಗೆ:—

ಇಂದಿರೆಯ ಕೃತಾನೇಕ ನಮಸ್ಕಾರಗಳು. ಈ ಪತ್ರವ ನ್ನೋದಿ ತಮಗೆ ವಿಷಾದವಾದೀತು. ಆದರೆ ನನ್ನ ಯತ್ನವಿಲ್ಲ. ಪತ್ರ ಬರೆಯುವದನ್ನು ಬಿಟ್ಟರೂ ಬರುವಂತಿಲ್ಲ. ಇದರಲ್ಲಿ ಬರೆದ ಸಮಾಚಾರವು ಸೂಕ್ಷ್ಮವಾದ ವಿಚಾರದ್ದಾದದ್ದರಿಂದ ಅನ್ಯರ ಅಭಿ

ಪ್ರಾಯ ತಕ್ಕೊಳ್ಳದಲೆ ನಾನೇ ಬರೆದದ್ದರಿಂದ ಪ್ರೌಢವಿಚಾರಗಳ ಅಭಾವ ತಮಗೆ ಕಂಡುಬಂದೀತು.

ತಮ್ಮ ಪತ್ನಿಯಾಗುವದಕ್ಕೆ ನಾನು ಸಮ್ಮತಿ ಪಟ್ಟಿದ್ದೆನು. ಆದರೆ ಈಗ ಚೆನ್ನಾಗಿ ಶೋಧಿಸಿ ವಿಚಾರ ಮಾಡಲು ನಾನು ಸಮ್ಮತಿ ಕೊಟ್ಟದ್ದು ತಪ್ಪಾಗಿರುವದೆಂದು ಕಂಡುಬಂದಿರುತ್ತದೆ. ತಮ್ಮ ಮೇಲೆ ನನ್ನ ಪ್ರೀತಿಯು ಎಷ್ಟು ಪ್ರಯತ್ನ ಮಾಡಿದರೂ ಕೂಡ್ರಲೊಲ್ಲದು. ಇಷ್ಟೇ ಅಲ್ಲ. ನನ್ನ ಪ್ರೀತಿಯು ನನಗೆ ಅನುರೂಪರಾದ ಗೃಹಸ್ಥರಲ್ಲಿ ದೃಢವಾಗಿರುವದು. ಪರಸ್ಪರರಲ್ಲಿ ಪ್ರೀತಿಯಿಲ್ಲದೆ ಪತಿಪತ್ನಿಯರಾಗಿರುವದು ಸರ್ವಥಾ ಶ್ರೇಯಸ್ಕರವಾದ ಮಾತಲ್ಲ. ಆದ್ದರಿಂದ ನಮ್ಮ ನಿಮ್ಮ ಲಗ್ನದ ನಿಶ್ಚಯವು ಈಗ್ಗೆ ರಹಿತವಾಗಿರುವದು. ಅನ್ಯರಲ್ಲಿ ಆಸಕ್ತಿಯುಳ್ಳವಳಾಗಿ ತಮ್ಮ ಪಾಣಿಗ್ರಹಣಕ್ಕೊಪ್ಪುವದು ನಿಜವಾದ ಪಾತಿವ್ರತ್ಯಕ್ಕೆ ಸರಿಯಾದ ಸಂಗತಿಯಲ್ಲ.

ತಾವು ದೊಡ್ಡ ಮನೆತನದವರು. ನನ್ನಕಿಂತಲೂ ನೂರು ಪಾಲಿಗೆ ಶ್ರೇಷ್ಠರಾದ ಕನ್ನಿಕೆಯರು ತಮ್ಮ ಅರ್ಧಾಂಗಿಯರಾಗಲಿಕ್ಕೆ ಬಯಸುತ್ತಿರಬಹುದು. ಅಂಥವರನ್ನು ನೋಡಿ ವಿವಾಹ ಮಾಡಿಕೊಂಡು ತಾವು ಸುಖಿಗಳಾಗಿರಬೇಕೆಂದು ಬಯಸುತ್ತೇನೆ.

ಇಂಥ ಪತ್ರ ಬರೆದದ್ದಕ್ಕೆ ನನ್ನನ್ನು ಉದ್ಧತೆಯೆಂದು ತಾವು ತಿಳಿಯಬಾರದು. ನನ್ನ ಸುಖದಕಿಂತಲೂ ತಮ್ಮ ಸುಖದ ವಿಚಾರಗಳನ್ನೇ ಲಕ್ಷ್ಯಕ್ಕೆ ತಂದು ನಾನು ಈ ಪತ್ರವನ್ನು ಬರೆದಿರುವೆನು.

ತಮ್ಮ ವಿಧೇಯಳಾದ,
ಇಂದಿರಾ

ಈ ಪತ್ರವನ್ನು ಬರೆದು ಇಂದಿರೆಯು ತಾನೇ ಅಂಚೇಕಟ್ಟೆಗೆ ಹೋಗಿ ಚಲ್ಲಿ ಬಂದಳು.

ಜಯರಾಯನು ತನ್ನ ಕೆಲಸ ತೀರಿಸಿಕೊಂಡು ಇಂದಿರೆಯು ಇದ್ದಲ್ಲಿಗೆ ಬಂದು—

" ಇಂದಿರಾ, ರಮಾಕಾಂತ ನಟೇಶರು ನದಿಯಲ್ಲಿ ಬೀಳುವದಕ್ಕೇನು ಕಾರಣ

ವಾಗಿರಬಹುದು ?"

"ಯಾರು ಹೇಳಬೇಕು ? ಅವರಿಬ್ಬರಿಗೇ ಗೊತ್ತು. ಒಬ್ಬನಂತೂ ತೀರಿ ಕೊಂಡನು, ರಮಾಕಾಂತನು ಜೀವದಿಂದಿದ್ದಾದರೆ ಅವರನ್ನು ಕೇಳಬಹುದು."

"ರಮಾಕಾಂತನು ಬರುವದಾದರೂ ಸ್ವಲ್ಪ ಸಂಶಯದ ಮಾತೇ." ಎಂದು ಜಯರಾಯನಂದನು.

"ನನಗೇನೂ ಸಂಶಯು ಬರುವದಿಲ್ಲ. ರಂಗನಾಥಸ್ವಾಮಿಯವರು ರಮಾ ಕಾಂತರನ್ನು ಕ್ಷೇಮದಲ್ಲಿಟ್ಟಿರುವರೆಂದು ನನ್ನ ಗ್ರಹಿಕೆಯಿದೆ."

"ಆಗಲಿ. ಎಲ್ಲಿಯಾದರೂ ಕ್ಷೇಮದಿಂದಿದ್ದರೆ ಸಾಕು."

"ಅಪ್ಪಾ, ಈ ನಾನು ಈ ದಿವಸ ಒಂದುಪದ್ವ್ಯಾಪ ಮಾಡಿದ್ದೇನೆ. ಅದಕ್ಕೆ ನೀವು ಉಚಿತವಾದದ್ದೆನ್ನುವಿರೋ ಅನುಚಿತವಾದದ್ದೆನ್ನುವಿರೋ ತಿಳಿಯದು."

"ಏನದು ?" ಎಂದು ಜಯರಾಯನು ಚಕಿತನಾಗಿ ಕೇಳಿದನು.

"ಹೇಳಿದರೆ ನೀವು ಕೋಪಿಸಿಕೊಳ್ಳುವಿರಿ."

"ಈಗೇನು ಉಳಿಸಿರುವಿ ? ಸಾಗಲಿ."

"ಶ್ರೀಕಂಠನಿಗೆ ಒಂದು ಪತ್ರ ಬರೆದು ಹಾಕಿರುವೆನು."

"ಏನೆಂದು ?" ಎಂದು ಮತ್ತೆ ವಿಸ್ಮಿತನಾಗಿ ಜಯರಾಯನು ಕೇಳಿದನು.

"ನಾನು ಅವನನ್ನು ಲಗ್ನಮಾಡಿಕೊಳ್ಳುವದಿಲ್ಲೆಂದು."

"ಇಂದಿರಾ, ಇದು ಕುಲಶೀಲೆಯರಿಗೆ ಉಚಿತವಾದ ಮಾತೇ ? ಇಂಥ ಪತ್ರವನ್ನು ನೀನು ಬರೆಯಬಹುದೇ ?" ಎಂದು ನುಡಿದು ಜಯರಾಯನು ಎದ್ದು ವಿಚಾರಮಾಡುತ್ತ ತಿರುಗಾಡಹತ್ತಿದನು.

"ಜೀವ ನಿಂದಿರಲಾರದೆ ಬರೆದೆನು. ಇದರಲ್ಲಿ ಯಾವದೂ ಪಾಪವಿಲ್ಲ. ಏನೂ ತಪ್ಪಿಲ್ಲ. ಸುಖದಿಂದಿರುವದಕ್ಕಾಗಿಯೇ ಜನರು ಲಗ್ನ ಮಾಡಿಕೊಳ್ಳುತ್ತಾ ರಷ್ಟೇ. ನನ್ನ ಸುಖದ ವಿಚಾರವನ್ನು ನೀವು ಮಾಡದಿದ್ದಲ್ಲಿ ನಾನೇ ಮಾಡ ಬೇಕಾಯಿತಲ್ಲ !"

"ಇಂದಿರೆ, ನಿನಗೆ ಎಳ್ಳಷ್ಟಾದರೂ ನಾಚಿಕೆ ಬರಲಿಲ್ಲವೇನು ? ನಾನು ಬೆಂಗಳೂರಲ್ಲಿ ಅಪ್ತರಿಷ್ಟರಿಗೆ ಮೋರೆಯನ್ನಾದರೂ ಹೇಗೆ ತೋರಿಸಲಿ ? ಚನ್ನಾಗಿ ಮಾಡಿದಿ ಕಂಡಿಯಾ ! ಮಕ್ಕಳಿದ್ದರೆ ಇಂಥವರೇ ಇರಬೇಕು. ಎಂದು ಜಯ ರಾಯನು ಉದ್ವಿಗ್ನನಾಗಿ ಮಾತಾಡಿದನು.

"ನಿಮ್ಮ ಮಗಳಕಿಂತಲೂ ನಿಮ್ಮ ಹಣದ ಮೇಲೆ ಶ್ರೀಕಂಠನ ಪ್ರೇಮ

ಬಹಳ ; ಆವನನ್ನು ಸಮಾಧಾನಪಡಿಸಬೇಕಾಗಿದ್ದರೆ ನೀವು ಸಂಕಲ್ಪ ಮಾಡಿದಷ್ಟು ವರದಕ್ಷಿಣೆ ಹಣವನ್ನು ಅವನ ಸ್ವಾಧೀನ ಮಾಡಿಬಿಡಿರಿ. ಅಂದರೆ ಅವನು ಸಂತೋಷದಿಂದ ಕುಣಿದಾಡುತ್ತಲೂ ನಿಮ್ಮನ್ನು ಕೊಂಡಾಡುತ್ತಲೂ ಹೋಗು ವನು."

"ಅಪ್ಪಾ, ನಿಮ್ಮಂಥ ಪ್ರಚಂಡರ ಕೂಡ ಮಾತಾಡಿ ಫಲವೇನು ? ಆಕೆ (ಜಯರಾಯನ ಹೆಂಡತಿ) ಪುಣ್ಯವಂತಿಯಾದದ್ದರಿಂದ ಇಂಥ ಅನರ್ಥಗಳನ್ನು ನೋಡದಲೇ ಕಣ್ಣು ಮುಚ್ಚಿಕೊಂಡು ಹೋದಳು. ಇದೊಂದು ಗುಣವೇ ಆಗಿರುವ ದೆಂದು ತಿಳಿಯುತ್ತೇನೆ."

"ನಿಮಗೆ ಗುಣವೇ ಸರಿ. ಆಕೆ ಇದ್ದರೆ ನನ್ನನ್ನು ಶ್ರೀಕಂಠನಿಗೆಂದಿಗೂ ಕೊಡಗೊಡುತ್ತಿದ್ದಿಲ್ಲ. ನಾನು ಪರದೇಶಿಯಾದ್ದರಿಂದ ನನ್ನ ಮೇಲೆ ಇಂಥ ಮರ ಕಡುಕೊಂಡು ಬಿದ್ದಿರುವದು." ಎಂದು ಇಂದಿರೆಯು ಕಣ್ಣಿಗೆ ನೀರು ತಂದಳು.

ತನ್ನ ಮಗಳು ತಾಯಿಯನ್ನು ನೆನಿಸಿ ದೀನೆಯಾಗಿ ಕಣ್ಣೀರು ತಂದದ್ದು ಕಂಡು ಜಯರಾಯನಿಗೆ ಅತ್ಯಂತವಾದ ದುಃಖವಾಯಿತು. ತಾನೇನಾಡುವೆ ನೆಂಬುದರ ವಿಚಾರ ಮಾಡದಲೆ ವಿಷಾದದ ಭರದಲ್ಲಿ "ಇಂದಿರೇ, ನೀನು ನನ್ನೆದುರಿ ನಲ್ಲಿ ನಿಲ್ಲಬೇಡ, ಎದ್ದು ನಡೆ. ನಿನ್ನ ಮುಖವನ್ನು ನಾನೆಂದಿಗೂ ನೋಡಲಿಕ್ಕಿಲ್ಲ. ಮೂರ್ಖಳನ್ನು ತಂದು ನಡುಮನೆಗೆ ! !" ಎಂದು ಆಡಿಬಿಟ್ಟನು.

ಇಂದಿರೆಗಾದರೂ ಪರಮಾವಧಿಯ ಕೋಪ ಬಂದಿತು. ಅವಳು ತನ್ನ ತಂದೆಯನ್ನು ಹಿಂತಿರುಗಿ ನೋಡದಲೇ ಹಾಗೆಯೇ ತನ್ನ ಕೋಣೆಯಲ್ಲಿ ಹೋಗಿ ಮಲಗಿಕೊಂಡಳು. ಈ ದಿವಸದವರೆಗೂ ಇಂದಿರೆಗೆ ತಾಯಿಯ ನೆನಪಾಗಿದ್ದಿಲ್ಲ. ಈಗ ಅವಳನ್ನು ನೆನಿಸಿ ದುಃಖಿಸಹತ್ತಿದಳು. "ನ ಮಾತುಃ ಪರದೈವತಂ ಎಂಬ ನುಡಿ ಸುಳ್ಳಲ್ಲ. ಈ ದಿವಸ ತಂದೆಯು ನನ್ನ ಮೇಲೆ ಇಷ್ಟು ಗಡುತರ ಕಣ್ಣು ತೆಗೆದಂತೆ ನನ್ನ ತಾಯಿ ಇದ್ದರೆ ತೆಗೆಯುತ್ತಿದ್ದನೇ ? ನನ್ನ ಲಗ್ನದ ವಿಷಯವಾಗಿ ಈ ಪರಿಯಾದ ರಾಮಾಯಣ ಹನುಮಾಯಣ ನಡೆಯುತ್ತಿದ್ದಿಲ್ಲ. ಇಲ್ಲದ್ದು ನೆನಿಸಿ ಏನು ಫಲ ? ನನ್ನ ದೈವದಲ್ಲಿದ್ದಂತಾಗುವದು. ಬೇಲಿಯೇ ಹೊಲ ಮೇಯಲಿಕ್ಕೆ ಹತ್ತಿದರೆ ಯತ್ನವೇನಿದೆ ?" ಎಂದು ಮುಸುಕಿನಲ್ಲಿಯೇ ಮುಳು ಮುಳು ಅಳಹತ್ತಿದಳು.

ಜಯರಾಯನಾದರೂ ತಾನು ಸಿಟ್ಟಿನ ಭರದಲ್ಲಿ ಇಂದಿರೆಗೆ ನಿಷ್ಠುರವಾಡಿ ದ್ದಕ್ಕೆ ಪಶ್ಚಾತ್ತಾಪಪಡುತ್ತ ತನ್ನ ಕೋಚದ ಮೇಲೆ ಬಿದ್ದುಕೊಂಡು ಯೋಚಿಸು

ತ್ತಿದ್ದನು. ನನಗೆ ಅಪತ್ಯವೆಂದರೆ ಇವಳೊಬ್ಬಳೇ ಮಗಳು. ಶ್ರೀಕಂಠನು ಕೂಡ ಅವಳ ಲಗ್ನದ ಮಾತುಕಥೆ ನಡೆದಂದಿನಿಂದ ಅವಳ ಮನೋಹರವಾದ ಮುಖವು ಕುಂದಿ ಹೋಗಿರುವದು. ಅವಳ ಜೀವಕ್ಕೆ ಸುಖವಿಲ್ಲದ್ದರಿಂದ ಪಾಪ! ಅವಳು ಸೊರಗಿ ಕಡ್ಡಿಯಾಗಿರುವಳು. ಚತುರೆಯೂ ವಿನೋದಿನಿಯೂ ಆದ ಮಗಳ ಬಾಯಿಯಿಂದ ಕಳೆದ ನಾಲ್ಕು ತಿಂಗಳಲ್ಲಿ ವಿನೋದದ ಮಾತುಗಳೇ ಹೊರಟಿಲ್ಲ. ಅವಳು ಉದಾಸೀನೆಯಾಗಿರುವದನ್ನು ನಾನೆಷ್ಟಂತೆ ನೋಡಲಿ! ಶ್ರೀಮಂತರ ಸಂಬಂಧ ಮಾಡಬೇಕೆಂಬ ದುರ್ಬುದ್ಧಿಯನ್ನು ಯಾವ ದೇವರು ನನಗೆ ಕೊಟ್ಟನೋ ಕಾಣೆನು. ಇಂದಿರೆಗೆ ಸುಖವಾಗುವಂಥ ಸಂಬಂಧವನ್ನು ಮಾಡುವದು ನನ್ನ ಕರ್ತವ್ಯವಿದ್ದು ನಾನೇ ಈ ಮಗುವಿನ ಹಿತಕ್ಕೆ ವಿರುದ್ಧನಾಗಿ ವರ್ತಿಸುತ್ತೇನಲ್ಲ! ಇದು ನನ್ನ ಮೂರ್ಖತನವೇ ಸರಿ. ಈಗ್ಯೆ ನನ್ನ ಕೈ ಸಿಕ್ಕದ್ದನ್ನು ಕಡೆಗೆ ಮಾಡಿ ಕೊಳ್ಳುವ ಬಗೆಯಾದರೂ ಯಾವದು? ಇಂದಿರೆಯು ತನ್ನ ಅನುಮತಿಯನ್ನು ಶ್ರೀಕಂಠನ ಸಮಕ್ಷ ಕೊಟ್ಟಿರುವಳು. ಇನ್ನು ಮೇಲೆ ಏನು ದೋಷ ಬರುವದು ನನ್ನ ತಲೇ ಮೇಲೆ. ಇಂದಿರೆಯು ತನ್ನ ಕೋಣೆಯಲ್ಲಿ ಏನು ಮಾಡುತ್ತಿರುವಳಾ ದೀತು? ಕಠೋರ ಹೃದಯನಾದ ನನ್ನನ್ನು ನಿಂದಿಸುತ್ತಿರುವಳು; ಮತ್ತೇನು ಮಾಡುವಳು? ಅವಳನ್ನು ಹೇಗೆ ಸಮಾಧಾನಗೊಳಿಸಲಿ? ನಿನ್ನಿಚ್ಛೆಗೆ ಬಂದ ವರನಿಗೆ ಧಾರೆಯರೆದು ಕೊಡುವನೆಂದು ಹೇಳಲಿಯಾ? ದುಡ್ಡು ಕೊಟ್ಟು ಹಾಡು ಹಚ್ಚಿದ್ದು ಎರಡು ದುಡ್ಡು ಕೊಟ್ಟು ಬಿಡಿಸಬೇಕಾಗಿರುವದು. ನನ್ನ ಹೀನವಿಚಾರ ಗಳೇ ನನ್ನನ್ನು ತಿನ್ನುವವು. ಆಗಲಿ; ಏನಾದದ್ದು ಆಗಲಿ ಇಂದಿರೆಯ ವಿಚಾರಗಳಿಗೆ ಅನುಕೂಲನಾಗಿ ವರ್ತಿಸುವೆನು. ಎಂದು ಯೋಚಿಸುತ್ತ ಜಯರಾಯನೆದ್ದು ಇಂದಿರೆಯ ಕೋಣೆಯ ಬಾಕಿಲಕ್ಕೆ ಬಂದು ಅಂಜುಜುತ್ತ ಮೆಲ್ಲನೆ ಒಳಗೆ ಬಂದನು. ಇಂದಿರೆಯು ಶಾಲು ಮುಸುಕಿಟ್ಟು ಮಲಗಿಕೊಂಡಿದ್ದಳು. ಜಯ ರಾಯನು ಮೆಲ್ಲನೆ ಮುಸುಕು ತೆಗೆದು "ಇಂದಿರಾ," ಎಂದು ಅವಳನ್ನು ಎಬ್ಬಿಸಿದನು.

"ಇಂದಿರಾ, ನನ್ನಿಂದ ಅನ್ಯಾಯವಾಯಿತಕ್ಕಾ, ಸಿಟ್ಟಿನ ಭರದಲ್ಲಿ ನಿಷ್ಠುರ ವಾದ ನುಡಿಗಳನ್ನಾಡಿದೆನು. ನೀನು ನೊಂದುಕೊಂಡಿರುವಿಯಾದೀತು. ನನ್ನಿಂದ ತಪ್ಪಾಯಿತು. ನಿನ್ನ ತಂದೆಯ ಮೋರೆ ಕಡೆ ಸ್ವಲ್ಪ ನೋಡು." ಎಂದು ಜಯರಾಯನು ಹೇಳಿಕೊಂಡನು.

ತನ್ನ ತಂದೆಯು ಈ ಪರಿಯಾಗಿ ಹೇಳಿಕೊಳ್ಳುವದನ್ನು ಕೇಳಿ ಇಂದಿರೆಗೆ

ವಿಷಾದವೆನಿಸಿತು. ಇವನ ಮಾತಿಗೇನು ಉತ್ತರ ಕೊಡಬೇಕೆಂದು ಯೋಚನೆಯಲ್ಲಿ ಬಿದ್ದಳು. ಜಯರಾಯನು ಇಂದಿರೆಯ ಕೈಹಿಡಿದು :

"ಅಕ್ಕಾ, ನೀನು ಮಾತಾಡಲೊಲ್ಲೇಕೆ ? ನನ್ನಿಂದ ತಪ್ಪಾಯಿತೆಂದು ಹೇಳಿದರೂ ಆಗದೇನು ?" ಎಂದು ನುಡಿದನು.

ಇಂದಿರೆಯು ಎದ್ದವಳೇ ಏನೂ ಮಾತಾಡದೆ ತನ್ನ ತಂದೆಗೆ ತೆಕ್ಕೆ ಬಿದ್ದು ಕಣ್ಣುಗಳಿಂದ ಅಶ್ರುಧಾರೆಗಳನ್ನು ಸುರಿಸುತ್ತ "ಅಪ್ಪಾ, ಕ್ಷಮಿಸಿರಿ. ನೀವು ನನ್ನ ಹಡೆದ ತಂದೆಗಳು ನನ್ನ ಮುಂದೆ ತಪ್ಪಾಯಿತೆಂದು ಹೇಳಬಹುದೇ ? ನಿಮ್ಮ ಪ್ರಾಣಕ್ಕಿಂತಲೂ ಹೆಚ್ಚೆಂದು ತಿಳಿದು ನನ್ನನ್ನು ಮಮತೆಯಿಂದ ಕಾಪಾಡಿದ್ದನ್ನೂ, ಆಗಾಗ್ಗೆ ನನ್ನಭೀಷ್ಟಗಳನ್ನು ಪೂರೈಸಿದ್ದನ್ನೂ ನಾನರಿಯೆನೇನು ? ವಿಷವ್ಯಾಳ್ಯದ ಮೂಲಕ ನಿಮ್ಮ ಮನಸ್ಸಿಗೆ ತಾಪವಾಗಿ ನೀವು ಸಿಟ್ಟು ಮಾಡಿದಿರಿ. ಇದನ್ನು ಅವಶ್ಯವಾಗಿ ಸಹಿಸತಕ್ಕದ್ದು ನನ್ನ ಧರ್ಮವಿದ್ದು, ನಾನು ಕೋಪಿಸಿಕೊಂಡದ್ದೇ ಸರ್ವಥಾ ತಪ್ಪಾಗಿರುವದು."

ನಿರ್ಮಲವಾದ ಮನಸ್ಸಿನಿಂದ ಇಂದಿರೆಯು ನುಡಿದ ಈ ಮಾತು ಕೇಳಿ, ಜಯರಾಯನು ತಲ್ಲಣಗೊಂಡನು. ಅವನ ವಿಶಾಲವಾದ ಗಲ್ಲಗಳ ಮೇಲೆ ಒಂದೆರಡು ಕಂಬನಿಗಳುದುರಿದವು. ಇಂದಿರೆಯ ಮೈಮೇಲೆ ಕಯ್ಯಾಡಿಸಿ "ಇಂದಿರಕ್ಕಾ, ಏಳು, ಆದದ್ದು ಆಗಿಹೋಯಿತು. ರಮಾಕಾಂತನಿಗೇ ನಿನ್ನನ್ನು ಕೊಡುವೆನು. ಇನ್ನು ಮೇಲೆ ಮುಂದಿನ ಆಲೋಚನೆಯನ್ನು ಮಾಡೋಣ." ಎಂದು ಹೇಳಿ ಇಂದಿರೆಯನ್ನು ಕೋಚದ ಮೇಲೆ ಕುಳ್ಳಿರಿಸಿ ತಾನೂ ಕುಳಿತು ಕೊಂಡನು.

"ಯಾವ ಬಗೆಯ ಆಲೋಚನೆಯನ್ನಾದರೂ ಮಾಡುವಷ್ಟು ನನ್ನ ಮನಸ್ಸು ಈ ಸಮಯದಲ್ಲಿ ಸ್ಥಿರವಾಗಿಲ್ಲ. ನಾಳಿಗೆ ವಿಚಾರ ಮಾಡೋಣಂತೆ. ನಾನು ಸಿಟ್ಟಿಸಿಂದ ಹೀಗನ್ನುತ್ತೇನೆಂದು ಮಾತ್ರ ತಿಳಿಯಬೇಡಿರಿ."

"ಆಗಲಿ, ಹಾಗೇ ಆಗಲಿ" ಎಂದು ಹೇಳಿ ಜಯರಾಯನು ಹೊರಟು ಹೋದನು.

ಆ ದಿವಸ ರಾತ್ರಿ ಇಂದಿರೆಯು ಮನಸ್ಸಿನಲ್ಲಿ ಹಲವು ತರದ ವಿಚಾರಗಳು ಕಲಕುಮಲಕಾಗಿ ತಿರುಗುತ್ತಿದ್ದವಾದ ಕಾರಣ ಅವಳ ಕಣ್ಣಿಗೆ ಕುಣಿಕು ಹತ್ತಲಿಲ್ಲ. "ತಂದೆಯುಕೂಡ ಇಷ್ಟು ಹೋರಾಡಿದ್ದರಿಂದ ಶ್ರೀಕಂಠನ ಪೀಡೆ ಕಡಿದುಕೊಂಡೆನು. ಆದರೆ ಮುಂದೇನು ? ರಮಾಕಾಂತರು ಬದುಕಿರುವರೋ ಇಲ್ಲೋ ಏನೂ ತಿಳಿಯ

ಲೊಲ್ಲದು. ಬದುಕಿದ್ದರೆ ಇಷ್ಟು ತರಾತುರರಾಗಿ ಬರುವವರು ಇನ್ನೂ ಬರಲಿಲ್ಲ ವೇಕೆ ? ಏನಾದರೂ ಅಪಘಾತವಾಗಿದ್ದರೆ ನಟೇಶನ ಹೆಣ ಸಿಕ್ಕಂತೆ......ಬೇಡ, ಇಂಥ ಕೆಟ್ಟ ವಿಚಾರವೇ ಬೇಡ. ಚಾಮುಂಡಮ್ಮಾ, ನನ್ನ ಪ್ರಾಣೇಶ್ವರರನ್ನು ಸುಖಿಯಾಗಿಡು ಕಂಡಿಯಾ. ರಮಾಕಾಂತರು ಸುರಕ್ಷಿತರಾಗಿರುವರೆಂದು ನನ್ನ ಮನಸ್ಸು ನನಗೆ ಆಶ್ವಾಸನೆ ಕೊಡುತ್ತದೆ.

ರಮಾಕಾಂತರು ನಾಳಿಯೇ ನನ್ನೆದುರಿಗೆ ಬಂದು ನಿಂತರೆ ನನ್ನ ಮನಸ್ಸಿನ ಸ್ಥಿತಿ ಏನಾದೀತು ? ಇಷ್ಟು ದಿವಸ ದಿಟ್ಟತನದಿಂದ ಅವರ ಕೂಡ ಬೇಕಾದಹಾಗೆ ಮಾತಾಡುತ್ತಿದ್ದೆನು, ಆದರೆ ನಾಳಿಗವರು ಬಂದರೆ ನಾಚಿಕೆಯು ನನ್ನ ನಾಲಿಗೆ ಯನ್ನೇ ಬಿಗಿದು ಹಿಡಿಯುವದು. ಅವರ ಮನೋಹರವಾದ ಮುಖವನ್ನು ನನ್ನ ಕಣ್ಣುಗಳು ಧೈರ್ಯದಿಂದ ನೋಡಿಕೊಂಡು ಸಾಫಲ್ಯ ಹೊಂದುವವೇನು ? ಅವರ ಬಳಿಯಲ್ಲಿದ್ದಾಗ್ಯೆ ನಾನು ಎದ್ದೇ ನಿಂದಿರಬೇಕಲ್ಲವೇ ? ನನ್ನ ಸುದೈವದಿಂದ ಅವರು ನಾಳಿಗೇ ಬಂದು ದರ್ಶನ ಕೊಟ್ಟದ್ದಾದರೆ ಸತ್ಯನಾರಾಯಣನ ಪೂಜೆಯನ್ನು ಮಾಡಿಸುವೆನು.''

ಹೀಗೆ ಅನೇಕ ವಿಧವಾದ ವಿಚಾರಗಳಲ್ಲಿ ಸಿಕ್ಕ ಇಂದಿರೆಯು ಮೇಘಸಂಕುಲೆ ಯಾದ ತಾರಕೆಯಂತೆ ಕಾಣಿಸುತ್ತಿದ್ದಳು.

ಜಯರಾಯನಾದರೂ ವಿಚಾರತರಂಗಗಳಲ್ಲಿ ಮುಳುಗಿ ಏಳುತ್ತಿದ್ದನು. ಮಗಳಂತೂ ಶ್ರೀಕಂಠನನ್ನೊಲ್ಲೆನೆಂದು ಹಟ ಹಿಡಿದಿರುವಳು. ಶ್ರೀಕಂಠನ ಸಮಾ ಧಾನವನ್ನು ಮಾಡುವ ಹಂಚಿಕೆ ತೋರಲೊಲ್ಲದು. ಇಂದಿರೆಯು ತನ್ನನ್ನೇಕೆ ಒಲ್ಲಳೆಂದು ಶ್ರೀಕಂಠನು ಕೇಳಿದರೆ ಪಾಪ! ಜಯರಾಯನು ಏನು ಹೇಳಬಹುದು ? ಜಯರಾಯನೇ ಲಗ್ನದ ಸಂಧಾನವನ್ನು ಮುರಿದನೆಂದರೆ ಜನರೇನನ್ನುವರು ? ಆ ಮೇಲೆ ತನ್ನ ಮನೆಗೆ ನಾಲ್ಕು ಜನ ಸಭ್ಯಗೃಹಸ್ಥರು ಬರುವದು ಬಿಟ್ಟರೆ ತನ್ನ ಮರ್ಯಾದೆ ಉಳಿಯುವದೋ ಹೇಗೋ ಎಂದು ಜಯರಾಯನು ಪೇಚಾಟದಲ್ಲಿ ಬಿದ್ದನು. ಪಂಡಿತೆಯ ಮುಖಾಂತರ ಶ್ರೀಕಂಠನಿಗೆ ಹಣ ಕೊಟ್ಟು ಅವನನ್ನು ಸಮಾಧಾನಪಡಿಸಿದರೆ ಜನರಲ್ಲಿ ತನ್ನ ಮರ್ಯಾದೆ ಉಳಿಯಬಹುದೆಂದು ಅವನು ಆಲೋಚಿಸಿದನು.

ಪಂಡಿತಾ ರಾಧಾಬಾಯಿಯು ತನ್ನ ಸ್ವಾರ್ಥಸಾಧಿಸುವದಕ್ಕಾಗಿ ಇಂದಿರಾ ಶ್ರೀಕಂಠರ ವಿವಾಹದ ಘಟನೆ ಮಾಡಬೇಕೆಂದು ಜಯರಾಯನ ಕಾಪಟ್ಯಕ್ಕೆ ಉತ್ತೇಜನವನ್ನು ಕೊಟ್ಟಿದ್ದಳು. ಈಗಲಾದರೂ ಹಣದಾಸೆಗೆ ಅವಳು ಶ್ರೀಕಂಠ

ನನ್ನು ಹೇಗಾದರೂ ಸಮಾಧಾನಪಡಿಸುವಳೆಂದು ಜಯರಾಯನು ನಂಬಿದನು. ಬೆಂಗಳೂರಿಗೆ ಹೋಗಲಾಗಿ ಹೇಗೆ ಸಾಧಿಸುವದೋ ಹಾಗೆ ಮಾಡಬೇಕೆಂದು ನಿಶ್ಚಯಮಾಡಿಕೊಂಡು ಜಯರಾಯನು ನಿದ್ರೆಹೋದನು.

ಇಂದಿರೆಯು ಮರುದಿವಸ ಬೆಳಿಗ್ಗೆದ್ದು ಚಹ ಉಪಾಹಾರಗಳನ್ನು ತಕ್ಕೊಂಡು ದೇವಯಾನಿಯ ಮನೆಗೆ ನಡೆದಳು. ಶ್ರೀಕಂಠನ ಪೀಡೆ ತಪ್ಪಿದ್ದರಿಂದ ಅವಳಿಗೆ ಹಿಡಿಸಲಾರದಷ್ಟು ಆನಂದವಾಗಿತ್ತು. ಯಾರಿಗಾದರೂ ಆನಂದವಾದರೆ ಆ ಸಂಗತಿಯನ್ನು ಯಾರಿಗೆ ಹೇಳಲಿ ಯಾರಿಗೆ ಬಿಡಲಿ ಎಂದೆನಿಸುವದುಂಟು. ಆ ಪ್ರಕಾರ ಇಂದಿರೆಯ ಹೊಟ್ಟೆಯಲ್ಲಿ ತನಗಾದ ಆನಂದವು ನಿಲ್ಲಲೊಲ್ಲದು. ದೇವಯಾನಿಯು ಚಂದ್ರಶಾಲೆಯಲ್ಲಿ ಕುಳಿತು ತನ್ನ ಸುತ್ತಲೂ ಪ್ರಸರಿಸಿದ್ದ ನೈಸರ್ಗಿಕಶೋಭೆಯನ್ನು ನೋಡುತ್ತಿದ್ದಳು. ಇಂದಿರೆಯು ಮೆಲ್ಲನೆ ಬಂದು ದೇವಯಾನಿಯ ಹಿಂದೆ ನಿಂತು ಅವಳ ಕಣ್ಣುಗಳನ್ನು ಮುಚ್ಚಿದಳು. ಹಸ್ತಸ್ಪರ್ಶಮಾತ್ರದಿಂದಲೇ ಈ ಕುಚೇಷ್ಟೆ ಮಾಡುವವಳು ಇಂದಿರೆಯೆಂದು ತಿಳಕೊಂಡು "ಇಂದಿರಾ, ಈ ದಿವಸ ನೀನು ಬಹು ಉಲ್ಲಾಸದಲ್ಲಿರುವಂತೆ ತೋರುತ್ತದೆ. ಹಾಗಿಲ್ಲದಿದ್ದರೆ ನೀನು ಇಷ್ಟು ಉದ್ಧತಳಾಗುತ್ತಿದ್ದಿಲ್ಲ." ಎಂದು ನಗುತ್ತ ಮಾತಾಡಿ ದೇವಯಾನಿಯು ತನ್ನ ಕಣ್ಣು ಬಿಡಿಸಿಕೊಂಡಳು.

"ನಾನು ಕೇಳಿದ ಪ್ರಶ್ನೆಗೆ ಉತ್ತರ ಕೊಟ್ಟರೆ ಉಲ್ಲಾಸವಿರುವದೋ ಇಲ್ಲವೋ ಎಂಬುದನ್ನು ಹೇಳುವೆನು." ಎಂದು ಇಂದಿರೆಯು ಸಥಿಯಿಂದ ದೇವಯಾನಿಯ ಹೆಗಲಮೇಲೆ ತನ್ನ ಹಸ್ತವನ್ನಿಟ್ಟು ನುಡಿದಳು.

"ನಿನಗೇನು ಕೇಳುವದದೆ, ಹೇಳು."

"ರಮಾಕಾಂತರ ವರ್ತಮಾನ ಬಂದಿರುವದೇನು ? ಅವರು ಸುಖರೂಪದಲ್ಲಿರುವರೋ ಹೇಗೆ ?"

"ಅವನ ಜೀವಕ್ಕೆ ಅಂಜಿಕೆಯಿಲ್ಲ ; ಮಾತ್ರ ಅವನು ತನ್ನ ವಿಚಾರಶಕ್ತಿಯನ್ನು ಕಳಕೊಂಡಂತೆ ಕಾಣುತ್ತದೆ." ಎಂದು ದೇವಯಾನಿಯು ಹೇಳಿದಳು.

"ಅವರು ಕ್ಷೇಮದಲ್ಲಿರುವರಷ್ಟೇ ! ನಿಮಗೆ ಅವರ ವರ್ತಮಾನ ತಿಳಿದಂತೆ ಕಾಣುತ್ತದೆ. ಏನಿರುವದನ್ನು ದಯಮಾಡಿ ಹೇಳಿರಿ."

"ಅವನು ಕ್ಷೇಮದಲ್ಲಿರುವನೋ ಇಲ್ಲವೋ ಎಂಬ ಶಂಕೆ ನಿನಗಿದ್ದ ಪಕ್ಷದಲ್ಲಿ ನಿನಗಾದರೂ ಆತನ ವರ್ತಮಾನ ತಿಳಿದಂತೆ ಕಾಣುತ್ತದೆ. ಇಂಥ ಶಂಕೆಯನ್ನು ತಕ್ಕೊಳ್ಳಲಿಕ್ಕೆ ಏನು ಕಾರಣ ಹೇಳು ?"

"ಅವರೂ ಕ್ಷೇಮದಿಂದಿರುವರಷ್ಟೇ ?" ಎಂದು ಇಂದಿರೆಯು ಮತ್ತೆ ಕೇಳಿದಳು.

"ಅವನು ಜೀವದಿಂದಿರುವನು. ಈ ಪತ್ರ ಕಳಿಸಿದಾಗ್ಯಂತೂ ಅವನು ಬದುಕಿರಬಹುದೆಂದು ಊಹಿಸಬೇಕಲ್ಲವೇ ?" ಎಂದು ನುಡಿದು ದೇವಯಾನಿಯು ಇಂದಿರೆಯ ಮುಂದೆ ರಮಾಕಾಂತರ ಪತ್ರ ಚಲ್ಲಿದಳು. ಇಂದಿರೆಯು ಆ ಪತ್ರ ತಕ್ಕೊಂಡು ಓದಹತ್ತಿದಳು.

ಪಶ್ಚಿಮವಾಹಿನೀ

ತಾ ॥ ....

ನಮಸ್ಕಾರಗಳು,

ನನ್ನ ವಿಷಯಕ್ಕೆ ಏನಾದರೂ ಭಯಂಕರವಾದ ವರ್ತಮಾನ ಹುಟ್ಟಿದ್ದರೂ ಅಂಜತಕ್ಕ ಕಾರಣವಿಲ್ಲ. ನಾನು ಕ್ಷೇಮದಿಂದಿರುವೆನು. ಇದೇ ಸಾಯಂಕಾಲಕ್ಕೆ ನಾನು ಶ್ರೀರಂಗಪಟ್ಟಣಕ್ಕೆ ಬರುವೆನು. ಪಾಪ ! ನಟೇಶನ ಜೀವಕ್ಕೆ ಮಾತ್ರ ಅಪಾಯವಾಗಿರಬಹುದು. ನಾವೀರ್ವರೂ ಫಕ್ಕನೆ ಕಾವೇರಿಯಲ್ಲಿ ಕಾಲುಜಾರಿ ಬಿದ್ದೆವು. ನಾನು ಈಸಿ ಪಾರಾದೆನು. ನಟೇಶನ ಅವಸ್ಥೆ ಏನಾಯಿತೋ ಹೇಳಲಿಕ್ಕೆ ಬರುವಂತಿಲ್ಲ.

ರಮಾಕಾಂತ

ಇದನ್ನೋದಿ ಇಂದಿರೆಯು ಸಂತೋಷದಿಂದ ಮುಗುಳು ನಗೆ ನಕ್ಕಳು. "ಸತ್ಯನಾರಾಯಣಾ, ನಾನು ನಿನ್ನೆ ರಾತ್ರಿಯಲ್ಲಿಯೇ ನಿನಗೆ ಬೇಡಿಕೊಂಡೆನು. ಈ ದಿವಸ ಬೆಳಗಾಗುವದರೊಳಗಾಗಿಯೇ ನೀನು ಸುವಾರ್ತೆಯನ್ನು ತಂದು ಕೊಟ್ಟಿ !" ಎಂದು ಮನಸ್ಸಿನಲ್ಲಿಯೇ ಭಗವಂತನನ್ನು ಕೊಂಡಾಡಿ ಇಂದಿರೆಯು :

"ಅಮ್ಮಾ, ಈ ಪತ್ರವು ಎಲ್ಲಿಂದ ಬಂದಿತು ?" ಎಂದು ಕೇಳಿದಳು.

"ಕಯ್ಯಲ್ಲಿ, ಪತ್ರ ಹಿಡುಕೊಂಡು ಇದು ಎಲ್ಲಿಂದ ಬಂತೆಂದು ಹೇಳುವಿಯಲ್ಲವೇ, ಏನು ಜಾಣೆಯೇ ನೀನು ?"

"ಅಹುದಲ್ಲ ! ಪಶ್ಚಿಮವಾಹಿನೀ ಅಂತ ಮೇಲೆಯೇ ಬರೆದದೆ" ಎಂದು ಇಂದಿರೆಯು ನಕ್ಕು ರಮಾಕಾಂತನ ಹಸ್ತಾಕ್ಷರದ ಪತ್ರವನ್ನು ತನ್ನ ಹೃದಯದಲ್ಲಿ ಪ್ರೇಮದಿಂದಿಟ್ಟುಕೊಂಡಳು,

“ ರಮಾಕಾಂತನು ಪಶ್ಚಿಮವಾಹಿನಿಗೆ ಬಂದಿದ್ದನು. ಕಾವೇರಿಯಲ್ಲಿ ಕಾಲು ಜಾರಿ ಬೀಳಲಿಕ್ಕೇನಾಗಿರಬಹುದು ?”

“ ಇದಕ್ಕೆಲ್ಲಾ ನಾನೇ ಕಾರಣಳಾಗಿರುವೆನು ” ಎಂದು ನುಡಿದು ಇಂದಿರೆಯು ರಮಾಕಾಂತನು ತನಗೆ ಬರೆದ ಪತ್ರವು ಪೋಲೀಸರ ಕಯ್ಯಲ್ಲಿ ಸಿಕ್ಕ ವರ್ತಮಾನ ಹೇಳಿದಳು.

“ ಇಂದಿರಾ, ರಮಾಕಾಂತನಿಷ್ಟೇನವಸರದಿಂದ ನಿನ್ನ ದರ್ಶನಕ್ಕೆ ಹೊರಟಿದ್ದನು ? ಆ ಪೋರನ ಕೂಡ ನೀನು ಸದೈವ ಪತ್ರವ್ಯವಹಾರವಿಟ್ಟಿರುವಿ ಏನು ?”

“ ನಾನು ಪತ್ರವ್ಯವಹಾರವಿಟ್ಟಿಲ್ಲ. ಆದರೆ ಪರಸ್ಪರರಿಗೆ ಏನಾದರೂ ತಿಳಿಸುವದಿದ್ದರೆ ಯಾಕೆ ಇಡಬಾರದು ?” ಎಂದು ಇಂದಿರೆಯು ಕೇಳಿದಳು.

“ ಏನು ಕಾರಣ ನೀವು ಪತ್ರವ್ಯವಹಾರವನ್ನಿಡುವಿರಿ ? ಶ್ರೀಕಂಠನಿಗೆ ನಿನ್ನನ್ನು ಕೊಡುವದು ಗೊತ್ತಾದ ಮೇಲೆ ನೀನು ಅನ್ಯರ ಕೂಡ ಪ್ರೀತಿಯ ಮಾತುಗಳನ್ನು ಬೆಳಿಸಲಿಕ್ಕೆ ನಿನಗೆ ಹೇಗೆ ನಾಚಿಕೆ ಬರುವದಿಲ್ಲ ? ವ್ಯರ್ಥವಾಗಿ ರಮಾಕಾಂತನ ಮನಸ್ತಾಪಕ್ಕೆ ಉತ್ತೇಜನ ಕೊಡುವಿ !”

“ ನೀವು ಹೇಳಿದ್ದೆಲ್ಲ ಸರಿಯಾದದ್ದು ” ಎಂದು ಇಂದಿರೆಯು ಕಣ್ಣು ಚಿವುಟಿ ನುಡಿದಳು.

“ ಅಂದರೇನು ಫಲ ! ಆ ಉದಾರಮನಸ್ಸಿನವನಾದ ತರುಣನ ಜೀವಿತವನ್ನೇ ನಿಷ್ಫಲ ಮಾಡಿಬಿಟ್ಟೆಯಲ್ಲ ! ನಿನ್ನ ಹೊರತು ಅನ್ಯಳನ್ನು ಲಗ್ನ ಮಾಡಿಕೊಳ್ಳುವದಿಲ್ಲೆಂದೂ ಇಲ್ಲದಿದ್ದರೆ ತಾನು ಸಾಯುವವರೆಗೆ ಅವಿವಾಹಿತನಾಗಿರುವೆನೆಂದೂ ಅವನು ನಿಶ್ಚಯಿಸಿಕೊಂಡು ಹೋಗಿರುವನು.”

“ ಈ ವಾರ್ತೆಯನ್ನು ಕೇಳಿ ನನಗೆ ಸಂತೋಷವೇ ಆಗಿರುತ್ತದೆ.” ಎಂದು ಇಂದಿರೆಯು ಶೃಂಗಾರಚೇಷ್ಟೆಯೊಡನೆ ನುಡಿದಳು.

“ ವಹವ್ವಾ, ! ಕಠಿಣಹೃದಯಳೇ ಚನ್ನಾಗಿ ಮಾತಾಡಿದಿ. ‘ ಮಹದಪಿ ಪರದುಃಖಂ ಶೀತಲಂ ಸಮ್ಯಗಾಹುಃ ’ ಎಂದು ಬರೆದ ಕವಿಯು ಲೋಕರೂಢಿಯನ್ನರಿಯಂದವನೇ ?”

“ ಸ್ತ್ರೀಯರ ಪ್ರೀತಿಗಾಗಿ ಪುರುಷರಿಗೆ ಹೇಗೆ ಹೇಗೆ ಹೆಚ್ಚು ಮನೋವ್ಯಥೆಗಳಾಗುವವೋ ಹಾಗೆ ಹಾಗೆ ಅವರ ಪ್ರೀತಿಪಾತ್ರರಾದ ಸ್ತ್ರೀಯರಿಗೆ ಹೆಚ್ಚೆಚ್ಚೇ ಸಂತೋಷವಾಗುತ್ತಿರುವದು ಸ್ವಾಭಾವಿಕವಾದ ಮಾತು.” ಎಂದು ಇಂದಿರೆಯು ವಿನೋದಕ್ಕಾಗಿ ದೇವಯಾನಿಯನ್ನು ಸಿಟ್ಟಿಗೆಬ್ಬಿಸಬೇಕೆಂದು ನುಡಿದಳು.

"ಇಂದಿರಾ, ನಿನಗೇನನ್ನಬೇಕು! ಇದು ಇರಲಿ. ನೀನು ಉತ್ತೇಜನಕೊಟ್ಟ ಹೊರತು ರಮಾಕಾಂತನಿಲ್ಲಿಗೆ ಬರಲುದ್ಯುಕ್ತನಾಗುತ್ತಿದ್ದಿಲ್ಲ. ನಾನು ಖಂಡಿತವಾಗಿ ಹೇಳುತ್ತೇನೆ. ಅವನು ಬಂದ ನಂತರ ಅವನ ಕೂಡ ಮಾತಾಡಬೇಡ. ಅವನನ್ನು ಕಾಣಲೂ ಬೇಡ" ಎಂದು ದೇವಯಾನಿಯು ಚಿಂತಾಕುಲಳಾಗಿ ನುಡಿದಳು.

"ದೇವಯಾನಿಯಮ್ಮಾ, ಈ ನಿಮ್ಮ ಶಾಸನಕ್ಕೆ ವಿರುದ್ಧವಾಗಿ ನಾನು ರಮಾಕಾಂತರೊಡನೆ ಮಾತಾಡಿದರೆ ನೀವೇನು ಮಾಡುವಿರಿ?"

"ಇಂದಿರೇ, ಈ ದಿವಸ ನಿನ್ನ ತಲೆ ತಿರುಗಿರುವದೇನು? ಶ್ರೀಕಂಠನ ಹೆಂಡತಿಯಾಗುವವಳು ಪರಪುರುಷನೊಡನೆ ಏಕಾಂತದಲ್ಲಿ ಮಾತಾಡುತ್ತೇನೆಂದು ನನ್ನ ಮುಂದೆ ಹೇಳುವಿಯಾ, ಎದೆಗಾರ್ತಿ!"

ಇಂದಿರೆಯು ಚಟ್ಟನೆ ಎದ್ದು ಆ ಸುಚರಿತೆಯು ಕೊರಳಿಗೆ ತೆಕ್ಕೆ ಬಿದ್ದು ಅವಳ ಭುಜದ ಮೇಲೆ ತನ್ನ ಮೋರೆಯನ್ನಿಟ್ಟುಕೊಂಡು ಸುಮ್ಮನೆ ನಿಂತಳು. ದೇವಯಾನಿಯು ಮೆಲ್ಲಗೆ ಬಿಡಿಸಿಕೊಂಡು "ಇದರಲ್ಲೇನಾದರೂ ಗೂಢವಿರುವದು. ಏನಿದ್ದದ್ದನ್ನು ಹೇಳು" ಎಂದು ಕೇಳಿದಳು.

"ದೇವಯಾನಿಯಮ್ಮಾ, ಈ ಹೊತ್ತಿನ ವರೆಗೂ ಒಂದು ಸಂಗತಿಯನ್ನು ಮುಚ್ಚಿಟ್ಟುಕೊಂಡು ನಿಮ್ಮ ಗೂಢವಿನೋದ ಮಾಡಿದ ಬಗ್ಗೆ ಕ್ಷಮಿಸಿರಿ. ಶ್ರೀಕಂಠನಿಗೆ ನನ್ನನ್ನು ಕೊಡುವದು ರಹಿತವಾಗಿದೆ. ನನ್ನ ತಂದೆಗಳು ಈ ಮಾತಿಗೆ ಒಪ್ಪಿಕೊಂಡಿರುವರು." ಎಂದು ಇಂದಿರೆಯು ಹೇಳಿದಳು.

"ಏನು!! ಆ ಮದುವೆ ರಹಿತವಾಯಿತೇ? ಹೀಗೆ ಹೇಗಾಯಿತು! ಎಲ್ಲವನ್ನೂ ಹೇಳು" ಎಂದು ದೇವಯಾನಿಯು ಉತ್ಸುಕತೆಯಿಂದ ಕೇಳಿದಳು.

ಇಂದಿರೆಯು ತಾನು ಶ್ರೀಕಂಠನಿಗೆ ಪತ್ರ ಬರೆದದ್ದನ್ನೂ ತನ್ನ ತಂದೆಗೂ ತನಗೂ ನಡೆದ ವಾಗ್ವಾದನನ್ನೂ ಸವಿಸ್ತಾರವಾಗಿ ಹೇಳಿದಳು.

"ಅಕ್ಕಮ್ಮಾ, ನೀನೊಳ್ಳೇ ಕುತ್ತಿನೊಳಗಿಂದ ಪಾರಾದಿ! ನನಗಾದ ಹರ್ಷವು ಅಷ್ಟುಇಷ್ಟಂತಿಲ್ಲ. ಆನಂದಾಶ್ರುಗಳ ಮೂಲಕ ನಿನ್ನ ರತಿದೇವಿಯಂಥ ಮುಖವು ನನಗೆ ಚನ್ನಾಗಿ ಕಾಣಿಸಲೊಲ್ಲದು" ಎಂದು ಹೇಳಿ, ದೇವಯಾನಿಯು ಕಣ್ಣೊರಸಿಕೊಂಡು, ಚಂದಿರನಂತೊಪ್ಪುವ ಇಂದಿರೆಯ ಸುಂದರವಾದ ವದನವನ್ನು ಸಾಂದ್ರಾನುರಾಗದಿಂದ ನೋಡಿ ರನ್ನಗನ್ನಡಿಯಂತಿರುವ ಆ ತನ್ನಿಯ ಕೆನ್ನೆಗೆ ಪ್ರಸನ್ನೆಯಾಗಿ ಚುಂಬನವನ್ನಿಟ್ಟಳು.

ದೇವಯಾನಿಯಮ್ಮಾ, ರಮಾಕಾಂತರು ನನ್ನಲ್ಲಿ ಅನುರಾಗವುಳ್ಳವರಾಗಿ ದ್ದದ್ದು ನಿಜವೇ ? ಇನ್ನೊಂದಾವರ್ತಿ ದಯಮಾಡಿ ಹೇಳಿರಿ. ಕಿವಿತುಂಬ ಕೇಳಿ ಅಕ್ಕರತೆಯನ್ನು ಪಡುವೆನು. ಎಷ್ಟು ಬಾರಿ ಕೇಳಿದರೂ ಮತ್ತು ಕೇಳಬೇಕೆಂದೆನಿಸು ತ್ತದೆ." ಎಂದು ಇಂದಿರೆಯು ಲಜ್ಜಾವನತಮುಖಿಯಾಗಿ ನುಡಿದಳು.

"ಮುದ್ದು ಮಗಳೇ, ರಮಾಕಾಂತನು ನಿನ್ನ ಮೇಲೆ ಸಂಪೂರ್ಣವಾಗಿ ಅನು ರಕ್ತನಾಗಿರುವನು. ಇದನ್ನು ನೀನು ಇನ್ನು ಹತ್ತೂ ಸಾರೆ ಕೇಳಿದರೂ ಬೇಸರಿಲ್ಲದೆ ಹೇಳುವೆನು. ಈ ಅಧೀರತೆಯು ಕಾಮಿನಿಯರಿಗೆ ಸಾಮಾನ್ಯವಾದದ್ದು. ನಿನ್ನದೇನು ದೋಷವಲ್ಲ" ಎಂದು ದೇವಯಾನಿಯು ಇಂದಿರೆಯ ಹೆಗಲ ಮೇಲೆ ಕಯ್ಯ ಹಾಕಿ ಮಾತಾಡಿದಳು.

ಇಂದಿರೆಗೆ ತಾನು ಭೂಲೋಕದಲ್ಲಿರುವೆನೋ ಸ್ವರ್ಗದಲ್ಲಿರುವೆನೊ, ಎಂಬಂತಾಯಿತು. ದೇವಯಾನಿಯು ಹತ್ತರ ಕುಳಿತು ಈ ವಾರ್ತೆಯನ್ನು ಕೇಳಿ ದರೇ ನನಗಿಷ್ಟು ಆಹ್ಲಾದವಾಗಿರುವದು ; ಪ್ರತ್ಯಕ್ಷ ರಮಾಕಾಂತರು ನನ್ನ ಮೇಲೆ ಕಯ್ಯ ಹಾಕಿ ತಮ್ಮ ಹೃದ್ಗತವನ್ನು ನನಗೆ ತಿಳಿಸಿದಲ್ಲಿ ನನ್ನ ದಶೆಯೇನಾಗುವದೋ ಎಂದು ಯೋಚಿಸಿ ರೋಮಾಂಚಹೊಂದಿದಳು.

"ದೇವಯಾನಿಯಮ್ಮಾ, ಅವರು ಇದೇ ದಿವಸವೇ ಬರುವವರಾಗಿರುವ ರೇನು ?" ಎಂದು ಇಂದಿರೆಯು ಅಧೀರಳಾಗಿ ಕೇಳಿದಳು.

"ಅವರಂದರಾರು ?"

"ಯಾರೆಂದೇನು ಹೇಳಲಿ !" ಎಂದು ಇಂದಿರೆಯು ಸ್ಮಿತಲಜ್ಜೆಯಾಗಿ ಸೆರಗು ಚನ್ನಾಗಿ ಹೊದ್ದುಕೊಂಡು ನೆಲ ನೋಡುತ್ತ ಕುಳಿತಳು.

"ಆಹಾ ! ಈಗಲೇ ಹೆಸರು ತಕ್ಕೊಳ್ಳಲಿಕ್ಕೆ ಇಷ್ಟು ನಾಚಿಕೆಯೇ ? ಉರಟಣೀ ಕಾಲಕ್ಕಂತೂ ನಮ್ಮನ್ನು ಪೀಡಿಸಿಬಿಡುವಿ ತೆಗಿ !" ಎಂದು ದೇವ ಯಾನಿಯು ಖೊಳ್ಳನೆ ನಕ್ಕಳು.

"ಅಮ್ಮಾ, ಮಾತಿನ ಭರದಲ್ಲಿ ಎಷ್ಟು ಹೊತ್ತಾಯಿತು ನೋಡಿರಿ ! ಊಟಕ್ಕೆ ಹಾದೀ ನೋಡುತ್ತಿದ್ದಾರು. ಅಪ್ಪಣೆ ಕೊಡಿರಿ ; ಸಾಯಂಕಾಲಕ್ಕೆ ಮತ್ತೆ ಬರುವೆನು." ಎಂದು ಇಂದಿರೆಯು ಎದ್ದು ನಿಂತು ತನ್ನ ಶಾಲು ಮೈಮೇಲೆ ತಕ್ಕೊಂಡಳು.

"ಸಾಯಂಕಾಲಕ್ಕೆ ನಾನು ಕರಿಸಿದರೆ ಬರುವಿಯಂತೆ ಇಲ್ಲದಿದ್ದರೆ ಕಾರಣ ವಿಲ್ಲ"

"ಅದ್ಯಾಕೆ ದೇವಯಾನಿಯಮ್ಮನವರೇ ?"

"ಸಂಜೆಗೆ ರಮಾಕಾಂತನು ಬರುವವನಿದ್ದಾನೆ. ಅವನ ವರ್ತಮಾನವನ್ನೆಲ್ಲ ಚನ್ನಾಗಿ ವಿಚಾರಿಸುವದದೆ. ನೀನು ಬಂದಿಯಾದರೆ ಆ ಹುಡುಗನ ಮನಸ್ಸು ಸ್ಥಿರವಾಗಿ ಉಳಿಯಲಿಕ್ಕಿಲ್ಲ. ಅವನ ಕೂಡ ಮಾತಾಡುವಾಗ್ಯ ಮೂರನೆಯವರು ನನಗೆ ಬೇಡ." ಎಂದು ದೇವಯಾನಿಯು ಜಳ ಜಳ ಹೇಳಿದಳು.

ಹಾಗೆ ಆಗಲೆಂದು ಹೇಳಿ ಇಂದಿರೆಯು ಉಲ್ಲಾಸದಿಂದ ಪುಟಿಯುತ್ತ ತನ್ನ ಮನೆಗೆ ನಡೆದಳು,

ಜಯರಾಯನು ಎಂದಿಗಾದರೂ ಇಂದಿರೆಯ ಮೇಲೆ ಮಿತಿಮೀರಿದ ಮಮತೆ ಮಾಡುತ್ತಿದ್ದನು. ಅವಳಿಗೋಸ್ಕರವಾಗಿಯೇ ಕಷ್ಟಪಟ್ಟು ದ್ರವ್ಯ ಸಂಚಯಮಾಡುತ್ತಿದ್ದನು. ಅವಳನ್ನು ದೊಡ್ಡ ಮನೆತನಕ್ಕೆ ಕೊಟ್ಟು ಅವಳಿಗೂ ತನಗೂ ಕೂಡಿಯೆ ಪ್ರತಿಷ್ಠೆಯಾಗಬೇಕೆಂದು ಅವನು ಯೋಚಿಸಿದ್ದನು. ಜಯರಾಯನಿಗೆ ಸ್ವತಃ ವಿವಾಹದಲ್ಲಿ ಪ್ರೀತಿ ಎಂಬುದೇನು ಗೊತ್ತಿದ್ದಿಲ್ಲ. ಕಾರಣ ಅವನಿಗೆ ಇಂದಿರೆಯು ಹಟಮಾಡುವ ಅರ್ಥ ಚನ್ನಾಗಿ ತಿಳಿಯಬರಲಿಲ್ಲಾದ್ದರಿಂದ ಇಬ್ಬರಿಗೂ ಮನಸ್ತಾಪವಾಯಿತು. ಶ್ರೀಕಂಠನ ಮದುವೆಯ ಮಾತು ಮುರಿಯುವೆನೆಂದು ತಾನು ಇಂದಿರೆಗೆ ಆಶ್ವಾಸನೆ ಕೊಟ್ಟಿದ್ದನಾದ್ದರಿಂದ ಆ ದಿವಸ ಭೋಜನೋತ್ತರ ಅವನು ಇಂದಿರೆಯ ಬಳಿಗೆ ಬಂದು ಹೇಳಿದ್ದೇನೆಂದರೆ :—

"ಇಂದಿರಾ, ಈ ದಿವಸ ಸಾಯಂಕಾಲಕ್ಕೆ ನಾನು ಬೆಂಗಳೂರಿಗೆ ಹೊರಡುತ್ತೇನೆ. ನಾಳೆನಾಡದ ತಿರುಗಿ ಬರುವೆನು. ನಿನ್ನಿಚ್ಛೆಯಂತೆ ವ್ಯವಸ್ಥೆ ಮಾಡಿ ಬರುವೆನು."

"ಇದೇ ದಿವಸವೇ ನೀವು ಹೊರಡತಕ್ಕವರೇನು ?"

"ಅಹುದು. ನಿನ್ನಿಚ್ಛೆಗಾಗಿ ಏನಾದರೂ ಮಾಡಬೇಕಲ್ಲ! ಶ್ರೀಕಂಠನನ್ನು ಸಮಾಧಾನಗೊಳಿಸಿ ವಿಶೇಷ ಬೊಬ್ಬಾಟವಾಗದಂತೆ ಮಾತು ಮುಗಿಸಿಕೊಂಡು ಬರುತ್ತೇನೆ." ಎಂದು ಹೇಳಿ ಜಯರಾಯನು ಬೆಂಗಳೂರಿಗೆ ಹೊರಡುವ ಸಿದ್ಧತೆಗೆ ತೊಡಗಿದನು.

ಜಯರಾಯನು ಬೆಂಗಳೂರಿಗೆ ಹೊರಟುಹೋದನು. ಸಂಜೆಯಾದರೂ ದೇವಯಾನಿಯು ತನ್ನನ್ನು ಕರೆ ಕಳುಹಿಸಲಿಲ್ಲ. ತನ್ನ ಹೃದಯಾಭಿರಾಮನು ಬಂದಿರುವನೋ ಇಲ್ಲವೋ ? ತನ್ನ ಭೆಟ್ಟಿಗೆ ಬರುವಾಗ ಅವನಿಗೆ ಮಾರ್ಗದಲ್ಲಿ ಅಪಶಕುನವಾಯಿತೆಂದು ಹಾಗೆಯೇ ಜವಾನಕ್ಕೆ ಹೊರಟುಹೋದನೋ ಏನೋ ?

ಪ್ರೇಮವು ಸಫಲವಾಗುವ ಪೂರ್ವದಲ್ಲಿ ಎಷ್ಟಾದರೂ ವಿಘ್ನಗಳು ತಟ್ಟುವವು ? ಯಾವಕಾರ್ಯಕ್ಕಾದರೂ ಜನರು ವಿಘ್ನೇಶ್ವರನನ್ನಾರಾಧಿಸಿಯೇ ಮುಂದೆ ಸಾಗುವರು. ಪ್ರಣಯಿಗಳು ಮಾತ್ರ ವಿನಾಯಕನ ಹೆಸರೇ ತಕ್ಕೊಳ್ಳುವದಿಲ್ಲ. ಇದಕ್ಕಾಗಿಯೇ ಈ ವರ್ಗಕ್ಕೆ ವಿಘ್ನಗಳು ಕಯ್ತೊಳಕೊಂಡು ಬೆನ್ನುಹತ್ತಿರುತ್ತವೆ. ಎಂದು ಯೋಚಿಸಿ, ತನ್ನ ವಿನೋದಾಸ್ಪದವಾದ ವಿಚಾರಕ್ಕೆ ತಾನೇ ನಕ್ಕಳು. ಇನ್ನೂ ದೇವಯಾನಿಯು ತನ್ನನ್ನು ಕರಿಸಲಿಲ್ಲ. ಇದಕ್ಕೇನು ಮಾಡಬೇಕು ? ನೆಪೋಲಿಯನ್ ಚಕ್ರವರ್ತಿಯು ಯುದ್ಧದ ಪರಿಣಾಮದ ಚಿಂತೆ ಹತ್ತಬಾರದೆಂದು ತುಮುಲಯುದ್ಧ ನಡೆದಾಗ್ಗೆ ಭೂಮಿತಿಯ ಪ್ರಶ್ನೆಗಳನ್ನು ಬಿಡಿಸುತ್ತಿದ್ದನಂತೆ. ತಾನಾದರೂ ಈ ಪ್ರಸಂಗದಲ್ಲಿ ಹಾಗೇ ಮಾಡಬೇಕೆಂದು ಯೋಚಿಸಿ ರಘುವಂಶದ ಆರನೇ ಸರ್ಗ ತೆಗೆದು ಓದಹತ್ತಿದಳು. ಆದರೆ ಪ್ರಬಲನಾದ ಆ ರಣಧೀರನೆಲ್ಲಿ ? ಈಗ್ಗೆ ಅಧೀರೆಯಾಗಿದ್ದ ಈ ಅಬಲೆಯೆಲ್ಲಿ ? ಇಂದಿರೆಗೆ ತನ್ನ ವಾಚನದಲ್ಲಿ ಮನಸ್ಸಾಗದೆ ತಾನು ತಕ್ಕೊಂಡ ಮಹಾಕಾವ್ಯವನ್ನು ಬಿಸಾಟಿ ಮತ್ತೆ ಆನಂದದ ತರಂಗಗಳುಳ್ಳ ವಿಚಾರದಲ್ಲಿ ಮುಳುಗಿ ಏಳಹತ್ತಿದಳು.

ಪ್ರಣಯಿಗಳ ಸಂಯೋಗವು

ರಮಾಕಾಂತನು ಕಾವೇರಿಯಲ್ಲಿ ಬಿದ್ದವನು ನಟೇಶನ ತೆಕ್ಕೆ ಬಿಡಿಸಿಕೊಂಡು ಈಸಹತ್ತಿ ಬಳಿಯಲ್ಲಿಯೇ ತೇಲಿ ಹೋಗುತ್ತಿರುವ ಮರದ ದಿಂಡು ಹಿಡುಕೊಂಡು ಪ್ರವಾಹದೊಡನೆ ನಡೆದನು. ಪಶ್ಚಿಮವಾಹಿನೀ ಸ್ಟೇಷನದಿಂದ ನದಿಯು ಗುಂಟ ಐದು ಮೈಲು ಹೋದ ಮೇಲೆ ದಂಡೆಗೆ ಹತ್ತಿದನು. ಆಗ್ಗೆ ಸುಮಾರು ಮೂರು ತಾಸು ರಾತ್ರಿಯಾಗಿತ್ತು. ಶಿಳ್ಳಗಾಳಿಯಲ್ಲಿ ಕಟಕಟ ನಡುಗುತ್ತ ಬಹು ಪ್ರಯಾಸದಿಂದ ಪಶ್ಚಿಮವಾಹಿನೀ ಸ್ಟೇಷನಕ್ಕೆ ಬಂದನು. ಅಲ್ಲಿಳಿದ ಕೆಲವು ಸಜ್ಜನರಾದ ಪ್ರವಾಸಸ್ಥರು ಕೊಟ್ಟ ಒಣ ಬಟ್ಟೆಗಳನ್ನುಟ್ಟುಕೊಂಡು ಹೇಗೋ ಬೆಳಗು ಕಳೆದನು. ಪ್ರಾತಃಕಾಲದಲ್ಲಿಯೇ ಒಬ್ಬ ಮನುಷ್ಯನನ್ನು ಹುಡುಕಿ ದೇವಯಾನಿಗೊಂದು ಪತ್ರ ಬರೆದು ಕಳುಹಿಸಿ ತಾನಿನ್ನು ಶ್ರೀರಂಗಪಟ್ಟಣಕ್ಕೆ ಹೋಗಬೇಕೋ ಬಾರದೋ ಎಂದು ಯೋಚಿಸುತ್ತ ಕುಳಿತನು. ಸಾಯಂಕಾಲಕ್ಕೆ ಬೆಂಗಳೂರ ಗಾಡಿಯು ಪ್ರವಾಸಸ್ತರನ್ನು ನಾಮೆಗಳಿಂದ ದಾಟಿಸುವಾಗ ತಾನೂ ದಾಟಿ ಶ್ರೀರಂಗಪಟ್ಟಣದ ಸ್ಟೇಷನಕ್ಕೆ ಬಂದು ದೇವಯಾನಿಯ ಮನೆಯ ಬಾಗಿಲಲ್ಲಿ ಬಂದು ಒಳಗೆ ಹೋಗಲೋ ಬೇಡಲೋ ಎಂದು ಯೋಚಿಸುತ್ತಿರುವಾಗ ಗಂಗೆಯು ಇವನನ್ನು ಕಂಡು ವಿನೋದ

ದಿಂದ 'ಯಾವಾಗ ಬರೋಣಾಯಿತು ಧನಿಯರು' ಎಂದು ಕೇಳಿದಳು.

"ಗಂಗೆಯೇನು! ಈಗ ಬಂದೆನು. ಮೇಲೆ ಯಾರ್‍ಯಾರು ಇರುವರು?" ಎಂದು ರಮಾಕಾಂತನು ಕೇಳಿದನು.

"ಯಾರೂ ಇಲ್ಲ. ಅಮ್ಮನವರೊಬ್ಬರೇ ಇರುವರು, ನೀವು ಯಾರಿಗೆ ಹೆದರುವಿರೊ ಅವರಿನ್ನೂ ಬಂದಿಲ್ಲ. ಏನೂ ಭಯವಿಲ್ಲ. ಮೇಲೆ ಹೋಗ ಬಹುದು." ಎಂದು ಗಂಗೆಯು ಹಾಸ್ಯಮಾಡಿ ಮಾತಾಡಿದಳು.

ರಮಾಕಾಂತನು ಗಂಗೆಯ ಗರ್ಭಿತಾರ್ಥನನ್ನು ತಿಳಿದು "ಗಂಗೇ, ನೀನು ಬರಬರುತ್ತ ಒಳ್ಳೇ ಚೇಷ್ಟೆ ಕಲಿಯುಹತ್ತಿದಿ. ನಿನಗೊಬ್ಬ ಗಂಡನನ್ನು ನೋಡ ಬೇಕಾಯಿತು" ಎಂದು ನಗುತ್ತ ರಮಾಕಾಂತನು ಉಪ್ಪರಿಗೇ ಮೇಲೆ ನಡೆದನು. ಗಂಗೆಯೂ ನಾಚಿಕೊಂಡು ನಡುಮನೆಯಲ್ಲಿ ಓಡಿಹೋದಳು.

ರಮಾಕಾಂತನು ಬಂದವನೇ ದೇವಯಾನಿಯ ಕಾಲ್ಗರಗಿ ಕುರ್ಚಿಯ ಮೇಲೆ ಕುಳಿತುಕೊಂಡನು.

"ಕಾಂತೂ, ಬಂದಿಯಾ, ಬಹಳ ಒಳ್ಳೇದಾಯಿತು. ಮಗನೇ, ನೀನು ಕುತ್ತಿನೊಳಗಿಂದ ಪಾರಾಗಿ ಬಂದದ್ದು ಮತ್ತೆ ಹುಟ್ಟಿ ಬಂದಂತಾಯಿತು. ನಿನ್ನ ಬಗ್ಗೆ ನಾವು ಇಲ್ಲಿ ಎಷ್ಟು ಚಿಂತೆ ಮಾಡುತ್ತಿದ್ದೆವು. ನಿನಗೇನಾದರೂ ಅಪಾಯ ವಾಗಿಲ್ಲವಷ್ಟೇ!" ಎಂದು ದೇವಯಾನಿಯು ಮಮತೆಯಿಂದ ಕೇಳಿದಳು.

"ಏನೂ ಅಪಾಯವಾಗಲಿಲ್ಲ. ದೇವರ ಕೃಪೆಯಿಂದ ಪಾರಾಗಿಬಂದೆನು."

"ಅಲ್ಲಪ್ಪಾ ಕಾಂತೂ, ಈಗೀಗ ನಿನ್ನ ಸಮಾಚಾರವನ್ನೇ ತಿಳಿಸದಂತಾದಿ! ಒಂದಾದರೂ ಪತ್ರ ಹಾಕಬಾರದೇ? ನೀನು ಹೇಗಿರುವಿ; ಏನು ಮಾಡುತ್ತಿರುವಿ ಎಂಬುವದರ ಬಗ್ಗೆ ನಾವು ಹಗಲಿರುಳೂ ಚಿಂತಿಸುತ್ತಿರಲು ನೀನು ಸ್ವಸ್ಥ ಕೂಡ್ರ ಬಹುದೇ!"

"ಅವ್ವಾ, ನನ್ನಿಂದ ತಪ್ಪಾಯಿತು. ನನ್ನ ಮನಸ್ಸೇ ನೆಟ್ಟಗಿದ್ದಿಲ್ಲ. ಏನು ಮಾಡಲಿ!"

"ಇಂದಿರೆಗೆ ಮಾತ್ರ ನಿನ್ನ ದರ್ಶನಕ್ಕೆ ಬರುವೆನೆಂದು ಬರೆಯಲಿಕ್ಕೆ ನಿನ್ನ ಮನಸ್ಸು ನೆಟ್ಟಗಿತ್ತು!"

"ಆ ಪತ್ರವು ನಿಮಗೆ ಹೇಗೆ ಸಿಕ್ಕಿತು?" ಎಂದು ಚಕಿತನಾಗಿ ಕೇಳಿದನು.

"ಸರಕಾರದಲ್ಲಿ ನಿನ್ನ ಪತ್ರದ ಡಂಗುರ ಹೊಡಿಯಿತಲ್ಲ?" ಎಂದು ದೇವ ಯಾನಿಯಂದಳು.

"ಅಹುದು. ನಾನು ಅದನ್ನು ನನ್ನ ಜೇಬಿನಲ್ಲಿಟ್ಟಿದ್ದೆನು. ಅದೇ ಅಂಗಿಯನ್ನು ನಟೇಶನಿಗೆ ನಾನು ಹಾಕಲಿಕ್ಕೆ ಕೊಟ್ಟಿದ್ದೆನು. ಈ ಪತ್ರವು ನಟೇಶನ ಹೆಣದ ಮೇಲೆ ಸಿಕ್ಕಿತಲ್ಲೇ ?"

ರಮಾಕಾಂತನು ತಾನು ಹಿಂದಕ್ಕೆ ದೇವಯಾನಿಯಮ್ಮನಿಗೆ ಭೆಟ್ಟಿಯಾಗಿ ಹೋದಾರಭ್ಯ ಈ ದಿವಸದವರೆಗೆ ನಡೆದ ತನ್ನ ವೃತ್ತಾಂತವನ್ನೆಲ್ಲ ಹೇಳಿದನು. ಆಮೇಲೆ ದೇವಯಾನಿಯು ಇಂದಿರೆಗೆ ರಮಾಕಾಂತನು ಬಂದಿರುವನೆಂಬ ವರ್ತಮಾನ ತಿಳಿಸಿ ಅವಳಿಗೆ ಬರಹೇಳಿ ಕಳಿಸಿದಳು. ಮನೆಯಲ್ಲಿ ಯಾರೂ ಇಲ್ಲದ್ದರಿಂದ ರಮಾಕಾಂತ ದೇವಯಾನಿಯರನ್ನೇ ತನ್ನ ಮನೆಗೆ ಗಾಡೀ ಕೊಟ್ಟು ಭೋಜನಕ್ಕೆ ಕರೆಕಳಿಸಿದಳು. ದೇವಯಾನಿಯು ತನಗೆ ಬರುವದಾಗುವದಿಲ್ಲೆಂದು ಹೇಳಿ ರಮಾಕಾಂತನನ್ನೊಬ್ಬನನ್ನೇ ಕಳಿಸಿಕೊಟ್ಟಳು.

ಇಂದಿರೆಯು ರಮಾಕಾಂತನನ್ನು ಸಂಭ್ರಮದಿಂದ ಪ್ರೀತಿಸುವಳೆಂದು ತಾನೇ ಹೇಳುವದು ಸರಿಯಲ್ಲವೆಂದು ತಿಳಿದು ದೇವಯಾನಿಯು ರಮಾಕಾಂತನನ್ನೊಬ್ಬನನ್ನೇ ಇಂದಿರೆಯ ಮನೆಗೆ ಕಳುಹಿಸಿ ಕೊಟ್ಟಳು. ಪರಸ್ಪರರನ್ನು ಪ್ರೀತಿಸುತ್ತಿರುವ ಈ ಪ್ರಣಯೀಯುಗ್ಮವು 'ಪರಸ್ಪರೇಣ ಸ್ಪೃಹಣೀಯಶೋಭಮ್' ಎಂಬಂತಿರುವದು. ಇವರು ಒಬ್ಬರನ್ನೊಬ್ಬರು ಕಣ್ಣುತುಂಬ ನೋಡಿ ತಮ್ಮ ಲೋಚನಗಳ ಸಾಫಲ್ಯವನ್ನು ಮಾಡಿಕೊಳ್ಳಲಿ ಎಂದು ತನ್ನ ಬಾಯಿಯಲ್ಲಿಯೇ ನುಡಿಯುತ್ತ ರಮಾಕಾಂತನನ್ನು ರಥದವರೆಗೆ ಕಳಿಸಿಬಂದಳು.

ರಮಾಕಾಂತನು ಇಂದಿರೆಯ ಬಾಕಿಲಲ್ಲಿ ರಥದಿಂದಿಳಿದ ಕೂಡ್ಲೆ ಅವನ ಮೈಯಲ್ಲಿ ಕಂಪ ಹುಟ್ಟಿತು. ಧೈರ್ಯ ತಾಳಿಕೊಂಡು ನಂಜುಂಡನು ಕರದೊಯ್ದು ಕುಳ್ಳಿರಹೇಳಿದ ಸ್ಥಳದಲ್ಲಿ ಕುಳಿತುಕೊಂಡನು.

ರಮಾಕಾಂತನನೊಬ್ಬನೇ ಬಂದ ವರ್ತಮಾನ ಕೇಳಿ ಇಂದಿರೆಯ ಎದೆಯಾದರೂ ಡವ ಡವ ಹಾರಹತ್ತಿತ್ತು. ಅವಸರದಿಂದೆದ್ದು ಕನ್ನಡಿ ನೋಡಿಕೊಂಡಳು. ಅವಳಿಗೆ ತನ್ನ ಮುಖವು ಮ್ಲಾನವಾದಂತೆ ಕಾಣಿಸಿತು. ತಲೆಯು ಓರಣವಾಗಿದ್ದರೂ ಅಸ್ತವ್ಯಸ್ತವಾಗಿರುವದೆಂದು ತಿಳಿದುಕೊಂಡು ದಾಸಿಯನ್ನು ಕರೆದು ಮತ್ತೆ ಹೆರಳುಹಾಕಿಸಿಕೊಂಡಳು. ಮುಖವನ್ನು ಸ್ವಚ್ಛವಾಗಿ ತೊಳಕೊಂಡು ಕುಂಕುಮವನ್ನು ತೀಡಿ ಹಚ್ಚಿಕೊಂಡು ಗಂಟಿನಲ್ಲಿಯ ಚತುರಂಗಚಿಕ್ಕೆಯ ಸೀರೆಯನ್ನುಟ್ಟು ಮುಂಗಿಲು ಬಂದಿದ ಜರತಾರೀ ಕುಪ್ಪಸವನ್ನು ತೊಟ್ಟುಕೊಂಡಳು. ತನ್ನ ಮೈಮೇಲಿನ ಆಭರಣಗಳನ್ನು ಚೆನ್ನಾಗಿ ಸಾವರಿಸಿಕೊಂಡು ಮತ್ತೆ ಕನ್ನಡಿ ನೋಡಿ

ಕೊಂಡಳು. "ರಮಾಕಾಂತರು ಹಿಂದಕ್ಕೆ ನನ್ನ ರೂಪಲಾವಣ್ಯಗಳು ಮನೋಹರವಾಗಿವೆ ಎಂದು ಹೇಳಿದ್ದರು. ಈಗ್ಯೆ ಅವರ ಅಭಿಪ್ರಾಯವೇನಾಗುವದೋ" ಎಂದನ್ನುತ್ತ ರಮಾಕಾಂತನಿದ್ದೆಡೆಗೆ ಹೊರಟಳು. "ಈ ಹಣೆಗೆ, ಕನ್ನಡಿಗಳ ಕೆಲಸವನ್ನು ನಾನು ಈ ಮೊದಲೇ ತೀರಿಸಿಕೊಳ್ಳಬಾರದಿತ್ತೇ? ಎಷ್ಟು ತಡವಾಯಿತು? ಅವರೆಲ್ಲಿ ಎದ್ದು ಹೋಗುವರೋ?" ಎಂದು ತರಲ ಭಾವದವಳಾಗಿ ರಮಾಕಾಂತನು ಕುಳಿತಿದ್ದ ಪುಸ್ತಕಾಲಯದ ಬಾಕಿಲಕ್ಕೆ ಮೆಲ್ಲಗೆ ಬಂದು ನಿಂತಳು. ಒಳಗೆ ಹೋಗಲಿಕ್ಕೆ ಧೈರ್ಯ ಸಾಲಲೊಲ್ಲದು.

ಇಂದಿರೆಯು ಪೈಜಣಗಳ ಜಣತ್ಕಾರವನ್ನೂ ಅವಳ ಕಂಕಣಗಳ ಮನೋಹರವಾದ ನಾದವನ್ನೂ ಕೇಳಿ, ವೀಣೆ ಬಾರಿಸುವದನ್ನು ಕೇಳಿ, ಬೆದರಿ ನಿಂತ ಕೃಷ್ಣಸಾರನಂತೆ ರಮಾಕಾಂತನು ತಲ್ಲಣಗೊಂಡನು. ಉದ್ವೇಗದಿಂದ ದೀರ್ಘ ಶ್ವಾಸಬಿಡಹತ್ತಿದನು. ತನ್ನ ಅಂಗಿ ರುಮಾಲುಗಳನ್ನು ಚೆನ್ನಾಗಿ ಮಾಡಿಕೊಂಡು ಅಧೀರನಾಗಿದ್ದರೂ ಧೀರನ ತೆರದಿಂದ ಕುರ್ಚಿಯ ಮೇಲೆ ಕುಳಿತುಕೊಂಡನು.

ಇಂದಿರೆಯು ಕಯ್ಯಲ್ಲಿ ತಾಂಬೂಲ ಸುಗಂಧ ದ್ರವ್ಯಗಳುಳ್ಳ ತಬಕವನ್ನು ತಕ್ಕೊಂಡು ಗಟ್ಟಿ ಮನಸ್ಸು ಮಾಡಿಕೊಂಡು ಒಂದಾವರ್ತಿ ತನ್ನ ಮನೋರಮಣನ ಸಮೀಪಕ್ಕೆ ಬಂದುಬಿಟ್ಟಳು. ಮೇಜಿನ ಮೇಲೆ ತಾನು ತಂದ ತಬಕವನ್ನಿರಿಸಿ ಆ ಮೇಜಿಗೆ ಆತುಕೊಂಡು ನಿಂತು ಲಜ್ಜಾವನತಮುಖಿಯಾಗಿ ರಮಾಕಾಂತನ ಮನೋಹರವಾದ ಸ್ವರೂಪವನ್ನು ಓರೆಗಂಣಿನಿಂದ ನೋಡುತ್ತ ನಿಂತಳು. ಸುದಕ್ಷಿಣಾದೇವಿಯು ದಿಲೀಪ ನೃಪಸಿಂಹನನ್ನು ನೋಡುತ್ತಿದ್ದದ್ದನ್ನು ಕವಿರಾಜನು ವರ್ಣಿಸಿದ್ದು ನಮ್ಮ ವಾಚಕರಿಗೆ ಈ ಪ್ರಸಂಗದಲ್ಲಿ ನೆನಪಾಗದಿರಲಿಕ್ಕಿಲ್ಲ. 'ಪಪೌ ನಿಮೇಷಾಲಸಪಕ್ಷ್ಮಪಂಕ್ತಿರೂಪೋಷಿತಾಭ್ಯಾಮಿವ ಲೋಚನಾಭ್ಯಾಮ್.' "ಇಂದಿರೆಯು ಶೃಂಗರಿಸಿದ ದಿವ್ಯಾಂಗವನ್ನು ಕಂಡು ಚಕಿತನಾಗಿ ರಮಾಕಾಂತನು ಚಟ್ಟನೆ ಎದ್ದು ನಿಂತನು. ಇದನ್ನು ಕಂಡು ಇಂದಿರೆಯು ನಸುನಕ್ಕು ನನ್ನ ಮಂತ್ರಣಕ್ಕೆ ಮಾನಕೊಟ್ಟು ದಯಮಾಡಿ ಬರೋಣಾಯಿತು; ಇದರಿಂದ ನಾನು ಕೃತಾರ್ಥಳಾಗಿರುವೆನು. ನಿಲ್ಲೋಣೇಕಾಯಿತು? ವಿಶ್ರಮಿಸಿಕೊಳ್ಳಬೇಕು" ಎಂದು ಕೋಕಿಲೆಯಕ್ಕಿಂತಲೂ ಮಧುರವಾದ ವಾಣಿಯಿಂದ ವಿಜ್ಞಾಪನೆ ಮಾಡಿಕೊಂಡಳು.

"ನಿಮ್ಮ ಮಂತ್ರಣದಿಂದ ನಾನೇ ಧನ್ಯನಾಗಿರುವೆನು. ದೇವಯಾನಿಯಮ್ಮನವರು ತಮಗೆ ಬರೋಣಾಗುವದಿಲ್ಲೆಂದು ಹೇಳಿದ್ದರಿಂದ ನಾನೊಬ್ಬನೇ ಬಂದೆನು" ಎಂದು ಕುಂಠಿತವಾದ ಧ್ವನಿಯಿಂದ ರಮಾಕಾಂತನು ನುಡಿದನು.

" ದೇವಯಾನಿಯಮ್ಮನವರು ಮನೆ ಬಿಟ್ಟು ಹೊರಗೆ ಬೀಳುವದೇ ಇಲ್ಲ. ತಾವೆಷ್ಟು ಸೊರಗಿರುವಿರಿ ! ತಾವು ಗಂಡಾಂತರದಿಂದ ಪಾರಾದದ್ದು ಕೇಳಿ, ನಮಗೆಲ್ಲರಿಗೂ ಬಹಳೇ ಆನಂದವಾಗಿರುವದು. ಪೆಟ್ಟುಗಿಟ್ಟೇನು ತಗಲಿಲ್ಲವಷ್ಟೇ ?"

" ಏನೂ ಇಲ್ಲ. ನನ್ನ ಕ್ಷೇಮಚಿಂತನೆ ಮಾಡಿದ್ದಕ್ಕಾಗಿ ತಮ್ಮ ಉಪಕಾರವನ್ನು ನಾನು ನೆನಿಸಬೇಕಾಗಿದೆ."

ಇನ್ನು ಮುಂದೇನು ಮಾತಾಡಬೇಕೆಂಬುದು ಇಬ್ಬರಿಗೂ ತೋಚದೆ ಒಬ್ಬರನ್ನೊಬ್ಬರು ಆಗಾಗ್ಗೆ ಕದ್ದು ನೋಡುತ್ತ ಕೆಲ ಹೊತ್ತು ಸುಮ್ಮನೆ ಇದ್ದರು. ಇಂದಿರೆಯು ನಿಂತದ್ದು ರಮಾಕಾಂತನ ಲಕ್ಷ್ಯಕ್ಕೆ ಬಂದದ್ದರಿಂದ ಅವನು " ಇಂದಿರಾಬಾಯಿ, ನೀವು ನಿಂತಿರುವಿರೇಕೆ ? ಕೂತುಕೊಳ್ಳಿರಿ " ಎಂದು ಹೇಳಿದನು.

" ಕುಳಿತಂತೇ ಇದೆ. ತಮ್ಮಂಥ ಮಹಾಭಾಗರ ಸನ್ನಿಧಿಯಲ್ಲಿ ನಿಂತುಕೊಂಡಿರುವದೇ ಸ್ತ್ರೀಮರ್ಯಾದೆಗೆ ಉಚಿತವಾದದ್ದು. ಜೀವದಂಜಿಕೆಯಿಲ್ಲದೆ ಮೆಬ್ಬಿನಲ್ಲಿ ಹೊಗೆಬಂಡಿಯ ಪೂಲಿನ ಮೇಲೆ ಹಾಯ್ದು ಬರುವಷ್ಟು ಅಗತ್ಯವೇನಿತ್ತು ?" ಎಂದು ಅರಿತೂ ಅರಿಯದವಳಂತೆ ಇಂದಿರೆಯು ಕೇಳಿದಳು.

ಇಂದಿರೆಗೆ ಭೆಟ್ಟಿಯಾಗಿ ತನ್ನ ಮನೋಗತವನ್ನು ಅವಳಿಗೆ ಸವಿಸ್ತಾರವಾಗಿ ಹೇಳಬೇಕೆಂದು ಗಟ್ಟಿಮನಸ್ಸು ಮಾಡಿಕೊಂಡು ರಮಾಕಾಂತನು ಬಂದಿದ್ದನು. ಆದರೆ ಈ ಹೃದಯರಮಣಿಯನ್ನು ಕಂಡಕ್ಷಣವೇ ಅವನ ನಿಶ್ಚಯವೆಲ್ಲ ಕರಗಿ ಹೋಯಿತು. ಅವನ ಮನಸ್ಸು ಕಾತರಗೊಂಡದ್ದರಿಂದ ಬಾಯಿಯಿಂದ ಶಬ್ದಗಳೇ ಹೊರಡಲೊಲ್ಲವು. ಹೇಳುವೆನೆಂದು ಮತ್ತೆ ಧೈರ್ಯ ತಂದುಕೊಂಡನು. ಮತ್ತದು ಮಳಲ ಮನೆಯಂತೆ ಜರಿದು ಬಿದ್ದಿತು. ತನ್ನ ಪ್ರೀತಿಗಾಗಿಯೇ ಇವನ ಮನಸ್ಸಿನ ಸ್ಥಿತಿ ಹೀಗಾಗಿರುವದೆಂದು ಕಂಡು ಇಂದಿರೆಗೆ ಹಿಡಿಸಲಾರದಷ್ಟು ಅಹ್ಲಾದವಾಯಿತು. ಕ್ಷಣಹೊತ್ತಿನ ಮೇಲೆ ರಮಾಕಾಂತನು " ಇಂದಿರಾಬಾಯಿ, ತಮ್ಮ ಕೂಡ ಕೆಲವು ಮಾತಾಡಬೇಕೆಂದು ನಾನು ಬಂದಿದ್ದೆನು."

" ತಮ್ಮ ಸಂಗಡ ಮಾತಾಡುವದು ಮನೋಜ್ಞವಾದ ಸಂಗತಿಯೇ, ತಮಗೇನು ಹೇಳುವದಿದೆ ?" ಎಂದು ಇಂದಿರೆಯು ಮಾನವೊಲಿಸುವ ನುಡಿಯಿಂದ ನುಡಿದಳು.

" ಏನೆಂದರೆ ......ನಾನು ಸ್ವಲ್ಪದರಲ್ಲಿಯೇ ಹೇಳುತ್ತೇನೆ. ಬಹಳ ಬೆಳಿಸುವದಿಲ್ಲ."

" ಸವಿಸ್ತಾರವಾಗಿಯಾದರೂ ಹೇಳಲಿಕ್ಕೇನೂ ನನ್ನ ಅಭ್ಯಂತರವಿಲ್ಲ."

"ಈಗ್ಯೆ ನಿಮಗೆ ವಿಶೇಷ ಕೆಲಸವಿದ್ದರೆ ಮತ್ತೆ ಯಾವಾಗಾದರೂ ಹೇಳುವೆ ನಂತೆ." ಎಂದು ರಮಾಕಾಂತನು ಮತ್ತೆ ಎದೆಗುಂದಿ ನುಡಿದನು.

"ಯಾವಾಗ್ಯೆ ಹೇಳಿದರೂ ಚಿಂತೆಯಿಲ್ಲ. ಸದ್ಯಕ್ಕೆ ನನಗೇನೂ ಕೆಲಸವಿಲ್ಲ. ಭೋಜನಕ್ಕಿನ್ನೂ ಒಂದು ಒಂದೂವರೆ ತಾಸು ಅವಕಾಶವಿದೆ. ಅಲ್ಲೀವರೆಗೆ ನಾನು ಮಾಡುವದಾದರೂ ಏನು ?"

"ಆಗಲಿ ; ಈಗಲೇ ಹೇಳಿಬಿಡುವೆನು. ಭೋಜನವಾದ ಕೂಡ್ಲೆ ಹೊರಟು ಹೋಗಲಿಕ್ಕೆ ಪ್ರಶಸ್ತವಾಗುವದು."

"ತಾವಿಷ್ಟು ಸಂಕೋಚಗೊಂಡಿರುವದೇಕೆ ? ಭೋಜನವಾದ ಕೂಡ್ಲೆ ಎದ್ದೇಳುವಷ್ಟು ಅವಸರವೇನೇನಿರುವದು ? ಬಹಳ ದಿವಸಕ್ಕೆ ತಮ್ಮ ದರ್ಶನಲಾಭ ವಾಗಿರುವದು. ಪರಸ್ಪರರ ಸುಖದುಃಖಗಳ ಸಮಾಚಾರಗಳನ್ನು ಸಾವಕಾಶವಾಗಿ ಕೇಳಿಕೊಳ್ಳುವ ಇಚ್ಛೆ ನನಗೆ ಬಹಳಾಗಿರುವದು."

"ನಾನು ಜಪಾನಕ್ಕೆ ಹೋಗಬೇಕೆಂದು ನಿಶ್ಚಯಿಸಿರುವೆನು. ನಿಮ್ಮ ಭೆಟ್ಟಿ ಯಾಗದೆ ಹೋಗುವದು ಸರಿಯಾಗಿ ತೋರಲಿಲ್ಲ. ಆದ್ದರಿಂದ ನಾನಿಲ್ಲಿಗೆ ಧಾವಿಸಿ ಬಂದೆನು. ಇಷ್ಟು ದಿವಸ ನೀವು ನನ್ನನ್ನು ಸ್ನೇಹದಿಂದ ನಡಿಸಿಕೊಂಡು ನನ್ನ ಮೇಲೆ ಬಹಳ ಮಮತೆ ಮಾಡಿದಿರಿ. ಈ ಉಪಕಾರದ ಭಾರವು ನನ್ನ ಮೇಲೆ ಬಹಳಾ ಗಿರುವದು. ನಿಮ್ಮ ಸ್ಮರಣೆ ......" ಇಷ್ಟೆಂದು, ಮುಂದೆ ಮಾತಾಡಲಿಕ್ಕೆ ಧೈರ್ಯಸಾಲದೆ ರಮಾಕಾಂತನು ತಟ್ಟಿಸಿ ನಿಂತನು.

"ನೀವು ನಮ್ಮನ್ನೆಲ್ಲ ಬಿಟ್ಟುಕೊಟ್ಟು ಜಪಾನಕ್ಕೆ ಹೋಗುವಿರೇನು ?"

"ಇಲ್ಲಿರುವದು ದುಸ್ತರವಾದ್ದರಿಂದಲೇ ಎದ್ದು ಹೋಗುತ್ತೇನೆ." ಎಂದು ರಮಾಕಾಂತನಂದನು.

"ಇಲ್ಲಿರುವದೇಕೆ ದುಸ್ತರವಾಗಿರುವದು ?"

"ಇಂದಿರಾಬಾಯಿಯವರೇ ನೀವೆಂದಿಗಾದರೂ ಕ್ಷಮಾಶೀಲರೆ. ನಾನು ಹೇಳುವದು ಸ್ವಲ್ಪ ಅಸಂಬದ್ಧವಾಗಿ ಕಂಡೀತು. ನೀವು ಕೋಪಿಸಿಕೊಳ್ಳುವದಿ ಲ್ಲೆಂದು ಆಶ್ವಾಸನೆ ಕೊಟ್ಟರೆ ಹೇಳುತ್ತೇನೆ."

ನ್ಯಾಯಾಧೀಶನು ನಿರ್ಣಯವನ್ನು ಹೇಳುವಾಗ್ಯೆ ಆರೋಪಿತರಿಗಾಗಿರುವ ಅವಸ್ಥೆಯೇ ಇಂದಿರೆಯದಾಯಿತು ರಮಾಕಾಂತನೇನು ಹೇಳುವನೋ ಎಂಬ ಶಂಕೆಯಿಂದ ಇಂದಿರೆಯು ಎದೆ ಬಿಗಿದುಬಂದು ಅವಳು ಕಷ್ಟದಿಂದ ಶ್ವಾಸೋ ಚ್ಛ್ವಾಸ ಮಾಡಹತ್ತಿದಳು.

"ತಾವು ಅನುಚಿತವಾದದ್ದನ್ನೆಂದಿಗೂ ಆಡಲಿಕ್ಕಿಲ್ಲೆಂದು ನನ್ನ ನಂಬಿಕೆಯುಂಟು. ನೀವು ಏನು ಹೇಳಿದರೂ ನನಗೆ ಸಿಟ್ಟು ಬರಲರಿಯದು. ಏನೂ ಸಂಕೋಚವಿಲ್ಲದೆ ಹೇಳಿರಿ." ಎಂದು ಇಂದಿರೆಯು ಹೇಳಿದಳು.

"ನಾನು ಕೆಲವೊಬ್ಬ ಸ್ತ್ರೀಯಳನ್ನು ಲಗ್ನ ಮಾಡಿಕೊಳ್ಳುವವನಿದ್ದೆನೆಂದು ಜನರು ವಾರ್ತೆಯನ್ನು ಹುಟ್ಟಿಸಿದ್ದರು. ಅದನ್ನು ತಾವು ಕೇಳಿಬಲ್ಲಿರಷ್ಟೇ ?"

"ನಾನು ಕೇಳಿದ್ದೇನೆ."

"ಆ ವಾರ್ತೆಯಲ್ಲಿ ತಥ್ಯಾಂಶವಿರುವದೆಂದು ನೀವು ನಂಬುತ್ತೀರೇನು ?"

"ಏಕೆ ನಂಬಬಾರದು ?" ಎಂದು ಇಂದಿರೆಯು ತನ್ನ ಮನೋಹರನೊಡನೆ ಸ್ವಲ್ಪ ವಿನೋದ ಮಾಡಬೇಕೆಂದು ಕೇಳಿದಳು.

"ಆ ವಾರ್ತೆಯು ಕೇವಲ ಸುಳ್ಳಾದದ್ದು. ಕೆಲವು ಸ್ವಾರ್ಥಪರಾಯಣರು ಅದನ್ನು ಹುಟ್ಟಿಸಿದರು."

"ಅಹುದೇನು ? ಈ ವಾರ್ತೆಯನ್ನು ಹುಟ್ಟಿಸಿದವರು ಎಷ್ಟು ಹೀನ ಸ್ವಭಾವದವರು ! ಈ ದುರ್ವಾರ್ತೆಯಿಂದ ನಿಮ್ಮಕಿಂತಲೂ ಆ ದಯಾರ್ಹಳಾದ ಯುವತಿಯ ಸ್ಥಿತಿ ಏನಾಗಿರಬೇಕು ? ಜನರ ವಾರ್ತೆಯಲ್ಲಿ ತಥ್ಯಾಂಶವಿದ್ದರೆ ನಿಮಗೆ ಆ ಸ್ತ್ರೀಯಳ ಸಮಾಗಮದಿಂದ ಸುಖವಾಗುತ್ತಿದ್ದಿಲ್ಲವೇನು ?"

"ಅವಳನ್ನು ಲಗ್ನ ಮಾಡಿಕೊಂಡಿದ್ದರೆ ನಾನು ಸುಖಿಯಾಗದೆ ದುಃಖಿಯು ಮಾತ್ರ ನಿಜವಾಗಿ ಆಗುತ್ತಿದ್ದೆನು."

"ನನ್ನ ತಂದೆಗಳ ಮುಂದೆ ನೀವು ಕಮಲೆಯ ಮೇಲೆ ಪ್ರೇಮವನ್ನಿಟ್ಟಿರುವಿರೆಂದು ಹೇಳಿದಿರಂತಲ್ಲ !"

"ಪ್ರಸಂಗ ಬಂದಮೇಲೆ ಎಲ್ಲವನ್ನೂ ಹೇಳಬೇಕಾಯಿತು. ನಾನು ನಿಮ್ಮ ತಂದೆಗಳ ಮುಂದೆ ಹೇಳಿದ್ದೊಂದು, ಅವರು ಪ್ರಕಟ ಮಾಡಿದ್ದೊಂದು. ಇಂದಿರಾ ಬಾಯಿ, ಪ್ರಥಮ ದರ್ಶನಾರಭ್ಯ ನಾನು ನಿಮ್ಮ ಗುಣರೂಪಗಳನ್ನು ಕಂಡು ಮೋಹಿತನಾದೆನು. ದಿನೇ ದಿನೇ ನಿಮ್ಮ ಗುಣಾತಿಶಯಗಳನ್ನರಿತದ್ದರಿಂದಂತೂ ನನ್ನ ಪ್ರೇಮವು ನಿಶ್ಚಲವಾದದ್ದಾಯಿತು. ನಿಮ್ಮನ್ನು ಶ್ರೀಕಂಠನಿಗೆ ಕೊಡುವ ವಾರ್ತೆಯು ಪ್ರೇಮಪರವಶನಾದ ನನಗೆ ವಜ್ರಪಾತದಂತೆ ಅಸಹ್ಯವಾಗಿ ಈ ದೇಶವನ್ನು ಬಿಟ್ಟು ಜಪಾನಕ್ಕೆ ಹೋಗಬೇಕೆಂದು ನಿಶ್ಚಯಮಾಡಿದೆನು. ಹೋಗುವದಕ್ಕೆ ಜಯರಾಯರ ಅಪ್ಪಣೆ ಕೇಳಲು, ಅವರು ಏಕೆ ಹೋಗುವಿಯೆಂದು ಕೇಳಿದ್ದಕ್ಕೆ ಸುಳ್ಳಾಡಲಾರದೆ ಎಲ್ಲವನ್ನೂ ಹೇಳಿಬಿಟ್ಟೆನು. ನಾನು ನಿಮ್ಮ ಮನವೊಲಿಸು

ವದಕ್ಕಾಗಿ ಇಲ್ಲಿಗೆ ಬರಲಿಲ್ಲ. ನನ್ನ ಮನೋಗತವನ್ನು ನಿಮಗೆ ನಿವೇದಿಸಿ, ಜಪಾನಕ್ಕೆ ಹೋಗಬೇಕೆಂಬ ಅಪೇಕ್ಷೆಯಾದದ್ದರಿಂದ ಅಷ್ಟು ಸಾಹಸದೊಂದಿಗೆ ಬಂದೆನು. ನಾನು ಹೇಳುವದಾಯಿತು. ನನ್ನ ಕೆಲಸ ತೀರಿತು. ಬರುತ್ತೇನೆ.'' ಎಂದು ರಮಾಕಾಂತನು ತನ್ನ ಕುರ್ಚಿ ಬಿಟ್ಟೆದ್ದನು.

ಇದನ್ನೆಲ್ಲ ಇಂದಿರೆಯು ಚನ್ನಾಗಿ ಆಲಿಸುತ್ತ ತಲೆ ಬಾಗಿಸಿಕೊಂಡು ತಬಕದಲ್ಲಿದ್ದ ಹೂಗಳೊಡನೆ ಆಡುತ್ತ ನಿಂತಿದ್ದಳು.

``ನೀವು ಜಪಾನಕ್ಕೆ ಹೋಗುವದಾದರೆ ಇದನ್ನು ನನಗೇಕೆ ಹೇಳಿ ಹೋಗಬೇಕೆಂದಿರಿ ?'' ಎಂದು ಸಂತೋಷದಿಂದಲೂ ಶಂಕಿತಳಾಗಿಯೂ ಇಂದಿರೆಯು ಕೇಳಿದಳು.

``ನನ್ನ ಹೃದಯವು ಈ ಪ್ರೇಮಕ್ಕಾಗಿ ಕ್ಷುಬ್ಧವಾಗಿದ್ದರಿಂದ ನಿಮ್ಮ ಮುಂದೆ ದೂರಿಕೊಂಡ ಹೊರತು ನನಗೆ ಶಾಂತಿಯುಂಟಾಗದೆಂದು ತಿಳಿದು ಈ ಸಾಹಸ ಮಾಡಿದೆನು ನಾನಾಡಿದ್ದು ನಿಮಗೆ ಸರಿ ಬಂದಿರಲಿಕ್ಕಿಲ್ಲ. ಆದರೂ ಹಿಂದಿನ ಸ್ನೇಹಕ್ಕಾಗಿ ನನ್ನನ್ನು ಕ್ಷಮಿಸುವಿರೆಂದು ನಂಬುತ್ತೇನೆ.''

ರಮಾಕಾಂತನ ಪ್ರೇಮ ಪ್ರಬಂಧವು ಅಮೃತವೃಷ್ಟಿಯಂತೆ ಆಹ್ಲಾದಕರವಾಯಿತು. ಇವೇ ಮಾತುಗಳನ್ನು ಮತ್ತೊಮ್ಮೆ ಕೇಳುವ ಕುತೂಹಲದಿಂದ,

``ನೀವು ಹೇಳುವದು ಸತ್ಯವಿದ್ದರೆ, ನಿಮ್ಮ ಮನಸ್ಸಿನಲ್ಲಿ ಪ್ರೇಮವು ದೃಢವಾದದ್ದು ನಿಜವಿದ್ದರೆ......'' ಎಂದು ಇಂದಿರೆಯು ಮಾತಾಡುವದರಲ್ಲಿಯೇ ರಮಾಕಾಂತನೆದ್ದು ನಿಂತು ತನ್ನ ವಿಶಾಲವಾದ ಹೃದಯದ ಮೇಲೆ ಕೈ ಇಟ್ಟು ಒಳ್ಳೇ ಆವೇಶದಿಂದ ಅಂದದ್ದು :

``ಸತ್ಯವಿದ್ದರೆ! ನಿಜವಿದ್ದರೆ! ಇಂದಿರಾಬಾಯಿ, ನಾನಾಡಿದ್ದರ ಸತ್ಯತೆಯ ಬಗ್ಗೆ ನೀವು ಆಕ್ಷೇಪ ತೆಗೆದುಕೊಳ್ಳುವಿರೇನು ? ಇಕೋ, ನನ್ನೆದೆ ಬಗೆದು ನೋಡಿರಿ; ಅದರಲ್ಲಿ ಅಸತ್ಯತೆಯ ಲೇಶ ಕೂಡಾ ನಿಮಗೆ ದೊರಕಲಿಕ್ಕಿಲ್ಲ. ಪ್ರಾಣೇಶ್ವರೀ, ನಾನು ನಿನ್ನ ಮೇಲೆ ಸರ್ವಶಃ ಅನುರಕ್ತನಾಗಿರುವೆನು. ಈ ಹೃದಯದಲ್ಲಿ ಕುದಿಯುತ್ತಿರುವ ಸಂತಾಪವನ್ನು ನಾನೇ ಬಲ್ಲೆನು. ಆದರೆ ಇದನ್ನೆಲ್ಲಾ ಹೇಳಿ ಏನು ಫಲ ?'' ಎಂದು ನುಡಿದು ರಮಾಕಾಂತನು ಕಲ್ಲಿನಲ್ಲಿ ಕಟೆದ ಗೊಂಬೆಯಂತೆ ಸ್ತಬ್ಧನಾಗಿ ನಿಂತುಕೊಂಡನು. ಅಶ್ರುಬಿಂದುಗಳು ಟಪಟಪ ಅವನ ಕಣ್ಣಿನಿಂದುದುರಿದವು.

ಈ ಮಾತು ಕೇಳಿ ಇಂದಿರೆಯು ತೀರ ಪರವಶಳಾದಳು. ನಗೇಂದ್ರನಿಗೆ ಹಿಮ

ರಾಜೆಯು ಅಂಟಿಕೊಂಡಿರುವಂತೆ ಇಂದಿರೆಯು ಪ್ರೇಮಭರದಿಂದ ಆ ಮಹಾಬಾಹು ವನ್ನು ಬಿಗಿದಪ್ಪಿಕೊಂಡಳು. ರಭಸದಲ್ಲಿ ಇಂದಿರೆಯ ತುರುಬಿಗೆ ಹಾಕಿದ ಹಾರವು ಹರಿದು ಈ ಪ್ರಣಯಿಗಳ ಸಂಯೋಗವನ್ನು ಕಂಡು ಆಕಾಶದಿಂದ ಸುರರು ಪುಷ್ಪ ವೃಷ್ಟಿಯನ್ನು ಮಾಡಿದರೋ ಎಂಬಂತೆ ಹೂಗಳುದುರಿದವು. ಪರಸ್ಪರ ಅಂಗ ಸ್ಪರ್ಶದಿಂದ ಇಬ್ಬರೂ ಪುಲಕಾಂತರಾದರು; ಪ್ರೇಮನಿರ್ಭರದಿಂದ ಇಬ್ಬರೂ ಕೆಲಹೊತ್ತು ಮೈಮರೆತು ಪರಸ್ಪರರ ಬಾಹುಪಾಶಗಳಲ್ಲಿ ಸಿಕ್ಕವರಾಗಿ ನಿಂತರು. ರಮಾಕಾಂತನೆಚ್ಚತ್ತವನಾಗಿ ಮೆಲ್ಲನೆ ಇಂದಿರೆಯ ಬಾಹುಪಾಶಗಳಿಂದ ಮುಕ್ತನಾಗಿ ಪಶ್ಚಾತ್ತಾಪದೊಂದಿಗೆ ಇಂದಿರೆಯನ್ನು ಕುರಿತು ಮಾತಾಡಿದನು; "ಇಂದಿರಾ, ನೀನಿದೇನು ಮಾಡಿದಿ? ನೀನು ಪರಸ್ತ್ರೀಯಳಲ್ಲವೇ? ಪಾಪಿಷ್ಠನಾದ ನಾನು ಕಾಮಪರವಶನಾಗಿ ಎಂಥ ಅನುಚಿತವಾದ ಕೃತ್ಯವನ್ನು ಮಾಡಿದೆನು!"

ಈ ಮಾತು ಕೇಳಿ ಇಂದಿರೆಯು ಸಂತಪ್ತಳಾಗಿ "ಏನಂದಿರಿ? ನಾನು ಪರ ಸ್ತ್ರೀಯಳು ಹೇಗೆ? ಪರಸ್ತ್ರೀಯಳಾಗಿದ್ದರೆ ಅನ್ಯಪುರುಷನನ್ನು ಕಣ್ಣೆತ್ತಿಯಾದರೂ ನೋಡುತ್ತಿದ್ದನೆ!" ಎಂದು ನುಡಿದಳು. ಸಿಟ್ಟಿನಿಂದ ಅವಳ ದೇಹವು ಥರ ಥರ ನಡುಗಹತ್ತಿತು.

ರಮಾಕಾಂತನು ಈ ಘಟಾಟೋಪ ನೋಡಿ ಗರ್ಭಗಳಿತನಾಗಿ ನಮ್ರತೆಯಿಂದ ನುಡಿದದನು—

"ಇಂದಿರಾಬಾಯಿ, ನನ್ನಿಂದ ತಪ್ಪಾಗಿದ್ದರೆ ಕ್ಷಮಿಸಿರಿ. ಶ್ರೀಕಂಠ ಬಹ ದ್ದರನ ಕೂಡ ನಿಮ್ಮ ವಿವಾಹವು ಗೊತ್ತಾಗಿರುವದಲ್ಲವೇ?"

"ನಿಶ್ಚಯವಾಗಿತ್ತು. ಅದೀಗ ರಹಿತವಾಗಿದೆ. ಆದರೆ ಅದನ್ನೆಲ್ಲಾ ತೆಗೆದು ಕೊಂಡು ನೀವೇನು ಮಾಡುವಿರಿ?" ಎಂದು ಇಂದಿರೆಯು ಇನ್ನೂ ಸಿಟ್ಟಿನಿಂದಲೇ ನುಡಿದಳು.

"ಇಂದಿರಾ, ಇದು ನನಗೆ ತಿಳಿದಿದ್ದಿಲ್ಲಾದ್ದರಿಂದ ನಾನು ವ್ಯರ್ಥವಾಗಿ ನಿನ್ನ ನಿರ್ಮಲಾಚರಣೆಯ ಮೇಲೆ ಆಕ್ಷೇಪ ತೆಗೆದುಕೊಂಡೆನು. ನನ್ನಿಂದ ಸರ್ವಸ್ವೀ ತಪ್ಪಾಯಿತು. 'ಸ್ರಜಮಪಿ ಶಿರಸ್ಯಂಧಃ ಕ್ಷಿಪ್ತಾಂ ಧುನೋತ್ಯಹಿಶಂಕಯಾ.' ಎಂಬ ಉಕ್ತಿಯನ್ನು ಆ ಮಹಾಕವಿಯು ನನ್ನನುದ್ದೇಶಿಸೇ ಬರೆದಿರುವನೆಂದು ಸಂಶಯಪಡುತ್ತೇನೆ."

ಇಂದಿರೆಯ ಕೋಪವು ತುಸು ಶಾಂತವಾಯಿತು. ರಮಾಕಾಂತನ ನೀತಿ ವಿವೇಕತೆಯನ್ನು ಕಂಡು ಅವನನ್ನು ಮನಸ್ಸಿನಲ್ಲಿಯೇ ಕೊಂಡಾಡಹತ್ತಿದಳು.

ಅವನು ನಮ್ರನಾಗಿ ಹೇಳಿಕೊಂಡದ್ದು ಕೇಳಿ ಇಂದಿರೆಗೆ ವಿಷಾದವೆನಿಸಿ, ತಾನ್ಯಾಕೆ ಕೋಪಿಸಿಕೊಂಡೆನೆಂದು ತನ್ನನ್ನು ನಿಂದಿಸಿಕೊಂಡಳು. ಆದರೂ ತನ್ನ ಹೃದಯುಂಗಮನೊಡನೆ ಕುಚೇಷ್ಟೆ ಮಾಡಬೇಕೆಂದೆಣಿಸಿ—

"ರಾಯರೇ, ತಾವು ಜಪಾನಕ್ಕೆ ಎಂದು ಹೊರಡುವವರಿದ್ದೀರಿ ? ಅಲ್ಲಿಗೆ ಹೋದ ಮೇಲೆ ನಿಮಗೆ ನಮ್ಮ ನೆನಪಾದರೆ ಕ್ಷೇಮಸಮಾಚಾರಗಳನ್ನು ತಿಳಿಸುತ್ತಿರಬೇಕು" ಎಂದು ನಗೆ ಬಿಗಿಹಿಡಿದುಕೊಂಡು ನುಡಿದಳು.

"ಹೋಗಬೇಕಾದರೆ, ಹೋಗಲೇಬೇಕು" ಎಂದು ರಮಾಕಾಂತನು ತನ್ನ ಬಲಗೈಯ ತರ್ಜನೀಬೆರಳನ್ನು ಬಾಯಲ್ಲಿ ಹಿಡಿದು ತಾನೇನು ಮಾಡುವೆನೆಂಬದು ತಿಳಿಯದೆ ತಟ್ಟನೆ ಕಡಕೊಂಡನು.

ರಮಾಕಾಂತನ ಮನಸ್ಸಿನ ವ್ಯಥೆಯನ್ನು ಕಂಡು ಸಹಿಸಲಾರದೆ ಇಂದಿರೆ ಮತ್ತೆ ಅವನನ್ನು ಗಟ್ಟಿಯಾಗಿ ಆಲಿಂಗಿಸಿ "ಪ್ರಿಯರೇ, ಇನ್ನು ಮಾತ್ರ ಈ ಪತಿವ್ರತೆಯು ಕೊಟ್ಟ ಪ್ರೇಮಾಲಿಂಗನವನ್ನು ಎಂದಿಗೂ ನಿರಾಕರಿಸಕೂಡದು. ಒಪ್ಪಿಗೆಯೇ ? ಎಂದು ಮೋಹಬರುವಂತೆ ಮಂದಹಾಸದಿಂದ ರಮಾಕಾಂತನ ಆಹ್ಲಾದಕರವಾದ ಮುಖವನ್ನು ಕಣ್ಣುತುಂಬಾ ನೋಡಿಕೊಂಡಳು. ಈ ಸಾರೆ ರಮಾಕಾಂತನು ಇಂದಿರೆಯನ್ನು ಭರದಿಂದಪ್ಪಿಕೊಂಡು ಸವಿಗಾರನಾದ ಭ್ರಮರನು ಪದ್ಮದಲ್ಲಿಯ ಮಧುವನ್ನು ಯಥೇಚ್ಛವಾಗಿ ಸೇವಿಸುವಂತೆ ಪ್ರವಾಳದಂತಿರುವ ಅವಳ ಕೆಂದುಟಿಯನ್ನು ಚುಂಬಿಸಿದನು.

ಆ ಮೇಲೆ ಅವರೀರ್ವರೂ ಕೋಚದ ಮೇಲೆ ಕುಳಿತು ತಮ್ಮ ತಮ್ಮ ಹಿಂದಿನ ಸುಖದುಃಖದ ಸಂಗತಿಯನ್ನು ಹೇಳಿಕೊಂಡರು. ಕೆಲಹೊತ್ತಿನ ಮೇಲೆ ನಂಜುಂಡನು ಬಂದು 'ಭೋಜನದ ಸಿದ್ಧತೆಯಾಗಿದೆ' ಎಂದು ಹೇಳಿ ಹೊರಟು ಹೋದನು.

"ಪ್ರಿಯೇ, ಇನ್ನೊಂದು ನನ್ನ ಮಾತು ನೀನು ನಡಿಸತಕ್ಕದ್ದು."

"ಅದೇನು ಮಾತಿರುವದು ? ಪ್ರಾಣನಾಥರು ಆಜ್ಞಾಪಿಸಬೇಕು."

"ಲಗ್ನದಕಿಂತಲೂ ಪರಿಚಿತವಾಗಿ, ಪ್ರಾಣನಾಥ, ಪ್ರಿಯರೇ, ಮುಂತಾದ ಸಂಬೋಧನಗಳನ್ನು ಉಪಯೋಗಿಸಬೇಡ. ಇಷ್ಟೇ ನನ್ನ ಪ್ರಾರ್ಥನೆ ಇರುವದು."

"ತಮ್ಮ ಇಚ್ಛೆಯಂತೇ ಆಗಲಿ, (ಇತ್ತಕಡೆಯು) ಹೆಸರುಕೊಂಡು ಕರೆಯುವದು ಮಾತ್ರ ಅಡ್ಡ ಹಿಡಿದು ಕರೆದರೂ ನನ್ನಿಂದಾಗದು" ಎಂದು ಇಂದಿರೆಯು ರಮಾಕಾಂತನ ಗಡಿಯಾರದ ಸರಪಣಿಯನ್ನುಗೂಡ ಆಡುತ್ತ ನುಡಿದಳು.

"ಶಾಬಾಸ" ಎಂದು ರಮಾಕಾಂತನು ಇಂದಿರೆಯ ಹೆಗಲ ಮೇಲೆ ಕಯ್ಯು ಹಾಕಿ ಅವಳ ಬಿಂಬಾಧರವನ್ನು ಮತ್ತೆ ಔತ್ಸುಕ್ಯದಿಂದ ಚುಂಬಿಸಿದನು. ಆಮೇಲೆ ಅವರೀರ್ವರೂ ಹರ್ಷದೊಡನೆ ಕೆಳಗಿಳಿದು ಭೋಜನ ತೀರಿಸಿಕೊಂಡು ಮತ್ತೆ ಮೇಲೆ ಬಂದು ಸಂತೋಷದಿಂದ ತಾಂಬೂಲ ಸವಿಸವಿದು ಹರಟೆಹೊಡೆಯುತ್ತ ಕುಳಿತರು. ರಾತ್ರೆ ಬಹಳಾದ್ದರಿಂದ ರಮಾಕಾಂತನು ನಿರ್ವಾಹವಿಲ್ಲದೆ ದೇವಯಾನಿಯ ಮನೆಗೆ ಹೋದನು. ಮನಸ್ಸಿನಲ್ಲಿ ಯಾವ ಪ್ರಕಾರದ ಉದ್ವೇಗವೂ ಉಳಿಯದ್ದರಿಂದ ಅವನು ತನ್ನ ಬಡಿಗಿಯನ್ನು ಬೀಸುತ್ತ ಉಲ್ಲಾಸದಿಂದ ಶಾಕುಂತಲದಲ್ಲಿಯ ಶ್ಲೋಕವನ್ನು ಸುಸ್ವರದಿಂದ ರಾಗದಲ್ಲಿ ಹಾಡುತ್ತ ನಡೆದನು.

ಅನಾಘ್ರಾತಂ ಪುಷ್ಪಂ ಕಿಸಲಯಮಲೂನಂ ಕರರುಹೈಃ
ಅನಾವಿದ್ಧಂ ರತ್ನಂ ಮಧು ನವಮನಾಸ್ವಾದಿತರಸಂ ।
ಅಖಂಡಂ ಪುಣ್ಯಾನಾಂ ಫಲಮಿವ ಚ ಯದ್ರೂಪಮನಘಂ
ಸ್ವಯಂ ಪ್ರೀತ್ಯಾ ವಧ್ವಾ ತದುಪಹೃತಮದ್ಯೈವ ನ ನುಮೇ ॥

ಈ ಶ್ಲೋಕದ ಕಡೆಯ ಚರಣವು ರಮಾಕಾಂತನ ಕೈಗಂಟಿನಂತೆ ಕಾಣುತ್ತದೆ.

"ಕಾಂತೂ ಭೋಜನಾಯಿತೇ ? ಪಕ್ವಾನ್ನಗಳೆಷ್ಟಾಗಿದ್ದವು ? ಅತಿಮಧುರವಾದ ಪಕ್ವಾನ್ನದ ರುಚಿಯನ್ನು ಮೊದಲು ತಕ್ಕೊಂಡಿಯೋ ಹಿಂದಿನಿಂದೋ ?" ಎಂದು ದೇವಯಾನಿಯು ವಿನೋದದಿಂದ ಕೇಳಿದಳು.

ರಮಾಕಾಂತನು ಈ ಸ್ಥವಿರೆಯ ಭಾವವನ್ನರಿತು ಕಿಂಚಿತ್ ಲಜ್ಜಿತನಾಗಿ "ಅಮ್ಮಾ, ಖೀರು, ಒಡೆ, ಮಂಡಿಗೆ, ಜಿಲ್ಬಿ ಇವೇ ಪಕ್ವಾನ್ನಗಳು. ಇವುಗಳಲ್ಲಿ ಅತಿಮಧುರವಾದದ್ದು ಯಾವದು ನೀವೇ ಹೇಳಿರಿ."

"ನಂನ ಕಣ್ಣಿಗೆ ಇಂಗೇ ಹಚ್ಚಿದಿ ನೋಡು! ನಾನು ನಿನ್ನ ವಯಸ್ಸಿನವಳಿದ್ದಾಗ್ಯೆ ನೀನು ತೊಟ್ಟಿಲದಲ್ಲಿದ್ದಿ ಬಲ್ಲಿಯಾ!" ಎಂದು ದೇವಯಾನಿಯು ಸಸ್ಮಿತಳಾಗಿ ನುಡಿದಳು.

"ಅಮ್ಮಾ, ನಿಮ್ಮ ಪ್ರಶ್ನೆಯಲ್ಲಿ ರಸಾಲಂಕಾರಗಳಿದ್ದರೆ ನಾನರಿಯೆನು. ನಿಮಗೇನಾದರೂ ಕೇಳುವದಿದ್ದರೆ ನನಗೆ ತಿಳಿಯುವಂತೆ ಕೇಳಿರಿ."

"ಶಾಬಾಸ್ ತಕ್ಕಾ."

"ಅಂದರೆ!" ಎಂದು ಲಜ್ಜಿತನಾಗಿ ರಮಾಕಾಂತನು ಕೇಳಿದನು.

"ಹೇಗೆ ತಿಳಿದೀತು! ಅನಾಘ್ರಾತಂ ಪುಷ್ಪಂ ಎಂಬ ಶ್ಲೋಕದ ಕಡೇ ಚರಣ ಹೇಗೆ ಹೇಳು ನೋಡುವ!"

ಇದನ್ನು ಕೇಳಿ ರಮಾಕಾಂತನು ಒದುಂಕು ಸಹಿತವಾಗಿ ಸಿಕ್ಕ ಕಳ್ಳನಂತೆ ಏನೂ ಉತ್ತರ ಕೊಡಲಾರದೆ ಸುಮ್ಮನಿದ್ದನು.

“ ಒಳ್ಳೇದು ; ವ್ಯರ್ಥವಾಗಿ ವಾದ ಬೆಳಿಸುವದರಲ್ಲಿ ಪ್ರಯೋಜನವೇನು ? ನಿನ್ನಿಚ್ಛೆಯಂತೆ ಎಲ್ಲವೂ ಕೂಡಿ ಬಾರದಿದ್ದರೆ ಆ ಶ್ಲೋಕವನ್ನು ನೀನು ಹಾಡುತ್ತ ಬರುತ್ತಿದ್ದಿಲ್ಲ ; ಇಷ್ಟು ಅಟ್ಟಹಾಸದಿಂದ ಪಾವಟಿಗೆಗಳನ್ನೇರಿ ಬರುತ್ತಿದ್ದಿಲ್ಲ. ಪ್ರಣಯಿಗಳ ರಹಸ್ಯವನ್ನು ಒಡೆದು ಕೇಳುವದು ಉಚಿತವಲ್ಲ. ಸಾರಾಂಶ ನೀನು ಜಪಾನಕ್ಕೆ ಹೋಗುವದು ರಹಿತವಮಾಡಿಕೊಂಡು ಬಂದಿಯಂಹುದಲ್ಲೊ ?” ಎಂದು ಸಂತೋಷಭರಿತಳಾಗಿ ದೇವಯಾನಿಯು ಕೇಳಿದಳು.

“ ಸದ್ಯಕ್ಕಂತೂ ರಹಿತವಾಗಿದೆ.”

“ ಒಳ್ಳೇದಾಯಿತು. ನನಗೆ ಅತ್ಯಾನಂದವಾಗಿರುವದು. ಇನ್ನು ಮೇಲೆ ಉದಾಸೀನತೆಯನ್ನು ಮನಬಿಟ್ಟು ಹೊರಗೆ ಹಾಕುವೆನು. ಬೆಂಗಳೂರಲ್ಲಿ ನಿನಗೆ ವಿಶೇಷ ಕೆಲಸವಿರಲಿಕ್ಕಿಲ್ಲ. ಇಲ್ಲಿಯೇ ಕೆಲವು ದಿವಸ ಇರು. ಬೇಕಾದರೆ ನಿನ್ನ ಸ್ನೇಹಿತರನ್ನು ಕರಿಸಿಕೋ. ನಿನ್ನ ಲಗ್ನದ ಪರ್ಯಂತರ ಈ ಮನೆಯಲ್ಲಿ ಉತ್ಸವದ ಹೊರ್ತು ಮತ್ತೇನೂ ನಡೆಯಕೂಡದು.” ಎಂದು ದೇವಯಾನಿಯು ಸ್ಫೂರ್ತಿಯಿಂದ ಮಾತಾಡಿದಳು.

ರಮಾಕಾಂತನು ದೇವಯಾನಿಯ ಅಂತಃಕರಣವನ್ನು ಕಂಡು ಬೆರಗಾಗಿ ಚಟ್ಟನೆ ಎದ್ದು ಅವಳ ಕೈ ಹಿಡಿದು “ ಅವ್ವಾ, ನೀವು ನನಗೆ ತೋರಿಸಿದಷ್ಟು ನಿಸ್ಸೀಮದ ಮಮತೆಯನ್ನು ನನ್ನ ಹಡೆದ ತಾಯಿಯು ತೋರಿಸುತ್ತಿದ್ದಳೋ, ಇಲ್ಲವೋ ಹೇಳಲಾರೆನು. ನಾನು ನಿಮ್ಮ ಹೊಟ್ಟೇ ಮಗನಂತೆ ನಡೆದುಕೊಳ್ಳುವೆನು. ಅನ್ಯರೀತಿಯಿಂದ ನಿಮ್ಮ ಉಪಕಾರವನ್ನು ತೀರಿಸುವದು ಅಸಂಭವವಿದೆ.” ಎಂದು ನುಡಿದನು. ಅವನ ಕಣ್ಣಿನಿಂದ ಆನಂದಾಶ್ರುಗಳು ಉದುರಹತ್ತಿದವು.

ದೇವಯಾನಿಯು ತನ್ನ ಮಾನಸಪುತ್ರನನ್ನು ಪತ್ತಿರಕ್ಕೆ ಕರೆಕೊಂಡು ಮೈದಡವಿ, “ಕಾಂತೂ, ನಿನ್ನಿಂದ ಪ್ರತ್ಯುಪಕಾರವನ್ನು ಬಯಸಿ ನಾನು ನಿನ್ನ ಮೇಲೆ ಅಂತಃಕರಣ ಮಾಡಲಿಲ್ಲ. ಈಗ್ಗೆ ರಾತ್ರಿ ಬಹಳಾಯಿತು ಮಲಗಿಕೊಳ್ಳು ” ಎಂದು ಹೇಳಿ ದೇವಯಾನಿ ಅವನನ್ನು ಕಳುಹಿಸಿ ತಾನೂ ಮಲಗಿಕೊಂಡಳು.

ದೇವಯಾನಿಗೆ ತೀವ್ರವೇ ನಿದ್ದೆ ಹತ್ತಿತು. ರಮಾಕಾಂತನೇನು ವಿಚಾರದಲ್ಲಿರುವನೋ ! ವಾಚಕರೆ, ನೀವೇ ಅವನ ಸಮೀಪದಲ್ಲಿ ಹೋಗಿ ನೋಡಿಕೊಳಿರಿ. ನಾವಂತೂ ನಮ್ಮ ಲೇಖನಿಯನ್ನಿಟ್ಟು ಮಲಗಿಕೊಳ್ಳುತ್ತೇವೆ.

ಉಚ್ಚ ಕುಲದ ಬ್ರಾಹ್ಮಣರಲ್ಲಿ ಮತ್ತೊಂದು ಪುನರ್ವಿವಾಹವು

ಜಯರಾಯನು ಬೆಂಗಳೂರಿಗೆ ಬಂದವನೇ ಪಂಡಿತೆಯನ್ನು ಕರಿಸಿಕೊಂಡು ನಡೆದ ವರ್ತಮಾನವೆಲ್ಲ ಅವಳಿಗೆ ತಿಳಿಸಿ "ಪಂಡಿತಾಬಾಯಿ, ಶ್ರೀಕಂಠನಿಗೆ ಇಂದಿರೆಯನ್ನು ಕೊಡುವದು ನಿಶ್ಚಯಮಾಡಿಬಿಟ್ಟಿರುವೆವು, ಆದರೆ ಇಂದಿರೆಯು ಅವನನ್ನೊಲ್ಲೆನೆಂದು ಹಟಹಿಡಿದಿರುವಳು; ಏನಾದರೂ ಯುಕ್ತಿಯನ್ನು ಮಾಡಿ ಶ್ರೀಕಂಠನೇ ತನ್ನ ಮಾತು ತಿರಿಗಿ ತಕ್ಕೊಳ್ಳುವಂತೆ ಮಾಡತಕ್ಕದ್ದು. ಇಲ್ಲದಿದ್ದರೆ ಜನರಲ್ಲಿ ನನ್ನ ಅಪಹಾಸ್ಯವಾಗುವದು." ಎಂದು ಹೇಳಿಕೊಂಡನು.

"ಇಂದಿರೆಯ ಮನೋನಿಗ್ರಹವು ಶ್ರೀಕಂಠನಿಗೆ ವಿದಿತವಾಗಿರುವದೇನು?"

"ಅಹುದು. ಅವಳೇ ಪತ್ರದ್ವಾರಾ ತನ್ನಭಿಪ್ರಾಯವನ್ನು ಶ್ರೀಕಂಠನಿಗೆ ತಿಳಿಸಿರುವಳು."

"ಶ್ರೀಕಂಠನನ್ನು ಹೇಗಾದರೂ ಹಾದಿಗೆ ತರಬಹುದು; ಆದರೆ ಪಾಪ! ಕಮಲೆಯ ಗತಿಯೇನು? ನಾನು ಕೈಕೊಂಡ ಪುನರ್ವಿವಾಹ ಪ್ರಸಾರಣೆಯ ಕಾರ್ಯದ ಅವಸ್ಥೆ ಏನು? ಕಮಲೆಗೆ ಏನು ಹೇಳಲಿ?" ಎಂದು ಪಂಡಿತೆಯು ಕೇಳಿದಳು.

"ಪಂಡಿತಾಬಾಯಿ, ನನ್ನ ಕೆಲಸವನ್ನು ಹೇಗಾದರೂ ನೆರವೇರಿಸಿಕೊಡಿರಿ. ಕಮಲೆಗೆ ನಾನೇನಾದರೂ ಉಪಯೋಗ ಮಾಡಿಕೊಡುವೆನು."

"ಇದು ನಿಜವೋ? ಹಾಗಿದ್ದರೆ ನಾನು ಈಗಲೇ ಶ್ರೀಕಂಠನನ್ನು ಕಂಡು ಯುಕ್ತಿಪ್ರಯುಕ್ತಿಗಳಿಂದ ನಿಮ್ಮ ಕಾರ್ಯವನ್ನು ಸಾಧಿಸಿಕೊಡುವೆನು. ಅವನು ಜಹಗೀರದಾರರ ಮಗನು. ದುರಭಿಮಾನವು ಅವನಲ್ಲಿ ತುಂಬಿರುವದು. ಆ ದುರಭಿಮಾನವನ್ನು ಜಾಣ್ಮೆಯಿಂದ ಕೆಣಕಿದರೆ ಸಾಕು. ಶ್ರೀಕಂಠನು ತನ್ನ ಅಭಿಮಾನದ ಭರದಲ್ಲಿ ನಾನು ಹೇಳಿದಂತೆ ಕೇಳುವನು." ಎಂದು ಪಂಡಿತೆಯು ನಿಶ್ಚಯದೊಂದಿಗೆ ನುಡಿದಳು.

"ಪಂಡಿತಾಬಾಯಿಯವರೇ, ಒಳ್ಳೇ ಕುಶಲ ತೆಗೆದಿರಿ. ಪಂಡಿತಾ ಎಂಬ ಬಿರುದು ಸುಮ್ಮನೆ ಹಾದೀ ಮೇಲೆ ಬಿದ್ದಿರುವದೇ?" ಎಂದು ಪಂಡಿತೆಯನ್ನು ಸ್ತುತಿಸಿ ಜಯರಾಯನು ನುಡಿದನು.

ಪಂಡಿತೆಯು ಜಯರಾಯನ ಅಪ್ಪಣೆ ತಕ್ಕೊಂಡು ಮರುದಿವಸ ನಾಲ್ಕು ತಾಸು ಹೊತ್ತೇರಿ ಮತ್ತೇ ಅವನ ಮನೆಗೆ ಕುಲುಕುಲು ನಗುತ್ತ ಬಂದಳು.

"ಪಂಡಿತಾಬಾಯಿಯವರೇ, ಏನು ಸಮಾಚಾರ?" ಎಂದು ಜಯರಾಯನು

ಲವಲವಿಕೆಯಿಂದ ಕೇಳಿದನು.

ಪಂಡಿತೆಯು ಏನೂ ಮಾತಾಡದೆ ಒಳ್ಳೇ ಆಥ್ಯತೆಯಿಂದ ಜಯರಾಯನ ಮುಂದೊಂದು ಪತ್ರ ಚಲ್ಲಿದಳು. ಅದನ್ನು ತಕ್ಕೊಂಡು ಜಯರಾಯನು ಓದಲಾರಂಭಿಸಿದನು.

ಬೆಂಗಳೂರು, ತಾ ....

ಮ. ರಾ. ರಾ. ಜಯರಾವ ಸಾವಕಾರ ಇವರಿಗೆ,

ಶ್ರೀಕಂಠಬಹದ್ದರ ಶಿವಸಮುದ್ರ ಕೃತಾನೇಕ ಸಮಸ್ಕಾರಗಳು. ಕೆಲವು ಸೂಕ್ಷ್ಮಕಾರಣಕ್ಕಾಗಿ ನಾನು ಸದ್ಯಕ್ಕೆ ಲಗ್ನದ ವಿಚಾರ ಮಾನಸಿಕ ಮಾಡಿರುತ್ತೇನೆ. ಮುಂದಾದರೂ ನಾನು ನಿಮ್ಮ ಕನ್ಯೆಯ ಪಾಣಿಗ್ರಹಣ ಮಾಡುವೆನೆಂದು ನಿಶ್ಚಯವಾಗಿ ಹೇಳಲಾರೆನು. ನಿಮಗಿಷ್ಟವಿದ್ದಲ್ಲಿ ಎರಡನೇ ಕಡೆಗೆ ವರ ನೋಡಿಕೊಳ್ಳಬಹುದು. ಈ ಪತ್ರವನ್ನೋದಿ ತಮಗೆ ವಿಷಾದವಾಗಬಹುದು. ಅದಕ್ಕೆ ಉಪಾಯವಿಲ್ಲ.

ಇತಿ ನಮಸ್ಕಾರಗಳು.
ತಮ್ಮ ವಿಧೇಯನಾದ
ಶ್ರೀಕಂಠಬಹದ್ದರ
ಜಹಗೀರದಾರ, ಶಿವನಸಮುದ್ರ

ಈ ಪತ್ರವನ್ನೋದಿ ತನ್ನ ಬಕ್ಕಣದಲ್ಲಿಟ್ಟುಕೊಂಡು,

"ಪಂಡಿತಾಬಾಯಿ, ಯಾವ ಕೆಲಸದಲ್ಲಿಯಾದರೂ ನೀವು ಧುರೀಣರೇ ಇರುವಿರಿ, ಶ್ರೀಕಂಠನಿಗೆ ಏನು ಕೊಡುವದು ಗೊತ್ತು ಮಾಡಿರುವಿರಿ ?" ಎಂದು ಜಯರಾಯನಂದನು.

"ನಿಮ್ಮ ಕೆಲಸವಾಯಿತೋ ಇಲ್ಲೋ ? ಶ್ರೀಕಂಠನಿಗೆ ಐದು ಸಹಸ್ರ ರೂಪಾಯಿ ಕೊಡುವದು ನಿಮ್ಮ ಗುಮಾಸ್ತನಾದ ಶ್ರೀರಂಗಯ್ಯನ ಸಮಕ್ಷ ಗೊತ್ತು ಮಾಡಿರುವೆನು. ಈ ಹಣವನ್ನು ಈಗಲೇ ಅವನಿಗೆ ತಲ್ಪಿಸಿಬಿಟ್ಟರೆ ಶ್ರೀಕಂಠನ ಪತ್ರದ ಸಮಾಚಾರವನ್ನು ಸಾಯಂಕಾಲದೊಳಗಾಗಿಯೇ 'ಊರಂತೂರೇ' ಹಬ್ಬಿಸಿ ಬಿಡುವೆನು."

"ಈಗಲೇ ಶ್ರೀರಂಗಯ್ಯನ ಕೂಡ ಹಣ ಕಳಿಸಿಕೊಡುತ್ತೇನೆ. ಇನ್ನು

ಕಮಲೆಯಗೋಸ್ಕರ ಏನು ಕೊಡಬೇಕ್ಕವಿರಿ! ಹೇಳಿಬಿಡಿರಿ.'' ಎಂದು ಜಯರಾಯನು ಕೇಳಿದನು.

''ಐದು ಸಹಸ್ರಕ್ಕೆ ಒಂದು ಕಪರ್ದ ಕಡಿಮೆಯಾದರೆ ನಾನು ತಕೊಳ್ಳಲಿಕ್ಕಿಲ್ಲ.''

'' ಈ ಮಾತಿನ ಬಗ್ಗೆ ನಾಳೆಗೆ ವಿಚಾರ ಮಾಡೋಣ.''

'' ಜಯರಾವ್, ಇಂಥ ಮಾತು ಕಟ್ಟಿಡರಿ. ಕುಳಿತ ಪೆಟ್ಟಿನ ಮೇಲೇ ಹಣ ಎಣಿಸಬೇಕು.''

'' ಆಗಲಿ, ಸಾಯಂಕಾಲದೊಳಗಾಗಿ ನಿಮ್ಮ ಪದರಿನಲ್ಲಿ ಹಣ ಬಿತ್ತೆಂದು ತಿಳಕೊಳ್ಳಿರಿ, ವಿಶ್ವಾಸವಿದೆಯೋ ಇಲ್ಲವೋ ?''

'' ಆಗಲಿ, ಕಮಲೆಯು ಒಡವೆಯೆಂದು ನಾನು ಮಾತಾಡಿದೆನು. ಕೋಪಿಸಿ ಕೊಳ್ಳಬೇಡಿರಿ.'' ಎಂದು ಹೇಳಿ ಪಂಡಿತೆಯು ಹೊರಟುಹೋದಳು.

ಆ ದಿವಸ ಪಂಡಿತೆಗೆ ಅವಕಾಶವೇ ಇದ್ದಿಲ್ಲ. ಜಯರಾಯನ ಮನೆಯಿಂದ ಆವಳು ತಟ್ಟನೆ ಕಮಲೆಯ ಮನೆಗೆ ಬಂದಳು.

'' ರಂಗಮ್ಮಾ, ಛಂದಾಗಿದ್ದೀರಾ! ಕಮಲಾಬಾಯಿಯು ಎಲ್ಲಿರುವಳು ?'' ಎಂದು ಪಂಡಿತೆಯು ಕೇಳಿದಳು.

'' ಬನ್ನಿರಿ, ಪಂಡಿತೆಯಮ್ಮನವರೇ, ಎಲ್ಲವೂ ಜಗತ್ತಿನಲ್ಲಿ ಹೇಗೆ ಛಂದಾಗಿರುವದು! ನಮ್ಮಲ್ಲಂತೂ ಎಲ್ಲವೂ ಕೆಟ್ಟಿದ್ದೇ ಇರುವದಲ್ಲ! ನಾವು ದೇವರಲ್ಲಿ ಬೇಡಿಯೇ ಬಂದಿಲ್ಲ.''

''ರಂಗಮ್ಮಾ, ಏನೂ ಚಿಂತಿಸಬೇಡಿರಿ. ಪುನರ್ವಿವಾಹ ಮಾಡಿಕೊಳ್ಳಲಿಚ್ಛಿಸುವ ತರುಣಿಯರ ಲಗ್ನವಾಗದಿದ್ದರೆ ನಾನು ಹುಟ್ಟಿದ್ದರ ಸಾರ್ಥಕ್ಯವೇನಾಯಿತು ?'' ಎಂದು ರಾಧಾಬಾಯಿಯು ಒಳ್ಳೇ ಗರ್ವದಿಂದ ತನ್ನೆದೆಗೆ ಕೈಹಚ್ಚಿಕೊಂಡು ನುಡಿದಳು.

ಇಷ್ಟರಲ್ಲಿ ಕಮಲೆಯು ಸುಬೋಧಪತ್ರಿಕಾ, ವೃತ್ತಾಂತಮಂಜರೀ, ಸುಧಾರಕ ಎಪೀ-ಘಸಿ ಮುಂತಾದ ವರ್ತಮಾನ ಪತ್ರಗಳನ್ನು ಕಯ್ಯಲ್ಲಿ ತಕ್ಕೊಂಡು ಬಂದು, ಪಂಡಿತೆಯನ್ನು ನೋಡಿ :

'' ಓಹೋ! ಪಂಡಿತಾಬಾಯವರು ಬಂದಿರುವರೇನು! ನಿನ್ನೇ ದಿನ ನೀವು ಆ ಮುದಿ ಹಾರುವನನ್ನು ಸಭೆಯಲ್ಲಿ ಉಫ್ ಎಂದು ಹಾರಿಸಿಕೊಟ್ಟಿರಲ್ಲ! ಆ ವರ್ತಮಾನವು ಈ ಸುಬೋಧ ಪತ್ರಿಕೆಯಲ್ಲಿ ಬಂದಿದೆ ಭಟ್ಟರಿಗೂ ಆಚಾರ್ಯರುಗಳಿಗೂ ಸಭೆಗಳಲ್ಲಿ ವಾದ ಮಾಡಲಿಕ್ಕೆ ಬರುವದುಂಟೇ? ಅದೇನು ಶ್ರಾದ್ಧದ

ಕೂಳೇ ? ಸ್ಮೃತಿ ಪುರಾಣಗಳಲ್ಲಿ ಹೇಳಿದೆಯಂತೆ! ಅವುಗಳನ್ನು ನಾವು ಸತ್ಯ ವಚನಗಳೆಂದು ನಂಬಬೇಕಂತೆ!"

"ನಿನ್ನೇ ದಿನ ವಿಷಯಾಂತರ ಮಾಡಬಾರದೆಂದು ನಾನು ಆ ಕೋಡಗನ ಮಾನ ಉಳಿಸಿದೆನು, ಹಿಂದುಗಳ ಶಾಸ್ತ್ರಕ್ಕೆ ಪುನರ್ವಿವಾಹವು ಸಮ್ಮತವಾಗದಿದ್ದರೂ, ರೂಢಿ ವಿಚಾರಗಳಿಗೆ ಅದು ಸಮ್ಮತವೇ. ಲಿಂಗಾಯತರು, ಮರಾಠರು, ಬೇಡರು, ಕುರುಬರು. ಛತ್ರೇರು ಇವರೆಲ್ಲರೂ ಹಿಂದುಗಳಲ್ಲೇನು ? ಅವರು ಈ ಜುಟ್ಟಿದ ಹಾರುವರ ಮಾತು ಕೇಳಿ ಪುನರ್ವಿವಾಹ ಬಿಟ್ಟಿರುವರೇನು ? ಹಿಂದೂ ಧರ್ಮವು ಬ್ರಾಹ್ಮಣಮಾತ್ರಕ್ಕೆ ವ್ಯಾಪ್ತಿಯುಳ್ಳದಾಗಿರುವದೇನು! ನನ್ನ ತಮ್ಮನಾದ ಬಾಷ್ಕಳಪಂತನು ಕೂಡಾ ಪುನರ್ವಿವಾಹಕ್ಕೆ ಸಿದ್ಧನಾಗಿರುವನು."

ಈ ಮಾತು ಕೇಳಿ ರಂಗಮ್ಮನು ಆಶಾಬದ್ಧವಾದ ದೃಷ್ಟಿಯುವಳಾಗಿ "ಇದರಿಂದ ನಮಗೇನು ಫಲ ? ನಮ್ಮ ಕಮಲಾ ಮಾತ್ರ ಹಾಗೇ ಕುಳಿತಳು ನಾವು ಸುಧಾರಕಪಂಥಕ್ಕೆ ಸೇರೀ ಸೇರದಂತಾಯಿತು." ಎಂದು ನುಡಿದಳು.

"ರಂಗಮ್ಮಾ, ನಿಮಗೆ ರಮಾಕಾಂತನ ಮಾತು ನೆನಪಾಗಿ ಹೀಗೆ ಮಾತಾಡುತ್ತಿರುವಿರಾದೀತು. ಅವನ ಹಾದಿಗೆ ಮುಳ್ಳು ಹಚ್ಚಿದಂತಾಗಿರುವದು. ಅವನು ಇಂದಿರೆಯ ಪಾಣಿಗ್ರಹಣ ಮಾಡತಕ್ಕವನು. ನಾನು ಕಮಲೆಗೆ ಮತ್ತೊಂದು ವರ ನೋಡಿಟ್ಟಿದ್ದೇನೆ."

"ಅವರು ಯಾರು ? ಎಂಥವರಿರುವರು ? " ಎಂದು ಕಮಲೆಯು ಉತ್ಸುಕತೆಯಿಂದ ಕೇಳಿದಳು.

"ಹೆಚ್ಚು ಕಡಿಮೆ ನಮ್ಮ ಬಾಷ್ಕಳಪಂತನಂತಿರುವನು. ಹತ್ತು ಸಾವಿರ ರೂಪಾಯಿಗಳ ಗಂಟು ಅವನಲ್ಲಿರುವದು ಎಲ್ಲರೂ ರಮಾಕಾಂತನಂತೆ ಎಲ್ಲಿರುವರು ?" ಎಂದು ಪಂಡಿತೆಯೆಂದಳು.

"ಬಾಷ್ಕಳಪಂತನಂತಿದ್ದರೆ ಚೆನ್ನದಂತಾಯಿತಲ್ಲ! ಯಾಕೆ ಕಮಲಕ್ಕಾ ?" ಎಂದು ರಂಗಮ್ಮನಂದಳು.

"ಪಂಡಿತಾಬಾಯಿಯವರು ಮಾಡಿದ್ದಕ್ಕೆ ನಾನು ಒಪ್ಪಿಕೊಳ್ಳುತ್ತೇನೆ. ಅವರು ನಮ್ಮ ಹಿತವನ್ನೇ ಬಯಸುವರಲ್ಲ!" ಎಂದು ಕಮಲೆಯು ಪಾಲಿಗೆ ಬಂದದ್ದು ಪಂಚಾಮೃತವೆಂದು ತಿಳಿದು ನುಡಿದಳು.

ಮೂರನೆ ದಿವಸ ಸುಧಾರಕಪತ್ರದ ಸಂಚಿಕೆಯಲ್ಲಾ ಈ ಆನಂದದಾಯಕವಾದ ವಾರ್ತೆಯಿಂದ ತುಂಬಿಹೋಗಿತ್ತು. "ಉಚ್ಚಕುಲದ ಬ್ರಾಹ್ಮಣರಲ್ಲಿ

ಮತ್ತೊಂದು ಮಹತ್ವವಾದ ಪುನರ್ವಿವಾಹವು." ಎಂಬ ಶಿರೋಲ್ಲೇಖದ ಕೆಳಗೆ ಬಾಪ್ಕಳಪಂತ ಕಮಲೆಯರ ಪುನರ್ವಿವಾಹದ ಸಂಗತಿಯನ್ನು ಸಾದ್ಯಂತವಾಗಿ ವಿವರಿಸಿದ್ದರು. ವಧೂವರಗಳ ವಸ್ತ್ರಭೂಷಣಗಳ ವರ್ಣನೆ, ವಿವಾಹ ಮಂತ್ರೋಪದೇಶಕನಾದ ಬ್ರಹ್ಮೋತಪೋನಿಧಿಯ ಚರಿತ್ರೆ, ವಿವಾಹಕ್ಕೆ ಬಂದಿದ್ದ ಆಪ್ತರಿಷ್ಟರ ನಾಮಾವಲಿ ಮುಂತಾದ ಲೇಖನಗಳಿಂದ ತುಂಬಿದ ಸಂಧಾರಕಪತ್ರವನ್ನು ಕೆಂಪುಮಸಿಯಿಂದ ಮುದ್ರಿಸಿದ್ದರು.

ಇಂದಿರಾ ರಮಾಕಾಂತರ ವಿವಾಹೋತ್ಸವವು

ದೇವಯಾನಿಯ ಮನೆಯಲ್ಲಿ ಲಗ್ನದ ಉದ್ಯೋಗವು ತರಾತುರಿಯಿಂದ ನಡೆದಿತ್ತು. ಗಂಗೆಯೂ ಶೇಷಮ್ಮನೂ ಸರದಾರಸಿಂಗನೂ ಯತ್ಕಿಂಚಿತ್ತಾದರೂ ವಿಶ್ರಾಂತಿಯಿಲ್ಲದೆ ಓಡಾಡುತ್ತಿದ್ದರು. ಕೂಲಿಯವರು ಬೀಸು ಕುಟ್ಟುವದನ್ನು ಸತತವಾಗಿ ನಡಿಸಿದ್ದರು. ಒಳ್ಳೇ ಚಿತ್ರಕಾರರನ್ನು ಕರಿಸಿ ದೇವಯಾನಿಯು ತನ್ನ ಮನೆಯನ್ನು ಶೃಂಗರಿಸಲಾರಂಭಿಸಿದ್ದಳು. ಇನ್ನೂ ಲಗ್ನತಿಥಿ ಗೊತ್ತಾಗದೇ ಇಷ್ಟು ವ್ಯವಸ್ಥೆ ನಡೆದಿತ್ತು. ದೇವಯಾನಿಯು ಈ ಲಗ್ನದ ಸಂಗತಿಯನ್ನು ಬಿಟ್ಟು ಅನ್ಯ ಮಾತುಗಳನ್ನೇ ಆಡುತ್ತಿದ್ದಿಲ್ಲ.

ಒಂದು ದಿವಸ ಅವಳೂ ರಮಾಕಾಂತನೂ ಕುಳಿತು ಮಾತಾಡುತ್ತಿರುವಾಗ ದೇವಯಾನಿಯು ಉತ್ಸಾಹದಿಂದ—

"ಕಾಂತೂ, ಲಗ್ನದ ಖರ್ಚು ನಾನೇ ಮಾಡುವವಳು. ನೀನು ನಡುವೆ ಬಾಯಿ ಹಾಕಬೇಡ, ಸುಮ್ಮನಿರು. ಇಂದಿರೆಗೆ ತಕ್ಕಂಥ ಉತ್ತಮೋತ್ತಮವಾದ ವಸ್ತ್ರಗಳನ್ನು ಪುಣೆ, ಚಂದೇರಿ. ಬನಾರಸ ಮುಂತಾದ ಪಟ್ಟಣಗಳಿಂದ ತರಿಸತಕ್ಕದ್ದು. ಅವಳಿಗೆ ಬೇಕಾದ ಒಡವೆಗಳನ್ನು ಇಂದಿರೆಯು ನನ್ನ ಆಭರಣದ ಪೆಟ್ಟಿಗೆಯೊಳಗಿಂದ ಆರಿಸಿಕೊಳ್ಳತಕ್ಕದ್ದು. ಹೆಚ್ಚಿಗೆ ಬೇಕಾದವುಗಳನ್ನು ಮಾಡಿಸಿ ಕೊಡುವೆನು." ಎಂದು ನುಡಿದಳು.

"ಅಮ್ಮಾ, ಈ ಮಾತಿಗೆ ನಾನೆಂದಿಗೂ ಒಪ್ಪಿಕೊಳ್ಳುವದಿಲ್ಲ. ನನ್ನ ಪ್ರಿಯ ಪತ್ನಿಯ ವಸ್ತ್ರಾಭರಣಗಳನ್ನೆಲ್ಲ ನಾನೇ ತರುವೆನು."

"ಹುಚ್ಚುಚ್ಚ ಕಾರಭಾರ ಮಾಡಬೇಡ. ಈ ವಿವಾಹ ಸಮಾರಂಭದಲ್ಲಿ ನನ್ನದೇ ಮಾತು ನಡಿಯತಕ್ಕದ್ದು. ಅದೆಂಥ ಮಗನೋ ನೀನು ? ನನ್ನ ಮಾತು ನಡಿಸದವನು." ಎಂದು ದೇವಯಾನಿಯು ನಗುತ್ತ ಮಾತಾಡಿದಳು.

"ಅಮ್ಮಾ, ನಿಮ್ಮಂತೆ ಆಗಲಿ. ನಿಮ್ಮನ್ನು ನಾನು ಕಂಡಂದಿನಿಂದ ನನ್ನ ಅಭ್ಯುದಯಕ್ಕೆ ಪ್ರಾರಂಭವಾಯಿತು. ನಿಮ್ಮ ಮಾತು ಮೀರಲಿಕ್ಕೆ ನಾನು ಅಂಜುತ್ತೇನೆ." ಎಂದೆಂದು ರಮಾಕಾಂತನು ಮುಗುಳುನಗೆ ನಕ್ಕನು.

"ಕಾಂತೂ, ಹಾಗಲ್ಲ. ನನಗೆ ಆಪ್ತರಿಷ್ಟರಿಲ್ಲ. ನನ್ನ ಪಶ್ಚಾತ್ ನನ್ನ ಸಂಚಿತಾರ್ಥವೆಲ್ಲಾ ನಿನ್ನದೇ ಇರುವದು. ನನಗೆ ಬೇಡಾದ ಒಡವೆಗಳನ್ನು ನಿನಗೆ ಈಗ ಕೊಟ್ಟರೇನು, ನನ್ನ ಪಾಶ್ಚಾತ್ ನೀನು ತಕ್ಕೊಂಡರೇನು ಒಂದೇ ಅಲ್ಲವೇ ?"

"ಏನೇನು ಮಾಡುತ್ತಿರೋ ಮಾಡಿರಿ. ನೀವು ಹೇಳಿದಂತೆ ಕೇಳದ ರಾಯಿಂತಲ್ಲ !"

"ಇಷ್ಟನ್ನಬಾರದೇ ! ಕಾಂತೂ, ನಿನ್ನ ಸ್ನೇಹಿತರನ್ನು ಕರೆಕಳುಹಿಸು. ನೀನಂತೂ ಮದುಮಗನು ; ಸೆಟೆಕೊಂಡು ಕೂಡ್ರುವವನು. ಇಲ್ಲಿ ಕೆಲಸ ಮಾಡುವವರಾರು ? ನಿನ್ನ ಕಕ್ಕಂದಿರಾದ ಶ್ರೀಮಂತ ಶ್ರೀಕಾಂತರಾಯರಿಗೂ ಅಗತ್ಯವಾಗಿ ಬರಲಿಕ್ಕೆ ವಿನಂತಿ ಮಾಡಿಕೋ."

ಆ ದಿವಸ ಮಧ್ಯಾಹ್ನದಲ್ಲಿ ಇಂದಿರೆಯು ದೇವಯಾನಿಯ ಮನೆಗೆ ಬಂದಳು.

ಅವಳು ಮನಸ್ಸು ಕೊಟ್ಟು ಉಡಿಗೆ ತೊಡಿಗೆ ಮಾಡಿಕೊಂಡು ಬೆಲೆಯುಳ್ಳ ಆಭರಣಗಳನ್ನಿಟ್ಟುಕೊಂಡಿದ್ದಳು. ಜಯರಾಯರ ಗೃಹಲಕ್ಷ್ಮಿಯು ರಮಾಕಾಂತನ ಮನೆ ಸೇರಬೇಕೆಂದು ಹೊರಟಿರುವಳೋ ಎಂಬಂತೆ ಬರುತ್ತಿರುವ ಈ ಸುಂದರಿಯನ್ನು ನೋಡಿ ಸರದಾರಸಿಂಗನು ಸಂತೋಷಪಟ್ಟು "ರಾಮ ರಾಮ ಮಾಯೀ ಸಾಬ, ರಮಾಕಾಂತ ಮಹಾರಾಜ ಬಹುತ್ ಭಾಗ್ಯವಾನ್ ಆದಾರ್. ನೀವು ಬೀ ನಸೀಬವಾನ್. ರಾಧಾ ಕಿಸನ್ ಜೋಡಿ ಅಗದೀ ಬರಾಬರ ಐತಿ. ಎಲ್ಲಾರ್ ಮಾಡೀ ಮೇಲೆ ಆದಾರ್" ಎಂದು ಹೇಳಿ ಸರದಾರಸಿಂಗನು ಮತ್ತೆ ರಾಮರಾಮ ಮಾಡಿದನು.

"ಸರದಾರಸಿಂಗ, ಮದುವೆಯಲ್ಲಿ ನಿನಗೆ ಜರದ ಪೇಟಾ ಅಂಗಿ ಧೋತ್ರಗಳನ್ನು ಕೊಡಿಸುತ್ತೇನೆ." ಎಂದು ಇಂದಿರೆಯು ಆನಂದದಿಂದ ಹೇಳಿದಳು.

"ಬಹುತ್ ಆನಂದ ಐತಿ, ನಮ್ಮ ಅವ್ವಾ ನಮಗೆ ಸಬ ಕೊಡತೇ. ಭಗವಾನ್ ಕೃಪಾ ಐತಿ. ನಿಮ್ಮ ಮಹೋತ್ಸವ ನೋಡ್ದರೆ ಸಂತೋಷ."

ಇಂದಿರೆಯು ದೇವಯಾನಿಯ ಹತ್ತರ ಬರುತ್ತಲೆ—

"ಇಂದಿರಾ, ಏಕೆ ಬಹಳ ಥಾಟಾಗಿರುವಿ ? ಮನಸ್ಸಿನಲ್ಲಿಯ ಉಲ್ಲಾಸವನ್ನೆಲ್ಲ ಹೊರಗೆಡವಿ ಮೈಮೇಲೆ ಹೊತ್ತುಕೊಂಡು ಬಂದಂತೆ ಕಾಣುತ್ತದಲ್ಲ !"

ಎಂದು ದೇವಯಾನಿಯು ಕೇಳಿದಳು.

"ನನ್ನ ಮನಸ್ಸಿನಲ್ಲಿಯ ಉಲ್ಲಾಸವಿಷ್ಟೇ ಇರುವದೆಂದು ನೀವು ನಿರ್ಣಯ ಮಾಡಿಕೊಟ್ಟರೆ ಯಾರಾದರೂ ನನ್ನ ಮೇಲಿನ ಪ್ರೀತಿಯನ್ನು ಕಡಿಮೆ ಮಾಡ ಬಹುದು." ಎಂದು ಇಂದಿರೆಯು ರಮಾಕಾಂತನನ್ನು ಓರೆಗಣ್ಣಿನಿಂದ ನೋಡಿ ನಕ್ಕಳು.

"ನನ್ನ ಪ್ರೀತಿಯು ತನ್ನಿಂದ ತಾನೇ ದಿನಕ್ಕೊಂದು ಥಂದಾಗಿ ಬೆಳೆಯುತ್ತ ನಡೆದದ್ದು ಕಡಿಮೆಯಾಗುವ ಬಗೆ ಹೇಗೆ?" ಎಂದು ರಮಾಕಾಂತನು ವಿನೋದ ದಿಂದ ನುಡಿದು ನಕ್ಕನು.

"ನಿನ್ನ ಪ್ರೀತಿಯು ಈ ಪರಿಯಾಗಿ ಬೆಳೆಯುತ್ತಿರಲು ಇವಳಿಷ್ಟು ಶಿಂಗಾ ರಾಗಿ ಬಂದಿರುವದೇತಕ್ಕೆ ನನ್ನನ್ನು ಮೋಹಗೊಳಿಸುವದಕ್ಕೇನು?" ಎಂದು ದೇವಯಾನಿಯು ಪರಿಹಾಸದಿಂದ ನುಡಿದಳು. ಮೂವರೂ ಹೊಟ್ಟೆ ಹಿಡಿಸಲಾರ ದಷ್ಟು ನಕ್ಕರು.

ಈ ತ್ರಿವರ್ಗರು ಬಹಳ ಹೊತ್ತು ವಿನೋದದಿಂದ ಮಾತಾಡುತ್ತ ಕುಳಿತ ಬಳಿಕ ದೇವಯಾನಿಯು—

"ಇಂದಿರಾ ಆ ಪಿಯಾನೋದ ಪೆಟ್ಟಿಗೆ ತೆಗಿ" ಎಂದು ಆಜ್ಞಾಪಿಸಿದಳು.

"ನನಗೊಬ್ಬಳಿಗಾಜ್ಞಾಪಿಸಿದಂತಲ್ಲ." ಎಂದು ವಂಚಕತನದಿಂದ ನುಡಿದು ಇಂದಿರೆಯು ರಮಾಕಾಂತನ ಕಡೆಗೆ ಕೈಮಾಡಿ ತೋರಿಸಿದಳು.

"ಆಜ್ಞೆಯ ಅಗತ್ಯ ನನಗಿಲ್ಲ" ಎಂದು ರಮಾಕಾಂತನು ಚಟ್ಟನೆ ಎದ್ದವನೆ ಪಿಯಾನೋ ತಕ್ಕೊಂಡು ಬಾರಿಸಲಾರಂಭಿಸಿದನು.

"ಏಕೆ, ಇಂದಿರಾಬಾಯವರೇ ಹಾಡಿರಿ" ಎಂದು ದೇವಯಾನಿಯು ಹೇಳಿ ದಳು.

"ಪಿಯಾನೋ ತೆಗಿಯಲಿಕ್ಕೆ ನೀವು ಮುಂಚೆ ನನಗಾಜ್ಞೆ ಮಾಡಲಿಲ್ಲೇನು? ಹಾಡುವುದು ಅವರ ಕಡೆಗೆ."

"ವಿನೋದಕ್ಕಾಗಿ ಕೂಡಾ ಈ ಮನೆಯಲ್ಲಿ ವಾದ ಸಲ್ಲದು. ಇಂದಿರಾ, ನೀನು ಹಾಡು. ರಮಾಕಾಂತನು ಬಾರಿಸಲಿ. ಕಡೆಗೂ ಅವನೇ ಹಾಡಬೇಕೆಂದು ಬರೆದುಕೊಟ್ಟದೇನು?" ಎಂದು ಶಾಸನಗೈದು ದೇವಯಾನಿಯು ವಾದ ಮುರಿ ದಳು.

ಇಂದಿರೆಯು 'ಸಾ ವಿರಹೇ ತವ ದೀನಾ" ಎಂಬ ಪದವನ್ನು ಬಲು

ಮಂಜುಲವಾದ ಸ್ವರದಿಂದ ಹಾಡಿದಳು. ಗಂಧರ್ವರನ್ನು ಕೂಡಾ ನಾಚಿಸುವ ಈ ಸ್ತ್ರೀಪುರುಷರ ಗಾನವಾದನಗಳನ್ನು ತಲ್ಲೀನಳಾಗಿ ಕೇಳಿ ದೇವಯಾನಿಯು ತಲೆದೂಗಿ ಇಬ್ಬರನ್ನೂ ಕೊಂಡಾಡಿದಳು. ಆಮೇಲೆ ಸಮಾರಂಭದಿಂದ ಕಾಫಿ ಉಪಹಾರ ಗಳನ್ನು ತಕ್ಕೊಂಡು ಮೂವರೂ ಆ ಮಾತು ಈ ಮಾತು ಹೇಳುತ್ತ ಕೆಲಕಾಲ ಕಳೆದ ಬಳಿಕ ದೇವಯಾನಿಯು ಇಂದಿರೆಗೆ—"ಇಂದಿರಾ, ಜಯರಾಯನು ಬೆಂಗಳೂರಿಂದ ಬಂದನಲ್ಲವೆ, ಏನು ಸಮಾಚಾರ ತಂದಿರುವನು ?"

"ಎಲ್ಲವೂ ನಮ್ಮಿಚ್ಛೆಯಂತೆ ನಡೆಯಿತಾಗಿ ತಿಳಿಯುತ್ತದೆ. ಇಕೋ ನೋಡಿರಿ, ಶ್ರೀಕಂಠ ಬಹದ್ದರನ ಪತ್ರ." ಎಂದು ಇಂದಿರೆಯು ತನ್ನ ನಿರಿಗೆಯಲ್ಲಿದ್ದ ಪತ್ರ ವನ್ನು ತೆಗೆದುಕೊಟ್ಟಳು.

"ದೇವಯಾನಿಯ ಆಜ್ಞೆಯ ಮೇರಿಗೆ ರಮಾಕಾಂತನು ಶ್ರೀಕಂಠನ ಪತ್ರ ತಕ್ಕೊಂಡು ಆ ಸಾಧ್ವಿಗೆ ಓದಿ ತೋರಿಸಿದನು. ದೇವಯಾನಿಯು ಈ ವರ್ತಮಾನ ಕೇಳಿ ಬಹಳೇ ಸಂತೋಷಪಟ್ಟು ರಮಾಕಾಂತನನ್ನು ಕುರಿತು—"ಕಾಂತೂ, ಹಾಗಾದರೆ ನಾಳೇ ದಿವಸವೇ ನೀನು ಜಯರಾಯನ ಮನೆಗೆ ಹೋಗಿ ಲಗ್ನದ ಪ್ರಸ್ತಾಪ ತೆಗೆ. ಜಯರಾಯನಿಗೆ ಏನಾದರೂ ವಿಚಾರಿಸುವದಿದ್ದರೆ ಆತನನ್ನು ಇಲ್ಲಿಗೇ ಕರಕೊಂಡು ಬಾ."

"ದೇವಯಾನಿಯಮ್ಮಾ, ನೀವು ವರದಕ್ಷಿಣೆಯೆಂದು ಬಹಳ ಹಣ ಬೇಡಿ ನನ್ನನ್ನು ಪೇಚಿಗೆ ತರಬೇಡಿರಿ." ಎಂದು ಇಂದಿರೆಯು ವಿನೋದಕ್ಕಾಗಿ ನುಡಿದು ರಮಾಕಾಂತನ ಮುಖಚಂದ್ರಮವನ್ನು ನೋಡಿ ನಕ್ಕಳು.

"ಇಂದಿರಾ, ನೀನೇ ಭೂಯಿಷ್ಠಳಾದ ದಕ್ಷಿಣೆಯು. ನಮ್ಮ ರಮಾಕಾಂತನು ಹಣದಾಸೆಯವನಲ್ಲ."

"ಶಬ್ದಾರ್ಥವೇ ಹಾಗಾಗುವದು. ದಾಕ್ಷಿಣ್ಯಯುಕ್ತಳೆಂದರೆ ದಕ್ಷಿಣೆಯು." ಎಂದು ರಮಾಕಾಂತನು ಶಾಲಾಧ್ಯಾಪಕನಂತೆ ಸ್ಪಷ್ಟೀಕರಣಮಾಡಿ ತೋರಿಸಿದನು.

ಇಂದಿರೆಯು ಮಂದಸ್ಮಿತೆಯಾಗಿ ಗೋಣುಹಾಕಿ "ಆಹಾ! ಬೇಕಾದ ಮಾತು ಬೆಲ್ಲದಕ್ಕಿಂತಲೂ ಸವಿ. ಪಕ್ಷಪಾತವಿಟ್ಟು ವರ್ಣಿಸಿದರೇನಾಗುವದು ?" ನಾನು ಇದೇ ದಿವಸ ಮೆಲ್ಲಗೆ ತಂದೆಗಳ ಮುಂದೆ ಪ್ರಸ್ತಾಪ ತೆಗೆದು ಅವರ ಮನಸ್ಸಿ ನಲ್ಲಿದ್ದದ್ದನ್ನು ಅರಿತುಕೊಳ್ಳುವೆ. ಅಂದರೆ ನಾಳೆ ಇತ್ತಕಡೆಯಿಂದ (ರಮಾಕಾಂತ ನಿಂದ) ಬರೋಣಾದರೆ ಏನೂ ತೊಂದರೆಯಾಗಲಿಕ್ಕಿಲ್ಲ."

"ಹಾಗೇ ಆಗಲೆಂದು ದೇವಯಾನಿಯು ನುಡಿದಳು. ಆ ಮೇಲೆ ಇಂದಿರೆಯು

ಇವರ ಅಪ್ಪಣೆ ತಕ್ಕೊಂಡು ತನ್ನ ಮನೆಗೆ ಹೊರಟುಹೋದಳು. ಇವಳು ಬಂದದ್ದು ಕಂಡು ಜಯರಾಯನು "ಇಂದಿರಾ, ರಮಾಕಾಂತನು ಬಂದಿರುವನೇನು ?" ಎಂದು ಕೇಳಿದನು.

"ನೀವು ಬೆಂಗಳೂರಿಗೆ ಹೋದದಿವಸವೇ ಬಂದರು."

"ನಿಮ್ಮ ಸ್ವಯಂವರದ ಮಾತು ಕಥೆಗಳೆಲ್ಲಾ ಮುಗಿದಿರುವವೇನು ?" ಎಂದು ಜಯರಾಯನು ದೀಡಿಯಾಡಿ ನಕ್ಕನು.

"ಸ್ವಯಂವರದ ಕೆಲಸ ನೀವು ಹೇಳಿದಂತೆ ನಮ್ಮದೆಂದು ಒಪ್ಪಿಕೊಂಡರೂ ಲಗ್ನಸಮಾರಂಭದ ಕೆಲಸವು ತಮ್ಮದೇ ಅಲ್ಲವೇ ?"

"ಇಂದಿರಾ, ನಮಗೆ ಅಸಮಾಧಾನ ತಟ್ಟಬಾರದೆಂದು ಯತ್ನಮಾಡುವದು ಸಹಜವಾದ ಮಾತು. ಬುದ್ಧ್ಯಾ ಹಿಂದಿನ ಸಂಗತಿಗಳನ್ನು ತೆಗೆದು ಅಸಮಾಧಾನ ಮಾಡಿಕೊಳ್ಳುವದೆಲ್ಲಿಯದು ? ನಿನ್ನ ಸೌಖ್ಯವನ್ನು ನೋಡಿಕೊಂಡಿರುವದೇ ನನಗೆ ಸಂತೋಷದ ಮಾತು. ರಮಾಕಾಂತನನ್ನು ಕರಿಸಿ ವಿವಾಹದ ಬಗ್ಗೆ ಆಲೋಚನೆ ಮಾಡೋಣ. ಸಮೀಪದ ಮುಹೂರ್ತದಲ್ಲಿಯೇ ಈ ಮಂಗಲೋತ್ಸವವನ್ನು ಬೆಳಿಸಿಬಿಡುವದನ್ನು ನಿಶ್ಚಯಿಸಿದ್ದೇನೆ."

"ನನ್ನೇನು ಕೇಳೋದು ಇದರಲ್ಲಿ ? ಏನು ಮಾಡುವವರು ತಾವೇ ಅಲ್ಲವೇ ?" ಎಂದು ಇಂದಿರೆಯು ಬಳಿಯಲ್ಲಿದ್ದ ಪುಸ್ತಕ ತೆರೆದು ಶ್ರೀರಾಮನು ಮಹೇಶ್ವರನ ಧನುಸ್ಸು ಮುರಿದ ಚಿತ್ರವನ್ನು ನೋಡುತ್ತ ತನ್ನ ಮುಖದಲ್ಲಿ ತೋರುತ್ತಿರುವ ಲಜ್ಜೆಯನ್ನು ಅಡಗಿಸಿಕೊಂಡಳು.

"ಶ್ರೀಕಂಠನ ಕೂಡ ನಿನ್ನ ಲಗ್ನಮಾಡುವದನ್ನು ನಿಶ್ಚಯಿಸಿದಾಗ್ಯೆ ಈ ಮಾತುಗಳು ಎಲ್ಲಿ ಹೋಗಿದ್ದವು, ಇಂದಿರಾದೇವಿ ?" ಜಯರಾಯನು ಮಗಳ ಮನೋಹರವಾದ ಮುಖವನ್ನು ನೋಡಿ ಸಂತೋಷದಿಂದ ನಕ್ಕನು.

ಮನುಷ್ಯನ ಮೇಲೆ ಎಲ್ಲೀವರೆಗೆ ಪ್ರಸಂಗವು ಬಂದಿಲ್ಲವೋ ಅಲ್ಲೀವರೆಗೆ ಆ ಪ್ರಸಂಗಕ್ಕೇನು ಮಾಡಬೇಕೆಂದು ದೊಡ್ಡ ಯೋಚನೆಯಲ್ಲಿರುವನು. ಆದರೆ ಆ ಪ್ರಸಂಗವು ಮೈಮೇಲೆ ಕಡುಕೊಂಡು ಬಿದ್ದರೆ ಅದಕ್ಕೆ ಪ್ರತೀಕಾರಗಳಾದ ಉಪಾಯಗಳು ತಮ್ಮಿಂದ ತಾವೇ ಸೂಚಿಸಿ ಆ ಪ್ರಸಂಗವು ನೀಗಿಹೋಗುತ್ತದೆ. ಅದರಂತೆಯೇ ಜಯರಾಯನಿಗೆ ಶ್ರೀಕಂಠನ ಸಂಬಂಧವನ್ನು ಕಡುಕೊಳ್ಳುವ ಉಪಾಯಗಳು ಸಹಜವೇ ಧ್ಯಾನಕ್ಕೆ ಬಂದು ಆ ಕೆಲಸ ತೀರಿದ ಬಳಿಕ ಮುಂದಿನ ಯೋಚನೆಯಲ್ಲಿ ಬಿದ್ದನೇ ಹೊರತಾಗಿ ಆಗಿಹೋದ ಮಾತಿನ ಹಳಮಂಡ ಉಳಿಯಲಿಲ್ಲ.

"ನಂಜುಂಡಾ, ಗಾಡಿ ತೆಗೆದುಕೊಂಡು ಹೋಗಿ ರಮಾಕಾಂತರಾಯರನ್ನು ಕರೆದುಕೊಂಡು ಬಾ, ಅಗತ್ಯದ ಕೆಲಸವಿದೆಯೆಂದು ಹೇಳು." ಎಂದು ಜಯರಾಯನು ಆಜ್ಞಾಪಿಸಿದನು. ಈ ಮಾತು ಕೇಳಿ ಇಂದಿರೆಯ ಎದೆ ಧಕ್‌ಧಕ್ ಹಾರಹತ್ತಿತ್ತು.

ರಮಾಕಾಂತನು ತುಸುಹೊತ್ತಿನಲ್ಲಿಯೇ ಬಂದುಬಿಟ್ಟನು. ಉಡಿಗೆತೊಡಗೆಯ ಜಂಭವು ಅವನಿಗೆ ಬೇಕಾಗದಿದ್ದರೂ ಈ ದಿವಸ ತನ್ನ ಮಾವನ ಮನೆಗೆ ಹೋಗಬೇಕಾಗಿದೆಂದೆಣಿಸಿ ರಮಾಕಾಂತನು ವಿಶೇಷವಾಗಿ ಮನಸ್ಸು ಕೊಟ್ಟು ಪೋಷಾಕುಮಾಡಿಕೊಂಡಿದ್ದನು. ಸುದೃಢನೂ ವರ್ಚಸ್ವಿಯೂ ರೂಪವಂತನೂ ಆಗಿದ್ದ ಈ ತರುಣನನ್ನು ನೋಡಿ ಜಯರಾಯನು ಹಿರ್‍ರನೆ ಹಿಗ್ಗಿ ಆದರದಿಂದ "ಬನ್ನಿರಿ ರಮಾಕಾಂತರಾವ್, ಎಲ್ಲವೂ ಕ್ಷೇಮವೋ ?" ಎಂದು ಕೇಳಿದನು.

ರಮಾಕಾಂತನು ನಮಸ್ಕಾರಮಾಡಿ "ತಮ್ಮ ಅನುಗ್ರಹದಿಂದ ಸರ್ವವೂ ಕ್ಷೇಮವೇ." ಎಂದು ವಿನಯದಿಂದ ಉತ್ತರಕೊಟ್ಟನು.

"ನೀವು ಜಪಾನಕ್ಕೆ ಹೊರಡುವವರಿದ್ದಿರಲ್ಲ ? ಎಂದು ಹೊರಡುವದು ?" ಎಂದು ಜಯರಾಯನು ಪರಿಹಾಸದಿಂದ ನುಡಿದು ಇಂದಿರೆಯ ಮುಖದಕಡೆಗೆ ನೋಡಿ ನಕ್ಕನು.

"ರಾಯರೇ, ನಾನು ಜಪಾನಕ್ಕೆ ಹೋಗುವದೂ ಬಿಡುವದೂ ತಮ್ಮ ಇಚ್ಛಾನುಸಾರವಾಗಿರುವದು. ಆಜ್ಞೆಯಾದಂತೆ ವರ್ತಿಸುವೆನು."

"ಇಂದಿರಾ, ಈಗಿನ ತರುಣರೆಲ್ಲರೂ ಒಳ್ಳೇ ಆಜ್ಞಾಧಾರಕವಾಗಿರುವಂತೆ ಕಾಣುತ್ತಾರೆ." ಎಂದು ಜಯರಾಯನು ಮರ್ಮಬೇಧಕವಾದ ಪ್ರಶ್ನೆ ಮಾಡಿ ಕಣ್ಣು ಚಿಮಟಿದನು.

"ಈ ಪ್ರಶ್ನೆಗೆ ಉತ್ತರ ಕೊಡಲಿಕ್ಕೆ ನನಗಾದರೂ ಬಾಯಿ ಎಲ್ಲಿ ಇದೆ ?" ಎಂದು ಇಂದಿರೆಯಂದಳು.

"ಅದಿರಲಿ, ರಮಾಕಾಂತರಾಯರಿಗೆ ಜಪಾನಕ್ಕೆ ಹೋಗುವದಿದ್ದರೆ ಅವರಿಗೆ ಅಪ್ಪಣೆ ಕೊಡುವದು ಸರಿಯಾದ ಮಾತೇ "

"ನನ್ನೇನು ಕೇಳುವದು ? ಹೋಗುವದೇ ಅವರಿಗೆ ಅವಶ್ಯವಿದ್ದಲ್ಲಿ ಹೋದಾರು." ಎಂದು ನುಡಿದು ಇಂದಿರೆಯು ಅಲ್ಲಿದ್ದ ಬೀಸಣಿಕೆ ತಕ್ಕೊಂಡು ಅದನ್ನು ತನ್ನ ಮೋರೆಗೆ ಅಡ್ಡಹಿಡಿದು ಮರೆಯಲ್ಲಿ ನಕ್ಕಳು.

"ಕೆಲವೊಂದು ಅದೃಶ್ಯವಾದ ಸರಪಣಿಯಿಂದ ದೃಢವಾಗಿ ಬದ್ಧರಾಗಿರುವ ನಮ್ಮೀ ರಮಾಕಾಂತರು ಇಲ್ಲಿಂದ ಹೋಗುವದು ಹೇಗೆ ?" ಎಂದು ಜಯ

ರಾಯನು ನುಡಿದು ಇಂದಿರೆಯ ಕಯ್ಯಲ್ಲಿಯ ಬೀಸಣಿಕೆಯನ್ನು ನೋಡುವ ನೆವದಿಂದ ಕಸಕೊಂಡು ಮೇಜಿನ ಮೇಲಿಟ್ಟನು.

ಇಂದಿರೆಯ ಮೋಹಕವಾದ ಮುಖವು ಲಜ್ಜೆಯಿಂದ ಕೆಂಪಾಗಿತ್ತು. ಕಮಲ ಪತ್ರದ ಮೇಲೆ ದುಷ್ಯಂತನಿಗೆ ಪತ್ರಬರೆಯುವ ಶಕುಂತಲೆಯಂತೆ ಅವಳು ಕೈಯ್ಯಲ್ಲಿ ಗುಲಾಬೀ ಹೂ, ತಕ್ಕೊಂಡು ಅದರ ಪಕಳೆಯನ್ನು ತನ್ನ ಉಗುರಿನಿಂದ ಗೀರುತ್ತ ಕಣ್ಣೆತ್ತಿ ನೋಡಲು ಧೈರ್ಯ ಸಾಲದೆ ಅವನತಮುಖಿಯಾಗಿ ಕುಳಿತುಕೊಂಡಳು.

"ಇಂದಿರಾ, ನೀನು ಕಾಫೀ ಮಾಡುವದರಲ್ಲಿ ಬಳ್ಳೇ ನಿಷ್ಣಾತಳು. ಕೆಳಗೆ ಹೋಗಿ ಸ್ವಲ್ಪ ಕಾಫಿ ಮಾಡಿಕೊಂಡು ಬರಬಾರದೇ ?" ಎಂದು ನೆವ ತೆಗೆದು ಇಂದಿರೆಯನ್ನು ಜಯರಾಯನು ಕೆಳಗೆ ಕಳುಹಿಸಿ ರಮಾಕಾಂತನನ್ನು ಕುರಿತು :

"ರಾಯರೆ, ನಿಮಗೆ ಹೇಳುವದು ಸ್ವಲ್ಪವೇ ಉಳಿದಿದೆ. ನೀವೂ ಇಂದಿರೆಯೂ ಕೂಡಿಕೊಂಡು ಎಲ್ಲ ಮಾತುಗಳ ನಿರ್ಣಯ ಮಾಡಿಕೊಂಡಿರುವಂತೆ ತೋರುತ್ತದೆ. ಅಂದರೂ ತಂದೇ ಕರ್ತವ್ಯಕ್ಕನುಸರಿಸಿ ನಾನು ವಿನಂತೀ ಮಾಡಿ ಕೊಳ್ಳುವದೇನಂದರೆ, ಇಂದಿರೆಯನ್ನು ಸ್ವೀಕರಿಸಿ ಅವಳನ್ನು ಪ್ರೇಮದಿಂದ ನಡಿಸಿ ಕೊಳ್ಳಬೇಕು. ಇದುವರೆಗೆ ನಾನು ಅವಳನ್ನು ಬಹುಪ್ರೇಮದಿಂದ ಪಾಲಿಸಿ ಇನ್ನು ಅವಳನ್ನು ತಮ್ಮ ಸ್ವಾಧೀನ ಮಾಡುತ್ತೇನೆ. ಎಪ್ಪಾದರೂ ಕನ್ಯೆಯೆಂದರೆ ಪರಕೀಯರ ವಸ್ತುವೇ. ಇಂದಿರೆಯು ಒಂದರಗಳಿಗೆ ಕಣ್ಣು ಮರೆಯಾದರೆ ನನಗೆ ವ್ಯಸನ ವಾಗುತ್ತಿತ್ತು. ಅವಳೇನು ಬೇಡಿದ್ದನ್ನು ಕಯ್ಯಲ್ಲಿ ಹಿಡಕೊಂಡು ನಿಂತಿರುವೆನು. ಸಥಿಯಿಂದ ಅವಳು ನನ್ನ ಅಜ್ಞೆ ಮುರಿದರೂ ನನಗೆ ಆಹ್ಲಾದವೇ ಆಗುತ್ತಿತ್ತು. ಸಾರಾಂಶ ತಮಗೆ ಹೇಳಿಕೊಳ್ಳುವದೇನಂದರೆ, ಅವಳಿಗೆ ನನ್ನ ವಿಯೋಗದಿಂದ ವ್ಯಸನವಾಗದಂತೆ ಅವಳನ್ನು ಸಂರಕ್ಷಿಸುವ ಕರ್ತವ್ಯವು ಈ ದಿವಸದಿಂದ ತಮ್ಮ ಕಡೆಗೆ ಬಂದಿರುವದು" ಎಂದು ಜಯರಾಯನು ಗದ್ಗದಕಂಠನಾಗಿ ನುಡಿದು ಕರವಸ್ತ್ರದಿಂದ ತನ್ನ ಕಣ್ಣೊರಿಸಿಕೊಂಡನು.

ರಮಾಕಾಂತನೆದ್ದು ಜಯರಾಯರ ಕಯ್ಯಹಿಡಿದು "ರಾಯರೇ, ತಾವೇನೂ ಚಿಂತಿಸಬೇಡಿರಿ. ಇಂದಿರೆಯನ್ನು ಯಾವಾಗಲೂ ಸಂತೋಷದಲ್ಲಿಡುವದೇ ನನ್ನ ಕರ್ತವ್ಯವೆಂದೆಣಿಸಿ ಅವಳೊಡನೆ ವರ್ತಿಸುವೆನು. ಬಾಯಿಯಿಂದಾಡಿ ಫಲ ವೇನು ? ಇಂದಿರೆಯ ಬಾಯಿಯಿಂದಲೇ ಕೇಳಿಕೊಂಡ ಮೇಲೆ ನೀವು ಮನ ಗಾಣುವಿರಿ" ಎಂದು ಹೇಳಿದನು.

"ರಮಾಕಾಂತರೆ, ಇನ್ನೊಂದು ನನ್ನ ವಿನಂತಿ ಇರುವದು. ನನಗೆ ಪುತ್ರ

ಸಂತಾನವಿಲ್ಲ. ನನ್ನ ಪಶ್ಚಾತ್ ನನ್ನ ಆಸ್ತಿಗೆ ನೀವೂ ಇಂದಿರೆಯೂ ಒಡೆಯರಾಗುವಿರಿ. ನಿಮ್ಮನ್ನೇ ನೋಡಿಕೊಂಡು ನಾನು ಕಾಲಹಾಕತಕ್ಕವನು. ಆದ್ದರಿಂದ ನೀವು ದಯಮಾಡಿ ನನ್ನ ಮನೆಯಲ್ಲಿಯೇ ಯಥಾಸುಖವಾಗಿ ಇರತಕ್ಕದ್ದು."

"ತಮ್ಮಿಷ್ಟವಿದ್ದರೆ ನಾನು ಬೆಂಗಳೂರಲ್ಲಿಯೇ ವಾಸಮಾಡಿಕೊಂಡಿರುವೆನು. ಮಾತ್ರ ತಾವು ಹೇಳಿದ ಮಾತಿಗೆ ನನ್ನ ಒಪ್ಪಿಗೆಯಿಲ್ಲ. ಶುಶ್ವರಗೃಹವಾಸದ ದೋಷ ನನಗೆ ಬೇಕಾಗಿಲ್ಲ."

"ಆಗಲಿ, ವರದಕ್ಷಿಣೆ ಏನು ಕೊಡೆಂದು ಹೇಳುವಿರಿ ?"

"ಅಂದರೆ!!! ಆ ಬೆಲೆಗೆ ನನ್ನನ್ನು ಕೊಂಡುಕೊಳ್ಳುವಿರೇನು ?"

"ಹಾಗಲ್ಲ. ಈ ದೇಶದಲ್ಲಿ ವರದಕ್ಷಿಣೆ ಕೊಡುವ ಸಾಂಪ್ರದಾಯವಿರುವದು."

"ಇಂಥ ನೀಚ ಸಾಂಪ್ರದಾಯಗಳನ್ನನುಸರಿಸುವದು ನನಗಿಷ್ಟವಿಲ್ಲ. ಇಂದಿರೆಯ ಅಮೌಲ್ಯವಾದ ಗುಣಗಳೇ ನನಗೆ ಸಾಕಷ್ಟು ವರದಕ್ಷಿಣೆಯಾಗಿವೆ."

"ಶಾಬಾಸ್ ರಮಾಕಾಂತರಾವ್, ನಿಮ್ಮ ಗುಣಗಳು ಅಸಾಧಾರಣವಾದವು. ಇಂದಿರೆಯ ಪೂರ್ವಾರ್ಜಿತ ಪುಣ್ಯದ ಬಲದಿಂದಲೇ ನಿಮ್ಮಂಥ ಅಳಿಯಂದೇವರನ್ನು ಕಂಡೆನು. ನಾನು ದೇವಯಾನಿಯ ಬಳಿಗೆ ಬಂದು ಎಲ್ಲ ಮಾತುಗಳ ನಿರ್ಣಯ ಮಾಡಿಕೊಂಡು ಇದೇ ತಿಂಗಳಲ್ಲಿಯೇ ಇದೊಂದು ಮಂಗಲಕಾರ್ಯವನ್ನು ನೆರವೇರಿಸುವೆನು." ಎಂದು ಜಯರಾಯನು ಉತ್ಸಾಹದಿಂದ ನುಡಿದನು.

ಇಷ್ಟರಲ್ಲಿ ಇಂದಿರೆಯು ಕಾಫಿ ತಕ್ಕೊಂಡು ಬಂದಳು. ತನ್ನ ತಂದೇ ಮುಂದೊಂದು ರಮಾಕಾಂತನ ಮುಂದೊಂದು ಕಾಫಿ ತುಂಬಿದ ಬೆಳ್ಳೀ ಪಾತ್ರೆಗಳನ್ನು ಒಯ್ಯಾರದಿಂದಿರಿಸಿ ತಾನೂ ಕುಳಿತುಕೊಂಡಳು. ಮೂವರು ಆನಂದದಿಂದ ವಿನೋದಗಯ್ಯುತ್ತ ಕಾಫಿಯನ್ನು ತಕ್ಕೊಂಡ ಬಳಿಕ ರಮಾಕಾಂತನು ಅಪ್ಪಣೆ ತಕ್ಕೊಂಡು ದೇವಯಾನಿಯ ಮನೆಗೆ ಬಂದನು.

ರಮಾಕಾಂತನ ನಿಮಂತ್ರಣದ ಪ್ರಕಾರ ದೇವಯಾನಿಯ ಮನೆಗೆ ರಂಗರಾಯನು ಬಂದಿದ್ದನು. ಈ ರಂಗರಾಯನು ದೇವಯಾನಿಯ ಆಪ್ತನಾಗಿದ್ದರೂ ಒಬ್ಬರನ್ನೊಬ್ಬರು ಎಂದೂ ನೋಡಿದ್ದಿಲ್ಲಾದ ಕಾರಣ ರಂಗರಾಯನ್ಯಾರೋ ಎಂದು ದೇವಯಾನಿಯು ಭಾವಿಸಿಕೊಂಡಿದ್ದಳು. ದೇವಯಾನಿಯ ತಾಯಿಯೂ ರಂಗರಾಯನ ತಂದೇ ತಾಯಿಯೂ ಅಕ್ಕತಂಗೆಂದಿರು. ರಂಗರಾಯನಿಗೆ ದೇವಯಾನಿಯ ತಂದೆಯವರಾದ ಸುಬ್ಬರಾಯರ ಹೆಸರು ಮಾತ್ರ ಗೊತ್ತಿತ್ತು. ಒಂದೆರಡು

ಸಾರೆ ಅವರನ್ನು ನೋಡಿಯೂ ಇದ್ದನು. ಆದರೆ ಈ ಸುಬ್ಬರಾಯರು ತನಗೆ ಹೇಗೆ ಆಪ್ತರೆಂಬುದು ಮಾತ್ರ ಅವನಿಗೆ ಗೊತ್ತಿದ್ದಿಲ್ಲ. ದೇವಯಾನಿಯ ಮನೆಯ ಲ್ಲಿದ್ದ ಸುಬ್ಬರಾಯರ ಚಿತ್ರವನ್ನು ನೋಡಿ— ರಂಗರಾಯನು, "ಇವರ ಚಿತ್ರವಿಲ್ಲಿ ಏಕೆ ? ಅವರು ನಿಮಗೆ ಆಪ್ತರಾಗಬೇಕೇನು ?" ಎಂದು ಕೇಳಲು ದೇವಯಾನಿಯು ಕೊಟ್ಟ ಉತ್ತರದ ಮೇಲಿಂದ ರಂಗರಾಯನಿಗೆ ದೇವಯಾನಿಯು ತನಗೆ ಸೋದರತ್ತೆ ಯಾಗಬೇಕೆಂದು ಕಂಡುಕೊಂಡನು.

"ನಮ್ಮ ಕೊಪ್ರವ್ವಾ ಅಬಚಿಯ ಮೊಮ್ಮಗನೇನು ನೀನು ?" ಎಂದು ದೇವಯಾನಿಯು ಕೇಳಿದಳು.

"ಅಹುದು" ಎಂದು ರಂಗರಾಯನು ದೇವಯಾನಿಯ ಪಾದದ ಮೇಲೆ ಬಿದ್ದನು.

"ರಂಗಾ, ನೋಡು, ಹೇಗೆ ಅಂತಃಕರಣ ಬಿಟ್ಟೇಹೋಗುತ್ತದೆ ! ಆಧುನಿಕ ಸುಧಾರಣೆಯಿಂದ ನಾವು ತಾಮ್ರಮುಖಿಗಳಂತೆ ಒಬ್ಬರಿಗೊಬ್ಬರು ಸಂಬಂಧವಿಲ್ಲ ದಂತೆ ಇರೋಣದರಿಂದ ಆಪ್ತರಾರು ಇದ್ದರಾರೆಂಬುವದು ಕೂಡಾ ತಿಳಿಯದೇ ಹೋಗುತ್ತದೆ."

"ಅತ್ಯಾ, ನೀವು ಹೇಳಿದ್ದು ನಿಜವು. ಅಕ್ಟೇವ್ಹಿಯಸನಿಗೆ ಜೂಲಿಯಸನೇನಾಗ ಬೇಕು ? ಜಹಾಂಗೀರ ಬಾದಶಹನಿಗೆಷ್ಟು ಜನ ಮಕ್ಕಳಿದ್ದರು ; ಎಂಬುದನ್ನು ನಾವು ಬಲ್ಲೆವು. ಮೊದಲನೇ ವಿಲ್ಯಮನಿಂದ ವ್ಹಿಕ್ಟೋರಿಯಳವರೆಗೆ ವಂಶಾವಳಿಯನ್ನು 'ಕೇಶವ ನಾರಾಯಣ' ಹೇಳಿದಂತೆ ಒಂದೂ ತಪ್ಪದೆ ಜಾಗ್ರತೆಯಾಗಿ ಹೇಳುತ್ತೇವೆ. ಆದರೆ ನಮ್ಮ ತಂದೆಯ ಮುತ್ತಾತನ್ಯಾರೆಂದು ಕೇಳಿದರೆ ಕಲ್ಲಿನಂತೆ ಕೂಡುತ್ತೇವೆ. ಇದೆಂಥ ಲಾಂಛನಾಸ್ಪದವಾದ ಮಾತು ನೋಡಿರಿ !"

"ಆದಕ್ಕಾಗಿಯೇ ರಂಗಾ, ನೀವು ಮೊದಲು ನಿಮ್ಮ ಮನೆತನದ ಇತಿಹಾಸ ಕಲಿತುಕೊಂಡು ಆಮೇಲೆ ಜಗತ್ತಿನ ಇತಿಹಾಸ ಕಲಿತುಕೊಳ್ಳುವ ಹವ್ಯಾಸಕ್ಕೆ ಬೀಳ ತಕ್ಕದ್ದು" ಎಂದು ದೇವಯಾನಿಯು ಹೇಳಿದಳು.

"ದೇವಯಾನಿಯಮ್ಮಾ, ಇಷ್ಟು ಶಾಸ್ತ್ರ ಹೇಳುವವರು ನಿಮಗೇಕೆ ರಂಗ ರಾಯನ ಆಪ್ತತ್ವ ಗೊತ್ತಾಗಲಿಲ್ಲ ?" ಎಂದು ರಮಾಕಾಂತನು ನಗುತ್ತ ಕೇಳಿದನು.

"ಗಂಡಸು ಮಕ್ಕಳಾಗಿ ಜಾಣತನ ಮೆರಿಸುವ ನಿಮ್ಮ ಬೆಳಕು ಬೀಳಲಿ. ಆಮೇಲೆ ನಮ್ಮ ಹೆಸರು ತೆಗೆಯಿರಿ. ಸುಮ್ಮನೆ ನನ್ನ ಬಾಯಿಗೇಕೆ ತರಿಸುವಿ ! ಅದಿರಲಿ ರಂಗಾ, ನಿನ್ನ ಪುತ್ರನ ವಿವಾಹಕಾರ್ಯವನ್ನು ಒಳ್ಳೇ ಉತ್ಸಾಹದಿಂದ

ನೆರವೇರಿಸಬೇಕಾಗಿದೆ. ನಾನಂತೂ ಅಶಕ್ತಳಾದ ಮುದುಕಿಯು. ಈ ರಾಯರಂತೂ ಅಳೀ ದೇವರು, ಅಂತೂ ಇಂತೂ ಈ ಕಾರ್ಯವನ್ನು ನೀನೇ ಹೊತ್ತುಕೊಳ್ಳಬೇಕು."

"ಇದೇನು ಹೇಳುವದು! ಈ ಕಾರ್ಯದ ಚಿಂತೆಯನ್ನೇ ಬಿಡರಿ. ಮಾತ್ರ ನೋಡಿಕೊಳ್ಳಿರಿ! ನಾನಿಟ್ಟ ವ್ಯವಸ್ಥೆಯಂತೆ ಕಾರ್ಯ ನಡೆದರೆ 'ಆಯಿ ನೂತದ್ದು ಮೊಮ್ಮಗನ ಉಡದಾರಕ್ಕೆ' ಎಂಬಂತೆ ನೀವು ಮಾಡಿಟ್ಟ ಗಂಟೆಲ್ಲ ಕರಗಿ ಹೋದೀತು" ಎಂದು ರಂಗರಾಯನು ಚೇಷ್ಟೆಗಾಗಿ ನುಡಿದನು.

ಮರುದಿವಸ ಬೆಳಿಗ್ಗೆ ಇಂದಿರೆಯು ದೇವಯಾನಿಯ ಮನೆಗೆ ಚಹ ತಕ್ಕೊಳ್ಳುವ ನಿಮಿತ್ತದಿಂದ ಬಂದಳು. ರಮಾಕಾಂತನು ಇವಳ ಕಯ್ಯು ಹಿಡಿದುಕೊಂಡು ಉಪ್ಪರಿಗೇ ಮೇಲೆ ಕರೆತಂದನು. ಇವರನ್ನು ನೋಡಿ ಹರ್ಷಿತಳಾಗಿ ದೇವಯಾನಿಯು ರಂಗರಾಯನನ್ನು ಕುರಿತು—"ರಂಗಾ, ಚಂದ್ರಮನನ್ನು ಬಿಡದೇ ಆಶ್ರಯಿಸಿಕೊಂಡಿರುವ ಕೌಮುದಿಯಂತೆ ಇಂದಿರೆಯು ಈಗಿನಿಂದಲೇ ರಮಾಕಾಂತನನ್ನು ಕೂಡಿಕೊಂಡೇ ಇರಹತ್ತಿರುವಳು."

"ದೇವಯಾನಿಯಮ್ಮಾ, ನಿಮ್ಮನ್ನು ಕವಿತ್ವವು ಆಶ್ರಯಿಸಿಕೊಂಡಿರುವದೋ ನೀವೇ ಕವಿತ್ವವನ್ನಾಶ್ರಯಿಸಿರುವಿರೋ ದಯಮಾಡಿ ಹೇಳೋಣಾದೀತೇನು?" ಎಂದು ಇಂದಿರೆಯು ಮಂದಸ್ಮಿತೆಯಾಗಿ ಕೇಳಿದಳು.

"ಇಂದಿರಕ್ಕಾ, ಮಾತಿಗೊಂದು ಉತ್ತರ ಕೊಡದಿದ್ದರೆ ನಿನ್ನ ಹೆಸರಿಗೆ ಕಲಂಕವೇ ಹತ್ತೀತಲ್ಲವೇ? ರಂಗಾ, ಈ ಶೃಂಗಾರಗೌರಿಯು ನಮ್ಮ ಕಾಂತೂನ ಅರ್ಧಾಂಗಿಯಾಗತಕ್ಕವಳು. ಇವಳ ಪರಿಚಯ ನಿನಗೆ ಇರುವದೇನು?" ಎಂದು ದೇವಯಾನಿಯು ಕೇಳಿದಳು.

"ದೂರಿನಿಂದ ನೋಡುತ್ತಿದ್ದೆನು. ಪರಿಚಯವಿರಲಿಕ್ಕೆ ಕಾರಣವಿಲ್ಲ. ಇನ್ನೇನು ಇವರು ನಮ್ಮ ಮನೆಯವರೆ ಆಗುವರಲ್ಲ!" ಎಂದು ರಂಗರಾಯನಂದನು.

ಇಂದಿರಾ, ಇವರು ನಿಮ್ಮ ಯಜಮಾನರ ಪರಮಮಿತ್ರರಾದ ರಂಗರಾಯರು. ನನಗೂ ಸೋದರಳಿಯನಾಗಬೇಕು. ಇವರನ್ನು ನೀನು ಆದರಿಸತಕ್ಕದ್ದು, ಕಂಡೆಯಾ." ಎಂದು ದೇವಯಾನಿಯು ಇಂದಿರೆಗೆ ಹೇಳಿದಳು.

"ದೇವಯಾನಿಯಮ್ಮಾ, ಇದನ್ನೇನು ನೀವು ಹೇಳಬೇಕೇ?" ಎಂದು ಇಂದಿರೆಯು ನುಡಿದಳು.

"ರಮಾಕಾಂತರಾವ, ಇಂದಿರಾಬಾಯಿಯವರಂಥ ಸ್ತ್ರೀರತ್ನವು ನಿಮಗೆ ಪ್ರಾಪ್ತ

ವಾದದ್ದು ನಿಮ್ಮ ಭಾಗ್ಯವೇ ಸರಿ. ಯಾಕೆ ದೇವಯಾನಿಯವ್ವಾ, ನಾನಂದದು ಯಥಾರ್ಥವಾಗಿದೆಯೋ ಇಲ್ಲವೋ ?" ಎಂದು ರಂಗರಾಯನಂದನು.

"ರಂಗರಾವ್, ಆಗ್ಯೆ ನೀವು ಆಗ್ರಹ ತೊಡದೇ ಇದ್ದ ಪಕ್ಷದಲ್ಲಿ ನಾನು ಮೂರ್ಖನಂತೆ ದೇಶಾಂತರಕ್ಕೆ ಹೊರಟುಹೋಗಿ ನನ್ನ ಮನೆಗೆ ನಡೆದುಬರುವ ಲಕ್ಷ್ಮಿಯನ್ನು ಕಳಕೊಳ್ಳುತ್ತಿದ್ದೆನು." ಎಂದು ರಮಾಕಾಂತನಂದನು.

"ಪರಿಣಾಮರಮಣೀಯವಾದದ್ದು ಎಲ್ಲವೂ ರಮಣೀಯವೇ ಸರಿ. ಬಿಸಿಲಿನಿಂದಾಗಲೀ ಕಾಮಪೀಡೆಯಿಂದಾಗಲೀ ಸಂತಪ್ತನಾಗದಿದ್ದ ಮನುಷ್ಯನಿಗೆ ಹಿಮಕರನ ಶೀತಸ್ಪರ್ಶವಾದ ಕಿರಣಗಳ ಬೆಲೆ ತಿಳಿಯುವದು ಹೇಗೆ ? ಸುಖಂ ಹಿ ದುಃಖಾನ್ಯನುಭೂಯ ಶೋಭತೇ" ಎಂದು ರಂಗರಾಯನು ಹೇಳಿದನು.

"ಯಾಕೆ ಇಂದಿರಕ್ಕಾ, ರಂಗಣ್ಣನು ಹೇಳಿದ ಮಾತು ನಿನ್ನ ಮನಸ್ಸಿಗೂ ಸಟ್ಟಿತೇನು ?" ಎಂದು ದೇವಯಾನಿಯು ನುಡಿದು ಹೊಟ್ಟೆ ಹಿಡಕೊಂಡು ನಕ್ಕಳು.

ಶೇಷಮ್ಮನು ಚಹ ಉಪಹಾರಗಳನ್ನು ತಕ್ಕೊಂಡು ಬಂದು ಬಡಿಸಿ ಸಿದ್ಧ ಪಡಿಸಿದ ಬಳಿಕ ಒಬ್ಬರಿಗೊಬ್ಬರು ಆಗ್ರಹ ಮಾಡುತ್ತ ನಗುತ್ತ ಕೆಲೆಯುತ್ತ ಆನಂದ ದಿಂದ ಚಹ ತಕ್ಕೊಳ್ಳುವ ಸಮಾರಂಭವು ಮುಗಿಯಿತು. ಗಂಗೆಯು ಒಯ್ಯಾರ ದಿಂದ ತಾಂಬೂಲದ ತಬಕವನ್ನಿರಿಸಿ ಚಹ ಸಾಮಾನುಗಳನ್ನೆತ್ತಿಕೊಂಡು ಹೋದಳು.

ಆ ದಿವಸ ಮಧ್ಯಾಹ್ನದ ಮೇಲೆ ಜಯರಾಯನು ದೇವಯಾನಿಯ ಮನೆಗೆ ಬಂದನು. ವಿಶೇಷ ರಸಕಸಿಯಾಗದೆ ಎಲ್ಲ ಮಾತುಗಳ ನಿರ್ಣಯವಾಯಿತು. ಮಾಘಶುದ್ಧ ನವಮೀ ದಿವಸ ಲಗ್ನವಾಗುವದು ಗೊತ್ತಾಯಿತು. ದೇವಯಾನಿಯ ದೊಂದು ಮಾತು ಮಾತ್ರ ನಡೆಯಲಿಲ್ಲ. ಇಂದಿರೆಗೆ ಬೇಕಾದ ವಸ್ತ್ರಗಳನ್ನೂ ಆಭರಣಗಳನ್ನೂ ತಾನೇ ಕೊಡುವೆನೆಂದು ಜಯರಾಯನ ಆಗ್ರಹಬದ್ಧ ಮೂಲಕ ದೇವಯಾನಿಯು ಆಭರಣದ ಪೆಟ್ಟಿಗೆಗೆ ಹಾಕಿದ ಕೀಲಿಯನ್ನು ತೆಗೆಯುವ ಪ್ರಸಂಗ ಬರಲಿಲ್ಲೆಂದು ದೇವಯಾನಿಯು ತುಸು ಕೋಪಿಸಿಕೊಂಡಳು. 'ಆನಂದಭವನ ದಲ್ಲಿ' ಇಂದಿರಾ ರಮಾಕಾಂತರು ಇರುವವರಾದರು. ನಾಲ್ಕು ಅರಬ್ಬೀ ಕುದುರೆ ಗಳನ್ನೂ ಎರಡು ಹೊಸ ರಥಗಳನ್ನೂ ಜಯರಾಯನು ತನ್ನ ಅಳಿಯನಿಗೆ ಕೊಡ ಲೊಪ್ಪಿದನು.

ನವರಸಪುರದ ಶ್ರೀಕಾಂತರಾವ್ ದೇಸಾಯರ ಸಾಮಾನುಗಳು ಮಾಘಶುದ್ಧ ಪ್ರತಿಪದೆಯ ದಿವಸ ದೇವಯಾನಿಯ ಮನೆಯಲ್ಲಿ ಬಂದು ಬಿದ್ದವು. ಮೂವತ್ತು

ನಾಲ್ವತ್ತು ಜನಗಳ ಹಾಸಿಗೆ, ಪೆಟ್ಟಿಗೆಗಳಿದ್ದವು. ನಾಲ್ಕು ರಥಗಳು ಎಂಟು ಕುದುರೆಗಳು ಬಂದು ನಿಂತವು. ಶ್ರೀಕಾಂತರಾಯರು ಮೂರುದಿವಸ ಬರುವವರಾಗಿದ್ದರು.

ಶ್ರೀಕಾಂತರಾಯರು ಒಂದನೇ ತರಗತಿಯ ಸರದಾರರಿದ್ದದ್ದರಿಂದ ಇವರಿಗೆ ಬಹುಮಾನದೊಂದಿಗೆ ಸ್ವಾಗತ ಮಾಡತಕ್ಕದ್ದೆಂದು ಮುಂಬಯಿ ಸರಕಾರದವರು ಮೈಸೂರ ದಿವಾನರಿಗೆ ತಿಳಿಸಿದ್ದರು. ಸ್ವತಃ ದಿವಾನರು ಶ್ರೀರಂಗಪಟ್ಟಣಕ್ಕೆ ಬಂದು ಒಳ್ಳೇ ಸಡಗರದಿಂದ ಶ್ರೀಕಾಂತರಾಯರಿಗೆ ಸ್ವಾಗತ ಮಾಡಿದರು.

ಗಾಡಿಯು ಸ್ಟೇಷನಕ್ಕೆ ಬಂದ ಕೂಡ್ಲೆ ಒಂದನೇ ವರ್ಗದ ಡಬ್ಬೆಯಿಂದ ಒಬ್ಬ ಜವಾನನು ಇಳಿದನು. ಇವನು ಹಾಕಿಕೊಂಡ ಬಿಲ್ಲೇ ಮೇಲೆ "ಶ್ರೀಮಂತ ದೇಸಾಯಿ ನವರಸಪುರ" ಎಂಬ ಅಕ್ಷರಗಳಿದ್ದವು. ಇವನು ಅತ್ತಿತ್ತ ನೋಡಿ ಪ್ರಭಾವಶಾಲಿಯಾದ ನಮ್ಮ ತರುಣ ರಮಾಕಾಂತನನ್ನು ಕಂಡು ರಾಮ ರಾಮ ಮಾಡಿ " ರಮಾಕಾಂತ ಧನೀಸಾಬ ಅಪೂನ್ ಕಾಯ ?" ಎಂದು ಕೇಳಿದನು.

"ಹೋಯ ಮೀಚ, ಕೋಣ ಕೋಣ ಆಲೇರೇ."

"ಸರಕಾರ ಸ್ವಾರೀ ಆಲೀಯಾ ಧನೀಸಾಬ." ಎಂದು ಹೇಳಿ ಈ ಜವಾನನು ರಮಾಕಾಂತನನ್ನು ಶ್ರೀಕಾಂತರಾಯರ ಹತ್ತಿರ ಕರೆದೊಯ್ದನು.

ಶ್ರೀಕಾಂತರಾಯನು ರಮಾಕಾಂತನನ್ನು ನೋಡಿ ಪರಮ ಹರುಷಿತನಾಗಿ ಅವನನ್ನು ತಬ್ಬಿಕೊಂಡು "ರಮಾಕಾಂತ, ನಿನ್ನನ್ನು ನೋಡದಲೆ ಬಹಳ ವರುಷಗಳಾದವು. ನೀನು ದೊಡ್ಡ ಮಗನಾಗಿರುವಿ. "ಕಮಲಾಕಾಂತನು ಇದನ್ನೆಲ್ಲ ನೋಡಲಿಕ್ಕೆ ಬದುಕಿರಲಿಲ್ಲ"ವೆಂದು ಕಣ್ಣಿಗೆ ನೀರು ತಂದನು.

ಶ್ರೀಕಾಂತರಾಯನು ಸುಮಾರು ಅರವತ್ತೈದು ವರುಷದ ಮುದುಕನಾಗಿದ್ದರೂ ಅವನ ದೇಹವು ಇನ್ನೂ ಮಾಂಸಲವಿದ್ದು ಮೋರೆ ಮೇಲೆ ವರ್ಚಸ್ಸವಿತ್ತು. ರೈಲಿನಿಂದಿಳಿದ ಕೂಡಲೆ ರಮಾಕಾಂತನು ಒಳ್ಳೇ ಅಭಿಮಾನದಿಂದ ಇವರೇ ನನ್ನ ಕಕ್ಕಂದಿರಾದ ಶ್ರೀಕಾಂತರಾವ್ ದೇಸಾಯರೆಂದು ದಿವಾನರಿಗೂ ಜಯರಾಯನಿಗೂ ರಂಗರಾಯನಿಗೂ ತೋರಿಸಿದನು. ಸ್ಟೇಶನದ ಮೇಲೆ ದಿವಾನರು ಕೊಟ್ಟ ಹಾರ ತುರಾಯಿ ತಾಂಬೂಲಾದಿಗಳ ಕಾಣಿಕೆಯನ್ನು ತಕ್ಕೊಂಡು ಶ್ರೀಕಾಂತರಾಯನು ದೇವಯಾನಿಯ ಮನೆಗೆ ಬಂದನು.

ಕಲಾಪಟುಗಳಾದ ಕೈಗಾರಿಕೆಯವರು ಜಯರಾಯನ ಮನೆಯ ಮುಂದೂ ದೇವಯಾನಿಯ ಮನೆಯ ಮುಂದೂ ರಮ್ಯವಾದ ಮಂಟಪಗಳನ್ನು ಕಟ್ಟಿದ್ದರು.

ತನ್ನ ಮನೆಯಿಂದ ದೇವಯಾನಿಯ ಮನೆಯವರೆಗೂ ಜಯರಾಯನು ಸಾಲು ದೀಪದ ಕಂಬಗಳನ್ನು ನಿಂದಿರಿಸಿ ಒಳ್ಳೇ ದೀಪೋತ್ಸವವನ್ನು ಮಾಡಿಸಿದ್ದನು. ಪ್ರವೀಣರಾದ ಬೇಂಡಿನವರು ಕೇಳಿದವರಿಗೆ ಉತ್ಸಾಹ ಬರುವಂತೆ ಬಹು ರಮಣೀಯವಾಗಿ ತಮ್ಮ ವಾದ್ಯಗಳನ್ನು ಬಾರಿಸುತ್ತಿದ್ದರು. ಸೀಮಂತ ಪೂಜೆಯ ದಿವಸ ಹಗಲು ಪಂಜು, ಬಿರುಸು, ಬಾಣ ಚಕ್ರಬಾಣ ತಾರಾಮಂಡಲ ಲಂಕಾದಹನ ಮುಂತಾದ ಮದ್ದಿನ ಕೆಲಸವು ಅತ್ಯದ್ಭುತವಾಗಿಹೋಯಿತು.

ಎಂಟಾನೆಂಟು ದಿವಸ ಒಳ್ಳೇ ಮಹೋತ್ಸವದೊಂದಿಗೆ ಲಗ್ನಕಾರ್ಯವು ನೆರೆವೇರಿತು. ವಧುವರಗಳು ಲಕ್ಷ್ಮೀನಾರಾಯಣರ ಭೂಮಿಕೆಯಲ್ಲಿರುವದರಿಂದ ವಿಶ್ವಸ್ಥಿತಿಗೆ ಆದಿಹೇತುಗಳಾದ ಆ ಜಗತ್ಪಿತೃಗಳ ವಿವಾಹಮಹೋತ್ಸವವನ್ನು ಕಾರಣದವರಾದ ಅಮರರು ಸಸ್ತ್ರೀಕರಾಗಿ ಇಂದಿರಾರಮಾಕಾಂತರ ಲಗ್ನಸಮಾರಂಭವನ್ನು ನೋಡ ಬಂದಿರುವರೋ ಏನೋ ಎಂಬಂತೆ ವಸ್ತ್ರಾಭರಣಭೂಷಿತರಾಗಿ ಓಡಾಡುತ್ತಿದ್ದ ನರನಾರಿಯರ ಸಮೂಹವು ಕಂಗೊಳಿಸುತ್ತಿತ್ತು. ಕುತ್ತಿಗೆ ಮಟ್ಟ ಪಕ್ವಾನ್ನಗಳನ್ನುಂಡು ಮಯ್ಗೆ ಕೇಶರಗಂಧವನ್ನು ಸಾರಿಸಿಕೊಂಡು ತಾಂಬೂಲಗಳನ್ನು ಸವೆಯುತ್ತ ಹೊಟ್ಟೆ ಭಾರಾದ್ದರಿಂದ ಚನ್ನಾಗಿ ನಡೆಯಲಾರದೆ ಎಡವುತ್ತ ಮುಗ್ಗುತ್ತ ಬ್ರಾಹ್ಮಣರ ಸಮೂಹವು ಬೀದಿ ಹಿಡಿಸಲಾರದೆ ನಡೆದಿತ್ತು. ನಾಗರಿಕ ಜನಗಳಲ್ಲಿ ಕೆಲವರು ಶ್ರೀಕಾಂತರಾಯರ ಔದಾರ್ಯವನ್ನು ಕೊಂಡಾಡುತ್ತಿದ್ದರು ; ಕೆಲವರು ವಧುವರಗಳ ರೂಪ ಲಾವಣ್ಯಗಳನ್ನು ವರ್ಣಿಸುತ್ತಿದ್ದರು ; ಈ ಲಗ್ನಕ್ಕೆ ಉಭಯಪಕ್ಷದವರಿಗೆ ಹಣವೆಷ್ಟು ವೆಚ್ಚವಾಗಿದ್ದೀತೆಂದು ಗೇಣು ಹಾಕುವವರು ಲೆಖ್ಖ ಮಾಡುತ್ತಿದ್ದರು. ಕೆಲವು ಜನ ನಿಂದಕರು "ಅಬಬ ! ಕನ್ನೆಯೇ ಅವಳು ? ಬಗಲಲ್ಲಿ ಕೂಸನ್ನೆತ್ತಿಕೊಂಡು ಅವಳು ಮದುವೆಗೆ ಬರಲಿಲ್ಲ ! ಇದೇ ದೊಡ್ಡ ಉಪಕಾರ ನಮ್ಮ ಮೇಲೆ" ಎಂದು ಆಡಿಕೊಳ್ಳುತ್ತಿದ್ದರು. ಉಳಿದ ಸಜ್ಜನರು ಇವರ ವಿಚಾರಗಳ ನೀರಸಕೆಯನ್ನು ಸಪ್ರಮಾಣವಾಗಿ ಮಾಡುತ್ತ ಬೀದಿಗುಂಟ ನಡೆದಿದ್ದರು. ಹೀಗೆ ಶ್ರೀರಂಗಪಟ್ಟಣದ ತುಂಬಾ ಇಂದಿರಾರಮಾಕಾಂತರ ವಿವಾಹ ಕೌತುಕದ ವಾರ್ತೆಯೇ ಹೊರ್ತಾಗಿ ಬೇರೆ ಮಾತೇ ಇದ್ದಿಲ್ಲ.

ಈ ಕಾರ್ಯವು ಸಾಂಗವಾದ ಬಳಿಕ ಶ್ರೀಕಾಂತರಾಯನು ರಮಾಕಾಂತನನ್ನು ಬಳಿಯಲ್ಲಿ ಕುಳ್ಳಿರಿಸಿಕೊಂಡು—

"ಕಾಂತ. ನಿನ್ನ ಮಂಗಲಕಾರ್ಯವು ನಿರ್ವಿಘ್ನವಾಗಿ ನೆರವೇರಿದ್ದು ನೋಡಿ ನನಗೆ ಬಹಳೇ ಸಂತೋಷವಾಗಿರುತ್ತದೆ. ನಾನಿನ್ನು ಗೃಹಕೃತ್ಯದ ವಿಷಯವಾಗಿ

ಸ್ವಲ್ಪ ಹೇಳುತ್ತೇನೆ. ಪರಂಪರಾಗತವಾಗಿ ಬಂದ ಆಸ್ತಿಯ ವ್ಯವಸ್ಥೆಯನ್ನು ನಾನು ಇಷ್ಟು ದಿವಸಗಳವರೆಗೆ ಹೇಗೋ ಮಾಡುತ್ತ ಬಂದೆನು. ಇನ್ನು ಮುಂದೆ ಆ ಕೆಲಸ ನನ್ನಿಂದಾಗದು. ನನಗಿನ್ನು ಪಾರತ್ರಿಕ ವ್ಯವಸ್ಥೆಯನ್ನು ಕಂಡುಕೊಳ್ಳಬೇಕಾಗಿದೆ. ನಮ್ಮ ಆಸ್ತಿಗೆ ನೀನೊಬ್ಬನೆ ವ್ಯವಸ್ಥಾಪಕನುಳಿದಿರುವಿ. ಜಹಗೀರಿಯ ಉತ್ಪನ್ನವು ವರ್ಷಾ ಇಪ್ಪತ್ತೈದು ಸಹಸ್ರಕಿಂತಲೂ ಹೆಚ್ಚಿರುವದು. ಪೂರ್ವಿಕರು ಹೇರಳ ವಾದ ಹಣವನ್ನು ಕೂಡಿಸಿಟ್ಟಿರುವರು. ಇದನ್ನೆಲ್ಲಾ ನೀನೇ ವಿಸ್ತರಿಸಿಕೊಂಡು ಹೋಗಬೇಕು. ಈಗ್ಗೆ ನಡೆದಿರುವ ಆನಂದದ ಭರದೊಳಗಿಂದ ನಿನ್ನನ್ನು ಎತ್ತಿ ಕೊಂಡು ಹೋಗುವದಿಲ್ಲ. ಆದರೂ ನೀನು ಬೇಗ ಬಂದು ನಿನ್ನ ಮತಾನುಸಾರ ವಾಗಿ ಆಸ್ತಿಯ ವ್ಯವಸ್ಥೆಯನ್ನು ಮಾಡಲುದ್ಯುಕ್ತನಾದರೆ ನಾನು ನಿಶ್ಚಿಂತನಾಗಿ ತೀರ್ಥಯಾತ್ರೆಗಳನ್ನು ಮಾಡುತ್ತ ಧರ್ಮಪರಾಯಣನಾಗಿರುವ ಲವಲವಿಕೆ ನನಗುಂಟು. ನೀನು ಜಾಣನೂ ವಿವೇಕಿಯೂ ಆಗಿರುವಿ. ನಿನಗೆ ಹೆಚ್ಚಿಗೆ ಹೇಳುವ ಆವಶ್ಯಕತೆಯಿಲ್ಲ."

"ತಮ್ಮ ಆಜ್ಞೆಯನ್ನು ನಾನೆಂದಿಗೂ ಮೀರಲಿಕ್ಕಿಲ್ಲ. ಜಯರಾಯರ ಸಮಾಧಾನಾರ್ಥವಾಗಿ ವರ್ಷಾರುತಿಂಗಳು ನನಗಿಲ್ಲಿ ನಿಲ್ಲಬೇಕಾಗುತ್ತದೆ, ಆ ಮೇಲೆ ತಮ್ಮ ಆಜ್ಞಾನುಸಾರವಾಗಿ ನವರಸಪುರಕ್ಕೆ ಬಂದು ತಮ್ಮ ಸೇವೆಯನ್ನು ಮಾಡಿಕೊಂಡಿರುವೆನು." ಎಂದು ರಮಾಕಾಂತನು ಪ್ರೇಮಾಶ್ರುಪೂರ್ಣನಾಗಿ ನುಡಿದನು.

ಜಯರಾಯನಿಗೆ ಜಹಗೀರದಾರರ ಸಂಬಂಧ ಮಾಡುವ ಛಲವಿತ್ತು! ಆವನ ಅಳಿಯನಿಗೆ ಆಯುಕ್ತವಾಗಿ ಜಹಗೀರು ತಾನೇ ಬಂದು ಮಾಲೆ ಹಾಕಿತು. ಇದರಿಂದ ರಮಾಕಾಂತನು ಜಯರಾಯನ ದೃಷ್ಟಿಯಲ್ಲಿ ನೂರು ಪಾಲು ಸುಂದರ ನಾಗಿಯೂ ಸದ್ಗುಣಿಯಾಗಿಯೂ ಕಾಣಹತ್ತಿದನು. ಇಂದಿರೆಯನ್ನು ಕುಳ್ಳಿರಿಸಿ ಕೊಂಡು "ಶ್ರೀಮಂತ ಇಂದಿರಾಬಾಯಿ ಸಾಹೇಬ! ತಮಗೆ ಜಹಗೀರು ಬೇಕಾ ಗಿಲ್ಲವೆಂದು ಹೇಳುತ್ತಿದ್ದಿರಲ್ಲ! ಇನ್ನು ನವರಸಪುರದ ಜಹಗೀರನ್ನು ಯಾರಿಗೆ ಕೊಟ್ಟುಬಿಡುವಿರಿ ? ನವರಸಪುರಕ್ಕೆ ನಾನು ಬಂದರೆ ಬಡವರ ಪರಿಚಯ ಹಿಡಿಯುವಿರೋ ?" ಮುಂತಾದ ವಿನೋದದ ಮಾತುಗಳನ್ನಾಡುತ್ತಿದ್ದನು.

ಶ್ರೀಕಾಂತರಾಯನು ನವರಸಪುರಕ್ಕೆ ಹೋದ ಮರುದಿವಸ ರಮಾಕಾಂತನು ಇಂದಿರೆಯನ್ನು ಕರಕೊಂಡು ದರ್ಯಾದೌಲತ್ ತೋಟಕ್ಕೆ ಹೋದನು. ಈ ನೂತನರಾದ ದಂಪತಿಗಳು ಉಪವನದ ಶೋಭೆಯನ್ನು ನೋಡುತ್ತ ಒಬ್ಬರಿ

ಗೊಬ್ಬರು ವಿನೋದಗಳನ್ನಾಡುತ್ತ ಆನಂದದಿಂದ ತಿರುಗಾಡುತ್ತಿದ್ದರು. ಇಂದಿರೆಯು ಅಲ್ಲಿದ್ದ ಪುಷ್ಪಮಂಜರಿಗಳನ್ನು ತಕ್ಕೊಂಡು ತುರಾಯಿ ಕಟ್ಟಿ ತನ್ನ ಪತಿರಾಯನಿಗೆ ಅರ್ಪಿಸಿದಳು.

"ಸುಮನೋಭಾವಗಳನ್ನು ಒಟ್ಟುಗೂಡಿಸಿ ನನ್ನ ಸ್ವಾಧೀನ ಮಾಡಿರುವಿ ಯೆಂಬ ಅರ್ಥವನ್ನು ತೋರಿಸುತ್ತಿರುವಿಯೇನು ?" ಎಂದು ರಮಾಕಾಂತನು ಇಂದಿರೆಯು ಕೊಟ್ಟ ತುರಾಯಿ ಮೂಸಿ ನೋಡುತ್ತ ಕೇಳಿದನು.

"ನನ್ನ ಅರ್ಥವನ್ನು ನೀವು ನಿಜವಾಗಿ ತಿಳುಕೊಂಡಿರಿ. ಆದರೆ ಆ ತುರಾಯಿಯನ್ನು ಚನ್ನಾಗಿ ಪರೀಕ್ಷಿಸಿ ನೋಡಿದಿರೇನು ? ಹಿಡಿಯುವ ಸ್ಥಳದಲ್ಲಿ ಎಲೆಗಳನ್ನು ಸುತ್ತಿರುವೆನಲ್ಲ. ಆದರಲ್ಲೇನಾದರೂ ಅರ್ಥವಿರಬಹುದೇನು ?"

"ಆದರಲ್ಲೇನು ವಿಶೇಷವಿದೆ ? ಈ ಸುಮನಸ್ಸುಗಳಿಗೆ ಪೆಟ್ಟು ತಾಕಬಾರ ದಂತೆ ನಾನು ವರ್ತಿಸತಕ್ಕದ್ದೆಂದು ನಿನ್ನ ಇಚ್ಛೆಯಿರುವದಷ್ಟೆ ?" ಎಂದು ನುಡಿದು ರಮಾಕಾಂತನು ತನ್ನ ಅರ್ಧಾಂಗಿಯನ್ನು ತಬ್ಬಿಕೊಂಡು ಪೂರ್ಣಾಂಗನಾದನು.

"ಅವ್ವಯ್ಯಾ ! ಇದೆಲ್ಲಾ ಆ ತುರಾಯಿಯ ಮೇಲೆ ಬರೆದಿರುವದೇನು ? ಬರೆದದ್ದನ್ನು ಓದಿದಷ್ಟು ಸುಲಭವಾಗಿ ಹೇಳೋಣಾಯಿತಲ್ಲ !" ಎಂದು ಪ್ರೇಮ ದಿಂದಲೂ ಆದರದಿಂದಲೂ ಇಂದಿರೆಯು ತನ್ನ ಪ್ರಾಣೇಶ್ವರನ ಮುಖಕಮಲವನ್ನು ಕಣ್ಣುತುಂಬ ನೋಡುತ್ತ ನಿಂತಳು.

"ಎಷ್ಟು ನೋಡುವದದು ?" ಎಂದು ರಮಾಕಾಂತನು ಇಂದಿರೆಯ ಮೃದುಸ್ಪರ್ಶವಾದ ಗಲ್ಲವನ್ನು ತನ್ನ ಕಯ್ಯಿಂದ ಮೆಲ್ಲಗೆ ಮುಟ್ಟಿದನು.

ಇಂದಿರೆಯು ವಿಲಾಸದೊಂದಿಗೆ ರಮಾಕಾಂತನ ಕಯ್ ನೂಕಿಹಾಕಿ "ಅನ್ಯಾಯವಾಗಿ ಹೆಂಡರನ್ನು ದಂಡಿಸುವ ಕ್ರಮಕ್ಕಾರಂಭವು ಈಗಲೇ ಆಯಿ ತೇನು ?" ಎಂದು ನುಡಿದು ರಮಾಕಾಂತನ ಕಯ್ ಹಿಡುಕೊಂಡು ನದಿಯ ಘಾಟಿನ ಕಡೆಗೆ ನಡೆದಳು.

ಅಲ್ಲಿ ಜುಳುಜುಳು ಹರಿಯುತ್ತಿರುವ ಪ್ರವಾಹದ ಸಪ್ಪಳವನ್ನು ಕೇಳುತ್ತ ಅವರೀರ್ವರು ಕುಳಿತರು. ಇಂದಿರೆಯು ತನ್ನ ಸರೋಜಸಮಗಳಾದ ಪಾದಗಳನ್ನು ನೀರಲ್ಲಿಳಿಬಿಟ್ಟುಕೊಂಡು ಟುಮ್ ಟುಮ್ ಬಡಿಯುತ್ತ ಶ್ರೀಕೃಷ್ಣನು ರುಕ್ಮಿಣೀ ದೇವಿಯನ್ನು ತನ್ನ ರಥದಲ್ಲಿ ಕುಳ್ಳಿರಿಸಿಕೊಂಡು ಜಯೋತ್ಸವದಿಂದ ನಡೆದ ಪದ ವನ್ನು ಪ್ರೇಮಲವಾದ ವಾಣಿಯಿಂದ ಹಾಡಿದಳು.

ರಮಾಕಾಂತನು ಇಂದಿರೆಯ ಹೆಗಲ ಮೇಲೆ ಕಯ್ ಹಾಕಿ ಬಲತ್ಕಾರದಿಂದವಳ

ಅಧರವನ್ನು ಚುಂಬಿಸಿ "ಇಂದಿರಾ ರುಕ್ಮಿಣೀ ಸ್ವಯಂವರದ ಆಖ್ಯಾನವೆಲ್ಲಾ ನಿನ
ಮುಖಪಾಠ ಬರುತ್ತದೇನು ?" ಎಂದು ಕೇಳಿದನು.

"ಕಳೆದ ನಾಲ್ಕು ತಿಂಗಳಲ್ಲಿ ನಿತ್ಯ ಈ ಆಖ್ಯಾನದ ಪಾರಾಯಣ ಮಾಡು
ತ್ತಿದ್ದೆನಲ್ಲ ! ಬಾರದೇನಾದೀತು ?"

"ನಿತ್ಯ ಪಾರಾಯಣ ಮಾಡುವ ಕಾರಣವೇನು ?"

ಇಂದಿರೆಯು ತನ್ನ ಪ್ರಾಣನಾಥನನ್ನು ಗಟ್ಟಿಯಾಗಿ ಅಪ್ಪಿಕೊಂಡು "ಈ
ಪಾದಸೇವಾ ಲಾಭವು ರುಕ್ಮಿಣೀದೇವಿಯರ ಪ್ರಸಾದದಿಂದ ದೊರಕೀತೆಂಬ ಆ
ಯಿಂದ ಆ ಆದಿಮಾತೆಯ ಲೀಲಾಪ್ರಬಂಧದ ಪಾರಾಯಣ ಮಾಡುತ್ತಿದ್ದೆ
ರುಕ್ಮಿಣೀದೇವಿಯರ ಅನುಗ್ರಹದಿಂದ ಈ ಮೋಹನಾಂಗವನ್ನು ಸ್ಪರ್ಶಮಾಡು
ಅಧಿಕಾರವು ನನಗೆ ಪ್ರಾಪ್ತವಾದರೆ ಸತ್ಯನಾರಾಯಣವ್ರತವನ್ನು ಮಾಡುವೆನೆಂ
ಬೇಡಿಕೊಂಡಿದ್ದೇನೆ." ಎಂದು ಹೇಳಿದಳು.

"ಆಗಲಿ, ನಾಳೆಗೇ ಆ ವ್ರತವನ್ನು ಮುಗಿಸಿಬಿಡೋಣ. ಆ ಪ್ರಭುವಿನ
ವ್ರತಾಚರಣೆಯಿಂದ ಮನುಷ್ಯಮಾತ್ರಕ್ಕೆ ನಿತ್ಯವಲ್ಲಿಯೂ ಶುಭಗಳಾಗುತ್ತವೆ."

ಉಷಾ ಪ್ರೆಸ್, ಮೈಸೂರು-570 001

ಡಿಟೆಕ್ಟಿವ್ ಥ್ರಿಲ್ಲರ್

(ಮಾಸ ಪತ್ರಿಕೆ)

ದಕ: ಅನಂ





ನಮ್ಮ ಕೆಲವು ಪ್ರಕಟನೆಗಳು

ಕಾದಂಬರಿಗಳು

ಇಂದಿರಾ	ಕೆರೂರು ವಾಸುದೇವಾಚಾರ್ಯ	
ಯದುಮಹಾರಾಜ	,, ,,	೮-೦೦
ಯಯಾತಿ	ವಿ. ಎಂ. ಇನಾಂದಾರ್	೨೦-೦೦
ಮಂಜುಮುಸುಕಿದ ದಾರಿ	,, ,,	೫-೫೦
ಚಿತ್ರಲೇಖಾ	,, ,,	೧೦-೦೦
ವ್ಯಾಪ್ತಿ-ಪ್ರಾಪ್ತಿ	ವಿಶಾಲಾಕ್ಷಿ ದಕ್ಷಿಣಾಮೂರ್ತಿ	೭-೦೦
ಪಡಿ ಎಡವಿ ಬಂದವಳು	,, ,,	೫-೦೦
ಗಿರಿಯ ನವಿಲು	ಬಸವರಾಜ ಕಟ್ಟೀಮನಿ	೬-೦೦
ವಿಶ್ವರೂಪ	ಎಂ. ಎಸ್. ಅನಂತರಾವ್	೧೨-೦೦
ಸಮಾಪ್ತಿ	,, ,,	೨-೭೫
ಯದುಪತಿ	ಸಾಲಿ ರಾಮಚಂದ್ರರಾವ್	೧-೨೫
ಒಲವು ಚೆಲುವಲ್ಲ	ಪರಂಜ್ಯೋತಿ	೨-೫೦
ಚರಂಡಿಯಿಂದ	ಅನು : ರಾಘವನ್	೦-೮೦
ಎರಡು ನಗರಗಳ ಕಥೆ	ಅನು ; ಎಲ್. ಎಸ್. ಶೇಷಗಿರಿರಾವ್	೮-೦೦
ಅನ್ನ	ಡಾ|| ರಂ. ಶ್ರೀ. ಮುಗಳಿ	೭-೫೦
ವಕ್ರರೇಖೆ	ಭಾರತೀಸುತ	೫-೫೦
ಸಂಕಲ್ಪ	ಡಾ|| ಡಿ. ಎಲ್. ಪಾಟೀಲ	೬-೦೦
ಹೌಸ್ ಸರ್ಜನ್	ಅನು : ವನಜ ಸತ್ಯನಾರಾಯಣ	೬-೦೦

ಇತರ ಹೊಸ ಪ್ರಕಟನೆಗಳು

ಅಪೂರ್ವ (ನಾಟಕಗಳ ಸಂಗ್ರಹ)	ಡಾ|| ರಂ. ಶ್ರೀ. ಮುಗಳಿ	೭-೦೦
ಬಿಡುಗಡೆ (ನಾಟಕ)	ವಿ. ಎಂ. ಇನಾಂದಾರ್	೬-೦೦
ಶ್ರೀನಿವಾಸರ ರಾಮಪಟ್ಟಾಭಿಷೇಕ (ಒಂದು ಸಮಾಲೋಚನ)	,, ,,	೬-೦೦

ಉಷಾ ಸಾಹಿತ್ಯ ಮಾಲೆ, ಮೈಸೂರು-೫೭೦೦೦೧